ಶ್ರೀಮದ್ವಾಲ್ಮೀಕಿರಾಮಾಯಣವು

VENKATESHWARA PUBLISHERS
MYLAPORE, MADRAS-600 004

ಶ್ರೀಃ

ವಾಲ್ಮೀಕಿಮಹರ್ಷಿಪ್ರಣೀತ

ಶ್ರೀಮದ್ರಾಮಾಯಣವು

(ಯುದ್ಧಕಾಂಡವು)

ಕರ್ಣಾಟಕ ವಚನವು

Vol. 7

ಶ್ರೀಮದ್ಯದುಶೈಲನಿವಾಸರಸಿಕ

ಪಂಡಿತ ದೇವಶಿಖಾಮಣಿ ಅಳಸಿಂಗರಾಚಾರ್ಯ ವಿರಚಿತವು

ಪ್ರಕಾಶಕರು :

ವೆಂಕಟೇಶ್ವರ ಪಬ್ಲಿಷರ್ಸ್

14, ಭೀಮಸೇನಾ ಗಾರ್ಡನ್ಸ್, ಮೈಲಾಪುರ, ಮದರಾಸು–600 004

VENKATESWARA PUBLISHERS
14, Bhimasena Gardens,
Mylapore, Madras-600 004. **Rs. 40/-**

DEDICATED TO

SRI RAGHAVENDRASWAMY

OF

MANTRALAYA

All Rights Reserved

IN MEMORY OF

H. BHIMASENA RAU

Accountant General

for whose unstinted support the publisher is grateful

ಕಾಪೀರೈಟ್, ೧೯೧೯—ಈ ಪುಸ್ತಕದ ಸರ್ವಸ್ವಾತಂತ್ರ್ಯವೂ ಮದ್ರಾಸ್, **ಆರ್. ವೆಂಕಟೇಶ್ವರ ಕಂಪೆನಿಯವರಿಗೆ** ಸೇರಿದೆ. ಇದಕ್ಕೆ ಇಂಡಿಯಾದೇಶದ ಮತ್ತು ಹೊರದೇಶದ ಕಾಪೀರೈಟ್ ತೆಗೆಯಲ್ಪಟ್ಟಿದೆ. ಈ ಪುಸ್ತಕವನ್ನು ಸಂಪೂರ್ಣವಾಗಿಯಾಗಲೀ ಅಥವಾ ಇದರ ಯಾವುದಾದರೂ ಭಾಗವನ್ನಾಗಲಿ, ಪ್ರತ್ಯೇಕವಾಗಿ ಪ್ರಕಟಿಸುವುದಕ್ಕೂ, ಭಾಷಾಂತರೀಕರಿಸಿ ವಿಕ್ರಯಿಸುವುದಕ್ಕೂ ಬೇರೊಬ್ಬರಿಗೂ ಬಾಧ್ಯತೆಯಿರದು. ಈ ಪುಸ್ತಕದೊಳಗಿನ ಭಾವಗಳನ್ನಾಗಲೀ, ಪದಗಳನ್ನಾಗಲೀ, ಚಿತ್ರಪಟಗಳನ್ನಾಗಲೀ ಇತರರು ಕಾಪೀಮಾಡಿದ ಪಕ್ಷದಲ್ಲಿ, ಅಂತವರು ಕಾಪೀರೈಟನ್ನು ಉಲ್ಲಂಘಿಸಿದಂತಾಗುವುದು. ಆದುದರಿಂದ ಯಾವ ಭಾಗದಲ್ಲಿಯಾದರೂ ಈ ಕಾಪೀರೈಟನ್ನು ಉಲ್ಲಂಘಿಸಿದವರು ನಷ್ಟದ ದಾವೆಗೆ ಗುರಿಯಾಗುವರೆಂದು ಇದರಿಂದ ತಿಳಿಯಪಡಿಸಿದೆ.

Printed by D. S. Krishnachar, M.Sc., at Prabha Printing House, 22-A, Dr. D.V. Gundappa Road, Basavanagudi, Bangalore - 560004

ಯುದ್ಧಕಾಂಡದ ವಿಷಯಾನುಕ್ರಮಣಿಕೆ

ಸರ್ಗ ಸಂಖ್ಯೆ	ವಿಷಯಗಳು	ಪುಟ ಸಂಖ್ಯೆ
೧	ಶ್ರೀರಾಮನು ಸೀತಾವೃತ್ತಾಂತವನ್ನು ತಿಳಿಸಿದ ಹನುಮಂತನನ್ನು ಪ್ರೇಮದಿಂದಾಲಿಂಗಿಸಿ, ಮುಂದೆ ಸಮುದ್ರತರಣಕ್ಕೆ ಉಪಾಯ ವೇನೆಂದು ಯೋಚಿಸಿದುದು.	೧
೨	ಸುಗ್ರೀವನು ರಾಮನಿಗೆ ಸಮಾಧಾನವನ್ನು ಹೇಳಿದುದು.	೫
೩	ರಾಮನು ಹನುಮಂತನನ್ನು ಕುರಿತು, ಲಂಕೆಯ ದುರ್ಗರಹಸ್ಯ ಸ್ವರೂಪಗಳನ್ನು ಕೇಳಿದುದು. ಹನುಮಂತನು ಅವುಗಳನ್ನು ವಿವರಿಸಿದುದು.	೮
೪	ರಾಮಾಜ್ಞೆಯಿಂದ ಸುಗ್ರೀವನು ಸೇನಾಸನ್ನಾಹಗಳನ್ನು ಮಾಡಿ ಕೊಂಡು ದಂಡಯಾತ್ರೆಗೆ ಹೊರಟುದು. ಹನುಮಂತನ ಮೇಲೆ ರಾಮನೂ, ಅಂಗದನ ಮೇಲೆ ಲಕ್ಷ್ಮಣನೂ ಏರಿ ಪ್ರಯಾಣ ಹೊರಟುದು. ಮಾರ್ಗದಲ್ಲಿ ಶುಭನಿಮಿತ್ತಗಳೊಡನೆ ಸಮುದ್ರತೀರವನ್ನು ಸೇರಿದಮೇಲೆ, ಅಲ್ಲಿ ನೀಲನು ಸೇನೆಗಳನ್ನು ನಿಲ್ಲಿಸಿದುದು.	೧೨
೫	ಶ್ರೀರಾಮನು ಸಮುದ್ರವನ್ನು ನೋಡುವಾಗ ಸೀತೆಯನ್ನು ಸ್ಮರಿಸಿಕೊಂಡು ದುಃಖಿಸುತ್ತಿರಲು ಲಕ್ಷ್ಮಣನು ಅವನನ್ನು ಸಮಾಧಾನಪಡಿಸಿದುದು.	೨೪
೬	ಅತ್ತಲಾಗಿ ರಾವಣನು, ಲಂಕೆಯಲ್ಲಿ ಹನುಮಂತನು ನಡೆಸಿ ಹೋದ ಕಾರ್ಯಗಳಿಗಾಗಿ ಚಿಂತಿಸುತ್ತ, ಮುಂದೆ ಶತ್ರುಗಳು ದಂಡೆತ್ತಿ ಬರುವುದಕ್ಕೆ ಮೊದಲು ತಾನು ಮಾಡಬೇಕಾದ ಸನ್ನಾಹ ಗಳನ್ನು ಕುರಿತು ತನ್ನ ಮಂತ್ರಿಗಳೊಡನೆ ಆಲೋಚಿಸಿದುದು.	೨೭

ಸರ್ಗ ಸಂಖ್ಯೆ	ವಿಷಯಗಳು	ಪುಟ ಸಂಖ್ಯೆ
೭	ಮಂತ್ರಿಗಳು ಶತ್ರುಬಲವನ್ನು ತಿಳಿಯದೆ, ಆ ರಾವಣನ ಪರಾಕ್ರಮಗಳನ್ನೇ ಹೊಗಳುತ್ತ ಮುಖಸ್ತುತಿ ಮಾಡಿ ಅವನನ್ನು ಪ್ರೋತ್ಸಾಹಿಸಿದುದು.	೨೯
೮	ಪ್ರಹಸ್ತ, ದುರ್ಮುಖ, ವಜ್ರದಂಷ್ಟ್ರ, ನಿಕುಂಭರೆಂಬ ನಾಲ್ಕು ಮಂದಿ ರಾಕ್ಷಸಸೇನಾಧಿಪತಿಗಳು ರಾವಣನ ಮುಂದೆ ತಮ್ಮ ಪರಾಕ್ರಮವನ್ನು ಹೊಗಳಿಕೊಂಡುದು.	೩೨
೯	ನಿಕುಂಭನ ಮಾತಿನಂತೆ ಅಲ್ಲಿದ್ದ ಬೇರೆ ರಾಕ್ಷಸರೂ ಯುದ್ಧೋದ್ಯುಕ್ತರಾಗಿ ನಿಲ್ಲಲು, ವಿಭೀಷಣನು ಅವರಿಗೆ ಹಿತವಾದವನ್ನು ಹೇಳಿ ತಡೆದುದು.	೩೪
೧೦	ವಿಭೀಷಣನು ರಾವಣನ ಗೃಹಕ್ಕೆ ಹೋಗಿ ಸೀತೆಯನ್ನು ತಂದುದು. ಮೊದಲು ಲಂಕೆಯಲ್ಲಿ ಕಾಣುತ್ತಿರುವ ನಾನಾ ದುರ್ನಿಮಿತ್ತಗಳನ್ನು ರಾವಣನಿಗೆ ತಿಳಿಸಿ, ರಾಮನಿಗೆ ಸೀತೆಯನ್ನೊಪ್ಪಿಸಿಬಿಡುವಂತೆ ಬುದ್ಧಿವಾದವನ್ನು ಹೇಳಿದುದು.	೩೮
೧೧	ರಾವಣನು ವಿಭೀಷಣನ ಮಾತಿನಿಂದ ಕದಲಿದ ಮನಸ್ಸುಳ್ಳವನಾಗಿ ತಿರುಗಿ ಮಂತ್ರಿಗಳೊಡನೆ ಆಲೋಚಿಸುವುದಕ್ಕಾಗಿ ಮಂತ್ರಿಸಭೆಯನ್ನು ಪ್ರವೇಶಿಸಿದುದು.	೪೧
೧೨	ರಾಮನಿಗೆ ಸೀತೆಯನ್ನೊಪ್ಪಿಸದಂತೆಯೇ ಆತನನ್ನು ಜಯಿಸುವುದಕ್ಕೆ ಉಪಾಯವೇನೆಂದು ರಾವಣನು ರಾಕ್ಷಸರೊಡನೆ ಆಲೋಚಿಸಲು, ಕುಂಭಕರ್ಣನು ಆ ಕಾರ್ಯಕ್ಕೆ ತನ್ನ ಪರಾಕ್ರಮವೊಂದೇ ಸಾಕಾಗಿರುವುದೆಂದು ಹೇಳಿಕೊಂಡುದು.	೪೫
೧೩	ಸೀತೆಯನ್ನು ಬಲಾತ್ಕಾರದಿಂದೆಳೆದು ಭೋಗಿಸೆಂದು ಮಹಾಪಾರ್ಶ್ವನು ರಾವಣನಿಗೆ ಹೇಳಿದುದು. ರಾವಣನು ಬ್ರಹ್ಮಶಾಪದಿಂದ ತಾನು ಪರಸ್ತ್ರೀಯನ್ನು ಬಲಾತ್ಕರಿಸಕೂಡದೆಂದು ಸಹಾ ಹೇಳಿದುದು.	೫೨

ಸರ್ಗ ಸಂಖ್ಯೆ	ವಿಷಯಗಳು	ಪುಟ ಸಂಖ್ಯೆ
೧೪	ತಿರುಗಿ ವಿಭೀಷಣನು ರಾವಣನಿಗೆ ಹಿತವನ್ನು ಹೇಳಿದುದು.	೫೫
೧೫	ಇಂದ್ರಜಿತ್ತು ವಿಭೀಷಣನ ಮತವನ್ನು ಖಂಡಿಸಿದುದು. ವಿಭೀಷಣನು ಇಂದ್ರಜಿತ್ತಿನ ದುರ್ಬುದ್ಧಿಗಾಗಿ ಅವನನ್ನು ಮನಸಾರೆ ದೂಷಿಸಿದುದು.	೫೯
೧೬	ರಾವಣನು ವಿಭೀಷಣನನ್ನು ಅವಮಾನಿಸಲು, ಅವನು ತನ್ನ ನಾಲ್ಕುಜನ ಮಂತ್ರಿಗಳೊಡನೆ ಆಕಾಶಕ್ಕೆ ಹಾರಿ, ಆಗಲೂ ಮತ್ತೊಮ್ಮೆ ರಾವಣನಿಗೆ ಬುದ್ಧಿವಾದವನ್ನು ಹೇಳಿದುದು.	೬೧
೧೭	ವಿಭೀಷಣನು ಮಂತ್ರಿಸಹಿತನಾಗಿ ರಾಮಲಕ್ಷ್ಮಣರಿದ್ದ ಕಡೆಗೆ ಬಂದುದು. ಸುಗ್ರೀವಾದಿವಾನರರು ಅವನನ್ನು ನೋಡಿ ಅವನು ವಧ್ಯನೆಂದು ರಾಮನಿಗೆ ತಿಳಿಸಿದುದು. ರಾಮನು ಈ ವಿಷಯದಲ್ಲಿ ಸಮಸ್ತ ವಾನರರ ಅಭಿಪ್ರಾಯವನ್ನೂ ಕೇಳಿ, ಕೊನೆಗೆ ಹನುಮಂತನ ಮತದಂತೆ ಅವನನ್ನು ಕರೆಸಿಕೊಳ್ಳುವುದಾಗಿ ನಿಶ್ಚಯಿಸಿ ವಾನರರಿಗೆ ಆಜ್ಞೆ ಮಾಡಿದುದು.	೬೭
೧೮	ಶ್ರೀರಾಮನು ಶರಣಾಗತರಕ್ಷಣೆಯೇ ತನಗೆ ಮಹಾವ್ರತವೆಂದು ಹೇಳಿ, ಸುಗ್ರೀವನಿಗೆ ಕಪೋತಾಖ್ಯಾನಾದಿಗಳನ್ನು ತಿಳಿಸಿ, ವಿಭೀಷಣನನ್ನು ಕರೆತರುವಂತೆ ನಿಯಮಿಸಿದುದು.	೯೪
೧೯	ಶ್ರೀರಾಮನು ಸಮಸ್ತವಾನರರ ಮಧ್ಯದಲ್ಲಿ ವಿಭೀಷಣನಿಗೆ ಲಂಕಾರಾಜ್ಯದಲ್ಲಿ ಪಟ್ಟವನ್ನು ಕಟ್ಟಿದುದು. ಸಮುದ್ರ ಲಂಘನ ಸನ್ನಾಹವು.	೧೨೬
೨೦	ರಾಮನು ಸೇನಾಸಮೇತನಾಗಿ ಸಮುದ್ರತೀರಕ್ಕೆ ಬಂದಿರುವುದನ್ನು ರಾವಣನು ಶಾರ್ದೂಲನೆಂಬ ರಾಕ್ಷಸನಿಂದ ಕೇಳಿ, ಸುಗ್ರೀವನನ್ನು ರಾಮನಿಂದ ಬೇರ್ಪಡಿಸುವುದಕ್ಕಾಗಿ ಶುಕನನ್ನು ಕಳುಹಿಸಿದುದು. ವಾನರರು ಆ ಶುಕನನ್ನು ಪ್ರಹರಿಸುವುದಕ್ಕೆ ಹೋಗಲು ರಾಮನು ಬೇಡವೆಂದು ಅವರನ್ನು ತಡೆದುದು.	೧೩೨

ಸರ್ಗ ಸಂಖ್ಯೆ	ವಿಷಯಗಳು	ಪುಟ ಸಂಖ್ಯೆ
೨೧	ರಾಮನು ದರ್ಭಶಯನದಲ್ಲಿದ್ದು ಮೂರು ರಾತ್ರಿಗಳವರೆಗೆ ಸಮುದ್ರವನ್ನಾರಾಧಿಸಿದರೂ, ಸಮುದ್ರನು ಪ್ರಸನ್ನನಾಗದಿರಲು, ಕೋಪದಿಂದ ಬಾಣಪ್ರಯೋಗಕ್ಕೆ ತೊಡಗಿದುದು. ಲಕ್ಷ್ಮಣನು ಬೇಡವೆಂದು ತಡೆದುದು.	೧೩೭
೨೨	ರಾಮನು ಬ್ರಹ್ಮಾಸ್ತ್ರವನ್ನು ಬಿಡುವುದಕ್ಕೆ, ಯತ್ನಿಸಿದ ಮೇಲೆ ಸಮುದ್ರನು ಪ್ರತ್ಯಕ್ಷನಾಗಿ ಸೇತುವನ್ನು ಕಟ್ಟುವುದಕ್ಕಾಗಿ ನಲನನ್ನು ನಿಯೋಗಿಸಿ, ರಾಮನು ಹೂಡಿದ್ದ ಬ್ರಹ್ಮಾಸ್ತ್ರವನ್ನು ತನ್ನಲ್ಲಿದ್ದ ದ್ರುಮಕುಲ್ಯದ ಮೇಲೆ ಬಿಡುವಂತೆ ಪ್ರಾರ್ಥಿಸಿದುದು. ರಾಮನು ನಲನಿರ್ಮಿತವಾದ ಸೇತುವಿನಿಂದ ಸಮುದ್ರವನ್ನು ದಾಟಿ, ಸುವೇಲಾಪ್ರಾಂತ್ಯದಲ್ಲಿ ಸೈನ್ಯವನ್ನಿಳಿಸಿದುದು. ದೇವತೆಗಳ ಸ್ತೋತ್ರವು.	೧೪೩
೨೩	ಶ್ರೀರಾಮನು ಯುದ್ಧಸೂಚಕಗಳಾದ ಮಹೋತ್ಪಾತಗಳನ್ನು ಕಂಡು ಅವುಗಳನ್ನು ಲಕ್ಷ್ಮಣನಿಗೆ ತೋರಿಸಿದುದು.	೧೫೪
೨೪	ರಾಮನು ಸೇನೆಯನ್ನು ಗರುಡವ್ಯೂಹವಾಗಿ ನಿಲ್ಲಿಸಿದುದು. ಅತ್ತಲಾಗಿ ಶುಕನು ರಾವಣನ ಬಳಿ ಹೋದಮೇಲೆ, ರಾಮನನ್ನು ಗೆಲ್ಲುವುದು ಅಸಾಧ್ಯವೆಂದು ಅವನಿಗೆ ತಿಳಿಸಿ, ಸೀತೆಯನ್ನು ರಾಮನಿಗೊಪ್ಪಿಸುವಂತೆ ಹಿತವನ್ನು ಹೇಳಿದುದು.	೧೫೭
೨೫	ತಿರುಗಿ ರಾಮನು ಶುಕಸಾರಣರೆಂಬ ಚಾರರಿಬ್ಬರನ್ನು ಕಳುಹಿಸಿದುದು. ವಿಭೀಷಣನು ಅವರನ್ನು ಹಿಡಿದು ರಾಮನಿಗೆ ಒಪ್ಪಿಸಿದುದು. ರಾಮನು ಅವರಲ್ಲಿ ಕರುಣೆಯಿಂದ ಅವರಿಗೆ ವಾನರಸೈನ್ಯವೆಲ್ಲವನ್ನೂ ತೋರಿಸಿ ಅವರನ್ನು ಬಿಡಿಸಿ ಕಳುಹಿಸಿದುದು. ಅವರು ತಾವು ಹೋಗಿಬಂದ ವೃತ್ತಾಂತವನ್ನು ರಾವಣನಿಗೆ ತಿಳಿಸಿದುದು.	೧೬೨

ಸರ್ಗ ಸಂಖ್ಯೆ	ವಿಷಯಗಳು	ಪುಟ ಸಂಖ್ಯೆ
೨೬	ರಾವಣನು ವಾನರಸೇನೆಯನ್ನು ನೋಡುವುದಕ್ಕಾಗಿ ಲಂಕೆಯಲ್ಲಿ ಮಹೋನ್ನತವಾದ ಒಂದು ಉಪ್ಪರಿಗೆಯನ್ನೇರಿದುದು. ಅಲ್ಲಿ ಸಾರಣನು ರಾವಣನಿಗೆ ವಾನರಸೇನೆಯಲ್ಲಿದ್ದ ಯೂಥಪತಿಗಳನ್ನು ಬೇರೆಬೇರೆಯಾಗಿ ತೋರಿಸಿ, ಅವರವರ ಬಲಪರಾಕ್ರಮಾದಿಗಳನ್ನೂ ತಿಳಿಸಿದುದು.	೧೬೬
೨೭	ಸಾರಣನು ಮತ್ತೆ ಕೆಲವು ಪ್ರಧಾನ ವಾನರಯೂಥಪತಿಗಳನ್ನು ರಾವಣನಿಗೆ ತೋರಿಸಿದುದು.	೧೭೧
೨೮	ಸಾರಣನು ತಿಳಿಸದೆ ಬಿಟ್ಟ ಬೇರೆ ಕೆಲವು ವಿಷಯಗಳನ್ನು ಶುಕನು ರಾವಣನಿಗೆ ಹೇಳಿ ತೋರಿಸಿದುದು.	೧೭೬
೨೯	ರಾವಣನು ಶುಕಸಾರಣರನ್ನು ಧಿಕ್ಕರಿಸಿ, ತಿರುಗಿ ರಾಮನ ಬಳಿಗೆ ಶಾರ್ದೂಲಾದಿ ಚಾರರನ್ನು ಕಳುಹಿಸಿದುದು. ಅವರನ್ನೂ ವಿಭೀಷಣನು ಹಿಡಿದು ರಾಮನ ಮುಂದೆ ನಿಲ್ಲಿಸಿದುದು.	೧೮೨
೩೦	ರಾಮನು ವಾನರವೀರರೊಡನೆ ಸುವೇಲಾದ್ರಿಯ ಸಮೀಪದಲ್ಲಿ ಬಂದಿಳಿದಿರುವುದನ್ನು ಶಾರ್ದೂಲಾದಿಗಳು ರಾವಣನಿಗೆ ತಿಳಿಸಿದುದು.	೧೮೪
೩೧	ರಾವಣನು ಮಾಯಾವಿಯಾದ ವಿದ್ಯುಜ್ಜಿಹ್ವನಿಂದ ಕೃತ್ರಿಮವಾದ ರಾಮಶಿರಸ್ಸನ್ನೂ, ಧನುಸ್ಸನ್ನೂ, ಸೀತೆಯು ಹನುಮಂತನ ಮೂಲಕವಾಗಿ ಕಳುಹಿಸಿಕೊಟ್ಟ ಚೂಡಾಮಣಿಯನ್ನೂ, ಮಾಯೆಯಿಂದ ಮಾಡಿಸಿ, ಅವುಗಳನ್ನು ಸೀತೆಗೆ ತಂದು ತೋರಿಸಿದುದು.	೧೮೯
೩೨	ಸೀತೆಯು ಮಾಯಾರಾಮನ ಶಿರಸ್ಸನ್ನು ನೋಡಿ ವಿಲಪಿಸಿದುದು.	೧೯೪
೩೩	ವಿಭೀಷಣನ ಭಾರ್ಯೆಯಾದ ಸರಮೆಯು ಸೀತೆಯನ್ನು ಸಮಾಧಾನಪಡಿಸಿದುದು	೨೦೧

ಸರ್ಗ ಸಂಖ್ಯೆ	ವಿಷಯಗಳು	ಪುಟ ಸಂಖ್ಯೆ
೩೪	ಸರಮೆಯು ರಾವಣನ ಅಭಿಪ್ರಾಯವನ್ನು ತಿಳಿದು ಬಂದು ಸೀತೆಗೆ ಹೇಳಿದುದು.	೨೦೬
೩೫	ರಾಮನಿಗೆ ಸೀತೆಯನ್ನೊಪ್ಪಿಸುವುದೇ ಅವಶ್ಯಕಾರ್ಯವೆಂದು ಮಾಲ್ಯವಂತನು ರಾವಣನಿಗೆ ಬೋಧಿಸಿದುದು.	೨೦೯
೩೬	ರಾವಣನು ಮಾಲ್ಯವಂತನನ್ನು ನಿಂದಿಸಿ, ತನ್ನ ಪಟ್ಟಣದ ರಕ್ಷಣೆಗಾಗಿ ಸೇನೆಗಳನ್ನು ನಿಲ್ಲಿಸಿದುದು.	೨೧೫
೩೭	ಇತ್ತಲಾಗಿ ರಾಮನು ವಾನರಸೈನ್ಯಕ್ಕೆ ಗುಪ್ತವಿಧಾನವನ್ನು ಮಾಡಿದುದು.	೨೧೮
೩೮	ರಾಮನು ಲಂಕೆಯನ್ನು ನೋಡುವುದಕ್ಕಾಗಿ ಸುವೇಲಾದ್ರಿಯನ್ನೇರಿದುದು.	೨೨೨
೩೯	ರಾಮನು ಲಂಕಾನಗರವನ್ನು ನೋಡಿದುದು.	೨೨೪
೪೦	ಸುಗ್ರೀವ ರಾವಣರ ದ್ವಂದ್ವಯುದ್ಧವು.	೨೨೭
೪೧	ರಾಮನು ಭಯಂಕರ ನಿಮಿತ್ತಗಳನ್ನು ಕಂಡುದು. ಅಂಗದನು ರಾವಣನ ಬಳಿಗೆ ರಾಯಭಾರಿಯಾಗಿ ಹೋದುದು. ರಾಮನು ವಾನರಸೈನ್ಯದೊಡನೆ ಲಂಕೆಯನ್ನು ಮುತ್ತಿದುದು.	೨೩೨
೪೨	ವಾನರ ರಾಕ್ಷಸರ ಯುದ್ಧಾರಂಭವು.	೨೪೩
೪೩	ವಾನರ ರಾಕ್ಷಸರ ದ್ವಂದ್ವಯುದ್ಧವು.	೨೪೮
೪೪	ರಾತ್ರಿ ಯುದ್ಧವು.	೨೫೩
೪೫	ಇಂದ್ರಜಿತ್ತಿನ ನಾಗಪಾಶದಿಂದ ರಾಮಲಕ್ಷ್ಮಣರು ಬದ್ಧರಾಗಿದ್ದುದು.	೨೫೭

ಸರ್ಗ ಸಂಖ್ಯೆ	ವಿಷಯಗಳು	ಪುಟ ಸಂಖ್ಯೆ
೪೬	ಸುಗ್ರೀವ ವಿಭೀಷಣಾದಿಗಳು ನಾಗಪಾಶಬದ್ಧರಾದ ರಾಮಲಕ್ಷ್ಮಣರ ಅವಸ್ಥೆಯನ್ನು ನೋಡಿ ದುಃಖಿಸಿದುದು. ಇಂದ್ರಜಿತ್ತುವು ಸುಗ್ರೀವಾದಿಗಳಮೇಲೆ ಬಾಣವನ್ನು ಹೊಡೆದುದು. ವಿಭೀಷಣನು ಸುಗ್ರೀವನನ್ನು ಸಮಾಧಾನಪಡಿಸಿದುದು. ಇಂದ್ರಜಿತ್ತುವು ರಾವಣನಿಗೆ ತನ್ನ ಜಯುವನ್ನು ತಿಳಿಸಿದುದು.	೨೬೧
೪೭	ರಾವಣಾಜ್ಞೆಯಿಂದ ರಾಕ್ಷಸ ಸ್ತ್ರೀಯರು ಸೀತೆಯನ್ನು ಪುಷ್ಪಕ ವಿಮಾನದ ಮೇಲೇರಿಸಿ, ಯುದ್ಧಭೂಮಿಗೆ ಕರೆತಂದು, ನಾಗಪಾಶಬದ್ಧರಾಗಿ ಬಿದ್ದಿದ್ದ ರಾಮಲಕ್ಷ್ಮಣರನ್ನು ತೋರಿಸಿದುದು.	೨೬೭
೪೮	ಸೀತೆಯು ರಾಮಲಕ್ಷ್ಮಣರ ದುರವಸ್ಥೆಯನ್ನು ನೋಡಿ ನಾನಾ ವಿಧವಾಗಿ ವಿಲಪಿಸಿದುದು.	೨೬೯
೪೯	ರಾಮನು ಸ್ವಲ್ಪವಾಗಿ ಮೂರ್ಛೆತಿಳಿದೆದ್ದು, ಲಕ್ಷ್ಮಣನನ್ನು ಕುರಿತು ದುಃಖಿಸಿದುದು ಮತ್ತು ಸುಗ್ರೀವನನ್ನು ಕಿಷ್ಕಿಂಧೆಗೆ ಹಿಂತಿರುಗಿ ಹೋಗುವಂತೆ ಹೇಳಿದುದು. ವಿಭೀಷಣನು ವಾನರ ಸೈನ್ಯಕ್ಕೆ ಧೈರ್ಯವನ್ನು ಹೇಳಿ ನಿಲ್ಲಿಸಿ ತಿರುಗಿ ರಾಮನ್ನಬಳಿಗೆ ಬಂದುದು.	೨೭೪
೫೦	ವಿಭೀಷಣನು ರಾಮಲಕ್ಷ್ಮಣರ ಅವಸ್ಥೆಯನ್ನು ನೋಡಿ ದುಃಖಿಸುತ್ತಿರಲು, ಸುಗ್ರೀವನು ಅವನನ್ನು ಸಮಾಧಾನಗೊಳಿಸಿದುದು. ಇಷ್ಟರಲ್ಲಿ ಗರುತ್ಮಂತನು ಬಂದು ರಾಮಲಕ್ಷ್ಮಣರಿಂದ ನಾಗಪಾಶವನ್ನು ಬಿಡಿಸಿದುದು. ಇದನ್ನು ನೋಡಿ ಸಮಸ್ತ ವಾನರರೂ ಸಂತೋಷದಿಂದ ಸಿಂಹನಾದಗಳನ್ನು ಮಾಡಿದುದು.	೨೭೮
೫೧	ರಾವಣಾಜ್ಞೆಯಿಂದ ಧೂಮ್ರಾಕ್ಷನು ಸೇನಾ ಸಮೇತನಾಗಿ ಬಂದು ವಾನರಸೇನೆಯನ್ನು ನೋಡಿದುದು.	೨೮೫

ಸರ್ಗ ಸಂಖ್ಯೆ	ವಿಷಯಗಳು	ಪುಟ ಸಂಖ್ಯೆ
೫೨	ಧೂಮ್ರಾಕ್ಷನು ಹನುಮಂತನಿಂದ ಹತನಾದುದು.	೨೮೮
೫೩	ಧೂಮ್ರಾಕ್ಷನ ವಧವನ್ನು ಕೇಳಿ ರಾವಣನು ವಜ್ರದಂಷ್ಟ್ರನನ್ನು ಕಳಿಸಿದುದು. ಅಂಗದನು ವಜ್ರದಂಷ್ಟ್ರನ ಸೇನೆಯನ್ನು ನಾಶ ಮಾಡಿದುದು.	೨೯೨
೫೪	ವಜ್ರದಂಷ್ಟ್ರನು ಅಂಗದನಿಂದ ಹತನಾದುದು.	೨೯೫
೫೫	ರಾವಣಾಜ್ಞೆಯಿಂದ ಅಕಂಪನನು ಲಂಕೆಯ ಪಶ್ಚಿಮದ್ವಾರಕ್ಕೆ ಬಂದು ಅಲ್ಲಿದ್ದ ಹನುಮಂತನೊಡನೆ ಯುದ್ಧಮಾಡಿದುದು.	೨೯೮
೫೬	ಅಕಂಪನನು ಹನುಮಂತನಿಂದ ಹತನಾದುದು.	೩೦೧
೫೭	ಪ್ರಹಸ್ತನು ಯುದ್ಧಕ್ಕೆ ಹೊರಟುದುದು.	೩೦೫
೫೮	ಪ್ರಹಸ್ತನು ನೀಲನಿಂದ ಹತನಾದುದು.	೩೧೦
೫೯	ಪ್ರಹಸ್ತನ ವಧವನ್ನು ಕೇಳಿ ರಾವಣನು ತಾನಾಗಿಯೇ ಯುದ್ಧಕ್ಕೆ ಹೊರಟುದುದು. ಸುಗ್ರೀವಾದಿಗಳು ರಾವಣನಿಂದ ಭಂಗ ಹೊಂದಿದುದು. ರಾವಣನ ಅಮೋಘ ಶಕ್ತಿಯಿಂದ ಲಕ್ಷ್ಮಣನಿಗೆ ಮೂರ್ಛೆಯುಂಟಾಗಿದ್ದುದು. ರಾಮರಾವಣರ ಯುದ್ಧವು. ರಾವಣನ ಕಿರೀಟಭಂಗವು.	೩೧೩

ಶ್ರೀರಸ್ತು

ಶ್ರೀಸೀತಾಲಕ್ಷ್ಮಣ ಸಮೇತ ಶ್ರೀರಾಮಚಂದ್ರ ಪರಬ್ರಹ್ಮಣೇ ನಮಃ

ಅವತಾರಿಕೆ

ಇದುವರೆಗೆ ಸುಂದರಕಾಂಡದಲ್ಲಿ ಪುರುಷಕಾರಭೂತೆಯಾದ ಲಕ್ಷ್ಮೀದೇವಿಯ ಕೃತ್ಯವು ಹೇಳಲ್ಪಟ್ಟಿತು. ಈ ಯುದ್ಧಕಾಂಡದಲ್ಲಿ ಉಪಾಯಭೂತನಾದ ಈಶ್ವರನ ಕೃತ್ಯವು ಹೇಳಲ್ಪಡುವುದು. ಇದಲ್ಲದೆ ಈ ಕಾಂಡದಿಂದ ಲೋಕಕ್ಕುಪದೇಶಿಸಲ್ಪಡುವ ಸದಾಚಾರಗಳೂ, ರಾಜನೀತಿಗಳೂ ಮಹಾದ್ಭುತಗಳಾಗಿರುವುವು. ಆರಂಭದಲ್ಲಿಯೇ ರಾಮನು ಸೀತಾನ್ವೇಷಣವೆಂಬ ಕಾರ್ಯವನ್ನು ನಡೆಸಿಬಂದ ಹನುಮಂತನನ್ನು ಬಹಳವಾಗಿ ಕೊಂಡಾಡಿ ಮನ್ನಿಸಿರುವುದರಿಂದ, "ಪ್ರತ್ಯಕ್ಷೇ ಗುರವಃ ಸ್ತುತ್ಯಾಃ ಪರೋಕ್ಷೇ ಮಿತ್ರಬಾಂಧವಾಃ। ಕರ್ಮಾನ್ತೇ ದಾಸಭೃತ್ಯಾಶ್ಚ ನ ಕದಾಚನ ಪುತ್ರಕಾಃ" ಎಂಬ ನ್ಯಾಯವನ್ನನುಸರಿಸಿ, ಕಾರ್ಯವನ್ನು ಸಾಧಿಸಿಬಂದ ಭೃತ್ಯನನ್ನು ಸ್ವಾಮಿಯಾದವನು ಹೇಗೆ ಮನ್ನಿಸಬೇಕೆಂಬ ಲೋಕನೀತಿಯು ಬೋಧಿತವಾಗುತ್ತದೆ. ಇತ್ತಲಾಗಿ ಸುಗ್ರೀವಾದಿ ವಾನರರ ದಂಡಯಾತ್ರೆ, ಅತ್ತಲಾಗಿ ರಾವಣನ ಮಂತ್ರಾಲೋಚನೆ ಇತ್ಯಾದಿ ಪ್ರಕರಣಗಳಿಂದ ರಾಜರಿಗಿರಬೇಕಾದ ಸೇನಾಬಲ, ಮಂತ್ರಿಬಲಾದಿಗಳ ಪ್ರಾಧಾನ್ಯವು ತೋರಿಸಲ್ಪಡುವುದು. ಇತ್ತಲಾಗಿ ವಾನರರಿಗೆ ರಾಮಕಾರ್ಯವನ್ನು ನಡೆಸುವುದರಲ್ಲಿದ್ದ ಮಹೋತ್ಸಾಹವನ್ನೂ, ಅತ್ತಲಾಗಿ ಲಂಕೆಯಿಂದ ವಿಭೀಷಣನ ನಿರ್ಗಮನವನ್ನೂ ವಿವರಿಸುವ ಸಂದರ್ಭಗಳಲ್ಲಿ "ಯಾಂತಿ ನ್ಯಾಯಪ್ರವೃತ್ತಸ್ಯ ತಿರ್ಯಂಚೋಽಪಿ ಸಹಾಯತಾಂ। ಅಪಂಥಾನಂ ತು ಗಚ್ಛಂತಂ ಸೋದರೋಽಪಿ ವಿಮುಂಚತಿ"—ನ್ಯಾಯದಲ್ಲಿ ಪ್ರವರ್ತಿಸುವವನಿಗೆ ತಿರ್ಯಗ್ಜಂತುಗಳೂ ಸಹಾಯವಾಗಿ ಬರುವುವು. ದುರ್ಮಾರ್ಗ ಪ್ರವರ್ತಕನನ್ನು, ಒಡಹುಟ್ಟಿದವರೂ ತೊರೆಯುವರೆಂಬ ಅಮೂಲ್ಯವಾದ ನೀತಿಯು ನಿದರ್ಶಿಸಲ್ಪಡುವುದು. ರಾವಣನಿಗೆ ವಿಭೀಷಣನು ಹೇಳಿದ ಹಿತವಾದಗಳೂ, ಇತರ ದುರ್ಮಂತ್ರಿಗಳು ಮಾಡಿದ ದುರ್ಬೋಧನೆಗಳೂ ಲೋಕಕ್ಕೆ ಸದಸದ್ವಿವೇಕಗಳ ತಾರತಮ್ಯಕ್ಕೆ

ಪ್ರಧಾನ ನಿದರ್ಶನಗಳು. ರಾವಣಪ್ರಯುಕ್ತವಾದ ಶಕ್ತಿಯಿಂದ ಲಕ್ಷ್ಮಣನು ಮೂರ್ಛಿತನಾಗಿದ್ದ ಸಂದರ್ಭದಲ್ಲಿ ರಾಮನ ವಿಲಾಪವೂ, ನಂದಿಗ್ರಾಮದಲ್ಲಿ ಭರತನ ಅಗ್ನಿಪ್ರವೇಶ ಸನ್ನಾಹವೂ ಸಹೋದರರಲ್ಲಿರಬೇಕಾದ ಪರಸ್ಪರ ವಾತ್ಸಲ್ಯವನ್ನು ತೋರಿಸುವುವು. ಸೀತೆಯ ಅಗ್ನಿಪ್ರವೇಶದಿಂದ ಸ್ತ್ರೀಯರ ಪಾತಿವ್ರತ್ಯಮಹಿಮೆಯು ಬೋಧಿತವಾಗುವುದು. ಇದರಂತೆಯೇ ಅಲ್ಲಲ್ಲಿನ ಕಥಾಸಂದರ್ಭಗಳಿಂದ ಇನ್ನೂ ಅನೇಕ ನೀತಿಗಳೂ, ತತ್ತ್ವಾರ್ಥಗಳೂ ಸೂಚಿಸಲ್ಪಡುವುವು.

ಮುಖ್ಯವಾಗಿ ಈ ಕಾಂಡದಲ್ಲಿ ರಾಮಾಯಣಕ್ಕೆಲ್ಲಾ ಸಾರಭೂತವಾದ ವಿಭೀಷಣ ಶರಣಾಗತಿಯೂ, ಶ್ರೀರಾಮನ ಅಭಯಪ್ರದಾನವೂ ವಿಶೇಷ ಜ್ಞಾನ ಬೋಧಕವಾಗಿರುವುದರಿಂದ, ಆ ಸಂದರ್ಭಗಳಲ್ಲಿ ಪೂರ್ವಾಚಾರ್ಯರು ವಿವರಿಸಿರುವ ಅರ್ಥವಿಶೇಷಗಳೂ, ಅಪೂರ್ವ ವಿಷಯಗಳೂ, ರಹಸ್ಯಭಾಗಗಳೂ, ಬಹಳ ಮನೋರಂಜಕಗಳಾಗಿ, ಮುಮುಕ್ಷುಗಳಿಗೆ ದಿವ್ಯಾಮೃತಪ್ರಾಯವಾಗಿರುವುವು. ಈ ಅರ್ಥವಿಶೇಷಗಳೆಲ್ಲವೂ ಅಭಯಪ್ರದಾನಸಾರವೆಂಬ ಪ್ರತ್ಯೇಕ ಭಾಗವಾಗಿ ವಿವರಿಸಲ್ಪಟ್ಟಿದೆ.

ಶ್ರೀಃ

ಶ್ರೀರಾಮಚಂದ್ರಪರಬ್ರಹ್ಮಣೇ ನಮಃ

ಶ್ರೀಮದ್ರಾಮಾಯಣವು

ಯುದ್ಧಕಾಂಡವು

ಶ್ರೀರಾಮನು ಸೀತಾವೃತ್ತಾಂತವನ್ನು ತಿಳಿಸಿದ ಹನುಮಂತನನ್ನು ಪ್ರೇಮದಿಂದಾಲಿಂಗಿಸಿ, ಮುಂದೆ ಸಮುದ್ರತರಣಕ್ಕೆ ಉಪಾಯವೇನೆಂದು ಚಿಂತಿಸಿದುದು.

ಶ್ರೀರಾಮನು ಹನುಮಂತನು ಹೇಳಿದ ವಾಕ್ಯವನ್ನು ಕೇಳಿ ಸಂತೋಷಯುಕ್ತನಾಗಿ ಸುಗ್ರೀವಾದಿ ವಾನರನ್ನು ಕುರಿತು "ಭಲೆ! ಈ ಹನುಮಂತನು ಸಾಧಿಸಿಬಂದಿರುವ ಕಾರ್ಯವು ಬಹಳ ದೊಡ್ಡದು ! ಈ ಭೂಮಿಯಲ್ಲಿ ಬೇರೆ ಯಾವನೂ ಇಷ್ಟು ದೊಡ್ಡ ಕಾರ್ಯವನ್ನು ನಡೆಸಲಾರನು ! ಈ ಕಾರ್ಯವನ್ನು ಸಾಧಿಸುವುದು ಹಾಗಿರಲಿ ! ಇದನ್ನು ಮನಸ್ಸಿನಿಂದ ಯೋಚಿಸುವುದಕ್ಕಾದರೂ ಬೇರೆಯವರಿಗೆ ಸಾಧ್ಯವಿಲ್ಲ. ಮಹಾಸಮುದ್ರವನ್ನು ದಾಟುವುದೆಂದರೇನು ? ಲಂಕೆಯನ್ನು ಪ್ರವೇಶಿಸುವುದೆಂದರೇನು? ಒಂದು ವೇಳೆ

---

1. ಇಲ್ಲಿ "ಶ್ರುತ್ವಾ ಹನುಮತೋ ವಾಕ್ಯಂ" ಎಂಬ ಪ್ರಥಮಶ್ಲೋಕಾರಂಭವು. ಇಲ್ಲಿ "ಹನುಮತಃ" ಎಂಬಲ್ಲಿರುವ ಮಕಾರವು ಗಾಯತ್ರಿಯ ಹದಿನೈದನೆಯ ಅಕ್ಷರವಾದುದರಿಂದ, ಇದುವರೆಗೆ ರಾಮಾಯಣದಲ್ಲಿ ಹದಿನಾಲ್ಕುಸಹಸ್ರ ಗ್ರಂಥಗಳು ಮುಗಿದು ಇಲ್ಲಿಂದ ಹದಿನೈದನೆಯ ಸಹಸ್ರವು ಆರಂಭಿಸಲ್ಪಡುವುದಾಗಿ ಗ್ರಾಹ್ಯವು.

ಪ್ರವೇಶಿಸಿದರೂ ಅಲ್ಲಿನ ರಾಕ್ಷಸರನ್ನಿದಿರಿಸುವುದೆಂದರೇನು ? ಇಷ್ಟಾಗಿಯೂ ಹಿಂತಿರುಗಿ ಬದುಕಿ ಬರುವುದೆಂದರೇನು ? ಗರುಡನೊಬ್ಬನು ! ವಾಯುವೊಬ್ಬನು ! ಈ ಹನುಮಂತನೊಬ್ಬನು! ಈಮೂವರು ಹೊರತು ಬೇರೊಬ್ಬನು ಆ ಮಹಾಸಮುದ್ರವನ್ನು ದಾಟುವನೆಂದೇ ನನಗೆ ತೋರಲಿಲ್ಲ ! ಆ ಗರುಡನಾದರೂ ವಾಯುವಿನ ಸಹಾಯವಿದ್ದ ಹೊರತು ದಾಟಲಾರನು ! ಅಂತಹ ಮಹಾಸಾಗರವನ್ನೂ ಈ ಹನುಮಂತನು ತಾನೊಬ್ಬನೇ ದಾಟಿಬಂದಿರುವನಲ್ಲಾ !ಸಮುದ್ರವನ್ನು ದಾಟಿದುದೂ ಹಾಗಿರಲಿ! ಆ ಲಂಕೆಯಾದರೂ ಸಾಮಾನ್ಯವೆ? ದೇವದಾನವ ಯಕ್ಷರಾಕ್ಷಸನಾಗಗಂಧರ್ವರಲ್ಲಿ ಯಾರೇ ಆಗಲಿ ಅದನ್ನಿದಿರಿಸಲಾರರು ! ರಾವಣನು ಎಷ್ಟೋ ಎಚ್ಚರಿಕೆಯಿಂದ ಅದನ್ನು ರಕ್ಷಿಸುತ್ತಿರುವನು. ಎಷ್ಟೋ ಬಲಪರಾಕ್ರಮಸಂಪನ್ನನಾದವನೂ ಶತ್ರುಗಳ ಕೈಗೆ ಸಿಕ್ಕದೆ ಆ ಲಂಕೆಗೆ ಪ್ರವೇಶಿಸಲಾರನು.ಒಂದುವೇಳೆ ತನ್ನ ಶಕ್ತಿಯಿಂದ ಪ್ರವೇಶಿಸಿದರೂ ಪ್ರಾಣದೊಡನೆ ಹಿಂತಿರುಗಿ ಬರಲಾರನು ! ಅನೇಕ ರಾಕ್ಷಸರಿಂದ ರಕ್ಷಿತವಾಗಿ, ಎಂತವರಿಗೂ ಇದಿರಿಸಲಸಾಧ್ಯವಾದ ಆ ಲಂಕೆಯನ್ನು ಪ್ರವೇಶಿಸುವುದಕ್ಕೆ ಯಾರಿಗೆ ಶಕ್ಯವು? ಎಷ್ಟೇ ಬಲಪರಾಕ್ರಮವುಳ್ಳವನಾದರೂ ಈ ಹನುಮಂತನಿಗೆ ಸಾಟಿಯಾಗಲಾರನು ! ಮುಖ್ಯವಾಗಿ ಹನುಮಂತನು ಸುಗ್ರೀವನಿಗಾಗಿ ನಡೆಸಿದ ಈ ಭೃತ್ಯಕಾರ್ಯವು ಬಹಳ ಅತಿಶಯವಾದುದು ! ತನ್ನ ಸ್ವಾಮಿಯ ಆಜ್ಞೆಯಂತೆ ನಡೆಸಬೇಕಾದುದಕ್ಕಿಂತಲೂ ಹೆಚ್ಚಾಗಿಯೇ ನಡೆಸಿರುವನು ! ತನಗೆ ಪ್ರಭುವಿನಿಂದ ನಿಯಮಿಸಲ್ಪಟ್ಟ ಸೀತಾನ್ವೇಷಣವನ್ನು ಮಾತ್ರವೇ ಅಲ್ಲದೆ, ತನ್ನ ಬಲಪರಾಕ್ರಮಗಳಿಗೆ ತಕ್ಕ ಬೇರೆ ಕಾರ್ಯಗಳನ್ನೂ ನಡೆಸಿಬಂದಿರುವನು. ಲೋಕದಲ್ಲಿ ಯಾವ ಭೃತ್ಯನು ರಾಜಾಜ್ಞೆಯಂತೆ ತಾನು ನಡೆಸಬೇಕಾದ ಅಸಾಧ್ಯಕಾರ್ಯವನ್ನು ನಡೆಸಿದಮೇಲೆಯೂ,ತನಗಿರುವ ಸ್ವಾಮಿಭಕ್ತಿಯಿಂದ ಆ ಕಾರ್ಯಕ್ಕೆ ಇತರ ಕಾರ್ಯಗಳನ್ನೂ ತಾನಾಗಿಯೇ ನಡೆಸಿಬರುವನೋ ಅವನೇ ಉತ್ತಮ ಭೃತ್ಯನೆನಿಸುವನು. ಯಾವನು ಕಾರ್ಯಸಮರ್ಥನಾಗಿದ್ದರೂ ರಾಜಾಜ್ಞೆಯಂತೆ ತಾನು ನಡೆಸಬೇಕಾದ ಕಾರ್ಯವನ್ನು ಮಾತ್ರವೇ ನಡೆಸಿ, ಆತನಿಗೆ ಪ್ರಿಯವಾದ ಬೇರೆ ಯಾವ ಕಾರ್ಯವನ್ನೂ ಗಮನಿಸಿದೆ, ಅಷ್ಟರಲ್ಲಿಯೇ ತೃಪ್ತನಾಗಿ ಬರುವನೋ, ಅಂತವನು ಮಧ್ಯಮಭೃತ್ಯನೆನಿಸುವನು.ಯಾವನು ರಾಜಾಜ್ಞೆಯನ್ನನುಸರಿಸಿ ತಾನು ನಡೆಸಬೇಕಾದ ಕಾರ್ಯವನ್ನೂ ಎಚ್ಚರಿಕೆಯಿಂದ ನಡೆಸದಿರುವನೋ ಅವನು ಅಧಮಭೃತ್ಯನೆನಿಸಿಸುವನು. ಈ ಹನುಮಂತನಲ್ಲಿ ಉತ್ತಮಭೃತ್ಯಲಕ್ಷಣವಿರುವುದರಿಂದಲೇ ಇವನು ರಾಜಾಜ್ಞೆಯಂತೆ ನಡೆಸಬೇಕಾದ ಸೀತಾನ್ವೇಷಣವೆಂಬ ಮುಖ್ಯಕಾರಣವನ್ನೂ ನಡೆಸಿ, ತಾನೂ ಅವಮಾನ

ಪಡದೆ, ಲಂಕಾದಹನವೇ ಮೊದಲಾದ ಅಧಿಕ ಕಾರ್ಯಗಳಿಂದ ತನ್ನ ಪ್ರಭುವಾದ ಸುಗ್ರೀವನಿಗೆ ಹೆಚ್ಚು ಸಂತೋಷವನ್ನೂ ಉಂಟುಮಾಡಿರುವನು. ಈಗ ಈ ಹನುಮಂತನು ಸೀತೆಯನ್ನು ನೋಡಿ ಬಂದುದರಿಂದ ನಾನೂ, ಮಹಾಬಲಾಢ್ಯನಾದ ಈ ಲಕ್ಷ್ಮಣನೂ, ಇನ್ನೂ ರಘುವಂಶದಲ್ಲಿ ಹುಟ್ಟಿದವರೆಲ್ಲರೂ ಬದುಕುವಂತಾಯಿತು ! ಈತನೇ ನಮ್ಮೆಲ್ಲರಿಗೂ ಆತ್ಮಹತ್ಯಾರೂಪವಾದ ಅಧರ್ಮವನ್ನು ತಪ್ಪಿಸಿ ನಮ್ಮನ್ನು ಧರ್ಮಮಾರ್ಗದಲ್ಲಿ ನಿಲ್ಲಿಸಿದಂತಾಯಿತು ! ಹೀಗೆ ನಮಗೆ ಪ್ರಿಯವಾರ್ತೆಯನ್ನು ಹೇಳಿ, ನಮ್ಮೆಲ್ಲರನ್ನೂ ಬದುಕಿಸಿದ ಈ ಹನುಮಂತನ ವಿಷಯದಲ್ಲಿ ಅದಕ್ಕೆ ತಕ್ಕಂತೆ ಪ್ರಿಯವನ್ನು ಮಾಡಬೇಕಾದ ಭಾರವು ನನ್ನ ಮೇಲೆ ಬಿದ್ದಿತಲ್ಲವೆ ? ಇದನ್ನು ಹೇಗೆ ತೀರಿಸಲಿ ! ಈ ವಿಚಾರವು ನನ್ನ ಮನಸ್ಸನ್ನು ಬಹಳವಾಗಿ ಕೊರಗಿಸುತ್ತಿರುವುದು ! ಇದುವರೆಗೂ ನಾನು ಈತನಿಗೆ ತಕ್ಕ ಪ್ರತ್ಯುಪಕಾರವನ್ನು ಮಾಡದಿರುವುದೇ ನನ್ನ ಮನಸ್ಸನ್ನು ಬಾಧಿಸುತ್ತಿರುವುದು. ಪ್ರಾಣದಾನಮಾಡಿದ ಈ ಮಹಾತ್ಮನಿಗೆ ಈಗ ನಾನು ಯಾವ ವಿಧದಲ್ಲಿ ಪ್ರತ್ಯುಪಕಾರಮಾಡಲಿ ! ಇದಕ್ಕಾಗಿ ನನ್ನ ಸರ್ವಸ್ವವನ್ನೂ ಕೊಟ್ಟ ಹೊರತು ನನ್ನ ಸಾಲವು ತೀರದು ! ಇವನಿಗೆ ಪ್ರತ್ಯುಪಕಾರ ಮಾಡಬೇಕಾದಕಾಲವೂ ಬಂದೊದಗಿರುವುದು ! ಇದಕ್ಕಾಗಿ ಈಗ ನಾನು ಯಾವುದನ್ನು ಕೊಡಬಲ್ಲೆನು ! ಇದೋ ! [1] ಈಗ ನಾನು ಕೊಡುವ ಈ ಆಲಿಂಗನವೇ ಸರ್ವಸ್ವದಾನರೂಪವಾಗಿರಲಿ ! ಎಂದು ಹೇಳುತ್ತ ಪ್ರೇಮದಿಂದ ಪುಳಕಿತವಾದ ಮೈಯುಳ್ಳವನಾಗಿ, ಕಾರ್ಯವನ್ನು

---

1. ಇಲ್ಲಿ "ಏಷ ಸರ್ವಸ್ವಭೂತಸ್ತು ಪರಿಷ್ವಂಗೋ ಹನೂಮತಃ ! ಮಯಾ ಕಾಲಮಿಮಂ ಪ್ರಾಪ್ಯ ದತ್ತಸ್ತಸ್ಯಮಹಾತ್ಮನಃ" ಎಂದು ಮೂಲವು. ವಿಶೇಷಾರ್ಥವು (ಏಷಃ) ಈ ಆಲಿಂಗನವು ಈ ಲಿಂಗವೆಂತದು ? ಸ್ವಾನುಭವಸಿದ್ಧವಾದುದು. "ಇಚ್ಛಾಗೃಹೀತಾಭಿಮತೋರುದೇಹ" ಎಂಬಂತೆ ರಾಮನು ಈ ತನ್ನ ದೇಹವನ್ನು ತಾನಾಗಿಯೇ ಆಸೆಪಟ್ಟು ಸ್ವೀಕರಿಸಿರುವದರಿಂದ, ತನಗೆ ಬಹಳ ಅಭಿಮತವಾಗಿಯೂ, ಮಹತ್ತಾಗಿಯೂ ಇರುವ ಆ ದೇಹವನ್ನೇ ಒಪ್ಪಿಸುವುದಾಗಿ ಭಾವವು. ಲೋಕದಲ್ಲಿ ಯಾರಾದರೂ ತಮಗೆ ನಿರವಧಿಕಭೋಗ್ಯವಾದ ವಸ್ತುವನ್ನೇ ಇಷ್ಟಜನಗಳಿಗೆ ಕೊಡುವರಲ್ಲವೆ ? ಅದರಂತೆಯೇ ಇಲ್ಲಿ ರಾಮನೂ ತನಗೆ ಅತ್ಯಂತ ಭೋಗ್ಯವೆಂದು ಸ್ವಾನುಭವಸಿದ್ಧವಾದ ತನ್ನ ವಿಗ್ರಹವನ್ನೇ ಆಲಿಂಗನವೆಂಬ ವ್ಯಾಜದಿಂದ ಹನುಮಂತನಿಗೆ ಕೊಟ್ಟುಬಿಡುವುದಾಗಿ ಭಾವವು. (ಸರ್ವಸ್ವಭೂತಃ) ಈ ವಿಗ್ರಹವನ್ನು ಬಿಟ್ಟು ಬೇರೆ ಯಾವಯಾವ ಉತ್ತಮ ವಸ್ತುಗಳನ್ನು ಕೊಟ್ಟರೂ, ಆಯಾ ವಸ್ತುಗಳನ್ನು ಮಾತ್ರವೇ ಕೊಟ್ಟಂತಾಗುವುದೇ ಹೊರತು, ತದಿತರವಸ್ತುಗಳನ್ನು ಕೊಡಲಿಲ್ಲವೆಂಬ ಕೊರತೆಯೇ ಏರ್ಪಡುವುದು. ಈ ದೇಹವಾದರೋ ಸಮಸ್ತಚರಾಚರ

ಸಾಧಿಸಿಬಂದ ಮಹಾತ್ಮನಾದ ಆ ಹನುಮಂತನನ್ನು ತನ್ನ ಎರಡು ಕೈಗಳಿಂದಲೂ ಬಿಗಿಯಾಗಿ ಅಪ್ಪಿಕೊಂಡನು. ಹಾಗೆಯೇ ರಾಮನು ಸ್ವಲ್ಪಹೊತ್ತಿನವರೆಗೆ ಧ್ಯಾನಿಸುತಿದ್ದು, ವಾನರ ರಾಜನಾದ ಸುಗ್ರೀವನೂ ಕೇಳುತ್ತಿರುವ ಹಾಗೆ "ನಾವು ಸೀತಾನ್ವೇಷಣಕ್ಕಾಗಿ ಪ್ರಯತ್ನಿಸಿದ ಕಾರ್ಯವೇನೋ ಬಹಳ ತೃಪ್ತಿಕರವಾಗಿಯೇ ನೆರವೇರಿತು! ಆದರೇನು ? ಮುಂದೆ ನಾವೆಲ್ಲರೂ ದುಸ್ತರವಾದ ಸಮುದ್ರವನ್ನು ದಾಟುವುದು ಹೇಗೆ? ಇದನ್ನು ನೆನೆಸಿಕೊಂಡರೆ ಈಗಿನ ಕಾರ್ಯಸಿದ್ಧಿಯಿಂದುಂಟಾದ ನನ್ನ ಸಂತೋಷವೂ ತಗ್ಗಿ ಮನಸ್ಸಿಗೆ ಬಹಳ ಕಳವಳವುಂಟಾಗುವುದು. ಈ ಕಪಿಗಳೆಲ್ಲರೂ ಅಷ್ಟು ದುಸ್ತರವಾದ ಆ ಮಹಾಸಮುದ್ರವನ್ನು ದಾಟಿ ಅದರ ದಕ್ಷಿಣತೀರವನ್ನು ಹೇಗೆ ಸೇರಬಲ್ಲರು ? [1]ನಾವೆಲ್ಲರೂ ಸಮುದ್ರವನ್ನು ದಾಟಿ ಬರುವೆವೆಂಬ ಭರವಸೆಯನ್ನು ಸೀತೆಗೂ ಕೊಟ್ಟು ಬಂದಾಯಿತು. ಇನ್ನು ಈ ಕಪಿಗಳೆಲ್ಲರನ್ನೂ ಆ ದಕ್ಷಿಣತೀರಕ್ಕೆ ಸಾಗಿಸುವ ಉಪಾಯ

ಗಳಿಗೂ ನಿತ್ಯಾಶ್ರಯವಾದುದರಿಂದ, ಇದನ್ನು ಕೊಟ್ಟರೆ ಪ್ರಾಪಂಚಿಕಗಳಾದ ಸರ್ವಸ್ವಗಳನ್ನೂ ಕೊಟ್ಟಂತಾಗುವುದೆಂದು ಭಾವವು. (ಪರಿಷ್ವಂಗೋ ಹನುಮತಃ) ಈ ಆಲಿಂಗನವಾದರೂ ಹನುಮಂತನಿಗೆಮಾತ್ರವೇ ಉಚಿತವು. ಅಮೃತವನ್ನು ಭುಜಿಸಿದವರಿಗೆ ಗಂಜಿ ಮೊದಲಾದುವನ್ನು ಕೊಡಬಾರದಲ್ಲವೆ? ಯಾವನಿಗೆ ಯಾವ ವಸ್ತುವಿನಲ್ಲಿ ಬಹಳ ರುಚಿಯುಂಟೋ ಅವನಿಗೆ ಆ ವಸ್ತುವನ್ನೇ ಕೊಡಬೇಕಾದುದರಿಂದ "ಸ್ನೇಹೋ ಮೇ ಪರಮೋ ರಾಜನ್" ಎಂಬಂತೆ, ಈ ದೇಹದಲ್ಲಿ ಪರಮಪ್ರೇಮವುಳ್ಳ ಹನುಮಂತನಿಗೆ ಅದನ್ನೇ ಒಪ್ಪಿಸುವುದಾಗಿ ಭಾವವು. (ಮಯಾ ಕಾಲಮಿಮಂ ಪ್ರಾಪ್ಯ) ಇಂತಹ ಸಮಯವು ಸಿಕ್ಕಿರುವಾಗ, ಈ ಕಾಲಕ್ಕೆ ಅದನ್ನು ಬಿಟ್ಟರೆ ಬೇರೆ ಯಾವುದೂ ತಕ್ಕುದಲ್ಲವು. (ಮಹಾತ್ಮನಃ) ಮಹಾಸ್ವಭಾವವುಳ್ಳವನು ; ಅಥವಾ ಮಹೌದಾರ್ಯವುಳ್ಳವನು. ವೇಣ್ಯುದ್ಗ್ರಂಥನಕಾಲದಲ್ಲಿ ಆ ಸೀತೆಗೆ ನನ್ನ ವೃತ್ತಾಂತವನ್ನು ತಿಳಿಸಿ ಅವಳ ವಿಯೋಗದುಃಖದಿಂದ "ಅವಗಾಹ್ಯಾರ್ಣವಂ ಸ್ವಪ್ಸ್ಯೇ" ಎಂದು ಪ್ರಾಣತ್ಯಾಗಕ್ಕಾಗಿ ಉದ್ಯೋಗಿಸುತಿದ್ದ ನನಗೆ ಅವಳ ವೃತ್ತಾಂತವನ್ನು ತಿಳಿಸಿ ನನ್ನ ದೇಹವನ್ನುಳಿಸಿದನು. ಹೀಗೆ ನಮ್ಮಿಬ್ಬರಿಗೂ ದೇಹದಾನವನ್ನು ಮಾಡಿದ ಈ ಮಹಾತ್ಮನಿಗೆ ಈ ನನ್ನ ಒಂದು ದೇಹವನ್ನೊಪ್ಪಿಸಿದರೂ, ಅವನು ಮಾಡಿರುವ ಮಹೌದಾರ್ಯಕ್ಕೆ ತಕ್ಕ ಪ್ರತ್ಯುಪಕಾರವಾಗದೆಂದು ಭಾವವು.

1. ಇಲ್ಲಿ "ಯದ್ಯಪ್ಯೇಷ ತು ವೃತ್ತಾಂತೋ ವೈದೇಹ್ಯಾ ಗದಿತೋ ಮಮ ! ಸಮುದ್ರಪಾರಗಮನೇ ಹರೀಣಾಂ ಕಿಮಿವೋತ್ತರಮ್" ಎಂದು ಮೂಲವು. ಇಲ್ಲಿ "ಸೀತೆಯ ವೃತ್ತಾಂತವನ್ನೇನೋ ನನಗೆ ತಿಳಿಸಿದುದಾಯಿತು. ಇವರ ಮುಂದೆ ಸಮುದ್ರವನ್ನು ದಾಟುವುದಕ್ಕುಪಾಯವೇನು ?" ಎಂದು ಅರ್ಥಾಂತರವನ್ನೂ ಹೇಳಬಹುದು.

ವೇಸು !" ಎಂದನು. ಮಹಾಬಾಹುವಾಗಿಯೂ, ಶತ್ರುಸೂದನನಾಗಿಯೂ ಇರುವ ಆ ರಾಮನು ಚಿಂತೆಯಿಂದ ಕೊರಗುತ್ತ ಸುಮ್ಮನೆ ತನ್ನಲ್ಲಿ ತಾನು ಧ್ಯಾನಿಸುತಿದ್ದನು.

ಇಲ್ಲಿಗೆ ಒಂದನೆಯ ಸರ್ಗವು

——೦ ಸುಗ್ರೀವನು ರಾಮನಿಗೆ ಸಮಾಧಾನವನ್ನು ಹೇಳಿದುದು. ೦——

ಹೀಗೆ ದುಃಖದಿಂದ ಕೊರಗುತ್ತಿರುವ ದಶರಥಪುತ್ರನಾದ ರಾಮನನ್ನು ನೋಡಿ [1]ಮಿತ್ರಗುಣಸಂಪನ್ನನಾದ ಸುಗ್ರೀವನು, ದುಃಖನಿವಾರಕಗಳಾದ ಮಾತುಗಳಿಂದ ಅವನನ್ನು ಕುರಿತು, "ರಾಮಾ! ಇದೇನು! ನೀನೂ ಹೀಗೆ ಕ್ಷುದ್ರಜನದಂತೆ ದುಃಖಿಸುವುದೆಂದರೇನು ? ದುಃಖಿಸಬೇಡ! ಕೃತಘ್ನನು ಸ್ನೇಹವನ್ನು ಮರೆತು ಬಿಡುವಂತೆ, ಮನಸ್ಸಿನಲ್ಲಿರುವ ಖೇದವನ್ನು ನಿಶ್ಶೇಷವಾಗಿ ಬಿಟ್ಟುಬಿಡು! ನೀನು ಹೀಗೆ ದುಃಖಿಸುವುದಕ್ಕೆ ಕಾರಣವೇನೋ ನನಗೆ ತಿಳಿಯಲಿಲ್ಲ! ನಮಗೆ ಅವಶ್ಯವಾಗಿ ಬೇಕಾದ ಸೀತಾವೃತ್ತಾಂತವು ತಿಳಿದಮೇಲೆ ಚಿಂತೆಗೆ ಕಾರಣವೇನು ? ಇದರಮೇಲೆ ನೀನು ಎಣೆಯಿಲ್ಲದ ಸೂಕ್ಷ್ಮಬುದ್ಧಿಯುಳ್ಳವನು. ನೀತಿಶಾಸ್ತ್ರಗಳನ್ನು ಬಲ್ಲವನು. ಊಹಾಪೋಹಜ್ಞಾನವುಳ್ಳವನು. ಮುಂದೆ ಇದು ಹೀಗೆಯೇ ಆಗುವುದೆಂದು ನಿರ್ಣಯಿಸುವ ಅಸಾಧಾರಣಜ್ಞಾನವುಳ್ಳವನು. ಹೀಗಿರುವಾಗ ನಿನಗೆ ಬೇರೊಬ್ಬರು ಹೇಳಿ ತಿಳಿಸಬೇಕಾದುದೇನು ? ಯೋಗಿಯಾದವನು ಮೋಕ್ಷವಿರುದ್ಧವಾದ ಬುದ್ಧಿಯನ್ನು ಪರಿತ್ಯಜಿಸುವಂತೆ, ನೀನು ನಿನ್ನ ಮಹೋತ್ಸಾಹಕ್ಕೆ ಕುಂದಕವಾದ ಈ ವ್ಯಸನವನ್ನು ಬಿಟ್ಟುಬಿಡಬೇಕು. ಸಮುದ್ರವು ಎಷ್ಟೇ ಮಹಾನಕ್ರಗಳಿಂದ ತುಂಬಿ

---

1. ಇಲ್ಲಿ ಮಿತ್ರಗುಣಸಂಪನ್ನನೆಂದರೆ, "ಆಪದ್ಯುನ್ಮಾರ್ಗಗಮನೇ ಕಾರ್ಯಕಾಲಾತ್ಯಯೇಷು ಚ । ಅಪೃಷ್ಟೋಽಪಿ ಹಿತಾನ್ವೇಷೀ ಬ್ರೂಯಾತ್ಕಲ್ಯಾಣಭಾಷಿತಂ" ಎಂದೂ ಶುಚಿತಾ ತ್ಯಾಗಿತಾ ಶೌರ್ಯಂ ಸಮಾನಸುಖದುಃಖಿತಾ । ಅನುರಾಗಶ್ಚ ದಾಕ್ಷಿಣ್ಯಂ ಸತ್ಯತಾ ಚ ಸುಹೃದ್ಗುಣಾಃ ॥ ಎಂದೂ ಹೇಳಿರುವ ಮಿತ್ರಲಕ್ಷಣವನ್ನನುಸರಿಸಿ ಸುಗ್ರೀವನು ರಾಮನ ಸುಖದುಃಖಗಳಿಗೆ ತಾನೂ ಸಮಭಾಗಿಯಾಗಿ ನಿಂತು ಸಮಾಧಾನವನ್ನು ಹೇಳಿದುದಾಗಿ ಭಾವವು.

ಭಯಂಕರವಾಗಿದ್ದರೂ ಇರಲಿ ನಾವು ಅದನ್ನು ದಾಟುವೆವು. ಲಂಕೆಯ ಪ್ರಾಕಾರ ವನ್ನೂ ಏರುವೆವು. ನಿನ್ನ ಶತ್ರುವನ್ನೂ ನಾವೇ ಕೊಲ್ಲುವೆವು. ಈ ವಿಷಯಕ್ಕಾಗಿ ನೀನು ಸ್ವಲ್ಪವೂ ಚಿಂತಿಸಬೇಕಾದುದಿಲ್ಲ! ನೀನು ಮಾತ್ರ ಧೈರ್ಯವನ್ನು ಬಿಡದೆ ಉತ್ಸಾಹದಿಂದಿರು! ಮನಸ್ಸಿನಲ್ಲಿ ಉತ್ಸಾಹವನ್ನು ಬಿಟ್ಟು ದೀನನಾಗಿ ವ್ಯಸನದಿಂದ ಕೊರಗುವವನಿಗೆ, ಹಿಡಿದ ಕಾರ್ಯಗಳೆಲ್ಲವೂ ಕೆಡುವುವು. ಮೇಲೆಮೇಲೆ ವ್ಯಸನವೂ ಹೆಚ್ಚುವುದು. ರಾಮಾ! ನಮ್ಮಕಡೆಯ ಈ ವಾನರರನ್ನು ಸಾಮಾನ್ಯರೆಂದು ತಿಳಿಯಬೇಡ! ಇವರೆಲ್ಲರೂ ಮಹಾಶೂರರು! ಬಹಳ ಸಮರ್ಥರು! ನಿನ್ನ ಪ್ರಿಯ ಕ್ಕಾಗಿ ಬೆಂಕಿಯಲ್ಲಿ ಪ್ರವೇಶಿಸುವುದಕ್ಕಾದರೂ ಇವರು ಹಿಂಜರಿಯುವವರಲ್ಲ! ಇವರ ಸಂತೋಷವೇ ಇವರಿಗಿರುವ ಮಹೋತ್ಸಾಹವನ್ನು ಸೂಚಿಸುತ್ತಿರುವುದು ನೋಡು! ಇವರ ವಿಷಯದಲ್ಲಿ ಮೊದಲೇ ನನ್ನ ಮನಸ್ಸಿಗೆ ಸಂಪೂರ್ಣವಾದ ನಂಬಿಕೆಯುಂಟು! ಮುಂದಿನ ಕಾರ್ಯಕ್ಕಾಗಿ ನೀನು ಸ್ವಲ್ಪವೂ ಶ್ರಮವನ್ನು ವಹಿಸಬೇಕಾದುದಿಲ್ಲ! ನೀನುಮಾತ್ರ ಧೈರ್ಯಗುಂದದೆ ನಮಗೆ ಆಗಾಗ ಉತ್ಸಾಹವನ್ನು ಹುಟ್ಟಿಸುತಿದ್ದರೆ ಸಾಕು! ನಾವೇ ನಮ್ಮ ಪರಾಕ್ರಮದಿಂದ ಪಾಪಕರ್ಮಿಯಾದ ಆ ರಾವಣನನ್ನು ಕೊಂದು, ಸೀತೆಯನ್ನೂ ತಂದುಬಿಡುವೆವು. ಮುಂದೆ ಸಮುದ್ರದಲ್ಲಿ ಸೇತುವನ್ನು ಕಟ್ಟುವುದಕ್ಕಾಗಲಿ, ಆ ರಾಕ್ಷಸನಗರಿಯನ್ನು ಪ್ರವೇಶಿಸುವುದಕ್ಕಾಗಲಿ, ನೀನು ನಮಗೆ ಮೇಲೆಮೇಲೆ ಉತ್ಸಾಹವನ್ನು ಮಾತ್ರ ಕೊಡುತ್ತಿರಬೇಕು! ತ್ರಿಕೂಟಶಿಖರದಲ್ಲಿರುವ ಆ ಲಂಕೆಯನ್ನು ನಾವು ಕಣ್ಣಿಂದ ನೋಡಿದರೆ ಸಾಕು! ಅದು ನಮ್ಮ ಕಣ್ಣಿಗೆ ಬಿದ್ದ ಮಾತ್ರದಲ್ಲಿಯೇ ರಾವಣನು ಹತನಾದಂತೆಯೇ ತಿಳಿ! ಭಯಂಕರವಾದ ಆ ಮಹಾ ಸಮುದ್ರಕ್ಕೆ ಸೇತುವನ್ನು ಕಟ್ಟದಿದ್ದರೆ ಮಾತ್ರ, ದೇವೇಂದ್ರನೊಡಗೂಡಿದ ದೇವಾಸುರ ರಾದರೂ ಲಂಕೆಯನ್ನು ಸಾಧಿಸಲಾರರು! ಲಂಕೆಯವರೆಗೂ ಸಮುದ್ರದಲ್ಲಿ ಸೇತು ವನ್ನು ಕಟ್ಟಿಬಿಟ್ಟರೆ, ಆ ಕ್ಷಣವೇ ನಮ್ಮ ವಾನರಸೇನೆಯು ಅದರಲ್ಲಿ ಪ್ರವೇಶಿಸಿ ಜಯಿಸಿ ಬರುವುದರಲ್ಲಿ ಸಂದೇಹವೇ ಇಲ್ಲ. ಸೇತುವನ್ನು ಕಟ್ಟಿದಾಗಲೇ ವಾನರರಿಗೆ ಜಯ ವೆಂದು ತಿಳಿ! ನಮ್ಮ ಕಡೆಯ ಈ ವಾನರರೊಬ್ಬೊಬ್ಬರೂ ಯುದ್ಧದಲ್ಲಿ ಮಹಾ ಶೂರರು! ಒಬ್ಬೊಬ್ಬರೂ ಕಾಮರೂಪಿಗಳು! ಆ ಲಂಕೆಯನ್ನೇ ಅಲ್ಲಿನ ರಾಕ್ಷಸ ರೊಡನೆ ಕಿತ್ತುತೆರುವುದಕ್ಕೂ ಇವರಿಗೆ ಶಕ್ತಿಯುಂಟು! ಆದುದರಿಂದ ನೀನುಮಾತ್ರ ಈಗ ಧೈರ್ಯಗೆಡಬಾರದು! ಸಮಸ್ತಕಾರ್ಯಗಳಿಗೂ ಭಂಗವನ್ನುಂಟುಮಾಡತಕ್ಕ ಈ ನಿನ್ನ ವ್ಯಸನವನ್ನು ಸಂಪೂರ್ಣವಾಗಿ ಬಿಟ್ಟುಬಿಡಬೇಕು! ಲೋಕದಲ್ಲಿ ಮನುಷ್ಯನು

ವ್ಯಸನಪೀಡಿತನಾದಪಕ್ಷದಲ್ಲಿ, ಅವನ ಸಹಜವಾದ ಶೌರ್ಯವೂ ನಶಿಸುವುದು! ಎಲೈ ಪ್ರಾಜ್ಞನೆ! ಶೌರ್ಯವನ್ನೇ ಮುಖ್ಯವಾಗಿ ಅವಲಂಬಿಸಿರುವ ಪುರುಷನು ಇಂತಹಕಾಲಗಳಲ್ಲಿ ವ್ಯಸನವನ್ನು ಬಿಡಬೇಕಾದುದು ಮಾತ್ರವೇ ಅಲ್ಲ! ಕೂಡಿದ ಮಟ್ಟಿಗೆ ಮನಸ್ಸಿನಲ್ಲಿ ಧೈರ್ಯವನ್ನೂ ಹೊಂದಿರಬೇಕು! ಆದುದರಿಂದ ಶೌರ್ಯ ಪ್ರಧಾನನಾದವನಿಗೆ ಅವಶ್ಯವಾಗಿರಬೇಕಾದ ಧೈರ್ಯವನ್ನೇ ನೀನೂ ಅವಲಂಬಿಸು! ಲೋಕದಲ್ಲಿ ಶೂರರಾದ ಪುರುಷರಿಗೆ, ಅದರಲ್ಲಿಯೂ ಮಹಾತ್ಮರಾದ ನಿನ್ನಂತವರಿಗೆ, ಕೈತಪ್ಪಿಹೋದ ವಿಷಯುವನ್ನು ಕುರಿತಾಗಲಿ, ಕೆಟ್ಟುಹೋದ ವಸ್ತುವನ್ನು ಕುರಿತಾಗಲಿ ದುಃಖಿಸುವುದು ಸರ್ವಥಾ ಯುಕ್ತವಲ್ಲ. ಹಾಗೆ ದುಃಖಿಸುವುದರಿಂದ ಸರ್ವಾರ್ಥಗಳೂ ಕೆಡುವುವು. ನೀನಾದರೋ ಬುದ್ಧಿವಂತರಲ್ಲಿ ಮೇಲೆನಿಸಿದವನು. ಸಮಸ್ತಶಾಸ್ತ್ರಾರ್ಥ ಗಳನ್ನೂ ಚೆನ್ನಾಗಿ ಬಲ್ಲವನು. ಇದರಮೇಲೆ ನನ್ನಂತಹ ಸಹಾಯಕರೂ ನಿನಗಿರುವಾಗ ಶತ್ರುವನ್ನು ಜಯಿಸಲಾರೆಯಾ? ಅದಕ್ಕೆ ತಕ್ಕ ಪ್ರಯತ್ನವನ್ನು ಮಾಡು. ಎಲೈ ರಘುವಂಶೋತ್ತಮನೆ! ನೀನು ಯುದ್ಧದಲ್ಲಿ ಧನುರ್ಧಾರಿಯಾಗಿ ನಿಂತರೆ ನಿನಗಿದಿರಾಗಿ ನಿಲ್ಲುವ ವೀರನು, ಈ ಮೂರು ಲೋಕಗಳಲ್ಲಿಯೂ ಒಬ್ಬನಾದರೂ ಇರುವನೆಂದು ನನಗೆ ತೋರಲಿಲ್ಲ! ನೀನು ಈ ನಮ್ಮ ವಾನರರಮೇಲೆ ಹೊರಿಸಿದ ಕಾರ್ಯಭಾರವು ಎಂದಿಗೂ ಕೆಡಲಾರದು. ಶೀಘ್ರದಲ್ಲಿಯೇ ನೀನು ಅಪಾರವಾದ ಸಮುದ್ರವನ್ನೂ ದಾಟುವೆ! ಸೀತೆಯನ್ನೂ ನೋಡುವೆ! ಇದುವರೆಗೆ ದುಃಖಿಸಿದುದೇ ಸಾಕು! ಇನ್ನಾದರೂ ಕ್ರೋಧವನ್ನವಲಂಬಿಸು! ಕ್ಷತ್ರಿಯರು ನಿರುದ್ಯೋಗಿಗಳಾಗಿದ್ದ ಪಕ್ಷದಲ್ಲಿ ಮಂದಭಾಗ್ಯರಾಗುವರು. ಕೋಪಸ್ವಭಾವವುಳ್ಳವನನ್ನು ಕಂಡರೆ ಎಲ್ಲರೂ ಭಯ ಪಡುವರು! ಇನ್ನು ನೀನು ನಮ್ಮೆಲ್ಲರೊಡನೆ ಸೇರಿ ಸಮುದ್ರವನ್ನು ದಾಟುವುದಕ್ಕೆ ಉಪಾಯವೇನೆಂಬುದನ್ನು ಈಗಲೇ ನಿನ್ನ ಸೂಕ್ಷ್ಮಬುದ್ಧಿಯಿಂದ ವಿಚಾರಮಾಡು. ಈ ನಮ್ಮ ಸೇನೆಯೆಲ್ಲವೂ ಸಮುದ್ರವನ್ನು ದಾಟಿದಕ್ಷಣವೇ ನಮಗೆ ಜಯವು ಸಿದ್ಧವೆಂದೇ ತಿಳಿ! ಆದುದರಿಂದ ಮೊದಲು ನೀನು ಸೇತುಬಂಧನಕ್ಕೆ ಉಪಾಯವೇ ನೆಂಬುದನ್ನು ನೋಡಬೇಕು. ಈ ವಾನರರಲ್ಲಿ ಒಬ್ಬೊಬ್ಬರೂ ಮಹಾಶೂರರು! ಒಬ್ಬೊಬ್ಬರೂ ಕಾಮರೂಪಿಗಳು! ಆದರೂ ಅವರು ಆಯುಧ ಸಹಾಯವಿಲ್ಲದೆ ಹೇಗೆ ಯುದ್ಧಮಾಡಬಲ್ಲರೆಂದು ನೀನು ಶಂಕಿಸಬೇಡ! ಕಲ್ಲುಮರಗಳಿಂದಲೇ ನಿನ್ನ ಸಮಸ್ತಶತ್ರುಗಳನ್ನೂ ಧ್ವಂಸಮಾಡಬಲ್ಲರು! ನಾವು ಹೇಗಾದರೂ ಪ್ರಯತ್ನಪಟ್ಟು ಆ ಸಮುದ್ರವನ್ನು ಮಾತ್ರ ದಾಟಿಬಿಟ್ಟರೆ, ರಾವಣನು ಯುದ್ಧದಲ್ಲಿ ಸತ್ತಂತೆಯೇ

ಎಂದು ನಾನು ನಿಶ್ಚಯಿಸಿರುವೆನು. ಎಲೈ ಯುದ್ಧೋತ್ಸುಕನೆ! ಇನ್ನು ಹೆಚ್ಚಾಗಿ ಹೇಳುವುದರಿಂದೇನು? ಸರ್ವಪ್ರಕಾರದಿಂದಲೂ ನಿನಗೆ ಜಯವು ಸಿದ್ಧವು! ನನಗೆ ಆಗಲೇ ಶುಭನಿಮಿತ್ತಗಳೂ ತೋರುತ್ತಿರುವುವು! ಮತ್ತು ಈಗ ನನ್ನ ಮನಸ್ಸಿನ ಹರ್ಷವೇ ಮುಂದಿನ ಜಯವನ್ನು ಸೂಚಿಸುತ್ತಿರುವುದು" ಎಂದನು.

[1]ಇಲ್ಲಿಗೆ ಎರಡನೆಯ ಸರ್ಗವು.

ರಾಮನು ಹನುಮಂತನನ್ನು ಕುರಿತು, ಲಂಕೆಯ
ದುರ್ಗರಹಸ್ಯಾದಿಸ್ವರೂಪಗಳನ್ನು ಕೇಳಿದುದು.
ಹನುಮಂತನು ಅವುಗಳನ್ನು ವಿವರಿಸಿದುದು.

ಸಾರಜ್ಞನಾದ ರಾಮನು, ಸುಗ್ರೀವನು ಹೇಳಿದ ಯುಕ್ತಿಯುಕ್ತವಾದ ಮಾತನ್ನು ಕೇಳಿ, ಅವನ ಮಾತನ್ನು ಅನುಮೋದಿಸುತ್ತ "ಹಾಗಿದ್ದರೆ ಸರಿ! ನಾವು ಹೇಗಾದರೂ ಸಮುದ್ರವನ್ನು ದಾಟಿಬಿಡಬಹುದು! ಅದೇನೂ ಅಸಾಧ್ಯವಲ್ಲ! ನನ್ನ ತಪಶ್ಶಕ್ತಿಯಿಂದಲೋ, ಹೇಗೋ ಒಂದುವಿಧದಿಂದ ಆ ಸಮುದ್ರವನ್ನು ದಾಟಿಸುವುದಕ್ಕೆ ನನಗೆ ಶಕ್ತಿಯುಂಟು! ಇನ್ನು ಈ ವಿಷಯವಾಗಿ ಚಿಂತಿಸಬೇಕಾದುದಿಲ್ಲ! ಆದರೆ ಮೊದಲು ಆ ಲಂಕೆಯ ವಿಷಯವಾಗಿ ನಾವು ಕೆಲವು ಸಂಗತಿಯನ್ನು ತಿಳಿದುಕೊಳ್ಳಬೇಕು. ಎಲೆ ವಾಯುಪುತ್ರನೆ! ದುರ್ಗಮವಾದ ಆ ರಾಕ್ಷಸನಗರಿಯಲ್ಲಿರುವ ದುರ್ಗಗಳೆಷ್ಟು? ಅಲ್ಲಿನ ಕೋಟೆಗಳೆಷ್ಟು? ಅವೆಲ್ಲವನ್ನೂ ನನಗೆ ತಿಳಿಸು! ಅಲ್ಲಿನ ರಾಕ್ಷಸಸೈನ್ಯದ ಪರಿಮಾಣವೆಷ್ಟು? ಆ ಲಂಕೆಯ ಬಾಗಿಲಲ್ಲಿ ಶತ್ರುಗಳ ಪ್ರವೇಶಕ್ಕೆ ಅವಕಾಶವಿಲ್ಲದಂತೆ ಮಾಡಿರುವ ರಕ್ಷಣ ಕ್ರಮಗಳ ರೀತಿಯೇನು? ಪುರರಕ್ಷಣೆಗಾಗಿ ಮಾಡಿರುವ ಕೋಟೆಕಂದಕಗಳೇ ಮೊದಲಾದ ಸನ್ನಿವೇಶಗಳನ್ನೂ, ಅಲ್ಲಿನ ರಾಕ್ಷಸ

---

1. ಈ ಸರ್ಗದಲ್ಲಿ ಲೋಕೇಶ್ವರನಾದ ರಾಮನು ಮನುಷ್ಯಭಾವವನ್ನನುಸರಿಸಿ, "ಸಮುದ್ರವನ್ನು ದಾಟುವ ಬಗೆಯೇನೆಂದು ದುಃಖಿಸಿದುದೂ, ಅದಕ್ಕಾಗಿ ಸುಗ್ರೀವನು ಸಮಾಧಾನಹೇಳಿ ಧೈರ್ಯವನ್ನುಪದೇಶಿಸಿದುದೂ, ಅದರಮೇಲೆ ರಾಮನು ಧೈರ್ಯವನ್ನು ಹೊಂದಿ, ಮುಂದೆ ಹನುಮಂತನನ್ನು ಕುರಿತು ತನ್ನ ಶತ್ರುವಿನ ದುರ್ಗರಹಸ್ಯಾದಿಗಳನ್ನು ಕೇಳಿದುದೂ, ಲೋಕಕ್ಕೆ ನೀತಿಯನ್ನುಪದೇಶಿಸುವುದಕ್ಕಾಗಿಯೇ ಹೊರತು ಬೇರೆಯಲ್ಲವೆಂದು ತಿಳಿಯಬೇಕು.

ಗೃಹಗಳ ನಿರ್ಮಾಣಕ್ರಮವನ್ನೂ ವಿವರಿಸು! ಇವೆಲ್ಲವನ್ನೂ ನಾನು ನನ್ನ ಕಣ್ಣಿದಿರಾಗಿ ನೋಡಿದಂತೆ ವಿಶದವಾಗಿ ತಿಳಿಯಬೇಕೆಂದಿರುವೆನು. ನೀನು ಅನಾಯಾಸವಾಗಿಯೇ ಲಂಕೆಯನ್ನು ಸುತ್ತಿ, ಅದರೊಳಗಿನ ಸ್ಥಿತಿಗತಿಗಳನ್ನೇ ಚೆನ್ನಾಗಿ ನೋಡಿ ಬಂದಿರುವೆ ಯಷ್ಟೆ? ಮತ್ತು ಆಯಾ ಸನ್ನಿವೇಶಗಳನ್ನು ಪರೀಕ್ಷಿಸಿ ನೋಡುವುದರಲ್ಲಿಯೂ ನೀನು ಬಹಳ ಸಮರ್ಥನಾದುದರಿಂದ, ಅವೆಲ್ಲವನ್ನೂ ನನಗೆ ಯಥಾಸ್ಥಿತವಾಗಿ ವಿವರಿಸಿ ತಿಳಿಸ ಬೇಕು" ಎಂದನು. ಇದನ್ನು ಕೇಳಿ ಮಾತಿನಲ್ಲಿ ನಿಪುಣನಾದ ಆ ಹನುಮಂತನು, ತಿರುಗಿ ರಾಮನನ್ನು ಕುರಿತು "ರಾಮಾ! ಹಾಗಿದ್ದರೆ ಆ ಸಂಗತಿಗಳೆಲ್ಲವನ್ನೂ ವಿವರ ವಾಗಿ ಹೇಳುವೆನು ಕೇಳು! ದುರ್ಗಪ್ರಾಕಾರ ನಿರ್ಮಾಣಗಳಿಂದಲೂ, ರಾಕ್ಷಸಸೈನ್ಯ ಗಳಿಂದಲೂ ಆ ಲಂಕೆಯು ರಕ್ಷಿಸಲ್ಪಡುತ್ತಿರುವ ರೀತಿಯನ್ನೂ ಅಲ್ಲಿನ ರಾವಣನಲ್ಲಿರುವ ಭಕ್ತಿಯನ್ನೂ, ರಾವಣನ ತೇಜಸ್ಸಿನಿಂದ ಲಂಕೆಗೆ ಪ್ರಾಪ್ತವಾಗಿರುವ ಅತ್ಯಂತ ಸಮೃದ್ಧಿ ಯನ್ನೂ ಸಮುದ್ರದ ಭಯಂಕರ ಸ್ವರೂಪವನ್ನೂ, ಆ ಲಂಕೆಯಲ್ಲಿರುವ ಸೈನ್ಯಗಳ ಸಂಖ್ಯೆಯನ್ನೂ, ಅಲ್ಲಿನ ವಾಹನಸಮೃದ್ಧಿಯನ್ನೂ ಕ್ರಮವಾಗಿ ವಿವರಿಸಿ ಹೇಳುವೆನು" ಎಂದು ಹೇಳಿ ಅವೆಲ್ಲವನ್ನೂ ಯಥಾಸ್ಥಿತವಾಗಿ ಹೇಳತೊಡಗಿದನು. "ರಾಮಾ! ಆ ಲಂಕೆಯ ಜನರೆಲ್ಲರೂ ಭಾಗ್ಯಸಮೃದ್ಧಿಯಿಂದ ನಿತ್ಯಸಂತೋಷಿಗಳಾಗಿರುವರು! ಅಲ್ಲಿ ವಿಶೇಷವಾಗಿ, ಮದದಾನೆಗಳು ತುಂಬಿರುವುವು, ಆ ಪಟ್ಟಣವು ಅತಿ ವಿಶಾಲವಾಗಿ, ಅನೇಕರಥಗಳಿಂದಲೂ ಅಸಂಖ್ಯಾತಗಳಾದ ಕುದುರೆಗಳಿಂದಲೂ ಬಹಳಮಂದಿ ರಾಕ್ಷಸ ಭಟರಿಂದಲೂ ನಿಬಿಡವಾಗಿರುವುದು. ಅದನ್ನು ಪ್ರವೇಶಿಸುವುದೇ ಬೇರೊಬ್ಬರಿಗೆ ಸಾಧ್ಯ ವಲ್ಲ! ಆ ಪಟ್ಟಣಕ್ಕೆ ನಾಲ್ಕು ಕಡೆಗಳಲ್ಲಿಯೂ ನಾಲ್ಕು ದೊಡ್ಡ ಬಾಗಿಲುಗಳುಂಟು! ಆ ಬಾಗಿಲಿನ ಕದಗಳೆಲ್ಲವೂ ಕಬ್ಬಿಣದ ಕಟ್ಟುಗಳಿಂದ ಬಹಳ ದೃಢವಾಗಿ ನಿರ್ಮಿಸಲ್ಪ ಟ್ಟಿರುವುವಲ್ಲದೆ, ಒಂದೊಂದು ಬಾಗಿಲಿಗೂ ಬಲವಾದ ಕಬ್ಬಿಣದ ಅಗುಳಿಗಳು ನಾಟ ಲ್ಪಟ್ಟಿರುವುವು. ಒಂದೊಂದು ಬಾಗಿಲೂ ಮಹೋನ್ನತವಾಗಿರುವುದು. ಒಂದೊಂದು ಬಾಗಿಲಲ್ಲಿಯೂ ಬಾಣಗಳನ್ನು ವರ್ಷಿಸತಕ್ಕ ದೊಡ್ಡ ಯಂತ್ರಗಳನ್ನಿಟ್ಟಿರುವರು! ಯಾವ ಶತ್ರುಸೈನ್ಯವು ಬಂದರೂ ಆ ಯಂತ್ರಗಳಿಗೆ ಸಿಕ್ಕಿ ಅಲ್ಲಿಯೇ ಸಾಯುವುವು. ಮತ್ತು ಅಲ್ಲಿನ ಬಾಗಿಲುಗಳಲ್ಲಿ ವೀರರಾದ ರಾಕ್ಷಸಸೈನಿಕರು, ನೂರಾರುಕಡೆಗಳಲ್ಲಿ ಶತಘ್ನಿ ಗಳೆಂಬ ಉಕ್ಕಿನ ಆಯುಧಗಳನ್ನಿಟ್ಟು ಕಾದಿರುವರು. ಚೆನ್ನಾಗಿ ಹದಕೊಟ್ಟು ಹರಿತ ವಾಗಿರುವ ಆ ಆಯುಧಗಳು ನೋಡುವಾಗಲೇ ಭಯವನ್ನು ಹುಟ್ಟಿಸುವುವು. ಆ ಲಂಕೆಯ ಸುತ್ತಲೂ ಸುವರ್ಣಮಯವಾದ ದೊಡ್ಡ ಕೋಟೆಯಿರುವುದು. ಯಾವ

ಶತ್ರುಗಳಿಗೂ ಅದನ್ನೇರಿಹೋಗುವುದು ಸಾಧ್ಯವಿಲ್ಲ. ಆ ಪ್ರಾಕಾರದ ಗೋಡೆಗಳ ಮೇಲೆ ಅಲ್ಲಲ್ಲಿ ವಜ್ರ, ವೈಡೂರ್ಯ, ಮುತ್ತು, ಹವಳ ಮುಂತಾದ ನವರತ್ನಗಳು ಕೆತ್ತಲ್ಪಟ್ಟಿರುವುವು. ಆ ಕೋಟೆಯ ಸುತ್ತಲೂ, ಮಹಾಭಯಂಕರವಾಗಿಯೂ, ಅತ್ಯಂತ ಶೀತಲವಾದ ನೀರುಳ್ಳದಾಗಿಯೂ ಬಹಳ ಆಳವಾಗಿಯೂ, ಮೊಸಳೆ, ಮೀನು ಮೊದಲಾದ ಕ್ರೂರಜಂತುಗಳಿಗೆ ನಿತ್ಯಾಶ್ರಯವಾಗಿಯೂ ಇರುವ ದೊಡ್ಡ ಕಂದಕವುಂಟು. ಅದರ ಮೇಲೆ ಸಂಚಾರಾರ್ಥವಾಗಿ ಹಲಗೆಗಳಿಂದ ಮಾಡಿದ ಸೇತುವೆಗಳುಂಟು. ಅವು ಬಹಳ ವಿಸ್ತಾರವಾಗಿರವುವಲ್ಲದೆ, ಅವಶ್ಯವಿದ್ದಾಗ ಹಲಗೆಗಳನ್ನು ಮೇಲಕ್ಕೆ ಹಾರಿಸಿ ಸಂಚಾರಕ್ಕವಕಾಶವಿಲ್ಲದಂತೆ ಮಾಡುವುದಕ್ಕಾಗಿ ದೊಡ್ಡ ಯಂತ್ರಗಳಲ್ಲಿ ತಗಲಿಸಲ್ಪಟ್ಟಿರುವುವು. ಆ ಯಂತ್ರಗಳೇ ಕಂದಕಗಳಮೇಲೆ ಸಂಚಾರಾರ್ಥವಾಗಿ ಮಾಡಲ್ಪಟ್ಟ ಹಲಗೆಗಳನ್ನು ಮೇಲಕ್ಕೆ ಹಾರಿಸಿ, ಅಲ್ಲಿಗೆ ಶತ್ರುಸೈನ್ಯಗಳು ಬಂದಾಗ, ಅವುಗಳ ಪ್ರವೇಶಕ್ಕವಕಾಶವಿಲ್ಲದಂತೆ ಲಂಕಾಪಟ್ಟಣವನ್ನು ರಕ್ಷಿಸುತ್ತಿರುವುವು. ಮತ್ತು ಅಲ್ಲಿ ಕಾವಲಿರುವ ರಾಕ್ಷಸಭಟರಿಗಾಗಿ ಅನೇಕ ಗೃಹಗಳು ಏರ್ಪಡಿಸಲ್ಪಟ್ಟಿರುವುವು, ಅದರಲ್ಲಿಯೂ ಉತ್ತರದ್ವಾರದಲ್ಲಿರುವ ಹಲಗೆಯು ಬಹಳ ಸ್ಥೂಲವಾಗಿಯೂ ದೃಢವಾಗಿಯೂ ನಿರ್ಮಿಸಲ್ಪಟ್ಟಿರುವುದು. ಅದನ್ನು ಕದಲಿಸುವುದಕ್ಕೆ ಯಾರಿಂದಲೂ ಸಾಧ್ಯವಿಲ್ಲ. ಅದಕ್ಕಾಧಾರವಾಗಿ ಕಂದಕದಲ್ಲಿ ಅನೇಕ ಸುವರ್ಣ ಸ್ತಂಭಗಳು ನಿಲ್ಲಿಸಲ್ಪಟ್ಟಿರುವುವು. ಅಲ್ಲಲ್ಲಿ ಕಾವಲಿರುವ ರಾಕ್ಷಸರು ಕುಳ್ಳಿರುವುದಕ್ಕಾಗಿ ನಡುನಡುವೆ ಬಂಗಾರದ ಜಗತಿಗಳು ಶೋಭಿಸುತ್ತಿರುವುವು. ರಾಮಾ ! ರಾವಣನು ದ್ಯೂತಮದ್ಯಾದಿವ್ಯಸನಗಳಲ್ಲಿ ನಿತ್ಯಾಸಕ್ತನಾಗಿದ್ದರೂ, ತನ್ನ ಸೈನ್ಯಗಳನ್ನು ನೋಡುವ ವಿಷಯದಲ್ಲಿ ಮಾತ್ರ ಎಚ್ಚರಿಕೆಯನ್ನು ಬಿಡದೆ, ಪ್ರತಿದಿನವೂ ಅವುಗಳನ್ನು ಜಾಗರೂಕನಾಗಿ ನೋಡುತ್ತ, ಯಾವಾಗಲೂ ಯುದ್ಧೋತ್ಸಾಹದಲ್ಲಿಯೇ ಇರುವನು. ಮತ್ತು ಆ ಲಂಕೆಯು ತ್ರಿಕೂಟಪರ್ವತ ಶಿಖರದಲ್ಲಿರುವುದರಿಂದ ಅದನ್ನೇರಿ ಮೇಲೆ ಹೋಗುವುದಕ್ಕೂ ತಕ್ಕ ಆಧಾರವಿಲ್ಲ ! ದೇವತೆಗಳು ಅಂತರಿಕ್ಷಮಾರ್ಗದಿಂದಾದರೂ ಬಂದು ಅದನ್ನು ಪ್ರವೇಶಿಸುವುದಕ್ಕೆ ಸಾಧ್ಯವಿಲ್ಲ. ನೋಡುವಾಗಲೇ ಭಯವನ್ನು ಹುಟ್ಟಿಸುವುದು ! ಜಲದುರ್ಗ, ವನದುರ್ಗ, ಪರ್ವತದುರ್ಗ, ಕೃತ್ರಿಮ ದುರ್ಗಗಳೆಂಬ ನಾಲ್ಕುದುರ್ಗಗಳೂ ಅದನ್ನು ರಕ್ಷಿಸುತ್ತಿರುವುವು. ಈ ದುರ್ಗರಕ್ಷಣವೂ ಹಾಗಿರಲಿ! ಆ ಲಂಕೆಯು ಅಪಾರವಾದ ಸಮುದ್ರಕ್ಕೆ ಆಚೆಯ ತೀರದಲ್ಲಿರುವುದರಿಂದ ಸಹಜವಾಗಿಯೇ ಇತರರಿಗೆ ದುರ್ಗಮವಾಗಿರುವುದು. ಅದಕ್ಕೆ ಹಡಗಿನಿಂದ ಸಮುದ್ರವನ್ನು ದಾಟಿಹೋಗುವುದಕ್ಕೂ ದಾರಿಯಿಲ್ಲ ! ಬೇರೆಯವರಿಗೆ ಅಲ್ಲಿನ

ವೃತ್ತಾಂತವು ತಿಳಿಯುವುದಕ್ಕೂ ಉಪಾಯವಿಲ್ಲ! ಆ ಮಹಾ ಸಮುದ್ರವೇ ಲಂಕೆಗೆ ಜಲದುರ್ಗ ಪ್ರಾಯವಾಗಿರುವುದು. ದೇವಪುರುಷನಂತಿರುವ ಆ ಲಂಕೆಯು ತ್ರಿಕೂಟ ಪರ್ವತಾಗ್ರದಲ್ಲಿರುವುದರಿಂದ ಅದಕ್ಕೆ ಅದೇ ಪರ್ವತದುರ್ಗವಾಗಿ, ಆನೆ ಕುದುರೆಗಳಿಂದ ತುಂಬಿ ಶತ್ರುಗಳಿಗೆ ಜಯಿಸಲಸಾಧ್ಯವಾಗಿರುವುದು. ಹೀಗೆ ಅದಕ್ಕೆ ಸಹಜವಾಗಿಯೇ ವನಪರ್ವತ ದುರ್ಗಗಳೆರಡೂ ರಕ್ಷಕಗಳಾಗಿರುವುವು. ದುರಾತ್ಮನಾದ ಆ ರಾವಣನ ನಗರಿಯಲ್ಲಿ ಯಾವ ಕಡೆಯಲ್ಲಿ ನೋಡಿದರೂ ಶತ್ರುಗಳನ್ನು ಸಂಹರಿಸತಕ್ಕ ಶತಘ್ನಿಗಳೂ ನಾನಾವಿಧ ಯಂತ್ರಗಳೂ, ಕಂದಕಗಳೂ ತುಂಬಿರುವುವಲ್ಲದೆ, ಅವೆಲ್ಲವೂ ಅದಕ್ಕೆ ಒಂದು ಅಪೂರ್ವಶೋಭೆಯನ್ನೂ ಉಂಟುಮಾಡುತ್ತಿರುವುವು. ಆ ಲಂಕೆಯ ಪೂರ್ವ ದ್ವಾರದಲ್ಲಿ ಹತ್ತುಸಾವಿರಮಂದಿ ರಾಕ್ಷಸರು ಯಾವಾಗಲೂ ಕಾವಲಿರುವರು. ಒಬ್ಬೊಬ್ಬರೂ ಶೂಲಗಳನ್ನು ಹಿಡಿದಿರುವರು! ಒಬ್ಬೊಬ್ಬರೂ ಖಡ್ಗಯುದ್ಧದಲ್ಲಿ ನಿಪುಣರು! ಅವರನ್ನಿದಿರಿಸುವುದು ಯಾರಿಗೂ ಸಾಧ್ಯವಲ್ಲ ! ಅದರ ದಕ್ಷಿಣದ್ವಾರದಲ್ಲಿ ಚತುರಂಗ ಸೈನ್ಯಕ್ಕೆ ಸೇರಿದ ಪದಾತಿಗಳೇ ಲೋಕೈಕವೀರರೆನಿಸಿಕೊಂಡಿರುವರು ! ಅವರಲ್ಲಿ ಒಬ್ಬೊಬ್ಬರೂ ಸರ್ವಾಸ್ತ್ರವಿಶಾರದರಾಗಿ, ಕತ್ತಿಗಳನ್ನೂ ಗುರಾಣಿಗಳನ್ನೂ ಹಿಡಿದು ನಿಂತಿರುವರು! ಉತ್ತರದ್ವಾರದಲ್ಲಿ ನೂರುಕೋಟಿ ರಾಕ್ಷಸರಿರುವರು. ಅವರಲ್ಲಿ ಕೆಲವರು ರಥಿಕರಾಗಿಯೂ, ಕೆಲವರು ರಾವುತರಾಗಿಯೂ, ಕೆಲವರು ಆನೆಗಳ ಮೇಲೆ ಯುದ್ಧಮಾಡುವವರಾಗಿಯೂ ಇರುವರು. ಅವರೆಲ್ಲರೂ ಸತ್ಕುಲದಲ್ಲಿ ಹುಟ್ಟಿ ರಾವಣನ ವಿಶ್ವಾಸಕ್ಕೂ ಗೌರವಕ್ಕೂ ಪಾತ್ರರಾಗಿರುವರು. ಇದಲ್ಲದೆ ಆ ಲಂಕೆಯ ನಡುವೆ ಅಲ್ಲಲ್ಲಿ ಸಾವಿರವಾಗಿ ರಾಕ್ಷಸರು ಕಾವಲಿರುವರು. ಅವರನ್ನಿದಿರಿಸುವುದಕ್ಕಾದರೂ ಯಾರಿಗೂ ಸಾಧ್ಯವಲ್ಲ. ಅಲ್ಲಿನ ಕಾವಲಿರುವ ರಾಕ್ಷಸರಸಂಖ್ಯೆಯೆಲ್ಲವೂ ಸೇರಿ ಒಂದು ಕೋಟಿಯವರೆಗೂ ಇರುವುದು. ರಾಮಾ ! ಆದರೇನು ? ನಾನು ಲಂಕೆಯನ್ನು ಪ್ರವೇಶಿಸಿದಾಗಲೇ ಆ ಲಂಕೆಯ ಸುತ್ತಿನ ಕಂದಕಗಳ ಮೇಲಿರುವ ಮರದ ಸೇತುವೆಗಳೆಲ್ಲವನ್ನೂ ಮುರಿದಿರುವೆನು. ಅಲ್ಲಿನ ಬಾಗಿಲಗುಳಿಗಳೆಲ್ಲವನ್ನೂ ಪುಡಿಮಾಡಿರುವೆನು. ಆ ಲಂಕೆಯನ್ನೂ ಸುಟ್ಟಿರುವೆನು. ಅಲ್ಲಿನ ಪ್ರಾಕಾರಗಳನ್ನೂ ಕೆಡಹಿಬಂದಿರುವೆನು. ಆದುದರಿಂದ ಇನ್ನುಮುಂದೆ ನಿಮಗೆ ಅಷ್ಟಾಗಿ ಕಷ್ಟವೇನೂ ತೋರದು! ಮತ್ತು ನಾನು ಅಲ್ಲಿನ ರಾವಣಸೈನ್ಯದಲ್ಲಿ ಕೆಲವು ಭಾಗವನ್ನು ಕೊಂದೂ ಬಂದಿರುವೆನು. ಇನ್ನುಮೇಲೆ ಏನಾದರೂ ಒಂದುಪಾಯದಿಂದ ನಾವೆಲ್ಲರೂ ಸೇರಿ ಸಮುದ್ರವನ್ನು ದಾಟಿಯೇ ಬಿಡಬೇಕು. ನಾವು ಸಮುದ್ರವನ್ನು ದಾಟುವುದೊಂದೇ

ತಡೆ! ಅದನ್ನು ದಾಟಿದಮೇಲೆ ಲಂಕೆಯು ಹತವಾದಂತೆಯೇ ತಿಳಿ! ರಾಮಾ! ಈ ಅಂಗದನು! ಈ ಮೈಂದನು! ಸೇನಾಪತಿಯಾದ ಈ ನೀಲನು! ಇವರಿಷ್ಟುಮಂದಿಯೇ ಸಾಕು! ಇತರ ವಾನರ ಸೈನ್ಯದಿಂದ ನಮಗೆ ನಡೆಯಬೇಕಾದ ಕೆಲಸವೇ ಇಲ್ಲ. ಇವರೆಲ್ಲರೂ ಒಂದೇ ನೆಗೆತಕ್ಕೆ ಈ ಮಹಾಸಮುದ್ರವನ್ನು ಹಾರಬಲ್ಲರು. ಇವರು ಆ ಸಮುದ್ರವನ್ನು ಹಾರಿದಮಾತ್ರಕ್ಕೆ, ಆ ಲಂಕೆಯನ್ನು ಅದಕ್ಕೆ ಸೇರಿದ ಪರ್ವತಗಳೊಡನೆಯೂ, ಅಲ್ಲಿನ ಕಾಡುಗಳೊಡನೆಯೂ, ಅಲ್ಲಿನ ತೋರಣ ಪ್ರಾಕಾರಗಳೊಡನೆಯೂ ಅಲ್ಲಿನ ರಾಕ್ಷಸಗೃಹಗಳೊಡನೆಯೂ, ಅದರ ಕಂದಕದೊಡನೆಯೂ ಕಿತ್ತು ತರಬಲ್ಲರು. ಈ ಸಮಸ್ತವಾನರಸೈನ್ಯಗಳಲ್ಲಿಯೂ, ಸಾರಭೂತರಾದ ಈ ಅಂಗದಾದಿಗಳಿಗೆ ಮಾತ್ರ, ಈಗಲೇ ನೀನು ಆಜ್ಞೆಯನ್ನು ಮಾಡು! ಅನುಕೂಲವಾದ ಶುಭ ಮುಹೂರ್ತದಲ್ಲಿ ಜಯಪ್ರಯಾಣಕ್ಕೆ ನಮಗೂ ಅನುಮತಿಯನ್ನು ಕೊಡು" ಎಂದನು.

ಇಲ್ಲಿಗೆ ಮೂರನೆಯ ಸರ್ಗವು.

ರಾಮಾಜ್ಞೆಯಿಂದ ಸುಗ್ರೀವನು ಸೇನಾಸನ್ನಾಹಗಳನ್ನು ಮಾಡಿಕೊಂಡು, ದಂಡಯಾತ್ರೆಗೆ ಹೊರಟುದು. ಹನುಮಂತನ ಮೇಲೆ ರಾಮನೂ, ಅಂಗದನ ಮೇಲೆ ಲಕ್ಷ್ಮಣನೂ ಏರಿ ಪ್ರಯಾಣಹೊರಟುದು. ಮಾರ್ಗದಲ್ಲಿ ಶುಭನಿಮಿತ್ತಗಳೊಡನೆ ಸಮುದ್ರತೀರವನ್ನು ಸೇರಿದಮೇಲೆ, ಅಲ್ಲಿ ನೀಲನು ಸೇನೆಯನ್ನು ನಿಲ್ಲಿಸಿದುದು.

ಮಹಾತೇಜಸ್ವಿಯಾಗಿಯೂ, ಸತ್ಯಪರಾಕ್ರಮನಾಗಿಯೂ ಇರುವ ರಾಮನು, ಕ್ರಮವಾಗಿ ಹನುಮಂತನು ಹೇಳಿದುದೆಲ್ಲವನ್ನೂ ಕೇಳಿ, ತಿರುಗಿ ಅವನನ್ನು ಕುರಿತು "ಎಲೆ ವಾಯುಪುತ್ರನೆ! ಭಯಂಕರವಾದ ಆ ರಾವಣನನಗರಿಯ ಸ್ಥಿತಿಯೆಲ್ಲವನ್ನೂ ನೀನು ಹೇಳಿದೆಯಷ್ಟೆ? ಆದರೇನು? ಇರಲಿ? ಶೀಘ್ರದಲ್ಲಿಯೇ ಅದನ್ನು ನಾನು ಧ್ವಂಸ ಮಾಡುವೆನು ನೋಡು! ಇದು ಸತ್ಯವೆಂದು ತಿಳಿ!" ಎಂದು ಹೇಳಿ, ಸುಗ್ರೀವನ ಕಡೆಗೆ ತಿರುಗಿ, "ಸುಗ್ರೀವಾ! ಈ ಮುಹೂರ್ತದಲ್ಲಿಯೇ ಪ್ರಯಾಣ ಹೊರಡಬೇಕೆಂಬುದು ನನ್ನ ಉದ್ದೇಶವು. ಈಗ ಸೂರ್ಯನು ನಡುಹಗಲಲ್ಲಿರುವುದರಿಂದ, ಈ ಅಭಿಜಿನ್ಮು

ಹೂರ್ತವೇ ನಮ್ಮ ಪ್ರಯಾಣಕ್ಕೆ ಯುಕ್ತಕಾಲವು. ಇದೇ ಜಯಸೂಚಕವಾದ ಶುಭ ಮುಹೂರ್ತವು. ಸೂರ್ಯನು ಮಧ್ಯಗತನಾಗಿರವಾಗ, ಈ ಅಭಿಜಿನ್ಮುಹೂರ್ತದಲ್ಲಿಯೇ ನಾವು ಪ್ರಯಾಣ ಮಾಡಿದರೆ ನಮಗೆ ಜಯವು ಸಿದ್ಧವು. ನಾವು ಈ ಜಯಕಾಲದಲ್ಲಿ ಪ್ರಯಾಣ ಹೊರಟರೆ ಸೀತೆಯನ್ನು ಕದ್ದೊಯ್ದ ಆ ರಾಕ್ಷಸನು ಎಲ್ಲಿ ಹೋದರೆ ತಾನೇ ತಪ್ಪಿಸಿಕೊಳ್ಳಬಲ್ಲನು ! ವಿಷವನ್ನು ಕುಡಿದು ಸಾಯುವ ಸ್ಥಿತಿಯಲ್ಲಿರುವವನೂ ಕೂಡ ಸಾಯುವಕಾಲದಲ್ಲಿ ಅಮೃತಸ್ಪರ್ಶವನ್ನು ಹೊಂದಿ ಬದುಕುವಂತೆ ಪ್ರಾಣಾಂತಕರವಾದ ಅಷ್ಟು ಕಷ್ಟದಲ್ಲಿ ಸಿಕ್ಕಿಬಿದ್ದಿರುವ ಸೀತೆಯು, ನಮ್ಮ ಈ ದಂಡಯಾತ್ರೆಯನ್ನು ಕೇಳಿದರೆ, ಸ್ವಲ್ಪವಾದರೂ ಆಶೋತ್ತರವನ್ನು ಹೊಂದಬಹುದು. ಎಲೆ ಸುಗ್ರೀವಾ ! ಈಗ [1]ಉತ್ತರಾನಕ್ಷತ್ರವಾದುದರಿಂದ ಪುನರ್ವಸುವಿನಲ್ಲಿ ಹುಟ್ಟಿದ ನನಗೆ ಇದು ಸಾಧನ ತಾರೆಯು. ನಾಳೆ ಚಂದ್ರನು ಹಸ್ತನಕ್ಷತ್ರದೊಡನೆ ಸೇರುವನು. ಅದು ನನಗೆ ವಧತಾರೆಯಾಗುವುದು. ಆದುದರಿಂದ ಸಮಸ್ತಸೈನ್ಯಗಳೊಡನೆ ಈ ದಿನವೇ ಪ್ರಯಾಣ ಮಾಡುವೆವು. ಇದೋ! ಆಗಲೇ ನನಗೆ ಶುಭನಿಮಿತ್ತಗಳೂ ತೋರುತ್ತಿರುವುವು. ಈಗ ಹೊರಟರೆ ರಾವಣನನ್ನು ಕೊಂದು ಸೀತೆಯನ್ನು ತರುವುದೇ ನಿಜವು. ಇದೋ ! ಈಗ ನನ್ನ ನೇತ್ರವು ಮೇಲಕ್ಕೆ ಅದುರುತ್ತಿರುವುದರಿಂದ, ನನ್ನ ಕೋರಿಕೆಗೆ ಜಯವು ಸಿದ್ಧವೆಂಬುದನ್ನೇ ಸೂಚಿಸುವಂತಿರುವುದು"ಎಂದನು. ರಾಮನು ಹೇಳಿದ ಈ ಮಾತನ್ನು ವಾನರರಾಜನಾದ ಸುಗ್ರೀವನೂ, ಲಕ್ಷ್ಮಣನೂ ಸಂತೋಷದಿಂದನುಮೋದಿಸಲು ಕಾರ್ಯನಿಪುಣನಾದ ರಾಮನು, ತಿರುಗಿ ಸುಗ್ರೀವನನ್ನು ಕುರಿತು "ಎಲೈ ವಾನರೇಂದ್ರನೆ! ಮುಂದೆ ದಾರಿಯನ್ನು ನೋಡುವುದಕ್ಕಾಗಿ ನೀಲನು ಈ ಸಮಸ್ತವಾನರಸೈನ್ಯಕ್ಕೂ ಮುಂದಾಗಿ ಹೋಗಲಿ! ವೇಗಶಾಲಿಗಳಾದ ನೂರು ಸಾವಿರಮಂದಿ ವಾನರರು ಅವನ ಸಹಾಯಕ್ಕಾಗಿ ಅವನ ಸಂಗಡಲೇ ಹೋಗಬೇಕು!' ಎಂದನು. ಇಷ್ಟರಲ್ಲಿಯೇ ನೀಲನು ಸಮೀಪದಲ್ಲಿ ಬಂದು ನಿಲ್ಲಲು, ಅವನನ್ನು ನೋಡಿ ರಾಮನು " ಎಲೆ ಸೇನಾಪತೀ ! ಫಲಮೂಲಸಮೃದ್ಧಿಯಿಂದಲೂ ತಂಪಾದ ಮರಗಳ ಸಾಲಿನಿಂದಲೂ, ಶೀತಲವಾದ ನೀರಿನಿಂದಲೂ ಕೂಡಿ ವಿಶೇಷವಾಗಿ ಜೇನು ಸಿಕ್ಕತಕ್ಕ ದಾರಿಯನ್ನು ನೋಡಿ, ಆ ದಾರಿಯಿಂದ ಈ ನಮ್ಮ ಸಮಸ್ತ ವಾನರಸೈನ್ಯವನ್ನೂ ಸಾಗಿಸಬೇಕು. ನಾವು ಬರುವುದನ್ನು ತಿಳಿದರೆ, ದುರಾತ್ಮರಾದ ರಾಕ್ಷಸರು, ದಾರಿಯಲ್ಲಿ ಸಿಕ್ಕಬಹುದಾದ ಫಲಮೂಲಗಳಿಗೂ, ಪಾನ

1. ಉತ್ತರಫಲ್ಗುನಿಯಲ್ಲಿ ಪ್ರಯಾಣವನ್ನು ಹೇಳಿರುವುದರಿಂದ, ಫಾಲ್ಗುನಮಾಸದ ಪೂರ್ಣಿಮೆಯಲ್ಲಿ ರಾಮನ ಪ್ರಯಾಣವೆಂದು ತಿಳಿಯಬೇಕು.

ದ್ರವ್ಯಗಳಿಗೂ ವಿಷಾದಿಗಳನ್ನು ಸೇರಿಸಿ ಕೆಡಿಸಬಹುದು. ಅದಕ್ಕವಕಾಶವಿಲ್ಲದಂತೆ ನೀನು ಯಾವಾಗಲೂ ಎಚ್ಚರಿಕೆಯಿಂದ ನೋಡಿಕೊಳ್ಳಬೇಕು, ಮತ್ತು ಶತ್ರುಗಳು ನಾವು ಬರುವುದನ್ನು ತಿಳಿದರೆ ಅಲ್ಲಲ್ಲಿ ರಹಸ್ಯವಾದ ನಿಮ್ನ ಪ್ರದೇಶಗಳಲ್ಲಿಯೂ ಜಲದುರ್ಗ ಗಳಲ್ಲಿಯೂ, ಕಾಡುಗಳಲ್ಲಿಯೂ, ಅವಕಾಶವನ್ನು ನೋಡಿ, ನಮ್ಮನ್ನು ಕೊಲ್ಲುವುದ ಕ್ಕಾಗಿ ತಮ್ಮ ಸೈನ್ಯಗಳನ್ನಿರಿಸಬಹುದು. ಆದುದರಿಂದ ನಮ್ಮ ವಾನರರು ಮೇಲೆ ಹಾರಿ ಆಕಾಶದಿಂದಲೇ ಆಯಾ ಸ್ಥಳಗಳನ್ನು ಚೆನ್ನಾಗಿ ಪರೀಕ್ಷಿಸಿ ನೋಡುತ್ತ ಎಚ್ಚರಿಕೆಯಿಂದ ಹೋಗಬೇಕು. ನಮ್ಮ ಸೈನ್ಯದಲ್ಲಿ ಯಾವುದು ನಿಸ್ಸಾರವೆಂದು ನಿನಗೆ ತೋರಬಹುದೋ ಅದನ್ನು ಇಲ್ಲಿನ ಕಾರ್ಯಕ್ಕಾಗಿ ಇಲ್ಲಿಯೇ ನಿಲ್ಲಿಸಿಡು ! ನೀಲಾ ! ಈಗ ನಾವು ಪ್ರಯತ್ನಿ ಸುವ ಕಾರ್ಯವೇನೋ ಬಹಳ ಭಯಂಕರವಾದುದು ! ಆದುರಿಂದ ನಮ್ಮ ಸೈನಿಕರೆಲ್ಲರೂ ತಪ್ಪದೆ ಎಚ್ಚರಿಕೆಯಿಂದ ತಮ್ಮ ತಮ್ಮ ವೀರ್ಯವನ್ನುಪಯೋಗಿಸಬೇಕು. ಸಮುದ್ರ ಪ್ರವಾಹದಂತೆ ವಿಸ್ತಾರವಾಗಿಯೂ ಇರುವ ನಮ್ಮ ಮುಖಸೈನ್ಯವನ್ನು ನಡೆಸಿಕೊಂಡು ಹೋಗುವುದಕ್ಕಾಗಿ, ಮಹಾಬಲಾಢ್ಯರಾದ ಸಾವಿರಾರುಮಂದಿ ವಾನರವೀರರನ್ನು ನಿಯಮಿಸಬೇಕು. ಗೋಸಮೂಹದ ಮುಂದೆ ಹೋಗುವ ಮಹಾವೃಷಭಗಳಂತೆ, ಪರ್ವತಾಕಾರವುಳ್ಳ ಗಜನೂ, ಮಹಾಬಲಾಢ್ಯನಾದ ಗವಯನೂ, ಗವಾಕ್ಷನೂ ಆ ಸೇನೆಯ ಮುಂಭಾಗದಲ್ಲಿ ಹೊರಡಲಿ! ವಾನರೋತ್ತಮನಾದ ಋಷಭನು ಆ ಸೇನೆಯ ಬಲಭಾಗದಲ್ಲಿ ನಿಂತು ರಕ್ಷಿಸುತ್ತಿರಲಿ ! ಮದದಾನೆಯಂತೆ ಇತರರಿಂದ ಇದಿರಿಸಲಾಗದ ಮಹಾಬಲವುಳ್ಳ ಗಂಧಮಾದನನು, ಆ ಸೇನೆಗೆ ಎಡಭಾಗದಲ್ಲಿದ್ದು ರಕ್ಷಿಸುತ್ತಿರಲಿ ! ನಾನು ಐರಾವತವನ್ನೇರಿದ ಇಂದ್ರನಂತೆ ಈ ಹನುಮಂತನ ಹೆಗಲಮೇಲೆ ಕುಳಿತು, ಸಮಸ್ತಸೈನಿಕರಿಗೂ ಉತ್ಸಾಹವನ್ನು ಕೊಡುತ್ತ ಸೇನೆಯ ಮಧ್ಯದಲ್ಲಿ ಬರುವೆನು. ಯಕ್ಷರಾಜನಾದ ಕುಬೇರನು ಸಾರ್ವಭೌಮವೆಂಬ ದಿಗ್ಗಜವನ್ನೇರಿ ಬರುವಂತೆ ಈ ಲಕ್ಷ್ಮಣನು ಅಂಗದನ ಮೇಲೇರಿ ನನ್ನ ಪಕ್ಕದಲ್ಲಿ ಬರಲಿ ! ಜಾಂಬವಂತನೂ ಸುಷೇ ಣನೂ, ವೇಗದರ್ಶಿಯೂ ಈ ಮೂವರೂ ಆ ಸೇನೆಯ ಉತ್ತರಪ್ರದೇಶವನ್ನು ರಕ್ಷಿಸುತ್ತ ಬರಲಿ ! ಮಹಾಬಲವುಳ್ಳ ಋಕ್ಷ ರಾಜನು ಆ ಮೂವರಿಗೂ ಸಹಾಯಕ ನಾಗಿರಲಿ" ಎಂದನು. ರಾಮನು ಹೇಳಿದ ಈ ಮಾತನ್ನು ಕೇಳಿ ಸಮಸ್ತ ವಾನರ ಸೈನ್ಯಕ್ಕೂ ಅಧಿರಾಜನಾದ ಸುಗ್ರೀವನು, ಅಲ್ಲಿದ್ದ ವಾನರರನ್ನು ಕರೆದು, ಆಗಲೇ ಪ್ರಯಾಣ ಹೊರಡುವಂತೆ ನಿಯಮಿಸಿದನು. ಆಗಲೇ ಅಲ್ಲಲ್ಲಿನ ಗುಹೆಗಳಲ್ಲಿಯೂ ಪರ್ವತ ಶಿಖರಗಳಲ್ಲಿಯೂ ಅಡಗಿದ್ದ ಮಹಾವೀರ್ಯವುಳ್ಳ ಸಮಸ್ತವಾನರರೂ ಮೇಲೆ

ಹಾರಿ ಯುದ್ಧೋತ್ಸಾಹದಿಂದ ಹೊರಟರು. ರಾಮನೂ ಕೂಡ ಸುಗ್ರೀವನಿಂದಲೂ, ಲಕ್ಷ್ಮಣನಿಂದಲೂ ಪುರಸ್ಕರಿಸಲ್ಪಡುತ್ತ, ಆ ಸೈನ್ಯದೊಡನೆ ದಕ್ಷಿಣಾಭಿಮುಖವಾಗಿ ಹೊರಟನು. ಹೀಗೆ ಪ್ರಯಾಣಹೊರಟ ರಾಮನ ಸುತ್ತಲೂ ಕೊಬ್ಬಿದ ಆನೆಯು ಹಿಂಡಿನಂತೆ ಅನೇಕ ವಾನರಸೈನ್ಯವು ನೂರುನೂರಾಗಿಯೂ, ಸಾವಿರಸಾವಿರವಾಗಿಯೂ, ಲಕ್ಷಲಕ್ಷವಾಗಿಯೂ ಕೋಟಿಕೋಟಿಯಾಗಿಯೂ ಹೊರಟುಬಂದಿತು. ಮತ್ತೊಂದು ದೊಡ್ಡ ವಾನರಸೈನ್ಯವು ಅವನನ್ನು ಹಿಂಬಾಲಿಸಿಹೊರಟಿತು. ವೀರ್ಯದಿಂದ ಕೊಬ್ಬಿದ ಆ ವಾನರರಾದರೋ ಮಹೋತ್ಸಾಹಗೊಂಡವರಾಗಿ ಒಮ್ಮೆ ಮೇಲೆ ನೆಗೆಯುವರು! ಒಮ್ಮೆ ಒಮ್ಮೆ ಹಾರುವರು! ಗರ್ಜಿಸುವರು! ಆಗಾಗ ಸಿಂಹನಾದವನ್ನು ಮಾಡುವರು! ಒಬ್ಬರಿಗೊಬ್ಬರು ಹರದಿಂದೋಡುವರು ! ದಾರಿಯಲ್ಲಿ ಅಲ್ಲಲ್ಲಿ ಸಿಕ್ಕಿದ ಹಣ್ಣುಗಳನ್ನು ಕಿತ್ತು ತಿನ್ನುವರು. ಅಲ್ಲಲ್ಲಿ ಸುವಾಸನೆಯುಳ್ಳ ಜೇನನ್ನು ಕುಡಿಯುವರು ! ಹೀಗೆ ಸಂತೋಷದಿಂದ ದಕ್ಷಿಣಾಭಿಮುಖವಾಗಿ ನಡೆದುಬಂದರು. ಮತ್ತು ಆ ವಾನರಸೈನ್ಯದಲ್ಲಿ, ವಿನೋದಾರ್ಥವಾಗಿ ಫಲಪುಷ್ಪಗಳಿಂದ ತುಂಬಿದ ದೊಡ್ಡ ಮರಗಳನ್ನೇ ಕೈಯಿಂದ ಕಿತ್ತು ಅವುಗಳನ್ನು ಹೊತ್ತುತರುವರು ! ತಮ್ಮ ಬಲದ ಕೊಬ್ಬಿನಿಂದ ಒಬ್ಬರನ್ನೊಬ್ಬರು ಹಿಡಿದು ಮೇಲಕ್ಕೆತ್ತಿಹಾಕುವವರು ಕೆಲವರು! ಬೀಳುವವನನ್ನು ಕೈಯಿಂದಾತುಕೊಳ್ಳುವವರು ಕೆಲವರು! ನಿಂತಿದ್ದವರನ್ನು ಕೆಳಕ್ಕೆ ತಳ್ಳುವವರು ಕೆಲವರು. ಹೀಗೆ ಆ ವಾನರರೆಲ್ಲರೂ ಬಹಳ ವಿನೋದದಿಂದ ಪ್ರಯಾಣಮಾಡಿ ಬರುತ್ತಿದ್ದರು. ಮತ್ತು ಕೆಲವು ವಾನರರು ಅಲ್ಲಿನ ಸಮಸ್ತರಾಕ್ಷಸರನ್ನೂ ಕೊಂದೇ ಬರಬೇಕು ” ಎಂದು ವೀರವಾದದಿಂದ ಗರ್ಜಿಸುತಿದ್ದರು. ವೀರನಾದ ನೀಲನೂ, ಋಷಭನೂ, ಕುಮುದನೂ, ಅನೇಕ ವಾನರ ಸಮೂಹದೊಡನೆ ಸೇನೆಗೆ ಮುಂಭಾಗದಲ್ಲಿ ಹೊರಟು, ದಾರಿಯನ್ನು ಶೋಧಿಸುತ್ತ ಬಂದ ವಾನರರಾಜನಾದ ಸುಗ್ರೀವನೂ, ರಾಮನೂ, ಲಕ್ಷ್ಮಣನೂ, ಬಲಾಢ್ಯರಾಗಿಯೂ, ಭಯಂಕರರಾಗಿಯೂ ಇದ್ದ ಬಹಳಮಂದಿ ವಾನರರೊಡನೆ ಸೇನೆಯ ಮಧ್ಯಭಾಗದಲ್ಲಿ ಇದ್ದರು. ವೀರನಾದ ಶತಬಲಿಯೆಂಬ ವಾನರನು ಹತ್ತುಕೋಟಿ ವಾನರಸೈನ್ಯವನ್ನು ತನ್ನ ಸಹಾಯಕ್ಕಿಟ್ಟುಕೊಂಡು ಆ ಸಮಸ್ತಸೈನ್ಯಕ್ಕೂ ತಾನೇ ಮುಖ್ಯರಕ್ಷಕನಾಗಿ ನಿಂತಿದ್ದನು. ಕೇಸರಿಯೆಂಬ ವಾನರೋತ್ತಮನೂ, ಪನಸನೂ, ಗಜನೂ, ಬಲಾಢ್ಯನಾದ ಅರ್ಕನೂ ನೂರುಕೋಟಿ ವಾನರರೊಡಗೂಡಿ, ಒಂದು ಪಕ್ಕದಲ್ಲಿ ಆ ಸೈನ್ಯವನ್ನು ರಕ್ಷಿಸುತ್ತಿದ್ದನು. ಸುಷೇಣ ಜಾಂಬವಂತರಿಬ್ಬರೂ ಭಲ್ಲೂಕಗಳೊಡನೆ ಸೇರಿ ಸುಗ್ರೀವನನ್ನು ಮುಂದಿಟ್ಟುಕೊಂಡು ಆ ವಾನರಸೇನೆಯ ಹಿಂಭಾಗ

ವನ್ನು ಕಾಯುತ್ತಿದ್ದರು ಈ ಸಮಸ್ತ ವಾನರ ಸೈನ್ಯಕ್ಕೂ ಮುಖ್ಯಾಧಿಪತಿಯಾದ ವೀರ ನಾದ ನೀಲನೂ, ಆ ಸೈನ್ಯದ ನಾಲ್ಕು ಕಡೆಗಳಿಗೂ ತಿರುಗುತ್ತ ಸುತ್ತಲೂ ಎಚ್ಚರಿಕೆ ಯಿಂದ ಕಾಯುತ್ತಿದ್ದನು. ದರೀಮುಖನೂ, ಪ್ರಜಂಘನೂ, ರಭಸನೂ, ಆ ಸೇನೆಯನ್ನು ಸುತ್ತಿಸುತ್ತಿ ಆಗಾಗ ಆ ಸೈನಿಕರನ್ನು ತ್ವರೆಪಡಿಸುತ್ತಬಂದರು. ಹೀಗೆ ವೀರ್ಯದಿಂದ ಕೊಬ್ಬಿದ ಆ ವಾನರರೆಲ್ಲರೂ ಪ್ರಯಾಣಹೊರಟುಬರುವಾಗ, ಮುಂದೆ ಸ್ವಲ್ಪದೂರದಲ್ಲಿ ಬಗೆಬಗೆಯ ಗಿಡಬಳ್ಳಿಗಳಿಂದ ತುಂಬಿದ ಸಹ್ಯ ಪರ್ವತವನ್ನೂ, ಅರಳಿದ ತಾವರೆಗಳಿಂದ ತುಂಬಿದ ಅಲ್ಲಿನ ಕೆರೆಕೊಳಗಳನ್ನೂ ಕಂಡರು. ಸಮುದ್ರ ಪ್ರವಾಹದಂತೆ ಅಪಾರ ವಾಗಿಯೂ, ಭಯಂಕರವಾಗಿಯೂ ಇದ್ದ ಆ ದೊಡ್ಡ ವಾನರ ಸೈನ್ಯವು, ರೌದ್ರ ಕ್ರೋಧವುಳ್ಳ ರಾಮನ ಆಜ್ಞೆಗೆ ಭಯಪಟ್ಟು, ಅಕ್ಕಪಕ್ಕಗಳಲ್ಲಿರುವ ಗ್ರಾಮಗಳಿಗಾಗಲಿ ನಗರಗಳಿಗಾಗಲಿ ಪ್ರವೇಶಿಸದೆ, ನೆಟ್ಟಗೆ ತನ್ನ ದಾರಿಯನ್ನು ಹಿಡಿದು, ಸಮುದ್ರದ ಮೊರೆತದಂತೆ ದೊಡ್ಡ ಗರ್ಜನೆಗಳನ್ನು ಮಾಡುತ್ತಾ ಮುಂದೆ ಸಾಗಿತ್ತು. ರಾಮನ ಪಕ್ಕ ದಲ್ಲಿ ಬರುತಿದ್ದ ವಾನರವೀರರೆಲ್ಲರೂ ಅವನ ಮುಖೋಲ್ಲಾಸಕ್ಕಾಗಿ, ಕಶೆಯಿಂದ ಹೊಡೆದ ಕುದುರೆಗಳಂತೆ ಹಾರಿಹಾರಿ ನಡೆಯುತ್ತಿದ್ದರು. ಆಂಜನೇಯನ ಮತ್ತು ಅಂಗದನ ಹೆಗಲನ್ನೇರಿ ಕುಳಿತಿದ್ದ ರಾಮಲಕ್ಷ್ಮಣರಿಬ್ಬರೂ, [1]ಶುಕ್ರಬೃಹಸ್ಪತಿಗಳೆಂಬ ದೊಡ್ಡಗ್ರಹಗಳೊಡನೆ ಸೇರಿದ ಚಂದ್ರಸೂರ್ಯರಂತೆ ಶೋಭಿಸುತ್ತಿದ್ದರು. ಧರ್ಮಾತ್ಮ ನಾದ ರಾಮನು ಸುಗ್ರೀವನಿಂದಲೂ ಲಕ್ಷ್ಮಣನಿಂದಲೂ ಗೌರವಿಸಲ್ಪಡುತ್ತ ಸಮಸ್ತ ವಾನರಸೇನೆಯೊಡನೆ ದಕ್ಷಿಣಾಭಿಮುಖವಾಗಿ ಬರುತ್ತಿದ್ದನು. ಹೀಗೆ ಎಲ್ಲರೂ ಸೇರಿ ಬರುತ್ತಿರುವಾಗ, ಶಕುನಶಾಸ್ತ್ರಗಳಲ್ಲಿ ಚೆನ್ನಾಗಿ ನೆನಪುಳ್ಳವನಾಗಿಯೂ, ಕಾಲೋಚಿತ ಪ್ರತಿಭೆಯುಳ್ಳವನಾಗಿಯೂ ಇರುವ ಲಕ್ಷ್ಮಣನು, ಅಂಗದನಮೇಲೆ ಕುಳಿತು ಬರು ತಿದ್ದಹಾಗೆಯೇ ಸಮೀಪದಲ್ಲಿದ್ದ ರಾಮನನ್ನು ಕುರಿತು, ಶುಭವಾಕ್ಯದಿಂದ "ಅಣ್ಣಾ! ಇನ್ನು ಮೇಲೆ ನೀನು ಕೈತಪ್ಪಿ ಹೋಗಿರುವ ಸೀತೆಯನ್ನು ಪಡೆದು ರಾವಣನನ್ನೂ ಕೊಂದು, ನಿನ್ನ ಇಷ್ಟಾರ್ಥವನ್ನು ಕೈಗೂಡಿಸಿಕೊಂಡು, ಭಾಗ್ಯಸಮೃದ್ಧವಾದ ನಮ್ಮ ಅಯೋಧ್ಯೆಗೆ ಹಿಂತಿರುಗುವುದರಲ್ಲಿ ಸಂದೇಹವೇ ಇಲ್ಲ ! ಆಕಾಶದಲ್ಲಿಯೂ, ಭೂಮಿ ಯಲ್ಲಿಯೂ, ಕಾಣಬಹುದಾದ ಈ ದೊಡ್ಡದೊಡ್ಡ ಶುಭಶಕುನಗಳೆಲ್ಲವೂ, ನಿನ್ನ ಕಾರ್ಯ

1. ಇಲ್ಲಿ ಶುಕ್ರಬೃಹಸ್ಪತಿಗಳೊಡಗೂಡಿದ ಚಂದ್ರಸೂರ್ಯರೆಂಬುದರಿಂದ, ನಾಲ್ಕು ಗ್ರಹಗಳ ಸೇರುವೆಯು ಬಹುಜನವಿನಾಶಹೇತುವಾಗುವಂತೆ, ರಾಮಲಕ್ಷ್ಮಣರಿಬ್ಬರಿಗೂ ಹನುಮದಂಗದರೊಡನೆ ಸಂಬಂಧ ಬಹುತೇಕ ಶತ್ರುವಿನಾಶಹೇತುವೆಂದು ಸೂಚಿತವು.

ಸಿದ್ಧಿಯನ್ನೇ ಕಣ್ಣೆದಿರಾಗಿ ತೋರಿಸುವಂತಿರುವುವು. ನಮ್ಮ ಸೇನೆಯಲ್ಲಿ, ಮಂಗಳಕರವಾಗಿಯೂ, ಹಿತವಾಗಿಯೂ, ಸುಖಕರವಾಗಿಯೂ ಇರುವ ಗಾಳಿಯು ಮೆಲ್ಲಗೆ ಬೀಸುತ್ತಿರುವುದು. ಇದೋ! ಇಲ್ಲಿ ಮೃಗಗಳೂ, ಪಕ್ಷಿಗಳೂ, ಮಧುರಧ್ವನಿಯಿಂದ ಕೂಗುವುವು. ದಿಕ್ಕುಗಳೆಲ್ಲವೂ ಪ್ರಸನ್ನವಾಗಿರುವುವು. ಸೂರ್ಯಬಿಂಬವು ಶುದ್ಧವಾಗಿ ಪ್ರಕಾಶಿಸುವುದು. ಸಕಲವೇದವಿತ್ತಾದ ಶುಕ್ರನು ಪಾಪಗ್ರಹಸಂಬಂಧವಿಲ್ಲದೆ ಪ್ರಸನ್ನ ತೇಜಸ್ಸುಳ್ಳವನಾಗಿ ನಿನ್ನ ಹಿಂದೆ ಪ್ರಕಾಶಿಸುತ್ತಿರುವನು. ಅದೋ! ಪರಿಶುದ್ಧವಾದ ಸಪ್ತಋಷಿಮಂಡಲವು ಕಾಂತಿವಿಶಿಷ್ಟವಾಗಿ ದಕ್ಷಿಣದಿಕ್ಕಿನಿಂದ ಹಿಂತಿರುಗಿ ಬರುತ್ತ, (ಧ್ರುವನಿಗೆ ಪ್ರದಕ್ಷಿಣವಾಗಿ ಸುತ್ತುತ್ತ) ಪ್ರಕಾಶಿಸುವುದು. ಮಹಾತ್ಮರಾದ ನಮ್ಮ ಇಕ್ಷ್ವಾಕುವಂಶದವರಿಗೆ ಪ್ರಧಾನಕೂಟಸ್ಥನಾಗಿಯೂ, ರಾಜಋಷಿಯಾಗಿಯೂ ಇರುವಂತಿರುವ ತ್ರಿಶಂಕುವು, ಪೂರ್ವದಲ್ಲಿ ವಿಶ್ವಾಮಿತ್ರನಿಂದ ಸೃಷ್ಟಿಸಲ್ಪಟ್ಟ ಸಪ್ತಋಷಿಗಳೊಡನೆ ಸೇರಿದ ವಸಿಷ್ಠನೊಡಗೂಡಿ ನಿರ್ಮಲವಾಗಿ ಪ್ರಕಾಶಿಸುತ್ತಿರುವನು. ಮಹಾತ್ಮರಾದ ನಮ್ಮ ಇಕ್ಷ್ವಾಕುವಂಶದವರಿಗೆ ಮುಖ್ಯನಕ್ಷತ್ರಗಳಾದ ವಿಶಾಖಾನಕ್ಷತ್ರಗಳೆರಡೂ, ಕ್ರೂರಗ್ರಹಬಾಧೆಯಿಲ್ಲದೆ ಶುದ್ಧವಾಗಿ ಪ್ರಕಾಶಿಸುವುವು. ರಾಕ್ಷಸರಿಗೆ ಪ್ರಧಾನನಕ್ಷತ್ರವಾಗಿ ನಿರ್ಋತಿ ದೇವತಾತ್ಮಕವಾದ ಮೂಲಾನಕ್ಷತ್ರವು ತನಗೆ ಸಮೀಪದಲ್ಲಿರುವ ಧೂಮಕೇತುವಿನಿಂದ ಸ್ಪರ್ಶಿಸಲ್ಪಟ್ಟು ಬಹಳವಾಗಿ ಕಂದಿರುವುದು. ಇವೆಲ್ಲವೂ ರಾಕ್ಷಸರ ವಿನಾಶಕ್ಕೇ ಹೊರತು ಬೇರೆಯಲ್ಲ. ಮೃತ್ಯುವಶರಾದವರ ನಕ್ಷತ್ರವು, ಅವರ ಅಂತ್ಯಕಾಲದಲ್ಲಿ ಹೀಗೆ ದುಷ್ಟಗ್ರಹಗಳಿಂದ ಪೀಡಿತವಾಗುವುದುಂಟು. ರಾಮಾ! ಅದೋ ಅಲ್ಲಲ್ಲಿ ಕಾಣುವ ನೀರೆಲ್ಲವೂ ಸ್ವಚ್ಛವಾಗಿಯೂ, ರುಚಿಯುಳ್ಳದಾಗಿಯೂ, ಇರುವುದು. ಇಲ್ಲಿನ ಕಾಡುಗಳೆಲ್ಲವೂ ಫಲಭರಿತಗಳಾಗಿರುವುವು. ಒಂದೊಂದು ವೃಕ್ಷವೂ ಋತುಮರ್ಯಾದೆಯನ್ನತಿಕ್ರಮಿಸದೆ ಚೆನ್ನಾಗಿ ಪುಷ್ಪಿಸಿ, ವಿಶೇಷವಾದ ಸುಗಂಧವನ್ನು ಹೊರಡಿಸುತ್ತಿರುವುದು. ಮತ್ತು ವ್ಯೂಹಗಳಾಗಿ ಏರ್ಪಡಿಸಲ್ಪಟ್ಟ ಈ ವಾನರಸೈನ್ಯಗಳು, ಮೊದಲು ತಾರಕಸಂಹಾರಯುದ್ಧದಲ್ಲಿ (ಚಂದ್ರನು ಬೃಹಸ್ಪತಿ ಭಾರ್ಯೆಯಾದ ತಾರೆಯನ್ನು ಸ್ವಾಧೀನಮಾಡಿಕೊಂಡಾಗ, ಆ ನಿಮಿತ್ತವಾಗಿ ನಡೆದ ಯುದ್ಧದಲ್ಲಿ) ದೇವಸೇನೆಯು ಹೇಗೋಹಾಗೆ ಪ್ರಕಾಶಿಸುತ್ತಿರುವುವು. ಎಲೈ ಆರ್ಯನೆ! ಈ ಶುಭನಿಮಿತ್ತಗಳೆಲ್ಲವನ್ನೂ ನೋಡಿದ ಮೇಲೆ ನಾವು ಅವಶ್ಯವಾಗಿ ಸಂತೋಷಿಸಬೇಕಲ್ಲವೆ? ಎಂದನು. ಹೀಗೆ ಲಕ್ಷ್ಮಣನು ಸಂತೋಷದಿಂದ ತನ್ನಣ್ಣನಾದ ರಾಮನಿಗೆ ಆಗಾಗ ದುಃಖಸಮಾಧಾನವನ್ನು ಮಾಡುತ್ತಿರಲು ಹಾಗೆಯೇ ನಖದಂಷ್ಟ್ರಾಯುಧಗಳುಳ್ಳ ಕಪಿಗಳಿಂದಲೂ, ಕರಡಿಗಳಿಂದಲೂ, ಹುಲಿ

ಗಳಿಂದಲೂ ತುಂಬಿದ ಆ ದೊಡ್ಡ ಸೈನ್ಯವು, ಅಲ್ಲಿನ ಸಮಸ್ತಪ್ರದೇಶವನ್ನೂ ವ್ಯಾಪಿಸು ವಂತೆ ಮುಂದೆ ಮುಂದೆ ಸಾಗಿಬರುತ್ತಿತ್ತು. ಈ ದೊಡ್ಡ ಕಪಿಸೈನ್ಯವು ಹೊರಟು ಬರುವಾಗ, ಅದರ ಕೈಕಾಲುಗಳ ಬಡಿತಕ್ಕೆ ನೆಲದಿಂದೆದ್ದ ಧೂಳಿಯು, ಸೂರ್ಯತೇಜ ಸ್ಸನ್ನೂ ಮರೆಸುವಂತೆ ಮಹಾಭಯಂಕರವಾಗಿ ಸಮಸ್ತ ಲೋಕವನ್ನೂ ವ್ಯಾಪಿಸಿತು. ಭಯಂಕರವಾದ ಆ ವಾನರಸೈನ್ಯವು ಮೇಘಗಳು ಆಕಾಶವನ್ನು ಮರೆಸುವಂತೆ, ಪರ್ವತ ಗಳಿಂದಲೂ ವನಗಳಿಂದಲೂ ಕೂಡಿದ ದಕ್ಷಿಣದಿಗ್ಭಾಗವೆಲ್ಲವನ್ನೂ ಎಡೆಬಿಡದೆ ಮರೆ ಸಿತ್ತು, ಮತ್ತು ಆ ವಾನರಸೈನ್ಯವು ಅಲ್ಲಲ್ಲಿ ಅಡಲಾಗಿದ್ದ ನದಿಗಳಲ್ಲಿಳಿದು, ಸಾಲಾಗಿ ಎಡೆಬಿಡದೆ ನೆಡೆದು ಹೋಗುವಾಗ ಆ ನದೀಪ್ರವಾಹಕ್ಕೆ ಅಣೆಕಟ್ಟು ಕಟ್ಟಿದಂತಾಗಿ ಆ ಪ್ರವಾಹಗಳು ಮುಂದೆ ಹೋಗುವುದಕ್ಕೆ ದಾರಿಯಿಲ್ಲದೆ, ಹಿಂಮೊಗವಾಗಿ ತಿರುಗಿ, ಬಹುಯೋಜನೆಗಳವರೆಗೆ ಹಿಂದಕ್ಕೇ ಪ್ರವಹಿಸುತಿದ್ದವು. ಆ ವಾನರರೋ ಅಲ್ಲಲ್ಲಿ ದಾರಿ ಗಡ್ಡಲಾದ ಕೊಳಗಳನ್ನು ಕಂಡಾಗ, ನಡುನೀರಿನಲ್ಲಿ ಈಜಿ ಹೋಗುವರು! ದೊಡ್ಡ ಕಾಡುಳ್ಳ ಬೆಟ್ಟಗಳು ಸಿಕ್ಕಿದಾಗ ಅವುಗಳನ್ನು ಪಕ್ಕಕ್ಕೆ ಬಿಟ್ಟು ಸುತ್ತಿಕೊಂಡು ಹೋಗುವರು! ಸಮಪ್ರದೇಶಗಳಲ್ಲಿ ಧಾರಾಳವಾಗಿ ಸುತ್ತಿಸುತ್ತಿ ನೋಡುತ್ತ ನಡೆಯು ವರು! ಫಲವೃಕ್ಷಗಳನ್ನು ಕಂಡಾಗ ಅವುಗಳ ಕೆಳಗೆ ನುಗ್ಗಿಹೋಗುವರು. ಹೀಗೆ ಆ ದೊಡ್ಡ ವಾನರಸೈನ್ಯವು ಅಲ್ಲಿನ ಪ್ರದೇಶವೆಲ್ಲವನ್ನೂ ವ್ಯಾಪಿಸಿ ದಾರಿನಡೆಯುತ್ತಿತ್ತು. ಮೊದಲೇ ವಾಯುವಿಗೆ ಸಮವಾದ ವೇಗವುಳ್ಳ ಆ ವಾನರಿಗೆ ರಾಮಕಾರ್ಯವನ್ನು ನಡೆಸುವುದರಲ್ಲಿ ಉಂಟಾದ ಮಹೋತ್ಸಾಹವು ಅವರ ಪರಾಕ್ರಮವನ್ನೂ ಸಂತೋಷ ವನ್ನೂ ಮತ್ತಷ್ಟು ವಿಶೇಷವಾಗಿ ಹೆಚ್ಚಿಸಲು ದಾರಿಯಲ್ಲಿ ನಡೆಯುವಾಗ ಆ ವಾನರರು ಒಬ್ಬರಿಗೊಬ್ಬರು ತಮ್ಮ ಹರ್ಷವನ್ನೂ, ವೀರ್ಯವನ್ನೂ, ಬಲವನ್ನೂ ತೋರಿಸಿಕೊಳ್ಳುತ್ತ ಪ್ರಾಯದ ಕೊಬ್ಬಿನಿಂದುಂಟಾದ ನಾನಾಚೇಷ್ಟೆಗಳನ್ನು ಆರಂಭಿಸಿಬಿಟ್ಟರು. ಆಗ ಮುಂದಾಗಿ ಓಡುವವರು ಕೆಲವರು! ಹಾರುವವರು ಕೆಲವರು! ಕಿಲಕಿಲ ಧ್ವನಿ ಯನ್ನು ಮಾಡುವವರು ಕೆಲವರು! ತಮ್ಮ ಬಾಲಗಳನ್ನೆತ್ತಿ ನೆಲಕ್ಕಪ್ಪಳಿಸುವವರು ಕೆಲವರು! ಕಾಲನ್ನು ನೆಲಕ್ಕೆ ಬಡಿಯುವವರು ಕೆಲವರು! ತೋಳುಗಳನ್ನು ಬೀಸಿ ಬೆಟ್ಟಗಳನ್ನುರುಳಿಸುವವರು ಕೆಲವರು! ಮರಗಳನ್ನು ಮುರಿಯುವವರು ಕೆಲವರು! ಮತ್ತು ಪರ್ವತವಾಸಿಗಳಾದ ಕೆಲವು ವಾನರರು ಅಲ್ಲಲ್ಲಿ ಬೆಟ್ಟದ ತುದಿಯನ್ನೇರಿ ನಿಂತು ಕೇಕೆಹಾಕುವರು! ಕೆಲವರು ಸಿಂಹನಾದವನ್ನು ಮಾಡುವರು! ಕೆಲವರು ತಮ್ಮ ತೊಡೆಯ ವೇಗದಿಂದಲೇ ಅಲ್ಲಲ್ಲಿ ದಾರಿಗಡ್ಡಲಾಗಿದ್ದ ಬಳ್ಳಿಗಳನ್ನು ನಾನಾವಿಧವಾಗಿ

ತಿಕ್ಕಿ ಕೆಡಹುವರು ! ಕೆಲವರು ವೀರ್ಯದ ಕೊಬ್ಬಿನಿಂದ ಕಲ್ಲುಗಳನ್ನೂ ಮರಗಳನ್ನೂ ಕೈಗೆತ್ತಿಕೊಂಡು ಅದರಿಂದಲೇ ನಾನಾವಿಧವಾಗಿ ಆಟವಾಡುವರು! ಹೀಗೆ ಭಯಂಕರ ಸ್ವರೂಪವುಳ್ಳ ಅನೇಕ ವಾನರಸೈನ್ಯವು ನೂರು ನೂರಾಗಿಯೂ, ಸಾವಿರ ಸಾವಿರವಾಗಿಯೂ ಲಕ್ಷ ಲಕ್ಷವಾಗಿಯೂ, ಕೋಟಿ ಕೋಟಿಯಾಗಿಯೂ, ಅಲ್ಲಲ್ಲಿ ಗುಂಪುಕಟ್ಟಿಕೊಂಡು ಬರುತ್ತಿರಲು, ಆ ಭೂಭಾಗವೆಲ್ಲವೂ ಕಪಿಮಯವಾದಂತೆ ಅಪೂರ್ವ ಶೋಭೆಯನ್ನು ಹೊಂದಿತು. ಸುಗ್ರೀವನಿಂದ ಸುರಕ್ಷಿತವಾದ ಆ ದೊಡ್ಡ ವಾನರಸೈನ್ಯವು, ಪ್ರಭುವಾದ ರಾಮನ ಸಹವಾಸದಿಂದ ಮತ್ತಷ್ಟು ಸಂತೋಷವನ್ನು ಹೊಂದಿ, ಹಗಲು ರಾತ್ರಿಯೆನ್ನದೆ ಎಡೆಬಿಡದೆ ಪ್ರಯಾಣಮಾಡಿ ಬರುತ್ತಿತ್ತು. ಮೊದಲೇ ಆ ವಾನರರೆಲ್ಲರೂ ಬಹಳವಾದ ಯುದ್ಧೋತ್ಸಾಹದಿಂದ ಬೇಗ ಬೇಗನೆ ಹೆಜ್ಜೆಯಿಡುತ್ತಿದ್ದರಲ್ಲದೆ, ಅವರಲ್ಲಿ ಒಬ್ಬೊರಿಗೂ ಸೀತೆಯ ಸೆರೆಯನ್ನು ಬಿಡಿಸಬೇಕೆಂಬ ಆತುರವೂ ಮೇಲೆ ಮೇಲೆ ಹೆಚ್ಚುತ್ತಿದ್ದುದರಿಂದ, ಎಲ್ಲಿಯೂ, ಮುಹೂರ್ತಮಾತ್ರವೂ ನಿಲ್ಲದೆ ದಾರಿ ನಡೆಯುತ್ತಿದ್ದರು. ಹೀಗೆ ವಾನರರೆಲ್ಲರೂ ಪ್ರಯಾಣಮಾಡಿ ಬರುತ್ತ, ಮುಂದೆ ಅನೇಕ ವೃಕ್ಷಗಳಿಂದ ನಿಡವಾಗಿಯೂ, ಬಗೆಬಗೆಯ ಮೃಗಗಳಿಂದ ತುಂಬಿದುದಾಗಿಯೂ ಇದ್ದ ಸಹ್ಯ ಪರ್ವತವನ್ನೂ ಮಲಯಪರ್ವತಗಳನ್ನೂ ಸೇರಿದರು. ರಾಮನು ಆ ಸಹ್ಯ ಮಲಯಪರ್ವತಗಳ ಮೇಲಿನ ವಿಚಿತ್ರಾರಣ್ಯಗಳನ್ನೂ ನದಿಗಳನ್ನೂ ಗಿರಿನದಿಗಳನ್ನೂ ನೋಡುತ್ತ ಮುಂದೆ ಹೋಗುತಿದ್ದನು. ವಾನರರು ಅಲ್ಲಿನ ಕಾಡುಗಳಲ್ಲಿ ಹೋಗುವಾಗ ದಾರಿಯಲ್ಲಿ ಸಿಕ್ಕಿದ ಪಗಡೆಯ ಮರಗಳನ್ನೂ, ತಿಲಕವೃಕ್ಷಗಳನ್ನೂ, ಮಾವು, ಅಸುಗೆ ದಾಸವಾಳ, ನೀಲಿ, ಕಣಿಗಿಲೆ, ನೇಮಿ, ಅಂಕೋಲೆ, ಕರಂಜಕ, ಆಲ, ಬಸರಿ, ಸ್ಫೂರ್ಜಕ, ನೇರಳೆ, ನೆಲ್ಲಿ, ಕಡವು, ಮುಂತಾದ ಮರಗಳನ್ನೂ ಮುರಿದುಹಾಕುತ್ತ ಹೋದರು. ಮನೋಹರಗಳಾದ ಆ ಪರ್ವತಪ್ರಾಂತಗಳಲ್ಲಿದ್ದ ಬಗೆಬಗೆಯ ಕಾಡು ಮರಗಳು ಗಾಳಿಯಿಂದಲುಗುತ್ತ, ಆ ವಾನರರಮೇಲೆ ಪುಷ್ಪವರ್ಷವನ್ನು ಕರೆಯುತಿದ್ದುವು. ಮದ್ಯಗಂಧವುಳ್ಳ ಅಲ್ಲಿನ ಕಾಡುಗಳಲ್ಲಿ ಚಂದನದಂತೆ ಶೀತಲವಾದ ವಾಯುವು ಭ್ರಮರಧ್ವನಿಗಳೊಡನೆ ಸುಖಸ್ಪರ್ಶವಾಗಿ ಬೀಸುತಿತ್ತು. ಅಲ್ಲಲ್ಲಿ ಕಾಣುತಿದ್ದ ಗೈರಿಕಾದಿಧಾತುಗಳ ವಿಚಿತ್ರವರ್ಣಗಳಿಂದ ಆ ಪರ್ವತವೇ ಅಲಂಕೃತವಾದಂತೆ ತೋರುತಿತ್ತು, ಗಾಳಿಯ ಬಡಿತದಿಂದ ಮೇಲೆ ಹೊರಟ ಆ ಧಾತುರೇಣುಗಳೇ ದೊಡ್ಡ ವಾನರಸೇನೆಯನ್ನು ಸುತ್ತಲೂ ಆವರಿಸಿ ಮುಚ್ಚಿದಂತೆ ಕಾಣುತಿತ್ತು. ಆ ಪರ್ವತದ ತಪ್ಪಲುಗಳ ಸುತ್ತಲೂ ಚೆನ್ನಾಗಿ ಪುಷ್ಪಿಸಿದ ತಾಳೆ, ನೀರುಗಂಟೆ,

*

ಅಂದವಾದ ವಾಸಂತಿಕೆ, ಸುವಾಸನೆಯುಳ್ಳ ಮಾಧವೀಲತೆಗಳು, ಪುಷ್ಪಭರಿತಗಳಾದ ಮೊಲ್ಲೆಯ ಪೊದರುಗಳು, ನಕ್ತಮಾಲಗಳು, ಮಧೂಕವೃಕ್ಷಗಳು, ವಾನೀರ ವೃಕ್ಷಗಳು, ಬಂಧೂಕಗಳು, ಸ್ಫೂರ್ಜಕಗಳು, ನಾಗಕೇಸರಿ, ಪಾದರಿ, ಕೋವಿದಾರ, ಖರ್ಜೂರ, ಅರ್ಜುನವೃಕ್ಷಗಳು, ಶಿಂಶುಪಾವೃಕ್ಷಗಳು, ಗಿರಿಮಲ್ಲಿಕೆಗಳು, ಹಿಪ್ಪೆ, ಮತ್ತಿ, ಬೂರಗ, ಕೆಂಪುಗೋರಂಟೆ, ಶ್ರೀತಾಳೆ, ನೇಮಿ, ಹೆಂತಾಳೆ, ಕಡವು, ಚೂರ್ಣಕ, ದೀಪಕ, ಅಂಕೋಲೆ, ನೆಲ್ಲಿ, ಪದ್ಮಕ, ಮುಂತಾದ ಗಿಡಗಳೆಲ್ಲವೂ ಈ ವಾನರರ ಹಾರಾಟದಿಂದ ತುಂಡುತುಂಡಾಗಿ ಬೀಳುತಿದ್ದುವು. ಆ ಪರ್ವತದ ಮೇಲಿದ್ದ ಕೆರೆ, ಕಟ್ಟೆ, ಬಾವಿ ಮುಂತಾದ ಜಲಪ್ರದೇಶಗಳೆಲ್ಲವೂ, ತಂಪಾದ ನೀರುಳ್ಳುದಾಗಿ, ಚಕ್ರವಾಕಗಳಿಂದಲೂ, ಹಂಸಕಾರಂಡವಗಳಿಂದಲೂ, ಇನ್ನೂ ನೀರು ಕಾಗೆಗಳು, ಕ್ರೌಂಚಗಳು, ಮೊದಲಾದ ನಾನಾಜಲಚರ ಪಕ್ಷಿಗಳಿಂದಲೂ, ಶೋಭಿಸುತಿದ್ದುವು. ಅವುಗಳ ಸುತ್ತಿನ ತೀರಪ್ರದೇಶಗಳಲ್ಲಿ ಹಂದಿ, ಹುಲ್ಲೆ, ಕರಡಿ, ಶಿವಂಗಿ, ಸಿಂಹ, ಭಯಂಕರರೂಪವುಳ್ಳ ಹುಲಿ, ಬಗೆಬಗೆಯ ಹಾವುಗಳು, ಮದದಾನೆಗಳು ಇವೇ ಮುಂತಾದ ಅನೇಕ ಕ್ರೂರಮೃಗಗಳು ತುಂಬಿದ್ದುವು. ಮತ್ತು ಅಲ್ಲಿನ ಒಂದೊಂದು ಜಲಾಧಾರಪ್ರದೇಶವೂ, ಅಂದವಾಗಿ ಅರಳಿದ ತಾವರೆಗಳಿಂದಲೂ, ಕರೀನೈದಿಲೆಗಳಿಂದಲೂ, ಬಿಳೀನೈದಿಲೆಗಳಿಂದಲೂ, ಸೌಗಂಧಿಕವೇ ಮೊದಲಾದ ಇನ್ನೂ ವಿಧವಿಧವಾದ ನೀರುಹೂಗಳಿಂದಲೂ ರಮ್ಯವಾಗಿದ್ದಿತು. ಆ ಬೆಟ್ಟದ ತಪ್ಪಲುಗಳಲ್ಲಿ ಬಗೆಬಗೆಯ ಹಕ್ಕಿಗಳು ಇಂಪಾದಧ್ವನಿಯಿಂದ ಕೂಗುತ್ತಿದ್ದುವು. ಈ ವಾನರರಾದರೋ ಆ ಕೊಳಗಳಲ್ಲಿ ಸ್ನಾನಪಾನಗಳನ್ನು ಮಾಡಿ ವಿನೋದದಿಂದ ವಿಹರಿಸುತ್ತ, ಒಬ್ಬರನ್ನೊಬ್ಬರು ಮೇಲಕ್ಕೆತ್ತಿ ನೀರಿನಲ್ಲಿ ಬಿಸುಟು ಜಲಕ್ರೀಡೆಗಳ ನ್ನಾಡುವರು. ಬೆಟ್ಟದ ತಪ್ಪಲುಗಳನ್ನೇರಿ ಅಲ್ಲಿನ ಗಿಡಗಳಿಂದ ಅಮೃತೆಗಂಧವುಳ್ಳ ಹಣ್ಣುಗಳನ್ನೂ, ಕಂದಮೂಲಗಳನ್ನೂ, ಹೂಗಳನ್ನೂ ಕಿತ್ತು ತಿನ್ನುವರು. ಅಲ್ಲಲ್ಲಿ ಮರಗಳ ಮೇಲೆ ಒಂದೊಂದು ಕೊಳಗದಷ್ಟು ಜೇನಿನಿಂದ ತುಂಬಿ ತೂಗಾಡುತ್ತಿರುವ ಜೇನುಗೂಡನ್ನೂ ಕೈಯಿಂದ ಕುಡಿಯುವರು. ಕಣ್ಣಿಗೆ ಕಂಡ ಮರಗಳನ್ನು ಮುರಿಯುವರು. ಕಂಡಕಂಡ ಬಳ್ಳಿಗಳನ್ನು ಕಿತ್ತೆಸೆಯುವರು. ಅಲ್ಲಲ್ಲಿ ಬೆಟ್ಟಗಳಿಗೆ ಬೆಂಕಿಯನ್ನಿಟ್ಟು ಉರಿಸುವರು. ಹೀಗೆ ಬಲದಿಂದ ಕೊಬ್ಬಿದ ಆ ವಾನರರೆಲ್ಲರೂ ಪಾನಮದದಿಂದ ಕೊಬ್ಬಿ ಕೂಗಿಡುತ್ತ, ಪರಮಸಂತೋಷದಿಂದ ಮುಂದೆಮುಂದೆ ಪ್ರಯಾಣಮಾಡುತ್ತಿದ್ದರು. ಅವರಲ್ಲಿ ಕೆಲವರು ಮರಗಳಿಲ್ಲದ ಕಡೆಯನ್ನೇ ನೋಡಿ

ಸುತ್ತಿಸುತ್ತಿ ನಡೆಯುವರು. ಕೆಲವರು ಮರದಿಂದ ಮರಕ್ಕೆ ಹಾರಿಹೋಗುವರು. ಕೆಲವರು ಮರವನ್ನೇರಿ ಧುಮುಕುವರು. ಹೀಗೆ ವಿಚಿತ್ರಗತಿಯಿಂದ ಹೋಗುವಾಗ ಅಲ್ಲಿನ ಸಮಪ್ರದೇಶವು ಪಕ್ವವಾದ ಪೈರುಗಳಿಂದ ತುಂಬಿದ ಬತ್ತದ ಗದ್ದೆಯಂತೆ ಆ ಕಪಿಗಳಿಂದಲೇ ದಟ್ಟವಾಗಿ ತುಂಬಿಹೋಯಿತು. ಹೀಗೆ ರಾಮನೇ ಆ ಕಪಿಗಳೊಡನೆ ಪ್ರಯಾಣಮಾಡಿ, ಕೊನೆಗೆ ಮಹೇಂದ್ರಪರ್ವತವನ್ನು ಸೇರಿ, ಅನೇಕ ವೃಕ್ಷಸಮೂಹಗಳಿಂದ ಶೋಭಿತವಾದ ಆ ಪರ್ವತಶಿಖರವನ್ನೇರಿದನು. ದಶರಥಪುತ್ರನಾದ ರಾಮನು ಆ ಪರ್ವತಶಿಖರದಲ್ಲಿ ನಿಂತು ನೋಡುವಾಗ ಮುಂದೆ ಮತ್ಸ್ಯಕೂರ್ಮಾದಿಜಲಜಂತುಗಳಿಂದ ತುಂಬಿದ ಮಹಾಸಮುದ್ರವು ಕಾಣಿಸಿತು. ಹಾಗೆಯೇ ಸಮಸ್ತ ವಾನರ ಸೈನ್ಯವೂ ಕ್ರಮವಾಗಿ ಸಹ್ಯ ಮಲಯಪರ್ವತಗಳನ್ನು ದಾಟಿ ಭಯಂಕರಧ್ವನಿಯಿಂದ ಮೊರೆಯುತ್ತಿರುವ ಆ ಸಮುದ್ರವನ್ನು ಕಂಡಿತು. ಲೋಕರಂಜಕನಾದ ಶ್ರೀರಾಮನು ಆ ಸಮುದ್ರವನ್ನು ಕಂಡೊಡನೆ ಕುತೂಹಲಗೊಂಡು, ಲಕ್ಷ್ಮಣಸುಗ್ರೀವರೊಡಗೂಡಿ ಆಗಲೇ ಆ ಪರ್ವತಶಿಖರದಿಂದ ಬೇಗನೆ ಕೆಳಕ್ಕಿಳಿದು ಸಮುದ್ರತೀರದ ಕಾಡಿಗೆ ಬಂದನು. ಆಗಾಗ ಅಲೆಗಳು ಬಂದು ಹೊಡೆಯುವುದರಿಂದ ಶುದ್ಧವಾಗಿ ತೊಳೆಯಲ್ಪಟ್ಟ ಕಲ್ಲುಬಂಡೆಗಳುಳ್ಳ ಆ ತೀರಪ್ರದೇಶವನ್ನು ಸೇರಿದಮೇಲೆ ರಾಮನು ಸುಗ್ರೀವನನ್ನು ಕುರಿತು "ಎಲೈ ಮಿತ್ರನೆ! ಇದೋ! ನಾವು ಸಮುದ್ರದ ಸಮೀಪಕ್ಕೂ ಬಂದು ಬಿಟ್ಟೆವು. ನಾವು ಮೊದಲು ಮಾಡಿದ ಆಲೋಚನೆಯನ್ನು ಈಗ ಮುಗಿಸಬೇಕಾಗಿರುವುದು. ಈ ಸಮುದ್ರವೋ ಅತ್ತಲಾಗಿ ತೀರವೇ ಇಲ್ಲದಂತೆ ಅಪಾರವಾಗಿ ಕಾಣುತ್ತಿರುವುದು. ಉಪಾಯದಿಂದಲ್ಲದೆ ಇದನ್ನು ದಾಟುವುದು ಸಾಧ್ಯವಲ್ಲ. ಆದುದರಿಂದ ಇಲ್ಲಿಯೇ ನಮ್ಮ ಸೈನ್ಯವನ್ನಿಳಿಸಿ, ಮುಂದೆ ಈ ವಾನರಸೈನ್ಯವೆಲ್ಲವನ್ನೂ ದಾಟಿಸುವುದಕ್ಕೆ ಮಾರ್ಗವನ್ನು ಯೋಚಿಸಬೇಕು" ಎಂದನು. ಸೀತಾವಿರಹದಿಂದ ಬಹಳವಾಗಿ ಕೃಶಿಸಿದ ಮಹಾಬಾಹುವಾದ ಆ ರಾಮನು ಅಲ್ಲಿಯೇ ಸೈನ್ಯವನ್ನಿಳಿಸುವುದಕ್ಕಾಗಿ ಸುಗ್ರೀವನನ್ನು ಕುರಿತು, "ಎಲೈ ಕಪಿರಾಜನೆ! ನಮ್ಮ ಸೈನ್ಯವೆಲ್ಲವನ್ನೂ ಇಲ್ಲಿಯೇ ನಿಲ್ಲುವಂತೆ ನಿಯಮಿಸು! ನಾವು ಈ ಸಮುದ್ರವನ್ನು ದಾಟುವುದಕ್ಕಾಗಿ ತಕ್ಕ ಉಪಾಯವನ್ನು ಚೆನ್ನಾಗಿ ಆಲೋಚಿಸಿ ನಿಶ್ಚಯಿಸಬೇಕಾದ ಕಾಲವು ಬಂದಿರುವುದು. ಅದುವರೆಗೆ ಇಲ್ಲಿ ಯಾವ ವಾನರಯೂಥಪತಿಯಾಗಲಿ, ತನ್ನ ತನ್ನ ಸೇನೆಯನ್ನಗಲಿ ಅತ್ತಿತ್ತ ಕದಲಕೂಡದು. ಶೂರರಾದ ಕೆಲವು ವಾನರರು ಅಲ್ಲಲ್ಲಿ ಎಚ್ಚರಿಕೆಯಿಂದ ಸುತ್ತಿ ತಿರುಗುತ್ತ, ನಮ್ಮ ವಿಷಯದಲ್ಲಿ ಶತ್ರುಗಳು ರಹಸ್ಯ

ವಾಗಿ ಅಲ್ಲಲ್ಲಿ ಕಲ್ಪಿಸಿರಬಹುದಾದ ಅಪಾಯಗಳನ್ನು ತಿಳಿಯುತ್ತಿರಬೇಕು" ಎಂದನು. ಇದನ್ನು ಕೇಳಿ ಸುಗ್ರೀವನು ಲಕ್ಷ್ಮಣಸಹಿತನಾಗಿ ಹೊರಟು, ತನ್ನ ಸಮಸ್ತ ಸೈನ್ಯವನ್ನೂ ನಾನಾವೃಕ್ಷಗಳಿಂದ ನಿಬಿಡವಾದ ಆ ಸಮುದ್ರತೀರದಲ್ಲಿ ಅಲ್ಲಲ್ಲಿ ನಿಲ್ಲಿಸಿಟ್ಟನು. ಮಹಾಸಾಗರದ ಸಮೀಪದಲ್ಲಿದ್ದ ಆ ದೊಡ್ಡ ವಾನರಸೈನ್ಯವು, ಜೇನಿನಂತೆ ಹೊಂಬಣ್ಣದ ನೀರುಳ್ಳ ಬೇರೊಂದು ಮಹಾಸಮುದ್ರವೋ ಎಂಬಂತೆ ತೋರಿತು. ಹೀಗೆ ಆ ಸಮಸ್ತವಾನರ ಸೈನ್ಯವೂ ಸಮುದ್ರವನ್ನು ದಾಟಬೇಕೆಂಬ ನಿರೀಕ್ಷೆಯಿಂದ ಅಲ್ಲಿನ ತೀರಾರಣ್ಯವನ್ನೆಲ್ಲಾ ವ್ಯಾಪಿಸಿ ನಿಂತಿತು. ಅಲ್ಲಿ ಸೈನ್ಯವನ್ನಿಳಿಸಿದಾಗ ಆ ಸೇನಾಸನ್ನಾಹದಿಂದುಂಟಾದ ಮಹಾಧ್ವನಿಯು ಸಮುದ್ರಘೋಷವನ್ನೇ ಮರೆಸುವಂತೆ ಕೇಳಿಸುತಿತ್ತು. ಸುಗ್ರೀವ ರಕ್ಷಿತವಾದ ಆ ಮಹಾಸೈನ್ಯವು ಮೂರುಸುತ್ತಾಗಿ (ಅಥವಾ ಕಪಿಗಳು, ಕರಡಿಗಳು, ಸಿಂಗಳಿಕಗಳೆಂಬ ಮೂರು ಭಾಗಗಳಾಗಿ ಬೇರ್ಪಡಿಸಲ್ಪಟ್ಟು) ರಾಮಕಾರ್ಯವನ್ನು ನಿರ್ವಹಿಸಬೇಕೆಂಬ ಮಹೋತ್ಸಾಹದಿಂದಿದ್ದಿತು. ಹೀಗೆ ಆ ದೊಡ್ಡ ವಾನರಸೈನ್ಯವು ಸಮುದ್ರತೀರದಲ್ಲಿ ನಿಂತು, ವಾಯುವೇಗದಿಂದ ಬಹಳವಾಗಿ ತೂಗಾಡುತ್ತಿದ್ದ ಆ ಸಮುದ್ರವನ್ನು ನೋಡಿ ಸಂತೋಷದಿಂದುಬ್ಬುತಿತ್ತು. ಆ ಸಮುದ್ರವಾದರೋ ಕೊನೆಮೊದಲಿಲ್ಲದಷ್ಟು ವಿಸ್ತಾರವಾಗಿಯೂ, ಅಕ್ಷೋಭ್ಯವಾಗಿಯೂ, ಅನೇಕ ರಾಕ್ಷಸರಿಗೆಡೆಯೂ, ಜಲಾಧಿಪತಿಯಾದ ವರುಣನಿಗೆ ಮುಖ್ಯವಾಸಸ್ಥಾನವಾಗಿಯೂ ಇರುವುದು. ಅಲ್ಲಲ್ಲಿ ಸುತ್ತುತ್ತಿರುವ ಕ್ರೂರನಕ್ರಗಳಿಂದಲೂ, ಸಾಯಂಕಾಲದಲ್ಲಿ ಉಬ್ಬಿ ಬರುವ ಅಲೆಗಳಿಂದಲೂ, ಮಹಾಭಯಂಕರವಾಗಿರುವುದು. ನೊರೆಗಳಿಂದ ನಗುವಂತೆಯೂ, ಅಲೆಗಳಿಂದ ನರ್ತಿಸುವಂತೆಯೂ ಕಾಣುವುದು. ಚಂದ್ರೋದಯ ಸಂಬಂಧದಿಂದ ಮೇಲೆಮೇಲೆ ಉಕ್ಕಿ ಬರುವುದಲ್ಲದೆ, ತರಂಗತರಂಗಗಳಿಗೂ ಪ್ರತಿಫಲಿಸಿದ ಸಾವಿರಾರು ಚಂದ್ರಬಿಂಬಗಳಿಂದ ಶೋಭಿಸುವುದು. (ಸಮುದ್ರರಾಜನು ಅಲೆಗಳೆಂಬ ತನ್ನ ಕೈಗಳಿಂದ ಚಂದನವನ್ನು ತೇದಿಡುವಂತೆ ಸುತ್ತಲೂ ನೊರೆಯೇಳುತ್ತಿರಲು, ಅದನ್ನು ಚಂದ್ರನು ಕಿರಣಗಳೆಂಬ ತನ್ನ ಕೈಗಳಿಂದೆತ್ತಿ ದಿಗಂಗನೆಯರಿಗೆ ತೊಡೆಯುವಂತೆ ಚಂದ್ರಿಕೆಯು ಪ್ರಸರಿಸಿರುವುದು, ಮತ್ತು ಆ ಸಮುದ್ರದ ಮೇಲೆ ಅಲ್ಲಲ್ಲಿ ಪ್ರಚಂಡವಾಯುವಿನಂತೆ ಮಹಾವೇಗವುಳ್ಳ ಮೊಸಳೆಗಳೂ, ಅಲ್ಲಲ್ಲಿ ತಿಮಿತಿಮಿಂಗಿಲಾದಿ ಕ್ರೂರಜಂತುಗಳೂ, ಅಲ್ಲಲ್ಲಿ ದೇದೀಪ್ಯಮಾನವಾದ ಫಣಾರತ್ನಗಳುಳ್ಳ ವಿಷಸರ್ಪಗಳೂ ತಲೆಯೆತ್ತುತ್ತಿರುವುವು. ಕೆಳಗೆ ನೀರಾನೆಗಳೇ ಮೊದಲಾದ ದೊಡ್ಡದೊಡ್ಡ ಜಲಜಂತುಗಳೂ, ಮಹೋನ್ನತಗಳಾದ

ಪರ್ವತಗಳೂ ಮುಳುಗಿರುವುವು. ಹಡಗುಗಳ ಸಂಚಾರಕ್ಕೂ ದಾರಿಯಿಲ್ಲದಂತೆ ದುರ್ಗಮವಾಗಿರುವುದು. ಅದರ ಆಳವನ್ನು ಇಷ್ಟೆಂದು ನಿರ್ಣಯಿಸುವುದಕ್ಕೆ ಸಾಧ್ಯವಲ್ಲ! ಎಲ್ಲಿ ನೋಡಿದರೂ ಘೋರರಾಕ್ಷಸರು! ಎಲ್ಲಿ ನೋಡಿದರೂ ಬಿರುಗಾಳಿಯ ಬಡಿತದಿಂದುಬ್ಬಿ ಬರುವ ಮಹಾತರಂಗಗಳು! ಎಲ್ಲಿ ನೋಡಿದರೂ ಮೊಸಳೆಗಳು! ಎಲ್ಲಿ ನೋಡಿದರೂ ಕ್ರೂರಸರ್ಪಗಳು! ಎಲ್ಲಿ ನೋಡಿದರೂ ವಾಯು ವೇಗದಿಂದ ಮೇಲಕ್ಕೆ ಹಾರಿಬೀಳುತ್ತಿರುವ ದೊಡ್ಡದೊಡ್ಡ ಅಲೆಗಳು! ಹೀಗೆ ಭಯಂಕರವಾದ ಆ ಸಮುದ್ರವನ್ನು ದಾಟುವ ಉಪಾಯವೇನೆಂಬ ಚಿಂತೆಯು ಬಹಳವಾಗಿ ಹುಟ್ಟಿತು. ಆ ಕಾಲದಲ್ಲಿ ರಾತ್ರಿಯಾದುದರಿಂದ ಸಮುದ್ರಾಕಾಶ ಗಳೆರಡನ್ನೂ ಏಕಾಕಾರವಾಗಿ ಕಾಣಿಸುವಂತೆ, ಕೆಳಗೆ ಸಮುದ್ರದಲ್ಲಿ ಅಗ್ನಿ ಕಣಗಳಂತೆ ಹೊಳೆಯುವ ಜಲಬಿಂದುಗಳು! ಅದರಂತೆಯೇ ಆಕಾಶದಲ್ಲಿ ನಕ್ಷತ್ರಗಳು! ಸಮುದ್ರ ದಲ್ಲಿ ಮಹಾಸರ್ಪಗಳು! ಆಕಾಶದಲ್ಲಿ ನಾಗಜಾತಿಯ ದೇವತೆಗಳು! ಸಮುದ್ರದಲ್ಲಿ ರಾಕ್ಷಸರು! ಆಕಾಶದಲ್ಲಿ ದೈತ್ಯರು! ಎರಡೂ ಪಾತಾಳದಂತೆ ಗಂಭೀರವಾಗಿರುವುವು! ಎರಡೂ ಭಯಂಕರವಾಗಿರುವುವು! ಸಮುದ್ರವು ಆಕಾಶವನ್ನು ಹೋಲುವುದು! ಆಕಾಶವು ಸಮುದ್ರವನ್ನು ಹೋಲುವುದು! ಸಮುದ್ರವಾವುದು, ಆಕಾಶವಾವುದೆಂಬ ಭೇದವೇ ಕಾಣುವುದಿಲ್ಲ. ಸಮುದ್ರಜಲವು ಆಕಾಶದೊಡನೆ ಸೇರಿಹೋಗಿರುವುದು. ಆಕಾಶವು ಸಮುದ್ರಜಲದೊಡನೆ ಒಂದಾಗಿರುವುದು. ಕೆಳಗೆ ಸಮುದ್ರದೊಳಗಿನ ರತ್ನಗಳೊಡನೆ ಆಕಾಶದ ನಕ್ಷತ್ರಗಳೂ, ಕೆಳಗಿನ ತರಂಗಪರಂಪರೆಗಳೊಡನೆ ಆಕಾಶದ ಮೇಘಪರಂಪರೆಗಳೂ, ಏಕಾಕಾರವಾಗಿ ಕಾಣುತ್ತಿದ್ದುದರಿಂದ, ಸಮುದ್ರಾಕಾಶಗಳೆರ ಡಕ್ಕೂ ಸ್ವಲ್ಪಮಾತ್ರವೂ ಭೇದವಿರಲಿಲ್ಲ. ಅಲೆಗಳ ಬಡಿತದಿಂದುಂಟಾದ ಮಹಾ ಧ್ವನಿಯು ರಣಭೇರಿಯಂತೆ ಭಯಂಕರವಾಗಿ ಮೊಳಗುತ್ತಿರುವುದು. ಮತ್ತು ಆ ಮಹಾಸಾಗರವು ರತ್ನರಾಶಿಗಳೊಡನೆ ಮೇಲೆದ್ದು ಮೊರೆಯುತ್ತಿರುವ ಅಲೆಗಳಿಂದ ವಾಯುಮಂಡಲದಲ್ಲಿ ಐಕ್ಯಹೊಂದಿದಂತೆಯೂ, ಅಲ್ಲಲ್ಲಿ ತಲೆಯೆತ್ತುತ್ತಿರುವ ಜಲ ಜಂತುಗಳಿಂದ ಕೋಪಗೊಂಡು ಮೇಲೆ ಹಾರುವಂತೆಯೂ ಕಾಣುವುದು. ಹೀಗೆ ಬಿರುಗಾಳಿಯಿಂದೊದರಲ್ಪಟ್ಟು, ಮೇಲೇಳುವ ಜಲಪ್ರವಾಹದಿಂದ ಆಕಾಶವನ್ನು ಮೆಟ್ಟುವಂತೆ ಉಲ್ಲೋಲವಾದ ಆ ಸಮುದ್ರವನ್ನು ನೋಡುತಿದ್ದ ಹಾಗೆಲ್ಲಾ ಆ ವಾನರರ ಮನಸ್ಸಿನಲ್ಲಿಯೂ ಮಹೋತ್ಸಾಹವು ಹೆಚ್ಚುತಿತ್ತು. ಜಲಪ್ರವಾಹಗಳ ಮೊರೆತದಿಂದ ಮಹಾಧ್ವನಿಯನ್ನು ಬೀರುತ್ತ ಉದ್ಭ್ರಾಂತವಾದಂತಿರುವ ಆ ಸಮುದ್ರವನ್ನು ನೋಡಿ ಎಲ್ಲರೂ ಆಶ್ಚರ್ಯದಿಂದ ಬೆರಗಾಗಿ ನಿಂತರು.

ಇಲ್ಲಿಗೆ ನಾಲ್ಕನೆಯ ಸರ್ಗವು.

ಶ್ರೀರಾಮನು ಸಮುದ್ರವನ್ನು ನೋಡುವಾಗ ಸೀತೆಯನ್ನು ಸ್ಮರಿಸಿಕೊಂಡು ದುಃಖಿಸುತ್ತಿರಲು, ಲಕ್ಷ್ಮಣನು ಅವನನ್ನು ಸಮಾಧಾನಪಡಿಸಿದುದು.

ಆಮೇಲೆ ವಾನರಸೇನಾಪತಿಯಾದ ನೀಲನು, ಆ ಸೇನೆಯೆಲ್ಲವನ್ನೂ ರಾಜನೀತಿಶಾಸ್ತ್ರಕ್ರಮದಿಂದ ಸಮುದ್ರದ ಉತ್ತರ ತೀರದಲ್ಲಿಳಿಸಿ, ಆ ಸೇನೆಗೆ ಅಲ್ಲಲ್ಲಿ ತಕ್ಕ ರಕ್ಷಕರನ್ನೂ ನಿಯಮಿಸಿದನು. ಮೈಂದದ್ವಿವಿದರೆಂಬ ವಾನರೋತ್ತಮರಿಬ್ಬರೂ ಆ ಸೇನೆಯ ಸುತ್ತಲೂ ಎಚ್ಚರಿಕೆಯಿಂದ ಕಾವಲಾಗಿ ಸುತ್ತುತಿದ್ದರು. ಹೀಗೆ ಸಮಸ್ತ ವಾನರಸೈನ್ಯವೂ ಆ ತೀರದಲ್ಲಿಳಿದಮೇಲೆ, ರಾಮನು ತನ್ನ ಸಮೀಪದಲ್ಲಿದ್ದ ಲಕ್ಷ್ಮಣನನ್ನು ನೋಡಿ ವತ್ಸ ಲಕ್ಷ್ಮಣಾ ! ಲೋಕದಲ್ಲಿ ಯಾವ ಮನುಷ್ಯನಿಗಾದರೂ ಕಾಲವು ಕಳೆಯುತ್ತ ಬಂದ ಹಾಗೆಲ್ಲಾ ವ್ಯಸನವೂ ತಗ್ಗಿಹೋಗುವುದುಂಟು ! ನನಗಾದರೋ ನನ್ನ ಪ್ರಿಯಪತ್ನಿಯನ್ನು ಕಾಣದ ದುಃಖವು ದಿನ ದಿನಕ್ಕೂ ಮೇಲೆಮೇಲೆ ಹೆಚ್ಚುತ್ತಲೇ ಇರುವುದು ! ಆ ನನ್ನ ಪ್ರಿಯೆಯು ಅಷ್ಟು ದೂರದಲ್ಲಿರುವಳೆಂದೂ ನಾನು ದುಃಖಿಸುವವನಲ್ಲ ! ಅವಳನ್ನು ರಾಕ್ಷಸನು ಕದ್ದುಯ್ದಿರುವುದಕ್ಕೂ ನನಗೆ ದುಃಖವಿಲ್ಲ ! ಎಷ್ಟು ದೂರದಲ್ಲಿದ್ದರೂ ನಾನು ಅವಳನ್ನು ಕರೆಸಿಕೊಳ್ಳುವೆನು. ಯಾವ ರಾಕ್ಷಸನನ್ನಾದರೂ ಕೊಲ್ಲಬಲ್ಲೆನು ! ಆದರೆ ಅವಳ ಯೌವನವೆಲ್ಲವೂ ಹೀಗೆಯೇ ವ್ಯರ್ಥವಾಗಿ ಕಳೆದುಹೋಗುವುದೆಂಬ ಈ ಚಿಂತೆಯೊಂದೇ ನನ್ನನ್ನು ಬಹಳವಾಗಿ ಸಂಕಟಪಡಿಸುತ್ತಿರುವುದು" ಎಂದು ಹೇಳುತ್ತ, ವಿರಹದುಃಖದಿಂದ ಪರವಶನಾಗಿ ಸಮುದ್ರದ ಗಾಳಿಗಿದಿರಾಗಿ ನಿಂತು, "ಎಲೆ ಗಾಳಿಯೆ ! ನೀನಾದರೂ ಈಗ ನನ್ನ ಪ್ರಿಯೆಯಾದ ಸೀತೆಯಿರುವ ಕಡೆಯಿಂದ ಬೀಸು ! ಅವಳನ್ನು ಸ್ಪರ್ಶಿಸಿ ನನ್ನನ್ನೂ ಸ್ಪರ್ಶಿಸು ! ಬೇರೆವಿಧದಿಂದ ನನಗೆ ಅವಳ ಸ್ಪರ್ಶವು ದೊರಕದು ! ಆಕೆಯು ತನ್ನ ಕಣ್ಣುಗಳಿಂದ ನೋಡುತ್ತಿರುವ ಚಂದ್ರನನ್ನು ಈಗ ನಾನೂ ನನ್ನ ಕಣ್ಣುಗಳಿಂದ ನೋಡುತ್ತಿರುವೆನಲ್ಲವೆ ! ಈ ಮೂಲಕವಾಗಿ ನಮ್ಮಿಬ್ಬರಿಗೂ ದೃಷ್ಟಿ ಸಂಬಂಧವಾಗುತ್ತಿರುವುದು. ಅದರಂತೆಯೇ ಅವಳನ್ನು ಸ್ಪರ್ಶಿಸಿ ಬಂದ ನೀನು ನನ್ನನ್ನು ಸ್ಪರ್ಶಿಸಿದರೆ, ನಮ್ಮಿಬ್ಬರಿಗೂ ನಿನ್ನ ಮೂಲಕವಾಗಿ ಗಾತ್ರಸ್ಪರ್ಶವೂ ಉಂಟಾಗುವುದು. ಸಮಸ್ತಭೋಗಗಳನ್ನೂ ತೊರೆದು ನನ್ನೊಡನೆ ಕಾಡಿಗೆ ಹೊರಟು ಬಂದು ಆ ನನ್ನ ಪ್ರಿಯೆಯು ರಾವಣನು ತನ್ನನ್ನು ಕದ್ದುಯ್ಯುವಾಗ, ತನ್ನ ಪಾತಿವ್ರತ್ಯಾಗ್ನಿಯಿಂದಲೆ ಅವನನ್ನು ದಹಿಸಬಲ್ಲವಳಾಗಿದ್ದರೂ, ನನ್ನಲ್ಲಿ ಭಕ್ತಿಯಿಂದ,

ನನ್ನನ್ನೇ ಗತಿಯನ್ನಾಗಿ ನಂಬಿ 'ಹಾ ನಾಥಾ' ಎಂದು ಮೊರೆಯಿಟ್ಟಳಲ್ಲವೆ ! ಆ ದೀನ ಧ್ವನಿಯೇ ಈಗಲೂ ನನ್ನ ಹೃದಯದಲ್ಲಿ ನಾಟಿ, ವಿಷವನ್ನು ಕುಡಿದಂತೆ ನನ್ನ ಸರ್ವಾವಯವಗಳನ್ನೂ ದಹಿಸುತ್ತಿರುವುದು. ಆಕೆಯ ವಿರಹವೆಂಬ ಕಟ್ಟಿಗೆಯಿಂದಲೂ, ಆಕೆಯ ಚಿಂತೆಯೆಂಬ ಜ್ವಾಲೆಯಿಂದಲೂ ಕೂಡಿದ ಕಾಮಾಗ್ನಿಯು, ಹಗಲೂ ರಾತ್ರಿಯೂ ನನ್ನ ದೇಹವನ್ನು ಬಹಳವಾಗಿ ದಹಿಸುತ್ತಿರುವುದು. ವತ್ಸ ಲಕ್ಷ್ಮಣಾ ! ಈ ನನ್ನ ತಾಪವನ್ನು ತಗ್ಗಿಸುವುದಕ್ಕೆ ಬೇರೆ ಉಪಾಯವೇ ಇಲ್ಲ ! ನಿನ್ನನ್ನು ನೋಡುತ್ತಿದ್ದ ಹಾಗೆಲ್ಲಾ ನನಗೆ ಆ ಸೀತೆಯ ಸ್ಮರಣವುಂಟಾಗುವುದು. ಆದುದರಿಂದ [1]ಈಗ ನಾನು ನಿನ್ನನ್ನೂ ಬಿಟ್ಟು, ಈ ಸಮುದ್ರ ಜಲದಲ್ಲಿ ಮುಳುಗಿ ಮಲಗಿಬಿಡು ವೆನು. ಹೀಗೆ ಎಡೆಬಿಡದೆ ನನ್ನನ್ನು ದಹಿಸುತ್ತಿರುವ ಕಾಮಾಗ್ನಿಯು ನೀರಿನಲ್ಲಿ ಮಲಗುವುದರಿಂದಾದರೂ ಸ್ವಲ್ಪವಾಗಿ ಶಾಂತವಾಗಬಹುದು ! ಹೇಗಾದರೂ ಆಗಲಿ ! ಮುಖ್ಯವಾಗಿ ಸೀತೆಯು ಇನ್ನೂ ಬದುಕಿರುವ ಸಂಗತಿಯನ್ನು ಕೇಳಿದೆನು. ಈಗ ನಾನೂ ಆಕೆಯೂ ಒಂದೇ ಭೂಮಿಯನ್ನಾಶ್ರಯಿಸಿದಂತಾಯಿತಲ್ಲವೆ ! ಹೀಗೆ ಬಹಳ ದುಃಖಾಕ್ರಾಂತನಾಗಿರುವ ನನ್ನ ಪ್ರಾಣಗಳನ್ನು ನಿಲ್ಲಿಸಿಡುವುದಕ್ಕೆ, ಈಗ ಇದೊಂದೇ ದೊಡ್ಡ ಸಾಧನವಾಗಿರುವುದು. ಏಕಶಯ್ಯೆಯಲ್ಲಿ ಮಲಗುವಂತೆ ಈಗ ನಾವಿಬ್ಬರೂ ಈ ಒಂದೇ ಭೂಮಿಯನ್ನಾಶ್ರಯಿಸಿರುವುದರಿಂದ, ಇದೇ ನಮ್ಮಿಬ್ಬರಿಗೂ ಜೀವನ ಸಾಧನ ವಾಗಿರುವುದು. ಚೆನ್ನಾಗಿ ಜಲಸಮೃದ್ಧಿಯುಳ್ಳ ಗದ್ದೆಯ ಸಮೀಪದಲ್ಲಿರುವುದರಿಂದ, ನೀರಿಲ್ಲದ ಗದ್ದೆಗೂ ತೇವವೇರುವಂತೆ, ಆ ನನ್ನ ಪ್ರಿಯೆಯು ಬದುಕಿ ಇರುವಳೆಂಬ ಸುದ್ದಿಯನ್ನು ಕೇಳಿಯೇ ನಾನೂ ಈಗ ಬದುಕಿರುವೆನು. ವತ್ಸ ಲಕ್ಷ್ಮಣಾ ! ನಾನು ಆ ನನ್ನ ಶತ್ರುಗಳನ್ನು ಯಾವಾಗ ಜಯಿಸುವೆನು ? ಅಂದವಾದ ನಿತಂಬದಿಂದಲೂ ಕಮಲದಂತೆ ವಿಸ್ತಾರವಾದ ಕಣ್ಣುಗಳಿಂದಲೂ ಶೋಭಿಸುವ ಆ ಸೀತೆಯನ್ನು, ತುಂಬಿದ ಭಾಗ್ಯಲಕ್ಷ್ಮಿಯನ್ನು ಪಡೆಯುವಂತೆ ಯಾವಾಗ ಪಡೆಯುವೆನು? ರೋಗಿಯು ರಸಾಯನವನ್ನು ಕುಡಿಯುವಂತೆ ತಾವರೆಯಂತಿರುವ ಆಕೆಯ ಮುಖವನ್ನು

---

1. ಇಲ್ಲಿ ರಾಮನು, ತಾನು ಲಕ್ಷ್ಮಣನನ್ನು ಬಿಟ್ಟು ಸಮುದ್ರದಲ್ಲಿ ಮಲಗುವುದನ್ನು ವಿಪರೀತ ಪ್ರಕ್ರಿಯೆಯನ್ನಾಗಿ ಹೇಳಿರುವನು. ಇದರಿಂದ ಸಮುದ್ರದಲ್ಲಿಯೂ ತಾನು ಲಕ್ಷ್ಮಣನೊಡನೆ ಸೇರಿ ಮಲಗುವುದೇ ಸಹಜಪ್ರಕ್ರಿಯೆಯಾಗಿ ಧ್ವನಿಸುವುದು. ವಿಷ್ಣುವು ಸಮುದ್ರದಲ್ಲಿ ಶೇಷಶಾಯಿಯಾದುದರಿಂದ ಲಕ್ಷ್ಮಣನು ಶೇಷಾವತಾರವೆಂದು ಇದರಿಂದ ಸೂಚಿತವಾಗುವುದು.

ಸ್ವಲ್ಪವಾಗಿ ಮೇಲಕ್ಕೆತ್ತಿ ತೊಂಡೆಯ ಹಣ್ಣಿನಂತಿರುವ ಆಕೆಯ ತುಟಿಯನ್ನು ನಾನು ಯಾವಾಗ ಪಾನ ಮಾಡುವೆನು? [1]ಆ ನನ್ನ ಪ್ರಿಯೆಯು ಬಂದು ನನ್ನನ್ನು ಪ್ರೀತಿಯಿಂದಪ್ಪುವಾಗ, ತಾಳೆಯ ಹಣ್ಣುಗಳಂತೆ ಉಬ್ಬಿ ಒತ್ತಾಗಿ ಬೆಳೆದ ಆಕೆಯ ಸ್ತನಗಳೆರಡೂ ನನ್ನ ಮೈಯನ್ನು ಯಾವಾಗ ಸೋಕುವುವು? ನನ್ನನ್ನೇ ದಿಕ್ಕಾಗಿ ನಂಬಿದ್ದ ಆ ನೀಲಲೋಚನೆಯು, ಈಗ ರಾಕ್ಷಸರ ಕೈಯಲ್ಲಿ ಸಿಕ್ಕಿಬಿದ್ದು, ಹೀಗೆ ನಾನು ಬದುಕಿರುವಾಗಲೂ ಅನಾಥೆಯಂತೆ ದಿಕ್ಕುಗಾಣದೆ ಕೂಗಿಡುವುದರಲ್ಲಿ ಸಂದೇಹವಿಲ್ಲ! ಹಾ ಕಷ್ಟವೆ! ಜನಕರಾಜನಿಗೆ ಮಗಳಾಗಿ, ನನಗೆ ಕೈಹಿಡಿದ ಹೆಂಡತಿಯಾಗಿ, ದಶರಥ ರಾಜನ ಸೊಸೆ ಎನಿಸಿಕೊಂಡ ಆ ಸೀತೆಯೂ ಹೀಗೆ ಘೋರರಾಕ್ಷಸಿಯರ ನಡುವೆ ಮಲಗುವುದೆಂದರೇನು? ಶರತ್ಕಾಲದಲ್ಲಿ ನೀಲಮೇಘಗಳನ್ನೊದರಿಕೊಂಡು ಹೊರಕ್ಕೆ ಬರುವ ಚಂದ್ರರೇಖೆಯಂತೆ, ಆ ಸೀತೆಯು ಯಾರಿಗೂ ಅಡಗದ ಆ ಘೋರ ರಾಕ್ಷಸಿಯರನ್ನೂ ಧೈರ್ಯದಿಂದೊದರಿಕೊಂಡು ಯಾವಾಗ ನನ್ನ ಮುಂದೆ ಗೋಚರಿಸುವಳೋ! ಆ ಸೀತೆಯೋ ಸಹಜವಾಗಿಯೇ ಕೃಶವಾದ ಮೈಯುಳ್ಳವಳು! ಇದರಮೇಲೆ ಕಾಲ ದೇಶಸ್ಥಿತಿಯು ಹೀಗೆ ವಿಪರೀತವಾಗಿ ಬಂದು, ದುಃಖದಿಂದಲೂ ಉಪವಾಸದಿಂದಲೂ ಇನ್ನೂ ಬಹಳವಾಗಿ ಕೃಶಿಸಿರುವಳು! ಅದರಲ್ಲಿ ಸಂದೇಹವಿಲ್ಲ. ನಾನು ಆ ರಾವಣನ ಎದೆಗೆ ಬಾಣಗಳನ್ನು ನಾಟಿ ತಿರುಗಿ ಸೀತೆಯನ್ನು ಪಡೆದು ನನ್ನಮನೋವ್ಯಾಧಿಯನ್ನು ಯಾವಾಗ ನೀಗಿಸಿಕೊಳ್ಳುವೆನೋ? ದೇವಕನ್ಯೆಯಂತಿರುವ ಆ ಸಾಧ್ವಿಯು ಪ್ರೀತಿಯಿಂದ ಬಂದು ನನ್ನಿಂದಾಲಿಂಗಿತಳಾಗಿ ಯಾವಾಗ ಆನಂದಬಾಷ್ಪವನ್ನು ಬಿಡುವಳೋ! ಕೊಳೆಬಟ್ಟೆಯನ್ನು ತೆಗೆದು ಬಿಸುಡುವಂತೆ ಯಾವಾಗ ನಾನು ಭಯಂಕರವಾದ ಈ ಸೀತಾವಿಯೋಗದುಃಖವನ್ನು ನೀಗಿಬಿಡುವೆನೋ!" ಎಂದು ನಾನಾವಿಧವಾಗಿ ವಿಲಪಿಸುತಿದ್ದನು. ಇಷ್ಟರಲ್ಲಿ ಹಗಲು ಕಳೆದು, ಸೂರ್ಯನ ಕಾಂತಿಯು ಕಂದಿ ಅಸ್ತಮಯವಾಯಿತು. ಆಗ ಲಕ್ಷ್ಮಣನು ರಾಮನಿಗೆ ನಾನಾವಿಧದಿಂದ ಸಮಾಧಾನ ವಾಕ್ಯವನ್ನು ಹೇಳಿ ಅವನಿಗೆ ದುಃಖಶಾಂತಿಯನ್ನು ಮಾಡಿದನು. ಆದರೂ ರಾಮನು ಸೀತೆಯ ಚಿಂತೆಯನ್ನು ಬಿಡದೆ, ದುಃಖಿತನಾಗಿಯೇ ಆಗಿನ ಸಂಧ್ಯಾಕಾರ್ಯವನ್ನು ನಡೆಸಿದನು.

ಇಲ್ಲಿಗೆ ಐದನೆಯ ಸರ್ಗವು

---

1. "ರಾಮನು ತಮ್ಮನಾದ ಲಕ್ಷ್ಮಣನೊಡನೆ ಹೀಗೆ ತನ್ನ ಕಾಮಾವಸ್ಥೆಗಳನ್ನು ಹೇಳಿಕೊಳ್ಳುವುದುಂಟೆ" ಎಂದರೆ, ಲಕ್ಷ್ಮಣನು ರಾಮನಿಗೆ ಸರ್ವವಿಧಸೇವಕನಾದುದರಿಂದ, ಅವನೊಡನೆ ಯಾವ ವಿಷಯವನ್ನು ಹೇಳುವುದೂ ಅನುಚಿತವಲ್ಲವೆಂದು ಗ್ರಾಹ್ಯವು.

ಅತ್ತಲಾಗಿ ಲಂಕೆಯಲ್ಲಿ ರಾವಣನು, ಹನುಮಂತನು ನಡೆಸಿಹೋದ ಕಾರ್ಯಗಳಿಗಾಗಿ ಚಿಂತಿಸುತ್ತ, ಮುಂದೆ ಶತ್ರುಗಳು ದಂಡೆತ್ತಿ ಬರುವು ದಕ್ಕೆ ಮೊದಲು ತಾನು ಮಾಡಬೇಕಾದ ಸನ್ನಾಹಗಳನ್ನು ಕುರಿತು ತನ್ನ ಮಂತ್ರಿಗಳೊಡನೆ ಆಲೋಚಿಸಿದುದು.

ಇಂದ್ರಪರಾಕ್ರಮವುಳ್ಳ ಮಹಾತ್ಮನಾದ ಹನುಮಂತನು, ಲಂಕೆಯಲ್ಲಿ ನಡೆಸಿ ಹೋದ ಭಯಂಕರಕಾರ್ಯಗಳನ್ನು ಕುರಿತು ರಾವಣನ ಮನಸ್ಸಿನಲ್ಲಿ ಬಹಳವಾದ ಕಳವಳವು ಹುಟ್ಟಿತು. ಆ ಕಾರ್ಯಗಳನ್ನು ನೆನೆಸಿಕೊಂಡು ತನಗೆ ತಾನೇ ಲಜ್ಜೆಯಿಂದ ತಲೆಯನ್ನು ತಗ್ಗಿಸಿ, ತನ್ನ ಮುಂದಿದ್ದ ರಾಕ್ಷಸಮಂತ್ರಿಗಳನ್ನು ಕುರಿತು 'ಎಲೆ ಅಮಾತ್ಯರೆ! ಏನಾಶ್ಚರ್ಯವು ! ಯಾವುದೋ ಒಂದು ಸಾಮಾನ್ಯವಾದ ಕಾಡುಕಪಿ ಯಂತಿದ್ದ ಹನುಮಂತನು ದುರ್ಗಮವಾದ ಈ ನಮ್ಮ ಲಂಕೆಗೆ ಪ್ರವೇಶಿಸಿದನಲ್ಲವೆ ? ಅದೂ ಹಾಗಿರಲಿ ! ಈ ನಮ್ಮ ಪಟ್ಟಣವೆಲ್ಲವನ್ನೂ ಕದಲಿಸಿ, ನಾವು ಎಷ್ಟೋ ರಹಸ್ಯವಾಗಿ ಬಚ್ಚಿಟ್ಟಿದ್ದ ಸೀತೆಯನ್ನೂ ಕಂಡುಹೋದನಲ್ಲಾ ! ಅಷ್ಟೇ ಅಲ್ಲ ! ನಮ್ಮ ಚೈತ್ಯಪ್ರಾಸಾದವನ್ನೂ ಮುರಿದು ಕೆಡಹಿದನು ! ಎಷ್ಟೋ ಮಂದಿ ವೀರರಾಕ್ಷಸರನ್ನೂ ಕೊಂದನು ! ಒಂದು ಕಾಡುಕಪಿಯೇ ಹೀಗೆ ಈ ನಮ್ಮ ಲಂಕೆಗೆ ಇಷ್ಟು ದುರವಸ್ಥೆ ಯನ್ನು ತಂದಿಟ್ಟಿತಲ್ಲಾ ! ಇನ್ನು ನಾವು ಮುಂದೆ ನಡೆಸಬೇಕಾದುದೇನು ? ನಮ್ಮೆಲ್ಲರಿಗೂ ಯಾವುದು ಮುಂದೆ ಹಿತವೋ, ಯಾವುದು ನಮ್ಮಿಂದ ಸಾಧ್ಯವೋ, ಮುಂದಿನ ಕಾರ್ಯಕ್ಕೆ ಯಾವುದು ಅನುಕೂಲವೋ ಅದನ್ನು ನೀವೆಲ್ಲರೂ ಯೋಚಿಸಿ ಹೇಳಿರಿ. ನಿಮಗೆ ಶುಭವಾಗಲಿ ! ಒಂದು ವೇಳೆ ನೀವು ಎಣೆಯಿಲ್ಲದ ವೀರ್ಯವುಳ್ಳ ನಮ್ಮಂತಹ ರಾಕ್ಷಸರಿಗೆ ಈ ಮಂತ್ರಾಲೋಚನೆಗಳೇಕೆಂದು ಶಂಕಿಸಬಹುದು. ಮಂತ್ರಾ ಲೋಚನೆಯೇ ಜಯಕ್ಕೆ ಮೂಲವೆಂದು ದೊಡ್ಡವರು ಹೇಳಿರುವರು ಆದುದರಿಂದಲೇ ನಾನು ಈಗ ನಿಮ್ಮೊಡನೆ ರಾಮನ ವಿಷಯವಾಗಿ ಮಂತ್ರಾಲೋಚನೆಯನ್ನು ಮಾಡು ತ್ತಿರುವೆನು. ಲೋಕದಲ್ಲಿ ಪುರುಷರು ಉತ್ತಮರೆಂದೂ ಮಧ್ಯಮರೆಂದೂ ಅಧಮರೆಂದೂ ಮೂರು ಬಗೆಯಾಗಿರುವರು. ಇವರೆಲ್ಲರೂ ಒಟ್ಟಾಗಿಯೇ ಕಲೆತಿರುವುದರಿಂದ ಅವರ ವರ ಸ್ವರೂಪವನ್ನು ಪ್ರತ್ಯೇಕವಾಗಿ ತಿಳಿಯುವುದು ಸುಲಭವಲ್ಲ. ಆದುದರಿಂದ ಈಗ

---

1. ಇದುವರೆಗೆ ಇತ್ತಲಾಗಿ ರಾಮನ ವೃತ್ತಾಂತವನ್ನು ತಿಳಿಸಿ, ಇಲ್ಲಿಂದ ಮುಂದೆ ಅತ್ತಲಾಗಿ ಹನುಮಂತನು ಲಂಕೆಯನ್ನು ಬಿಟ್ಟು ಹೋದಮೇಲೆ ನಡೆದ ರಾವಣನ ವೃತ್ತಾಂತ ವನ್ನಾರಂಭಿಸುವುದಾಗಿ ತಿಳಿಯಬೇಕು.

ನಾನು ನಿಮಗೆ ಅವರ ಗುಣದೋಷಗಳನ್ನು ತಿಳಿಸಬೇಕಾಗಿರುವುದು. ಯಾವನು ಮಂತ್ರಾಲೋಚನೆಗಳನ್ನು ನಿರ್ಣಯಿಸುವುದರಲ್ಲಿ ನಿಪುಣರಾಗಿಯೂ ತನಗೆ ಹಿತೈಷಿಗಳಾಗಿಯೂ, ಇರುವ ಮಂತ್ರಿಗಳೊಡನೆಯಾಗಲಿ, ತನ್ನ ಸುಖದುಃಖಗಳನ್ನೇ ತಮ್ಮ ಸುಖದುಃಖಗಳೆಂದು ಭಾವಿಸುವ ಸ್ನೇಹಿತರೊಡನೆಯಾಗಲಿ, ಯಾವಾಗಲೂ ತನಗೆ ಹಿತವನ್ನು ಕೋರುವ ಬಂಧುಗಳೊಡನೆಯಾಗಲಿ ಸೇರಿ, ಚೆನ್ನಾಗಿ ಆಲೋಚಿಸಿ ಕಾರ್ಯಗಳನ್ನು ನಡೆಸುವನೋ ಯಾವನು ಕೇವಲ ಪುರುಷಪ್ರಯತ್ನವನ್ನೇ ನಂಬದೆ ದೈವದ ಮೇಲೆಯೂ ಭಾರವನ್ನು ಹೊರಿಸುವನೋ, ಅಂತವನು ಪುರುಷರಲ್ಲಿ ಉತ್ತಮನೆನಿಸುವನು. ಯಾವನು ತಾನೊಬ್ಬನೆ ಕಾರ್ಯಗಳನ್ನಾಲೋಚಿಸಿ, ತಾನೊಬ್ಬನೆ ಮನಃಪೂರ್ವಕವಾಗಿ ದೈವವನ್ನು ನಂಬಿ, ತಾನೊಬ್ಬನೆ ನಿಂತು ಆ ಕಾರ್ಯಗಳನ್ನು ನಡೆಸುವನೋ ಅವನು ಮಧ್ಯಮನು. ಯಾವನು ಮುಂದೆ ಬರಬಹುದಾದ ಗುಣದೋಷಗಳನ್ನೂ ನಿಶ್ಚಯಿಸಿಕೊಳ್ಳದೆ, ದೈವವನ್ನೂ ಅಲಕ್ಷ್ಯದಿಂದ ನಡೆಸುವನೋ ಅವನು ನರಾಧಮನು. ಹೀಗೆ ಮನುಷ್ಯರಲ್ಲಿ ಮೂರು ವಿಭಾಗಗಳಿರುವಂತೆ ಮಂತ್ರಾಲೋಚನೆಗಳಲ್ಲಿಯೂ ಉತ್ತಮ ಅಧಮ ಮಧ್ಯಮಗಳೆಂಬ ಮೂರು ಭೇದಗಳುಂಟು. ಮಂತ್ರಿಗಳೆಲ್ಲರೂ ಐಕಮತ್ಯದಿಂದಿದ್ದು, ಚೆನ್ನಾಗಿ ಶಾಸ್ತ್ರಜ್ಞಾನವನ್ನೂ ಹೊಂದಿ ಮನಃಪೂರ್ವಕವಾದ ಆಸಕ್ತಿಯಿಂದ ಯಾವ ಆಲೋಚನೆಯನ್ನು ನಡೆಸುವರೋ ಅದು ಉತ್ತಮಮಂತ್ರವೆನಿಸುವುದು. ಒಂದು ಸಂಗತಿಯನ್ನು ನಿರ್ಣಯಿಸುವಾಗ ಮೊದಲೇ ಅನೇಕರು ಅನೇಕವಿಧವಾದ ಅಭಿಪ್ರಾಯಭೇದವುಳ್ಳವರಾಗಿ ಕೊನೆಗೆ ಎಲ್ಲರೂ ಯಾವುದೋ ಒಂದು ವಿಧದಿಂದ ಏಕಾಭಿಪ್ರಾಯಕ್ಕೆ ಬರುವರೋ ಅದು ಮಧ್ಯಮಮಂತ್ರವೆನಿಸುವುದು. ಯಾವ ವಿಷಯದಲ್ಲಿ ಮಂತ್ರಿಗಳೊಬ್ಬೊಬ್ಬರೂ ತಮ್ಮ ತಮ್ಮ ಅಭಿಪ್ರಾಯವನ್ನೇ ಮುಖ್ಯವಾಗಿಟ್ಟುಕೊಂಡು, ತಮ್ಮ ಹಟವನ್ನು ಬಿಡದೆ ವಾದಮಾಡುತ್ತ ಪರಸ್ಪರಪ್ರೀತಿಯೂ ಇಲ್ಲದೆ ಐಕಮತ್ಯದಲ್ಲಿಯೂ ದೃಷ್ಟಿಯಿಲ್ಲದಿರುವರೋ ಅವರಿಂದುಂಟಾದ ಆಲೋಚನೆಯು ಅಧಮ ಮಂತ್ರವೆನಿಸುವುದು. ಆದುದರಿಂದ ಬುದ್ಧಿವಂತರಾದ ನೀವೆಲ್ಲರೂ ಈ ವಿಷಯವನ್ನು ಐಕಮತ್ಯದಿಂದ ಚೆನ್ನಾಗಿ ಪರ್ಯಾಲೋಚಿಸಿ, ಮುಂದೆ ಯಾವುದು ಯುಕ್ತವೆಂಬುದನ್ನು ನಿಶ್ಚಯಿಸಿ ಹೇಳಬೇಕು. ಹೀಗೆ ನೀವೆಲ್ಲರೂ ಐಕಮತ್ಯದಿಂದ ನಿಶ್ಚಯಿಸಿದ ಕಾರ್ಯವೇ ನನಗೆ ಅವಶ್ಯಕೃತ್ಯವು. ಅದನ್ನೇ ನಡೆಸಬೇಕೆಂಬುದೂ ನನ್ನ ಮುಖ್ಯಾಭಿಪ್ರಾಯವು. ಇದು ನಾವು ಸುಮ್ಮನೆ ಉದಾಸೀನರಾಗಿರುವುದು ಯುಕ್ತವಲ್ಲ. ರಾಮನು ಮಹಾವೀರರಾದ ಸಾವಿರಾರುಮಂದಿ ವಾನರರೊಡನೆ

ನಮ್ಮ ಈ ಲಂಕೆಗೆ ಮುತ್ತಿಗೆ ಹಾಕುವುದಕ್ಕಾಗಿ ಬರುವನು. ಈ ಸಮುದ್ರವನ್ನು ದಾಟುವುದೂ ಅವರಿಗೊಂದು ಕಷ್ಟವಲ್ಲ. ಅವನು ತಮ್ಮನಾದ ಲಕ್ಷ್ಮಣನೊಡನೆಯೂ ಸುಗ್ರೀವನೇ ಮೊದಲಾದ ಅನುಚರರೊಡನೆಯೂ ಸೇರಿ ಬಂದು ಇಲ್ಲಿ ತನ್ನ ಪೂರ್ಣ ಶಕ್ತಿಯನ್ನು ತೋರಿಸದೆ ಬಿಡನು. ಆತನು ತನ್ನ ವೀರ್ಯದಿಂದ ಈ ಸಮುದ್ರವನ್ನೇ ಶೋಷಿಸಿಯೋ ಅಥವಾ ಸೇತುಬಂಧನವೇ ಮೊದಲಾದ ಬೇರೆ ಉಪಾಯದಿಂದಲೋ ಸುಖವಾಗಿ ಇಲ್ಲಿಗೆ ಬರಬಲ್ಲನೆಂದೂ ನನಗೆ ತೋರಿರುವುದು. ಹೀಗೆ ನಮಗೂ ವಾನರರಿಗೂ ವಿರೋಧವು ಹೆಚ್ಚಿಬಂದಿರುವುದರಿಂದ, ಆ ಕಾಲಕ್ಕೆ ನಮ್ಮ ಪಟ್ಟಣಕ್ಕೂ ನಮ್ಮ ಸೈನ್ಯಕ್ಕೂ ಅಪಾಯವಿಲ್ಲದಂತೆ ಕಾಪಾಡಿಕೊಳ್ಳುವ ದಾರಿಯೇನೆಂದು ಈಗಲೇ ನೀವು ಚೆನ್ನಾಗಿ ಹೇಳಿರಿ" ಎಂದನು.

ಇಲ್ಲಿಗೆ ಆರನೆಯ ಸರ್ಗವು.

ಮಂತ್ರಿಗಳು ಶತ್ರುಬಲವನ್ನು ತಿಳಿಯದೆ, ಆ ರಾವಣನ
ಪರಾಕ್ರಮಗಳನ್ನೇ ಹೊಗಳುತ್ತ, ಮುಖಸ್ತುತಿಮಾಡಿ
ಅವನನ್ನು ಪ್ರೋತ್ಸಾಹಿಸಿದುದು.

ಅಲ್ಲಿನ ರಾಕ್ಷಸರೆಲ್ಲರೂ ಬಹಳ ಬಲಾಢ್ಯರಾಗಿದ್ದರೂ, ರಾಜನೀತಿಯನ್ನರಿಯದವರಾಗಿಯೂ, ಬುದ್ಧಿ ಹೀನರಾಗಿಯೂ ಇದ್ದುದರಿಂದ, ಶತ್ರುಬಲವನ್ನು ತಿಳಿಯದೆ, ಅವರೆಲ್ಲರೂ ಒಟ್ಟಾಗಿ ಆ ರಾವಣನ ಮುಂದೆ ಕೈಮುಗಿದು ನಿಂತು ಅವನ ಮಾತಿಗೆ ಪ್ರತ್ಯುತ್ತರವಾಗಿ, "ಎಲೆ ಮಹಾರಾಜನೆ ! ಇದೀಗ ಚೆನ್ನಾಯಿತು ! ನೀನೂ ಹೀಗೆ ಶತ್ರುಗಳಿಗೆ ಹೆದರುವುದೆಂದರೇನು ? ನಮ್ಮಲ್ಲಿರುವ ಈ ಮಹಾಗದೆಗಳೇನು ? ಈ ನಮ್ಮ ಈಟಿಗಳೇನು ? ಈ ನಮ್ಮ ಖಡ್ಗಗಳೇನು ? ಈ ನಮ್ಮ ಶೂಲಗಳೇನು ? ನಮ್ಮ ಪಟ್ಟಸಗಳೇನು ? ಹೀಗೆ ಅನೇಕ ಶಸ್ತ್ರ ಸಮೃದ್ಧಿಯುಳ್ಳ ಇಷ್ಟು ದೊಡ್ಡ ಸೈನ್ಯವು ನಿನ್ನ ವಶದಲ್ಲಿರುವಾಗಲೂ ನೀನು ಹೀಗೆ ಭಯಪಡುವುದುಂಟೆ ? ಈ ಸೈನ್ಯಗಳೂ ಹಾಗಿರಲಿ ! ನೀನೊಬ್ಬನೇ ಸಾಲದೆ ? ನೀನು ಹಿಂದೆ ಮಾಡಿರುವ ಕೆಲಸಗಳನ್ನಾದರೂ ನೆನೆಸಿಕೊಂಡು ನೋಡು ! ಪಾತಾಳದಲ್ಲಿರುವ ಭೋಗವತಿಗೆ ಹೋಗಿ ಅಲ್ಲಿನ ಯುದ್ಧದಲ್ಲಿ ಎಷ್ಟೋಮಂದಿ ಪನ್ನಗರನ್ನು ಜಯಿಸಿಬಂದಿರುವೆ ! ಅನೇಕ ಯಕ್ಷರೊಡಗೂಡಿ ಕೈಲಾಸ ಶಿಖರದಲ್ಲಿದ್ದ ಕುಬೇರನೊಡನೆಯೂ ದೊಡ್ಡ ಯುದ್ಧ

ವನ್ನು ಮಾಡಿ, ಅವನನ್ನು ನಿನ್ನ ಕೈವಶಮಾಡಿಕೊಂಡಿರುವೆ! ಆ ಕುಬೇರನೋ ಈಶ್ವರನಿಗೆ ಪರಮಮಿತ್ರನೆಂದು ಪ್ರಸಿದ್ಧನಾದವನು! ಲೋಕಪಾಲಕನು! ಮಹಾ ಬಲಾಢ್ಯನು! ಅಂತಹ ಕುಬೇರನನ್ನೇ ನೀನು ಯುದ್ಧದಲ್ಲಿ ಜಯಿಸಿಬಂದವನಲ್ಲವೆ? ಮತ್ತು ನೀನು ಅಲ್ಲಿನ ಯಕ್ಷರನ್ನು ಗುಂಪುಗುಂಪಾಗಿ ಹಿಡಿದುತಂದು, ಕೆಲವರನ್ನು ನಿಗ್ರಹಿಸಿ, ಕೆಲವರನ್ನು ಸೆರೆಹಿಡಿದು ಕೈಲಾಸ ಶಿಖರದಿಂದ ಪುಷ್ಪಕ ವಿಮಾನವನ್ನೂ ತಂದವನಲ್ಲವೆ? ಎಲೆ ರಾಕ್ಷಸೇಂದ್ರನೇ! ಪೂರ್ವದಲ್ಲಿ ದಾನವೇಂದ್ರನಾದ ಮಯನು, ನಿನ್ನ ಭಯಕ್ಕಾಗಿ ನಿನ್ನೊಡನೆ ಸ್ನೇಹವನ್ನು ಬಯಸಿ, ತನ್ನ ಮಗಳಾದ ಮಂಡೋ ದರಿಯನ್ನು ನಿನಗೆ ಕೊಟ್ಟು ಮದುವೆಮಾಡಲಿಲ್ಲವೆ? ಪರಾಕ್ರಮದಿಂದ ಕೊಬ್ಬಿ, ಎಂತವರಿಗೂ ದುರ್ಜಯನೆನಿಸಿಕೊಂಡು, ನಿನ್ನ ತಂಗಿ ಕುಂಭೀನಸಿಗೆ ಪ್ರಿಯಪತಿ ಯಾದ ಮಧುವೆಂಬ ದಾನವೇಂದ್ರನನ್ನೂ ನೀನು ಯುದ್ಧದಲ್ಲಿ ನಿಗ್ರಹಿಸಿ ಅವನನ್ನು ನಿನ್ನ ವಶಪಡಿಸಿಕೊಂಡವನಲ್ಲವೆ? ಎಲೆ ಮಹಾಬಾಹೂ! ಇದಲ್ಲದೆ ನೀನು ರಸಾತಲಕ್ಕೆ ಹೋಗಿ ಅಲ್ಲಿದ್ದ ವಾಸುಕಿಯನ್ನೂ, ತಕ್ಷಕನನ್ನೂ,ಶಂಖನನ್ನೂ,ಇನ್ನೂ ಅವನಕಡೆಯ ಅನೇಕ ನಾಗರನ್ನೂ ಜಯಿಸಿ ವಶಪಡಿಸಿಕೊಂಡವನಲ್ಲವೆ? ತುಂಡುತುಂಡಾಗಿ ಕಡಿದರೂ ತಿರುಗಿ ಮೇಲೆದ್ದು ಯುದ್ಧಕ್ಕೆ ನಿಲ್ಲುವಂತೆ ವರವನ್ನು ಪಡೆದವರಾಗಿಯೂ, ನಾಶರಹಿತ ರಾಗಿಯೂ, ಬಲಾಢ್ಯರಾಗಿಯೂ, ಶೂರರಾಗಿಯೂ ಇದ್ದ ಕಾಲಕೇಯರೆಂಬ ರಾಕ್ಷಸರು ನಿನ್ನೊಡನೆ ಒಂದು ಸಂವತ್ಸರದ ವರೆಗೆ ಯುದ್ಧಮಾಡಿ ಕೊನೆಗೂ ನಿನಗೆಸೋತು ನಿನ್ನ ವಶರಾದುದನ್ನು ಮರೆತುಬಿಟ್ಟೆಯಾ? ಎಲೆ ರಾಜೇಂದ್ರನೆ! ಇದಲ್ಲದೆ ಅವರಿಂದ ನೀನು ಎಷ್ಟೋವಿಧಗಳಾದ ಮಾಯೆಗಳನ್ನೂ ತಿಳಿದು ಕೊಂಡಿರುವವನು! ಬಲಾಢ್ಯರಾದ ಎಷ್ಟೋಮಂದಿ ದಿಕ್ಪಾಲಕರನ್ನೂ ಓಡಿಸಿದವನು! ದೇವಲೋಕಕ್ಕೆ ಹೋಗಿ ದೇವೇಂದ್ರನನ್ನೂ ಜಯಿಸಿಬಂದವನು! ಶೂರರಾಗಿಯೂ, ಬಲಾಢ್ಯರಾಗಿಯೂ, ಚತುರಂಗಬಲ ಸಹಿತರಾಗಿಯೂ ಇದ್ದ ವರುಣಪುತ್ರರೂಕೂಡ ಯುದ್ಧದಲ್ಲಿ ನಿನ್ನಿಂದ ಪರಾಜಿತರಾಗಿರುವರು! ಮಹಾಪ್ರಭೂ! ಇವೆಲ್ಲವೂ ಹಾಗಿ ರಲಿ! ಯಮದಂಡವೆಂಬ ದೊಡ್ಡ ಮೊಸಳೆಯಿಂದಲೂ, ಶಾಲ್ಮಲಿಯೆಂದು ಹೆಸರು ಗೊಂಡ ಆಯುಧಗಳೆಂಬ ವೃಕ್ಷಗಳಿಂದಲೂ, ಯಮಪಾಶವೆಂಬ ದೊಡ್ಡ ಅಲೆ ಗಳಿಂದಲೂ, ಯಮಕಿಂಕರರೆಂಬ ಕ್ರೂರಸರ್ಪಗಳಿಂದಲೂ ತುಂಬಿ, ಮಹಾಸಮುದ್ರ ದಂತಿದ್ದ ಯಮನ ಸೈನ್ಯವನ್ನೂ ಕೂಡ ನೀನು ಯುದ್ಧದಲ್ಲಿ ನಿರ್ಭಯವಾಗಿ ಪ್ರವೇಶಿಸಿ ಆಯಮನನ್ನೂ ಓಡಿಸಿ ದೊಡ್ಡ ಜಯವನ್ನು ಪಡೆದುಬಂದವನಲ್ಲವೆ? ಮೊದಲು

ನೀನು ನಡೆಸಿದ ಸ್ವಲ್ಪ ಯುದ್ಧದಿಂದಲೇ ಸಮಸ್ತಲೋಕಗಳೂ ನಡುಗಿಹೋಗಿರುವುವು. ನೀನು ಹಿಂದೆ ಜಯಪ್ರಯಾಣಕ್ಕೆ ಹೊರಟಕಾಲದಲ್ಲಿಯೇ ಇಂದ್ರನಿಗೆಣೆಯಾದ ಪರಾಕ್ರಮವುಳ್ಳ ಎಷ್ಟೋಮಂದಿ ವೀರಕ್ಷತ್ರಿಯರು ಈ ಸಮಸ್ತಭೂಮಿಯನ್ನೂ ಎಡೆಬಿಡದೆ ತುಂಬಿದ್ದರು. ಅವರಲ್ಲಿ ಯಾರೊಬ್ಬರೂ ನಿನ್ನನ್ನು ಇದಿರಿಸಿ ನಿಲ್ಲಲಾರದೆ ಪರಾಜಿತರಾದರು. ಈ ರಾಮನು ಪರಾಕ್ರಮದಲ್ಲಿಯಾಗಲಿ, ಉತ್ಸಾಹದಲ್ಲಿಯಾಗಲಿ, ಎಷ್ಟು ಮಾತ್ರವೂ ಅವರಿಗೆ ಸಮನಲ್ಲ. ಅಂತಹ ಕ್ಷತ್ರಿಯರನ್ನೇ ನೀನು ನಿನ್ನ ವೀರ್ಯದಿಂದ ಕೊಂದು ಬಂದಿರುವಾಗ, ಈ ರಾಮನು ನಿನಗೆ ಎಷ್ಟುಮಾತ್ರದವನು ? ಆದುದರಿಂದ ಎಲೆ ಮಹಾರಾಜನೆ ! ನೀನು ಇಲ್ಲಿಯೇ ಸುಮ್ಮನಿರು ! ವ್ಯರ್ಥವಾಗಿ ಹೀಗೆ ಚಿಂತಿಸಿ ಶ್ರಮಪಡುವುದರಿಂದೇನು ? ಆ ಕಪಿಗಳನ್ನಡಗಿಸುವುದಕ್ಕೆ ಇದೋ ! ಮಹಾಬಾಹುವಾದ ಈ ಇಂದ್ರಜಿತ್ತೊಬ್ಬನೇ ಸಾಕು ! ಈತನು ಪೂರ್ವದಲ್ಲಿ ಮಹೇಶ್ವರನನ್ನು ಕುರಿತು ಒಂದು ದೊಡ್ಡಯಜ್ಞವನ್ನುಮಾಡಿ, ಬೇರೊಬ್ಬರಿಗೆ ದುರ್ಲಭವಾದ ವರವನ್ನು ಪಡೆದು ಬಂದಿರುವನು. ಮತ್ತು ಈತನು ಶಕ್ತಿತೋಮರಗಳೆಂಬ ಮೀನುಗಳಿಂದಲೂ, ಕಿತ್ತುಬಿದ್ದ ನರಗಳೆಂಬ ಪಾಚಿಯಿಂದಲೂ, ಆನೆಗಳೆಂಬ ದೊಡ್ಡ ಆಮೆಗಳಿಂದಲೂ, ಕುದುರೆಗಳೆಂಬ ಕಪ್ಪೆಗಳಿಂದಲೂ, ರುದ್ರಾದಿತ್ಯರೆಂಬ ದೊಡ್ಡ ಮೊಸಳೆಗಳಿಂದಲೂ, ಮರುತ್ತುಗಳೆಂದೂ, ವಸುಗಳೆಂದೂ ಪ್ರಸಿದ್ಧರಾದ ದೇವತೆಗಳೆಂಬ ಮಹಾಸರ್ಪಗಳಿಂದಲೂ, ರಥಗಜತುರಗಗಳೆಂಬ ಜಲಸಮೂಹಗಳಿಂದಲೂ, ಕಾಲಾಳುಗಳೆಂಬ ದೊಡ್ಡ ಮಳಲುದಿಣ್ಣೆಗಳಿಂದಲೂ ಕೂಡಿದ ದೇವಸೈನ್ಯವೆಂಬ ಮಹಾಸಾಗರವನ್ನೂ ಪ್ರವೇಶಿಸಿ, ಅಲ್ಲಿ ದೇವೇಂದ್ರನನ್ನು ಹಿಡಿದು ಬಂಧಿಸಿ ನಮ್ಮ ಲಂಕೆಗೆ ತಂದಿಟ್ಟವನಲ್ಲವೆ ? ಎಲೆ ರಾಜನೆ! ಆಗ ಬ್ರಹ್ಮನ ಮಾತಿನಂತೆ ನೀನೇ ಆ ಇಂದ್ರನನ್ನು ಬಿಡಿಸಿ ಕಳುಹಿಸಿದೆ ! ಆಮೇಲೆಯೇ ಇಂದ್ರನು ಸಮಸ್ತ ದೇವತೆಗಳಿಂದಲೂ ನಮಸ್ಕೃತನಾಗಿ ಸ್ವರ್ಗದಲ್ಲಿ ಸೇರಿಕೊಂಡನು. ಎಲೆ ಮಹಾರಾಜನೆ ! ಈಗಲೂ ನೀನು ಅಂತಹ ಮಹಾವೀರ್ಯವುಳ್ಳ ನಿನ್ನ ಮಗನಾದ ಇಂದ್ರಜಿತ್ತನ್ನೇ ಯುದ್ಧಕ್ಕೆ ಕಳುಹಿಸು. ಇವನೇ ಆ ರಾಮನನ್ನೂ, ಅವನ ಕಡೆಯ ಕಪಿಸೈನ್ಯವನ್ನೂ ಕ್ಷಣಮಾತ್ರದಲ್ಲಿ ಕೊಂದುಬರುವನು. ಈ ಅಲ್ಪಕಾರ್ಯಕ್ಕಾಗಿ ನಿನಗೆ ಇಷ್ಟು ಚಿಂತೆಯೇಕೆ ? ಕೇವಲ ಕ್ಷುದ್ರನಾದ ಯಾವನೋ ವಾನರನಿಂದ ನಮಗೆ ಆಕಸ್ಮಾತ್ತಾಗಿ ಈ ಅಪಾಯವು ಬಂದೊದಗಿತು. ಆದರೇನು ? ಇದಕ್ಕಾಗಿ ನೀನು ಮನಸ್ಸಿನಲ್ಲಿ ಎಷ್ಟುಮಾತ್ರವೂ ವಿಷಾದಪಡಕೂಡದು" ಎಂದರು.

ಇಲ್ಲಿಗೆ ಏಳನೆಯ ಸರ್ಗವು

ಪ್ರಹಸ್ತ, ದುರ್ಮುಖ, ವಜ್ರದಂಷ್ಟ್ರ, ನಿಕುಂಭರೆಂಬ ನಾಲ್ಕು ಮಂದಿ ರಾಕ್ಷಸಸೇನಾಧಿಪತಿಗಳು ರಾವಣನ ಮುಂದೆ ತಮ್ಮ ಪರಾಕ್ರಮಗಳನ್ನು ಹೊಗಳಿಕೊಂಡುದು.

ಆಮೇಲೆ ಕಾಳಮೇಘದಂತೆ ಕಪ್ಪುಮೈಯುಳ್ಳ ಮಹಾಶೂರನಾದ ಪ್ರಹಸ್ತನೆಂಬ ರಾಕ್ಷಸಸೇನಾಪತಿಯು ಕೋಪದಿಂದೆದ್ದು ರಾವಣನ ಮುಂದೆ ಕೈಮುಗಿದು ನಿಂತು, "ಎಲೆ ಮಹಾರಾಜನೆ! ದೇವತೆಗಳಾಗಲಿ, ದಾನವರಾಗಲಿ, ಗಂಧರ್ವರಾಗಲಿ, ಪಿಶಾಚರಾಗಲಿ, ನಾಗರಾಗಲಿ, ಪನ್ನಗರಾಗಲಿ, ಯಾರೂ ನಿನ್ನನ್ನು ಯುದ್ಧದಲ್ಲಿ ಇದಿರಿಸಲಾರರು. ಇನ್ನು ಆ ಕಪಿಗಳ ಪಾಡೇನು? ಹಿಂದೆ ನಾವೆಲ್ಲರೂ ಅಷ್ಟಾಗಿ ಎಚ್ಚರಿಕೆಯಿಲ್ಲದೆ ನಮ್ಮನ್ನು ಯಾರೂ ಇದಿರಿಸಲಾರರೆಂಬ ನಂಬಿಕೆಯಿಂದ ಉದಾಸೀನರಾಗಿದ್ದು ಮೋಸಹೋದೆವು. ಆ ಸಮಯದಲ್ಲಿ ಹನುಮಂತನೆಂಬ ವಾನರನು ಅಕಸ್ಮಾತ್ತಾಗಿ ಲಂಕೆಗೆ ಪ್ರವೇಶಿಸಿ ನಮ್ಮನ್ನು ವಂಚಿಸಿಬಿಟ್ಟನು. ಹಾಗಿಲ್ಲದ ಪಕ್ಷದಲ್ಲಿ ನಾನು ಜೀವಿಸಿರುವಾಗ, ಆ ಕಪಿಯು ಇಲ್ಲಿಂದ ಬದುಕಿ ಹೋಗುವುದೆಂದರೇನು? ಸ್ವಾಮಿ! ಈಗಲೂ ಚಿಂತೆಯಿಲ್ಲ! ಪರ್ವತಾರಣ್ಯಗಳಿಂದ ತುಂಬಿದ ಸಮುದ್ರಮೇಖಲೆಯಾದ ಈ ಸಮಸ್ತಭೂಮಿಯನ್ನೂ ವಾನರರ ಹುಟ್ಟೇ ಇಲ್ಲದಂತೆ ಮಾಡಿಬರುವೆನು ನೋಡು! ನನಗೆ ಆಜ್ಞೆಯನ್ನು ಕೊಡು! ನಾನೊಬ್ಬನೇ ನಿಂತು ಈ ಲಂಕೆಗೂ ಯಾವ ಅಪಾಯವೂ ಇಲ್ಲದಂತೆ ನೋಡಿಕೊಳ್ಳುವೆನು! ನೀನು ಸೀತೆಯನ್ನು ಕದ್ದು ತಂದ ತಪ್ಪಿಗಾಗಿ ಮನಸ್ಸಿನಲ್ಲಿ ಹೆದರಬೇಕಾದುದೂ ಇಲ್ಲ! ನಿನ್ನ ಶತ್ರುಗಳಿಂದ ಯಾವ ಭಯವೂ ಇಲ್ಲ" ಎಂದನು. ಆಮೇಲೆ ದುರ್ಮುಖನೆಂಬ ರಾಕ್ಷಸನು ಕೋಪದಿಂದೆದ್ದು "ಎಲೆ ರಾಜೇಂದ್ರನೆ! ಯಾವುದೋ ಒಂದು ಕಾಡುಕಪಿಯು ಬಂದು, ನಮ್ಮೆಲ್ಲರಿಗೂ ಇಷ್ಟು ತಿರಸ್ಕಾರವನ್ನು ಮಾಡಿತಲ್ಲವೆ? ಇದನ್ನು ಮಾತ್ರ ಎಂದಿಗೂ ನಾವು ಕ್ಷಮಿಸಬಾರದು! ನಮ್ಮ ಪಟ್ಟಣಕ್ಕೂ ಮಹತ್ತಾದ ಅವಮಾನವುಂಟಾಗಿರುವುದು. ರಾಕ್ಷಸಚಕ್ರವರ್ತಿಯೆನಿಸಿಕೊಂಡ ಶ್ರೀಮಂತನಾದ ನಿನಗೂ ಆ ಕಾಡುಕಪಿಯಿಂದ ದೊಡ್ಡ ತಿರಸ್ಕಾರವುಂಟಾದಮೇಲೆ ಎಷ್ಟುಮಾತ್ರವೂ ಕ್ಷಮಿಸತಕ್ಕುದಲ್ಲ! ಈ ಮುಹೂರ್ತದಲ್ಲಿಯೇ ನಾನೊಬ್ಬನೇ ಹೋಗಿ ಆ ಕಪಿಗಳೆಲ್ಲರನ್ನೂ ಕೊಂದು ಹಿಂತಿರುಗಿಬರುವೆನು. ಆ ಕಪಿಗಳು ಭಯಂಕರವಾದ ಈ ಸಮುದ್ರದಲ್ಲಿ ಮುಳುಗಿಕೊಂಡರೂ ಆಕಾಶಕ್ಕೆ ಹಾರಿದರೂ, ಪಾತಾಳಕ್ಕೆ ಪ್ರವೇಶಿಸಿದರೂ ನಾನು ಬಿಡುವವನಲ್ಲ!" ಎಂದನು. ಆಮೇಲೆ ಮಹಾಬಲಾಢ್ಯನಾದ ವಜ್ರದಂಷ್ಟ್ರನೆಂಬ ಸೇನಾಪತಿಯು,

ರಕ್ತಮಾಂಸಕರವಾದ ತನ್ನ ಪರಿಘಾಯುಧವನ್ನೆತ್ತಿ ಹಿಡಿದು, ರಾವಣನನ್ನು ನೋಡಿ, “ಸ್ವಾಮಿ! ನಮ್ಮ ಭಯಕ್ಕಾಗಿ ರಾತ್ರಿಯಲ್ಲಿ ರಹಸ್ಯವಾಗಿ ಈ ಲಂಕೆಗೆ ಬಂದು ಹೋದ ಅತ್ಯಲ್ಪನಾದ ಆ ಹನುಮಂತನ ವಿಷಯದಲ್ಲಿ ನೀವು ನಡೆಸಬೇಕಾದ ಕಾರ್ಯವೇನಿರುವುದು? ಅಯ್ಯೋಪಾಪ! ಗುಬ್ಬಿಯಮೇಲೆ ಬ್ರಹ್ಮಾಸ್ತ್ರದಂತೆ ಆ ಕಪಿಯಮೇಲೆ ನಿಮ್ಮ ಕೋಪವೆ? ಸುಗ್ರೀವನೊಡನೆಯೂ, ಲಕ್ಷ್ಮಣನೊಡನೆಯೂ ಸೇರಿದ ಆ ರಾಮುನು ನಮಗೆ ದುರ್ಜಯನಾಗಿರುವಾಗ ಅವನನ್ನು ಬಿಟ್ಟು ಆ ಕಪಿಯ ಮೇಲೆ ಕೋಪವನ್ನು ತೋರಿಸಿದುದರಿಂದೇನು? ಎಲೆ ಮಹಾರಾಜನೆ! ಇದೋ? ನಾನೊಬ್ಬನೇ ಈ ನನ್ನ ಪರಿಘದಿಂದ, ರಾಮನನ್ನೂ ಅವನಿಗೆ ಬೆಂಬಲವಾಗಿರುವ ಲಕ್ಷ್ಮಣಸುಗ್ರೀವರನ್ನೂ ಕೊಂದು, ಅಲ್ಲಿನ ಕಪಿಸೈನ್ಯವೆಲ್ಲವನ್ನೂ ಕ್ಷಣಮಾತ್ರದಲ್ಲಿ ಕದಲಿಸಿ ಬರುವೆನು. ಆದರೆ ನನ್ನ ಇದೊಂದು ಮಾತನ್ನು ಲಾಲಿಸಿ ಕೇಳಬೇಕು. ಉಪಾಯಕುಶಲನಾಗಿ ಎಚ್ಚರಿಕೆಯುಳ್ಳವನೇ ಶತ್ರುಗಳನ್ನು ಜಯಿಸುವನು. ಆದುದರಿಂದ ನಮ್ಮಲ್ಲಿ ಕಾಮರೂಪಿಗಳಾಗಿಯೂ, ಕ್ರೂರಸ್ವಭಾವವುಳ್ಳವರಾಗಿಯೂ, ಭಯಂಕರಾಕಾರವುಳ್ಳವರಾಗಿಯೂ ಇರುವ ಕೆಲವು ರಾಕ್ಷಸರು ಒಂದಾಗಿ ಸೇರಿ, ಮನುಷ್ಯರೂಪವನ್ನು ಧರಿಸಿ ರಾಮನ ಬಳಿಗೆ ಹೋಗಲಿ! ಅಲ್ಲಿ ಅವರೆಲ್ಲರೂ ನಿಂತು ಅವನನ್ನು ನೋಡಿ, “ನಿನ್ನ ತಮ್ಮನಾದ ಭರತನು ನಮ್ಮನ್ನು ಕಳುಹಿಸಿರುವನು. ನಿನ್ನನ್ನು ಕರೆಸಿಕೊಳ್ಳುವುದಕ್ಕಾಗಿ ಬೇಕಾದ ಪ್ರಯತ್ನಗಳನ್ನೂ ನಡೆಸಿರುವನು” ಎಂದು ಹೇಳಲಿ. ಇದನ್ನು ಕೇಳಿ ರಾಮನು ತನ್ನ ಸೇನೆಯನ್ನು ಅಲ್ಲಿಯೇ ನಿಲ್ಲಿಸಿ ಶೀಘ್ರದಲ್ಲಿಯೇ ಹೊರಟುಹೋಗುವನು. ಇಷ್ಟರಲ್ಲಿ ನಾವು ಇಲ್ಲಿಂದ ಶೂಲಗಳನ್ನೂ, ಶಕ್ತಿಗಳನ್ನೂ, ಗದೆಗಳನ್ನೂ, ಬಿಲ್ಲುಬಾಣಗಳನ್ನೂ, ಕತ್ತಿಗಳನ್ನೂ ಹಿಡಿದು ಬೇಗನೆ ಅಲ್ಲಿಗೆ ಹೋಗುವೆವು. ಅಲ್ಲಿ ಗುಂಪುಗುಂಪಾಗಿ ಆಕಾಶದಿಂದ ಕಲ್ಲುಗಳನ್ನೂ, ಆಯುಧಗಳನ್ನೂ ವರ್ಷಿಸಿ, ಸಮಸ್ತ ವಾನರಸೈನ್ಯಗಳನ್ನೂ ಕೊಂದು ಯಮಪುರಿಗೆ ಕಳುಹಿಸುವೆವು. ಹೀಗಾದರೆ ಆ ರಾಮಲಕ್ಷ್ಮಣರಿಬ್ಬರೂ ನಮ್ಮನ್ನು ನಂಬಿ ಮೋಸ ಹೋಗುವರಲ್ಲದೆ, ತಮಗೆ ತಕ್ಕ ಸಹಾಯವಿಲ್ಲದುದಕ್ಕಾಗಿ ಕೊನೆಗೆ ತಾವೇ ಪ್ರಾಣವನ್ನೂ ಬಿಡುವರು” ಎಂದನು. ಆಮೇಲೆ ಕುಂಭಕರ್ಣನ ಮಗನಾದ ನಿಕುಂಭನೆಂಬ ಸೇನಾಪತಿಯು ಕೋಪದಿಂದೆದ್ದು, ರಾವಣನ ಮುಂದೆ ನಿಂತು, ಅಲ್ಲಿದ್ದ ಸಮಸ್ತ ರಾಕ್ಷಸರನ್ನೂ ನೋಡಿ “ಎಲೆ ರಾಕ್ಷಸರೆ! ನೀವೆಲ್ಲರೂ ನಮ್ಮ ಮಹಾರಾಜರೊಡನೆ ಇಲ್ಲಿಯೇ ಸುಮ್ಮನಿರಿ! ನಾನೊಬ್ಬನೇ ಹೋಗಿ, ಲಕ್ಷ್ಮಣಸಹಿತನಾದ ರಾಮನನ್ನೂ,

ಸುಗ್ರೀವನನ್ನೂ, ಹನುಮಂತನನ್ನೂ, ಸಮಸ್ತ ವಾನರರನ್ನೂ ಕೊಂದು ಬರುವೆನು" ಎಂದನು. ಆಮೇಲೆ ಪರ್ವತಾಕಾರವುಳ್ಳ ವಜ್ರಹನುವೆಂಬ ರಾಕ್ಷಸನು ಕೋಪದಿಂದೆದ್ದು, ನಾಲಗೆಯಿಂದ ತುಟಿಯನ್ನು ಸವರುತ್ತ, "ಎಲೆ ರಾಕ್ಷಸರೆ! ನೀವೆಲ್ಲರೂ ಇಲ್ಲಿ ನಿಮಗಿಷ್ಟಬಂದಂತೆ ನಿಮ್ಮ ನಿಮ್ಮ ಕಾರ್ಯಗಳನ್ನು ನೋಡುತ್ತಿರಿ! ಹೆದರಬೇಡಿರಿ ನಾನೊಬ್ಬನೇ ಆ ವಾನರರೆಲ್ಲರನ್ನೂ ತಿಂದು ತೀರಿಸುವೆನು. ನೀವು ನಿಶ್ಚಿಂತರಾಗಿ ಮದ್ಯವನ್ನು ಕುಡಿಯುತ್ತ [1]ಸ್ವಸ್ಥರಾಗಿರಬಹುದು. ನಾನೊಬ್ಬನೇ ಹೋಗಿ ಸುಗ್ರೀವನನ್ನೂ, ಲಕ್ಷ್ಮಣನನ್ನೂ, ಅಂಗದನನ್ನೂ, ಹನುಮಂತನನ್ನೂ, ಮತ್ತು ಯುದ್ಧದಲ್ಲಿ ಕೊಬ್ಬಿದ ಆ ರಾಮನನ್ನೂ ಕೊಂದು ಬರುವೆನು" ಎಂದನು.

ಇಲ್ಲಿಗೆ ಎಂಟನೆಯ ಸರ್ಗವು.

ನಿಕುಂಭನ ಮಾತಿನಂತೆ ಅಲ್ಲಿದ್ದ ಬೇರೆ ರಾಕ್ಷಸರೂ ಯುದ್ಧೋದ್ಯುಕ್ತರಾಗಿ ನಿಲ್ಲಲು, ವಿಭೀಷಣನು ಅವರಿಗೆ ಹಿತವಾದವನ್ನು ಹೇಳಿ ತಡೆದುದು.

ಹೀಗೆ ನಿಕುಂಭನು ಯುದ್ಧಕ್ಕೆ ಮುಂದಾಗಿ ನಿಂತಿರುವುದನ್ನು ನೋಡಿ ಅಲ್ಲಿ, ರಭಸ, ಸೂರ್ಯಶತ್ರು, ಸುಪ್ತಘ್ನ, ಯಜ್ಞಹ, ಮಹಾಪಾರ್ಶ್ವ, ಮಹೋದರ, ಅಗ್ನಿಕೇತು, ದುರ್ಧರ್ಷ, ರಶ್ಮಿಕೇತು, ಪ್ರಹಸ್ತ, ವಿರೂಪಾಕ್ಷ, ವಜ್ರದಂಷ್ಟ್ರ, ಧೂಮ್ರಾಕ್ಷ, ಅತಿಕಾಯ, ದುರ್ಮುಖರೆಂಬ ಆ ರಾಕ್ಷಸರೆಲ್ಲರೂ ಪರಿಘಗಳನ್ನೂ, ಪಟ್ಟಸಗಳನ್ನೂ, ಪ್ರಾಸಗಳನ್ನೂ, ಶಕ್ತಿಗಳನ್ನೂ, ಶೂಲಗಳನ್ನೂ, ಗಂಡುಗೊಡಲಿಗಳನ್ನೂ, ಧನುರ್ಬಾಣಗಳನ್ನೂ, ಹರಿತವಾದ ದೊಡ್ಡ ಕತ್ತಿಗಳನ್ನೂ ಕೈಗೆತ್ತಿಕೊಂಡು ಕೋಪದಿಂದ ಯುದ್ಧೋದ್ಯುಕ್ತರಾಗಿ ಥಟ್ಟನೆ ಮೇಲೆದ್ದುನಿಂತರು. ಹಾಗೆಯೇ ತೇಜಸ್ವಿಯಾಗಿಯೂ ಬಲಾಢ್ಯನಾಗಿಯೂ ಇದ್ದ ರಾವಣಪುತ್ರನಾದ ಇಂದ್ರಜಿತ್ತೂ ಯುದ್ಧಾತುರದಿಂದ ಮೇಲಕ್ಕೆದ್ದನು. ಇವರೆಲ್ಲರೂ ತೇಜಸ್ಸಿನಿಂದ ಜ್ವಲಿಸುವಂತೆ

---

1. ಇಲ್ಲಿ 'ಸ್ವಸ್ಥ' ರೆಂಬುದರಲ್ಲಿ, ಸ್ವರ್ಗಸ್ಥರೆಂಬ ಅರ್ಥಾಂತರವೂ ತೋರುವುದರಿಂದ, ಇದು ರಾಕ್ಷಸರಿಗೆ ಮುಂದೆ ಬರಬಹುದಾದ ಅಶ್ಲೀಲವನ್ನು ಸೂಚಿಸುವುದಾಗಿ ಗ್ರಾಹ್ಯವು.

ರಾವಣನ ಮುಂದೆ ನಿಂತು ಅವನನ್ನು ನೋಡಿ, “ ಈಗಲೇ ನಾವೆಲ್ಲರೂ ಹೋಗಿ, ರಾಮನನ್ನೂ, ಸುಗ್ರೀವನನ್ನೂ, ನಮ್ಮ ಲಂಕೆಯನ್ನು ರಹಸ್ಯವಾಗಿ ಪ್ರವೇಶಿಸಿ ಕೆಡಿಸಿಹೋದ ನೀಚನಾದ ಆ ಹನುಮಂತನನ್ನೂ ಕೊಂದು ಬರುವೆವು ” ಎಂದರು. ಹೀಗೆ ಆ ರಾಕ್ಷಸರು ಆಯುಧಗಳನ್ನೆತ್ತಿಕೊಂಡು ಯುದ್ಧಕ್ಕಾಗಿ ಕಾಲೆತ್ತಿ ನಿಂತಿರುವುದನ್ನು ನೋಡಿ ವಿಭೀಷಣನು ಅವರನ್ನು ತಡೆದು ಕುಳ್ಳಿರಿಸಿ, ಅವರಿಗೆ ಕೈಮುಗಿದು, “ ಅಪ್ಪಾ! ಹೀಗೆ ಆತುರಪಡಬಾರದು! ಸಾಮ ದಾನ ಭೇದಗಳೆಂಬ ಮೂರು ಉಪಾಯಗಳಿಂದಲೂ ಯಾವಾಗ ಕಾರ್ಯವು ಕೈಗೂಡದೆ ಹೋಗಬಹುದೋ, ಆಗಲೇ ನಾಲ್ಕನೆಯ ದಂಡೋಪಾಯರೂಪವಾದ ವೀರ್ಯವನ್ನು ತೋರಿಸಬೇಕೆಂದು ನೀತಿಶಾಸ್ತ್ರ ವಿಧಿಯುಂಟು. ಆಗಲೇ ದಂಡೋಪಾಯಕ್ಕೆ ತಕ್ಕ ಕಾಲವೆಂದು ಬುದ್ಧಿವಂತರೂ ಹೇಳುವರು. ಇನ್ನೂ ನಾವು ಸಾಮಾದ್ಯುಪಾಯಗಳನ್ನೇ ಪ್ರಯೋಗಿಸದಿರುವಾಗ, ಮೊದಲೇ ಹೀಗೆ ದಂಡವನ್ನು ಪ್ರಯೋಗಿಸಬಾರದು. ದಂಡಯಾತ್ರೆಗೆ ಇದು ಕಾಲವೂ ಅಲ್ಲ! ಇಷ್ಟೇ ಅಲ್ಲದೆ ನಮ್ಮ ಶತ್ರುವೂ ಈಗ ನಮ್ಮ ದಂಡೋಪಾಯಕ್ಕೆ ವಶನಾಗುವಹಾಗಿಲ್ಲ. [1]ವಿಷಯಲೋಲರಾಗಿ ಎಚ್ಚರಿಕೆ ತಪ್ಪಿದವರಲ್ಲಿಯೂ ವಿರಕ್ತಿ ಹೊಂದಿ ಜ್ಞಾನಿಗಳಾಗಿರುವವರಲ್ಲಿಯೂ, ಶತ್ರುರಾಜರಿಂದ ಮುತ್ತಲ್ಪಟ್ಟವರಲ್ಲಿಯೂ, ದೈವಪ್ರಾತಿಕೂಲ್ಯದಿಂದ ಕ್ಷೀಣಿಸಿದವರಲ್ಲಿಯೂ, ಮುದುಕರು, ಮಕ್ಕಳು ಮೊದಲಾದವರಲ್ಲಿಯೂ, ದಂಡವನ್ನುಪಯೋಗಿಸಬೇಕು. ಅದನ್ನೂ ನೀತಿಶಾಸ್ತ್ರಪ್ರಕಾರವಾಗಿ ಚೆನ್ನಾಗಿ ವಿಮರ್ಶಿಸಿ ಪ್ರಯೋಗಿಸಬೇಕು. ಅಂತಹ ವಿಕ್ರಮಗಳೇ ಸಿದ್ಧಿಯನ್ನು ಹೊಂದುವುವಲ್ಲದೆ, ಬೇರೆ ವಿಧದಲ್ಲಿ ಅವು ಸಿದ್ಧಿಯನ್ನು ಹೊಂದವು. ಈಗ ರಾಮನೋ ನಮ್ಮ ವಿಷಯವಾಗಿ ಬಹಳ ಎಚ್ಚರಗೊಂಡಿರುವನೇ ಹೊರತು ಪ್ರಮಾದವಶನಲ್ಲ. ಜಯಾಪೇಕ್ಷೆಯಿಂದಲೂ ಇರುವನು. ಸ್ಥಿರವಾದ ಸೇನಾಬಲ

---

1. ಇಲ್ಲಿ “ಬಾಲೋ ವೃದ್ಧೋ ದೀರ್ಘರೋಗೀ ತಥಾ ಜ್ಞಾತಿಬಹಿಷ್ಕೃತಃ । ಭೀರುಕೋ ಭೀರುಜನಕೋ ಲುಬ್ಧೋ ಲುಬ್ಧಜನಸ್ತಥಾ । ವಿರಕ್ತಪ್ರಕೃತಿಶ್ಚೈವ ವಿಷಯೇಷ್ವತಿಸಕ್ತಿಮಾನ್ । ಅನೇಕಭಿನ್ನಮಂತ್ರಶ್ಚ ದೇವಬ್ರಾಹ್ಮಣನಿಂದಕಃ । ದೈವೋಪಹತಕಶ್ಚೈವ ದೈವಚಿಂತಕ ಏವ ಚ । ದುರ್ಭಿಕ್ಷವ್ಯಸನೋಪೇತೋ ಬಲವ್ಯಸನ ಸಂಯುತಃ । ಅದೇಶಸ್ಥೋ ಬಹುರಿಪುರ್ಯುಕ್ತೋಽಕಾಲೇವ ಯಶ್ಚ ಸಃ । ಸತ್ಯಧರ್ಮವ್ಯಪೇತಶ್ಚ ವಿಂಶತಿಃ ಪುರುಷಾ ಅಮೀ । ಏತೈಸ್ಸಂಧಿಂ ನ ಕುರ್ವೀತ ನಿಗೃಹ್ಣೀಯಾತ್ತು ಕೇವಲಂ ” ಎಂಬುದಾಗಿ ಈ ಇಪ್ಪತ್ತು ಬಗೆಯ ಮನುಷ್ಯರೊಡನೆ ಸಂಧಿಯನ್ನು ಮಾಡದೆ ಅವರನ್ನು ನಿಗ್ರಹಿಸಿಡಬೇಕೆಂದು ಕಾಮಂದಕನೀತಿಯು.

*

ವುಳ್ಳವನು! ಕೋಪಕ್ಕೆ ವಶನಾಗುವವನಲ್ಲ. ಈಗ ಯಾರಿಂದಲೂ ಅವನನ್ನಿದಿರಿಸುವುದು ಸಾಧ್ಯವಲ್ಲ. ಹೀಗಿರುವಾಗ ಅಂತವನನ್ನು ನೀವು ಹೇಗೆ ಇದಿರಿಸಬೇಕೆಂದಪೇಕ್ಷಿಸುವಿರಿ? ಎಲೆ ರಾಕ್ಷಸರೆ! ಆ ಹನುಮಂತನೊಬ್ಬನೇ ಈ ಭಯಂಕರವಾದ ಮಹಾಸಮುದ್ರವನ್ನು ದಾಟಿಬಂದು, ಅಷ್ಟು ದುಷ್ಕರವಾದ ಕಾರ್ಯವನ್ನು ನಡೆಸಿ ಹೋದನಲ್ಲವೆ? ಹೀಗಾಗುವುದೆಂದು ನಮ್ಮಲ್ಲಿ ಯಾವನಾದರೂ ಎಣಿಸಿದ್ದನೆ? ಆದುದರಿಂದ ಈಗ ರಾಮನಿಗೆ ದೈವವೂ ಅನುಕೂಲವಾಗಿರುವುದೇ ಹೊರತು ಪ್ರತಿಕೂಲವಲ್ಲ. ಈಗ ಆ ನಮ್ಮ ಶತ್ರುವಿನ ಅಲ್ಪಪರಾಕ್ರಮಗಳಿಗೆ ಎಣೆಯೇ ಇಲ್ಲವೆಂದೂ ತೋರಿರುವುದು. ಹೀಗಿರುವಾಗಲೂ ನೀವು ಹಿಂದುಮುಂದು ನೋಡದೆ ಅವರನ್ನು ಅಲ್ಪಬಲವುಳ್ಳವರೆಂದು ತಿರಸ್ಕರಿಸಬಾರದು. ಇದಲ್ಲದೆ ನಮ್ಮ ಪ್ರಭುವಾದ ಈ ರಾವಣನ ವಿಷಯದಲ್ಲಿ ರಾಮನು ಮಾಡಿರುವ ಅಪಕಾರವೇನು? ಈತನೇ ನಿಷ್ಕಾರಣವಾಗಿ ಯಶಸ್ವಿಯಾದ ಆ ರಾಮನ ಭಾರ್ಯೆಯನ್ನು ಕದ್ದುತಂದುದೇಕೆ? ಒಂದುವೇಳೆ ಅವನು ಖರನನ್ನು ಕೊಂದುದಕ್ಕಾಗಿ ರಾವಣನು ಹೀಗೆ ಮಾಡಿದನೆಂದು ಹೇಳುವಿರಾ? ಅದೂ ಸರಿಯಾದ ಕಾರಣವಲ್ಲ! ಆ ಖರನು ತಾನಾಗಿಯೇ ಅತಿಕ್ರಮಿಸಿ ರಾಮನನ್ನು ಕೊಲ್ಲುವುದಕ್ಕಾಗಿ ಹೋಗಲು, ಅವನನ್ನು ರಾಮನು ಯುದ್ಧದಲ್ಲಿ ಕೊಲ್ಲಬೇಕಾಯಿತು. ಇದರಿಂದ ದೋಷವೇನು? ಯಾವ ಪ್ರಾಣಿಗಳಿಗಾದರೂ ತಮ್ಮ ತಮ್ಮ ಶಕ್ತ್ಯನುಸಾರವಾಗಿ ಪ್ರವರ್ತಿಸಿ, ತಮ್ಮ ಜೀವವನ್ನುಳಿಸಿಕೊಳ್ಳಬೇಕಾದುದವಶ್ಯವಲ್ಲವೆ? ಆದುದರಿಂದ ಯಾವ ವಿಧದಲ್ಲಿಯೂ ನಿರ್ದೋಷಿಯಾದ ಆ ರಾಮನು ನಮಗೆ ಎಂದಿಗೂ ದಂಡ್ಯನಲ್ಲ. ಒಂದು ವೇಳೆ ರಾಮನು ನಮಗೆ ಅಪಕಾರವನ್ನೇ ನಡೆಸಿದ್ದರೂ, ಅವನ ಪತ್ನಿಯನ್ನು ಕದ್ದುತಂದುದು ನ್ಯಾಯವೇ ಅಲ್ಲ! ಪರದಾರ ಸ್ಪರ್ಶವೆಂಬುದು ದೊಡ್ಡ ಅಪಕೀರ್ತಿಗೆ ಕಾರಣವಲ್ಲದೆ, ಆಯುಃಕ್ಷಯವನ್ನೂ ಉಂಟುಮಾಡುವುದು. ಸಮಸ್ತಭಾಗ್ಯವನ್ನೂ ಕೆಡಿಸುವುದು. ಈ ಕಾರಣದಿಂದ ನಮಗೆ ಆ ಸೀತೆಯಿಂದಲೇ ದೊಡ್ಡ ಅನರ್ಥವು ಸಂಭವಿಸುವುದು. ಈಗ ಸೀತೆಯನ್ನಂತೂ ತಂದುದಾಯಿತು! ಇನ್ನಾದರೂ ಆಕೆಯನ್ನು ಹಿಂತಿರುಗಿ ರಾಮನ ವಶಕ್ಕೊಪ್ಪಿಸುವುದುತ್ತಮವು. ಎಷ್ಟೇ ಉತ್ತಮವಸ್ತುವಾಗಿದ್ದರೂ ಕಲಹಕ್ಕೆ ಕಾರಣವಾದ ವಿಷಯಗಳಲ್ಲಿ ಎಷ್ಟು ಸಾಹಸವನ್ನು ನಡೆಸಿದರೂ ಪ್ರಯೋಜನವಿಲ್ಲ. ಆ ರಾಮನೋ ಬಹಳ ಪರಾಕ್ರಮಶಾಲಿಯು, ಧರ್ಮನಿರತನು. ಅಂತವನೊಡನೆ ನಿಷ್ಕಾರಣವಾಗಿ ವೈರವನ್ನಿಟ್ಟುಕೊಳ್ಳುವುದೇ ಎಂದಿಗೂ ನಮಗೆ ಯುಕ್ತವಲ್ಲ.

ಆತನಿಗೆ ಸೀತೆಯನ್ನೊಪ್ಪಿಸಿಬಿಡಿರಿ! ರಾಮನು ಇಲ್ಲಿಗೆ ದಂಡೆತ್ತಿ ಬಂದು, ಆನೆ ಕುದುರೆಗಳಿಂದಲೂ, ರತ್ನಸಮೂಹಗಳಿಂದಲೂ ತುಂಬಿದ ನಮ್ಮ ಲಂಕೆಯನ್ನು ತನ್ನ ಬಾಣಗಳಿಂದ ಭೇದಿಸುವುದಕ್ಕೆ ಮೊದಲೇ ಅವನಿಗೆ ಸೀತೆಯನ್ನೊಪ್ಪಿಸಿಬಿಡಿರಿ. ಅತಿಭಯಂಕರವಾಗಿಯೂ, ಇತರರಿಗೆ ದುರ್ಜಯವಾಗಿಯೂ ಇರುವ ಆ ದೊಡ್ಡ ವಾನರಸೈನ್ಯವು ಬಂದು ನಮ್ಮ ಲಂಕೆಯನ್ನು ಮುತ್ತುವುದರೊಳಗಾಗಿಯೇ ಸೀತೆಯನ್ನು ಕೊಟ್ಟುಬಿಡಿರಿ. ಈಗ ನಾವೇ ಹೋಗಿ ರಾಮನಿಗೆ ಆತನ ಪ್ರಿಯಪತ್ನಿಯನ್ನೊಪ್ಪಿಸದಿದ್ದಪಕ್ಷದಲ್ಲಿ ಈ ನಮ್ಮ ಲಂಕೆಯೆಲ್ಲವೂ ನಾಶಹೊಂದುವುದು! ಇಲ್ಲಿನ ಶೂರರಾದ ಸಮಸ್ತ ರಾಕ್ಷಸರೂ ನಾಶಹೊಂದುವರು. ಅಣ್ಣಾ! ಬಂಧುತ್ವಾಭಿಮಾನದಿಂದ ನಾನು ಈಗ ಹೇಳುವ ಮಾತು ಹಿತವೆಂದೂ ಪಥ್ಯವೆಂದೂ ತಿಳಿ! ರಾಮನಿಗೆ ಸೀತೆಯನ್ನೊಪ್ಪಿಸಿಬಿಡು. ಮುಂದೆ ರಾಜಕುಮಾರನಾದ ಆ ರಾಮನು ಶರತ್ಕಾಲದ ಸೂರ್ಯಕಿರಣದಂತೆ ಅತಿ ತೀಕ್ಷ್ಣವಾಗಿಯೂ, ಹೊಸದಾದ ಅಲಗುಳ್ಳದಾಗಿಯೂ ಬಹಳ ದೃಢವಾಗಿಯೂ, ಅಮೋಘವಾಗಿಯೂ, ಇರುವ ತನ್ನ ಬಾಣಸಮೂಹವನ್ನು ನಿನ್ನ ವಧಕ್ಕಾಗಿ ಪ್ರಯೋಗಿಸುವುದಕ್ಕೆ ಮೊದಲೇ ರಾಮನಿಗೆ ಸೀತೆಯನ್ನೊಪ್ಪಿಸಿಬಿಡು. ಸುಖವನ್ನೂ, ಧರ್ಮವನ್ನೂ ಕೆಡಿಸತಕ್ಕ ನಿನ್ನ ಈ ಕೋಪವನ್ನು ಬಿಟ್ಟುಬಿಡು. ಸಂತೋಷವನ್ನೂ, ಕೀರ್ತಿಯನ್ನೂ ಹೆಚ್ಚಿಸತಕ್ಕ ಧರ್ಮವನ್ನೇ ಅವಲಂಬಿಸು. ನನ್ನಲ್ಲಿ ಪ್ರಸನ್ನನಾಗಿ ನನ್ನ ಮಾತನ್ನು ನಡೆಸಿಕೊಡು! ಹಾಗೆ ನಡೆಸಿದರೆ ಮಾತ್ರವೇ ನಾವೆಲ್ಲರೂ ನಮ್ಮ ಮನೆಮಂದಿಮಕ್ಕಳೊಡನೆ ಇನ್ನೂ ಕೆಲವು ಕಾಲದವರೆಗೆ ಸುಖವಾಗಿ ಬದುಕಿರಬಹುದು! ರಾಮನಿಗೆ ಸೀತೆಯನ್ನೊಪ್ಪಿಸಿಬಿಡು! ನನ್ನ ಮಾತನ್ನು ಕೇಳು." ಎಂದನು. ರಾಕ್ಷಸೇಶ್ವರನಾದ ರಾವಣನು ವಿಭೀಷಣನು ಹೇಳಿದ ಈ ಮಾತನ್ನು ಕೇಳಿದಮೇಲೆ ಕದಲಿದ ಮನಸ್ಸುಳ್ಳವನಾಗಿ, ಆ ಸಭಿಕರೆಲ್ಲರನ್ನೂ ಕಳುಹಿಸಿ, ತಾನೂ ತನ್ನ ಅಂತಃಪುರಕ್ಕೆ ಹೋದನು.

ಇಲ್ಲಿಗೆ ಒಂಬತ್ತನೆಯ ಸರ್ಗವು.

ವಿಭೀಷಣನು, ರಾವಣಗೃಹಕ್ಕೆ ಹೋಗಿ, ಸೀತೆಯನ್ನು ತಂದುದು ಮೊದಲು ಲಂಕೆಯಲ್ಲಿ ಕಾಣುತ್ತಿರುವ ನಾನಾ ದುರ್ನಿಮಿತ್ತಗಳನ್ನು ರಾವಣನಿಗೆ ತಿಳಿಸಿ, ರಾಮನಿಗೆ ಸೀತೆಯನ್ನೊಪ್ಪಿಸುವಂತೆ ಬುದ್ಧಿವಾದವನ್ನೂ ಹೇಳಿದುದು.

ರಾತ್ರಿಯು ಕಳೆದು [1]ಬೆಳಗಾಯಿತು. ಆ ರಾತ್ರಿಯೆಲ್ಲವೂ ವಿಭೀಷಣನು ತನಗೆತಾನೇ ಧರ್ಮಾರ್ಥಸ್ವರೂಪಗಳನ್ನು ವಿಚಾರಮಾಡಿ ನಿಶ್ಚಯಿಸಿಕೊಂಡು, ಪರಮಮೂರ್ಖನಾದ ರಾವಣನಿಗೆ ಹಿತೋಪದೇಶವೆಂಬ ಭಯಂಕರಕಾರ್ಯಕ್ಕೂ ಪ್ರಯತ್ನಿಸಿ, ನೆಟ್ಟಗೆ ರಾವಣನ ಮನೆಗೆ ಹೊರಟನು. ಪರ್ವತಶಿಖರಸಮೂಹದಂತೆ ಅನೇಕ ಗೋಪುರಗಳುಳ್ಳದಾಗಿಯೂ, ಬೆಟ್ಟದ ಕೋಡಿನಂತೆ ಮಹೋನ್ನತವಾಗಿಯೂ ಪ್ರತ್ಯೇಕವಾಗಿ ವಿಭಾಗಿಸಲ್ಪಟ್ಟ ದೊಡ್ಡದೊಡ್ಡ ತೊಟ್ಟಿಗಳುಳ್ಳದಾಗಿಯೂ ಇರುವ ರಾವಣನ ಅರಮನೆಯನ್ನು ಪ್ರವೇಶಿಸಿದನು. ಆ ಅರಮನೆಯಲ್ಲಿಯೋ ಅಲ್ಲಲ್ಲಿ ಶಾಸ್ತ್ರಜ್ಞರಾದ ಬಹಳ ಮಂದಿ ಪಂಡಿತಜನರು ನೆರದಿರುವರು. ಅಲ್ಲಲ್ಲಿ ಬುದ್ಧಿವಂತ ರಾಗಿಯೂ, ಪ್ರಭುವಿನಲ್ಲಿ ವಿಶ್ವಾಸವುಳ್ಳವರಾಗಿಯೂ ಕಾರ್ಯನಿಪುಣರಾಗಿಯೂ ಇರುವ ಮಹಾಪ್ರಧಾನಿಗಳು ತುಂಬಿರುವರು. ಅಲ್ಲಲ್ಲಿ ಕಾವಲಿಗಾಗಿ ಅನೇಕ ರಾಕ್ಷಸರು ಶಸ್ತ್ರಧಾರಿಗಳಾಗಿ ನಿಂತಿರುವರು. ಮತ್ತು ಅಲ್ಲಿನ ಗಾಳಿಯು, ಮದದಾನೆಗಳ ಫೂತ್ಕಾರದಿಂದ ತುಂಬಿ ಸುಳಿಗಾಳಿಯಂತೆ ವೇಗದಿಂದ ಬೀಸುವುದು. ಅಲ್ಲಲ್ಲಿ ಶಂಖ ಧ್ವನಿಗಳು ಮಹಾಘೋಷದಿಂದ ಮೊರೆಯುತ್ತಿರುವುವು. ಅಲ್ಲಲ್ಲಿ ವಾದ್ಯಧ್ವನಿಗಳು ಪ್ರತಿಧ್ವನಿಯನ್ನು ಕೊಡುತ್ತಿರುವುವು. ಅಲ್ಲಲ್ಲಿ ಸ್ತ್ರೀಯರು ಗುಂಪುಗುಂಪಾಗಿ ಸೇರಿ ಬೀದಿಬೀದಿಗಳಲ್ಲಿ ಕಲಕಲಧ್ವನಿಯಿಂದ ಮಾತಾಡುವರು. ಅಲ್ಲಲ್ಲಿ ಬಂಗಾರದ ಜಗತಿ ಗಳೂ, ಉತ್ತಮಾಲಂಕಾರಗಳೂ ಶೋಭಿಸುತ್ತಿರುವುವು. ಇದರಿಂದ ಆ ಅರಮನೆಯು ಗಂಧರ್ವರ ವಾಸಸ್ಥಳದಂತೆಯೂ, ದೇವತೆಗಳ ನಿವಾಸದಂತೆಯೂ ಕಾಣುವುದಲ್ಲದೆ, ಅಲ್ಲಲ್ಲಿ ನವರತ್ನ ಸಮೂಹಗಳಿಂದ ನಿಬಿಡವಾಗಿ, ಭೋಗವತೀಪುರದಂತೆಯೂ ತೋರುವುದು. ವೀರನಾಗಿಯೂ, ತೇಜಸ್ವಿಯಾಗಿಯೂ ಇರುವ ವಿಭೀಷಣನು, ಕಾಂತಿವಿಶಿಷ್ಟನಾದ ಸೂರ್ಯನು ಮಹಾಮೇಘವನ್ನು ಪ್ರವೇಶಿಸುವಂತೆ, ತನ್ನಣ್ಣನಾದ

1. ಇಲ್ಲಿ ಬೆಳಗಾಯಿತೆಂಬುದರಿಂದ, ಹನುಮಂತನು ಲಂಕೆಯನ್ನು ಬಿಟ್ಟುಹೋಗಿ ಒಂದು ದಿನವಾಯಿತೆಂದು ತಿಳಿಯಬೇಕು.

ರಾವಣನ ಮನೆಯನ್ನು ಪ್ರವೇಶಿಸಿದನು. ಹೀಗೆ ವಿಭೀಷಣನು ಪ್ರವೇಶಿಸುವಷ್ಟರಲ್ಲಿ, ಅಲ್ಲಲ್ಲಿ ವೇದವಿತ್ತುಗಳಾದ ಬ್ರಹ್ಮರಾಕ್ಷಸರು, ರಾವಣನ ಜಯಕ್ಕಾಗಿ ಪರಿಶುದ್ಧವಾದ ಪುಣ್ಯಾಹಘೋಷವನ್ನು ಉಚ್ಚರಿಸುತ್ತಿದ್ದರು. ಅಲ್ಲಲ್ಲಿ ಮಂತ್ರಗಳನ್ನೂ, ವೇದಗಳನ್ನೂ ತಿಳಿದ ಬ್ರಾಹ್ಮಣರು, ಮೊಸರು, ತುಪ್ಪ, ಅಕ್ಷತೆ, ಹೂ, ಮುಂತಾದ ಪೂಜಾದ್ರವ್ಯಗಳಿಂದ ಪೂಜಿಸಲ್ಪಡುತ್ತಿದ್ದರು. ತೇಜಸ್ಸಿನಿಂದ ದೇದೀಪ್ಯಮಾನನಾದ ವಿಭೀಷಣನು, ಅಲ್ಲಲ್ಲಿ ರಾಕ್ಷಸರಿಂದ ಮನ್ನಿಸಲ್ಪಡುತ್ತ ಅರಮನೆಯೊಳಗೆ ಪ್ರವೇಶಿಸಿ, ಸಿಂಹಾಸನದ ಮೇಲಿದ್ದ ಕುಬೇರನ ತಮ್ಮನಾದ ರಾವಣನಿಗೆ ವಿನಯದಿಂದ ನಮಸ್ಕರಿಸಿದನು. ಸಂಪ್ರದಾಯಸಿದ್ಧವಾದ ಸದಾಚಾರವನ್ನು ಚೆನ್ನಾಗಿ ಬಲ್ಲ ವಿಭೀಷಣನು, ಪ್ರಭುವಾದ ರಾವಣನ ಮುಂದೆ ನಿಂತು, ಮೊದಲು ತಾನು ರಾಜಮರ್ಯಾದೆಯನ್ನನುಸರಿಸಿ ನುಡಿಯಬೇಕಾದ ಜಯಶಬ್ದವನ್ನು ನುಡಿದು, ತನಗೆ ರಾವಣನು ಕಣ್ಣುಸನ್ನೆಯಿಂದ ತೋರಿಸಿದ ಒಂದು ಸುವರ್ಣಪೀಠದಮೇಲೆ ಕುಳಿತನು. ಆಮೇಲೆ ವಿಭೀಷಣನು ಆ ರಾಜಾಸ್ಥಾನದಲ್ಲಿ ಬೇರೊಬ್ಬರೂ ಇಲ್ಲದೆ ಪ್ರಧಾನ ಮಂತ್ರಿಗಳು ಮಾತ್ರ ರಾವಣನ ಸಮೀಪದಲ್ಲಿರುವುದನ್ನು ನೋಡಿ, ರಾವಣನನ್ನು ಕುರಿತು ಯುಕ್ತಾಯುಕ್ತ ವಿವೇಚನೆಯಿಂದ ನಿಶ್ಚಿತವಾಗಿಯೂ ಹಿತವಾಗಿಯೂ ಇರುವ ಮಾತುಗಳನ್ನು ಹೇಳತೊಡಗಿದನು. ಈ ವಿಭೀಷಣನಾದರೋ ಮಾತಿನ ಕ್ರಮವನ್ನು ಚೆನ್ನಾಗಿ ಬಲ್ಲವನು. ದೇಶವನ್ನೂ, ಕಾಲವನ್ನೂ, ಪ್ರಯೋಜನವನ್ನೂ ಅನುಸರಿಸಿ ನುಡಿಯತಕ್ಕವನು. ಲೋಕದಲ್ಲಿ ಉತ್ಕೃಷ್ಟವಾವುದು ನಿಕೃಷ್ಟವಾವುದೆಂಬ ವಿವೇಕಜ್ಞಾನವನ್ನು ಬಲ್ಲವನು. ಇಂತಹ ಮಹಾಧೀಮಂತನಾದ ವಿಭೀಷಣನು, ಮೊದಲು ಬಹಳ ಮೃದುವಾದ ಮಾತಿನಿಂದ ತನ್ನಣ್ಣನನ್ನು ಸ್ತುತಿಸಿ ಅವನ ಮನಸ್ಸು ತನ್ನಲ್ಲಿ ಪ್ರಸನ್ನವಾಗುವಂತೆ ಮಾಡಿಕೊಂಡು, ಆಮೇಲೆ ಅವನನ್ನು ಕುರಿತು, "ಅಣ್ಣಾ! ಸೀತೆಯು ಈ ನಿನ್ನ ಪಟ್ಟಣಕ್ಕೆ ಬಂದುದು ಮೊದಲು, ನಮಗೆ ಬಹಳವಾದ ದುಶ್ಶಕುನಗಳೇ ಕಾಣುವುವು. ಮಂತ್ರಯುಕ್ತವಾದ ಹವಿಸ್ಸುಗಳಿಂದ ಅಗ್ನಿಯನ್ನು ಹುತಮಾಡಿದರೂ, ಆ ಅಗ್ನಿಯು ತನ್ನ ಜ್ವಾಲೆಯೊಡನೆ ಕಿಡಿಗಳನ್ನೂ ಹೊಗೆಯನ್ನೂ ಹೊರಡಿಸುತ್ತ, ಆಗಾಗ ಹೊಗೆಯಿಂದ ಮುಚ್ಚಿ, ನಂದಿಹೋಗುವುದೇ ಹೊರತು, ಕ್ರಮವಾಗಿ ಜ್ವಲಿಸುವುದಿಲ್ಲ. ಅಡಿಗೆಮನೆಗಳಲ್ಲಿಯೂ, ಅಗ್ನಿಶಾಲೆಗಳಲ್ಲಿಯೂ, ವೇದಾಧ್ಯಯನ ಸ್ಥಳಗಳಲ್ಲಿಯೂ, ಹಾವುಗಳು ತಲೆದೋರುತ್ತಿರುವುವು. ದೇವಯೋಗ್ಯವಾದ ಹವ್ಯಪದಾರ್ಥಗಳನ್ನು ಸಂಗ್ರಹಿಸಿಟ್ಟ

ಕಡೆಗಳಲ್ಲಿ, ಆ ಹವಿಸ್ಸುಗಳಿಗೆ ಇರುವೆಗಳು ಮುತ್ತುತ್ತಿರುವುವು. ಪಶುಗಳ ಕೆಚ್ಚಲೆಲ್ಲವೂ ಹಾಲಿಲ್ಲದೆ ಬತ್ತಿಹೋಗುತ್ತಿರುವುವು. ಮದದಾನೆಗಳೆಲ್ಲವೂ ಮದವುಡುಗಿರುವುವು. ನಮ್ಮ ಸೇನೆಯಲ್ಲಿರುವ ಕತ್ತೆ, ಒಂಟೆ, ಹೇಸರಗತ್ತೆ ಮುಂತಾದ ಪ್ರಾಣಿಗಳೆಲ್ಲವೂ ಕೂದಲುದಿರಿ, ಕಣ್ಣೀರುಬಿಡುತ್ತ, ಯಾವ ಯಾವ ಚಿಕಿತ್ಸೆಗಳನ್ನು ಮಾಡಿದರೂ ಅವು ತಮ್ಮ ಮೊದಲಿನ ಸ್ಥಿತಿಗೆ ಬಾರದಿರುವುವು. ಕಾಗೆಗಳು ನಮ್ಮ ವಿಮಾನಗಳ ಮೇಲೆ ಸುತ್ತಲೂ ಗುಂಪುಗುಂಪಾಗಿ ಕ್ರೂರಧ್ವನಿಯಿಂದ ಕೂಗುತ್ತಿರುವುವು. ನಮ್ಮ ಪಟ್ಟಣದ ಮನೆಮನೆಗಳ ಮೇಲೆಯೂ, ಹದ್ದುಗಳು ಗುಂಪುಗೂಡಿ ಮಂಡಲಾಕಾರ ವಾಗಿ ಸುತ್ತುತ್ತಿರುವುವು. ಎರಡು ಸಂಜೆಗಳಲ್ಲಿಯೂ ನರಿಗಳು ನಮ್ಮ ಪಟ್ಟಣದ ಬಾಗಿಲಿಗೆ ಬಂದು ಅಮಂಗಳವಾಗಿ ಊಳಿಡುತ್ತಿರುವುವು. ಮಾಂಸಭಕ್ಷಕಗಳಾದ ಕ್ರೂರಮೃಗಗಳು ನಮ್ಮ ಪುರದ್ವಾರದಲ್ಲಿ ಗುಂಪಾಗಿ ಸೇರಿ ಸಿಡಿಲಿನಂತೆ ಮಹಾ ಧ್ವನಿಯಿಂದ ಆರಚುತ್ತಿರುವುವು. ಅಣ್ಣಾ! ಇಷ್ಟು ದುರ್ನಿಮಿತ್ತಗಳೂ ನಮಗೆ ಕಾಣುವುದರಿಂದ ಯಾವುದೋ ಮಹಾವಿಪತ್ತು ಸಂಭವಿಸುವುದರಲ್ಲಿ ಸಂದೇಹವಿಲ್ಲ. ಆದರೇನು? ಈಗಲೂ ಇದಕ್ಕೆ ತಕ್ಕ ಪ್ರಾಯಶ್ಚಿತ್ತವುಂಟು. ನಿನಗೆ ಸಮ್ಮತ ವಾಗಿದ್ದರೆ ಈಗಲೂ ರಾಮನಿಗೆ ಸೀತೆಯನ್ನೊಪ್ಪಿಸಿಬಿಡು! ಎಲೆ ಮಹಾರಾಜನೆ! ಈಗ ನಾನು ರಾಜಕಾರ್ಯವನ್ನು ತಿಳಿಯದ ಅಜ್ಞಾನದಿಂದಲೋ ಪ್ರಾಣದಾಸೆ ಯಿಂದಲೋ ಹೀಗೆ ನಿನ್ನಲ್ಲಿ ಸ್ವತಂತ್ರಿಸಿ ಈ ಮಾತುಗಳನ್ನು ಹೇಳುತ್ತಿರುವೆನು. ಆದರೂ ಇದನ್ನು ನೀನು ತಪ್ಪಾಗಿ ಭಾವಿಸಕೂಡದು. ಈ ದುರ್ನಿಮಿತ್ತಗಳನ್ನು ನೋಡಿ ನಾನು ಹೀಗೆ ಹೇಳಬೇಕಾಯಿತು. ಅನರ್ಥಸೂಚನೆಗಳನ್ನು ನಾನೊಬ್ಬನೇ ಅಲ್ಲದೆ, ಇಲ್ಲಿನ ಸಮಸ್ತ ರಾಕ್ಷಸರೂ, ರಾಕ್ಷಸ ಸ್ತ್ರೀಯರೂ, ಅಂತಃಪುರ ಸ್ತ್ರೀಯರೂ, ಇನ್ನೂ ಈ ಪಟ್ಟಣದಲ್ಲಿರುವ ಸಮಸ್ತಪ್ರಜೆಗಳೂ ಚೆನ್ನಾಗಿ ನೋಡಿರು ವರು. ಯಾರು ನೋಡಿದರೇನು? ನಿನ್ನ ಮಂತ್ರಿಗಳೆಲ್ಲರೂ ನಿನ್ನ ಮುಖೋಲ್ಲಾಸ ವನ್ನನುಸರಿಸಿಯೇ ನಡೆಯತಕ್ಕವರಾದುದರಿಂದ, ಇದೊಂದನ್ನೂ ನಿನ್ನ ಕಿವಿಗೆ ಹಾಕದೆ ಸುಮ್ಮನೆ ಹೋಗುತ್ತಿರುವರು. ನಾನಾದರೋ ನಿನಗೆ ಒಡಹುಟ್ಟಿದ ತಮ್ಮನು. ಈ ಕರುಳಿನ ಸಂಬಂಧವು ನನ್ನನ್ನು ಬಾಧಿಸುತ್ತಿರುವುದರಿಂದ ನಾನು ಕಂಡು ಕೇಳಿದುದೆಲ್ಲವನ್ನೂ ನಿನ್ನೊಡನೆ ಯಥಾಸ್ಥಿತವಾಗಿ ಹೇಳದೆತೀರದು. ನೀನೂ ನಿನ್ನ ಮನಸ್ಸಿನಲ್ಲಿ ನ್ಯಾಯರೀತಿಯಿಂದ ಪರ್ಯಾಲೋಚಿಸಿ ನೋಡು. ನಿನ್ನ ಮನಸ್ಸಿನಲ್ಲಿಯೂ ಚೆನ್ನಾಗಿ ನಿರ್ಧರಿಸಿಕೊಂಡು ಕಾಲೋಚಿತವಾದ ಕಾರ್ಯವನ್ನು

ನಡೆಸು" ಎಂದನು. ಹೀಗೆ ಅನೇಕ ಮಂತ್ರಿಗಳ ಮಧ್ಯದಲ್ಲಿ ವಿಭೀಷಣನು ರಾವಣನ ಮುಂದೆ ಹಿತವಾಗಿಯೂ, ಮಹಾಫಲಪ್ರದವಾಗಿಯೂ ಯುಕ್ತಿಯುಕ್ತವಾಗಿಯೂ, ಭೂತಭವಿಷ್ಯದ್ವರ್ತಮಾನಗಳೆಂಬ ಮೂರುಕಾಲಗಳಲ್ಲಿಯೂ ಶ್ರೇಯಸ್ಕರವಾಗಿಯೂ ಇರುವ ಮಾತನ್ನು ಎಷ್ಟೋ ಮೃದುವಾಗಿ ಹೇಳಿದರೂ, ಅದನ್ನು ಕೇಳಿದೊಡನೆ ರಾವಣನಿಗೆ ಅತ್ಯಾಕ್ರೋಶವು ಹುಟ್ಟಿತು. ಆಗಲೂ ತನ್ನ ಹಟವನ್ನು ಬಿಡದೆ ವಿಭೀಷಣನನ್ನು ಕುರಿತು, "ವಿಭೀಷಣಾ! ಸಾಕು ಸುಮ್ಮನಿರು! ನನಗೆ ಲೇಶಮಾತ್ರವೂ ಯಾರಿಂದಲೂ ಭಯವಿಲ್ಲ. ನನ್ನ ಕೈಗೆ ಸಿಕ್ಕಿಬಿದ್ದಿರುವ ಸೀತೆಯನ್ನು ರಾಮನು ಇನ್ನೆಂದಿಗೂ ಬಿಡಿಸಿಕೊಳ್ಳಲಾರನು. ಇಂದ್ರಾದಿದೇವತೆಗಳನ್ನೇ ತನಗೆ ಬೆಂಬಲವಾಗಿ ಕರೆತಂದರೂ ನನ್ನಮುಂದೆ ನಿಲ್ಲಲಾರನು. ಇನ್ನು ಆತನಿಗೆ ಯುದ್ಧದಾಸೆಯೇಕೆ? ಇನ್ನುಮೇಲೆ ಅವನಿಗೆ ಸೀತೆಯು ಸಿಕ್ಕುವುದೆಂದರೇನು?" ಎಂದನು. ಅನೇಕ ದೇವಸೈನ್ಯಗಳನ್ನು ಧ್ವಂಸಮಾಡಿದವನಾಗಿಯೂ, ಮಹಾಬಲನಾಗಿಯೂ, ಯುದ್ಧದಲ್ಲಿ ಭಯಂಕರ ಪರಾಕ್ರಮವುಳ್ಳವನಾಗಿಯೂ ಇದ್ದ ರಾವಣನು, ತನಗೆ ಹಿತವನ್ನು ಉಪದೇಶಿಸುವುದಕ್ಕಾಗಿ ಬಂದ ತಮ್ಮನಾದ ವಿಭೀಷಣನಿಗೆ ಹೀಗೆಂದು ಹೇಳಿ ಆಗಲೇ ಆತನನ್ನು ಹಿಂದಕ್ಕೆ ಕಳುಹಿಸಿಬಿಟ್ಟನು.

ಇಲ್ಲಿಗೆ ಹತ್ತನೆಯ ಸರ್ಗವು.

ರಾವಣನು ವಿಭೀಷಣನ ಮಾತಿನಿಂದ ಕದಲಿದ ಮನಸ್ಸುಳ್ಳವನಾಗಿ,
ತಿರುಗಿ ಮಂತ್ರಿಗಳೊಡನೆ ಆಲೋಚಿಸುವುದಕ್ಕಾಗಿ
ಮಂತ್ರಿಸಭೆಯನ್ನು ಪ್ರವೇಶಿಸಿದುದು.

ಪಾಪಿಯಾದ ರಾವಣನಿಗಾದರೋ ಅತ್ತಲಾಗಿ, ಸೀತೆಯ ವಿಷಯವಾದ ಕಾಮವೊಂದು! ಇತ್ತಲಾಗಿ ತನಗೆ ಹಿತರಾದ ವಿಭೀಷಣಾದಿಗಳು ತನ್ನ ದಾರಿಗೆ ಬಾರದೆ ತನ್ನಲ್ಲಿ ಅನಾದರವನ್ನು ತೋರಿಸುವುದೊಂದು! ತಾನು ಸೀತೆಯನ್ನು ಕದ್ದುತಂದ ಪಾಪಭಯವೊಂದು! ಇವುಗಳಿಂದ ಬಹಳವಾದ ಚಿಂತೆಯು ಹುಟ್ಟಿತು. ಕಾಲವು ಮಿಂಚಿದಷ್ಟೂ ಯುದ್ಧವು ಸಮೀಪಿಸುತ್ತಿರುವುದರಿಂದ ಮಂತ್ರಿಗಳೊಡನೆಯೂ

ಸ್ನೇಹಿತರೊಡನೆಯೂ ಕಲೆತು, [1]ಮಂತ್ರಾಲೋಚನೆಯನ್ನು ನಡೆಸುವುದಕ್ಕೆ ಅದೇ ಉಚಿತಕಾಲವೆಂದೂ ಆತನ ಮನಸ್ಸಿಗೆ ತೋರಿತು. ಆಗಲೇ ಮಹಾರಥನಾದ ಆ ರಾವಣನು, ಸುತ್ತಲೂ ಬಂಗಾರದ ಕಿಟಿಕಿಗಳಿಂದ ಕೂಡಿ, ಮುತ್ತುಗಳಿಂದಲೂ, ಹವಳಗಳಿಂದಲೂ ಅಲಂಕೃತವಾಗಿ, ಸುಶಿಕ್ಷಿತವಾದ ಕುದುರೆಗಳಲ್ಲಿ ಹೂಡಿದ ತನ್ನ ಮಹಾರಥದ ಬಳಿಗೆ ಬಂದು, ಅದಕ್ಕೆ ಪ್ರದಕ್ಷಿಣ ನಮಸ್ಕಾರಗಳನ್ನು ಮಾಡಿ, ಅದನ್ನೇರಿ ಕುಳಿತನು. ರಾಕ್ಷಸೋತ್ತಮನಾದ ರಾವಣನು ಆ ಉತ್ತಮ ರಥವನ್ನೇರಿ, ಮೇಘಗರ್ಜನದಂತೆ ಮೊರೆಯುತ್ತಿರುವ ರಥಚಕ್ರಧ್ವನಿಯೊಡನೆ ಮಂತ್ರಸಭೆಗೆ ಹೊರಟನು. ಅನೇಕಾನೇಕ ರಾಕ್ಷಸಯೋಧರೂ ಅವನೊಡನೆ ಹೊರಟರು. ಕೆಲವರು ಕತ್ತಿಗಳನ್ನೂ, ಕೆಲವರು ಗುರಾಣಿಗಳನ್ನೂ, ಇನ್ನು ಕೆಲವರು ಬೇರೆ ಆಯುಧಗಳನ್ನೂ ಹಿಡಿದು ಮುಂದೆ ನಡೆದರು. ರಥದ ಹಿಂದೆಯೂ, ಪಕ್ಕಗಳಲ್ಲಿಯೂ ವಿಕಾರವಾದ ನಾನಾ ವೇಷಭೂಷಣಗಳುಳ್ಳ ಅನೇಕ ರಾಕ್ಷಸರು ಸುತ್ತಿಬರುತಿದ್ದರು. ಅತಿರಥರಾದ ಕೆಲವು ರಾಕ್ಷಸರು ರಥಾರೂಢರಾಗಿ ಬಂದರು. ಹಾಗೆಯೇ ಕೆಲವರು ಮದದಾನೆಗಳನ್ನೂ, ಬೇರೆ ಕೆಲವರು ಚಿತ್ರಗಮನವುಳ್ಳ ಕುದುರೆಗಳನ್ನೂ, ಏರಿ ರಾವಣನನ್ನು ಹಿಂಬಾಲಿಸಿದರು. ಮತ್ತೆ ಕೆಲವರು ಗದೆಗಳನ್ನೂ, ಕೆಲವರು ಪರಿಘಗಳನ್ನೂ, ಕೆಲವರು ಶಕ್ತ್ಯಾಯುಧಗಳನ್ನೂ, ಕೆಲವರು ತೋಮರಗಳನ್ನೂ, ಕೆಲವರು ಗಂಡುಗೊಡಲಿಗಳನ್ನೂ, ಕೆಲವರು ಶೂಲಗಳನ್ನೂ ಹಿಡಿದು ಬರುತ್ತಿದ್ದರು. ಹೀಗೆ ರಾವಣನು ಸಭಾಸ್ಥಾನಕ್ಕೆ ಹೊರಟಾಗ, ಸಾವಿರಾರು ವಾದ್ಯಗಳು ಮಹಾಧ್ವನಿಯಿಂದ

---

1. ಇಲ್ಲಿ "ಮೈಥಿಲೀಕಾಮಮೋಹಿತಃ" ಎಂದು ಮೂಲವು. ಸೀತಾವಿಷಯವಾದ ಕಾಮವೆಂದರೆ, ಆಕೆಗೆ ತಾನು ಭೃತ್ಯನಾಗಬೇಕೆಂಬ ಆಶೆಯೆಂದು ವಾಸ್ತವಾರ್ಥವು. ಹೀಗೆಯೇ ಅಲ್ಲಲ್ಲಿ ಸಾಮಾನ್ಯವಾಗಿ ತೋರುವ ಅರ್ಥಗಳಿಗೆಲ್ಲಾ ಭಕ್ತಿವಿಷಯಕವಾಗಿ ವಾಸ್ತವಾರ್ಥವನ್ನು ಗ್ರಹಿಸಬೇಕು. (ಮಹೇಶ್ವರತೀರ್ಥರು.)

1. ಇಲ್ಲಿ "ಅತೀತಸಮಯೇ ಕಾಲೇ ತಸ್ಮಿನ್ ವೈ ಯುಧಿ ರಾವಣಃ । ಅಮಾತ್ಯೈಶ್ಚ ಸುಹೃದ್ಭಿಶ್ಚ ಮಂತ್ರಕಾಲಮಮನ್ಯತ" ಎಂದು ಮೂಲವು. ಇದಕ್ಕೆ (ಕಾಲೇ ಅತೀತಸಮಯೇ) ರಾವಣನು, ತನಗೆ ಆಯುಃಕಾಲವು ಮುಂಚಿಹೋಗುತ್ತಿರಲು (ಯುಧಿ) ಯುದ್ಧದಲ್ಲಿ (ಅಮಾತ್ಯೈಶ್ಚ ಸುಹೃದ್ಭಿಶ್ಚ ಸಹ ಆತ್ಮಾನಂ) ಅಮಾತ್ಯಮಂತ್ರಿಗಳೊಡಗೂಡಿದ ತನ್ನನ್ನು (ಪ್ರಾಪ್ತಕಾಲಂ) ಸನ್ನಿಹಿತಮೃತ್ಯುವುಳ್ಳವನನ್ನಾಗಿ ತಿಳಿದನು. ಎಂದರೆ ರಾವಣನು ತನಗೆ ಆಯುಷ್ಕಾಲವು ತೀರಿದುದರಿಂದ, ತನಗೂ ತನ್ನ ಅಮಾತ್ಯಾದಿಗಳಿಗೂ ಮೃತ್ಯುವು ಸನ್ನಿಹಿತವಾದಂತೆಯೇ ತಿಳಿದುದಾಗಿ ವಾಲ್ಮೀಕಿಯ ಹೃದಯವು (ಗೋವಿಂದರಾಜರು.)

ಮೊಳಗುತಿದ್ದುವು. ಶಂಖಗಳು ನುಡಿಸಲ್ಪಡುತಿದ್ದುವು. ರಾವಣನು ರಾಜಮಾರ್ಗದಲ್ಲಿ ಬರುತ್ತಿರುವಾಗ ಅವನ ಮಹಾರಥದ ಚಕ್ರಧ್ವನಿಯೇ ನಾನಾ ದಿಕ್ಕುಗಳಲ್ಲಿಯೂ, ಪ್ರತಿಧ್ವನಿಯನ್ನು ಹೊರಡಿಸುವಂತೆ ಮೊಳಗುತಿತ್ತು. ರಥದ ಮೇಲೆ ರಾಜಚಿಹ್ನವಾಗಿ ಹಿಡಿದ ಶ್ವೇತಚ್ಛತ್ರವು ಪೂರ್ಣಚಂದ್ರನಂತೆ ಶೋಭಿಸುತಿತ್ತು. ಆತನ ಎಡಬಲಪಕ್ಕ ಗಳಲ್ಲಿ ಸುವರ್ಣಸೂತ್ರದಿಂದ ಬಿಗಿಯಲ್ಪಟ್ಟು ಶುದ್ಧ ಸ್ಫಟಿಕದಂತೆ ಸ್ವಚ್ಛವಾದ ಎರಡು ಚಾಮರಗಳು ಶೋಭಿಸುತಿದ್ದುವು. ರಾವಣನು ಬರುವಾಗ ಅಲ್ಲಲ್ಲಿ ರಾಕ್ಷಸರು ಕೈ ಜೋಡಿಸಿ ಮುಂದೆ ನಿಂತು ಆತನಿಗೆ ತಲೆಬಗ್ಗಿ ನಮಸ್ಕರಿಸುತಿದ್ದರು. ಕೆಲವರು ಜಯ ಶಬ್ದವನ್ನು ಹೇಳುತಿದ್ದರು. ಕೆಲವು ವೃದ್ಧರಾಕ್ಷಸರು ಆಶೀರ್ವಚನಗಳನ್ನು ಹೇಳುತ್ತಿದ್ದರು ಹೀಗೆ ಸಮಸ್ತ ರಾಕ್ಷಸರಿಂದ ಸ್ತುತಿಸಲ್ಪಡುತ್ತ ರಾವಣನು ತನ್ನ ಸಭಾಸ್ಥಾನವನ್ನು ಸೇರಿದನು. ಆ ಸಭಾಸ್ಥಾನದಲ್ಲಿಯೋ ನಡುನಡುವೆ ಚಿನ್ನ ಬೆಳ್ಳಿಯ ಕಂಬಗಳು ! ಶುದ್ಧಸ್ಫಟಿಕಮಯವಾದ ನೆಲಗಟ್ಟುಗಳು ! ಅವುಗಳಮೇಲೆ ಬಂಗಾರದ ಸರಿಗೆಗಳಿಂದ ಚಿತ್ರಕೆಲಸ ಮಾಡಲ್ಪಟ್ಟ ಪಟ್ಟೆಮಡಿಯ ದಿವ್ಯಾಸನಗಳು ! ಹೀಗೆ ಮಹಾವೈಭವ ದಿಂದ ಕೂಡಿ, ಸಾಕ್ಷಾದ್ವಿಶ್ವಕರ್ಮನಿಂದ ನಿರ್ಮಿತವಾಗಿ, ಆರು ನೂರು ಮಂದಿ ಘೋರಪಿಶಾಚಗಳಿಂದ ರಕ್ಷಿತವಾದ ತನ್ನ ಸಭಾಸ್ಥಾನವನ್ನು ಪ್ರವೇಶಿಸಿ, ಅಲ್ಲಿ ವೈಢೂರ್ಯಮಯವಾಗಿಯೂ, [1]ಪ್ರಿಯಕಮೃಗದ ಚರ್ಮದಿಂದ ಹೊದ್ದಿಸಲ್ಪಟ್ಟು ದಾಗಿಯೂ, ಅಂದವಾದ ದಿಂಬುಳ್ಳುದಾಗಿಯೂ, ಇದ್ದ ತನ್ನ ಸಿಂಹಾಸನವನ್ನೇರಿ ಕುಳಿತನು. ಆಮೇಲೆ ರಾವಣನು ಅಲ್ಲಿ ವೇಗಶಾಲಿಗಳಾದ ಕೆಲವು ರಾಕ್ಷಸದೂತರನ್ನು ಕರೆದು ತನ್ನ ಅಧಿಕಾರದರ್ಪಕ್ಕೆ ತಕ್ಕ ಮಾತಿನಿಂದ ಅವರನ್ನು ಕುರಿತು "ಎಲೈ ದೂತರೆ! ಈಗ ನಾವು ಮಹಾಪ್ರಯತ್ನದಿಂದ ನಿರ್ವಹಿಸಬೇಕಾದ [2]ದೊಡ್ಡ ಕಾರ್ಯವೊಂದಿರುವುದು ! ಈ ಪಟ್ಟಣದಲ್ಲಿರುವ ಸಮಸ್ತ ರಾಕ್ಷಸರನ್ನೂ ಈ ಕ್ಷಣವೇ ನನ್ನಲ್ಲಿಗೆ ಕರೆತರಬೇಕು" ಎಂದನು. ಈ ಮಾತನ್ನು ಕೇಳಿದೊಡನೆ ರಾಕ್ಷಸದೂತ ರೆಲ್ಲರೂ ಆ ಪಟ್ಟಣದಲ್ಲಿ ಮನೆಮನೆಗೆ ತಿರುಗಿ, ಅಲ್ಲಲ್ಲಿನ ವಿಹಾರಸ್ಥಳಗಳಲ್ಲಿಯೂ,

1. ಪ್ರಿಯಕಮೃಗವೆಂದರೆ, ನುಣುಪಾಗಿಯೂ, ಮೃದುವಾಗಿಯೂ ಇರುವ ಕೂದಲ ಒಂದು ಜಾತಿಯ ಮೃಗವು.

2. ಇಲ್ಲಿ ಬಹಳ ದೊಡ್ಡ ಕಾರ್ಯವೆಂದು ಹೇಳಿದುದರಿಂದ, ರಾವಣನು ಚಾರರ ಮೂಲಕವಾಗಿ ರಾಮಾದಿಗಳು ಸಮುದ್ರತೀರಕ್ಕೆ ಬಂದಿರುವುದನ್ನು ಆಗಲೇ ತಿಳಿದುಕೊಂಡಿ ರುವುದಾಗಿ ಸೂಚಿತವು.

ಶಯನಗೃಹಗಳಲ್ಲಿಯೂ, ಉದ್ಯಾನಗಳಲ್ಲಿಯೂ, ವಿಹರಿಸುತ್ತಿದ್ದ ಒಬ್ಬೊಬ್ಬ ರಾಕ್ಷಸನನ್ನೂ ನೋಡಿ ನಿರ್ಭಯವಾಗಿ ಅವರಿಗೆ ರಾಜಾಜ್ಞೆಯನ್ನು ತಿಳಿಸುತ್ತ ಬಂದರು. ಈ ರಾಜಾಜ್ಞೆಯನ್ನು ಕೇಳಿದೊಡನೆ ಆ ಪುರವಾಸಿಗಳಾದ ಸಮಸ್ತ ರಾಕ್ಷಸರೂ ಅಲ್ಲಿಂದ ರಾವಣಸಭೆಗೆ ಹೊರಟರು. ಕೆಲವರು ರಥಗಳನ್ನೇರಿ ಬಂದರು. ಕೆಲವರು ಕುದುರೆಗಳನ್ನೇರಿ ಬಂದರು. ಕೆಲವರು ಆನೆಗಳನ್ನೇರಿ ಹೊರಟರು. ಕೆಲವರು ಕಾಲುನಡೆಯಿಂದಲೇ ಬಂದು ಸೇರಿದರು. ಹೀಗೆ ರಥಗಜತುರಗಾದಿಗಳಿಂದ ಆ ಪುರಪ್ರದೇಶವೆಲ್ಲವೂ, ಪಕ್ಷಿಗಳಿಂದ ನಿಬಿಡವಾದ ಆಕಾಶದಂತೆ ಕಾಣುತಿತ್ತು. ಆ ರಾಕ್ಷಸರು ಪಲ್ಲಕ್ಕಿ ಮೊದಲಾದ ಪ್ರಯಾಣಸಾಧನಗಳಿಂದಲೂ, ಆನೆ ಕುದುರೆ ಮೊದಲಾದ ವಾಹನಗಳಿಂದಲೂ, ಆ ಸಭಾದ್ವಾರದವರೆಗೂ ಬಂದು, ತಮ್ಮ ವಾಹನಗಳನ್ನು ಅಲ್ಲಿಯೇ ಹೊರಗೆ ನಿಲ್ಲಿಸಿ, ಸಿಂಹಗಳು ಪರ್ವತಗುಹೆಯನ್ನು ಪ್ರವೇಶಿಸುವಂತೆ ಕಾಲುನಡೆಯಿಂದಲೇ ಸಭೆಯನ್ನು ಪ್ರವೇಶಿಸಿದರು. ಈ ಸಮಸ್ತ ರಾಕ್ಷಸರೂ ಅಲ್ಲಿ ಮೊದಲು ರಾವಣನ ಪಾದಗಳನ್ನು ಹಿಡಿದು ನಮಸ್ಕರಿಸಲು, ರಾಕ್ಷಸೇಂದ್ರನು ಅವರೆಲ್ಲರನ್ನೂ ಯಥೋಚಿತವಾಗಿ ಮನ್ನಿಸಿದನು. ಆಮೇಲೆ ರಾಜಾಜ್ಞೆಯಿಂದ ಅವರಲ್ಲಿ ಕೆಲವರು ಪೀಠಗಳಲ್ಲಿಯೂ, ಶ್ರೋತ್ರಿಯರಾದ ಕೆಲವರು ದರ್ಭಾಸನಗಳಲ್ಲಿಯೂ, ಸಾಮಾನ್ಯರಾದ ಕೆಲವರು ಬರೀನೆಲದಲ್ಲಿಯೂ ತಮ್ಮ ತಮ್ಮ ಸ್ಥಿತಿಗೆ ತಕ್ಕಂತೆ ಕುಳಿತರು. ಹೀಗೆ ರಾಜಾಜ್ಞೆಗೆ ಬದ್ಧರಾಗಿ ಬಂದ ಲಂಕಾನಿವಾಸಿಗಳೆಲ್ಲರೂ ತಮ್ಮ ತಮ್ಮ ಗೌರವಕ್ಕೆ ತಕ್ಕಂತೆ, ರಾವಣನ ಸುತ್ತಲೂ ಸೇರಿದರು. ಮತ್ತು ಅಲ್ಲಿ ಕಾರ್ಯಾಕಾರ್ಯಗಳನ್ನು ನಿಶ್ಚಯಿಸುವುದರಲ್ಲಿ ನಿಪುಣರಾಗಿಯೂ, ಪ್ರಮುಖರಾಗಿಯೂ ಇರುವ ಕೆಲವು [1]ಮಂತ್ರಿಗಳೂ, ಗುಣಾಢ್ಯರಾಗಿಯೂ, ವ್ಯವಹಾರಗಳನ್ನು ಚೆನ್ನಾಗಿ ಬಲ್ಲವರಾಗಿಯೂ, ಸೂಕ್ಷ್ಮಬುದ್ಧಿಯುಳ್ಳವರಾಗಿಯೂ ಇದ್ದ ಅಮಾತ್ಯರೂ ನೂರಾರುಮಂದಿ ಸೇರಿದ್ದರು. ಸುವರ್ಣಕಾಂತಿಯಿಂದ ಮನೋಹರವಾದ ಆ ರಾಕ್ಷಸೇಂದ್ರನ ಮನೆಯಲ್ಲಿ ರಾವಣನ ಕ್ಷೇಮವನ್ನು ವಿಚಾರಿಸುವುದಕ್ಕಾಗಿ ಇನ್ನೂ ಅನೇಕಮಂದಿ ಶೂರರೂ, ಗುಂಪುಗುಂಪಾಗಿ ಬಂದು ಸೇರಿದ್ದರು. ಈ ಸಮಸ್ತ ರಾಕ್ಷಸರೂ ರಾವಣನನ್ನು ಸುತ್ತಿ ಕುಳಿತಿರಲು, ಇಷ್ಟರಲ್ಲಿ ಮಹಾತ್ಮನಾದ ವಿಭೀಷಣನೂ, ಬಂಗಾರದಿಂದ ಚಿತ್ರಕೆಲಸಮಾಡಲ್ಪಟ್ಟ, ಸರ್ವೋತ್ತಮವಾದ ಒಂದು

1. ಇಲ್ಲಿ ಮಂತ್ರಿಗಳೆಂದರೆ ಬುದ್ಧಿಸಹಾಯರೆಂದೂ, ಅಮಾತ್ಯರೆಂದರೆ ಕಾರ್ಯಸಹಾಯರೆಂದೂ ಭೇದವನ್ನು ಗ್ರಹಿಸಬೇಕು.

ದೊಡ್ಡ ರಥವನ್ನೇರಿ ರಾವಣನ ಸಭೆಗೆ ಬಂದು ಸೇರಿದನು. ಅಲ್ಲಿ ವಿಭೀಷಣನು ತನ್ನಣ್ಣನಾದ ರಾವಣನ ಪಾದಗಳನ್ನು ಹಿಡಿದು ತನ್ನ ಹೆಸರನ್ನು ಹೇಳಿ ನಮಸ್ಕರಿಸಿದನು. ಹಾಗೆಯೇ ಶುಕನೂ, ಪ್ರಹಸ್ತನೂ ಮುಂದೆ ಬಂದು ರಾವಣನಿಗೆ ನಮಸ್ಕರಿಸಿದರು. ಆ ಮೂವರನ್ನೂ ರಾವಣನು ಯಥೋಚಿತವಾಗಿ ಮನ್ನಿಸಿ ಅವರಿಗೆ ತಕ್ಕ ಆಸನಗಳನ್ನು ಕೊಟ್ಟು ಕುಳ್ಳಿರಿಸಿದನು. ಆ ಸಭೆಯಲ್ಲಿ ನಾನಾ ರತ್ನಖಚಿತಗಳಾದ ಸುವರ್ಣಾಭರಣಗಳನ್ನು ಧರಿಸಿ, ಉತ್ತಮವಸ್ತ್ರಗಳನ್ನುಟ್ಟು ಮೇಲಾದ ಅಗರು ಚಂದನಗಳನ್ನು ಪೂಸಿ, ಸುಗಂಧಪುಷ್ಪಗಳನ್ನು ಧರಿಸಿದ್ದ ರಾಕ್ಷಸರೆಲ್ಲರೂ ನೆರೆದಿರಲು, ಆ ಸಭಾಸ್ಥಾನವೆಲ್ಲವೂ ಗಂಧಪುಷ್ಪಾದಿಗಳ ಸುವಾಸನೆಯಿಂದಲೇ ತುಂಬಿದಂತಾಯಿತು. ಅಷ್ಟು ಮಹಾಸಭೆಯು ನೆರೆದಿರುವಾಗಲೂ, ರಾವಣಭಯದಿಂದ ಒಬ್ಬನಾದರೂ ಸದ್ದು ಮಾಡುವವನಿಲ್ಲ! ಒಬ್ಬನಾದರೂ ಅಕ್ರಮವಾಗಿ ಮಾತೆತ್ತುವವನಿಲ್ಲ! ಒಬ್ಬನಾದರೂ ಉಸಿರೆತ್ತಿ ಗಟ್ಟಿಯಾಗಿ ಮಾತಾಡುವವನಿಲ್ಲ! ಆ ರಾಕ್ಷಸರಲ್ಲಿಯೋ ಒಬ್ಬೊಬ್ಬರೂ ತಮತಮಗೆ ಬೇಕಾದ ಕೋರಿಕೆಗಳನ್ನು ಪಡೆದವರು! ಒಬ್ಬೊಬ್ಬರೂ ಕ್ರೂರಪರಾಕ್ರಮವುಳ್ಳವರು! ಇಂತಹ ರಾಕ್ಷಸರೆಲ್ಲರೂ ರಾವಣಾಜ್ಞೆಯನ್ನು ನಿರೀಕ್ಷಿಸುತ್ತ ಆತನ ಮುಖವನ್ನೇ ನೋಡುತಿದ್ದರು. ಹೀಗೆ ಬಲಾಢ್ಯರಾಗಿಯೂ, ಧೀರರಾಗಿಯೂ, ಶಸ್ತ್ರಧಾರಿಗಳಾಗಿಯೂ ಇದ್ದ ಅನೇಕ ರಾಕ್ಷಸರು ನೆರೆದಿರಲು, ಅವರ ನಡುವೆ ರಾವಣನು, ವಸುಗಳ ನಡುವೆ ದೇವೇಂದ್ರನಂತೆ ಆ ಸಭೆಯಲ್ಲಿ ತನ್ನ ದೇಹಕಾಂತಿಯಿಂದ ಬೆಳಗುತಿದ್ದನು

ಇಲ್ಲಿಗೆ ಹನ್ನೊಂದನೆಯ ಸರ್ಗವು.

ರಾಮನಿಗೆ ಸೀತೆಯನ್ನೊಪ್ಪಿಸದಂತೆಯೇ ಆತನನ್ನು ಜಯಿಸುವುದಕ್ಕುಪಾಯವೇನೆಂದು ರಾವಣನು ರಾಕ್ಷಸರೊಡನೆ ಆಲೋಚಿಸಿದುದು. ಕುಂಭಕರ್ಣನು ಆ ಕಾರ್ಯಕ್ಕೆ ತನ್ನ ಪರಾಕ್ರಮವೊಂದೇ ಸಾಕಾಗಿರುವುದೆಂದು ಹೇಳಿಕೊಂಡುದು.

ಆಮೇಲೆ ರಣವೀರನಾದ ರಾವಣನು ಆ ಸಭೆಯ ಸುತ್ತಲೂ ಕಣ್ಣಿಟ್ಟು ನೋಡಿ, ಅಲ್ಲಿದ್ದ ಸೇನಾಪತಿಯಾದ ಪ್ರಹಸ್ತನನ್ನು ಕುರಿತು, “ಎಲೆ ಸೇನಾಪತೀ!

ಈಗ ನಾವು ಗೂಢವಾಗಿ ಕೆಲವು ಮಂತ್ರಾಲೋಚನೆಗಳನ್ನು ನಡೆಸಬೇಕಾಗಿರುವುದು. ಆದುದರಿಂದ ನೀನು, ನಮ್ಮಲ್ಲಿ ಧನುರ್ವಿದ್ಯೆಯನ್ನು ಚೆನ್ನಾಗಿ ಅಭ್ಯಸಿಸಿದ ರಥಿಕರನ್ನೂ, ಮಾವುತರನ್ನೂ, ಅಶ್ವಯೋಧರನ್ನೂ, ಪದಾತಿಗಳನ್ನೂ ಕರೆದು; ಈ ನಾಲ್ಕು ಬಗೆಯ ಚತುರಂಗ ಸೈನ್ಯಗಳನ್ನೂ ಹೆಚ್ಚು ಜಾಗರೂಕತೆಯಿಂದ ಈ ನಮ್ಮ ಅರಮನೆಯ ಸುತ್ತಲೂ ಕಾವಲಿರುವಂತೆ ಆಜ್ಞಾಪಿಸಬೇಕು." ಎಂದನು. ರಾವಣನಿಗೆ ಬಹಳ ವಿಶ್ವಾಸಪಾತ್ರನಾದ ಪ್ರಹಸ್ತನು, ಆ ರಾಜಾಜ್ಞೆಯಲ್ಲಿ ದೃಢವಾದ ವಿಶ್ವಾಸವನ್ನಿಟ್ಟು, ತನ್ನ ಸೈನ್ಯವೆಲ್ಲವನ್ನೂ ಆ ರಾವಣನ ಅರಮನೆಯೊಳಗೂ, ಹೊರಗೂ ಕ್ರಮವಾಗಿ ಕಾವಲಿರಿಸಿ, ಅಂತಃಪುರರಕ್ಷಣಕ್ಕಾಗಿಯೂ ಬೇರೆಕೆಲವು ಸೈನ್ಯವನ್ನಿಟ್ಟು ಆಮೇಲೆ ರಾವಣನ ಸಮ್ಮುಖಕ್ಕೆ ಬಂದು ಅವನೊಡನೆ, "ಸ್ವಾಮಿ! ಮಹಾಬಲವುಳ್ಳ ಸೈನ್ಯವನ್ನೇ ನಮ್ಮ ಅರಮನೆಯ ಹೊರಗೂ, ಒಳಗೂ ಕಾವಲಿರಿಸಿರುವೆನು. ಇನ್ನು ಮುಂದೆ ನಿಮಗೆ ಅಭಿಮತವಾಗಿ ತೋರಿದ ಕಾರ್ಯವನ್ನು ಧೈರ್ಯವಾಗಿ ನಡೆಸಬಹುದು! ನಿಮಗೆ ಕಾರ್ಯವು ಕೈಗೂಡಬೇಕೆಂಬುದೇ ನನ್ನ ಕೋರಿಕೆ." ಎಂದನು. ರಾಜ್ಯಹಿತದಲ್ಲಿ ನಿರತನಾದ ರಾವಣನು, ಪ್ರಹಸ್ತನ ಮಾತನ್ನು ಕೇಳಿ, ತನಗೆ ಮುಂದೆ ಬರಬಹುದಾದ ಜಯಾಪಜಯಗಳಲ್ಲಿಯೂ ದೃಷ್ಟಿಯಿಡದೆ, ಕಾಮಸುಖವೊಂದನ್ನೇ ಕೋರುತ್ತಾ, ಅಲ್ಲಿದ್ದ ಸಭಾಸದರನ್ನು ಕುರಿತು, "ಎಲೆ ಮಿತ್ರರೆ! ಧರ್ಮಾರ್ಥಕಾಮಗಳೆಂಬ ತ್ರಿವರ್ಗಗಳಲ್ಲಿ ಯಾವುದನ್ನು ಸೇವಿಸಬೇಕೆಂಬ ವಿಚಾರವು ಬಂದಾಗ, ಅದರಿಂದ ಮುಂದೆ ಬರಬಹುದಾದ ಪ್ರಿಯಾಪ್ರಿಯಗಳನ್ನೂ, ಸುಖದುಃಖಗಳನ್ನೂ, ಲಾಭನಷ್ಟಗಳನ್ನೂ, ಹಿತಾಹಿತಗಳನ್ನೂ, ಮೊದಲೇ ನಿಶ್ಚಯಿಸಿ ತಿಳಿಯುವುದರಲ್ಲಿ ನೀವು ಸಮರ್ಥರಾಗಿರುವಿರಿ! ಆ ವಿಷಯವಾದ ಸಂದೇಹವನ್ನು ತೀರಿಸುವುದಕ್ಕೂ ನಿಮಗೆ ಶಕ್ತಿಯುಂಟು! ನೀವು ಇದುವರೆಗೆ ಚೆನ್ನಾಗಿ ಆಲೋಚನೆಯಿಂದ ನಿಶ್ಚಯಿಸಿ ತೊಡಗಿದ ಕಾರ್ಯಗಳಲ್ಲಿ ಯಾವುದೂ ವಿಫಲವಾಗದೆ ಹಿಡಿದ ಕಾರ್ಯವೆಲ್ಲವೂ ಸಫಲವಾಗಿಯೇ ಇರುವುದು. ದೇವೇಂದ್ರನು ಚಂದ್ರಸೂರ್ಯಾದಿ ಗ್ರಹಗಳೊಡನೆಯೂ, ನಕ್ಷತ್ರಗಳೊಡನೆಯೂ, ದೇವತೆಗಳೊಡನೆಯೂ ಸೇರಿ, ಅವರ ಬಲದಿಂದ ಜಯಲಕ್ಷ್ಮಿಯನ್ನು ಹೊಂದಿದಂತೆ, ನಿಮ್ಮ ಬಲದಿಂದ ನಾನೂ ಜಯವನ್ನೇ ಪಡೆದಿರುವೆನು. ಇದಕ್ಕೆ ಮೊದಲೇ ನಾನು ನಿಮ್ಮೆಲ್ಲರಿಗೂ ಪ್ರಕೃತ ವಿಷಯಗಳೆಲ್ಲವನ್ನೂ ತಿಳಿಸಿರುವೆನಷ್ಟೆ? ಆದರೆ ಕುಂಭಕರ್ಣನು ನಿದ್ರಿಸುತಿದ್ದುದರಿಂದ ಅವನೊಬ್ಬನಿಗೆ ಮಾತ್ರ ಈಗಿನ ವಿಚಾರವೊಂದೂ ತಿಳಿದಂತಿಲ್ಲ. ಮಹಾಬಲಾಢ್ಯ

ನಾಗಿಯೂ, ಶಸ್ತ್ರಧಾರಿಗಳಲ್ಲಿ ಮೇಲಾಗಿಯೂ ಇರುವ ಈ ಕುಂಭಕರ್ಣನು ಕಳೆದ ಆರು ತಿಂಗಳುಗಳಿಂದಲೂ ಮಲಗಿದ್ದು, ಈಗಲೇ ನಿದ್ರೆಯಿಂದೆಚ್ಚೆತ್ತು ಬಂದಿರುವನು. ಇಲ್ಲಿನ ಸಂಗತಿಗಳೊಂದೂ ಆತನಿಗೆ ತಿಳಿಯದು. ಆದುದರಿಂದ ಮೊದಲು ಈತನಿಗೂ ಇದುವರೆಗಿನ ಸಂಗತಿಯನ್ನು ತಿಳಿಸಿಬಿಡುವೆನು" ಎಂದು ಹೇಳಿ, ಆಮೇಲೆ ಕುಂಭಕರ್ಣನನ್ನು ನೋಡಿ, "ಎಲೆ ವತ್ಸ ಕುಂಭಕರ್ಣಾ! ರಾಮನಿಗೆ ಪ್ರಿಯಪತ್ನಿಯಾಗಿಯೂ, ಜನಕಪುತ್ರಿಯಾಗಿಯೂ ಇರುವ ಸೀತೆಯನ್ನು ನಾನು ಜನಸ್ಥಾನದಿಂದ ಕದ್ದುತಂದು ನಮ್ಮ ಲಂಕೆಯಲ್ಲಿರಿಸಿರುವೆನು. ನಾನು ಎಷ್ಟೆಷ್ಟು ವಿಧದಿಂದ ಪ್ರಾರ್ಥಿಸಿದರೂ ಆಕೆಯು [1]ನನ್ನ ಸಜ್ಜೆಯನ್ನೇರುವುದಕ್ಕೆ ಇಷ್ಟಪಡದಿರುವಳು. ನನಗಾದರೋ ಮೂರು ಲೋಕದಲ್ಲಿಯೂ ಆ ಸೀತೆಯಂತೆ ಇಷ್ಟವಾದ ಬೇರೊಂದು ವಸ್ತುವೇ ಇಲ್ಲವೆಂದು ತೋರಿರುವುದು. ಅವಳ ರೂಪಸೌಂದರ್ಯಾದಿಗುಣಗಳು ಸಾಮಾನ್ಯವಲ್ಲ. ಸಣ್ಣನಡುವುಳ್ಳವಳು! ಉಬ್ಬಿದ ನಿತಂಬವುಳ್ಳವಳು! ಶರತ್ಕಾಲದ ಚಂದ್ರನಂತೆ ಮುಖವುಳ್ಳವಳು! ಸುವರ್ಣಪ್ರತಿಮೆಯಂತೆ ತೋರುವಳು! ಬಹಳ ಸೌಮ್ಯಸ್ವರೂಪಳು! ಮಯನಿರ್ಮಿತವಾದ ಮಾಯೆಯಂತೆ ಕ್ಷಣಕ್ಷಣಕ್ಕೂ ಹೊಸಮೋಹವನ್ನುಂಟುಮಾಡುವಳು! ಎಲೆ ವತ್ಸನೆ! ಕೆಂಪಾಗಿಯೂ, ಮೃದುವಾಗಿಯೂ, ದಟ್ಟವಾಗಿಯೂ ಇರುವ ಅಡಿಗಳಿಂದಲೂ, ಕೆಂಪಾದ ಉಗುರುಗಳಿಂದಲೂ ಶೋಭಿಸುವ ಅವಳ [2]ಕಾಲಿನ ಸೊಗಸನ್ನು ನೋಡಿದಮಾತ್ರಕ್ಕೆ ನನ್ನ ಕಾಮಾಗ್ನಿಯು ಮೇಲೆ ಮೇಲೆ ಜ್ವಲಿಸುತ್ತಿರುವುದು! ಹುತಮಾಡಿದ ಬೆಂಕಿಯ ಜ್ವಾಲೆಯಂತೆಯೂ ಸೂರ್ಯಪ್ರಭೆಯಂತೆಯೂ, ಎಣೆಯಿಲ್ಲದ ಕಾಂತಿಯಿಂದ ಶೋಭಿಸುವ ವಿಶಾಲಾಕ್ಷಿಯಾದ ಆಕೆಯನ್ನು ನೋಡಿದಷ್ಟೂ ನನಗೆ ತಾಪವೂ ಹೆಚ್ಚುತ್ತಿರುವುದು. ಉಬ್ಬಿದ ಮೂಗಿನಿಂದಲೂ, ಅಗಲವಾದ ಕಣ್ಣಿ

---

1. "ಸಾ ಮೇ ನ ಶಯ್ಯಾಮಾರೋಢುಮಿಚ್ಛತಿ" ಎಂದು ಮೂಲವು. ಇಲ್ಲಿ (ಮೇ ಶಯ್ಯಾಂ) ನನ್ನ ಸಜ್ಜೆಯನ್ನು ಎಂದರೆ, ನಾನು ಭಕ್ತಿಪೂರ್ವಕವಾಗಿ ಸಮರ್ಪಿಸಿದ ಹಾಸಿಗೆಯನ್ನು ಅಂಗೀಕರಿಸದಿರುವುದರಿಂದ ಸೀತೆಯು ತನ್ನನ್ನು ಅನುಗ್ರಹಿಸದಿರುವಳೆಂದು ವಾಸ್ತವಾರ್ಥವು.

2. ಇಲ್ಲಿ ರಾವಣನು, ಮೇಲೆ ಹೇಳಿದಂತೆ ಸರ್ವೋತ್ತಮ ಶುಭಲಕ್ಷಣಗಳುಳ್ಳ ಸೀತೆಯ ಪಾದಗಳನ್ನು ನೋಡಿದಾಗೆಲ್ಲಾ ತನಗೆ ಸರ್ವಪಾಪಹರಗಳಾದ ಆ ಪಾದಗಳನ್ನಾಶ್ರಯಿಸಬೇಕೆಂಬ ಕೋರಿಕೆಯು ಮೇಲೆಮೇಲೆ ಹೆಚ್ಚಿ, ಮನಸ್ಸನ್ನು ಕೊರಗಿಸುವುದೆಂದು ಹೇಳಿದುದಾಗಿ ವಾಸ್ತವಾರ್ಥವು.

ಗಳಿಂದಲೂ ಕೂಡಿ, ಅಂದವಾಗಿಯೂ ವಿಶಾಲವಾಗಿಯೂ ಇರುವ ಆ ಸುಂದರಿಯ ಮುಖವನ್ನು ನೋಡಿ ನೋಡಿ ನಾನು ಕಾಮವಶನಾಗಿ ಮರುಗುತ್ತಿರುವೆನು. ಮನ್ಮಥತಾಪವೆಂಬುದು ಸಾಮಾನ್ಯವಲ್ಲ! ಕೋಪದಲ್ಲಿಯೇ ಆಗಲಿ, ಹರ್ಷದಲ್ಲಿಯೇ ಆಗಲಿ, ತನ್ನ ಪ್ರಾಬಲ್ಯವನ್ನು ಬಿಡದೆ ಒಂದೇ ವಿಧವಾಗಿ ಬಾಧಿಸುತ್ತಿರುವುದು. ಮನುಷ್ಯನನ್ನು ಬಹಳವಾದ ಚಿಂತೆಗೆ ಈಡುಮಾಡಿ ಬಣ್ಣಗೆಡಿಸುವುದು. ಎಡೆಬಿಡದೆ ದುಃಖವನ್ನೂ ಸಂಕಟವನ್ನೂ ಹೆಚ್ಚಿಸುತ್ತಿರುವುದು. ಈ ವಿಧವಾದ ಮನ್ಮಥಬಾಧೆಯಿಂದ ನನ್ನ ಮನಸ್ಸೇ ಕೆಟ್ಟುಹೋಗಿರುವುದು. ಆ ಸೀತೆಯಾದರೋ ರಾಮನು ಒಂದುವೇಳೆ ತನ್ನನ್ನು ಹಿಂತಿರುಗಿಸುವುದಕ್ಕಾಗಿ ಇಲ್ಲಿಗೆ ಬರುವನೋ ಎಂಬ ಶಂಕೆಯಿಂದ, ಈಗಲೂ ಅವನ ಆಗಮನವನ್ನೇ ನಿರೀಕ್ಷಿಸುತ್ತಿರುವಳು. ಒಂದು ಸಂವತ್ಸರಕಾಲದವರೆಗೆ ತಾನು ರಾಮನನ್ನು ನಿರೀಕ್ಷಿಸುತ್ತಿದ್ದು, ಆಗಲೂ ಅವನು ಬಾರದಿದ್ದರೆ ನನಗೆ ವಶಳಾಗುವುದಾಗಿ ಹೇಳಿ, [1]ಆ ಒಂದು ವರ್ಷದ ಗಡುವನ್ನು ಕೇಳಿಕೊಂಡಿರುವಳು. ನಾನೂ ಅವಳ ನೇತ್ರಸೌಂದರ್ಯಕ್ಕೆ ವಶನಾಗಿ, ಅವಳ ಮಾತನ್ನು ಮೀರಲಾರದೆ ಹಾಗಿಯೇ ಪ್ರತಿಜ್ಞೆಮಾಡಿಕೊಟ್ಟಿರುವೆನು. ಎಲೆ ವತ್ಸನೆ! ಏನಾದರೇನು! [2]ಬಹುದೂರಕ್ಕೆ ನಡೆದು ಬಳಲಿದ ಕುದುರೆಯಂತೆ ನಾನು ಬಹುಕಾಲದಿಂದ ಕಾಮಪೀಡಿತನಾಗಿ ಬಳಲಿರುವೆನು. ನನ್ನ ದುರವಸ್ಥೆಯಂತೂ ಹೀಗಿರುವುದು. ಈ ಸಂಗತಿಯೂ ಹಾಗಿರಲಿ! ಮುಂದೆ ನಮ್ಮ ಶತ್ರುಗಳಿಂದ ನಮಗೆ ಅಪಾಯವಿಲ್ಲದಂತೆ ನೋಡಿಕೊಳ್ಳಬೇಕಾದುದು ಈಗಿನ ಮುಖ್ಯಕಾರ್ಯವು. ಈ ಸಮುದ್ರವೋ ಯಾರಿಗೂ ಅಕ್ಷೋಭ್ಯವಾಗಿ ಅನೇಕ ಕ್ರೂರಜಂತುಗಳಿಗೆ ನಿವಾಸವಾಗಿರುವುದು. ಕಪಿಗಳಾಗಲಿ, ರಾಮಲಕ್ಷ್ಮಣರಾಗಲಿ ಇದನ್ನು ಹೇಗೆ ದಾಟ

---

1. ಇಲ್ಲಿ ದುರಾತ್ಮನಾದ ರಾವಣನು, ತಾನೇ ಸೀತೆಗೆ ಕೊಟ್ಟುಬಂದ ಎರಡು ತಿಂಗಳ ಗಡುವನ್ನು, ಸೀತೆಯು ಕೇಳಿಕೊಂಡುದಾಗಿ ಆರೋಪಿಸಿ ಹೇಳಿರುವನೆಂದು ಗ್ರಾಹ್ಯವು. (ಗೋವಿಂದರಾಜರು) ಇದರಿಂದ ರಾವಣನು ತನಗೆ ಪರದೇವತೆಯಾದ ಸೀತೆಯು ತನ್ನ ಮನೆಯನ್ನು ಬಿಟ್ಟು ಹೋಗುವ ಕಾಲವು ಸಮೀಪಿಸಿತೆಂದು ಹೇಳಿ ದುಃಖಿಸಿದುದಾಗಿ ವಾಸ್ತವಾರ್ಥವು (ಮಹೇಶ್ವರತೀರ್ಥರು).

2. ಇಲ್ಲಿ ರಾವಣನು ಇದುವರೆಗೆ ತಾನು ತನ್ನ ಸ್ತ್ರೀಯರಲ್ಲಿ ಬೇಕುಬೇಕಾದ ಮನ್ಮಥ ಭೋಗಗಳನ್ನೆಲ್ಲಾ ಅನುಭವಿಸಿ ಬಳಲಿರುವುದರಿಂದ, ಇನ್ನು ಮುಂದೆ ತನಗೆ ಸೀತಾದೇವಿಯ ಪಾದಾಶ್ರಯವೊಂದು ಹೊರತು ಬೇರೊಂದೂ ಅಪೇಕ್ಷಿತವಲ್ಲವೆಂದು ಹೇಳಿದುದಾಗಿ ವಾಸ್ತವಾರ್ಥವು.

ಬರುವರೆಂದು ನೀವು ಧೈರ್ಯದಿಂದಿರಬಹುದು. ಆದರೆ ಅದನ್ನೂ ನಂಬುವುದಕ್ಕಿಲ್ಲ! ಹಿಂದೆ ಒಂದು ಕಪಿಯೇ ಇಲ್ಲಿಗೆ ಬಂದು ನಮ್ಮೊಡನೆ ದೊಡ್ಡಯುದ್ಧವನ್ನು ಮಾಡಿ ಹೋಯಿತು. ಕಾರ್ಯಗತಿಯನ್ನು ಹೀಗೆಂದು ತಿಳಿಯುವುದು ಯಾರಿಗೂ ಸಾಧ್ಯವಲ್ಲ. ಆದುದರಿಂದ ಈ ವಿಚಾರವಾಗಿ ನಿಮಗೆ ತೋರಬಹುದಾದ ಆಲೋಚನೆಯೇನು? ಅದನ್ನು ನನಗೆ ತಿಳಿಸಬೇಕು. ನಾನಾದರೋ ಕೇವಲ ಮನುಷ್ಯಮಾತ್ರನಾದ ರಾಮನಿಗಾಗಿ ಸ್ವಲ್ಪವೂ ಹೆದರುವವನಲ್ಲ. ಆದರೂ ಈ ವಿಷಯದಲ್ಲಿ ನೀವು ಚೆನ್ನಾಗಿ ಆಲೋಚಿಸಿ ತಿಳಿಸಬೇಕು. ಹಿಂದೆ ನಿಮ್ಮ ಸಹಾಯದಿಂದಲೇ ನಾನು ದೇವಾಸುರಯುದ್ಧದಲ್ಲಿಯೂ ಜಯವನ್ನು ಪಡೆದಿರುವೆನು. ಈಗಲೂ ಅಂತಹ ಶೂರರಾದ ನೀವೇ ನನ್ನ ಸಹಾಯಕ್ಕಿರುವಿರಿ. ಅತ್ತಲಾಗಿ ಸಮುದ್ರದ ಆಚೆಯ ದಡದಲ್ಲಿ ರಾಮಲಕ್ಷ್ಮಣರೆಂಬ ರಾಜಕುಮಾರರಿಬ್ಬರೂ ಸೀತೆಯಿರುವ ಸ್ಥಳವನ್ನು ತಿಳಿದುಕೊಂಡು, ಸುಗ್ರೀವನೇ ಮೊದಲಾದ ಕೆಲವು ವಾನರರನ್ನು ಮುಂದಿಟ್ಟುಕೊಂಡು ಸಿದ್ಧರಾಗಿ ಬಂದಿರುವರು. ಆದುದರಿಂದ ಈಗ ನಾವು ಸೀತೆಯನ್ನು ರಾಮನಿಗೆ ಹಿಂತಿರುಗಿ ಕೊಡದಿರುವುದಕ್ಕೂ [1]ಆ ರಾಮಲಕ್ಷ್ಮಣರನ್ನು ಕೊಲ್ಲುವುದಕ್ಕೂ ಉಪಾಯವೇನೆಂಬುದನ್ನು ಮೊದಲು ಯೋಚಿಸಬೇಕು. ಈ ವಿಷಯವನ್ನು ನೀವು ಚೆನ್ನಾಗಿ ಪರ್ಯಾಲೋಚಿಸಿ ನಿಮ್ಮ ನಿಶ್ಚಯವನ್ನು ನನಗೆ ತಿಳಿಸಿರಿ. [2]ಲೋಕದಲ್ಲಿ ಬೇರೆ ಯಾವನಿಗೂ ಕಪಿಗಳೊಡನೆ ಈ ಸಮುದ್ರವನ್ನು ದಾಟಿಬರುವಷ್ಟು ಶಕ್ತಿಯುಂಟೆಂದು ನನಗೆ ತೋರಲಿಲ್ಲ. ಹಾಗೆ ಬಂದರೂ ನಮಗೆ ಜಯವೆಂಬುದು ಸಿದ್ಧವು" ಎಂದನು. ಹೀಗೆ ರಾವಣನು ಮನ್ಮಥವಿಕಾರದಿಂದ ಮೈಮರೆತು ಪ್ರಲಾಪಿಸಿದ ಮಾತನ್ನು ಕೇಳಿದೊಡನೆ ಕುಂಭಕರ್ಣನು ಕೋಪದಿಂದೆದ್ದು, "ಅಣ್ಣಾ! ಮೊದಲು ನೀನು ರಾಮಲಕ್ಷ್ಮಣರಿದ್ದ ಜನಸ್ಥಾನಕ್ಕೆ ಹೋಗಿ ಸೀತೆಯನ್ನು ಕದ್ದುತಂದಾಗ, ನಿನಗೆ ಆ ಆಲೋಚನೆಯನ್ನು ಹೇಳಿದವ

---

1. ಇಲ್ಲಿ "ಆದೇಯಾಚ ಯಥಾ ಸೀತಾ ವಧ್ಯೌ ದಶರಥಾತ್ಮಜೌ" ಎಂದು ಮೂಲವು. ಇದಕ್ಕೆ ವಾಸ್ತವಾರ್ಥದಲ್ಲಿ "ಅವಧ್ಯೌ" ಎಂದು ಪದಚ್ಛೇದವು.

2. ಇಲ್ಲಿ "ನಹಿ ಶಕ್ತಿಂ ಪ್ರಪಶ್ಯಾಮಿ ಜಗತ್ಯನ್ಯಸ್ಯ ಕಸ್ಯಚಿತ್ । ಸಾಗರಂ ವಾನರೈಸ್ತೀರ್ತ್ವಾ ನಿಶ್ಚಯೇನ ಜಯೋ ಮಮ" ಎಂದು ಮೂಲವು. ವಾನರರೊಡನೆ ಸೇರಿ ಸಮುದ್ರವನ್ನು ದಾಟಿ ಬರುವುದಕ್ಕೆ ರಾಮನು ಹೊರತು ಬೇರೊಬ್ಬನಿಗೆ ಶಕ್ತಿಯಿಲ್ಲವೆಂದೂ, ಅವನು ದಾಟಿ ಬರುವುದು (ನಿಶ್ಚಯೇ) ನಿಶ್ಚಯವಾಗಿದ್ದ ಪಕ್ಷದಲ್ಲಿ (ನ ಜಯೋ ಮಮ) ತನಗೆ ಎಂದಿಗೂ ಜಯವಿಲ್ಲವೆಂದೂ ಇಲ್ಲಿನ ವಾಸ್ತವಾರ್ಥವು.

ರಾರು? ನಿನಗೆ ನೀನೇ ಮನಸ್ಸಿನಲ್ಲಿ ಆ ಅಕಾರ್ಯವನ್ನು ನಿಶ್ಚಯಿಸಿಕೊಂಡು ಸೀತೆಯನ್ನು ಬಲಾತ್ಕಾರದಿಂದ ತಂದುಬಿಟ್ಟೆಯಲ್ಲವೆ? ಮೊದಲೇ ನೀನು ಆ ವಿಷಯವನ್ನೂ ನಮ್ಮೊಡನೆ ಆಲೋಚಿಸಿದ್ದ ಪಕ್ಷದಲ್ಲಿ, ಯಮುನಾನದಿಯು ನೆಟ್ಟಗೆ ಯಾಮುನಪರ್ವತವನ್ನು ಹೊಂದುವಂತೆ, ನಿನ್ನ ಮನಸ್ಸೂ ಸರಿಯಾದ ನಿಶ್ಚಯವನ್ನು ಹೊಂದಿ, ಈ ಚಿಂತೆಗೆ ಅವಕಾಶವೇ ಇಲ್ಲದೆ ನೆಮ್ಮದಿಯಿಂದಿರುತಿತ್ತು. ಆಗಲೇ ನೀನು ನಮ್ಮೊಡನೆ ಆಲೋಚಿಸಬೇಕಾಗಿತ್ತು. ಈಗ ಮಿಂಚಿಹೋದಮೇಲೆ ಮಾಡುವ ಆಲೋಚನೆಗಳೆಲ್ಲವೂ ವ್ಯರ್ಥವು. ನಿನ್ನ ಮನಸ್ಸಿಗೂ ನೆಮ್ಮದಿಯಿಲ್ಲ. ಈಗ ಮಾಡುವ ಆಲೋಚನೆಗಳನ್ನು ಮೊದಲೇ ಮಾಡಿದ್ದರೆ ಬಹಳ ಚೆನ್ನಾಗಿತ್ತು. ಯಾವ ರಾಜನು ಮೊದಲೇ ಚೆನ್ನಾಗಿ ಆಲೋಚಿಸಿ ನ್ಯಾಯವನ್ನು ಕಂಡುಕೊಂಡು ಆ ನ್ಯಾಯರೀತಿಯಿಂದಲೇ ರಾಜಕಾರ್ಯಗಳನ್ನು ನಡೆಸುವನೋ, ಆತನ ಮನಸ್ಸು ಕಾರ್ಯನಿಶ್ಚಯವನ್ನು ಹೊಂದಿ ನೆಮ್ಮದಿಯಿಂದಿರುವುದರಿಂದ ಆಮೇಲೆ ಪರಿತಾಪಕ್ಕೆ ಅವಕಾಶವಿಲ್ಲ. ಹಾಗಿಲ್ಲದೆ ಕಾರ್ಯಗಳನ್ನು ವಿರುದ್ಧೋಪಾಯಗಳಿಂದ ಪ್ರಯತ್ನಿಸಿದರೂ, ಅವುಗಳನ್ನು ವಿರುದ್ಧರೀತಿಯಿಂದ ಮಾಡಿದರೂ, ಅವು ನಿಷ್ಫಲವಾಗುವುವಲ್ಲದೆ, ಅಪಾತ್ರಗಳಲ್ಲಿಟ್ಟ ಹವಿಸ್ಸುಗಳಂತೆ ದೋಷವನ್ನೂ ತರುವುವು. ಯಾವನು ಮೊದಲೇ ನಡೆಸಬೇಕಾದ ಮಂತ್ರಾಲೋಚನೆಗಳನ್ನು ಆ ಕಾರ್ಯವು ಮಿಂಚಿಹೋದಮೇಲೆ ನಡೆಸುವನೋ, ಚೆನ್ನಾಗಿ ಆಲೋಚಿಸಿದಮೇಲೆ ನಡೆಸಬೇಕಾದ ಕಾರ್ಯಗಳನ್ನು ಆಲೋಚನೆಗೆ ಮೊದಲೇ ನಡೆಸಬೇಕೆಂದು ಕೋರುವನೋ, ಅವನಿಗೆ ನ್ಯಾಯಾನ್ಯಾಯಗಳೇ ತಿಳಿಯವು. ಹಂಸಗಳು ತಮ್ಮಿಂದ ದಾಟಲಸಾಧ್ಯವಾದ ಕ್ರೌಂಚಪರ್ವತವನ್ನು ಕೂಡ, ತಮಗಾಗಿ ಷಣ್ಮುಖನು ಮಾಡಿಟ್ಟ ರಂಧ್ರದಿಂದ ದಾಟಿಹೋಗುವಂತೆ, ಶತ್ರುಗಳು, ತಮಗಿಂತಲೂ ತಮ್ಮ ಶತ್ರುವು ಅಧಿಕಬಲವುಳ್ಳವನೆಂದು ತಿಳಿದರೆ, ಮತ್ತು ಅವನು ಕಾರ್ಯಾಲೋಚನೆಯಿಲ್ಲದ ಚಪಲನೆಂದೂ ತಿಳಿದರೆ, ಅಂತವನಲ್ಲಿ ಇತರರಿಂದುಂಟಾದ ಛಿದ್ರವನ್ನು ತಿಳಿದು, ಆ ಸಂದರ್ಭದಲ್ಲಿ ಅವನ ಮೇಲೆಬಿದ್ದು ಜಯವನ್ನು ಸಾಧಿಸುವರು. ಮುಖ್ಯವಾಗಿ ನೀನು ಮುಂದಾಲೋಚನೆಯಿಲ್ಲದೆ ಸೀತೆಯನ್ನು ಕದ್ದು ತಂದುದೇ ದೊಡ್ಡ ತಪ್ಪು! ಇದು ನಿನಗೆ ದೂರಾಲೋಚನೆಯಿಲ್ಲದ ದೋಷವು. ಹೀಗಿದ್ದರೂ ಅನ್ನದಲ್ಲಿ ವಿಷಮಿಶ್ರವಾದುದನ್ನು ತಿಳಿಯುದಂತೆ, ರಾಮನು ನಿನ್ನ ಅಕೃತ್ಯವನ್ನು ಇದುವರೆಗೂ ತಿಳಿಯದೆ ಸುಮ್ಮನಿರುವನು. ಇದೂಕೂಡ ನಿನ್ನ ಅದೃಷ್ಟವೇ ಹೊರತು ಬೇರೆಯಲ್ಲ.

ಆದುದೇನೋ ಆಯಿತು! ಈಗಲೂ ಚಿಂತೆಯಿಲ್ಲ. ನೀನಂತೂ ಹೀಗೆ ಅಯುಕ್ತ ಕಾರ್ಯಕ್ಕೆ ಪ್ರಯತ್ನಿಸಿದೆ! ಈಗಲೂ ಅದನ್ನು ಸರಿಪಡಿಸುವುದಕ್ಕೆ ನನ್ನಿಂದ ಹೊರತು ಬೇರೆಯುವರಿಂದ ಸಾಧ್ಯವಲ್ಲ! ಈಗಲೂ ನಾನು ನಿನ್ನ ಶತ್ರುಗಳನ್ನು ಜಯಿಸಿ ಕ್ರಮಪಡಿಸುವೆನು. ಇದಕ್ಕಾಗಿ ನೀನು ವ್ಯಸನಪಡಬೇಡ! ಒಂದುವೇಳೆ ಇಂದ್ರಸೂರ್ಯರಾಗಲಿ, ಅಗ್ನಿವಾಯುಗಳಾಗಲಿ, ಕುಬೇರವರುಣರಾಗಲಿ ನನಗಿದಿರಾಗಿ ಬಂದರೂ ಅವರನ್ನು ನಾನು ಇದಿರಿಸಿ ಜಯಿಸಬಲ್ಲೆನು. ಅಣ್ಣಾ! ಬೆಟ್ಟದಂತಿರುವ ನನ್ನ ಈ ದೇಹವನ್ನು ನೋಡು! ನನಗೆ ಯುದ್ಧಸಾಧನವಾಗಿರುವ ಈ ಮಹಾ ಪರಿಘವನ್ನು ನೋಡು! ನನ್ನ ಭಯಂಕರವಾದ ಸಿಂಹನಾದವನ್ನು ನೋಡು! ನನ್ನ ತೀಕ್ಷ್ಣವಾದ ಕೋರೆದಾಡೆಗಳನ್ನು ನೋಡು! ಇವುಗಳನ್ನು ನೋಡಿದ ಮಾತ್ರಕ್ಕೆ ದೇವೇಂದ್ರನಾದರೂ ಭಯಪಟ್ಟು ಪಲಾಯನಮಾಡುವನು. ಬೇರೆ ಯವರನ್ನು ಕೇಳಬೇಕೆ! ಆ ರಾಮನು ನನ್ನ ಮೇಲೆ ಮೊದಲು ಒಂದು ಬಾಣವನ್ನು ಪ್ರಯೋಗಿಸಿದರೂ, [1]ಎರಡನೆಯ ಬಾಣವನ್ನು ತೆಗೆಯುವುದರೊಳಗಾಗಿಯೇ ಅವನ ರಕ್ತವನ್ನು ನಾನು ಹೀರಿಬಿಡುವೆನೆಂದು ತಿಳಿ! ಇನ್ನು ನೀನು ಚಿಂತಿಸ ಬೇಡ! ಸಮಾಧಾನದಿಂದಿರು! ಅಣ್ಣಾ! [2]ಈಗಲೇ ನಾನು ರಾಮನನ್ನು ಕೊಂದು ನಿನಗೆ ಅನಾಯಾಸವಾಗಿ ಜಯವುಂಟಾಗುವಂತೆ ಪ್ರಯತ್ನಿಸುವೆನು. ಲಕ್ಷ್ಮಣ

1. ಇಲ್ಲಿ "ಪುನರ್ಮಾಂ ಸ ದ್ವಿತೀಯೇನ ಶರೇಣ ನಿಹನಿಷ್ಯತಿ । ತತೋಽಹಂ ತಸ್ಯ ಪಾಸ್ಯಾಮಿ ರುಧಿರಂ ರಾಮಮಾಶ್ವಸ" ಎಂದು ಮೂಲವು. ಇದರಿಂದ ರಾಮನು ತನ್ನ ಎರಡನೆಯ ಬಾಣದಿಂದಲೇ ನನ್ನನ್ನು ಅವಶ್ಯವಾಗಿ ಕೊಂದುಬಿಡುವನೆಂದೂ, ಆ ವಧದಿಂದ ನನ್ನ ರಕ್ತವನ್ನೇ ನಾನು ಕುಡಿಯುವುದನ್ನು ನೋಡಿ ನೀನು ದುಃಖದಿಂದ ನಿಟ್ಟುಸಿರು ಬಿಡುವೆಯೆಂದೂ, ಕುಂಭಕರ್ಣನು ರಾವಣನಿಗೆ ಸೂಚಿಸಿದುದಾಗಿ ಅಶ್ಲೀಲಾರ್ಥವು ಧ್ವನಿತ ವಾಗುವುದು (ಗೋವಿಂದರಾಜರು) "ರಾಮನು ತನ್ನನ್ನು ಎರಡನೆಯ ಬಾಣದಿಂದಲೇ ಕೊಲ್ಲುವುದಾಗಿದ್ದರೂ, ಅದಕ್ಕೆ ಮೊದಲೇ ತಾನು ಕೆಲವು ವಾನರರ ರಕ್ತವನ್ನು ಕುಡಿದು ಸಾಯುವುದರಿಂದ, ಅದನ್ನು ನೋಡಿಯಾದರೂ ನೀನು ಸ್ವಲ್ಪ ಸಮಾಧಾನವನ್ನು ಹೊಂದ ಬಹುದೆಂದು ಹೇಳಿದುದಾಗಿ ವಾಸ್ತವಾರ್ಥವು (ಮಹೇಶ್ವರ ತೀರ್ಥರು).

2. ಇಲ್ಲಿ "ವಧೇನ ವೈ ದಾಶರಥೇಸ್ಸುಖಾವಹಂ ಜಯಂ ತವಾಹರ್ತುಮಹಂ ಯತಿಷ್ಯೇ। ಹತ್ವಾ ಚ ರಾಮಂ ಸಹ ಲಕ್ಷ್ಮಣೇನ ಖಾದಾಮಿ ಸರ್ವಾ ಹರಿಯೂಥಮುಖ್ಯಾ" ಎಂದು ಮೂಲವು. ನಾನು ರಾಮನ ಕೈಗೆ ಸಿಕ್ಕಿ ಸಾಯುವುದರಿಂದ ರಾಮನಿಗೆ ನಿನ್ನ ಮೇಲಿನ ಜಯವು ಸುಖಸಾಧ್ಯವಾಗುವಂತೆ ಮಾಡುವೆ" ನೆಂದು ಇಲ್ಲಿ ಅಶ್ಲೀಲಾರ್ಥವು ಧ್ವನಿತವಾಗುವುದು.

*

ಸಹಿತನಾದ ರಾಮನನ್ನು ಕೊಂದೊಡನೆ, ಸಮಸ್ತವಾನರರನ್ನೂ, ಒಂದೇ ತುತ್ತಾಗಿ ಭಕ್ಷಿಸಿಬಿಡುವೆನು. ಇದಕ್ಕಾಗಿ ನೀನು ಸ್ವಲ್ಪವೂ ಪ್ರಯತ್ನಿಸಬೇಕಾದುದಿಲ್ಲ. ನೀನು ಇಲ್ಲಿಯೇ ಇದ್ದು ನಿನ್ನ ಮನಸ್ಸಿಗೆ ತೋರಿದಂತೆ ಕ್ರೀಡಿಸು. ನಿನಗೆ ಇಷ್ಟವಾದ ಮದ್ಯವನ್ನು ಕುಡಿ! ನಿಶ್ಚಿಂತನಾಗಿ ನಿನಗೆ ಬೇಕಾದ ಕಾರ್ಯಗಳನ್ನು ನಡೆಸುತ್ತಿರು! [1]ಅತ್ತಲಾಗಿ ನಾನು ರಾಮನನ್ನು ಕೊಂದೊಡನೆ, ಇತ್ತಲಾಗಿ ಸೀತೆಯು ಬಹುಕಾಲದವರೆಗೆ ನಿನಗೆ ಕೈವಶವಾಗಿರುವಳು" ಎಂದನು.

ಇಲ್ಲಿಗೆ ಹನ್ನೆರಡನೆಯ ಸರ್ಗವು

{ ಸೀತೆಯನ್ನು ಬಲಾತ್ಕಾರದಿಂದೆಳೆದು ಭೋಗಿಸೆಂದು ಮಹಾಪಾರ್ಶ್ವನು ರಾವಣನಿಗೆ ಹೇಳಿದುದು. ರಾವಣನು ಬ್ರಹ್ಮಶಾಪದಿಂದ ತಾನು ಪರಸ್ತ್ರೀಯರನ್ನು ಬಲಾತ್ಕರಿಸಕೂಡದೆಂದು ಹೇಳಿದುದು. }

ಕುಂಭಕರ್ಣನ ನೀತಿವಾಕ್ಯವನ್ನು ಕೇಳಿ ರಾವಣನಿಗೆ ಅತ್ಯಾಕ್ರೋಶವು ಹುಟ್ಟಿತು. ಈ ರಾವಣನ ಮನೋಭಿಪ್ರಾಯವನ್ನು ತಿಳಿದೊಡನೆ, ಬಲಾಢ್ಯನಾದ ಮಹಾಪಾರ್ಶ್ವನು ಸ್ವಲ್ಪಹೊತ್ತಿನವರೆಗೆ ತನ್ನಲ್ಲಿ ತಾನು ಚಿಂತಿಸಿ, ಆಮೇಲೆ ರಾವಣನ ಮುಂದೆ ಕೈಮುಗಿದು ನಿಂತು "ಮಹಾರಾಜನೆ! ಲೋಕದಲ್ಲಿ ಯಾವನು ಮಧುವನ್ನು ಕುಡಿಯಬೇಕೆಂಬ ಆಸೆಯಿಂದ, ಕ್ರೂರಮೃಗಗಳಿಂದಲೂ ವಿಷಸರ್ಪಗಳಿಂದಲೂ ತುಂಬಿದ ಕಾಡಿಗೆ ಹೋಗಿ, ಅಲ್ಲಿ ಪ್ರಯತ್ನಪಟ್ಟು ಮಧುವನ್ನೂ ಸಂಪಾದಿಸಿ, ಕೊನೆಗೆ ಕೈಗೆ ಸಿಕ್ಕಿದ ಆ ಮಧುವನ್ನು ಕುಡಿಯದೆ ಬರುವನೋ, ಅವನು ಬಹಳ ಮೂಢನೆನಿಸುವನಲ್ಲವೆ? ಹಾಗೆಯೇ ನೀನೂ ಇಷ್ಟು ಪ್ರಯತ್ನಪಟ್ಟು ಸೀತೆಯನ್ನು ತಂದಿರುವಾಗಲೂ ಅವಳನ್ನನುಭವಿಸದೆ ಸುಮ್ಮನಿರಬಾರದು. ಎಲೈ ಶತ್ರುಸೂದನನೆ! ಸಮಸ್ತಲೋಕಗಳನ್ನೂ ರಕ್ಷಿಸಬಲ್ಲವನಾದ ನಿನಗೆ

---

1. ಇಲ್ಲಿ "ಮಯಾ ತು ರಾಮೇ ಗಮಿತೇ ಯಮಕ್ಷಯಂ ಚಿರಾಯ ಸೀತಾ ವಶಗಾ ಭವಿಷ್ಯತಿ" ಎಂದು ಮೂಲವು. ಇಲ್ಲಿನ (ಗಮಿತೇ ಯಮಕ್ಷಯಂ) ಎಂಬಲ್ಲಿ (ಗಮಿತಾ+ಇಯಂ+ಅಕ್ಷಯಂ) ಎಂದು ಪದವಿಭಾಗವನ್ನು ಮಾಡಿ, "ಈ ಸೀತೆಯು ರಾಮನಲ್ಲಿ ಅಕ್ಷಯವಾಗಿ ಸೇರಿಸಲ್ಪಟ್ಟವಳಾಗಿ ಬಹುಕಾಲದವರೆಗೆ ಆತನ ವಶವರ್ತಿನಿಯಾಗಿರುವಳು" ಎಂದು ವಾಸ್ತವಾರ್ಥವನ್ನು ಗ್ರಹಿಸಬೇಕು.

[1]ಬೇರೆ ಶಿಕ್ಷಕರಾರುಂಟು? ಯಾರಿಗೂ ನೀನು ಹೆದರಬೇಕಾದುದಿಲ್ಲ! ಧರ್ಮಾಧರ್ಮ ಗಳಿಗೂ ನೀನು ಅಂಜಬೇಡ! ಶತ್ರುಗಳ ತಲೆಯನ್ನು ಮೆಟ್ಟಿದಂತೆ ಸೀತೆಯೊಡನೆ ರಮಿಸು! ಈ ಭಯಕ್ಕಾಗಿ ನೀನು ಸೀತೆಯನ್ನೊಪ್ಪಿಸಬೇಕಾದ ಅವಶ್ಯಕವೂ ಇಲ್ಲ! ನಿನ್ನ ಶಕ್ತಿಗೆ ತಡೆಯಾವುದು? ಸೀತೆಯು ಒಪ್ಪಿದರೇನು? ಒಪ್ಪದಿದ್ದ ರೇನು? [2]ಕೋಳಿಯಂತೆ ಆಗಾಗ ಮೇಲೆಬಿದ್ದು ಆಕೆಯನ್ನು ಬಲಾತ್ಕಾರದಿಂದ, ಹಿಡಿದೆಳೆದು ಇಷ್ಟಬಂದಂತೆ ಅನುಭವಿಸು! ಪ್ರಕೃತದಲ್ಲಿ ನಿನ್ನ ಕಾಮವನ್ನು ನೀನು ತೀರಿಸಿಕೊಂಡುಬಿಡು! ಆಮೇಲೆ ಯಾವ ಭಯವು ಬಂದರೂ ಬರಲಿ! ಅಥವಾ ಬರುವಹಾಗಿದ್ದರೂ, ಇರಲಿ! ಅವೆಲ್ಲವೂ ನಿನಗೊಂದು ಲಕ್ಷ್ಯವಲ್ಲ! ಹೇಗಾದರೂ ತಪ್ಪಿಸಿಕೊಳ್ಳಬಹುದು. ಇದೋ! ಇಲ್ಲಿ ನಿನಗೆ ಬೆಂಬಲವಾಗಿರುವ ಈ ಕುಂಭಕರ್ಣನನ್ನು ನೋಡು! ಮಹಾಬಲಾಢ್ಯನಾದ ಈ ಇಂದ್ರಜಿತ್ತನ್ನು ನೋಡು! ಇವರಿಬ್ಬರೂ ವಜ್ರಧಾರಿಯಾದ ಇಂದ್ರನನ್ನಾದರೂ ತಡೆಯಬಲ್ಲರು. ಯುದ್ಧಮಾಡುವುದಕ್ಕೆ ಕೈಲಾಗದ ಯಾರೋ ಕೆಲವು ಹೇಡಿಗಳು, ಸಾಮದಾನ ಭೇದಗಳೆಂಬ ಬೇರೆಬೇರೆ ಉಪಾಯಗಳನ್ನು ಕಲ್ಪಿಸಿಟ್ಟಿರುವರು! ಅವೆಲ್ಲವೂ ನಿನಗೇಕೆ? ದಂಡೋಪಾಯದಿಂದಲೇ ಕಾರ್ಯವು ಕೈಗೂಡುವ ರೀತಿಯನ್ನು

---

1. ಇಲ್ಲಿ "ಈಶ್ವರಸ್ಯೇಶ್ವರಃ ಕೋಽಸ್ತಿ ತವ ಶತ್ರುನಿಬರ್ಹಣ। ರಮಸ್ವ ಸಹ ವೈದೇಹ್ಯಾ ಶತ್ರೂನಾಕ್ರಮ್ಯ ಮೂರ್ಧಸು" ಎಂದು ಮೂಲವು. ಇಲ್ಲಿ ಸರ್ವೇಶ್ವರನಾದ ರಾಮನಿಗೆ ಬೇರೊಬ್ಬರೂ ನಿಯಾಮಕರಿಲ್ಲವೆಂದೂ, ಆದುದರಿಂದ (ವೈದೇಹ್ಯಾ ಸಹ ತವ ಶತ್ರೂನ್ ಮೂರ್ಧಸು ಆಕ್ರಮ್ಯ) ಸೀತೆಯೊಡಗೂಡಿದ ಆ ನಿನ್ನ ಶತ್ರುಗಳನ್ನೇ" ಎಂದರೆ ರಾಮನನ್ನೇ ನಿನ್ನ ಹತ್ತುತಲೆಗಳಿಂದಲೂ ನಮಸ್ಕರಿಸಿ ಕ್ಷೇಮದಿಂದಿರೆಂದೂ ವಾಸ್ತವಾರ್ಥವು. ಇಲ್ಲಿ (ಶತ್ರೂನ್) ಎಂಬ ಬಹುವಚನವು ಪೂಜಾರ್ಥಕವೆಂದು ಗ್ರಾಹ್ಯವು.

2. ಇಲ್ಲಿ "ಬಲಾತ್ಕುಕ್ಕುಟವೃತ್ತೇನ ವರ್ತಸ್ವ ಸುಮಹಾಬಲ! ಆಕ್ರಮ್ಯಾಕ್ರಮ್ಯ ಸೀತಾಂ ವೈ ತಥಾ ಭುಂಕ್ಷ್ವ ರಮಸ್ವ ಚ" ಎಂದು ಮೂಲವು (ಕುಕ್ಕುಟವೃತ್ತೇನ ವರ್ತಸ್ವ) ಎಂಬಲ್ಲಿ (ಕುಕ್ಕುಟವೃತ್ತೇ + ನ + ವರ್ತಸ್ವ) ಎಂದು ಪದವಿಭಾಗವನ್ನು ಮಾಡಿ, "ಎಲೈ ಮಹಾಬಲಾಢ್ಯನಾದ ರಾವಣನೆ! ನೀನು ಕೋಳಿಗಳಂತೆ ಚಪಲಸ್ವಭಾವದಲ್ಲಿರಬೇಡ! ಸೀತೆಯನ್ನು ಬಲಾತ್ಕಾರದಿಂದ ಹಿಡಿದು ಭೋಗಿಸಿ ರಮಿಸುವುದಕ್ಕೂ ಪ್ರಯತ್ನಿಸಬೇಡ!" ಎಂದು ಮಹಾಪಾರ್ಶ್ವನು ನೀತಿಯನ್ನೇ ಉಪದೇಶಿಸಿದುದಾಗಿ ವಾಸ್ತವಾರ್ಥವು (ಮಹೇಶ್ವರ ತೀರ್ಥರು) ಅಥವಾ "ಎಲೈ ರಾವಣನೇ! ಬೇರೆ ಯಾರಲ್ಲಿಯಾದರೂ ನೀನು ಕುಕ್ಕುಟ ವೃತ್ತಿಯನ್ನವಲಂಬಿಸು! ಸೀತೆಯನ್ನಾದರೋ (ಬಲಾತ್ ಭುಂಕ್ಷ್ವ) ನಿನ್ನ ಬಲದಿಂದ ಚೆನ್ನಾಗಿ ರಕ್ಷಿಸುತ್ತಿರು" ಎಂದು ವಾಸ್ತವಾರ್ಥವು (ಗೋವಿಂದರಾಜರು).

ನೋಡು! ಎಲೈ ಬಲಾಢ್ಯನೆ! ನೀನು ನಿನ್ನ ಶತ್ರುಗಳನ್ನು ಕೊಲ್ಲುವುದಕ್ಕಾಗಿ ಈ ಲಂಕೆಯನ್ನು ಬಿಟ್ಟು ಹೊರಗೆ ಹೋಗಬೇಕಾದುದೂ ಇಲ್ಲ! ಯಾವ ಶತ್ರುಗಳು ಬಂದರೂ ಇಲ್ಲಿಗೇ ಬರಲಿ! ಅವರು ಈ ಲಂಕೆಯ ಕಡೆಗೆ ಕಾಲಿಟ್ಟೊಡನೆ ನಾವು ಇದೋ ಈ ನಮ್ಮ ಶಸ್ತ್ರಬಲದಿಂದ ನಿಗ್ರಹಿಸಿ ನಿನಗೆ ವಶಮಾಡುವೆವು. ಇದರಲ್ಲಿ ಸಂದೇಹವಿಲ್ಲ" ಎಂದನು. ಇದನ್ನು ಕೇಳಿ ರಾವಣನು ಅವನ ಮಾತನ್ನೇ ಬಹಳ ವಾಗಿ ಅಭಿನಂದಿಸುತ್ತ, ಅವನನ್ನು ಕುರಿತು, "ಮಹಾಪಾರ್ಶ್ವ! ಭಲೆ ಭಲೆ! ಬಹಳ ಸಂತೋಷವಾಯಿತು! ಚೆನ್ನಾಗಿ ಹೇಳಿದೆ! ಆದರೇನು? ನನ್ನ ವಿಷಯ ವಾಗಿ ಈ ವಿಚಾರವಲ್ಲಿ ಒಂದು ರಹಸ್ಯವುಂಟು! ಅದನ್ನೂ ತಿಳಿಸುವೆನು ಕೇಳು! ಇದು ಬಹುಕಾಲದ ಹಿಂದೆ ನಡೆದ ವಿಚಾರವು! ಹಿಂದೆ ಒಂದಾನೊಂದು ಕಾಲದಲ್ಲಿ, ನಾನು ಗಗನಚಾರಿಯಾಗಿ ಹೋಗುತ್ತಿದ್ದೆನು. [1]ಆಗ ಪುಂಜಿಕಸ್ಥಳಿಯೆಂಬ ಅಪ್ಸರಸಿಯು ಬ್ರಹ್ಮಸಭೆಗೆ ಹೋಗುತ್ತ, ದಾರಿಯಲ್ಲಿ ನನ್ನನ್ನು ಕಂಡಳು. ಅಗ್ನಿ ಜ್ವಾಲೆಯಂತೆ ಬೆಳಗುತ್ತಿದ್ದ ಆಕೆಯು ನನ್ನ ಘೋರರೂಪವನ್ನು ಕಂಡೊಡನೆ ಭಯದಿಂದ ಹಿಂದಕ್ಕೆ ಸರಿದಳು. ನನಗಾದರೋ ಅವಳನ್ನು ಕಂಡೊಡನೆ ಕಾಮಾತುರವು ಹುಟ್ಟಿತು. ಆಗಲೇ ನಾನು ಅವಳನ್ನು ಬಲಾತ್ಕಾರದಿಂದ ಹಿಡಿದು, ಅವಳ ಬಟ್ಟೆಯನ್ನೆಳೆದು, ಅವಳೊಡನೆ ಭೋಗಿಸಿದೆನು. ಆಕೆಯು ಹೀಗೆ ನನ್ನಿಂದ ಭಂಗಹೊಂದಿ, ಕಂದಿದ ಕಮಲಿನಿಯಂತೆ ಕೊರಗುತ್ತ ಬ್ರಹ್ಮದೇವನ ಬಳಿಗೆ ಹೋದಳು. ಆ ಸಂಗತಿಯು ಆಗಲೇ ಮಹಾತ್ಮನಾದ ಬ್ರಹ್ಮನಿಗೂ ತಿಳಿದಂತಿದೆ. ಆಗ ಬ್ರಹ್ಮನು ನನ್ನ ಮೇಲೆ ಬಹಳವಾಗಿ ಕೋಪಗೊಂಡು ನನ್ನನ್ನು ಕರೆದು, "ರಾವಣಾ! ಇದು ಮೊದಲುಗೊಂಡು ನೀನು ಬೇರೆ ಯಾವ ಪರಸ್ತ್ರೀಯನ್ನಾಗಲಿ ಬಲಾತ್ಕಾರದಿಂದ ಭೋಗಿಸಿದಪಕ್ಷದಲ್ಲಿ, ಆಗಲೇ ನಿನ್ನ ತಲೆಯು ನೂರುಭಾಗವಾಗಿ ಭೇದಿಸಿಹೋಗುವುದು. ಇದರಲ್ಲಿ ಸಂದೇಹವಿಲ್ಲ!" ಎಂದು ಶಪಿಸಿರುವನು. ಈ ಶಾಪದ ಭಯದಿಂದಲೇ ನಾನು ಸೀತೆಯನ್ನು ಇದು ವರೆಗೂ ಬಲಾತ್ಕಾರದಿಂದ ನನ್ನ ಹಾಸಿಗೆಯನ್ನೇರಿಸದೆ ಬಿಟ್ಟಿರುವೆನು. ಇದು

---

1. ರಾವಣನಿಗೆ ಇದಕ್ಕೆ ಮೊದಲೇ ರಂಭೆಯ ನಿಮಿತ್ತವಾಗಿ ನಳಕೂಬರನಿಂದ ಪ್ರಾಪ್ತವಾದ ಶಾಪವಿದ್ದರೂ, ಆ ನಳಕೂಬರನು ಪ್ರಾಕೃತದೇವತೆಯಾದುದರಿಂದ, ಅದನ್ನು ಲಕ್ಷ್ಯದಲ್ಲಿಡದೆ ಆಮೇಲೆ ತನಗೆ ಬ್ರಹ್ಮನಿಂದುಂಟಾದ ಈ ಶಾಪವನ್ನೇ ನಿರ್ದೇಶಿಸಿ, ಪಿತಾಮಹ ವಾಕ್ಯವಾದುದರಿಂದ ಅದನ್ನು ಮಾತ್ರ ತಾನು ಮೀರಿ ನಡೆಯುವುದಕ್ಕಿಲ್ಲವೆಂದು ಹೇಳಿದುದಾಗಿ ಗ್ರಾಹ್ಯವು.

ಹೊರತು ನನಗೆ ಬೇರೆ ಭಯವಿಲ್ಲ ! ನನಗಾದರೋ ಸಮುದ್ರದಂತೆ ವೇಗವೂ, ವಾಯುವಿನಂತೆ ಶೀಘ್ರಗತಿಯೂ ಇರುವುದು. ಇದೊಂದೂ ರಾಮನಿಗೆ ತಿಳಿಯದು. ಆದರಿಂದಲೇ ರಾಮನು ನನ್ನಮೇಲೆ ದಂಡೆತ್ತಿ ಬರುವಂತಿದೆ. ಆದರೇನು ? ಪರ್ವತ ಗುಹೆಯಲ್ಲಿ ಮಲಗಿದ ಸಿಂಹವನ್ನು ಮೇಲೆಬ್ಬಿಸುವಂತೆಯೂ, ಮೃತ್ಯುವನ್ನು ಎಚ್ಚರಗೊಳಿಸುವಂತೆಯೂ, ಈಗ ರಾಮನು ನನ್ನನ್ನು ಯುದ್ಧಕ್ಕೆ ಕರೆಯು ತ್ತಿರುವನು. ಆ ರಾಮನು ಇದುವರೆಗೆ ಯುದ್ಧದಲ್ಲಿ ಮಹಾಸರ್ಪಗಳಂತಿರುವ ನನ್ನ ಬಾಣಗಳನ್ನು ಕಂಡವನಲ್ಲ. ಅದರಿಂದಲೇ ನನ್ನಮೇಲೆ ಯುದ್ಧೋದ್ಯುಕ್ತ ನಾಗಿರುವನು. ಮಹಾಪಾರ್ಶ್ವನೆ! ಹೆಚ್ಚಾಗಿ ಹೇಳಿದುದರಿಂದೇನು ! ಇನ್ನು ಶೀಘ್ರದಲ್ಲಿಯೇ ನಾನು, ಕೊಳ್ಳಿಗಳಿಂದ ಆನೆಯನ್ನು ಹೇಗೋಹಾಗೆ ವಜ್ರ ಸಮಾನಗಳಾದ ನನ್ನ ಬಾಣಗಳಿಂದ ರಾಮನನ್ನು ಸುಟ್ಟು ಓಡಿಸಿಬಿಡುವೆನು. ಮತ್ತು ಉದಿಸಿಬರುವ ಸೂರ್ಯನು ನಕ್ಷತ್ರಗಳ ಕಾಂತಿಯೆಲ್ಲವನ್ನೂ ಕಂದಿಸುವಂತೆ, ನಾನು ಸೇನಾಸಮೇತನಾಗಿ ನಿಂತು ಅವನ ವಾನರಸೇನೆಯೆಲ್ಲವನ್ನೂ ಧ್ವಂಸ ಮಾಡುವೆನು. ಸಾವಿರಕಣ್ಣುಳ್ಳ ದೇವೇಂದ್ರನಾಗಲಿ ಜಲಾಧಿಪತಿಯಾದ ವರುಣ ನಾಗಲಿ ಯುದ್ಧದಲ್ಲಿ ನನ್ನನ್ನು ಜಯಿಸಲಾರರು. ಮೊದಲು ಈ ನನ್ನ ಬಾಹು ಬಲದಿಂದಲೇ ನಾನು ಕುಬೇರನನ್ನು ಜಯಿಸಿ, ಅವನು ಪಾಲಿಸುತ್ತಿದ್ದ ಈ ಲಂಕೆ ಯನ್ನು ಕೈವಶಮಾಡಿಕೊಂಡಿರುವೆನಲ್ಲವೆ ? ಇನ್ನು ಮನುಷ್ಯಮಾತ್ರನಾದ ಆ ರಾಮನ ಪಾಡೇನು ? ” ಎಂದನು.

ಇಲ್ಲಿಗೆ ಹದಿಮೂರನೆಯ ಸರ್ಗವು.

ತಿರುಗಿ ವಿಭೀಷಣನು ರಾವಣನಿಗೆ ಹಿತವನ್ನು ಹೇಳಿದುದು.

ರಾವಣನು ಹೇಳಿದ ಮಾತುಗಳನ್ನೂ ಕುಂಭಕರ್ಣನ ಆರ್ಭಟಗಳನ್ನೂ ಕೇಳಿ ವಿಭೀಷಣನು, ತಿರುಗಿ ರಾಕ್ಷಸೇಂದ್ರನಾದ ರಾವಣನನ್ನು ಕುರಿತು, ಅರ್ಥ ಯುಕ್ತವಾಗಿಯೂ ಹಿತವಾಗಿಯೂ ಇರುವ ಮಾತಿನಿಂದ, “ ಎಲೆ ರಾಜನೆ ! ಸೀತೆ ಯನ್ನು ಬಿಡದಹಾಗೆಯೇ ರಾಮನನ್ನು ಜಯಿಸಬೇಕೆಂದೆಳಸುವೆಯಾ ? ಆ ಸೀತೆ ಯನ್ನು ಕೇವಲ ಸ್ತ್ರೀಮಾತ್ರಳೆಂದು ತಿಳಿಯಬೇಡ ? ಸೋಕಿದಮಾತ್ರದಿಂದಲೇ

ಕೊಲ್ಲುವ ಕಾಳಸರ್ಪವೆಂದು ತಿಳಿ! ವಿಸ್ತಾರವಾದ ಎದೆಯೆಂಬ ದೀರ್ಘದೇಹದಿಂದಲೂ, ಚಿಂತೆಯೆಂಬ ಮಹಾವಿಷದಿಂದಲೂ, ಮಂದಹಾಸವೆಂಬ ಹರಿತನಾದ ಕೋರೆದಾಡೆಗಳಿಂದಲೂ, ಬೆರಳುಗಳೆಂಬ ಐದು ಹೆಡೆಗಳಿಂದಲೂ ಭಯಂಕರವಾದ ಸೀತೆಯೆಂಬ ಆ ಮಹಾಸರ್ಪವನ್ನು ನೀನೇಕೆ ಮನೆಯಲ್ಲಿ ತಂದಿಟ್ಟಿರುವೆ? ಅಯ್ಯೋ! ಇದರಿಂದುಂಟಾಗುವ ಅನರ್ಥವು ನಿನ್ನೊಬ್ಬನಲ್ಲಿಯೇ ಹೋಗುವುದಿಲ್ಲ! ಅಣ್ಣಾ! ಬೇಡ! ಸೀತೆಯನ್ನು ರಾಮನಿಗೊಪ್ಪಿಸಿಬಿಡು! ಪರ್ವತಶಿಖರದಂತೆ ಮಹಾದೇಹವುಳ್ಳವರಾಗಿಯೂ, ದಂತನಖಾಯುಧವುಳ್ಳವರಾಗಿಯೂ ಇರುವ ಕಪಿಗಳು ಬಂದು ಲಂಕೆಯನ್ನು ಮುತ್ತುವುದರೊಳಗಾಗಿ ಸೀತೆಯನ್ನು ರಾಮನಿಗೊಪ್ಪಿಸಿಬಿಡು! ವಜ್ರಸಮಾನಗಳಾಗಿಯೂ, ವಾಯುವೇಗವುಳ್ಳವುಗಳಾಗಿಯೂ ಇರುವ ರಾಮಬಾಣಗಳು ಇಲ್ಲಿನ ರಾಕ್ಷಸಪ್ರಮುಖರ ತಲೆಗಳನ್ನು ಹಾರಿಸುವುದಕ್ಕೆ ಮೊದಲೇ ರಾಮನಿಗೆ ಸೀತೆಯನ್ನೊಪ್ಪಿಸಿಬಿಡು!" ಎಂದು ಹೇಳಿ, ಆಮೇಲೆ ಪ್ರಹಸ್ತನ ಕಡೆಗೆ ತಿರುಗಿ, "ಪ್ರಹಸ್ತಾ! ಪ್ರಾಣಾಂತಕರಗಳಾಗಿಯೂ, ಸಿಡಿಲಿನಂತೆ ವೇಗವುಳ್ಳವುಗಳಾಗಿಯೂ ಇರುವ ರಾಮಬಾಣಗಳು ಇನ್ನೂ ನಿನ್ನ ದೇಹದಲ್ಲಿ ನಾಟಲಿಲ್ಲ. ಅದರಿಂದಲೇ ನೀನು ಹೀಗೆ ಹರಟುವಂತಿದೆ! ಈ ಇಂದ್ರಜಿತ್ಕುಂಭಕರ್ಣರಾಗಲಿ, ಈ ಮಹಾಪಾರ್ಶ್ವ ಮಹೋದರರಾಗಲಿ, ಈ ಕುಂಭನಿಕುಂಭರಾಗಲಿ, ಈ ಅತಿಕಾಯನಾಗಲಿ, ರಾಮನ ಮುಂದೆ ಯುದ್ಧದಲ್ಲಿ ನಿಲ್ಲುವುದಕ್ಕೂ ಶಕ್ತರಲ್ಲ. ಇನ್ನು ಜಯದಾಸೆಯೇಕೆ? ಪ್ರಹಸ್ತಾ! ನಮ್ಮಲ್ಲಿ ಮಹಾಶೂರರೆನಿಸಿಕೊಂಡ ಅವರ ಗತಿಯೇ ಹಾಗಿರುವಾಗ, ನಿನ್ನ ಪಾಡನ್ನು ಕೇಳಬೇಕೆ? ನೀನು ಸೂರ್ಯನ ರಕ್ಷಣೆಯಲ್ಲಿದ್ದರೂ, ದೇವತೆಗಳೆಲ್ಲರೂ ನಿನ್ನನ್ನು ರಕ್ಷಿಸಬೇಕೆಂದು ಬಂದರೂ, ನೀನು ಹೋಗಿ ದೇವೇಂದ್ರನ ತೊಡೆಯಲ್ಲಿಯೇ ಬಿದ್ದರೂ, ಪಾತಾಳಕ್ಕೆ ಪ್ರವೇಶಿಸಿದರೂ, ರಾಮನಿಂದ ತಪ್ಪಿಸಿಕೊಂಡು ಬದುಕಿ ಹೋಗಲಾರೆ! ಇದು ನಿಜವು!" ಎಂದನು. ಇದನ್ನು ಕೇಳಿ ಪ್ರಹಸ್ತನು ವಿಭೀಷಣನನ್ನು ಕುರಿತು, "ವಿಭೀಷಣಾ! ನಮಗೆ ಭಯವೆಂದರೇನು? ದೇವತೆಗಳಿಂದಾಗಲಿ, ದಾನವರಿಂದಾಗಲಿ ಬೇರೆ ಯಾರೊಬ್ಬರಿಂದಾಗಲಿ ನಮಗೆ ಎಲ್ಲಿಯೂ ಭಯವೆಂಬುದೇ ಇಲ್ಲ! ನಾಗ ಗಂಧರ್ವ ಯಕ್ಷರಿಗಾಗಲಿ, ಪನ್ನಗರಿಗಾಗಲಿ, ಯುದ್ಧದಲ್ಲಿ ನಾವು ಹೆದರುವವರಲ್ಲ! ಹೀಗಿರುವಾಗ ಕೇವಲ ಕ್ಷತ್ರಿಯಕುಮಾರನಾದ ಆ ರಾಮನಿಂದ ನಮಗೆ ಯುದ್ಧದಲ್ಲಿ ಭಯವೆಂದರೇನು?"

ಎಂದನು. ವಿಭೀಷಣನಾದರೋ ಬಹಳ ಬುದ್ಧಿವಂತನು! ತನ್ನ ಪ್ರಭುವಾದ ರಾವಣನಿಗೆ ಯಾವಾಗಲೂ ಹಿತವನ್ನೇ ಕೋರತಕ್ಕವನು! ಧರ್ಮಾರ್ಥಕಾಮ ಗಳಲ್ಲಿ ನಿಶ್ಚಿತವಾದ ಬುದ್ಧಿಯುಳ್ಳವನು! ಇಂತಹ ಮಹಾತ್ಮನಾದ ವಿಭೀಷಣನು, ಪ್ರಹಸ್ತನು ಹೇಳಿದ ಈ ದುರ್ವಾಕ್ಯವನ್ನು ಕೇಳಿ ತಿರುಗಿ ಅವನನ್ನು ಕುರಿತು "ಪ್ರಹಸ್ತಾ! ಈಗ ನೀನೂ ನಮ್ಮ ರಾಜನೂ, ಈ ಮಹೋದರನೂ, ಈ ಕುಂಭ ಕರ್ಣನೂ, ರಾಮನ ವಿಷಯವಾಗಿ ಯಾವಯಾವ ಕಾರ್ಯಗಳನ್ನು, ಯಾವಯಾವ ಕ್ರಮದಲ್ಲಿ ನಡೆಸಬೇಕೆಂದು ಹೇಳಿದಿರೋ ಅವೆಲ್ಲವೂ ಕೇವಲ ನಿರರ್ಥಕಗಳು! ಅಧರ್ಮಶೀಲನಿಗೆ ಸ್ವರ್ಗವು ಹೇಗೋ ಹಾಗೆ ರಾಮನ ವಿಷಯದಲ್ಲಿ ನಿಮ್ಮ ಈ ಪ್ರಯತ್ನವೊಂದೂ ಸಾಗದು! ಪ್ರಹಸ್ತಾ! ದೋಣಿಯಾದರೂ ಇಲ್ಲದೆ ಸಮುದ್ರವನ್ನು ದಾಟಬೇಕೆಂದರೆ ಸಾಧ್ಯವೆ? ಕಾರ್ಯದಕ್ಷನಾದ ರಾಮನನ್ನು ಕೊಲ್ಲುವುದಕ್ಕೆ ನನ್ನಿಂದಾಗಲಿ, ನಿನ್ನಿಂದಾಗಲಿ, ಇಲ್ಲಿನ ಸಮಸ್ತ ರಾಕ್ಷಸ ರಿಂದಾಗಲಿ, ಸಾಧ್ಯವಲ್ಲ. ಆ ರಾಮನೋ! ಧರ್ಮವೊಂದರಲ್ಲಿಯೇ ನಿರತನಾದವನು. ಮಹಾರಥನು! ಲೋಕೈಕ ವೀರರೆನಿಸಿಕೊಂಡ ಇಕ್ಷ್ವಾಕುರಾಜರ ಕುಲದಲ್ಲಿ ಹುಟ್ಟಿದವನು. ಸಮಸ್ತ ಪ್ರಜೆಗಳನ್ನೂ ತನ್ನ ಗುಣಗಳಿಂದ ರಂಜಿಸುವವನು. ಅಂತಹ ಖರದೂಷಣಾದಿಗಳನ್ನೂ ಕೊಂದ ಮಹಾಪ್ರಸಿದ್ಧಿಯುಳ್ಳವನು! ಕಾರ್ಯ ಸಮರ್ಥನು! ಅವನ ರಣಕಾರ್ಯಗಳನ್ನು ತಿಳಿದುಕೊಳ್ಳುವುದಕ್ಕಾಗಲಿ ದೇವತೆ ಗಳಿಗಾದರೂ ಶಕ್ತಿಯಿಲ್ಲ! ಪ್ರಹಸ್ತಾ! ಆ ರಾಮನ ಬಾಣಗಳನ್ನು ನೀನೇನೆಂದು ಬಲ್ಲೆ! ಬಹಳ ತೀಕ್ಷ್ಣಗಳಾದ ಮೊನೆಗಳಿಂದಲೂ, ಬಗ್ಗಿದ ಗಿಣ್ಣುಗಳಿಂದಲೂ, ಮೇಲಾದ ಪಕ್ಕದ ಗರಿಗಳಿಂದಲೂ, ಕೂಡಿದ ಆ ರಾಮಬಾಣಗಳನ್ನು ತಡೆಯು ವುದಕ್ಕೂ ಯಾರಿಗೂ ಸಾಧ್ಯವಲ್ಲ. ಅಂತಹ ಬಾಣಗಳು ಇದುವರೆಗೆ ನಿನ್ನ ದೇಹಕ್ಕೆ ನಾಟದಿದ್ದುದರಿಂದಲೇ ಹೀಗೆ ನೀನು ಆತ್ಮಸ್ತುತಿಯನ್ನೂ ಮಾಡುತ್ತಿರುವೆ! ಇಂದ್ರಸಮಾನವಾದ ಆ ದಶರಥಪುತ್ರನ ಮುಂದೆ ಯುದ್ಧಕ್ಕೆ ನಿಲ್ಲಬೇಕೆಂದರೆ, ಈ ರಾವಣನಾಗಲಿ, ಬಲಾಢ್ಯನೆನಿಸಿದ ಈ ತ್ರಿಶೀರ್ಷನಾಗಲಿ, ಈ ಕುಂಭಕರ್ಣನಾಗಲಿ, ಇವನ ಮಗನಾದ ನಿಕುಂಭನಾಗಲಿ, ಇಂದ್ರಜಿತ್ತಾಗಲಿ, ನೀನಾಗಲಿ, ಶಕ್ತರಲ್ಲ! ಮತ್ತು ಈ ದೇವಾಂತಕನರಾಂತಕರಾಗಲಿ, ಅತಿರಥನೆನಿಸಿಕೊಂಡ ಮಹಾದೇಹವುಳ್ಳ ಈ ಅತಿಕಾಯನಾಗಲಿ, ಪರ್ವತಸಮಾನಬಲವುಳ್ಳ ಈ ಅಕಂಪನನಾಗಲಿ, ರಾಮನ ಮುಂದೆ ಯುದ್ಧಕ್ಕೆ ನಿಲ್ಲಲಾರರು. ನಮ್ಮ ಪ್ರಭುವಾದ ಈ ರಾವಣನಾದರೋ

ಸಹಜವಾಗಿಯೇ ತೀಕ್ಷ್ಣ ಸ್ವಭಾವವುಳ್ಳವನು. ಹಿಂದು ಮುಂದಾಲೋಚನೆ ಯಿಲ್ಲದೆ ಕೆಲಸಗಳನ್ನು ನಡೆಸತಕ್ಕವನು. ಮೊದಲೇ ಕಾಮತಾಪದಿಂದ ಪೀಡಿತ ನಾದವನು. ಇಂತಹ ಸ್ಥಿತಿಯಲ್ಲಿಯೂ ನೀವು ಆತನಿಗೆ ಹಿತವನ್ನು ಹೇಳದೆ, ಹೆಸರಿಗೆ ಮಾತ್ರ ಮಿತ್ರರೆನಿಸಿಕೊಂಡು, ಕೇವಲ ಶತ್ರುಪ್ರಾಯರಾಗಿ, ಅವನು ಹೋದ ದಾರಿಯಲ್ಲಿಯೇ ಹೋಗುತ್ತಿರುವಿರಲ್ಲಾ ! ಇದು ಸಮಸ್ತ ರಾಕ್ಷಸರ ವಿನಾಶಕ್ಕೆ ಹೊರತು ಬೇರೆಯಲ್ಲ. ಎಲೈ ಅಮಾತ್ಯರೆ ! ಈಗ ನಮ್ಮ ಪ್ರಭುವಾದ ರಾವಣನಿಗೆ, ಕೊನೆಮೊದಲಿಲ್ಲದ ಭೋಗದಾಸೆಯೆಂಬ ದೊಡ್ಡ ದೇಹದಿಂದಲೂ, ಅಕೃತ್ಯಗಳೆಂಬ ಸಹಸ್ರಫಣೆಗಳಿಂದಲೂ ಕೂಡಿ, ಭಯಂಕರವಾಗಿಯೂ, ಮಹಾ ಬಲಾಢ್ಯವಾಗಿಯೂ ಇರುವ ರಾಮದ್ವೇಷವೆಂಬ ದೊಡ್ಡ ಸರ್ಪವು ಬಲವಾಗಿ ಕೊರಲಿಗೆ ಸುತ್ತಿಕೊಂಡಿರುವುದು. ನೀವು ಮೊದಲು ಆ ಸರ್ಪವನ್ನು ಬಿಡಿಸಿ ಇವನನ್ನು ಅಪಾಯದಿಂದ ತಪ್ಪಿಸುವ ಪ್ರಯತ್ನವನ್ನು ಮಾಡಿರಿ ! ಎಲೆ ಮಂತ್ರಿಗಳೆ ! ನೀವೆಲ್ಲರೂ ರಾಜನಿಗೆ ಮಿತ್ರರೆನಿಸಿಕೊಂಡಿರುವಿರಿ ! ಅವನಿಂದ ಬೇಕುಬೇಕಾದ ಕೋರಿಕೆಗಳನ್ನೂ ಪಡೆದಿರುವಿರಿ ! ಆ ಕೃತಜ್ಞತೆಯನ್ನಾದರೂ ಭಾವಿಸಿ ನೀವೆಲ್ಲರೂ ಐಕಮತ್ಯದಿಂದ ಈತನಿಗೆ ಹಿತವನ್ನು ಬೋಧಿಸಬೇಡವೆ ? ಭೂತಗ್ರಸ್ತರಾದವರ ತಲೆಕೂದಲನ್ನು ಕೀಳಿಸಿ ಪಿಶಾಚಗಳನ್ನು ಬಿಡಿಸುವಂತೆ, ನೀವೆಲ್ಲರೂ ಸೇರಿ ಬಲಾತ್ಕಾರದಿಂದ ಈತನ ತಲೆಕೂದಲನ್ನು ಹಿಡಿದೆಳೆದಾದರೂ ಆತನನ್ನು ಅಕೃತ್ಯ ಗಳಿಂದ ತಪ್ಪಿಸಬೇಕು. ಎಲೈ ರಾಕ್ಷಸರೆ ! ಇದೋ ! ಈಗ ನಿಮ್ಮ ಪ್ರಭುವಾದ ರಾವಣನು ಲಕ್ಷ್ಮಣನೆಂಬ ಮಹಾಸಾಗರದಲ್ಲಿ ಕಣ್ಣಿಗೆ ಕಾಣದೆ ಮುಳುಗಿಹೋಗು ತ್ತಿರುವನು ! ರಾಮನೆಂಬ ಬಾಡಬಾಗ್ನಿಯ ಬಾಯಿಗೆ ತುತ್ತಾಗುತ್ತಿರುವನು. ಆದುದರಿಂದ ನೀವೆಲ್ಲರೂ ಈ ಸಮಯದಲ್ಲಿ ಒಂದಾಗಿ ಸೇರಿ, ಆತನಿಗೆ ಕೈಗೊಟ್ಟು ಮೇಲಕ್ಕೆತ್ತಿ ಉದ್ಧರಿಸಬೇಕು. ಎಲೈ ರಾಕ್ಷಸರೆ ! ನನ್ನ ಮುಖ್ಯವಾದ ಅಭಿಪ್ರಾಯ ವನ್ನು ಹೇಳುವೆನು ಕೇಳಿರಿ ! ಇದರಿಂದ ಈ ನಮ್ಮ ಲಂಕೆಗೂ ಮುಂದೆ ಕ್ಷೇಮ ವುಂಟು. ಇಲ್ಲಿನ ರಾಕ್ಷಸರಿಗೂ ಸೌಖ್ಯವುಂಟು ! ನಮ್ಮ ಪ್ರಭುವಾದ ರಾವಣನಿಗೂ ಕ್ಷೇಮವುಂಟು ! ಅವನ ಮಿತ್ರರಾದ ನಿಮಗೂ ಮೇಲ್ಮೆಯುಂಟು. ನಮ್ಮ ರಾಜನು ತಾನಾಗಿ ಸೀತೆಯನ್ನು ರಾಮನಿಗೆ ಕೊಡದಿದ್ದರೂ, ನಾವೇ ಸ್ವತಂತ್ರಿಸಿಯಾದರೂ ಸೀತೆಯನ್ನು ರಾಮನಿಗೆ ಕೊಟ್ಟುಬಿಡುವೆವು. ಒಂದುವೇಳೆ ರಾಜನು ಹಠವಾದಿ ಯಾಗಿದ್ದರೂ ಮಂತ್ರಿಯಾದವನು ತಮ್ಮ ಮತ್ತು ಶತ್ರುಗಳ ಬಲಾಬಲವನ್ನು

ತಿಳಿದು, ಉಭಯಪಕ್ಷಗಳಲ್ಲಿರುವ [1]ಕ್ಷಯ ಸ್ಥಾನ ವೃದ್ಧಿಗಳೆಂಬ ತ್ರಿವರ್ಗಗಳನ್ನೂ ಸೂಕ್ಷ್ಮದೃಷ್ಟಿಯಿಂದ ಪರ್ಯಾಲೋಚಿಸಿ ಕಾಲೋಚಿತವಾಗಿಯೂ, ಸ್ವಾಮಿಗೆ ಹಿತವಾಗಿಯೂ ಇರುವ ಕಾರ್ಯವನ್ನುಪದೇಶಿಸಬೇಕು" ಎಂದನು.

ಇಲ್ಲಿಗೆ ಹದಿನಾಲ್ಕನೆಯ ಸರ್ಗವು.

ಇಂದ್ರಜಿತ್ತು ವಿಭೀಷಣನ ಮತವನ್ನು ಖಂಡಿಸಿದುದು. ವಿಭೀಷಣನು ಇಂದ್ರಜಿತ್ತಿನ ದುರ್ಬುದ್ಧಿಗಾಗಿ ಅವನನ್ನು ದೂಷಿಸಿದುದು.

ಬೃಹಸ್ಪತಿಯಂತೆ ಮಹಾಬುದ್ಧಿಮಂತನಾದ ವಿಭೀಷಣನು ಹೇಳಿದ ಈ ಮಾತುಗಳೆಲ್ಲವನ್ನೂ, ಇಂದ್ರಜಿತ್ತು ಬಹಳ ಕಷ್ಟದಿಂದಲೇ ಕೇಳುತಿದ್ದು, ಕೊನೆಗೆ ಕೋಪವನ್ನು ತಡೆಯಲಾರದೆ ವಿಭೀಷಣನನ್ನು ಕುರಿತು, "ತಾತಾ! ನೀನು ಕೊನೆಗೆ ಹೇಳಿದ ಈ ಮಾತು ಕೇವಲ ನಿರರ್ಥಕವಾದುದು! ನಿನ್ನ ಭಯಸ್ವಭಾವವನ್ನೂ ಚೆನ್ನಾಗಿ ತೋರಿಸುವುದು. ಛೀ! ಯಾವ ಮಾತನ್ನಾಡಿದೆ! ನಮ್ಮ ರಾಕ್ಷಸ ಕುಲವಲ್ಲದೆ ಬೇರೆ ಕುಲದಲ್ಲಿ ಹುಟ್ಟಿದವನಾದರೂ ಹೀಗೆ ನುಡಿಯಲಾರನು! ಹೀಗೆ ನಡೆಯಲೂ ಆರನು! ಇನ್ನು ಪುಲಸ್ತ್ಯಕುಲದಲ್ಲಿ ಹುಟ್ಟಿದ ರಾಕ್ಷಸನಾದ ನಿನಗೆ ಈ ಮಾತು ಯೋಗ್ಯವೆ?" ಎಂದು ಹೇಳಿ, ರಾವಣನ ಕಡೆಗೆ ತಿರುಗಿ, "ಅಪ್ಪಾ! ನಮ್ಮ ರಾಕ್ಷಸಕುಲದಲ್ಲಿ ನಿನ್ನ ತಮ್ಮನಾದ ಈ ವಿಭೀಷಣನೊಬ್ಬನೇ ಬಲದಲ್ಲಿಯೂ, ವೀರ್ಯದಲ್ಲಿಯೂ, ಪರಾಕ್ರಮದಲ್ಲಿಯೂ, ಶೌರ್ಯದಲ್ಲಿಯೂ, ಧೈರ್ಯದಲ್ಲಿಯೂ, ತೇಜಸ್ಸಿನಲ್ಲಿಯೂ ಕೇವಲ ಹೀನನೆಂದು ತೋರುವುದು" ಎಂದನು. ಆಮೇಲೆ ತಿರುಗಿ ವಿಭೀಷಣನನ್ನು ಕುರಿತು, "ಎಲ ಹೇಡೀ! ನೀನು ಮಾತ್ರವೇ ಭಯ ಪಡುವುದಲ್ಲದೆ ನಮ್ಮನ್ನೂ ಹೆದರಿಸುವೆಯಾ! ಕೇವಲ ದುರ್ಬಲರಾದ ಆ

---

1. ಶತ್ರುಕ್ಷಯವನ್ನೂ, ಸ್ವವೃದ್ಧಿಯನ್ನೂ ನೋಡಿದಾಗ ಯಾನವನ್ನೂ, ಶತ್ರುವೃದ್ಧಿಯನ್ನೂ ಸ್ವಕ್ಷಯವನ್ನೂ ನೋಡಿದಾಗ ಸಂಧಿಯನ್ನೂ, ಇಬ್ಬರೂ ಸಮಬಲವುಳ್ಳವರಾಗಿದ್ದಾಗ ಆಸನವನ್ನೂ ನಡೆಸುವಂತೆ ಮಂತ್ರಿಗಳು ರಾಜನಿಗೆ ಪ್ರೇರಿಸಬೇಕೆಂಬುದು ರಾಜನೀತಿಯು. ಪ್ರಕೃತದಲ್ಲಿ ರಾವಣನಿಗೆ ಲಂಕಾದಹನಾದ್ಯನೇಕ ಪರಾಭವಗಳೂ, ರಾಮನಿಗೆ ವಾನರಸೇನಾಸಂಪತ್ತಿಯೇ ಮೊದಲಾದ ವೃದ್ಧಿಯೂ ತೋರುತ್ತಿರುವುದರಿಂದ ಈಗ ರಾಮನಿಗೆ ಸೀತೆಯನ್ನೊಪ್ಪಿಸಿ ಸಂಧಿಮಾಡಿಕೊಳ್ಳುವುದೇ ಸಾಧುವೆಂದು ನೀವು ನಿಮ್ಮ ಪ್ರಭುವಾದ ರಾವಣನಿಗೆ ತಿಳಿಸಬೇಕೆಂದು ಹೇಳಿದುದಾಗಿ ಭಾವವು

ರಾಜಕುಮಾರರನ್ನು ಕೊಲ್ಲುವುದಕ್ಕೆ ನಮ್ಮಲ್ಲಿ ಕೆಲಸಕ್ಕೆ ಬಾರದ ಯಾವನಾದರೂ ಒಬ್ಬ ರಾಕ್ಷಸನೇ ಸಾಕು! ಇಂದ್ರನು ಎಂತವನೆಂಬುದನ್ನು ನೀನು ಕಾಣೆಯಾ? ಮೂರುಲೋಕಕ್ಕೂ ನಾಥನು; ದೇವತೆಗಳಿಗೆ ಪ್ರಭು. ಆತನ ಸೇನಾಸಾಮಗ್ರಿ ಯಾದರೂ ಕೇವಲವಾದುದಲ್ಲ. ಅಂತಹ ದೇವೇಂದ್ರನನ್ನೇ ನಾನು ನೆಲಕ್ಕೆ ಕೆಡಹಿ ದವನಲ್ಲವೆ? ಅವನ ಕಡೆಯ ದೇವತೆಗಳೆಲ್ಲರೂ ನನ್ನಿಂದ ಭೀತರಾಗಿ ದಿಕ್ಕುದಿಕ್ಕಿಗೆ ಪಲಾಯನಮಾಡಲಿಲ್ಲವೆ? ಐರಾವತವೆಂಬ ದಿಗ್ಗಜವೂ ಕೂಡ ನನ್ನ ಪ್ರಹಾರಕ್ಕೆ ತಡೆಯಲಾರದೆ ವಿಕೃತ ಸ್ವರದಿಂದರಚುತ್ತ ಕೆಳಗೆ ಬೀಳಲು, ನಾನು ಅದರ ದಂತ ಗಳನ್ನು ಕೈಯಿಂದ ಕಿತ್ತು, ಅವುಗಳಿಂದಲೇ ಸಮಸ್ತ ದೇವತೆಗಳನ್ನೂ ಹೆದರಿಸಿ ಓಡಿಸಿರುವೆನು. ಹೀಗೆ ನಾನು ದೇವತೆಗಳ ಕೆಚ್ಚನ್ನೂ ಮುರಿದು, ದೈತ್ಯರನ್ನೆಲ್ಲಾ ಗೋಳಾಡಿಸಿರುವೆನು. ಹೀಗಿರುವಾಗ ಕೇವಲ ಪ್ರಾಕೃತಮನುಷ್ಯರಾದ ಆ ರಾಜಕುಮಾರರನ್ನು ಜಯಿಸಲಾರೆನೆ? ನನ್ನ ಮಹಾವೀರ್ಯಕ್ಕೆ ಅದೊಂದು ದೊಡ್ಡ ಕಾರ್ಯವೆ?'' ಎಂದನು. ಇಂದ್ರನಿಗೆಣೆಯಾದ ಇಂದ್ರಜಿತ್ತು ಹೀಗೆಂದು ಹೇಳಿದ ಅಹಂಕಾರದ ಮಾತನ್ನು ಕೇಳಿ, ಶಸ್ತ್ರಧಾರಿಗಳಲ್ಲಿ ಮೇಲೆನಿಸಿದ ವಿಭೀಷಣನು, ಸಾರವತ್ತಾದ ಮಾತಿನಿಂದ ಆ ಇಂದ್ರಜಿತ್ತನ್ನು ಕುರಿತು, "ಎಲೈ ವತ್ಸನೆ! ಇನ್ನೂ ನೀನು ಬಾಲನು! ಯಾವ ವಿಷಯಗಳಲ್ಲಿಯೂ ಅನುಭವವಿಲ್ಲದವನು. ನಿನ್ನ ಬುದ್ಧಿಯು ಇನ್ನೂ ಪರಿಪಕ್ವವಾಗಿಲ್ಲ. ಯಾವ ವಿಷಯವನ್ನಾದರೂ ಬುದ್ಧಿ ಯಿಂದಾಲೋಚಿಸಿ ನಿಶ್ಚಯಿಸುವ ಶಕ್ತಿಯೂ ನಿನಗಿಲ್ಲ! ಈ ಕಾರಣಗಳಿಂದಲೇ ನಿನ್ನ ಕೇಡನ್ನೂ ನೀನು ವಿಚಾರಿಸದೆ, ಈ ನಿರರ್ಥವಾಕ್ಯಗಳನ್ನು ಪ್ರಲಪಿಸುತ್ತಿರುವೆ! ಬಾಯಿಗೆ ಬಂದಹಾಗೆ ನುಡಿಯುವಂತಿದೆ! ನಿನ್ನ ಹೆತ್ತತಂದೆಯಾದ ಈ ರಾವಣನಿಗೆ ಮುಂದೆ ರಾಮನಿಂದ ಬರಬಹುದಾದ ವಿನಾಶವನ್ನು ನನ್ನ ಬಾಯಿಂದ ಸ್ಪಷ್ಟವಾಗಿ ಕೇಳಿಯೂ, ಅಜ್ಞಾನದಿಂದ ನೀನು ಅದನ್ನು ತಿಳಿದುಕೊಳ್ಳದೆ ದುರ್ಮಾರ್ಗಕ್ಕೇ ಅನು ಮೋದಿಸುತ್ತಿರುವೆಯಲ್ಲಾ! ಛೀ! ನೀನು ಪುತ್ರನೆಂಬ ಹೆಸರಿಟ್ಟುಕೊಂಡು, ಹಿತನಂತೆ ನಟಿಸುವ ಶತ್ರುವೇ ಹೊರತು ನಿಜವಾಗಿ ರಾವಣನಿಗೆ ಮಗನಲ್ಲ! ಹೀಗೆ ತಂದೆಯ ವಿನಾಶಕ್ಕಾಗಿ ಪ್ರಯತ್ನಿಸಿರುವ ಈ ನಿನ್ನ ದುರ್ಬುದ್ಧಿಗಾಗಿ ನಿನ್ನನ್ನು ಮಾತ್ರವೇ ಶಿಕ್ಷಿಸಿ ಫಲವಿಲ್ಲ. ಏನೂ ತಿಳಿಯದ ಹುಡುಗನಾಗಿಯೂ, ಹಟವಾದಿಯಾಗಿಯೂ, ಹಿಂದು ಮುಂದುನೋಡದೆ ಸಾಹಸಕಾರ್ಯಗಳಿಗೆ ತಲೆಯಿಕ್ಕುವ ಆತುರ ಸ್ವಭಾವವುಳ್ಳವ ನಾಗಿಯೂ ಇರುವ ನಿನ್ನನ್ನು ಕರೆತಂದು, ಈ ಮಂತ್ರಾಲೋಚನೆಯ ಸಭೆಯಲ್ಲಿ

ಸೇರಿಸಿದವರಾರೋ ಅವರನ್ನೇ ಮೊದಲು ವಧಿಸಬೇಕು! ನೀನೋ ಏನೂ ತಿಳಿಯದ ಮೂಢನು! ತಾನೇ ಸರ್ವಜ್ಞನೆಂಬ ಗರ್ವವು ಮಾತ್ರ ನಿನ್ನಲ್ಲಿ ಪೂರ್ಣವಾಗಿರುವುದು ನಿನ್ನಲ್ಲಿ ಸ್ವಲ್ಪವಾದರೂ ವಿನಯವೆಂಬುದೇ ಇಲ್ಲ. ಕ್ರೂರಸ್ವಭಾವವುಳ್ಳವನು! ಅಲ್ಪ ಬುದ್ಧಿಯುಳ್ಳವನು! ದುರಾತ್ಮನು! ಮೂರ್ಖನು! ಮಹಾದುರ್ಬುದ್ಧಿಯುಳ್ಳವನು! ಹುಡುಗುತನದಿಂದಲೇ ಈ ಮಾತನ್ನಾಡುತ್ತಿರುವೆ! ಬ್ರಹ್ಮದಂಡದಂತೆ ದೇದೀಪ್ಯಮಾನ ಗಳಾಗಿಯೂ, ಮೃತ್ಯುವಿನಂತೆ ಭಯಂಕರಗಳಾಗಿಯೂ, ಯಮದಂಡಕ್ಕೆ ಸಮಾನ ಗಳಾಗಿಯೂ ಇರುವ ರಾಮನ ಬಾಣಗಳನ್ನು ಯುದ್ಧದಲ್ಲಿ ತಡೆದು ನಿಲ್ಲುವನಾವನು" ಎಂದು ಹೇಳಿ ರಾವಣನ ಕಡೆಗೆ ತಿರುಗಿ, "ಎಲೈ ರಾಜನೆ! ಈಗಲೂ ನನ್ನ ಹಿತವಾದ ವನ್ನು ಕೇಳು! ನಮ್ಮಲ್ಲಿರುವ ಧನಗಳನ್ನೂ, ಉತ್ತಮ ವಸ್ತುಗಳನ್ನೂ, ಆಭರಣ ಗಳನ್ನೂ, ದಿವ್ಯವಸ್ತುಗಳನ್ನೂ, ವಿಚಿತ್ರರತ್ನಗಳನ್ನೂ, ಸೀತಾದೇವಿಯ ಸಹಿತವಾಗಿ ಈಗಲೇ ರಾಮನಿಗೊಪ್ಪಿಸಿ ಬಾ! ಆಮೇಲೆ ನಿರ್ಭಯವಾಗಿ ಇಲ್ಲಿ ನಾವು ಸುಖ ದಿಂದಿರಬಹುದು" ಎಂದನು.

ಇಲ್ಲಿಗೆ ಹದಿನೈದನೆಯ ಸರ್ಗವು

ರಾವಣನು ವಿಭೀಷಣನನ್ನವಮಾನಿಸಲು ಅವನು ತನ್ನ ನಾಲ್ಕು
ಮಂತ್ರಿಗಳೊಡನೆ ಆಕಾಶಕ್ಕೆ ಹಾರಿ, ಆಗಲೂ ಮತ್ತೊಮ್ಮೆ
ರಾವಣನಿಗೆ ಬುದ್ಧಿವಾದವನ್ನು ಹೇಳಿದುದು.

[1]ಹೀಗೆ ವಿಭೀಷಣನು ರಾವಣನ ಮನಸ್ಸಿಗೆ ಚೆನ್ನಾಗಿ ಹಿಡಿಯುವಂತೆ ಹಿತ ವಾಕ್ಯಗಳನ್ನು ಹೇಳಿದರೂ, ಮೃತ್ಯುವಶನಾದ ರಾವಣನು ಅವುಗಳೊಂದನ್ನೂ ಗಮ ನಿಸದೆ, ಅವನ ಮಾತಿಗೆ ಇನ್ನೂ ಕೋಪಗೊಂಡು, ಪರುಷವಾಕ್ಯದಿಂದ ಅವನನ್ನು ಕುರಿತು "ವಿಭೀಷಣಾ! ಸಾಕು ಸುಮ್ಮನಿರು! ನಿನ್ನ ಸಹವಾಸವೇ ನನಗೆ ಯುಕ್ತ ವಲ್ಲ! ಶತ್ರುವಿನೊಡನೆಯಾದರೂ ಇರಬಹುದು. ಕೋಪಗೊಂಡ ಕಾಳಸರ್ಪದೊಡನೆ ಯಾದರೂ ಸಹವಾಸ ಮಾಡಬಹುದು! ಶತ್ರುಪಕ್ಷವನ್ನು ವಹಿಸಿ ಮಿತ್ರನಂತೆ ನಟಿಸುವ ನಿನ್ನಂತವನೊಡನೆ ಮಾತ್ರ ಎಂದಿಗೂ ಸಹವಾಸಮಾಡಬಾರದು. ಎಲೆ

---

1. ಇಲ್ಲಿ "ಸುನಿವಿಷ್ಟಂ ಹಿತಂ ವಾಕ್ಯಮುಕ್ತವಂತಂ ವಿಭೀಷಣಂ | ಅಬ್ರವೀತ್ಪರುಷಂ ವಾಕ್ಯಂ ರಾವಣಃ ಕಾಲಚೋದಿತಃ" ಎಂದು ಮೂಲವು. ವಿಶೇಷಾರ್ಥವು:—(ಸುನಿ ವಿಷ್ಟಂ) ಕೇಳುತ್ತಿರುವಾಗಲೇ ಅರ್ಥಸ್ಫೂರ್ತಿಯಾಗದಿದ್ದರೂ, ಅತಿಪ್ರೀತಿಕರವಾಗುವಂತೆ

ಅಂದವಾದ ಸನ್ನಿವೇಶವುಳ್ಳುದು, ಎಂದರೆ ಅರ್ಥವು ಅನಿಷ್ಟವಾಗಿ ತೋರಿದರೂ ಕಿವಿಯಿಂದ ಕೇಳುವುದಕ್ಕೆ ಇಂಪಾದ ಮಾತೆಂದು ಭಾವವು. (ಹಿತಂ) ಕಿವಿಗಿಂಪಾದುದು ಮಾತ್ರವೇ ಅಲ್ಲ! ಪಥ್ಯವಾಗಿಯೂ ಇರುವುದು. (ವಾಕ್ಯಂ) ಪರಿಪೂರ್ಣಾರ್ಥವನ್ನು ಕೊಡುವುದೇ ವಾಕ್ಯವೆನಿಸುವುದರಿಂದ, ಹೇಳಬೇಕಾದ ಹಿತೋಪದೇಶವೆಲ್ಲವೂ ಇದರಲ್ಲಿ ಪೂರ್ಣವಾಗಿ ತುಂಬಿರುವುವೆಂದು ಭಾವವು. ಇಂತಹ ವಾಕ್ಯವನ್ನು (ಉಕ್ತವಂತಂ) ಹೇಳಿದವನನ್ನು "ನಾಸಂವತ್ಸರವಾಸಿನೇ ಬ್ರೂಯಾತ್" ಎಂಬಂತೆ, ಆಚಾರ್ಯನು ತನ್ನಲ್ಲಿಗೆ ಬಂದು ಪಾದಗಳಲ್ಲಿ ಬಿದ್ದವನಿಗೆ ಮಾತ್ರವೇ ಹೇಳಬೇಕಾದ ನೀತಿಯನ್ನೂ ಕೂಡ ಈ ರಾವಣನ ದುರ್ಗತಿಯನ್ನು ನೋಡಿ ಸಹಿಸಲಾರದೆ ತಾನೇ ಮರುಕದಿಂದ ಬಂದು ಹೇಳಿದವನನ್ನು (ವಿಭೀಷಣಂ) ಬೇರೆ ಯಾವನಾದರೂ ದೂರಸ್ಥನೊಬ್ಬನು ಈ ಮಾತನ್ನು ಹೇಳಿದ್ದ ಪಕ್ಷದಲ್ಲಿಯಾದರೂ, ಒಂದುವೇಳೆ ಅದು ಆಪ್ತವೋ ಅಲ್ಲವೋ ಎಂದು ಸಂದೇಹಿಸಿ ಬಿಟ್ಟು ಬಿಡಬಹುದು. ಸಾಕ್ಷಾತ್ಸಹೋದರನಾದ ವಿಭೀಷಣನೇ ಬಂದು ಹೇಳಿದಾಗ ಆ ಮಾತು ತನಗೆ ಗ್ರಾಹ್ಯವೆಂಬುದನ್ನು ಹೇಳಬೇಕಾದುದೇನು? ಹೀಗಿದ್ದರೂ, (ರಾವಣಃ) ಹಿಂಸಾ ಸ್ವಭಾವದಿಂದ ಸಮಸ್ತಲೋಕಗಳನ್ನೂ ಗೋಳಾಡಿಸತಕ್ಕ. ಅಥವಾ (ರೌತೀತಿ ರಾವಣಃ) ಯಾವಾಗಲೂ ಗೋಳಿಡುವ ಸ್ವಭಾವವುಳ್ಳವನು ಎಂದರೆ ಕೈಲಾಸವನ್ನು ಕದಲಿಸಿದುದು, ವಾಲಿಯೊಡನೆ ಹೋರಾಡಿದುದು, ಕಾರ್ತವೀರ್ಯನನ್ನು ಕೆಣಕಿದುದು ಮೊದಲಾದ ಕುಚೇಷ್ಟೆಗಳಿಂದ ಹಾಗನ ಕಾರ್ಯಕ್ಕೆ ಕೈಹಾಕಿ, ಅವರಿಂದ ಭಂಗಹೊಂದಿ ಗೋಳಿಡುವ ಸ್ವಭಾವವುಳ್ಳವನು. ಇದರಿಂದ ತನಗಾಗಲಿ ಪರರಿಗಾಗಲಿ ಹಿತವನ್ನು ತಿಳಿಯದ ದುಸ್ಸ್ವಭಾವವುಳ್ಳವನೆಂದು ಭಾವವು. ಇಂತಹ ರಾವಣನು (ಕಾಲಚೋದಿತಃ) ಕಾಲಪ್ರೇರಿತನಾಗಿ, ಎಂದರೆ ತನ್ನನ್ನು ಬದುಕಿಸುವುದಕ್ಕಾಗಿ ಬಂದ ತಮ್ಮನ ಮಾತಿಗೆ ಕಿವಿಗೊಡದೆ, ಕೊಲ್ಲುವುದಕ್ಕಾಗಿ ಕಾದಿರುವ ಕಾಲಮೃತ್ಯುವಿನ ದಾರಿಯನ್ನೇ ನೆಮ್ಮಿದವನಾಗಿ (ಪರುಷಂ ವಾಕ್ಯಮುಬ್ರವೀತ್) "ದ್ವಿಧಾ ಭಜ್ಯೇಯಮಪ್ಯೇವಂ ನ ನಮೇಯಂ ಕದಾಚನ" ಎಂದು ರಾಮನ ಬಾಣಕ್ಕೆ ಸಿಕ್ಕಿ ಸಾಯುವ ಸ್ಥಿತಿಯಲ್ಲಿರುವಾಗಲೂ "ತಾನು ಎರಡು ಭಾಗವಾಗಿ ಸೀಳಿಬಿದ್ದರೂ ಬೀಳುವನೇ ಹೊರತು ರಾಮನ ಕಡೆಗೆ ಮಾತ್ರ ತಲೆಬಗ್ಗಿಸುವವನಲ್ಲವೆಂದು ಹೇಳಿದ ಪರಮಮೂರ್ಖ ಸ್ವಭಾವಕ್ಕೆ ತಕ್ಕಂತೆ ಕ್ರೂರವಾಕ್ಯವನ್ನಾಡಿದನು. ವಿಭೀಷಣನು ಹೇಳಿದ ಸರ್ವೋತ್ತಮವಾದ ಬುದ್ಧಿವಾದವನ್ನು ಕೇಳಿದೊಡನೆ "ಈಗ ನನ್ನ ಸಂದೇಹವು ತೀರಿತು" ಎಂದು ಅದನ್ನಭಿನಂದಿಸಬೇಕು. ಹಾಗಿಲ್ಲವೇ, "ನೀನು ನನಗೆ ಮಹೋಪಕಾರವನ್ನು ಮಾಡಿದೆ" ಎಂದು ಹೇಳಿ ಆತನನ್ನು ಸ್ತುತಿಸಿಯಾದರೂ ಸ್ತುತಿಸಬೇಕು! ಹಾಗೂ ಇಲ್ಲದಿದ್ದರೆ ಇಂತಹ ಹಿತವಾದವನ್ನು ಹೇಳಿದ ನಿನಗೆ ತಕ್ಕ ಪ್ರತ್ಯುಪಕಾರವನ್ನು ಮಾಡುವುದಕ್ಕೂ ಇಲ್ಲವಲ್ಲಾ" ಎಂದು ಅನುತಾಪವನ್ನಾದರೂ ತೋರಿಸಬೇಕು. ಇವೆಲ್ಲವನ್ನೂ ಬಿಟ್ಟು, ಶತ್ರುಗಳನ್ನು ಕಂಡಾಗ ಕೋಪದಿಂದ ನುಡಿಯುವ ಕ್ರೂರವಾಕ್ಯವನ್ನೇ ಹೇಳಲಾರಂಭಿಸಿದನೆಂದು ಭಾವವು. (ತನಿಶ್ಲೋಕಿ)

ರಾಕ್ಷಸನೆ ! ಲೋಕದಲ್ಲಿ ಜ್ಞಾತಿಗಳ ಸ್ವಭಾವವನ್ನು ನಾನು ಕಾಣೆನೆ ! ತಮ್ಮಲ್ಲಿ ಪರಸ್ಪರವ್ಯಸನವನ್ನು ನೋಡಿ ಸಂತೋಷಪಡುವುದೇ ದಾಯಾದಿಗಳ ಸ್ವಭಾವವು. ನನಗೆ ದಾಯಾದನಾದ ನೀನೂ, ಹೀಗೆ ನನ್ನ ಸಂಕಟಕಾಲಗಳಲ್ಲಿ ಸಂತೋಷಪಡುವುದು ಜ್ಞಾತಿಸ್ವಭಾವಕ್ಕೆ ತಕ್ಕಂತೆಯೇ ಇರುವುದು. ಜ್ಞಾತಿಗಳು ತಮ್ಮ ಕುಲದಲ್ಲಿ ಮುಖ್ಯನಾದವನನ್ನೂ, ಕಾರ್ಯಸಾಧಕನನ್ನೂ, ವಿದ್ಯೆಬಲ್ಲವನನ್ನೂ, ಧರ್ಮಶೀಲನನ್ನೂ, ಶೂರನಾದವನನ್ನೂ ಕಂಡರೆ ಅಸೂಯೆಯಿಂದ ತಿರಸ್ಕರಿಸುವರೇ ಹೊರತು ಗೌರವಿಸುವುದಿಲ್ಲ. ಇದಿರಿದ್ದಾಗ ಸಂತೋಷವನ್ನೂ ನಟಿಸುವರು. ವ್ಯಸನಕಾಲಗಳಲ್ಲಿ ಮತ್ತಷ್ಟು ದ್ರೋಹವನ್ನು ಮಾಡುವರು. ತಮ್ಮ ಜ್ಞಾತಿಗಳ ಸಂತೋಷವನ್ನು ನೋಡಿ ಅಸೂಯೆಪಡುವರು. ತಮ್ಮ ಮನೋಭಿಪ್ರಾಯಗಳನ್ನು ಹೊರಪಡಿಸದೆ ಗೂಢವಾಗಿಯೇ ಇಟ್ಟುಕೊಂಡಿರುವರು. ಇಂತಹ ಘೋರಕೃತ್ಯವುಳ್ಳ ಜ್ಞಾತಿಗಳಿಂದ ಎಂದಿಗೂ ಭಯವು ತಪ್ಪದು. ಹಿಂದೆ ಪದ್ಮವನವೆಂಬ ಒಂದು ಕಾಡಿನಲ್ಲಿ ಕೆಲವು ಕಾಡಾನೆಗಳು ತಮ್ಮನ್ನು ಹಿಡಿಯುವುದಕ್ಕಾಗಿ ಪಾಶಗಳನ್ನು ಹಿಡಿದು, ತಾವು ಮೊದಲು ಸಾಕಿಟ್ಟ ಕೆಲವು ಆನೆಗಳನ್ನೂ ಸಂಗಡ ಕರೆದುಕೊಂಡು ತಮ್ಮ ಕಡೆಗೆ ಬರುತ್ತಿದ್ದ ಮನುಷ್ಯರನ್ನು ಕುರಿತು ಕೆಲವು ಶ್ಲೋಕಗಳನ್ನು ಹೇಳಿದುದಾಗಿ ಕೇಳಿರುವೆನು. ಆ ಶ್ಲೋಕಾರ್ಥಗಳನ್ನೂ ಹೇಳುವೆನು ಕೇಳು ! ಆ ಆನೆಗಳು ತಮ್ಮ ಗುಂಪಿಗೆ ಸೇರಿದ್ದ ಬೇರೆ ಆನೆಗಳನ್ನೂ ನೋಡಿ. "ನಮಗೆ ಬೆಂಕಿಯಿದ್ದರೂ ಭಯವಿಲ್ಲ! ಬೇರೆ ಶಸ್ತ್ರಗಳಿಗೂ ನಾವು ಹೆದರಬೇಕಾದುದಿಲ್ಲ ! ಭಯಂಕರಗಳಾದ ಈ ಪಾಶಗಳಿಂದಲೂ ನಮಗೆ ಅಂಜಿಕೆಯಿಲ್ಲ ! ಅದೋ ನೋಡಿರಿ ! ಕರುಣೆಯಿಲ್ಲದ ಕ್ರೂರ ಸ್ವಭಾವವುಳ್ಳವುಗಳಾಗಿ, ತಮ್ಮ ಪ್ರಯೋಜನದಲ್ಲಿಯೇ ದೃಷ್ಟಿಯಿಟ್ಟು, ಆ ಪುರುಷರಿಗೆ ಸಹಾಯವಾಗಿ ಬರುವ ನಮ್ಮ ಜ್ಞಾತಿಗಳಿಗಾಗಿಯೇ ನಾವು ಹೆದರಬೇಕಾಗಿದೆ. ನಮ್ಮ ಜ್ಞಾತಿಯ ಈ ಆನೆಗಳೇ ಈ ಮನುಷ್ಯರಿಗೆ ನಮ್ಮನ್ನು ಹಿಡಿಯುವುದಕ್ಕೆ ಉಪಾಯವನ್ನು ಹೇಳಿಕೊಡುವಂತಿದೆ" ಎಂದು ಹೇಳಿತು. ಎಲ್ಲಾ ಭಯಗಳಿಗಿಂತಲೂ ಜ್ಞಾತಿಭಯವೇ ಹೆಚ್ಚು. ಇದು ನಿಮ್ಮೆಲ್ಲರಿಗೂ ತಿಳಿದೇ ಇರಬಹುದು. ಗೋವುಗಳಲ್ಲಿ ಭಾಗ್ಯಸಂಪತ್ತಿಯೂ, ಬ್ರಾಹ್ಮಣರಲ್ಲಿ ಇಂದ್ರಿಯನಿಗ್ರಹವೂ, ಹೆಂಗಸರಲ್ಲಿ ಚಪಲಸ್ವಭಾವವೂ, ಜ್ಞಾತಿಗಳಲ್ಲಿ ಭಯವೂ ಸಿದ್ಧವಾಗಿರುವುದು. ಅಪ್ಪ ವಿಭೀಷಣಾ ! ಸಾಕುಬಿಡು ! ನಿನ್ನ ಮನೋಭಾವವು ನನಗೆ ತಿಳಿಯಿತು ! ಲೋಕದಲ್ಲಿ ನನಗಿರುವ ಈ ಗೌರವವನ್ನೂ, ಈ ನನ್ನ ಮಹಾಭಾಗ್ಯವನ್ನೂ ಶತ್ರುಗಳ

ತಲೆಯನ್ನು ಮುಟ್ಟಿದಂತಿರುವ ಈ ನನ್ನ ಮಹಾ ವೈಭವವನ್ನೂ ನೋಡಿ ನೀನು ಸಹಿಸಬಲ್ಲೆಯಾ ? ಇವೊಂದೂ ನಿನಗೆ ಇಷ್ಟವಿಲ್ಲ ! ಹೇಗಾದರೂ ನನ್ನನ್ನು ಕೆಡಿಸ ಬೇಕೆಂಬುದೇ ನಿನ್ನ ಮನೋರಥವು. ವಿಭೀಷಣಾ ! ನೀನು ನನ್ನೊಡನೆ ಎಷ್ಟು ದಿನವಿದ್ದರೇನು ? ತಾವರೆಯೆಲೆಗಳು ನೀರಿನಲ್ಲಿಯೇ ಹುಟ್ಟಿ ಬೆಳೆದರೂ, ಅವು ತಮ್ಮ ಮೇಲೆ ಬಿದ್ದ ಜಲಬಿಂದುಗಳೊಡನೆ ಅಂಟುವುವೆ ! ಆದರಂತೆಯೇ ದುಷ್ಟ ರೊಡನೆ ಎಷ್ಟು ದಿನಗಳವರೆಗೆ ಸಹವಾಸಮಾಡಿದರೂ ಸ್ನೇಹವು ಹುಟ್ಟದು. ದುಂಬಿಯು ಹೂಗಳಲ್ಲಿರುವ ಮಕರಂದರಸವನ್ನು ಕುಡಿದ ಮೇಲೆ, ಕ್ಷಣಮಾತ್ರವೂ ಅಲ್ಲಿ ನಿಲ್ಲದೆ, ಆ ಹೂಗಳನ್ನು ಬಿಟ್ಟೋದರಿಹೋಗುವಂತೆ ನೀನೂ ಇದುವರೆಗೆ ನನ್ನಿಂದ ಅನೇಕ ಭೋಗಗಳನ್ನನುಭವಿಸಿಯೂ, ನನ್ನಲ್ಲಿ ಕೃತಜ್ಞತೆಯಿಲ್ಲದೆ ನನಗೆ ಕೇಡನ್ನೇ ಕೋರುತ್ತಿರುವೆ. ದುಷ್ಟರ ಸ್ನೇಹವೇ ಈ ರೀತಿಯಾಗಿರುವುದು. ಕಾಡಾನೆಯು ಕೊಳದಲ್ಲಿ ಮುಳುಗಿ ಬಂದೊಡನೆ ಸುಂಡಿಲಿಂದ ನೆಲದ ಮಣ್ಣನ್ನೆತ್ತಿ ತನ್ನ ಮೈಮೇಲೆ ಸುರಿದು, ಮೈಯನ್ನು ಕೊಳೆಮಾಡಿಕೊಳ್ಳುವಂತೆ, ದುಷ್ಟರ ಸ್ನೇಹದಿಂದ ತನ್ನನ್ನೇ ತಾನು ಕೆಡಿಸಿದಂತಾಗುವುದು. ಮೇಘಗಳು ಶರತ್ಕಾಲದಲ್ಲಿ ಅಟ್ಟಹಾಸದಿಂದ ಗರ್ಜಿಸಿ ಎಡೆಬಿಡದೆ ಮಳೆಯನ್ನು ಸುರಿಸಿದರೂ, ಆ ನೀರು ಭೂಮಿ ಗಂಟದಂತೆ ಎಂದಿದ್ದರೂ ದುಷ್ಟರ ಸ್ನೇಹವು ಫಲಕಾರಿಯಲ್ಲ. ಛೀ ! ಕುಲಗೇಡಿಯೆ ! ನೀನು ನನಗೆ ಒಡಹುಟ್ಟಿದ ತಮ್ಮನಾದುದರಿಂದ ನಾನು ಸುಮ್ಮನಿರಬೇಕಾಗಿದೆ. ಈಗ ನೀನು ಹೇಳಿದ ಮಾತನ್ನೇ ಬೇರೊಬ್ಬನು ನನ್ನ ಮುಂದೆ ನುಡಿದಿದ್ದರೆ, ಇದುವರೆಗೂ ಅವನು ಬದುಕುತ್ತಿರಲಿಲ್ಲ ! ಕುಲಗೇಡಿಯಾದ ನಿನ್ನ ಜನ್ಮವನ್ನು ಸುಡಬೇಕು !'' ಎಂದನು. ಹೀಗೆ ರಾವಣನು ಪರುಷವಾಕ್ಯಗಳನ್ನಾಡಲು, ನ್ಯಾಯವಾದಿಯಾದ ವಿಭೀಷಣನು ಆ ಮಾತುಗಳನ್ನು ಕೇಳಿ ಸಹಿಸಲಾರದೆ, ತನ್ನ ನಾಲ್ವರು ರಾಕ್ಷಸಮಂತ್ರಿಗಳೊಡಗೂಡಿ, ಕೈಯಲ್ಲಿ ಹಿಡಿದ ಗದೆಯೊಡನೆ ಆಕಾಶಕ್ಕೆ ಹಾರಿಬಿಟ್ಟನು. ಸದ್ಗತಿಹೇತುವಾದ ರಾಮಾಶ್ರಯಣ ಪ್ರಯತ್ನವೆಂಬ ಭಾಗ್ಯಲಕ್ಷ್ಮೀ ವಿಶಿಷ್ಟನಾದ ವಿಭೀಷಣನು, ಹೀಗೆ ಕೋಪದಿಂದ ಮೇಲೆ ಹಾರಿ, ಅಂತರಿಕ್ಷದಲ್ಲಿ ದ್ದಂತೆಯೇ ತಿರುಗಿ ತನ್ನಣ್ಣನಾದ ರಾವಣನನ್ನು ಕುರಿತು, "ಎಲೆ ರಾಜನೇ ! ಹೇಗಿದ್ದರೂ ನೀನು ನನಗೆ ಒಡಹುಟ್ಟಿದವನು. ನನ್ನನ್ನು ಹೇಗೆ ಬೇಕಾದರೂ ನಿಂದಿಸಬಹುದು ! ನಿನ್ನ ಮಾತಿಗೆ ನಾನು ಇದಿರು ಮಾತಾಡಬಾರದು ! ನೀನು ನನಗೆ ಅಣ್ಣನಾದುದರಿಂದ ತಂದೆಗೆ ಸಮಾನನು ! ಪೂಜ್ಯನು ! ಆದರೇನು ! ನೀನು

ಧರ್ಮ ಮಾರ್ಗವನ್ನು ಬಿಟ್ಟು ಹೋಗುವುದಲ್ಲದೆ, ನನ್ನ ಮೇಲೆಯೂ ಇಲ್ಲದ ದೋಷವನ್ನು ಕಲ್ಪಿಸಿ ಕ್ರೂರವಾಕ್ಯವನ್ನು ಹೇಳಿದೆಯಲ್ಲವೆ ? ಇದನ್ನು ಮಾತ್ರ ನಾನು ಸಹಿಸಲಾರೆನು. ಎಲೆ ರಾವಣಾ ! ನಾನು ನಿನಗೆ ಮೇಲನ್ನು ಕೋರಿ ಯುಕ್ತಾಯುಕ್ತವನ್ನು ನಿಶ್ಚಯಿಸಿ ಹಿತವಾದವನ್ನು ಹೇಳಿದನು. ಆದರೂ ಕಾಲವಶ ರಾದವರಿಗೆ ಹಿತವಾದಗಳು ಕಿವಿಗೇರುವುವೆ ? ಲೋಕದಲ್ಲಿ ಪ್ರಿಯವಾಕ್ಯವನ್ನು ನುಡಿಯುವವರು ಮುಂದೆ ಹಿತಕರವಾದ ಮಾತನ್ನು ಹೇಳುವವರಾಗಲಿ, ಅದನ್ನು ಆದರಿಸಿ ಕೇಳುವವರಾಗಲಿ ಸಿಕ್ಕುವುದು ಕಷ್ಟವು. ಮುಖ್ಯವಾಗಿ ಸಮಸ್ತಭೂತಗಳನ್ನೂ ಸಂಹರಿಸತಕ್ಕ ಕಾಲಪಾಶವು ನಿನ್ನ ಕೊರಲಿಗೆ ಸುತ್ತಿರುವುದು. ಆದುದರಿಂದ ಬೆಂಕಿಗೆ ಸಿಕ್ಕಿದ ಮನೆಯನ್ನು ಹೇಗೋ ಮೃತ್ಯುವಶನಾದ ನಿನ್ನನ್ನು ನೋಡಿ ಸುಮ್ಮನಿರಬಾರ ದೆಂದು ನಾನು ಇಷ್ಟು ದೂರದವರೆಗೆ ಹೇಳಬೇಕಾಯಿತು. ನೀನು ಉರಿಯುವ ಬೆಂಕಿಗೆ ಸಮಾನಗಳಾಗಿಯೂ ಚಿನ್ನದ ಕಟ್ಟುಳ್ಳವುಗಳಾಗಿಯೂ, ತೀಕ್ಷ್ಣ ಗಳಾಗಿಯೂ ಇರುವ ರಾಮಬಾಣಗಳಿಗೆ, ಸಿಕ್ಕಿ ಸಾಯುವುದನ್ನು ನೋಡಲಾರದು ದಕ್ಕಾಗಿಯೇ ನಾನು ಹೀಗೆ ಹೇಳಿದೆನು. ಯುದ್ಧರಂಗದಲ್ಲಿ ಎಷ್ಟೇ ಶೂರರಾಗಿದ್ದರೂ, ಎಷ್ಟೇ ಬಲಾಢ್ಯರಾಗಿದ್ದರೂ, ಎಷ್ಟೇ ಅಸ್ತ್ರವಿಶಾರದರಾಗಿದ್ದರೂ ಮೃತ್ಯುವಶರಾದಾಗ ಮಳಲಿನ ಸೇತುವೆಗಳಂತೆ ನಿಮಿಷ ಮಾತ್ರದಲ್ಲಿ ನಾಶಹೊಂದುವರು. ನೀನು ನನಗೆ ಅಣ್ಣನೆಂಬುದಕ್ಕಾಗಿ ನಿನ್ನ ಹಿತವನ್ನು ಕೋರಿ ನಾನು ಹೀಗೆ ಸಲಿಗೆಯಿಂದ ಮಾತಾಡಿ ಬಿಟ್ಟೆನು ! ನನ್ನನ್ನು ಮನ್ನಿಸಬೇಕು. ಮುಖ್ಯವಾಗಿ ನೀನು ಸರ್ವವಿಧದಿಂದಲೂ ನಿನ್ನನ್ನೂ ರಾಕ್ಷಸ ಸಹಿತವಾದ ಈ ನಿನ್ನ ಲಂಕೆಯನ್ನೂ ರಕ್ಷಿಸಿಕೊಳ್ಳುವ ಮಾರ್ಗ ವನ್ನು ನೋಡು ! ನಿನಗೆ ಕ್ಷೇಮವಾಗಲಿ ! ನಾನು ಹೋಗಿ ಬರುವೆನು. ಇನ್ನು ನಾನಿಲ್ಲದುದರಿಂದಲಾದರೂ ನೀನು ಸುಖಿಯಾಗಿರು ! (ರಾವಣಾ ! ಮುಖ್ಯವಾಗಿ ಈ ರಾಕ್ಷಸರ ಗುಂಪಿನಲ್ಲಿ ಈ ಪಾಪಕೃತ್ಯಗಳಿಂದ ನಿನ್ನನ್ನು ತಪ್ಪಿಸುವಂತೆ ನಿನಗೆ ಹಿತವನ್ನುಪದೇಶಿಸಿ ತಡೆಯುವ ಸುಹೃತ್ತಾಗಲಿ ಸ್ನೇಹಿತನಾಗಲಿ ಒಬ್ಬನಾದರೂ ಇಲ್ಲ.) ನಾನು ಹಿತವನ್ನು ಹೇಳಿದರೆ ನನ್ನ ಮಾತು ನಿನ್ನ ಕಿವಿಗೇರಲಿಲ್ಲ ! ನಾನೇನುಮಾಡಲಿ! ಮೃತ್ಯುವು ಸಮೀಪಿಸಿದಾಗಲೇ ಮನುಷ್ಯರು ಮೃತಪ್ರಾಯರೆಂಬುದು ನಿಜವು. ಆದರಿಂದಲೇ ಅವರೂ ಸತ್ತವರಂತೆಯೇ, ತಮ್ಮ ಮಿತ್ರರು ಹೇಳಿದ ಹಿತವಾದವನ್ನು ಗ್ರಹಿಸಲಾರರು ಎಂದನು.

ಇಲ್ಲಿಗೆ ಹದಿನಾರನೆಯ ಸರ್ಗವು.

1ವಿಭೀಷಣನು ಮಂತ್ರಿಸಹಿತನಾಗಿ ರಾಮಲಕ್ಷ್ಮಣರಿದ್ದ ಕಡೆಗೆ ಬಂದುದು. ಸುಗ್ರೀವಾದಿ ವಾನರರು ಅವನನ್ನು ನೋಡಿ ಅವನು ವಧ್ಯನೆಂದು ರಾಮನಿಗೆ ತಿಳಿಸಿದುದು. ರಾಮನು ಈ ವಿಷಯದಲ್ಲಿ ಸಮಸ್ತವಾನರರ ಅಭಿಪ್ರಾಯವನ್ನು ಕೇಳಿ, ಕೊನೆಗೆ ಹನುಮಂತನ ಮತದಂತೆ ಅವನನ್ನು ಕರೆಸಿಕೊಳ್ಳುವುದಾಗಿ ನಿಶ್ಚಯಿಸಿ ವಾನರರಿಗೆ ಆಜ್ಞೆ ಮಾಡಿದುದು.

2ಹೀಗೆ ವಿಭೀಷಣನು ರಾವಣನನ್ನು ಕುರಿತು ಪರುಷವಾಕ್ಯವನ್ನು ಹೇಳಿ ಆ ಕ್ಷಣವೇ ಅಲ್ಲಿಂದ ರಾಮಲಕ್ಷ್ಮಣರಿದ್ದ ಕಡೆಗೆ ಹೊರಟುಬಂದನು.

ವಿಭೀಷಣ ಶರಣಾಗತಿ ಪ್ರಕರಣವು

1. “ಆನುಕೂಲ್ಯಸ್ಯ ಸಂಕಲ್ಪಃ ಪ್ರಾತಿಕೂಲ್ಯಸ್ಯ ವರ್ಜನಂ | ರಕ್ಷಿಷ್ಯತೀತಿ ವಿಶ್ವಾಸೋ ಗೋಪ್ತೃತ್ವವರಣಂ ಕಥಾ || ಆತ್ಮನಿಕ್ಷೇಪಕಾರ್ಪಣ್ಯೇ ಷಡ್ವಿಧಾ ಶರಣಾಗತಿಃ” ಎಂಬಂತೆ, ಶರಣಾಗತಿಗೆ ಆನುಕೂಲ್ಯಸಂಕಲ್ಪವೇ ಮೊದಲಾದ ಆರು ಅಂಗಗಳುಂಟು. ರಾಮನಲ್ಲಿ ಶರಣಾಗತಿಯನ್ನು ಮಾಡುವುದಕ್ಕಾಗಿ ಉದ್ದೇಶಿಸಿದ ವಿಭೀಷಣನು, ಆ ಅಂಗಗಳಲ್ಲಿ ಆನುಕೂಲ್ಯಸಂಕಲ್ಪ, ಪ್ರಾತಿಕೂಲ್ಯವರ್ಜನ, ವಿಶ್ವಾಸಗಳೆಂಬ ಮೊದಲನೆಯ ಮೂರು ಅಂಗಗಳನ್ನೂ ನಿರ್ವಹಿಸಿರುವಂತೆ ಹಿಂದಿನ ಎಂಟು ಸರ್ಗಗಳಿಂದ ಕಾಣಿಸಲ್ಪಟ್ಟಿದೆ. ರಾಮನಿಗೆ ಸೀತೆಯನ್ನೊಪ್ಪಿಸಿ ಆತನಲ್ಲಿ ಮರೆಹುಗಬೇಕೆಂಬುದೇ ಆನುಕೂಲ್ಯ ಸಂಕಲ್ಪವು. ಎಂದರೆ, ತನ್ನ ಸ್ವರೂಪಕ್ಕೆ ಅನುಕೂಲವಾದುದನ್ನು ನಡೆಸಬೇಕೆಂದು ಉದ್ದೇಶಿಸುವುದು. ರಾವಣನನ್ನೂ ಅವನ ದೇಶವನ್ನೂ ಬಿಟ್ಟು ಹೋಗುವುದೇ ಪ್ರಾತಿಕೂಲ್ಯವರ್ಜನವು. ತನಗೆ ಪ್ರತಿಕೂಲವಾದುದನ್ನು ಬಿಟ್ಟುಹೋಗುವುದು. ಹಾಗೆಯೇ ವಿಭೀಷಣನು ರಾವಣನಿಗೆ ಬಾರಿಬಾರಿಗೂ ಹಿತೋಪದೇಶವನ್ನು ಮಾಡಿರುವುದರಿಂದ, ತನಗೆ ರಾಮನೇ ರಕ್ಷಕನೆಂಬ ವಿಶ್ವಾಸವೂ ಕಾಣಿಸಲ್ಪಟ್ಟಿತು. ಇನ್ನುಮೇಲೆ ಕಾರ್ಪಣ್ಯ ಪ್ರದರ್ಶನಪೂರ್ವವಾದ ಶರಣಾಗತಿ ಸ್ವರೂಪವು ತೋರಿಸಲ್ಪಡುವುದಾಗಿ ಗ್ರಾಹ್ಯವು.

2. ಇಲ್ಲಿ “ಇತ್ಯುಕ್ತ್ವಾ ಪರುಷಂ ವಾಕ್ಯಂ ರಾವಣಂ ರಾವಣಾನುಜಃ | ಆಜಗಾಮ ಮುಹೂರ್ತೇನ ಯತ್ರ ರಾಮಸ್ಸಲಕ್ಷ್ಮಣಃ” ಎಂದು ಮೂಲವು. ವಿಶೇಷಾರ್ಥವು :— (ಇತಿ) ಹೀಗೆ ಎಂದರೆ, ರಾವಣನಿಗೆ ಸೀತೆಯನ್ನೊಪ್ಪಿಸಬೇಕೆಂಬ ಕರ್ತವ್ಯವನ್ನೂ, ಹಾಗೆ ನಡೆಸದಿದ್ದರೆ ಅದರಿಂದುಂಟಾಗಬಹುದಾದ ಅನರ್ಥಗಳನ್ನೂ ತೋರಿಸಿ, (ಪರುಷಂ) ಮುಂದೆ ಹಿತಕರವಾಗಿ ಪಥ್ಯವಾಗಿದ್ದರೂ, ಮೃತ್ಯುವಶನಾದ ರಾವಣನಿಗೆ ಮಾತ್ರ ಪರುಷವಾಗಿ ತೋರುವ (ವಾಕ್ಯಂ) ಮಾತನ್ನು (ಉಕ್ತ್ವಾ) ಹೇಳಿ, (ರಾವಣಾನುಜಃ) ಈ ಅನುಜಶಬ್ದದಿಂದ, ರಾವಣಾಸುರನು ಹುಟ್ಟಿದ ಗರ್ಭದಲ್ಲಿಯೇ ಹುಟ್ಟಿಬೆಳೆದವನಾದರೂ

ಸತ್ಪ್ರೋತ್ತರನಾದವನು ಹೇಳಬೇಕಾದ ಹಿತವನ್ನೇ ಹೇಳಿದನೆಂದು ಋಷಿಯು ವಿಭೀಷಣನನ್ನು ಪ್ರಶಂಸೆಮಾಡುವುದಾಗಿ ಭಾವವು. ಹಿತವನ್ನು ಹೇಳುವ ವಿಷಯದಲ್ಲಿ ಚಿಕ್ಕವರು ದೊಡ್ಡವ ರೆಂಬ ಭೇದಬುದ್ಧಿಯನ್ನಿಡದೆ, ಪ್ರಾಜ್ಞನು ಅಜ್ಞನಿಗೆ ಬುದ್ಧಿಹಾದವನ್ನು ಹೇಳಬೇಕಾದುದೇ ನ್ಯಾಯವೆಂದೂ ಸೂಚಿತವು (ಆಜಗಾಮ) ಬಂದನು. ಇಲ್ಲಿ ವಿಭೀಷಣನು ತನ್ನ ಸ್ವದೇಶ ವನ್ನು ಬಿಟ್ಟುಹೋಗುವ ಸಂದರ್ಭದಲ್ಲಿ "ಜಗಾಮ" "ಹೋದನು" ಎಂದು ಹೇಳುವುದು ಯುಕ್ತವಾಗಿರುವಾಗ ಬಂದನೆಂದು ಹೇಳಿದುದೇಕೆಂದರೆ, ರಾವಣಗೋಷ್ಠಿಯಲ್ಲಿ ತನಗೆ ಸಂಬಂಧವಿಲ್ಲದುದರಿಂದಲೂ, ರಾಮಗೋಷ್ಠಿಯೇ ಆತನಿಗೆ ಸ್ವಗೃಹವಾದುದರಿಂದಲೂ ಇಲ್ಲಿ ವಿಭೀಷಣನು ಸ್ವಗೃಹಕ್ಕೆ ಬಂದುದಾಗಿ ಹೇಳಬೇಕೆಂಬುದೇ ಇಲ್ಲಿನ ಭಾವವು. (ಮುಹೂರ್ತೇನ) ಅಲ್ಲಿ ಕ್ಷಣಮಾತ್ರವೂ ನಿಲ್ಲದೆ ಮುಹೂರ್ತಕಾಲದೊಳಗಾಗಿಯೇ ಬಂದನೆಂದರ್ಥವು. "ಅಷ್ಯಾತುರವೇಕೆ" ಎಂದರೆ "ವರಂ ಹುತವಹಜ್ವಾಲಾಪಂಜರಾಂತರ್ವ್ಯವಸ್ಥಿತಿಃ । ನಶೌರಿ-ಚಿಂತಾವಿಮುಖ ಜನ ಸಂವಾಸನೈಶಸಮ್" ಅಗ್ನಿಜ್ವಾಲೆಯೆಂಬ ಪಂಜರದ ಮಧ್ಯದಲ್ಲಿ ಯಾದರೂ ಇರುವುದುತ್ತಮವೇ ಹೊರತು, ವಿಷ್ಣುಚಿಂತಾವಿಮುಖರೊಡನೆ ಸೇರಿರುವುದು ಮಾತ್ರ ಸರಿಯಲ್ಲವೆಂಬ ನ್ಯಾಯದಿಂದ, ಕ್ಷಣಮಾತ್ರವೂ ಆ ರಾವಣನ ಸಹವಾಸವನ್ನು ಸಹಿಸಲಾರದೆ ಹೊರಟು ಬಂದನೆಂದು ಭಾವವು. (ಯತ್ರ ರಾಮಃ) ಹಿಂದೆ ಅಯೋಧ್ಯಾ-ಕಾಂಡದಲ್ಲಿ "ಸುಭಗಶ್ಚಿತ್ರಕೂಟೋಽಸೌ ಗಿರಿರಾಜೋಪಮೋಗಿರಿಃ! ಯಸ್ಮಿನ್ ವಸತಿ ಕಾಕುತ್ಸ್ಥಃ ಕುಬೇರ ಇವ ನಂದನೇ" ಎಂಬುದಾಗಿ ಭರತನಿಗೆ ರಾಮವಾಸದಿಂದ ಚಿತ್ರ ಕೂಟವೇ ಪ್ರಾಪ್ಯವಾದಂತೆ, ಇಲ್ಲಿಯೂ ರಾಮಸಂಬಂಧಕ್ಕಿಂತಲೂ ರಾಮನಿರುವ ದೇಶವೇ ತನಗೆ ಉದ್ದೇಶ್ಯವೆಂದು ಭಾವವು (ಸಲಕ್ಷ್ಮಣಃ) ರಾಮನಿಗೆ ಲಕ್ಷ್ಮಣನು ವ್ಯಾವರ್ತಕ ನೆಂಬುದನ್ನು ತೋರಿಸುವುದಕ್ಕಾಗಿ ಇಲ್ಲಿ "ಸಲಕ್ಷ್ಮಣ" ಎಂಬ ಶಬ್ದವು. ಇದರಿಂದ ಆಶ್ರಯಿಸಲ್ಪಟ್ಟವನಿಗೆ ಆಶ್ರಯಿಸಿದವರನ್ನು ಬಿಡಲಾಗದೆಂದು ಸೂಚಿತವು. ಅಥವಾ ಇದರಿಂದ ಪುರುಷಕಾರ ಸಾನ್ನಿಧ್ಯವು ಹೇಳಲ್ಪಟ್ಟುದಾಗಿಯೂ ಗ್ರಹಿಸಬಹುದು. ಮತ್ತು ಇಲ್ಲಿ ತಮ್ಮನ ಹಿತವಾಕ್ಯವನ್ನು ಕೇಳದ ರಾವಣನ ಗೋಷ್ಠಿಯ ಸಂಬಂಧವನ್ನೇ ಬಿಟ್ಟು ತಮ್ಮನ ಮಾತಿನಂತೆ ನಡೆಯುವ ರಾಮನ ಗೋಷ್ಠಿಯಲ್ಲಿ ಪ್ರವೇಶಿಸಿದನೆಂದೂ ಭಾವವು. ಈ ಶ್ಲೋಕಾರ್ಥದಿಂದ ಭಗವತ್ಪ್ರೀತಿಯುಳ್ಳವನಿಗೆ ಭಗವದ್ವಿಮುಖರಿರುವ ದೇಶವು ಪರಿತ್ಯಾಜ್ಯವೆಂದೂ, ಭಗವತ್ಸಾ ನ್ನಿಧ್ಯವುಳ್ಳ ಪ್ರದೇಶವೇ ಪ್ರಾಪ್ಯವೆಂದೂ, ಭಗವದ್ದೇಶವಾಗಿದ್ದರೂ ಭಾಗವತಾಭಿಮಾನಕ್ಕೆ ಪಾತ್ರವಾಗದಿದ್ದರೆ ಪರಿತ್ಯಾಜ್ಯವಾಗುವುದರಿಂದ, ಇಲ್ಲಿ ಭಾಗವತನಾದ ಲಕ್ಷ್ಮಣನ ಸಾನ್ನಿಧ್ಯವೂ ಸೇರಿರುವುದಕ್ಕಾಗಿ ಪರಮ ಪ್ರಾಪ್ಯವೆಂದೂ ಸೂಚಿಸಲ್ಪಡುವುದು.

ಇಲ್ಲಿ ವಿಚಾರಾರ್ಹವಾದ ವಿಷಯವೇನೆಂದರೆ:—ವಿಭೀಷಣನು ವಿಶ್ರವಸ್ಸಿನ ಮತ್ತು ಬ್ರಹ್ಮನ ವರಪ್ರಸಾದಬಲದಿಂದ ಸಮಸ್ತ ಧರ್ಮಬೃಂದಗಳನ್ನೂ ತಿಳಿದವನು. ಮತ್ತು "ವಿಭೀಷಣಸ್ತು ಧರ್ಮಾತ್ಮಾ ನತು ರಾಕ್ಷಸಚೇಷ್ಟಿತಃ" ಈತನು ಧರ್ಮಾತ್ಮನೇಹೊರತು ರಾಕ್ಷಸ ಚೇಷ್ಟೆಯುಳ್ಳವನಲ್ಲವೆಂದು ಅಲ್ಲಲ್ಲಿ ಸ್ತುತಿಸಲ್ಪಟ್ಟವನು. ಹೀಗಿರುವಾಗಲೂ ಇವನು

'ಜ್ಯೇಷ್ಠಭ್ರಾತಾ ಪಿತೃಸಮಃ' ಎಂಬಂತೆ, ತನಗೆ ತಂದೆಯಂತೆ ಪೂಜ್ಯನಾಗಿಯೂ ಬಾಲಕನಾದ ತನ್ನನ್ನು ಪೋಷಿಸಿದವನಾಗಿಯೂ ಇರುವ ಅಣ್ಣನಾದ ರಾವಣನನ್ನು ಇಂತಹ ಕಷ್ಟಕಾಲದಲ್ಲಿ ಬಿಟ್ಟುಹೋಗಬಹುದೆ? ಹೇಗೋ ಮನಸ್ಸಿಗೆ ಸೇರದುದರಿಂದ ಬಿಟ್ಟುಹೋದರೂ ಹೋಗಲಿ! ಅವನನ್ನು ಕೊಲ್ಲುವುದಕ್ಕಾಗಿಯೇ ಬಂದಿರುವ ರಾಮನಬಳಿಗೆ ಹೋಗಿ ಶತ್ರುಪಕ್ಷವನ್ನು ಅವಲಂಬಿಸುವುದು ಯುಕ್ತವೆ? ಅಥವಾ ಹಾಗೆ ಶತ್ರುವಿನಲ್ಲಿ ಸೇರಿದರೂ ಅಣ್ಣನ ರಾಜ್ಯವನ್ನೇ ಅಪೇಕ್ಷಿಸುವುದು ನ್ಯಾಯವೆ? ರಾಜ್ಯವನ್ನಪೇಕ್ಷಿಸಿದರೂ ಅಪೇಕ್ಷಿಸಲಿ! ಅಣ್ಣನನ್ನು ಕೊಲ್ಲುವುದಕ್ಕೆ ಉಪಾಯವನ್ನು ತಿಳಿಸುವುದುಮಾತ್ರ ಸರ್ವಥಾ ಯುಕ್ತವಲ್ಲ. ಅಷ್ಟು ಅಕಾರ್ಯಗಳಿಗೆ ಪ್ರಯತ್ನಿಸಿದ ವಿಭೀಷಣನನ್ನು ಧರ್ಮಾತ್ಮನೆಂಬುದು ಹೇಗೆ? ಎಂಬೀ ಶಂಕೆಯು ಹುಟ್ಟಬಹುದು. ಇದಕ್ಕಾಗಿ ಕೆಲವರು "ರಾವಣನು ಬಹಳ ದೋಷಿಯಾದುದರಿಂದ "ಗುರೋರಪ್ಯವಲಿಪ್ತಸ್ಯ ಕಾರ್ಯಾಕಾರ್ಯಮಜಾನತಃ । ಉತ್ಪಥಂ ಪ್ರತಿಪನ್ನಸ್ಯ ಪರಿತ್ಯಾಗೋ ವಿಧೀಯತೇ" ಎಂಬ ನ್ಯಾಯವನ್ನನುಸರಿಸಿಯೇ, ವಿಭೀಷಣನು ತನ್ನಣ್ಣನಾದ ರಾವಣನನ್ನು ಬಿಟ್ಟುಬರಬೇಕಾಯಿತೆಂದು ಸಮಾಧಾನವನ್ನು ಹೇಳುವರು. ಇದೇ ವಿಚಾರದಲ್ಲಿ ವೇದಾಂತಾಚಾರ್ಯರು ನಿರೂಪಿಸುವುದೇನೆಂದರೆ, ವಿಭೀಷಣನು ಬ್ರಹ್ಮವರಪ್ರಭಾವದಿಂದ ವಿಜ್ಞಾನವನ್ನು ಪಡೆದು ಬಂದವನಾದುದರಿಂದ, ಶ್ರೀರಾಮನೇ ಸರ್ವಲೋಕೇಶ್ವರನೆಂದೂ, ಸರ್ವಶರಣ್ಯನೆಂದೂ, ಸರ್ವಪ್ರಾಪ್ಯನೆಂದೂ, ನಾರಾಯಣಾಖ್ಯಪರಬ್ರಹ್ಮನೆಂದೂ, ಲೋಕಾನುಗ್ರಹಾರ್ಥವಾಗಿಯೇ ಅವತರಿಸಿದವನೆಂದೂ ಸ್ಪಷ್ಟವಾಗಿ ತಿಳಿದಿರುವನು. ಮಂಡೋದರಿ ಮೊದಲಾದವರಿಗೂ ಈ ತತ್ವಜ್ಞಾನವುಂಟಲ್ಲವೆ? ಹೀಗೆ ತತ್ವಜ್ಞಾನ ಸಂಪನ್ನನಾದ ವಿಭೀಷಣನಿಗೆ, ವಿಶೇಷಧರ್ಮದ ಪ್ರಾಬಲ್ಯವೂ, ಸಾಮಾನ್ಯಧರ್ಮದ ದೌರ್ಬಲ್ಯವೂ ವಿವೇಚನೆಯಿಂದ ಚೆನ್ನಾಗಿ ತಿಳಿದಿರಬೇಕು. ಈ ವಿವೇಕಜ್ಞಾನದಿಂದಲೇ ಅವನು ದುರ್ಬಲವಾದ ಸಾಮಾನ್ಯ ಧರ್ಮವನ್ನು ಪರಿತ್ಯಜಿಸಿ, ಪ್ರಬಲವಾದ ವಿಶೇಷಧರ್ಮವನ್ನೇ ಪರಿಗ್ರಹಿಸಿರುವನು. "ಜ್ಯೇಷ್ಠಭ್ರಾತ್ರನುವರ್ತನವೆಂಬುದು ತ್ರಿವರ್ಗಫಲಸಾಧನವಾಗಿದ್ದು, ಆ ಮೂಲಕ ಪರಮಾತ್ಮಾರಾಧನದಲ್ಲಿ ಪರ್ಯವಸಿತವಾಗುವುದಲ್ಲವೆ" ಎಂದರೆ, ಅದು ಮೋಕ್ಷಪರ್ಯವಸಾಯಿಯಾಗಿದ್ದರೂ ಪರಮಾತ್ಮೋಪಾಸನೆಗೆ ಅಂಗಮಾತ್ರವಾದುದರಿಂದ ಸಾಮಾನ್ಯಧರ್ಮವೆನಿಸುವುದು. ರಾಮಾನುವರ್ತನದಿಂದಲೂ, ಸಾಕ್ಷಾತ್ತಾಗಿ ಪರಮಾತ್ಮನನ್ನೇ ಆರಾಧಿಸಿದಂತಾಗುವುದರಿಂದಲೂ, ಯಜ್ಞಾದಿಧರ್ಮಸಾಧ್ಯವೆನಿಸಿ ಪ್ರಧಾನವಾದುದರಿಂದಲೂ, ಅದು ವಿಶೇಷಧರ್ಮವೆನಿಸುವುದು. ಇವೆರಡು ಧರ್ಮಗಳಿಗೂ ವಿರೋಧವಿಲ್ಲದಾಗ ಎರಡನ್ನೂ ಅನುವರ್ತಿಸಬಹುದು. ವಿರೋಧವಿದ್ದಾಗ ಸಾಮಾನ್ಯ ಧರ್ಮವನ್ನು ಬಿಟ್ಟು ವಿಶೇಷಧರ್ಮವನ್ನೇ ಅನುವರ್ತಿಸಬೇಕು. ಆದುದರಿಂದ ವಿಭೀಷಣನು ಇದುವರೆಗೆ ಜ್ಯೇಷ್ಠಾನುವರ್ತನವೆಂಬ ಧರ್ಮವನ್ನು ಬಿಡದಹಾಗೆಯೇ ರಾಮಾನುವರ್ತನವನ್ನೂ ಸಾಧಿಸಬೇಕೆಂದುದ್ದೇಶಿಸಿ, ಆ ಆಸೆಯಿಂದ ರಾವಣನಿಗೆ ಸಾರಿಸಾರಿ ಹಿತವನ್ನುಪದೇಶಿಸಿದನು. ಕೊನೆಗೂ ಅಸುರಪ್ರಕೃತಿಯಾದ ರಾವಣನಲ್ಲಿ ತನ್ನ ಉದ್ದೇಶವು ಸಿದ್ಧಿಸದುದರಿಂದ, ಅವನ ಸಹವಾಸವನ್ನು

ಬಿಟ್ಟು ರಾಮಾನುವರ್ತನವೆಂಬ ವಿಶೇಷಧರ್ಮಕ್ಕೆ ಪ್ರಯತ್ನಿಸಬೇಕಾಯಿತು. ಇದರಿಂದ ವಿಭೀಷಣನು ಕೃತಘ್ನನೆಂಬ ಶಂಕೆಗೆ ಸ್ವಲ್ಪಮಾತ್ರವೂ ಆಧಾರವಿಲ್ಲವು. ಮತ್ತು ಇವನು ರಾಜ್ಯಾಭಿಲಾಷೆಯಿಂದ ರಾಮನನ್ನು ಸೇರಿದವನೂ ಅಲ್ಲ. ಇವನು ತನ್ನ ಶರಣಾಗತಿ ಸಮಯದಲ್ಲಿ "ತ್ಯಕ್ತ್ವಾ ಪುತ್ರಾಂಶ್ಚ ದಾರಾಂಶ್ಚ ರಾಘವಂ ಶರಣಂ ಗತಃ" ಎಂದು, ಇತರ ವಿಷಯಗಳಲ್ಲಿ ತನಗುಂಟಾಗಿರುವ ವೈರಾಗ್ಯವನ್ನು ತಾನೇ ಕಂಠೋಕ್ತವಾಗಿ ಹೇಳಿರುವನು. ಮತ್ತು ಇವನು ರಾಮನಲ್ಲಿ ತನ್ನ ಸ್ಥಿತಿಯನ್ನು ವಿಜ್ಞಾಪಿಸಿಕೊಳ್ಳುವಾಗಲೂ "ಪರಿತ್ಯಕ್ತಾ ಮಯಾ ಲಂಕಾ ಮಿತ್ರಾಣಿ ಚ ಧನಾನಿ ಚ। ಭವದ್ಗತಂ ಮೇ ರಾಜ್ಯಂಚ ಜೀವಿತಂ ಚ ಸುಖಾನಿಚ" ಎಂದು ಹೇಳಿ, ರಾಮನನ್ನೇ ತನಗೆ ಸರ್ವಪುರುಷಾರ್ಥಭೂತನನ್ನಾಗಿ ಹೇಳಿರುವನು. ಇವುಗಳಿಂದ ಅವನು ರಾಜ್ಯಾಪೇಕ್ಷೆಯಿಂದ ಬಂದವನಲ್ಲವೆಂದು ನಿಸ್ಸಂದೇಹವಾಗಿ ತಿಳಿಯಬಹುದು. ಆದರೆ ರಾಮನು ವಿಭೀಷಣನನ್ನು ಕುರಿತು "ರಾಜಾನಂ ತ್ವಾಂ ಕರಿಷ್ಯಾಮಿ ಸತ್ಯಮೇತದ್ಬ್ರವೀಮಿ ತೇ" ಎಂದು ರಾಜ್ಯವನ್ನು ಕೊಡುವುದಾಗಿ ಪ್ರತಿಜ್ಞೆಮಾಡಿಕೊಡಲಿಲ್ಲವೆ?" ಎಂದರೆ, ಶರಣಾಗತನಾದ ಆ ವಿಭೀಷಣನಲ್ಲಿ ಆಗ ರಾಮನಿಗೆ ಹುಟ್ಟಿದ ಮಿತಿಮೀರಿದ ವಾತ್ಸಲ್ಯವು, ಅವನ ಬಾಯಿಂದ ಆ ಮಾತನ್ನಾಡಿಸಿತೇ ಹೊರತು ಬೇರೆಯಲ್ಲ. ಈ ಆನುಷಂಗಿಕಭೋಗವನ್ನು ವಿಭೀಷಣನು ಅಪೇಕ್ಷಿಸಿದವನೇ ಅಲ್ಲ. ಶ್ರೀಮನ್ನಾರಾಯಣನು ತನ್ನ ಭಕ್ತರಿಗೆ ಸ್ವಪ್ರಾಪ್ತಿರೂಪವಾದ ಮುಕ್ತಿಯನ್ನು ಮಾತ್ರವೇ ಅಲ್ಲದೆ, "ಆಯುರಾರೋಗ್ಯಮರ್ಥಾಂಶ್ಚ ಭೋಗಾಂಶ್ಚೈವಾನುಷಂಗಿಕಾನ್। ದದಾತಿ ಧ್ಯಾಯತಾಂ ನಿತ್ಯಮಪವರ್ಗಪ್ರದೋ ಹರಿಃ" ಎಂಬಂತೆ, ತನ್ನ ಮನಸ್ತೃಪ್ತಿಗಾಗಿ ತಾನಾಗಿಯೇ ಅನುಷಂಗಿಕಭೋಗಗಳನ್ನೂ ಕೊಡುವುದಾಗಿ ಹೇಳುವರು. ಹನುಮಂತನು ವಿಭೀಷಣನ ವಿಷಯವಾಗಿ ರಾಮನನ್ನು ಕುರಿತು "ರಾಜ್ಯಂ ಪ್ರಾರ್ಥಯಮಾನಸ್ತು ಬುದ್ಧಿಪೂರ್ವಮಿಹಾಗತಃ" ಎಂದೂ, ರಾಮನು "ರಾಜ್ಯಕಾಂಕ್ಷೀ ವಿಭೀಷಣಃ" ಎಂದೂ ಹೇಳಿದುದಕ್ಕೆ ಕಾರಣವೇನು? ಎಂಬ ಶಂಕೆಯುಂಟಾಗಬಹುದು. ಇವೆಲ್ಲವೂ, ರಾಮಭಕ್ತಿಯಿಂದ ವಿಭೀಷಣನ ನಿಜಸ್ಥಿತಿಯನ್ನರಿಯಲಾರದೆ ಆತುರಪಡುತ್ತಿದ್ದ ಸುಗ್ರೀವನಿಗೆ, ಆ ವ್ಯಾಮೋಹವನ್ನು ನೀಗಿಸುವುದಕ್ಕಾಗಿ ವ್ಯಾಜೀಕರಿಸಿದ ಮಾತೇಹೊರತು ಬೇರೆಯಲ್ಲವೆಂದು ಗ್ರಾಹ್ಯವು. ಇಲ್ಲಿ ಹನುಮದ್ರಾಮವಾಕ್ಯಗಳಿಗೂ, ವಿಭೀಷಣನ ವಾಕ್ಯಕ್ಕೂ ಅನ್ಯೋನ್ಯವಿರೋಧವು ತೋರಿಬಂದರೂ, ಅಂತರಂಗ ಬಹಿರಂಗಗಳಲ್ಲಿ ಅಂತರಂಗವೇ ಪ್ರಬಲವೆಂಬ ನ್ಯಾಯದಿಂದ, ವಿಭೀಷಣನ ವಾಕ್ಯಕ್ಕೇ ಪ್ರಾಬಲ್ಯವೆಂದು ತಿಳಿಯಬೇಕು. ಆದುದರಿಂದ ವಿಭೀಷಣನ ವಾಕ್ಯಾನುಸಾರವಾಗಿ ಆತನಿಗೆ ರಾಜ್ಯಕಾಂಕ್ಷೆಯಿಲ್ಲವೆಂಬುದು ಸ್ಪಷ್ಟವು. ಇದಕ್ಕಾಗಿಯೇ ವಿಭೀಷಣನು "ರಾಜಾನಂ ತ್ವಾಂ ಕರಿಷ್ಯಾಮಿ" ಎಂದು ರಾಮನು ತನಗೆ ಹೇಳಿದಾಗಲೂ, ಅದಕ್ಕೆ ಯಾವ ಪ್ರತ್ಯುತ್ತರವನ್ನೂ ಹೇಳದೆ, ರಾಕ್ಷಸರೊಡನೆ ಯುದ್ಧದಲ್ಲಿ ತನ್ನಿಂದಾದಷ್ಟು ಸಹಾಯಮಾಡುವುದಾಗಿ ಮಾತ್ರವೇ ಹೇಳಿದುದರಿಂದ, ವಿಭೀಷಣನಿಗೆ ಆತನ ಪರಿಚರಣಮಾತ್ರವೇ ಮುಖ್ಯೋದ್ದೇಶವಾಗಿತ್ತೆಂದು ವ್ಯಕ್ತವಾಗುವುದು. ಹೀಗೆ

ವಿಭೀಷಣನಿಗೆ ರಾಜ್ಯಾಭಿಲಾಷೆಯಿಲ್ಲದಿದ್ದರೂ ರಾಮನ ಬಲಾತ್ಕಾರಕ್ಕಾಗಿ ಅವನು ರಾಜ್ಯವನ್ನು ಸ್ವೀಕರಿಸಬೇಕಾಯಿತೆಂಬುದು, ಉತ್ತರಕಾಂಡದಲ್ಲಿ ಸ್ಪಷ್ಟವಾಗಿ ಹೇಳಲ್ಪಡುವುದು. ಹೀಗೆ ವಿಭೀಷಣನು ಅನನ್ಯ ಪ್ರಯೋಜನನೆಂಬುದನ್ನು ತಿಳಿದೇ ಅವನಿಗೆ ರಾಮನು ತನಗೆ ಕುಲಧನವಾದ ಶ್ರೀರಂಗನಾಥನನ್ನು ಮಾತ್ರ ಕೊಟ್ಟು ಕಳುಹಿಸಿದನು. ಮತ್ತು ರಾಮನು ಧರ್ಮಸಂಸ್ಥಾಪನಾರ್ಥವಾಗಿಯೇ ಅವತರಿಸಿದವನಾದುದರಿಂದ, ಲಂಕೆಯಲ್ಲಿ ಹತಶೇಷವಾದ ರಾಕ್ಷಸ ಜಾತಿಯನ್ನು ಸನ್ಮಾರ್ಗದಲ್ಲಿರಿಸುವುದಕ್ಕಾಗಿಯೇ ವಿಭೀಷಣನನ್ನು ನಿರ್ಬಂಧಿಸಿ ಅಲ್ಲಿನ ರಾಜ್ಯಾಧಿಕಾರಕ್ಕೂ ನಿಲ್ಲಿಸಿದನು. ವಿಭೀಷಣನು ರಾಜ್ಯವನ್ನಂಗೀಕರಿಸಿದುದೂ ಕೂಡ ರಾಮಾಜ್ಞೆಯನ್ನನುಸರಿಸಿ ಬಂದುದರಿಂದ. ಅದೂ ರಾಮಕೈಂಕರ್ಯದಲ್ಲಿಯೇ ಸೇರಿತೆಂದು ವಿಭೀಷಣನ ತಾತ್ಪರ್ಯವು. ಹೀಗೆಯೇ ಹಿಂದೆ ಧರ್ಮತತ್ತ್ವವನ್ನೂ ತಿಳಿದ ಲಕ್ಷ್ಮಣನೂ ಕೂಡ, ಸಾಮಾನ್ಯ ಧರ್ಮಕ್ಕಿಂತಲೂ ವಿಶೇಷಧರ್ಮವೇ ಪ್ರಬಲವೆಂದೆಣಿಸಿ "ಅಹಂ ತಾವನ್ಮಹಾರಾಜೇ ಪಿತೃತ್ವಂ ನೋಪಲಕ್ಷಯೇ। ಭ್ರಾತಾ ಭರ್ತಾಚ ಬಂಧುಶ್ಚ ಪಿತಾ ಚ ಮಮ ರಾಘವ" ಎಂಬುದಾಗಿ ಸೋಪಾಧಿಕ ಪಿತೃವಾದ ದಶರಥನನ್ನು ತ್ಯಜಿಸಿ, ನಿರುಪಾಧಿಕ ಸರ್ವವಿಧ ಬಂಧುವಾದ ರಾಮನನ್ನೇ ತಂದೆಯಂತೆ ಕೈಕೊಂಡಿರುವನು. ಮತ್ತು "ಅಹಂ ಸರ್ವಂ ಕರಿಷ್ಯಾಮಿ" ಎಂದು ರಾಮಕೈಂಕರ್ಯವನ್ನೇ ಫಲವಾಗಿ ಪ್ರಾರ್ಥಿಸಿರುವನು. ಮತ್ತು 'ಸ ಭ್ರಾತುಶ್ಚರಣೌ ಗಾಢಂ ನಿಪೀಡ್ಯ' ಎಂಬಂತೆ, ರಾಮನನ್ನೇ ಮರೆಹೊಕ್ಕಿರುವನು. ಹಾಗೆಯೇ ಇಲ್ಲಿ ವಿಭೀಷಣನು ಕೂಡ, ಸೋಪಾಧಿಕಬಂಧುವಾದ ತನ್ನಣ್ಣನನ್ನು ತ್ಯಜಿಸಿ, ಸರ್ವವಿಧಬಂಧುವಾದ ರಾಮನನ್ನೇ ಶರಣುಹೊಕ್ಕನು. ಹೀಗೆ ಭಗವತ್ಪ್ರಾಪ್ತಿಯನ್ನಪೇಕ್ಷಿಸಿ ಬಂದವರೆಲ್ಲರೂ ಕೈಂಕರ್ಯ ಲಕ್ಷ್ಮೀಸಂಪನ್ನರೆಂಬುದನ್ನು ತಿಳಿಸುವುದಕ್ಕಾಗಿಯೇ ಅಲ್ಲಲ್ಲಿ "ಸ ತು ನಾಗವರಃ ಶ್ರೀಮಾನ್" ಎಂದು ಗಜೇಂದ್ರನಿಗೂ, "ಲಕ್ಷ್ಮಣೋ ಲಕ್ಷ್ಮಿಸಂಪನ್ನಃ" ಎಂದು ಲಕ್ಷ್ಮಣನಿಗೂ, ಶ್ರೀಮತ್ತ್ವವಿಶೇಷಣವು ಉಪಯೋಗಿಸಲ್ಪಟ್ಟಿರುವಂತೆ" ಈ ವಿಭೀಷಣನಿಗೂ ಕೂಡ, ಆತನು ರಾಮಪ್ರಾಪ್ತಿಗಾಗಿ ರಾವಣನನ್ನು ಬಿಟ್ಟುಹೊರಟಾಗ "ಅಂತರಿಕ್ಷಗತಃ ಶ್ರೀಮಾನ್" ಎಂಬುದಾಗಿ ಶ್ರೀಮತ್ತ್ವ ವಿಶೇಷಣವೇ ಹೇಳಲ್ಪಟ್ಟಿರುವುದು. ಆದುದರಿಂದ ವಿಭೀಷಣನಲ್ಲಿ ಅಧರ್ಮಶಂಕೆಗೆ ಸ್ವಲ್ಪಮಾತ್ರವೂ ಅವಕಾಶವಿಲ್ಲ. ಆದರೆ ರಾಮಲಕ್ಷ್ಮಣರಿಬ್ಬರೂ ನಾಗಪಾಶದಲ್ಲಿ ಸಿಕ್ಕಿ ಮೂರ್ಛಿತರಾಗಿದ್ದಾಗ, ಅವರನ್ನು ಕುರಿತು ವಿಭೀಷಣನು. "ಯಯೋರ್ವೀರ್ಯಮುಪಾಶ್ರಿತ್ಯ ಪ್ರತಿಷ್ಠಾ ಕಾಂಕ್ಷಿತಾ ಮಯಾ। ತಾವುಭೌ ಮಮ ನಾಶಾಯ ಪ್ರಸುಪ್ತೌ ಪುರುಷರ್ಷಭೌ। ಜೀವನ್ನಪಿ ವಿನಷ್ಟೋಽಸ್ಮಿ ನಷ್ಟರಾಜ್ಯಮನೋರಥಃ" ಇತ್ಯಾದಿವಾಕ್ಯಗಳಿಂದ ತನ್ನ ಪ್ರತಿಷ್ಠೆಗೂ, ತನ್ನ ರಾಜ್ಯಕ್ಕೂ ಭಂಗವುಂಟಾಯಿತೆಂದು ನಿರ್ವೇದಪಡುವುದೇಕೆ?" ಎಂದರೆ, ಇಲ್ಲಿಯೂ ಪ್ರತಿಷ್ಠಾ ಶಬ್ದಕ್ಕೆ ರಾಮಕೈಂಕರ್ಯಪರವಾಗಿಯೂ, ರಾಜ್ಯಶಬ್ದಕ್ಕೆ ಕೈಂಕರ್ಯಸಾಮ್ರಾಜ್ಯಪರವಾಗಿಯೂ, ಅರ್ಥವನ್ನು ಗ್ರಹಿಸಬೇಕೇಹೊರತು ರಾಜ್ಯಪ್ರತಿಷ್ಠಾದಿಗಳಲ್ಲವು. ಆದುದರಿಂದ ವಿಭೀಷಣನು

ಇಷ್ಟರಲ್ಲಿ ಇತ್ತಲಾಗಿ ಸಮುದ್ರತೀರದಲ್ಲಿದ್ದ ವಾನರೋತ್ತಮರು [1]ಮೇರುಶಿಖರದಂತೆ ಮಹೋನ್ನತವಾದ ಆಕಾರವುಳ್ಳವನಾಗಿ, ಉರಿಯುವ ಮಿಂಚಿನಂತೆ ಕಾಂತಿಯುಳ್ಳವನಾಗಿ, ಆಕಾಶದಲ್ಲಿ ವೇಗದಿಂದ ಬರುತ್ತಿದ್ದ ಆ ರಾಕ್ಷಸನನ್ನು ಕಂಡರು. (ಆ ವಿಭೀಷಣನಾದರೋ ಮೇಘದಂತೆಯೂ, ಪರ್ವತದಂತೆಯೂ ಮಹೋನ್ನತವಾದ ದೇಹವುಳ್ಳವನು. ಇಂದ್ರನಿಗೆಣೆಯಾದ ಪರಾಕ್ರಮವುಳ್ಳವನು. ಸರ್ವಾಯುಧಗಳನ್ನೂ ಧರಿಸಿದವನು. ಮಹಾವೀರನು. ದಿವ್ಯಾಭರಣಭೂಷಿತನು. ಅವನೊಡನೆ ಬರುತಿದ್ದ ನಾಲ್ವರು ರಾಕ್ಷಸರೂಕೂಡ ಭಯಂಕರ ಪರಾಕ್ರಮವುಳ್ಳವರಾಗಿಯೂ ಸಮಸ್ತಾಯುಧಗಳನ್ನು ಧರಿಸಿದವರಾಗಿಯೂ, ಭೂಷಣಗಳಿಂದಲಂಕೃತರಾಗಿಯೂ ಬರುತ್ತಿದ್ದರು. [2]ಹೀಗೆ ನಾಲ್ವರು ರಾಕ್ಷಸಗೊಡನೆ ತಾನು ಐದನೆಯವನಾಗಿ ಬರುತ್ತಿದ್ದ ಆ ರಾಕ್ಷಸನನ್ನು

ತನ್ನಣ್ಣನನ್ನು ಬಿಟ್ಟು ಬಂದು ರಾಮನನ್ನಾಶ್ರಯಿಸಿದುದು ದೋಷಾಸ್ಪದವಲ್ಲವೆಂದೇ ಸಿದ್ಧಾಂತವು. (ಶನಿಶ್ಲೋಕ)

1. ಇಲ್ಲಿ "ತಂ ಮೇರುಶಿಖರಾಕಾರಂ ದೀಪ್ತಾಮಿವ ಶತಹ್ರದಾಂ | ಗಗನಸ್ಥಂ ಮಹೀಸ್ಥಾಸ್ತೇ ದದೃಶುರ್ವಾನರೋತ್ತಮಾಃ" ಎಂದು ಮೂಲವು. ವಿಭೀಷಣನಿಗಿದ್ದ ಮಹೋನ್ನತವಾದ ಆಕಾರದಿಂದಲೂ, ಸ್ವರ್ಣಾಭರಣಗಳ ಕಾಂತಿಯಿಂದಲೂ ಮೇರುಶಿಖರದ ಹೋಲಿಕೆಯು ಮತ್ತು ಈ ಉಪಮಾಸ್ವಾರಸ್ಯದಿಂದ, ವಿಭೀಷಣನು ರಾವಣನ ಕಡೆಯನ್ನು ಬಿಟ್ಟು ರಾಮನಕಡೆಗೆ ಬಂದುದು, ರಾವಣನಿಗೊಂದು ಕೊಂಬು (ಅತಿಶಯವು) ಮುರಿದು, ರಾಮನಿಗೊಂದು ಕೊಂಬು (ಅತಿಶಯವು) ಬೆಳೆದಂತಾಯಿತೆಂದು ಸೂಚಿತವಾಗುವುದು. (ಗಗನಸ್ಥಂ) ಎಂಬುದರಿಂದ ಈತನು ಲಂಕೆಯಿಂದ ಕಾಲೆತ್ತಿ ಆಕಾಶಕ್ಕೆ ಹಾರಿದಾಗಲೇ ಇಲ್ಲಿದ್ದ ವಾನರರ ದೃಷ್ಟಿಗೆ ಬಿದ್ದುದಾಗಿಯೂ, (ಮಹೀಸ್ಥಾಸ್ತೇ ದದೃಶುಃ) ಭೂಮಿಯಲ್ಲಿದ್ದ ಆ ವಾನರರು ಕಂಡರೆಂಬುದರಿಂದ, ಅವರು ಭೂಮಿಯ ಕಾವಲಿಗಾಗಿ ಮಾತ್ರ ನಿಯಮಿಸಲ್ಪಟ್ಟವರಾಗಿದ್ದರೂ, ಆಗಲೇ ಆಕಾಶಕ್ಕೆ ಹಾರಿದವನನ್ನು ಕೂಡ ಕಂಡುಹಿಡಿದರೆಂದು ಸ್ವಾಮಿಕಾರ್ಯದಲ್ಲಿ ಆ ವಾನರರಿಗಿರತಕ್ಕ ಅತ್ಯಂತ ಜಾಗರೂಕತೆಯು ಸೂಚಿತವಾಗುವುದು. (ವಾನರಾಧಿಪಾಃ) ಸ್ವಾಮಿಕಾರ್ಯದಲ್ಲಿ ಇವರಿಗಿದ್ದ ಎಚ್ಚರಿಕೆಯನ್ನೂ, ಅತ್ಯಂತಾಸಕ್ತಿಯನ್ನೂ ನೋಡಿ ಋಷಿಯು ಅವರನ್ನು ಪ್ರಶಂಸಿಸಿ ಗೌರವಿಸುವುದಕ್ಕಾಗಿಯೇ ವಾನರಾಧಿಪರೆಂಬ ವಿಶೇಷಣವನ್ನುಪಯೋಗಿಸಿದುದಾಗಿ ಭಾವವು. ಮುಖ್ಯವಾಗಿ ಇದರಿಂದ ವಿಭೀಷಣನಿಗೆ, ಪ್ರತಿಕೂಲಸಮೂಹದಿಂದ ತಪ್ಪಿಸಿಕೊಂಡುಬಂದ ಲಾಭವು ಮಾತ್ರವೇ ಅಲ್ಲದೆ, ಅನುಕೂಲರ ಕಟಾಕ್ಷಕ್ಕೂ ಅವನು ಗೋಚರನಾದನೆಂದು ಸೂಚಿತವಾಗುವುದು.

2. ಇಲ್ಲಿ "ಆತ್ಮಪಂಚಮನು" ನೆಂದರೆ, ಅನಲ, ಶರಭ, ಸಂಪಾತಿ, ಪ್ರಘಸರೆಂಬ ನಾಲ್ವರು ಮಂತ್ರಿಗಳೊಡನೆ ತಾನು ಐದನೆಯವನಾಗಿ ಬರುತ್ತಿದ್ದನೆಂಪರ್ಥವು.

ಇತ್ತಲಾಗಿ ಶತ್ರುದುರ್ಜಯನಾಗಿಯೂ, ವಾನರೇಂದ್ರನಾಗಿಯೂ ಇರುವ ಸುಗ್ರೀವನು ಕಂಡನು. ಆ ಸುಗ್ರೀವನು ಬಹಳ ಬುದ್ಧಿಶಾಲಿಯಾದುದರಿಂದ ಆ ರಾಕ್ಷಸ ನನ್ನು ಕಂಡೊಡನೆ ತನ್ನ ಕಡೆಯ ವಾನರರೊಡನೆ ಮುಹೂರ್ತಕಾಲದವರೆಗೆ ಆಲೋಚಿ ಸುತಿದ್ದು ಕೊನೆಗೆ ಹನುಮಂತನೇ ಮೊದಲಾದ ಸಮಸ್ತವಾನರನ್ನೂ ನೋಡಿ ಯುಕ್ತಿ ಯುಕ್ತವಾದ ಮಾತಿನಿಂದ [1]ಎಲೆ ವಾನರರೆ! ಅದೋ ನೋಡಿರಿ! ಆ ರಾಕ್ಷಸನು ಸಮಸ್ತಾಯುಧಗಳನ್ನೂ ಧರಿಸಿದವನಾಗಿ, ಬೇರೆ ನಾಲ್ಕು ಮಂದಿ ರಾಕ್ಷಸರೊಡನೆ ನಮ್ಮ ಕಡೆಗೆ ಬರುತ್ತಿರುವನು. ನಮ್ಮನ್ನು ಕೊಲ್ಲುವುದಕ್ಕಾಗಿಯೇ ಬರುವಂತಿದೆ.

---

1. ಇಲ್ಲಿ "ಏಷ ಸರ್ವಾಯುಧೋಪೇತಶ್ಚತುರ್ಭಿಸ್ಸಹ ರಾಕ್ಷಸೈಃ । ರಾಕ್ಷಸೋಭ್ಯೇತಿ ಪಶ್ಯಧ್ವಮಸ್ಮಾನ್ ಹಂತುಂ ನ ಸಂಶಯಃ" ಎಂದು ಮೂಲವು. ವಿಶೇಷಾರ್ಥವು:—(ಏಷಃ) ಇದೋ! ಇವನ ಆಕಾರದಲ್ಲಿಯೇ ಬೇರೆಯವರನ್ನು ಹಿಂಸಿಸುವುದಕ್ಕೆ ಬೇಕಾದ ಮಹಾ ಕ್ರೌರ್ಯವು ಕಾಣುವುದು. ಇದರಮೇಲೆ (ಸರ್ವಾಯುಧೋಪೇತಃ) ಆ ವಿಧವಾದ ಸಹಜ ಕ್ರೌರ್ಯಕ್ಕೆ ಅನುಕೂಲಗಳಾದ ಹಿಂಸಾಪರಿಕರಗಳೆಲ್ಲವೂ ಇವನಲ್ಲಿ ತುಂಬಿರುವುವು. (ಹಿಂದೆ "ಉತ್ಪಪಾತ ಗದಾಪಾಣಿಃ" ಎಂಬುದಾಗಿ ಒಂದು ಗದೆಯನ್ನು ಮಾತ್ರವೇ ಹಿಡಿದು ಮೇಲೆ ಹಾರಿದುದಾಗಿ ಹೇಳಿರುವಾಗ ಇಲ್ಲಿ ಸರ್ವಾಯುಧೋಪೇತತ್ವವು ಹೇಗೆ ಎಂದರೆ, ಸುಗ್ರೀವನಿಗೆ ರಾಮನಲ್ಲಿರುವ ಪ್ರೇಮಾಂಧತ್ವದಿಂದ, ಅನುಕೂಲನಾಗಿ ಬಂದ ವಿಭೀಷಣನಲ್ಲಿಯೂ ಪ್ರತಿ ಕೂಲಭಾವವು ತೋರಿದಂತೆ, ಅವನು ಹಿಡಿದಿದ್ದ ಒಂದಾಯುಧವೇ ಅನೇಕಾಯುಧ ಗಳಂತೆಯೂ ತೋರಿತೆಂದು, ಗ್ರಹಿಸಬಹುದು. ಅಥವಾ ಅವನು ಆ ಒಂದಾಯುಧವನ್ನು ಕೈಯಲ್ಲಿ ಹಿಡಿದಿದ್ದ ಚಾತುರ್ಯವನ್ನು ನೋಡಿದರೆ, ಅವನಿಗೆ ಸಮಸ್ತಾಯುಧಗಳಲ್ಲಿಯೂ ಪರಿಶ್ರಮವಿದ್ದಂತೆ ತೋರುತಿತ್ತೆಂದೂ ಎಣಿಸಬಹುದು. ಅಥವಾ ಸ್ವಾಮಿಯಾದ ರಾಮ ನನ್ನು ಪೀಡಿಸಿ ವಶೀಕರಿಸುವುದಕ್ಕೆ ತಕ್ಕ ಬ್ರಹ್ಮಾಸ್ತ್ರದಂತಿರುವ ಶರಣಾಗತಿಯು ಅವನ ಕೈಯಲ್ಲಿರುವುದೆಂಬ ಭಾವದಿಂದ ಹಾಗೆ ಹೇಳಿರಬಹುದು. ಅಥವಾ ಗದೆಯೊಂದೇ ಸರ್ವಾ ಯುಧಗಳಿಗೂ ಉಪಲಕ್ಷಕವೆಂದು ಕೆಲವರ ಅಭಿಪ್ರಾಯವು.) ಚತುರ್ಭಿಸ್ಸಹ ರಾಕ್ಷಸೈಃ ನಾಲ್ಕೇಮಂದಿ ರಾಕ್ಷಸರೊಡನೆ, "ಆಹಾ! ಆತನ ತಂತ್ರವನ್ನು ನೋಡಿದಿರಾ! ದೊಡ್ಡ ಸೇನೆಯೊಡನೆ ಬಂದರೆ ಇದಿರಾಗಿ ನಿಂತು ಯುದ್ಧಮಾಡಿ ಜಯಿಸಬೇಕಾಗುವುದು. ಒಂಟಿ ಯಾಗಿ ಬಂದರೆ ತಪ್ಪಿಸಿಕೊಂಡು ಹೋಗುವುದು ಕಷ್ಟವು. ಆದುದರಿಂದಲೇ ಮಿತವಾದ ಸೈನ್ಯದೊಡನೆ ಬಂದಿರುವ" ನೆಂದು ಹೇಳಿದುದಾಗಿ ಭಾವವು. (ಅಸ್ಮಾನ್ ಹಂತುಮಭ್ಯೇತಿ) ನಮ್ಮೆಲ್ಲರನ್ನೂ ಕೊಲ್ಲುವುದಕ್ಕಾಗಿಯೇ ಬರುತ್ತಿರುವನು. ನಮ್ಮಲ್ಲಿ ಯಾರನ್ನಾದರೂ ಕೆಲವರನ್ನು ಕೊಂದರೂ, ಉಳಿದವರು ಬದುಕಿಕೊಳ್ಳಬಹುದು. ನಮ್ಮೆಲ್ಲರಿಗೂ ಮೂಲ ಭೂತವಾದ ರಾಮನನ್ನೇ ಕೊಲ್ಲಬೇಕೆಂದು ಬಂದವನಾದುದರಿಂದ, ಇವನ ಆಗಮನವು ರಾಮವಧದಿಂದ ಏಕಕಾಲದಲ್ಲಿ ಸರ್ವನಾಶಕ್ಕೆ ಹೇತುವಾಗಬಹುದೆಂದು ಭಾವವು.

ಇದರಲ್ಲಿ ಸಂದೇಹವಿಲ್ಲ ! ಎಂದನು. [1]ಸುಗ್ರೀವನು ಹೇಳಿದ ಈ ಮಾತನ್ನು ಕೇಳಿದ ಕ್ಷಣವೇ, ಅಲ್ಲಿದ್ದ ಸಮಸ್ತ ವಾನರರೂ ಥಟ್ಟನೆ ಮೇಲೆದ್ದು ಅಲ್ಲಲ್ಲಿ ಕೈಗೆ ಸಿಕ್ಕಿದ ಮರ ಗಿಡಗಳನ್ನೂ ಬೆಟ್ಟಗುಡ್ಡಗಳನ್ನೂ ಕಿತ್ತುಕೊಂಡು, ತಮ್ಮ ಪ್ರಭುವಾದ ಸುಗ್ರೀವನನ್ನು ಕುರಿತು "ಮಹಾರಾಜನೇ ! ಯಾರು ಬಂದರೂ ಬರಲಿ ! ನೀನುಮಾತ್ರ ನಮಗೆ ಶೀಘ್ರದಲ್ಲಿ ಆಜ್ಞೆಯನ್ನು ಕೊಡು ! ನೀನು ರಾಜನಾದುದರಿಂದ ನಿನ್ನಾಜ್ಞೆಯಿಲ್ಲದೆ ನಾವು ಯಾವ ಕಾರ್ಯಕ್ಕೂ ಸ್ವತಂತ್ರಿಸಲಾರೆವು ! ಅತ್ಯಲ್ಪ ವೀರ್ಯವುಳ್ಳ ಈ ರಾಕ್ಷಸರನ್ನು ಕೊಲ್ಲುವುದೇನೂ ನಮಗೆ ಅಸಾಧ್ಯವಲ್ಲ ! ಈಗಲೇ ಅವರು ನಮ್ಮಿಂದ ಹತರಾಗಿ ಭೂಮಿಗೆ ಬಿದ್ದು ಸಾಯಲಿ !" ಎಂದರು. ಹೀಗೆ ವಾನರರು ಪರಸ್ಪರ ಸಂಭಾಷಣ ವನ್ನು ಮಾಡುತ್ತಿರುವಾಗಲೂ, ವಿಭೀಷಣನು ಯಾರೇನು ಹೇಳಿದರೂ ರಾಮನು ತನ್ನನ್ನು ಕೈಬಿಡಲಾರನೆಂಬ ನಂಬಿಕೆಯಿಂದ ಭಯವಿಲ್ಲದೆ ಮುಂದೆ ಬಂದು ಸಮುದ್ರದ ಉತ್ತರತೀರವನ್ನು ಸೇರಿ ಅಂತರಿಕ್ಷದಲ್ಲಿಯೇ ನಿಂತಿದ್ದನು. [2]ವಿಭೀಷಣನು

---

1. ಇಲ್ಲಿ "ಸುಗ್ರೀವಸ್ಯ ವಚಶ್ಶ್ರುತ್ವಾ ಸರ್ವೇ ತೇ ವಾನರೋತ್ತಮಾಃ | ಸಾಲಾನುದ್ಯಮ್ಯ ಶೈಲಾಂಶ್ಚ ಇದಂ ವಚನಮಬ್ರುವನ್" ಎಂದು ಮೂಲವು. ವಿಶೇಷಾರ್ಥವು— (ಸುಗ್ರೀವಸ್ಯ ವಚಶ್ಶ್ರುತ್ವಾ) ಸುಗ್ರೀವನ ಮಾತನ್ನು ಕೇಳಿ, (ಸರ್ವೇ ತೇ) ಅವರೆಲ್ಲರೂ, ಎಂದರೆ ಪ್ರಧಾನಾಪ್ರಧಾನರೆಂಬ ತಾರತಮ್ಯವನ್ನೆಣಿಸದೆ ಅಲ್ಲಿದ್ದವರೆಲ್ಲರೂ ಒಂದೇ ವಿಧವಾದ ಉತ್ಸಾಹವುಳ್ಳವರಾಗಿ ನಿಂತರೆಂದು ಭಾವವು (ವಾನರೋತ್ತಮಾಃ) ರಾಮಭಕ್ತಿ ವಿಷಯದಲ್ಲಿ ಸುಗ್ರೀವನಿಗಿಂತಲೂ ಅತಿಶಯಿಸಿದವರು :—ಉತ್ಕರ್ಷಕ್ಕೆ ಶೇಷಿತ್ವವೂ, ಅಪಕರ್ಷಕ್ಕೆ ಶೇಷತ್ವವೂ ಹೇತುವಲ್ಲ. ರಾಮಭಕ್ತಿಯೇ ಉತ್ಕರ್ಷಕ್ಕೆ ಸಾಕ್ಷಾತ್ತಾಗಿ ಹೇತು ವಾದುದರಿಂದ ಇಲ್ಲಿ ವಾನರೋತ್ತಮರೆಂಬ ವಿಶೇಷಣವು. (ಸಾಲಾನುದ್ಯಮ್ಯ ಶೈಲಾಂಶ್ಚ) ಮರಗಳೆಂದೂ, ಬೆಟ್ಟಗಳೆಂದೂ ನೋಡದೆ ಕೈಗೆ ಸಿಕ್ಕಿದುದನ್ನೆಲ್ಲಾ ಎತ್ತಿಕೊಂಡು, ಇದರಿಂದ ತನ್ನ ಸ್ವಾಮಿಗೆ ವಿರೋಧಿಯಾದವನನ್ನು ಕೊಲ್ಲುವ ವಿಷಯದಲ್ಲಿ ಅವರಿಗಿದ್ದ ಅತ್ಯಾದರವು ಸೂಚಿತವಾಗುವುದು. ರಾಮಕೈಂಕರ್ಯಕ್ಕಾಗಿ ಲಕ್ಷ್ಮಣನು ಒಂದೇಸಲಕ್ಕೆ ಛತ್ರಚಾಮರಗಳೆರಡನ್ನೂ ತನ್ನ ಎರಡು ಕೈಗಳಿಂದಲೂ ಹಿಡಿದಂತೆ, ಇವರೂ ಆ ರಾಕ್ಷಸ ನನ್ನು ಕೊಲ್ಲುವುದೇ ರಾಮಕೈಂಕರ್ಯವೆಂಬುದು ತಿಳಿದು, ತದನುಕೂಲಗಳಾದ ಪರಿಕರಗಳನ್ನು ಎರಡು ಕೈಗಳಿಂದಲೂ ಧರಿಸಿ ನಿಂತರೆಂದು ಭಾವವು.

2. ಇಲ್ಲಿ "ಉವಾಚ ಚ ಮಹಾಪ್ರಾಜ್ಞಃ ಸ್ವರೇಣ ಮಹತಾ ಮಹಾನ್ | ಸುಗ್ರೀವಂ ತಾಂಶ್ಚ ಸಂಪ್ರೇಕ್ಷ್ಯ ಖಸ್ಥ ಏವ ವಿಭೀಷಣಃ" ಎಂದು ಮೂಲವು. ವಿಶೇಷಾರ್ಥವು :— ವಿಭೀಷಣನು ತನ್ನನ್ನು ನಿಗ್ರಹಿಸುವುದಕ್ಕಾಗಿ ಉದ್ಯೋಗಿಸಿರುವ ಸುಗ್ರೀವನನ್ನೂ ಅವನ ಪರಿಕರವನ್ನೂ ನೋಡಿ, ತನ್ನ ಆರ್ತಿಯೆಲ್ಲವೂ ತೋರುವಂತೆ ದೊಡ್ಡ ಕಂಠಧ್ವನಿಯಿಂದ

ಕಾಲೋಚಿತವಾದ ಉಪಾಯಗಳನ್ನು ಚೆನ್ನಾಗಿ ತಿಳಿದ ಮಹಾಪ್ರಾಜ್ಞನಾದುದರಿಂದ ತಾನು ಆಕಾಶದಲ್ಲಿದ್ದಂತೆಯೇ ಕೆಳಗಿದ್ದ ಸುಗ್ರೀವನನ್ನೂ, ಇತರ ವಾನರರನ್ನೂ

ಈ ಮಾತನ್ನು ಹೇಳುವನು. (ಉವಾಚ ಚ) ಹೇಳಿಯೂ ಹೇಳಿದನೆಂಬುದರಿಂದ, ರಾಮನು ತನ್ನನ್ನು ಸ್ವೀಕರಿಸುವುದಕ್ಕೆ ತನ್ನ ಆಗಮನವೇ ಸಾಕಾಗಿದ್ದರೂ ಬಾಯಿಂದಲೂ ಹೇಳ ತೊಡಗಿದನೆಂದು ಭಾವವು. "ಪದ್ಭ್ಯಾಮಭಿಗಮಾಚ್ಚ" ಹಿಂದೆ ಗುಹನು ತನ್ನಲ್ಲಿಗೆ ನಡೆದು ಬಂದುದೇ ತನಗೊಂದು ಭಾರವಾಗಿ ಎಣಿಸಿದ ರಾಮನಿಗೆ, ಶರಣಾಗತರಾಗಿ ಬಂದವರು ಬಾಯಿಬಿಟ್ಟು ಪ್ರಾರ್ಥಿಸಿದರೆ, ಉರಿಯುವ ಹುಣ್ಣಿಗೆ ಉಪ್ಪೆರೆದಂತಲ್ಲವೆ? (ಮಹಾಪ್ರಾಜ್ಞ) ಪ್ರಾಜ್ಞನೆಂದರೆ ಹೇಯೋಪಾದೇಯಗಳನ್ನು ತಿಳಿದವನು. ಮಹಾಪ್ರಾಜ್ಞನೆಂದರೆ ಅವುಗಳನ್ನು ತಿಳಿಯುವುದು ಮಾತ್ರವಲ್ಲದೆ, ಹೇಯವನ್ನು ಬಿಟ್ಟು ಉಪಾದೇಯವನ್ನು ಪಡೆಯತಕ್ಕ ಮಾರ್ಗವನ್ನೂ ತಿಳಿದವನೆಂದು ಭಾವವು. ಇಲ್ಲಿ ವಿಭೀಷಣನು ರಾವಣನ ದುಸ್ಸ್ವಭಾವ ವನ್ನೂ, ರಾಮನ ಮೇಲ್ಮೆಯನ್ನೂ ತಿಳಿದು, ರಾವಣನನ್ನು ಬಿಟ್ಟು ರಾಮನನ್ನು ಮರೆಹೊಗ ಬೇಕೆಂಬ ನಿಶ್ಚಯಜ್ಞಾನವುಳ್ಳವನೆಂದರ್ಥವು. (ಸ್ವರೇಣ ಮಹತಾ) ಕೇಳಿದವರಿಗೆಲ್ಲಾ ಮನಸ್ಸು ಕರಗುವಂತೆ ದೊಡ್ಡ ಆರ್ತಸ್ವರದಿಂದ, (ಸುಗ್ರೀವಂ ತಾಂಶ್ಚ ಸಂಪ್ರೇಕ್ಷ್ಯ) ತನ್ನನ್ನು ಕೊಲ್ಲು ವುದಕ್ಕಾಗಿ, ನಿಂತಿರುವ ಸುಗ್ರೀವನನ್ನೂ, ಅವನ ಕಡೆಯ ವಾನರರನ್ನೂ ನೋಡಿ, ಎಂದರೆ, ತನಗೆ ಪುರುಷಕಾರವಾಗಬೇಕಾದುದರಿಂದ ಆ ರಾಮಭಕ್ತರೇ ತನಗೆ ಮುಖ್ಯೋದ್ದೇಶ್ಯ ರೆಂದೆಣಿಸಿದುದಾಗಿ ಭಾವವು. ಭಕ್ತರಾದವರು ಯಾವ ತಪ್ಪನ್ನು ಮಾಡಿದರೂ "ಜ್ಞಾನೀ ತ್ವಾತ್ಮೈವ ಮೇ ಮತಂ" ಎಂಬುದಾಗಿ ಅವರೇ ತನಗೆ ಆತ್ಮನಂತೆ ಧಾರಕರೆಂದು ಭಗವಂತನೇ ಹೇಳಿಕೊಂಡಿರುವುದರಿಂದ, ಆ ಭಗವದಾಜ್ಞೆಯನ್ನು ಮೀರಿ ಹೋಗುವುದಕ್ಕಿಲ್ಲದೆ ಭಗವಂತನ ಬಹುಮಾನಕ್ಕೆ ಪಾತ್ರರಾದ ಆ ಭಕ್ತರನ್ನೇ ಗೌರವದೃಷ್ಟಿಯಿಂದ ನೋಡಿದುದಾಗಿ ಭಾವವು. ಅಥವಾ ಮಹಾಪ್ರಾಜ್ಞನೆಂಬುದಕ್ಕೆ ರಾಜನು ಎಷ್ಟೇ ಕೃಪಾಳುವಾಗಿದ್ದರೂ ಅವನಿಗೆ ಅಂತರಂಗಭೂತರಾದವರ ಪುರುಷಕಾರದಿಂದಲೇ ಅವನಲ್ಲಿ ಶರಣುಹೊಗಬೇಕೆಂಬ ಪರಿಜ್ಞಾನ ವನ್ನೂ, ವಾನರರು ಹೀಗೆ ತನ್ನಲ್ಲಿ ಪ್ರತಿಕೂಲತೆಯನ್ನು ತೋರಿಸುವುದೂ ರಾಮನಲ್ಲಿ ರುವ ಭಕ್ತ್ಯತಿಶಯದಿಂದಲೇ ಹೊರತು ತನ್ನಲ್ಲಿ ದ್ವೇಷಬುದ್ಧಿಯಿಂದಲ್ಲವೆಂಬ ಪರಿಜ್ಞಾನ ವನ್ನೂ, ರಾಮನ ಅಂಗೀಕಾರಕ್ಕಿಂತಲೂ ರಾಮಭಕ್ತರ ಅಂಗೀಕಾರವೇ ತನಗೆ ಪರಮ ಪುರುಷಾರ್ಥವೆಂಬ ಪರಿಜ್ಞಾನವನ್ನೂ ಹೊಂದಿದವನೆಂದು ಭಾವವು. ಮತ್ತು, "ಅಕಿಂಚ- ನ್ಯೈಕಶರಣಾಃ ಕೇಚಿದ್ಭಾಗ್ಯಾಧಿಕಾಃ ಪುನಃ । ಮಾಮೇವ ಶರಣಂ ಪ್ರಾಪ್ಯ ಮಾಮೇ ವಾಂತೇ ಸಮಶ್ನುತೇ" ಎಂದು ಲಕ್ಷ್ಮೀತಂತ್ರದಲ್ಲಿ ಹೇಳಿರುವಂತೆ, ರಾಮನನ್ನು ಕುರಿತು ಇಂತಹ ಆರ್ತಸ್ವರವನ್ನುಚ್ಚರಿಸುವ ಮಹಾಭಾಗ್ಯಕ್ಕೆ ಪಾತ್ರನಾದವನು ಈ ಮಹಾತ್ಮ ನೊಬ್ಬನೇ ಎಂಬುದಕ್ಕಾಗಿ (ಮಹಾನ್) ಎಂಬ ಶಬ್ದವು.

ನೋಡಿ ಗಂಭೀರವಾದ ಉಚ್ಚಸ್ವರದೊಡನೆ ಹೇಳುವನು. [1]"ಎಲೈ ವಾನರೋತ್ತಮರೆ! ನಮ್ಮ ರಾಕ್ಷಸಕುಲಕ್ಕೆ ಪ್ರಭುವಾದ ರಾವಣನೆಂಬ ರಾಕ್ಷಸನೊಬ್ಬನುಂಟು! ಅವನು

---

1. ಇಲ್ಲಿ "ರಾವಣೋ ನಾಮ ದುರ್ವೃತ್ತೋ ರಾಕ್ಷಸೋ ರಾಕ್ಷಸೇಶ್ವರಃ । ತಸ್ಯಾಹ ಮನುಜೋ ಭ್ರಾತಾ ವಿಭೀಷಣ ಇತಿ ಶ್ರುತಃ" ಎಂದು ಮೂಲವು. ವಿಶೇಷಾರ್ಥವು:— ಇದು ಮೊದಲು ಐದು ಶ್ಲೋಕಗಳಿಂದ, ವಿಭೀಷಣನು ಶರಣಾಗತಿಗೆ ಅಂಗವಾದ ಸ್ವನಿಕರ್ಷವನ್ನು ಎಂದರೆ ತನ್ನ ಹೀನತೆಯನ್ನು ತೋರಿಸಿ, ಶರಣಾಗತಿಯನ್ನು ಮಾಡುವನು. ಅದರಲ್ಲಿ ಈ ಮೊದಲನೆಯ ಶ್ಲೋಕದಿಂದ ಪ್ರತಿಕೂಲನಾದ ರಾವಣನಿಗೆ ತಾನು ಇದುವರೆಗೆ ಶೇಷಭೂತನಾಗಿದ್ದುದರಿಂದ ತನಗುಂಟಾದ ನಿಕರ್ಷವೊಂದು; ಅವನೊಡನೆ ತನಗೆ ಜನ್ಮಸಿದ್ಧವಾದ ಭ್ರಾತೃತ್ವ ಸಂಬಂಧದ ನಿಕರ್ಷವೊಂದು! ತನಗೆ ಸಹಜನ್ಯವಾದ ನಿಕರ್ಷವೊಂದು; ಈ ಮೂರನ್ನೂ ಹೇಳುವನು. (ರಾವಣೋ ನಾಮ) ಸಮಸ್ತ ಲೋಕಗಳನ್ನೂ ಗೋಳಾಡಿಸತಕ್ಕವನೆಂಬ ಅವನ ಹೆಸರೇ ಕ್ರೂರವಾಗಿರುವುದು. ಇದರಮೇಲೆ (ದುರ್ವೃತ್ತಃ) ಅವನ ನಡತೆಯೂ ಕ್ರೂರವು. (ರಾಕ್ಷಸಃ) ಪೂರ್ವೋಕ್ತ ದೋಷಗಳಾದರೂ ಆಗಂತುಕಗಳಾಗಿ ಬಂದುವಲ್ಲ. ಜಾತಿಸಿದ್ಧವಾಗಿಯೇ ಬಂದಿರುವುವು. ಉತ್ತಮಜಾತಿಯವನಲ್ಲಿ ದುರಾಚಾರಗಳನ್ನು ಕಂಡಾಗ, ಅವನ ಕುಲದ ಮೇಲ್ಮೆಯನ್ನೆತ್ತಿ ಹೇಳಿ, ಆ ಕೆಟ್ಟನಡತೆಯನ್ನು ತಪ್ಪಿಸಿದರೂ ತಪ್ಪಿಸಬಹುದು. ಹೀನಜಾತಿಯವನಿಗೆ ಇಂತಹ ಕ್ರೂರಕೃತ್ಯಗಳೆಲ್ಲವೂ ಕುಲಧರ್ಮವಾದುದರಿಂದ, ಅವುಗಳನ್ನು ಪರಿಹರಿಸುವುದಕ್ಕೆ ಹೇಗೂ ಸಾಧ್ಯವಲ್ಲವೆಂದು ಭಾವವು. (ರಾಕ್ಷಸೇಶ್ವರಃ) ತಾನು ಕ್ರೂರನಾಗಿರುವುದಲ್ಲದೆ ಕ್ರೂರರಾದ ಅನೇಕ ಪರಿಚರರೊಡನೆಯೂ ಕೂಡಿದವನು. (ತಸ್ಯಾಹಂ) ಇಂತಹ ರಾವಣನಿಗೆ ನಾನು ಸಂಬಂಧಪಟ್ಟವನು. ಎಂದರೆ ಅವನಿಗೆ ಶೇಷಭೂತನಾಗಿದ್ದವನು. ಇದರಮೇಲೆ (ಅನುಜಃ ಭ್ರಾತಾ) ಅವನು ಹುಟ್ಟಿದ ಗರ್ಭದಲ್ಲಿಯೇ ಹುಟ್ಟಿದವನು. ಇದರಮೇಲೆ (ಅನುಜಃ) ಅವನ ತಮ್ಮನು. ಒಂದುವೇಳೆ ನಾನೇ ಅಣ್ಣನಾಗಿದ್ದರೆ, ಅವನ ಆಜ್ಞಾಧೀನನಾಗಿರದೆ ಸ್ವತಂತ್ರನಾಗಿರಬಹುದಾಗಿತ್ತು. ಆಗ ನಾನೂ ಕುಬೇರನಂತೆ ಅವನ ದೋಷಕ್ಕೆ ಭಾಗಿಯಾಗುತ್ತಿರಲ್ಲಿಲ್ಲ. ಹಾಗಿಲ್ಲದೆ ನಾನು ಅವನಿಗೆ ತಮ್ಮನಾದುದರಿಂದಲೇ ಅವನ ದುರ್ಮಾರ್ಗಕ್ಕೆ ಒಳಪಟ್ಟು ನಡೆಯಬೇಕಾಯಿತೆಂದು ಭಾವವು. (ವಿಭೀಷಣ ಇತಿ ಶ್ರುತಃ) ಮೇಲೆ ಹೇಳಿದಂತೆ ರಾವಣನೊಡನೆ ಸಂಬಂಧದಿಂದುಂಟಾದ ದೋಷವು ಮಾತ್ರವೇ ಅಲ್ಲದೆ, ನಾನೂ ಭಯಂಕರನೆಂದೇ ಲೋಕದಲ್ಲಿ ಕರೆಯಲ್ಪಡುತ್ತಿರುವೆನು. ರಾವಣನಿಗಾದರೋ ತನ್ನಲ್ಲಿ ಸಹಜನ್ಯಗಳಾದ ದೋಷಗಳು ಮಾತ್ರವೇ ಇರುವುವು. ನನಗೆ ನನ್ನ ದೋಷಗಳಲ್ಲದೆ ಅವನ ಸಂಬಂಧದಿಂದುಂಟಾದ ದೋಷಗಳೂ ಪ್ರಾಪ್ತವಾಗಿರುವುವೆಂದು ನಿರ್ವೇದವು ಸೂಚಿತವಾಗುವುದು. "ವಿಭೀಷಣಸ್ತು ಧರ್ಮಾತ್ಮಾ" ಎಂದು ವಿಭೀಷಣನು ತಾನು ಧರ್ಮಾತ್ಮನೆಂಬುದಾಗಿ ಲೋಕಪ್ರಸಿದ್ಧಿಯನ್ನು ಹೊಂದಿದ್ದರೂ, ಶರಣಾಗತಿಗೆ ಬೇಕಾದ ಕಾರ್ಪಣ್ಯರೂಪವಾದ ಅಂಗವನ್ನು ಇದರಿಂದ ತೋರಿಸಿದುದಾಗಿ ಗ್ರಾಹ್ಯವು.

ಬಹಳ ದುರ್ಮಾರ್ಗನು. ಅವನಿಗೆ ನಾನು ಒಡಹುಟ್ಟಿದ ತಮ್ಮನು. ನನಗೆ ವಿಭೀಷಣ ನೆಂದು ಹೆಸರು. [1]ದುರಾತ್ಮನಾದ ಆ ರಾವಣನು, ಗರ್ಭವಾಸಾದಿ ದುಃಖಗಳನ್ನೂ ತಿಳಿಯದೆ ಬಾಲ್ಯದಿಂದಲೂ ಸುಖವಾಗಿ ಬೆಳೆದ ಸೀತೆಯೆಂಬವಳು ಜನಸ್ಥಾನದಲ್ಲಿದ್ದಾಗ ಅವಳನ್ನು ಕದ್ದು ತರುತ್ತ, ದಾರಿಯಲ್ಲಿ ತನ್ನನ್ನು ತಡೆಯುವುದಕ್ಕಾಗಿ ಬಂದ ಜಟಾಯುವನ್ನೂ ಕೊಂದು ಆಕೆಯನ್ನು ಲಂಕೆಯಲ್ಲಿ ಸೆರೆ ಹಾಕಿರುವನು. ಅವಳ ಮೇಲೆ ಅನೇಕ ರಾಕ್ಷಸಿಯರನ್ನೂ ಕಾವಲಿರಿಸಿರುವನು. ಅವಳು ದುಃಖದಿಂದ ಮೈಮರೆತು ದೀನಳಾಗಿ ಕೊರಗುತ್ತಿರುವಳು. ಈ ಅಕೃತ್ಯವನ್ನು ನೋಡಿ ಸಹಿಸಲಾರದೆ ನಾನು ರಾವಣನಿಗೆ ಹೇತುಯುಕ್ತಗಳಾದ ನಾನಾವಿಧ ವಾಕ್ಯಗಳಿಂದ ನೀತಿಯನ್ನು ಬೋಧಿಸಿ, ಆ ಸೀತೆಯನ್ನು ರಾಮನಿಗೊಪ್ಪಿಸುವಂತೆ ಬಾರಿಬಾರಿಗೂ ನಿರ್ಬಂಧಿಸಿ ಹೇಳಿದೆನು. ಎಷ್ಟು ಹೇಳಿದರೇನು ? ಸಾವಿಗೆ ಸಿಕ್ಕಿದವನು ಔಷಧವನ್ನೊಲ್ಲದಂತೆ, ಮೃತ್ಯುವಶನಾದ ರಾವಣನಿಗೆ ನನ್ನ ವಾಕ್ಯಗಳೊಂದೂ ಕಿವಿಗೇರಲಿಲ್ಲ. ಹಾಗೆ ಹಿತವನ್ನು ಹೇಳುವುದಕ್ಕಾಗಿ ಹೋದ ನನ್ನನ್ನೇ ಆತನು ಕ್ರೂರವಾಕ್ಯಗಳಿಂದ ಧಿಕ್ಕರಿಸಿದುದೂ ಅಲ್ಲದೆ, ಕೇವಲ ದಾಸನಿಗಿಂತಲೂ ಕಡೆಮಾಡಿ ನನ್ನನ್ನು ಅವಮಾನ ಪಡಿಸಿದನು. [2]ಆ ಕ್ಷಣವೇ ನಾನು ನನ್ನ ಹೆಂಡಿರು ಮಕ್ಕಳನ್ನೂ ಬಿಟ್ಟು,

---

1. ರಾವಣನಲ್ಲಿ ಹಿಂದೆ ಹೇಳಿದ ದೋಷಗಳನ್ನು ಪ್ರಾಯಶ್ಚಿತ್ತಗಳಿಂದಾದರೂ ತೊಲಗಿಸಬಹುದು. ಇವಕ್ಕಿಂತಲೂ ಕ್ರೂರವಾಗಿ "ನ ಕ್ಷಮಾಮಿ" ಎಂಬಂತೆ ಯಾವ ವಿಧದಿಂದಲೂ ಭಗವಂತನ ಕ್ಷಮೆಗೆ ಪಾತ್ರವಾಗದ ಭಾಗವತಾಪಚಾರಕ್ಕೂ ಆತನು ಪಾತ್ರನೆಂಬುದನ್ನು ಈ ವಾಕ್ಯದಿಂದ ಸೂಚಿಸುವುದಾಗಿ ಗ್ರಾಹ್ಯವು. ಇಲ್ಲಿ ಜಟಾಯುವಧ ಸೀತಾಪಹರಣಗಳೆರಡೂ ಭಾಗವತಾಪಚಾರಗಳೆಂದು ತಿಳಿಯಬೇಕು.

2. ಇಲ್ಲಿ "ತ್ಯಕ್ತ್ವಾ ಪುತ್ರಾಂಶ್ಚ ದಾರಾಂಶ್ಚ ರಾಘವಂ ಶರಣಂ ಗತಃ" ಎಂದು ಮೂಲವು. ಇದರಿಂದ ತಾನು ಸೋಪಾಧಿಕ ಬಂಧುವರ್ಗಗಳನ್ನು ಬಿಟ್ಟು ನಿರುಪಾಧಿಕ ಬಂಧುವಾದ ರಾಮನನ್ನೇ ಮರೆಹೊಕ್ಕುದಾಗಿ ಭಾವವು. ಹೇಗೆಂದರೆ:—(ಪುತ್ರಾಂಶ್ಚ) ನರಕನಿಸ್ತಾರಕರಾದ ಪುತ್ರರನ್ನೂ, (ದಾರಾಂಶ್ಚ) ಸಹಧರ್ಮಚಾರಿಣಿಯರಾದ ಭಾರ್ಯೆಯರನ್ನೂ (ತ್ಯಕ್ತ್ವಾ) ಬಿಟ್ಟು, ಇದರಿಂದ ಪ್ರಪತ್ತಿ ಮಾಡುವವನಿಗೆ ಪ್ರಾಪ್ಯಾಭಾಸ ಪ್ರಾಪಕಾಭಾಸಗಳೆರಡೂ ತ್ಯಾಜ್ಯಗಳೆಂದೂ, ಪ್ರಪತ್ತಿಗೆ ತ್ಯಾಗವೂ ಅಂಗವೆಂದೂ ಸೂಚಿತವು. (ರಾಘವಂ ಶರಣಂ ಗತಃ) "ಭ್ರಾತಾಭರ್ತಾಚ ಬಂಧುಶ್ಚ ಪಿತಾಚಮಮ ರಾಘವಃ" ಎಂಬಂತೆ ಸರ್ವವಿಧಬಂಧುವಾದ ರಾಮನನ್ನೇ ಮರೆಹೊಕ್ಕಿರುವೆನೆಂದರ್ಥವು. "ಕಿಂತ್ವರ್ಥಿನಾಮರ್ಥಿತ ದಾನದೀಕ್ಷಾಕೃತವ್ರತ ಶ್ಲಾಘ್ಯಮಿದಂ ಕುಲಂ ತೇ" ಎಂಬಂತೆ ಆಶ್ರಿತರಿಗೆ ಸರ್ವಾಭೀಷ್ಟಗಳನ್ನೂ ಕೊಡತಕ್ಕ ಕುಲದಲ್ಲಿ ಹುಟ್ಟಿದವನನ್ನೇ ಕೈಹಿಡಿದೆನೆಂದು ರಾಘವಶಬ್ದಾರ್ಥವು)

ರಘುಕುಲೋತ್ತಮನಾದ ರಾಮನನ್ನು ಮರೆಹೊಗಬೇಕೆಂದು ಸಂಕಲ್ಪಿಸಿ ಬಂದೆನು. ಆದುದರಿಂದ ಎಲೈ ವಾನರರೆ! [1]ನೀವು, ಈಗಲೇ ಹೋಗಿ ಸರ್ವ

(ತನಿಶ್ಲೋಕಿ) ಇಲ್ಲಿ ಈಶ್ವರನ ನಿರ್ಹೇತುಕ ಕರುಣಾಪರಿಪಾಕದಿಂದಲೇ ವಿಭೀಷಣನಿಗೆ ರಾವಣನಿಂದ ತಿರಸ್ಕಾರವುಂಟಾಯಿತೆಂದೂ ಅದರಿಂದಲೇ ಅವನಿಗೆ ಪ್ರಯೋಜನಾಂತರಗಳಲ್ಲಿ ವೈಮುಖ್ಯವೂ ಸಿದ್ಧಿಸಿತೆಂದೂ ಗ್ರಾಹ್ಯವು ಮತ್ತು ಇಲ್ಲಿ (ತ್ಯಕ್ತ್ವಾ ಪುತ್ರಾಂಶ್ಚ ದಾರಾಂಶ್ಚ) ಎಂಬುದರಿಂದ ಪ್ರಾತಿಕೂಲ್ಯವರ್ಜನನೆಂಬ ಅಂಗವೂ, (ರಾಘವಂ ಶರಣಂ ಗತಃ) ಎಂಬು ದರಿಂದ ಆತ್ಮನಿಕ್ಷೇಪನೆಂಬ ಅಂಗವೂ ಕಾಣಿಸಲ್ಪಟ್ಟವೆ. (ಮಹೇಶ್ವರತೀರ್ಥರು)

1. ಇಲ್ಲಿ ಸರ್ವಲೋಕ ಶರಣ್ಯಾಯ ರಾಘವಾಯ ಮಹಾತ್ಮನೇ। ನಿವೇದಯತ ಮಾಂ ಕ್ಷಿಪ್ರಂ ವಿಭೀಷಣಮುಪಸ್ಥಿತಂ” ಎಂದು ಮೂಲವು. ವಿಶೇಷಾರ್ಥವು:—ಇದುವರೆಗೆ ತನಗೆ ಶರಣ್ಯನಾದ ರಾಮನಿಗೆ ವಿಜ್ಞಾಪಿಸಬೇಕಾದ ವಿಷಯಗಳನ್ನು ತಿಳಿಸಿ, ಇಲ್ಲಿ ಅವುಗಳನ್ನು ವಿಜ್ಞಾಪಿಸುವುದಕ್ಕಾಗಿ ಪುರುಷಕಾರಭೂತರನ್ನು ಪ್ರಾರ್ಥಿಸುವನು (ಸರ್ವಲೋಕಶರಣ್ಯಾಯ) ಕುಲಶೀಲ ವಿದ್ಯಾದಿಗಳಲ್ಲಿ ತಾರತಮ್ಯವನ್ನು ನೋಡದ, ಸಮಸ್ತಲೋಕಗಳಿಗೂ ರಕ್ಷಕ ನಾದವನು. ಹೀಗೆ ಆತನು ಸರ್ವಶರಣ್ಯನಾದುದರಿಂದ ಆತನ ಶರಣ್ಯತ್ವದಲ್ಲಿ ನಿಮಗಿರು ವಂತೆಯೇ ನಮಗೂ ಭಾಗವುಂಟೆಂದೂ, ಹಾಗೆಯೇ ದುಷ್ಟನಾದ ರಾವಣನಿಗೂ ಅದರಲ್ಲಿ ಭಾಗವಿದ್ದರೂ, ರಾವಣನು ಆ ಶರಣ್ಯತ್ವದಲ್ಲಿ ತಕ್ಕಷ್ಟು ಅಭಿರುಚಿಯನ್ನು ತೋರಿಸದೆ ಹೋದುದರಿಂದ, ಅವನು ತನ್ನ ಭಾಗವನ್ನು ಹೋಗಲಾಡಿಸಿಕೊಂಡಿರುವನೆಂದೂ, ತಾನಾ ದರೋ ಅದರಲ್ಲಿ ಆಸೆಯಿಟ್ಟು ಅಭಿಮುಖ್ಯದಿಂದ ಬಂದವನಾದುದರಿಂದ, ಆದರಲ್ಲಿ ತನಗೆ ಬರಬೇಕಾದ ಭಾಗವನ್ನು ತಪ್ಪಿಸುವುದಕ್ಕೆ ಇತರರಿಗೆ ಸಾಧ್ಯವಲ್ಲವೆಂದೂ ಭಾವವು. ಆದರೆ “ಶರಣ್ಯತ್ವಕ್ಕೆ ಅಂಗಭೂತಗಳಾದ ಸೌಲಭ್ಯವೂ, ಪರತ್ವವೂ ಆತನಲ್ಲಿರಬೇಕಲ್ಲವೆ” ಎಂದರೆ ಆ ಪ್ರಧಾನಗುಣಗಳೂ ಇರುವುವೆಂಬುದಕ್ಕಾಗಿ (ರಾಘವಾಯ ಮಹಾತ್ಮನೇ) ಎಂಬೀ ಎರಡು ವಿಶೇಷಣಗಳು (ರಾಘವಾಯ) ರಘುವಂಶದಲ್ಲಿ ಹುಟ್ಟಿದವನು, “ಯತ್ತದನಿರ್ದೇಶ್ಯಂ” ಎಂಬಿನೇ ಮೊದಲಾದ ವೇದಾಂತಗಳಿಗೆ ಗೋಚರನಾದ ಪರಬ್ರಹ್ಮನು. ಸಕಲಪ್ರಾಣಿ ಸಾಕ್ಷಾತ್ಕಾರಕ್ಕೆ ಅರ್ಹನಾಗುವಂತೆ ರಘುವಂಶದಲ್ಲಿ ಮನುಷ್ಯರೂಪದಿಂದವತರಿಸಿರುವಾಗ ಇದಕ್ಕಿಂತಲೂ ಸೌಲಭ್ಯವೇನುಂಟು? (ಮಹಾತ್ಮನೇ) ಹೀಗೆ ಮನುಷ್ಯನಾಗಿ ಅವತರಿಸಿ ದ್ದರೂ, ತನ್ನ ಅಪ್ರಾಕೃತಸ್ವಭಾವವನ್ನು ಬಿಡದೆ ಜ್ಞಾನಶಕ್ತ್ಯಾದ್ಯನಂತಕಲ್ಯಾಣ ಗುಣೈಕ ತಾನನಾಗಿರುವನು. (ರಾಘವಾಯ ಮಹಾತ್ಮನೇ) ಸೌಲಭ್ಯವೊಂದೇ ಇದ್ದ ಪಕ್ಷದಲ್ಲಿಯೂ ಅದರಿಂದ ಪ್ರಯೋಜನವಿಲ್ಲ. ಮೇರುಪರ್ವತಾದಿಗಳಂತೆ ಪರತ್ವವುಮಾತ್ರವೇ ಇದ್ದ ಪಕ್ಷ ದಲ್ಲಿಯೂ ಇತರರಿಗೆ ದುರ್ಲಭನಾಗುವುದರಿಂದ ಅದೂ ಪ್ರಯೋಜನಕಾರಿಯಲ್ಲ. ಆದುದರಿಂದ ಇವನಲ್ಲಿ ಸೌಲಭ್ಯ ಪರತ್ವಗಳೆರಡೂ ಎಡೆಬಿಡದೆ ಕಲೆತಿರುವುವೆಂದು ಭಾವವು. ಅಂತಹ ರಾಮನಿಗೆ (ನಿವೇದಯತ ಮಾಂ) ನನ್ನನ್ನು ತಿಳಿಸಿರಿ! ನೀವು ನನ್ನಲ್ಲಿ ಆ ರಾಮನಿಗೆ

ಹೇಗಾದರೂ ಅನುಗ್ರಹವನ್ನು ಹುಟ್ಟಿಸಬೇಕೆಂಬುದಕ್ಕಾಗಿ ನನ್ನಲ್ಲಿ ಇಲ್ಲದ ಗುಣಗಳನ್ನಾರೋಪಿಸಿ ಹೇಳಬೇಕಾದುದಿಲ್ಲ. ನಿರ್ಹೇತುಕಕೃಪಾಪೂರ್ಣನಾದ ಆತನಲ್ಲಿ ಶರಣಾಗತನಾಗಿ ನಾನು ಬಂದಿರುವೆನೆಂದುಮಾತ್ರ ತಿಳಿಸಿದರೆ ಸಾಕು! ಅಷ್ಟರಿಂದಲೇ ಆತನು ನನ್ನನ್ನನು ಗ್ರಹಿಸುವನು. (ಕ್ಷಿಪ್ರಂ) ಲೋಕಶರಣ್ಯನಾದ ಆ ರಾಮನು ತಾನಾಗಿ ಬಂದು ನನ್ನನ್ನು ಪರಿಗ್ರಹಿಸುವುದಕ್ಕೆ ಮೊದಲೇ ನೀವು ವಿಜ್ಞಾಪಿಸಿದರೆ, ನಿಮಗೆ ಮಿತ್ರಕಾರ್ಯವನ್ನು ನಡೆಸಿದ ಕೀರ್ತಿಯಾದರೂ ಉಂಟು. ಈಗ ನೀವು ತಡಮಾಡಿದರೆ ನಿಮ್ಮ ಲಾಭಕ್ಕೆ ಹಾನಿಯೇ ಹೊರತು ನನ್ನ ಕೋರಿಕೆಗೆ ಎಂದಿಗೂ ಲೋಪವಾಗದು. (ವಿಭೀಷಣಂ) ರಾವಣನಂತೆ ನಾನು ಪ್ರತಿಕೂಲನೆಂದು ತಿಳಿಯಬೇಡಿರಿ. "ವಿಭೀಷಣಸ್ತು ಧರ್ಮಾತ್ಮಾ" ಎಂಬಂತೆ ಅನುಕೂಲನು. (ಉಪಸ್ಥಿತಂ) ಸಮೀಪಕ್ಕೂ ಬಂದಿರುವೆನು. ಒಂದುವೇಳೆ ನಾನು ನಿಮಗೆ ಹೀನನೆಂದು ತೋರಿದರೂ, ಸಮೀಪಕ್ಕೆ ಬರುವುದೊಂದೇ ಆ ರಾಮನ ಅನುಗ್ರಹಕ್ಕೆ ಸಾಕಾದ ಸಾಧನವಾದುದರಿಂದ ಅವನು ನನ್ನನ್ನು ತಪ್ಪದೆ ಅಂಗೀಕರಿಸುವನೆಂದೂ ಭಾವವು. (ಗೋವಿಂದರಾಜರು.)

(ಸರ್ವಲೋಕಶರಣ್ಯಾಯ) ಅಧಿಕಾರಭೇದವಿಲ್ಲದೆ ಸುರನರವಾನರಾದಿಗಳಾದ ಸಮಸ್ತ ಲೋಕಕ್ಕೆ, ಸಮಾಶ್ರಯಣೀಯನಾಗಿರುವವನು. (ರಾಘವಾಯ) ಆಶ್ರಿತರಕ್ಷಣೆಯಿಂದ ಪ್ರಸಿದ್ಧವಾದ ರಘುಕುಲದಲ್ಲಿ ಹುಟ್ಟಿದವನು. (ಮಹಾತ್ಮನೇ) ಪರಮಾತ್ಮ ಸ್ವರೂಪನು. ಇಂತಹ ರಾಮನಿಗೆ (ಮಾಂ ಕ್ಷಿಪ್ರಂ ನಿವೇದಯತ) ನನ್ನನ್ನು ಶೀಘ್ರದಲ್ಲಿ ತಿಳಿಸಿರಿ. (ವಾಚಾ ಧರ್ಮಮವಾಪ್ನುಹಿ) ಎಂಬಂತೆ ನಾನು ಬಂದಿರುವ ಸಂಗತಿಯನ್ನು ಹೇಳಿದ ಮಾತ್ರದಿಂದಲೇ ನಿಮಗೆ ಮಹೋಪಕಾರಫಲವು ಸಿದ್ಧಿಸುವುದೆಂದು ಭಾವವು. (ಅಪ್ರಾರ್ಥಿತೋ ನ ಗೋಪಾಯೇದಿತಿ ತತ್ಪ್ರಾರ್ಥನಾಮತಿಃ । ಗೋಪಾಯಿತಾ ಭವತ್ಯೇವಂ ಗೋಪ್ತೃತ್ವ ವರಣಂ ಸ್ಮೃತಂ) ಎಂಬಂತೆ ಇದರಿಂದ ಗೋಪ್ತೃತ್ವವರಣವೆಂಬ ಅಂಗವು ಹೇಳಲ್ಪಟ್ಟಿತು (ಉಪಸ್ಥಿತಂ) ಸಮೀಪಕ್ಕೆ ಬಂದವನು. ಇದರಿಂದ "ರಕ್ಷಿಷ್ಯತ್ಯನುಕೂಲಾನ್ನ ಇತ್ಯೇವಂ ಸುದೃಢಾ ಮತಿಃ । ಸ ವಿಶ್ವಾಸೋ ಭವೇಚ್ಚಾತ್ರ ಸರ್ವದುಷ್ಕೃತಿನಾಶನಃ" ಎಂಬ ವಿಶ್ವಾಸ ರೂಪವಾದ ಅಂಗವು ತೋರಿಸಲ್ಪಟ್ಟಿರುವುದು. ಇಲ್ಲಿ ವಿಭೀಷಣನು ಕೇವಲ ರಾಜಪುತ್ರನಾದ ರಾಮನನ್ನು ಕುರಿತು ಸರ್ವಲೋಕ ಶರಣ್ಯನೆಂದೂ, ಪರಾತ್ಪರನೆಂದೂ ಹೇಳಿದುದು ಹೇಗೆ? ಎಂದರೆ ಪೂರ್ವದಲ್ಲಿ, ಈತನು ಬ್ರಹ್ಮದೇವನನ್ನು ಕುರಿತು "ಪರಮಾಪದ್ಗತಸ್ಯಾಪಿ ಧರ್ಮೇ ಮಮ ಮತಿರ್ಭವೇತ್ । ಯಾ ಯಾ ಮೇ ಜಾಯತೇ ಬುದ್ಧಿರ್ಯೇಷು ಯೇಷ್ವಾಶ್ರಯೇಷು ಚ ॥ ಸಾ ಸಾ ಭವತು ಧರ್ಮಿಷ್ಠಾ ತಂ ತಂ ಧರ್ಮಂ ಚ ಪಾಲಯೇತ್" ॥ ಇತ್ಯಾದಿ ವಾಕ್ಯಗಳಿಂದ ಪ್ರಾರ್ಥಿಸಿ ಕೇಳಿಕೊಂಡುದರ ಮೇಲೆ, ಬ್ರಹ್ಮನು ಹಾಗೆಯೇ ಅನುಗ್ರಹಿಸಿ, "ಧರ್ಮಿಷ್ಠಸ್ತ್ವಂ ತಥಾ ವತ್ಸ ತಥಾ ಚೈತದ್ಭವಿಷ್ಯತಿ" ಎಂದು ವರವನ್ನು ಕೊಟ್ಟಿರುವುದರಿಂದ, ರಾಮನು ಸಕಲ ಜಗದ್ರಕ್ಷಣಾರ್ಥವಾಗಿಯೇ ಇಕ್ಷ್ವಾಕುವಂಶದಲ್ಲಿ ಅವತರಿಸಿದ ಪರಮಪುರುಷನೆಂದು ತಿಳಿದು, ಹಾಗೆ ಹೇಳಿರುವನೆಂದು ಗ್ರಾಹ್ಯವು. (ಮಹೇಶ್ವರತೀರ್ಥರು.)

ಅಥವಾ (ನಿವೇದಯತ) ತಿಳಿಸಿಬಿಡಿರಿ. "ಯಂ ಪ್ರಜಾಪತಿರ್ವೇದ ಸ ಪುಣ್ಯೋ ಭವತಿ" ಪರಮಪುರುಷನಿಗೆ ತಿಳಿದವನೇ ಪುಣ್ಯಪುರುಷನೆಂಬಂತೆ ರಾಮನ ಮನಸ್ಸಿಗೆ ಬಂದಾಗಲೇ ನನಗೆ ಸ್ವರೂಪವು ಸಿದ್ಧಿಸುವುದು. ಅದನ್ನು ನಿಮ್ಮ ಪುರುಷಕಾರದಿಂದಲೇ ಹೊಂದಬೇಕೆಂದು ಕೋರುವೆನಾದುದರಿಂದ ನೀವು ಹೋಗಿ ತಿಳಿಸಿರಿ (ನಿವೇದಯತ). "ಸ್ವರೇಣ ಮಹತಾ ಮಹಾನ್" ಎಂಬಂತೆ ನಾನು ಉಚ್ಚನಾದದಿಂದ ಕೂಗಿದಾಗಲೇ ರಾಮನು "ಅತಂದ್ರಿತ ಚಮೂಪತಿಪ್ರಹಿತಹಸ್ತಂ" ಎಂಬಂತೆ ನನ್ನನ್ನು ಅನುಗ್ರಹಿಸುವನು. ಅದಕ್ಕೆ ಮೊದಲು ನೀವೇ ಹೋಗಿ ತಿಳಿಸಿದ ಪಕ್ಷದಲ್ಲಿ ನಿಮಗೂ ಸ್ವರೂಪವು ಸಿದ್ಧಿಸುವುದು. (ನಿವೇದಯತ) ನೀವು ಹಿಂದೆ ನಡೆದ ವ್ಯಾಘ್ರ-ವಾನರ ಸಂವಾದವನ್ನಾದರೂ ಕೇಳಿಲ್ಲವೆ ? (ಒಂದು ಹುಲಿಯು ಬೆನ್ನಟ್ಟಿಬಂದಾಗ ಒಬ್ಬ ಮನುಷ್ಯನು, ಭಯದಿಂದ ಒಂದು ಮರವನ್ನೇರಲು, ಅಲ್ಲಿದ್ದ ಕಪಿಯು ಅವನಿಗೆ ಅಭಯವನ್ನು ಕೊಟ್ಟಿತು. ಕೆಳಗಿದ್ದ ಹುಲಿಯು ಆ ಕಪಿಯನ್ನು ಕುರಿತು "ಆ ಮನುಷ್ಯನನ್ನೋಡಿಸು ! ಹಾಗಿಲ್ಲದ ಪಕ್ಷದಲ್ಲಿ ಅವನು ಸಮಯವನ್ನು ನೋಡಿ ನಿನ್ನನ್ನು ಕೊಲ್ಲುವನು. ಅವನನ್ನು ತಿಂದಹೊರತು ನಾನು ಕದಲುವವನಲ್ಲ" ಎಂದಿತು. ಆದರೂ ಕಪಿಯು ತಾನು ಶರಣಾಗತನನ್ನು ಬಿಡಲಾರೆನೆಂದು ಹೇಳಿ ನಿದ್ರಿಸಲು, ಆಗ ಹುಲಿಯು ತಂತ್ರದಿಂದ ಆ ಮನುಷ್ಯನನ್ನು ನೋಡಿ "ನೀನಾದರೂ ಈಗ ಆ ಕಪಿಯನ್ನು ತಳ್ಳುವುದಾದರೆ ನಾನು ಅದನ್ನು ತಿಂದು ತೃಪ್ತಿಹೊಂದಿ ನಿನ್ನನ್ನು ಬಿಟ್ಟು ಹೋಗುವೆ" ನೆಂದಿತು. ಈ ಮಾತನ್ನು ಕೇಳಿ ಕೃತಘ್ನನಾದ ಆ ಮನುಷ್ಯನು ಮಲಗಿದ್ದ ಕಪಿಯನ್ನು ಕೆಳಕ್ಕೆ ತಳ್ಳಿದನು. ಹಾಗಿದ್ದರೂ ದೈವಗತಿಯಿಂದ ಕಪಿಯು ಕೆಳಕ್ಕೆಬೀಳದೆ ಬೇರೊಂದು ಕೊಂಬೆಯನ್ನು ಹಿಡಿದು ನಿಂತು, ಆಗಲೂ ಆ ಬೇಡನ ಅಪರಾಧವನ್ನು ಮನಸ್ಸಿಗೆ ತಂದು ಕೊಳ್ಳದೆ ಅಭಯವನ್ನು ಕೊಟ್ಟು ಕಾಪಾಡಿತೆಂದು ಇಲ್ಲಿನ ಪೂರ್ವಕಥೆಯು. ಹಾಗೆ ಶರಣಾಗತರಕ್ಷಣೆಯಲ್ಲಿ ಪ್ರಸಿದ್ಧಿಹೊಂದಿದ ವಾನರಜಾತಿಯಲ್ಲಿ ಹುಟ್ಟಿದ ನೀವು, ಶರಣಾಗತನಾಗಿ ಬಂದ ನನಗೆ ವಾಙ್ಮಾತ್ರದಿಂದಲಾದರೂ ಈ ಸಹಾಯವನ್ನು ಮಾಡಿರಿ. (ನಿವೇದಯತ) ರಾಮನು ನನ್ನನ್ನು ಕುರಿತು ಕೇಳಿದಾಗ, ನೀವು ಪಾತ್ರ ಸುಮ್ಮನಿರದೆ, ನನ್ನನ್ನು ನಂಬಬಹುದೆಂದಾಗಲಿ, ಕೂಡದೆಂದಾಗಲಿ, ಪರಿಗ್ರಹಿಸಬಹುದೆಂದಾಗಲಿ, ತ್ಯಜಿಸಬೇಕೆಂದಾಗಲಿ, ಯಾವುದೋ ಒಂದನ್ನು ನಿಮಗೆ ತೋರಿದಂತೆ ತಿಳಿಸಿಬಿಡಿರಿ. (ನಿವೇದಯತ) "ವಿದ್ಲ್ ಲಾಭೇ" ಎಂಬ ಧಾತ್ವರ್ಥದಂತ ನನ್ನಿಂದ ಅವನಿಗಾದರೂ ಲಾಭವನ್ನುಂಟು ಮಾಡಿರೆಂದರ್ಥವು. "ಸ ಮಹಾತ್ಮಾ ಸುದುರ್ಲಭಃ" ಅಂತಹ ಜ್ಞಾನಿಯಾದವನು ತನಗೆ ದುರ್ಲಭನೆಂದು ಯಾವಾಗಲೂ ಮನಸ್ಸಿನಲ್ಲಿ ಕಳವಳಿಸುತ್ತಿರುವ ಆ ಸ್ವಾಮಿಗೆ ನನ್ನಿಂದ ಒಂದಾತ್ಮಲಾಭವಾಗುವಂತೆ ಮಾಡಿರಿ. ಅಥವಾ 'ವಿದಸತ್ತಾಯಾಂ' ಎಂಬ ಧಾತ್ವರ್ಥದಂತೆ ಆತನಿಗೆ ಸತ್ತೆಯನ್ನುಂಟುಮಾಡಿರಿ. "ಅಪ್ಯಹಂ ಜೀವಿತಂ ಜಹ್ಯಾಂ" ಎಂದು ಆಶ್ರಿತರನ್ನು ರಕ್ಷಿಸದಿದ್ದರೆ ತನ್ನ ಪ್ರಾಣವನ್ನೇ ಬಿಡುವುದಾಗಿ ಹೇಳಿರುವ ಆ ನನ್ನ ಸ್ವಾಮಿಗೆ ನನ್ನನ್ನು ಸೇರಿಸಿ ಸತ್ತೆಯನ್ನುಂಟುಮಾಡಿರಿ ? (ಮಾಂ) "ಆತ್ಮಾನಂ ಸರ್ವಥಾ ರಕ್ಷ ಪುರೀಂ ಚೈವ

ಸರಾಕ್ಷಸಾಂ" ಎಂದು ರಾವಣನಿಗೂ, ಆತನಲ್ಲಿ ಸೇರಿದವರಿಗೂ ಭೇದವಿಲ್ಲದೆ ಹಿತವನ್ನು ಹೇಳಿದುದರಿಂದ "ಆನುಕೂಲ್ಯಮಿತಿ ಪ್ರೋಕ್ತಂ ಸರ್ವಭೂತಾನುಕೂಲತಾ" "ಸರ್ವಭೂತಗಳಿಗೂ ಅನುಕೂಲನಾಗಿರುವುದೇ ಆನುಕೂಲ್ಯವೆನಿಸುವುದೆಂಬ ಪ್ರಪತ್ತಿಗೆ ಅಂಗಭೂತವಾದ ಆನುಕೂಲ್ಯ ಸಂಕಲ್ಪವನ್ನೂ, "ಕ್ರುದ್ಧೋ ಹನ್ಯಾದ್ಗುರೂನಪಿ" ಎಂಬಂತೆ ತನಗುಂಟಾದ ಕೋಪದಲ್ಲಿ ಅಣ್ಣನೆಂಬುದನ್ನೂ ಲಕ್ಷ್ಯಮಾಡದೆ ರಾವಣನನ್ನು ಕೊಂದು ಬರಬೇಕಾಗಿದ್ದರೂ, ಅದಕ್ಕೆ ಸಾಧನವಾಗಿ ಕೈಯಲ್ಲಿ ಗದೆಯಿದ್ದರೂ, ಆ ಪ್ರಾತಿಕೂಲ್ಯವನ್ನು ಬಿಟ್ಟು ಬಂದುದರಿಂದ ಪ್ರಾತಿಕೂಲ್ಯವರ್ಜನವೆಂಬ ಅಂಗವನ್ನೂ, ಹಿಂದೆ ಸುಗ್ರೀವನ ಪಟ್ಟಾಭಿಷೇಕವನ್ನು ನಿದರ್ಶನವಾಗಿಟ್ಟುಕೊಂಡು ತನ್ನನ್ನೂ ರಾಮನು ಹಾಗೆಯೇ ರಕ್ಷಿಸುವನೆಂಬ ನಂಬಿಕೆಯಿಂದ ಇತ್ತಲಾಗಿ ಹೊರಟು ಬಂದುದರಿಂದ "ರಕ್ಷಿಷ್ಯತ್ಯನುಕೂಲಾನ್ನ ಇತಿ ಯಾ ಸುದೃಢಾ ಮತಿಃ। ಸ ವಿಶ್ವಾಸೋ ಭವೇತ್" ಎಂಬಂತೆ ವಿಶ್ವಾಸರೂಪವಾದ ಅಂಗವನ್ನೂ "ಭವಂತಂ ಶರಣಂ ಗತಃ" ಎಂದು ಹೇಳಿ ಗೋಪ್ತೃತ್ವವರಣವೆಂಬ ಅಂಗವನ್ನೂ "ಭವದ್ಗತಂ ಮೇ ರಾಜ್ಯಂ ಚ ಜೀವಿತಂ ಚ ಸುಖಾನಿ ಚ" ಎಂದು ಹೇಳಿ ಭರನ್ಯಾಸವನ್ನು ಮಾಡಿದುದರಿಂದ ಆತ್ಮನಿಕ್ಷೇಪವನ್ನೂ "ತೇನ ಚಾಸ್ಮ್ಯವಮಾನಿತಃ" ಎಂದು ತನಗೆ ರಾವಣನಿಂದುಂಟಾದ ಪರಿಭವವನ್ನು ವ್ಯಕ್ತವಾಗಿ ಹೇಳಿದುದರಿಂದ, ಗರ್ವಹಾನಿರೂಪವಾದ ಕಾರ್ಪಣ್ಯವನ್ನೂ, ಹೀಗೆ ಶರಣಾಗತಿಗೆ ಬೇಕಾದ ಆರಂಗಗಳನ್ನೂ, ಕೊರತೆಯಿಲ್ಲದೆ ತೋರಿಸಿರುವ ನನ್ನನ್ನು ನೀವು ರಾಮನಿಗೆ ತಿಳಿಸಿರಿ? (ಕ್ಷಿಪ್ರಂ) ಈ ಕ್ಷಣವೇ ಹೋಗಿ ವಿಜ್ಞಾಪಿಸಬೇಕು. 'ಇಷ್ಟಾತುರವೇಕೆ!' ಎಂದರೆ (ಚಂಚಲಂ ಹಿ ಮನಃ) ಮನುಷ್ಯರ ಮನಸ್ಸು ಚಂಚಲವಾದುದಲ್ಲವೆ? ಈಗ ನನ್ನ ಮನಸ್ಸಿನಲ್ಲಿ ಹುಟ್ಟಿರುವ ಅನುಕೂಲ್ಯವು ಇನ್ನು ಕ್ಷಣಕಾಲದಲ್ಲಿ ಮಾರಿಹೋಗಬಹುದಾದುದರಿಂದ ಅದಕ್ಕೆ ಮೊದಲೇ ತಿಳಿಸಬೇಕು. (ಕ್ಷಿಪ್ರಂ) "ಕ್ಷಿಪ್ರಂ ರಾಮಾಯ ಶಂಸಧ್ವಂ! ಸೀತಾಂ ಹರತಿ ರಾವಣಃ!" ಎಂದು ಸೀತಾದೇವಿಯು ದಂಡಕಾರಣ್ಯದಲ್ಲಿ ದೇವತೆಗಳನ್ನು ಕುರಿತು ಮೊರೆಯಿಡುವಾಗಲೂ, ದೇವತೆಗಳು ಅದರಂತೆ ಕ್ಷಿಪ್ರದಲ್ಲಿ ನಡೆಸದೆ ಹೋದುದರಿಂದಲ್ಲವೇ ಆಕೆಯು ರಾವಣನ ಕೈಗೆ ಸಿಕ್ಕಬೇಕಾಯಿತು. ಅದರಂತೆಯೇ ನಾನೂ ನನ್ನ ಮನಸ್ಸೆಂಬ ರಾಕ್ಷಸನ ಕೈಗೆ ಸಿಕ್ಕುವುದಕ್ಕೆ ಮೊದಲೇ ನೀವು ರಾಮನಿಗೆ ತಿಳಿಸಿಬಿಡಿರಿ. (ಕ್ಷಿಪ್ರಂ ನಿವೇದಯತ) 'ದತ್ತಮಸ್ಯಾಭಯಂ' ಎಂಬುದಾಗಿ ಆತನೇ ಮುಂದು ಬಿದ್ದು ಅಭಯವನ್ನು ಕೊಡುವುದಕ್ಕೆ ಮೊದಲೇ ನೀವಾಗಿ ಹೋಗಿ ತಿಳಿಸಿರಿ! (ಕ್ಷಿಪ್ರಂ ನಿವೇದಯತ) ನಾನು ಬಹಳ ಹೊತ್ತಿನವರೆಗೆ ತಡೆಯಲಾರೆನಾದುದರಿಂದ ಮತ್ತೊಮ್ಮೆ ಶರಣಾಗತಿಯನ್ನು ಮಾಡಬೇಕಾಗಬಹುದು. "ಸಕೃದೇವ ಪ್ರಪನ್ನಾಯ" ಎಂದು ಒಂದೇ ಆವರ್ತಿ ಮಾಡಬೇಕೆಂದು ಏರ್ಪಟ್ಟಿರುವ ಶರಣಾಗತಿ ಸ್ವರೂಪಕ್ಕೆ ಹಾನಿಯುಂಟಾಗದಂತೆ ಮುಂದಾಗಿಯೇ ತಿಳಿಸಿರಿ. ನನ್ನನ್ನು ತಿಳಿಸಬೇಕಾದುದು ಯಾರಿಗೆ? (ರಾಘವಾಯ) "ಅಪ್ಯಹಂ ಜೀವಿತಂ ಜಹ್ಯಾಂ...ನಹಿ ಪ್ರತಿಜ್ಞಾಂ ಸಂಶ್ರುತ್ಯ" ಎಂಬಂತೆ ಇಂತಹ ಸಂದರ್ಭಗಳಲ್ಲಿ ತನ್ನ ಪ್ರಾಣವನ್ನೂ ಲಕ್ಷ್ಯಮಾಡದ ಆ ರಾಮನಿಗೆ ತಿಳಿಸಿರಿ (ರಾಘವಾಯ ಮಹಾ

ಕ್ಷಿಪ್ರಂ ನಿವೇದಯತ) ಹಿಂದೆ ಸೀತೆಯು “ ರಾಘವಸ್ಯ ಯಶೋ ಹೀಯೇತ್ ” ಋಷಿಗಳನ್ನೂ, ಸುಗ್ರೀವನನ್ನೂ, ಕಾಕಾಸುರನೇ ಮೊದಲಾದವರನ್ನೂ ವಿಪತ್ತಿನಿಂದ ತಪ್ಪಿಸಿದನೆಂಬ ಪ್ರಸಿದ್ಧಿಯೆಲ್ಲವೂ ಈಗ ತನ್ನನ್ನು ರಕ್ಷಿಸದೆ ಹೋಗುವುದರಿಂದ ಕಂದಿ ಹೋಗುವುದೆಂದು ಯಾವನಿಗಾಗಿ ಹನುಮಂತನೊಡನೆ ಹೇಳಿಕಳುಹಿಸಿದನೋ, ಆ ರಾಘವನಿಗೇ ಈಗ ನನ್ನನ್ನೂ ಜ್ಞಾಪಿಸಿರಿ! (ಮಹಾತ್ಮನೇ) ಮರ್ತ್ಯಾನಾಂ ಮರಣಾದ್ಭಯಮ್ ಎಂಬಂತೆ ಕೇವಲ ಮರಣಕ್ಕಾಗಿ ಭಯಪಡುವ ನಿಮ್ಮಹಾಗಿಲ್ಲದೆ, “ ಉತ್ತಮಾನಾಂ ತು ಮರ್ತ್ಯಾನಾಮವಮಾನಾತ್ಪರಂ ಭಯಂ ” ಎಂಬಂತೆ ಶರಣಾಗತ ಪರಿತ್ಯಾಗದಿಂದ ತಾನು ಲೋಕಾಪವಾದಕ್ಕೊಳಗಾಗಬಾರದೆಂದು ಬಹಳವಾಗಿ ಭಯಪಡುವ ಆ ಮಹಾಸ್ವಭಾವವುಳ್ಳವನಿಗೆ ತಿಳಿಸಿರಿ! (ಮಹಾತ್ಮನೇ) ವೈದಿಕಶಿಖಾಮಣಿಯಾದ ವಿಶ್ವಾಮಿತ್ರನು ಯಾವನನ್ನು ಕುರಿತು “ಅಹಂ ವೇದ್ಮಿ ಮಹಾತ್ಮಾನಂ ” ಎಂದು ಮಹಾತ್ಮನನ್ನಾಗಿ ಹೇಳಿರುವನೋ ಆ ರಾಮನಿಗೆ ನನ್ನನ್ನು ತಿಳಿಸಿರಿ! “ ಹೀಗೆ ನೀನೇ ಮಹಾತ್ಮನೆಂದು ಅವನ ಮಹತ್ತ್ವವನ್ನು ಹೊಗಳುವೆಯಲ್ಲವೆ? ಪರ್ವತದಂತೆ ಮಹತ್ತ್ವವುಳ್ಳ ಆತನು ಪರಮಾಣುವಂತಿರುವ ನಿನಗೆ ಸುಲಭನಾಗುವನೆ? ಎಂದರೆ (ಸರ್ವಲೋಕಶರಣ್ಯಾಯ) ಅವನ ಸೌಲಭ್ಯಕ್ಕೆ ಅವರಿವರೆಂಬ ಭೇದವೇ ಇಲ್ಲ. “ ಕೌಸಲ್ಯಾ ಲೋಕಭರ್ತಾರಂ ಸುಷುವೇ ಯಂ ಮನಸ್ವಿನೀ ” ಎಂಬಂತೆ ಲೋಕಭರಣಕ್ಕಾಗಿಯೇ ಕೌಸಲ್ಯೆಯು ಆತನನ್ನು ಹಡೆದಿರುವಾಗ ಆ ಸರ್ವಲೋಕಗಳಲ್ಲಿ ನಾನೂ ಒಬ್ಬನಲ್ಲವೆ? (ಸರ್ವಲೋಕ ಶರಣ್ಯಾಯ) “ ಸಪ್ತಲೋಕೈಕವೀರಸ್ಯ ದಶಕಂಠ-ಕುಲದ್ವಿಷಃ ” ಎಂಬಂತೆ ಭೂರ್ಭುವರಾದಿ ಸಮಸ್ತ ಲೋಕಗಳಿಗೂ ಶರಣ್ಯನಾದ ರಾಮನು ನನಗೂ ಶರಣ್ಯನಾಗನೆ? (ಸರ್ವಲೋಕ ಶರಣ್ಯಾಯ) ದೇವತಿರ್ಯಙ್ಮನುಷ್ಯಸ್ಥಾವರಯೋನಿಗಳೆಂದೂ, ಧರ್ಮಾರ್ಥಿಗಳೆಂದೂ, ಕಾಮಾರ್ಥಿಗಳೆಂದೂ, ಅನುಕೂಲಪ್ರತಿಕೂಲರೆಂದೂ, ಉತ್ಕೃಷ್ಟಾಪಕೃಷ್ಟರೆಂದೂ, ಬೇರೆಬೇರೆ ಭೇದಗಳುಳ್ಳ ಸರ್ವಜನಕ್ಕೂ ಶರಣ್ಯನಾದ ಆ ರಾಮನಿಗೆ ನಾನೊಬ್ಬನು ಬಾಹ್ಯನೆ? “ ನಾನು ಯಾರೆಂದು ಕೇಳುವಿರಾ? ” (ವಿಭೀಷಣಂ) “ ವಿರೋಧಿ ಭಯಂಕರನಾದವನು. ನಿಮ್ಮ ಶತ್ರುಗಳಾದ ರಾವಣಾದಿಗಳಿಗೆ ಭಯವನ್ನು ಹುಟ್ಟಿಸಿ, ನಿಮಗೆ ಅನುಕೂಲನಾಗಿಯೇ ಬಂದವನು! ಅಥವಾ ಹಾಗೆ ನಾನು ಅನುಕೂಲನಾಗಿ ಬಂದವನೆಂದು ತಿಳಿಸುವಷ್ಟು ನಂಬಿಕೆಯು ನಿಮಗಿಲ್ಲದಿದ್ದರೆ (ವಿಭೀಷಣಂ) ‘ಉತ್ಪಾತಗದಾಪಾಣಿಃ ” ಎಂಬಂತೆ ಒಬ್ಬನು ಕೈಯಲ್ಲಿ ಗದೆಯನ್ನು ಹಿಡಿದು ಭಯಂಕರ ಸ್ವರೂಪದಿಂದ ಬಂದು ನಿಂತಿರುವನೆಂದಾದರೂ ಹೇಳಿರಿ. ಹೇಗಿದ್ದರೂ (ಉಪಸ್ಥಿತಂ) “ ದುರಾಚಾರೋಪಿ ಸರ್ವಾಶೀ ಕೃತಘ್ನೋ ನಾಸ್ತಿಕಃ ಪುರಾ | ಸಮಾಶ್ರಯೇದಾದಿದೇವಂ ಶ್ರದ್ಧಯಾ ಶರಣಂ ಯದಿ | ನಿರ್ದೋಷಂ ವಿದ್ಧಿ ತಂ ಜಂತುಂ ” ಎಂಬಂತೆ, ಎಷ್ಟೇ ದುರಾಚಾರವುಳ್ಳವನಾಗಿದ್ದರೂ, ಆದಿದೇವನಾದ ಶ್ರೀಮನ್ನಾರಾಯಣನನ್ನು ಶ್ರದ್ಧೆಯಿಂದಾಶ್ರಯಿಸಿದ ಮಾತ್ರಕ್ಕೆ ನಿರ್ದೋಷಿಯಾಗುವನಲ್ಲವೆ? ಅದರಂತೆಯೇ ಈಗ ನಾನೂ ಭಗವದಾಶ್ರಯಕ್ಕಾಗಿ ಬಂದುದರಿಂದ ನಿರ್ದೋಷಿಯಾಗಿರುವೆನು. (ಉಪಸ್ಥಿತಂ) ಒಂದುವೇಳೆ ನಾನು

ಲೋಕವರೇಣ್ಯನಾಗಿಯೂ, ರಘುಕುಲನಂದನನಾಗಿಯೂ, ಮಹಾತ್ಮನಾಗಿಯೂ, ಇರುವ ಆ ರಾಮನಿಗೆ, ವಿಭೀಷಣನೆಂಬ ನಾನು ಶರಣಾರ್ಥಿಯಾಗಿ ಬಂದಿರುವೆನೆಂದು ಶೀಘ್ರವಲ್ಲಿಯೇ ತಿಳಿಸಬೇಕು" ಎಂದನು. [1]ಹೀಗೆ ಆ ರಾಕ್ಷಸನು, ತಾನು ರಾಮನಲ್ಲಿ ಮರೆಹೊಗುವುದಾಗಿ ಹೇಳಿದ ಮಾತನ್ನು ಕೇಳಿದೊಡನೆ ಸುಗ್ರೀವನು ಬೆಜ್ಜರಗೊಂಡು, ಶೀಘ್ರಗಮನದಿಂದ ರಾಮನಬಳಿಗೆ ಹೋಗಿ, ಲಕ್ಷ್ಮಣನ ಮುಂದೆ ರಾಮನನ್ನು ಕುರಿತು "ರಾಮಾ! ರಾವಣನಿಗೆ ತಮ್ಮನಾದ ವಿಭೀಷಣನೆಂಬ ರಾಕ್ಷಸನೊಬ್ಬನು, ಬೇರೆ ನಾಲ್ಕುಮಂದಿ ರಾಕ್ಷಸರೊಡಗೂಡಿ, ನಿನ್ನಲ್ಲಿ ತಾನು ಶರಣಾರ್ಥಿಯೆಂದು ಬಂದಿರುವನು. ಇದರ ನಿಜವಾದ ಕಾರಣವೇನೆಂದು ತಿಳಿಯುವುದಕ್ಕಿಲ್ಲ! ಮುಖ್ಯವಾಗಿ ಈಗ ನೀನು, ಮುಂದಿನ ಕಾರ್ಯಾಕಾರ್ಯಗಳನ್ನು ನಿಶ್ಚಯಿಸುವ ಮಂತ್ರಾಲೋಚನೆಯಲ್ಲಿಯೂ, ಸೈನ್ಯಗಳ ವ್ಯೂಹ ನಿರ್ಮಾಣದಲ್ಲಿಯೂ, ಕಾಲೋಚಿತವಾದ ರಾಜನೀತಿಪ್ರಯೋಗದಲ್ಲಿಯೂ, ಶತ್ರು ರಹಸ್ಯಗಳನ್ನು ತಿಳಿದುಬರುವುದಕ್ಕಾಗಿ ಗೂಢಚಾರರನ್ನು ನಿಯಮಿಸುವ ಕಾರ್ಯ

ಇಲ್ಲಿಗೆ ಬಾರದೆ ಲಂಕೆಯಲ್ಲಿಯೇ ಇದ್ದು "ಶರಣು" ಎಂದು ಹೇಳಿದ್ದರೂ, ಆಗ ಶ್ರೀರಾಮನು ತಾನಾಗಿಯೇ ಎಷ್ಟೋ ಶ್ರಮಪಟ್ಟು ಸಮುದ್ರವನ್ನು ದಾಟಬಂದು ನನ್ನನ್ನು ರಕ್ಷಿಸಬೇಕಾಗಿತ್ತಲ್ಲವೇ? ಈಗ ಆ ಶ್ರಮವೂ ಇಲ್ಲದಂತೆ, ತಾನಾಗಿಯೇ ಮುಂದೆ ಬಂದು ನಿಂತಿರುವನೆಂದು ಹೇಳಿರಿ. (ಉಪಸ್ಥಿತಂ ನಿವೇದಯತ) ಹಿಂದೆ ರಾಮನು ತಾನಾಗಿಯೇ ಕಿಷ್ಕಿಂಧೆಯ ಬಳಿಯಲ್ಲಿ ನಿಮ್ಮನ್ನು ಹುಡುಕಿಕೊಂಡು ಬಂದಾಗ "ಜಗ್ಮುರ್ಗಿರಿತಟಾದ್‌-ಸ್ಮಾದನ್ಯಂ ಶಿಖರಮುತ್ತಮಂ" ಎಂಬಂತೆ ಅವನನ್ನು ನೋಡಿ ಭಯಪಟ್ಟು, ಬೆಟ್ಟದಿಂದ ಬೆಟ್ಟಕ್ಕೆ ಹಾರಿಹೋದ ನಿಮ್ಮಹಾಗಲ್ಲದೆ, ನಾನಾಗಿಯೇ ಹುಡುಕಿಕೊಂಡು ಬಂದಿರುವೆನೆಂದು ಅವನಿಗೆ ತಿಳಿಸಿರಿ" ಎಂದು ಭಾವವು. ಇದರಿಂದ ಭಗವತ್ಸಮಾಶ್ರಯಣವನ್ನು ಮಾಡುವವರಿಗೆ ಭಗವದ್ಭಕ್ತರು ತಾವಾಗಿ ಮುಂದುಬಿದ್ದು ಸಹಾಯಕರಾಗಿ ಬರಬೇಕೆಂಬರ್ಥವು ಪ್ರತಿಪಾದಿತವಾಗುವುದು (ತನಿಶ್ಲೋಕಿ).

1. ಇಲ್ಲಿ "ಏತತ್ತು ವಚನಂ ಶ್ರುತ್ವಾ ಸುಗ್ರೀವೋ ಲಘುವಿಕ್ರಮಃ। ಲಕ್ಷ್ಮಣಸ್ಯಾಗ್ರತೋ ರಾಮಂ ಸಂರಬ್ಧಮಿದಮಬ್ರವೀತ್" ಎಂದು ಮೂಲವು. ವಿಶೇಷಾರ್ಥವು:— (ಏತತ್ತು ವಚನಂ ಶ್ರುತ್ವಾ) ಈ ಮಾತನ್ನು ಕೇಳಿದಮೇಲೆ (ಸುಗ್ರೀವೋ ಲಘುವಿಕ್ರಮಃ) ಸುಗ್ರೀವನು ಬಹಳ ಚುರುಕಾದ ನಡೆಯುಳ್ಳವನಾಗಿ, ಎಂದರೆ, ಈ ವಿಭೀಷಣನು "ಶರಣು" ಎಂದು ಹೇಳಿದ ಮಾತು ರಾಮನ ಕಿವಿಗೆ ಬಿದ್ದುದಾದರೆ, ಆಮೇಲೆ ಈ ರಾಕ್ಷಸನನ್ನು ಬಿಡಿಸುವುದಕ್ಕೆ ಹೇಗೂ ಸಾಧ್ಯವಲ್ಲ! ಆ ಮಾತು ರಾಮನ ಕಿವಿಗೆ ಬೀಳುವುದಕ್ಕೆ ಮೊದಲೇ ಇವನಿಗೆ ಅವನಲ್ಲಿ ದ್ವೇಷಬುದ್ಧಿಯನ್ನು ಹುಟ್ಟಿಸಬೇಕೆಂದು ತಟ್ಟನೆ

ದಲ್ಲಿಯೂ, ನಮ್ಮ ಕಡೆಯ ವಾನರರ ವಿಷಯವಾಗಿಯಾಗಲಿ, ನಮಗೆ ಶತ್ರು ಗಳಾದ ರಾಕ್ಷಸರ ವಿಷಯವಾಗಿಯಾಗಲಿ ಬಹಳ ಎಚ್ಚರಿಕೆಯಿಂದಿರಬೇಕು. ಹೀಗಿದ್ದರೆ ಮಾತ್ರವೇ ನಿನಗೆ ಮುಂದೆ ಕ್ಷೇಮವುಂಟು. ಇಲ್ಲಿನ ರಾಕ್ಷಸರು ಕಾಮರೂಪಿ ಗಳಾದುದರಿಂದ, ಕಣ್ಮರೆಯಾಗಿಯೇ ಸಂಚರಿಸುತ್ತಿರುವರು. ಕಪಟೋಪಾಯ ಗಳನ್ನು ಚೆನ್ನಾಗಿ ಬಲ್ಲರು! ಮೋಸದಲ್ಲಿ ಮಹಾ ನಿಪುಣರು! ಇವರಲ್ಲಿ ಮಾತ್ರ ಯಾವಾಗಲೂ ನಂಬಿಕೆಯನ್ನಿಡಬಾರದು. ಇದರಮೇಲೆ ಈತನು ಆ ರಾವಣನಿಗೆ ಗೂಢಚಾರನಾಗಿದ್ದರೂ ಇರಬಹುದು. "ಶತ್ರು ಪಕ್ಷದವರನ್ನು ಕೈಸೇರಿಸಿಕೊಳ್ಳುವು ದರಿಂದ ನಮ್ಮ ಬಲವು ಹೆಚ್ಚುವುದಲ್ಲವೆ ?" ಎಂದು ನೀನು ಕೇಳಬಹುದು. ಹಾಗೆ ನಂಬಲೇಬಾರದು. ಇವನು ನಮಗೆ ಅನುಕೂಲನಂತೆ ಮೇಲೆಮೇಲೆ ನಟಿಸುತ್ತ, ನಮ್ಮಲ್ಲಿ ಒಳಹೊಕ್ಕು, ಸಮಯವನ್ನು ನೋಡಿ ನಮ್ಮೊಳಗೇ ಒಳಜಗಳವನ್ನು ತಂದಿಡಬಹುದು. ಇದರಲ್ಲಿ ಸಂದೇಹವಿಲ್ಲ. ಇವನು ನಮ್ಮನ್ನು ವಂಚಿಸುವುದಕ್ಕಾಗಿಯೇ ಬಂದಿರುವನು. "ನಮ್ಮಲ್ಲಿ ಪೂರ್ಣವಾದ ಪರಸ್ಪರಾನುರಾಗವಿರುವಾಗ ಈತನಿಗೆ ಆ ಭೇದೋಪಾಯವು ಸಾಧ್ಯವೇ ?" ಎಂದು ಕೇಳುವೆಯಾ ? ರಾಮಾ ! ಈತನು ಒಂದು ವೇಳೆ ನಮ್ಮಲ್ಲಿ ಬುದ್ಧಿ ಭೇದವನ್ನು ಹುಟ್ಟಿಸಲಾರದೆ ಹೋದರೂ, ನಾವು ಇವನಲ್ಲಿ

ರಾಮನ ಬಳಿಗೆ ಹೋಪುದಾಗಿ ಭಾವವು. (ಲಕ್ಷ್ಮಣಸ್ಯಾಗ್ರತಃ) ತನ್ನಂತೆಯೇ ರಾಮ ನಲ್ಲಿ ಪ್ರೇಮವುಳ್ಳ ಲಕ್ಷ್ಮಣನನ್ನೂ ಮುಂದಿಟ್ಟುಕೊಂಡು, "ಅತಿಸ್ನೇಹಃ ಪಾಪಶಂಕೀ" ಎಂಬ ನ್ಯಾಯದಿಂದ ರಾಮನಿಗೆ ವಿಭೀಷಣನಿಂದ ಏನಾದರೂ ಅಪಾಯವುಂಟಾಗಬಹು ದೆಂದು ತಾನು ಶಂಕಿಸುವಂತೆ, ಲಕ್ಷ್ಮಣನಿಗೂ ಆ ಶಂಕೆಯಿರುವುದು ಸಹಜವಾದುದರಿಂದ, ಅವನನ್ನೇ ತನ್ನ ಸಹಾಯಕ್ಕಿಟ್ಟುಕೊಂಡನೆಂದು ಭಾವವು. ಲಕ್ಷ್ಮಣನಿಗೆ ಯಾವಾಗಲೂ ಈ ವಿಧವಾದ ಶಂಕೆಯುಂಟೆಂಬುದಕ್ಕೆ, ಹಿಂದೆ ಇವನು ರಾಮನಲ್ಲಿರುವ ಪ್ರೇಮಾತಿ ಶಯದಿಂದ ಭರತನ ವಿಷಯವಾಗಿ "ಭರತಸ್ಯ ವಧೇ ದೋಷಂ ನಾಹಂ ಪಶ್ಯಾಮಿ" ಭರತ ನನ್ನು ಕೊಲ್ಲುವುದರಲ್ಲಿ ನನಗೆ ದೋಷವೇನೂ ತೋರಲಿಲ್ಲ" ವೆಂದು ಹೇಳಿರುವನು. ಇಲ್ಲಿ ವಿಭೀಷಣನಲ್ಲಿ ನಿಷ್ಕಾರಣ ಭಯಶಂಕಿತನಾದ ಸುಗ್ರೀವನೂ ತನಗೆ ಸಮಾನ ಸ್ವಭಾವವುಳ್ಳ ಲಕ್ಷ್ಮಣನನ್ನೇ ತನ್ನ ಸಹಾಯಕ್ಕೆ ಕರೆತಂದನೆಂದು ಭಾವವು. (ರಾಮಂ) "ರಾಘವಂ ಶರಣಂ ಗತಃ" ಎಂಬ ಮಾತನ್ನು ಕೇಳಿದಾಗಲೇ ಸಂತೋಷದಿಂದ ಅಭಿರಾಮ ಸ್ವರೂಪವುಳ್ಳ ರಾಮನನ್ನು (ಸಂರಬ್ಧಂ) ತನ್ನ ಪ್ರಭುವಾದರೂ ತನ್ನ ಮಾತನ್ನು ಮೀರಿ ಹೋಗದಂತೆ ಮುಂದುಬಿದ್ದು, (ಇದಮುಬ್ರವೀತ್) ಈಗ ಬಂದವನು ಶತ್ರುವೇ ಅಥವಾ ಮಿತ್ರನೇ ? ಎಂದು ಸಂದೇಹಿಸಿ ನಿರ್ಣಯಿಸುವುದಕ್ಕೂ ಅವಕಾಶಕೊಡದೆ ಶತ್ರುವೆಂದೇ ನಿಶ್ಚಯಿಸಿ ಹೇಳಿದನೆಂದು ಭಾವವು (ತನಿಶ್ಲೋಕಿ)

*

ಪೂರ್ಣವಾದ ನಂಬಿಕೆಯನ್ನು ತೋರಿಸುವವರೆಗೂ ನಮ್ಮೊಡನೆ ಸ್ನೇಹವನ್ನೇ ನಟಿಸುತಿದ್ದು, ನಮಗೆ ನಂಬಿಕೆಯು ಹುಟ್ಟಿದಮೇಲೆ, ಸಮಯವನ್ನು ನೋಡಿ, ಇಲ್ಲಿ ಇವನೇ ತನ್ನ ಬುದ್ಧಿಚಾತುರ್ಯದಿಂದ ನಮ್ಮನ್ನು ಕೊಂದರೂ ಕೊಲ್ಲಬಹುದು. "ರಾಜರಿಗಿರಬೇಕಾದ ಆರು ಬಗೆಯ ಬಲಗಳಲ್ಲಿ ಶತ್ರುಬಲವೂ ಒಂದು ಮುಖ್ಯಬಲ ವೆಂದು ರಾಜನೀತಿಯಲ್ಲವೇ ? " ಎಂದು ನಿನಗೆ ಆಸೆಯಿರಬಹುದು. ಹಾಗಲ್ಲ! ಶತ್ರು ಜಯಕ್ಕೆ ಸಾಧನಗಳಾದ ಆರು ಬಗೆಯ ಬಲಗಳಲ್ಲಿ, ಮಿತ್ರಬಲವನ್ನಾಗಲಿ, ಆಟವಿಕ ಬಲವನ್ನಾಗಲಿ, ಮೂಲಬಲವನ್ನಾಗಲಿ, ಭೃತ್ಯಬಲವನ್ನಾಗಲಿ, ಬೇರೆ ಯಾವ ವಿಧವಾದ ಬಲವನ್ನಾಗಲಿ ನಂಬಬಹುದೇ ಹೊರತು ಶತ್ರುಸಂಬಂಧವಾದ ಬಲವನ್ನು ಮಾತ್ರ ತಟ್ಟನೆ ಕೈಸೇರಿಸಿಕೊಳ್ಳಬಾರದು. ಈತನು ಶತ್ರುಬಲಕ್ಕೆ ಸೇರಿದವನಾದುದ ರಿಂದ ತ್ಯಾಜ್ಯನೇ ಹೊರತು ಎಂದಿಗೂ ಗ್ರಾಹ್ಯನಲ್ಲ. ಇದರಮೇಲೆ ಈತನು ಸಾಮಾನ್ಯವಾಗಿ ಶತ್ರುಪಕ್ಷದವನೆಂಬುದು ಮಾತ್ರವೇ ಅಲ್ಲ. ಸಹಜವಾಗಿಯೇ ಕ್ರೂರಸ್ವಭಾವವುಳ್ಳ ರಾಕ್ಷಸಕುಲದವನು. ನಿನ್ನ ಶತ್ರುವಾದ ರಾವಣನಿಗೆ ಒಡ ಹುಟ್ಟಿದ ತಮ್ಮನು. ಇವನ ಬಾಯಿಂದಲೇ ನಾವು ಈ ಮಾತನ್ನು ಕೇಳಿರುವೆವು. ಆದರೆ "ನೀನೂ ಅಣ್ಣನನ್ನು ಬಿಟ್ಟುಬಂದು ನನ್ನಲ್ಲಿ ಸೇರಿದವನಲ್ಲವೆ"? ಎಂದು ನೀನು ನನ್ನನ್ನು ಕೇಳಬಹುದು. ರಾಮಾ ! ನನ್ನ ಸಂಗತಿಯೇ ಬೇರೆ ! ಮೊದಲೇ ನನ್ನಣ್ಣನು ನನ್ನನ್ನು ರಾಜ್ಯದಿಂದೋಡಿಸಿಬಿಟ್ಟನು. ಮೊದಲಿಂದಲೂ ನಮ್ಮಿಬ್ಬರಿಗೆ ಪರಸ್ಪರ ವೈರವೇ ಬಹಳವಾಗಿ ಬೆಳೆದುಹೋಗಿದ್ದಿತು. ಈ ರಾಕ್ಷಸನ ಸಂಗತಿಯು ಹಾಗಲ್ಲ. ಈತನು ಈಗಲೇ ನಿನ್ನ ಶತ್ರುವಿನ ಸಮೀಪವನ್ನು ತಾನಾಗಿ ಬಿಟ್ಟುಬಂದುದಾಗಿ ಹೇಳುತ್ತಿರುವನು. ಹೀಗಿರುವಾಗ ಅವನಲ್ಲಿ ನಾವು ಹೇಗೆ ವಿಶ್ವಾಸವನ್ನಿಡಬಹುದು ? "ಹೇಗಿದ್ದರೂ ಶರಣಾರ್ಥಿಯಾಗಿ ಬಂದವನನ್ನು ಪರಿತ್ಯಜಿಸಬಹುದೆ ?" ಎಂದು ನೀನು ಕೇಳುವೆಯಾ ? ಈತನು ನಿಜವಾಗಿ ನಮ್ಮಲ್ಲಿ ಶರಣಾರ್ಥಿಯಾಗಿ ಬಂದವನಲ್ಲ. ರಾವಣನಿಗೆ ಗೂಢಚಾರನಾಗಿ ನಮ್ಮನ್ನು ವಂಚಿಸುವುದಕ್ಕಾಗಿಯೇ ಬಂದಿರುವನು. ಇವನ ವಿನಯಾದಿಗಳೆಲ್ಲವೂ ಕೇವಲ ನಟನೆಯೆಂಬುದರಲ್ಲಿ ಸಂದೇಹವಿಲ್ಲ. ನೀನು ಯುಕ್ತಕಾರ್ಯಗಳನ್ನು ಚೆನ್ನಾಗಿ ಆಲೋಚಿಸತಕ್ಕವನು. ನಾನಾಗಿ ನಿನಗೆ ಹೇಳಿ ತಿಳಿಸ ಬೇಕಾದುದೇನೂ ಇಲ್ಲ. ಈಗ ನನಗೆ ತೋರಿರುವುದೇನೆಂದರೆ, ಇವನನ್ನು ಇಲ್ಲಿಯೇ ನಿಗ್ರಹಿಸಿಬಿಡುವುದೇ ಮೇಲು ! "ಚಾರನಾಗಿ ಬಂದವನನ್ನು ಕೊಲ್ಲುವುದು ಯುಕ್ತವೆ?" ಎಂದು ನೀನು ಶಂಕಿಸಬಹುದು. ಈತನು ಕೇವಲ ಚಾರನಾಗಿ ಇಲ್ಲಿನ

ಸಂಗತಿಯನ್ನು ತಿಳಿದುಕೊಂಡು ಹೋಗುವುದಕ್ಕೆ ಮಾತ್ರವೇ ಬಂದುದಾಗಿ ತೋರಲಿಲ್ಲ. ರಾಕ್ಷಸರಿಗೆ ಸಹಜವಾದ ಕುಟಿಲಬುದ್ಧಿಯಿಂದ ರಾವಣನ ಪ್ರೇರಣೆಯ ಮೇಲೆ ನಮ್ಮನ್ನು ಮೋಸದಿಂದ ಕೊಲ್ಲುವುದಕ್ಕಾಗಿಯೇ ಬಂದಿರುವನು. ನೀನು ಇವನ ಮಾಯೆಯನ್ನರಿಯದೆ ಈತನಲ್ಲಿ ವಿಶ್ವಾಸವನ್ನು ತೋರಿಸುತ್ತಿದ್ದರೆ ಈತನು ನಮ್ಮೆಲ್ಲರನ್ನೂ ಕೊಲ್ಲುವುದೇ ನಿಜವು. "ಒಂದುವೇಳೆ ಅವನಲ್ಲಿ ಕಪಟಸ್ನೇಹದ ಸೂಚನೆಯು ಕಂಡುಬಂದರೆ ಆಗ ನಾವೇ ಮೊದಲು ಅವನನ್ನು ಕೊಲ್ಲಬಾರದೆ ? ಎಂದು ನೀನು ಹೇಳಬಹುದು. ಅದನ್ನು ಕಂಡುಕೊಳ್ಳುವುದಕ್ಕೂ ನಮಗೆ ಸಾಧ್ಯವಲ್ಲ. ಬುದ್ಧಿಶಾಲಿಯಾದವನು ತನ್ನ ಶತ್ರುಸೈನ್ಯವನ್ನು ಪ್ರವೇಶಿಸಿರುವಾಗಲೂ, ಅವರಿಗೆ ತನ್ನಲ್ಲಿ ಸ್ವಲ್ಪವೂ ಸಂದೇಹವುಂಟಾಗದಂತೆ, ಸ್ನೇಹಭಾವವನ್ನೇ ನಟಿಸುತ್ತಿದ್ದು, ಎಂದಾದರೂ ಒಮ್ಮೆ ಅವಕಾಶವನ್ನು ಪಡೆದು ಅವರೆಲ್ಲರನ್ನೂ ಕೊಂದುಬಿಡುವನು. ಈ ಸಂರ್ಭದಲ್ಲಿ ಅವನು ತಾನು ಏಕಾಕಿಯಾಗಿದ್ದರೂ, ಕಾಗೆಯು, ಹಗಲಲ್ಲಿ ಗೂಬೆಗಳ ಗುಂಪನ್ನು ನುಗ್ಗಿ ಕೊಲ್ಲುವಂತೆ, ತಾನೊಬ್ಬನೇ ಸಮಸ್ತಸೈನ್ಯಗಳನ್ನೂ ಧ್ವಂಸಮಾಡಬಲ್ಲನು. ಆದುದರಿಂದ "ರಾಮಾ ! ಈತನನ್ನು ಈಗಲೇ ಕೊಂದು ಬಿಡಬೇಕು. ಒಂದುವೇಳೆ ಈಗ ನೀನು ಇವನನ್ನು ಕೊಲ್ಲದೆ ಬೇರೆವಿಧದಿಂದ ಭಂಗ ಪಡಿಸಿ ಓಡಿಸಿಬಿಟ್ಟರೂ ಮಾರೀಚನಂತೆ ಇವನು ಮುಂದೆಯಾದರೂ ನಮಗೆ ಅನರ್ಥವನ್ನೇ ತರುವನು. ಮತ್ತು ನೀನು ವಾಲಿಯನ್ನು ಕೊಂದಂತೆ ಇವನನ್ನು ಒಂದು ಬಾಣದಿಂದ ಕೊಂದರೂ ನನಗೆ ತೃಪ್ತಿಯಿಲ್ಲ. ಅತಿಕ್ರೂರದಂಡನೆಯಿಂದ ಇವನನ್ನೂ, ಇವನ ಮಂತ್ರಿಗಳನ್ನೂ ಚಿತ್ರವಧೆಮಾಡಿ ಕೊಲ್ಲಬೇಕು. ಇವನು ನಮಗೆ ಸಾಮಾನ್ಯವಾದ ಶತ್ರುವಲ್ಲ. ಈ ವಿಭೀಷಣನು ಪರಮಘಾತುಕನಾದ ಆ ರಾವಣನಿಗೆ ಸಾಕ್ಷಾತ್ಸಹೋದರನಲ್ಲವೆ !" ಎಂದನು. ವಾನರಪ್ರಭುವಾದ ಸುಗ್ರೀವನು ಚೆನ್ನಾಗಿ ಮಾತುಬಲ್ಲವನಾದುದರಿಂದ, ವಾಕ್ಯಕುಶಲನಾದ ಆ ರಾಮನಿಗೂ ಮುಂದಿನ ಮಾತಿಗೆ ಅವಕಾಶವಿಲ್ಲದಂತೆ, ತಕ್ಕ ಸಮಾಧಾನಗಳಿಂದ ತನ್ನ ಸಿದ್ಧಾಂತ ವನ್ನು ಸ್ಥಾಪಿಸಿ ಸುಮ್ಮನಾದನು. ಮಹಾಯಶಸ್ವಿಯಾದ ರಾಮನಾದರೋ ಈ ಸುಗ್ರೀವನ ವಾಕ್ಯವನ್ನು ಕೇಳಿದಮೇಲೆ, ತನ್ನ ಸಮೀಪದಲ್ಲಿ ಹನುಮಂತನೇ ಮೊದಲಾದ ವಾನರಪ್ರಮುಖರನ್ನು ಕುರಿತು, "ಎಲೈ ವಾನರರೆ ! ನಿಮ್ಮ ಪ್ರಭು ವಾದ ಸುಗ್ರೀವನು ರಾವಣನ ತಮ್ಮನಾದ ಆ ವಿಭೀಷಣನ ವಿಷಯವಾಗಿ ಅತ್ಯಂತ ಯುಕ್ತಿಯುಕ್ತವಾಗಿರುವಂತೆ ಹೇಳಿದ ಮಾತುಗಳನ್ನು ನೀವೆಲ್ಲರೂ ಕೇಳಿದಿರಷ್ಟೆ ?

ಈ ವಿಷಯದಲ್ಲಿ ನಿಮ್ಮ ಅಭಿಪ್ರಾಯವೇನೆಂದೂ ತಿಳಿಯಬೇಕಾಗಿದೆ. ಆದರೆ ನೀವು ನಮ್ಮಿಬ್ಬರಿಗೂ ಪರತಂತ್ರರಾಗಿರುವುದರಿಂದ, ನಮ್ಮಿಬ್ಬರಲ್ಲಿ ಯಾರ ಪಕ್ಷವನ್ನು ಹಿಡಿದು ಮಾತಾಡಬೇಕೆಂದು ಸಂದೇಹಿಸಬೇಕಾದುದಿಲ್ಲ. ಒಬ್ಬನಿಗೆ ಬಹಳಮಂದಿ ಸುಹೃತ್ತುಗಳಿದ್ದರೆ, ಅವರಲ್ಲಿ ಒಬ್ಬನು ಹೇಳಿದ ಮಾತನ್ನು ಕೇಳಿ ಮತ್ತೊಬ್ಬನು, ಆ ಅಭಿಪ್ರಾಯವು ತನಗಿಷ್ಟವಿಲ್ಲದಿದ್ದರೂ, ಆ ಸ್ನೇಹಿತನ ಮುಖೋಲ್ಲಾಸಕ್ಕಾಗಿ, ಮಾತಾಡದೆ ಸುಮ್ಮನಿರಬಾರದು! [1]ಇಂತಹ ಕಾರ್ಯಸಂಕಟಗಳು ಬಂದೊದಗಿದಾಗ, ಯುಕ್ತಾಯುಕ್ತ ವಿವೇಚನೆಯುಳ್ಳವನಾಗಿಯೂ, ಬುದ್ಧಿಶಾಲಿಯಾಗಿಯೂ ಮಾತಿನಲ್ಲಿ ಸಮರ್ಥನಾಗಿಯೂ ಇರುವ ಮಿತ್ರನು, ನಿಜವಾಗಿ ತನ್ನ ಮಿತ್ರನಿಗೆ ಶಾಶ್ವತವಾದ ಶ್ರೇಯಸ್ಸನ್ನು ಕೋರುವನಾದರೆ, ಅವನಿಗೆ ಕಾಲೋಚಿತವಾದ ಬುದ್ಧಿವಾದವನ್ನು ಹೇಳಿಯೇ ತೀರಬೇಕು" ಎಂದನು. ಹೀಗೆ ರಾಮನು ನಯವಾಕ್ಯದಿಂದ ಅಲ್ಲಿನ ವಾನರರನ್ನು ಪ್ರಶ್ನೆಮಾಡಲು, ರಾಮಕಾರ್ಯದಲ್ಲಿ ಬಹಳ ಎಚ್ಚರಿಕೆಯುಳ್ಳವರಾಗಿಯೂ, ಮನಃಪೂರ್ವಕವಾಗಿ ರಾಮನಿಗೆ ಹಿತವನ್ನು ಬಯಸತಕ್ಕವರಾಗಿಯೂ, ಇದ್ದ ಆ ವಾನರರಲ್ಲಿ, [2]ಒಬ್ಬೊಬ್ಬರೂ ತಮ್ಮ ತಮ್ಮ ಅಭಿಪ್ರಾಯ

---

1. ಇಲ್ಲಿನ ಕಾರ್ಯಸಂಕಟವೇನೆಂದರೆ:—ಅತ್ತಲಾಗಿ ವಿಭೀಷಣನು ತನ್ನಲ್ಲಿ ಶರಣಾಗತನಾಗಿ ಬಂದು ತನ್ನಾಶ್ರಯವನ್ನು ಪ್ರಾರ್ಥಿಸುತ್ತಿರುವನು. ಇತ್ತಲಾಗಿ ಸುಗ್ರೀವನು "ತಸ್ಯಾಹಂ ನಿಗ್ರಹಂ ಮನ್ಯೇ" ಎಂದು ಆತನನ್ನು ನಿಗ್ರಹಿಸಲೇಬೇಕೆಂದು ನಿರ್ಬಂಧಿಸುತ್ತಿರುವನು. ಇದೇ ಇಲ್ಲಿನ ಕಾರ್ಯಸಂಕಟವು. ಈ ಶ್ಲೋಕಾರ್ಥದಿಂದ ಭಗವಂತನಿಗೆ ಆಶ್ರಿತರಾದವರು ತನ್ನ ಇಚ್ಛೆಯನ್ನನುವರ್ತಿಸದೆ ವಿರೋಧವನ್ನು ಹುಟ್ಟಿಸಿದರೂ, ಅವರಿಂದಲೇ ಅದನ್ನು ಪರಿಹಾರಮಾಡಿಸಬೇಕೆಂಬ ಆಶ್ರಿತ ಪಾರತಂತ್ರ್ಯವು ಸೂಚಿಸಲ್ಪಡುವುದು.

2. ಇಲ್ಲಿ "ಅಜ್ಞಾತಂ ನಾಸ್ತಿ ತೇ ಕಿಂಚಿತ್ತ್ರಿಷು ಲೋಕೇಷು ರಾಘವ। ಆತ್ಮಾನಂ ಸೂಚಯನ್ ರಾಮ ಪೃಚ್ಛಸ್ಯಸ್ಮಾನ್ ಸುಹೃತ್ತಯಾ" ಎಂದು ಮೂಲವು. "ನೀನು ಸರ್ವಜ್ಞನಾಗಿದ್ದರೂ ಈಗ ನಮ್ಮನ್ನು ಪ್ರಶ್ನೆಮಾಡುವುದು, ನಿನ್ನಲ್ಲಿರುವ ಆಶ್ರಿತಪಾರತಂತ್ರ್ಯವೆಂಬ ಮಹಾತಿಶಯವನ್ನು ಲೋಕಕ್ಕೆ ತೋರಿಸುವುದಕ್ಕಾಗಿಯೇ ಹೊರತು ಬೇರೆಯಲ್ಲ"ವೆಂದು ಇದರ ಮುಖ್ಯಾರ್ಥವು. ಇಲ್ಲಿ "ಆತ್ಮಾನಂ ಪೂಜಯನ್" ಎಂಬ ಪಾಠಾಂತರವೂ ಉಂಟು. ಆ ಪಾಠದಲ್ಲಿ "ಆತ್ಮಾನಂ" ಎಂಬ ಏಕವಚನವು ಪ್ರತ್ಯೇಕಾರ್ಥವಾಚಕವು. ಆದುದರಿಂದ "ನಮ್ಮಲ್ಲಿ ಒಬ್ಬೊಬ್ಬನನ್ನೂ ಬೇರೆಬೇರೆಯಾಗಿ ಗೌರವಿಸಬೇಕೆಂಬ ಅಭಿಪ್ರಾಯದಿಂದಲೇ ನೀನು ಹೀಗೆ ಕೇಳುತ್ತಿರುವೆ" ಯೆಂದು ಅದರ ಭಾವವು. ಅಥವಾ (ಆತ್ಮಾನಂ) ಆತ್ಮಸ್ವಭಾವವನ್ನು ಎಂದರೆ, ರಾಜನೀತಿಯನ್ನು (ಪೂಜಯನ್) ಪರಿಪಾಲಿಸುವುದಕ್ಕಾಗಿಯೇ ನಮ್ಮನ್ನು ಹೀಗೆ ಕೇಳುವೆಯೆಂದೂ ಅರ್ಥಾಂತರವನ್ನು ಹೇಳಬಹುದು.

ವನ್ನು ಹೇಳತೊಡಗಿದರು. “ ರಾಮಾ ! ಈ ಮೂರು ಲೋಕಗಳಲ್ಲಿಯೂ ನಿನಗೆ ತಿಳಿಯದುದೊಂದೂ ಇಲ್ಲ. ನೀನು ಸರ್ವಜ್ಞನಾಗಿದ್ದರೂ ಕೇವಲ ವಾನರರಿಗೂ ನೀನು ಸುಹೃತ್ತೆಂಬ ಕೀರ್ತಿಯನ್ನು ಲೋಕದಲ್ಲಿ ಪ್ರಕಟಿಸುವುದಕ್ಕಾಗಿಯೇ ನಮ್ಮನ್ನು ಹೀಗೆ ಪ್ರಶ್ನೆಮಾಡುತ್ತಿರುವೆ. ನೀನಾದರೋ ಶರಣಾಗತರಕ್ಷಣವೆಂಬ ವ್ರತವನ್ನು ದೃಢವಾಗಿ ಹಿಡಿದವನು. ಆ ವ್ರತಕ್ಕೆ ಎಂತಹ ಮಹಾವಿಘ್ನಗಳು ಬಂದರೂ ಅವುಗಳನ್ನು ನಿವಾರಿಸತಕ್ಕ ಅಸಾಧಾರಣ ಶೌರ್ಯವುಳ್ಳವನು. ಪರಮಧಾರ್ಮಿಕನು. ದೃಢಪರಾಕ್ರಮವುಳ್ಳವನು. ಕಾರ್ಯಾಕಾರ್ಯಗಳನ್ನು ವಿಮರ್ಶಿಸಿ ನಡೆಸತಕ್ಕವನು. ಅಸಾಧಾರಣವಾದ ಸ್ಮರಣಶಕ್ತಿಯುಳ್ಳವನು. ಸರ್ವಸಮರ್ಥನಾಗಿದ್ದರೂ ಮಿತ್ರರಿಗ ಧೀನವಾದ ಮನಸ್ಸುಳ್ಳವನು. ಹೀಗೆ ನಿನ್ನಲ್ಲಿರುವ ಆಶ್ರಿತಪಾರತಂತ್ರ್ಯದಿಂದ ನಮ್ಮ ಮಾತಿನಂತೆಯೇ ನಡೆಯಬೇಕೆಂದು ನಿನಗೆ ಅಭಿಪ್ರಾಯವಿದ್ದಪಕ್ಷದಲ್ಲಿ, ಇಲ್ಲಿ ನಿನ್ನ ಮಂತ್ರಿಗಳೊಬ್ಬೊಬ್ಬರೂ ತಮ್ಮ ತಮ್ಮ ಅಭಿಪ್ರಾಯಗಳನ್ನು ಬೇರೆ ಬೇರೆ ಯಾಗಿ ತಿಳಿಸಲಿ ! ಇವರೆಲ್ಲರೂ ಬುದ್ಧಿಶಾಲಿಗಳಾಗಿಯೂ, ಮಾತಿನಲ್ಲಿ ಸಮರ್ಥ ರಾಗಿಯೂ ಇರುವುದರಿಂದ, ಒಬ್ಬೊಬ್ಬರೂ ಕ್ರಮವಾಗಿ ತಮತಮಗೆ ತೋರಿದ ಮತವನ್ನು ಸಕಾರಣವಾಗಿ ನಿರೂಪಿಸಿ ಹೇಳಲಿ !” ಎಂದರು. ಹೀಗೆ ವಾನರರು ಹೇಳಿದುದನ್ನು ಕೇಳಿ, ಬುದ್ಧಿಶಾಲಿಯಾದ ಅಂಗದನು ಸುಗ್ರೀವನಿಂದೀಚೆಗೆ ತಾನು ಯುವರಾಜನೆನಿಸಿ ವಾನರರಿಗೆ ಪ್ರಧಾನನಾದುದರಿಂದ, ವಿಭೀಷಣನ ವಿಷಯವಾದ ಗುಣದೋಷಗಳನ್ನು ವಿಮರ್ಶಿಸುವುದಕ್ಕಾಗಿ ತಾನೇ ಮೊದಲು ರಾಮನನ್ನು ಕುರಿತು, “ ಶತ್ರುವಿನ ಕಡೆಯಿಂದ ಬಂದಿರುವುದರಿಂದ ಅವನ ವಿಷಯವಾಗಿ ನಾವು ಶಂಕಿಸ ಬೇಕಾದುದೇ ಯುಕ್ತವು. ಹೇಗಿದ್ದರೂ ಈತನನ್ನು ಪರೀಕ್ಷಿಸದೆ ಇವನು ಬಂದೊಡನೆ ನಾವು ನಂಬಿಕೆಯನ್ನು ತೋರಿಸಿಬಿಡಬಾರದು. ಇಂತವರನ್ನು ನಂಬಿಬಿಟ್ಟರೆ ಮುಂದೆ ಅನರ್ಥವೇ ಸಂಭವಿಸುವುದು. ಏಕೆಂದರೆ, ಕುಟಿಲಬುದ್ಧಿಯುಳ್ಳವರು ಶತ್ರುಗಳನ್ನು ಕೊಲ್ಲುವುದಕ್ಕಾಗಿಯೇ ಅವರಲ್ಲಿ ಒಳಹೊಕ್ಕು, ತಮ್ಮ ಅಭಿಪ್ರಾಯವನ್ನು ಯಾವ ವಿಧದಿಂದಲೂ ಹೊರಕ್ಕೆ ಕಾಣಿಸದೆ, ತಮ್ಮ ಇಂಗಿತಗಳನ್ನೂ ಮರೆಸಿಟ್ಟುಕೊಂಡು, ಸಮಯವನ್ನು ನಿರೀಕ್ಷಿಸುತ್ತಿರುವನು. ತನಗೆ ಸರಿಯಾದ ಅವಕಾಶವು ದೊರೆ ಯುವವರೆಗೂ ಬಹಳ ನಂಬಿಕೆಯನ್ನೇ ತೋರಿಸುತ್ತಿರುವರು. ನಾವು ಎಚ್ಚರತಪ್ಪಿದ ಸಮಯವನ್ನು ನೋಡಿ ಮೇಲೆಬಿದ್ದು ಕೊಲ್ಲುವರು. ಯಾವ ಮನುಷ್ಯನ ನ್ನಾದರೂ ಪರೀಕ್ಷಿಸದೆ ಅವನಲ್ಲಿ ನಂಬಿಕೆಯನ್ನು ತೋರಿಸುವುದರಿಂದ ಬಹಳ

ದೊಡ್ಡ ಅನರ್ಥವುಂಟು. ಇದಲ್ಲದೆ, ಯಾವ ಕಾರ್ಯವನ್ನು ನಡೆಸಬೇಕಾಗಿದ್ದರೂ ಅದರಿಂದುಂಟಾಗಬಹುದಾದ ಗುಣದೋಷಗಳನ್ನು ಮೊದಲೇ ಪರ್ಯಾಲೋಚಿಸಿ, ಆಮೇಲೆ “ಅದನ್ನು ತ್ಯಜಿಸಬೇಕೆ? ಪರಿಗ್ರಹಿಸಬೇಕೆ?” ಎಂಬುದನ್ನು ನಿಶ್ಚಯಿಸಿ ಕೊಳ್ಳಬೇಕೇ ಹೊರತು ಹಿಂದುಮುಂದು ನೋಡದೆ ಪರಿಗ್ರಹಿಸಲೂ ಬಾರದು, ತ್ಯಜಿಸಲೂ ಬಾರದು. ಗುಣವುಂಟೆಂಬ ನಿಶ್ಚಯವು ತೋರಿದರೆ ಅವಶ್ಯವಾಗಿ ಅಂಗೀಕರಿಸಬೇಕು. ದೋಷವುಂಟೆಂದು ತಿಳಿದಾಗ ತ್ಯಜಿಸಬೇಕು. ಆದರೆ ಯಾವ ವಿಷಯದಲ್ಲಿಯಾಗಲಿ, ಸರ್ವಪ್ರಕಾರದಿಂದಲೂ ಗುಣವೇ ತುಂಬಿರುವುದೆಂದಾಗಲಿ, ಸಂಪೂರ್ಣವಾಗಿ ದೋಷವೇ ಇರುವುದೆಂದಾಗಲಿ ಹೇಳುವುದಕ್ಕಿಲ್ಲ. ಯಾವ ಮನುಷ್ಯನಲ್ಲಿಯಾದರೂ ಗುಣದೋಷಗಳೆರಡೂ ಕಲೆತೇ ಇರುವುವು. ಹೀಗಿರುವಾಗ “ಯಾರನ್ನಂಗೀಕರಿಸಬಹುದು? ಯಾರನ್ನು ಬಿಡಬಹುದು!” ಎಂದು ನೀನು ಕೇಳ ಬಹುದು. ಎಲೈ ಮಹಾರಾಜನೇ! ಇಂತಹ ಸಂದರ್ಭಗಳಲ್ಲಿ ಗುಣದೋಷಗಳಲ್ಲಿ ಯಾವುದು ಹೆಚ್ಚೆಂಬುದನ್ನು ಮಾತ್ರವೇ ನಾವು ನೋಡಬೇಕು. ಹಾಗೆಯೇ ಈ ವಿಭೀಷಣನಲ್ಲಿಯೂ ದೋಷವೇ ಹೆಚ್ಚೆಂದು ತೋರಿದರೆ, ಅವನನ್ನು ನಿಸ್ಸಂದೇಹವಾಗಿ ತ್ಯಜಿಸಬೇಕು. ಹಾಗಲ್ಲದೆ ಗುಣಗಳೇ ಹೆಚ್ಚಾಗಿರುವುದೆಂದು ತೋರಿದರೆ ಅಂಗೀ ಕರಿಸಬಹುದು. ಆದುದರಿಂದ ಈತನನ್ನು ಕರೆಸಿಕೊಂಡು, ಮೊದಲು ಪರೀಕ್ಷಿಸಿ, ಆಮೇಲೆ ವಿಶ್ವಾಸವನ್ನು ತೋರಿಸಬಹುದು” ಎಂದನು. ಆಮೇಲೆ ಶರಭನೆಂಬ ಕಪಿಯು, ತನ್ನಲ್ಲಿ ತಾನು “ಒಬ್ಬ ಮನುಷ್ಯನೊಡನೆ ಬಳಕೆಮಾಡುವುದಕ್ಕೆ ಮೊದಲೇ ಅವನ ಗುಣದೋಷಗಳು ತಿಳಿಯಲಾರವು. ಅಂತವನನ್ನು ಪರೀಕ್ಷಿಸ ದೆಯೇ ಪರಿಗ್ರಹಿಸಿದ ಪಕ್ಷದಲ್ಲಿ ಮಂತ್ರಹಾನಿಯುಂಟಾಗುವುದು. ಹಾಗಿಲ್ಲದೆ ಪರಿತ್ಯ ಜಿಸಿದರೂ ಕೈಗೆ ಬಂದ ಬಲವು ತಪ್ಪಿಹೋಗುವುದು. ಆದುದರಿಂದ ಈ ಅಂಗದನ ಮಾತಿನಂತೆ ನಡೆಯುವುದಕ್ಕೆ ಸಾಧ್ಯವೇ ಇಲ್ಲ” ಎಂದು ಚಿಂತಿಸಿ, ಮುಂದೆ ತನಗೆ ಸಾಧ್ಯವೆಂದು ತೋರಿದ ರೀತಿಯನ್ನೂ ನಿಶ್ಚಯಿಸಿಕೊಂಡು, ರಾಮನನ್ನು ಕುರಿತು “ಎಲೆ ರಾಜಸಿಂಹನೆ! ನಿಜಸ್ಥಿತಿಯನ್ನು ತಿಳಿಯದೆ ಇದ್ದಕ್ಕಿದ್ದ ಹಾಗೆ ಈತನನ್ನು ಪರಿಗ್ರಹಿಸುವುದಕ್ಕಿಲ್ಲ. ಹಾಗೆ ಪರಿಗ್ರಹಿಸುವುದಕ್ಕೆ ಮೊದಲೇ ಈತನು ದುಷ್ಟನೇ ಅಲ್ಲವೇ ಎಂಬುದನ್ನು ತಿಳಿಯುವುದೂ ಸಾಧ್ಯವಲ್ಲ. ಆದುದರಿಂದ ಆ ಕಾರ್ಯಕ್ಕಾಗಿ ನಾವು ಈಗಲೇ ಆ ವಿಭೀಷಣನ ಬಳಿಗೆ ಗೂಢಚಾರನೊಬ್ಬನನ್ನು ಕಳುಹಿಸಬೇಕು. ಆ ಚಾರನ ಮೂಲಕವಾಗಿ ನೀತಿಶಾಸ್ತ್ರೋಕ್ತರೀತಿಯಿಂದ ಅವನ ಗುಣದೋಷ

ಗಳನ್ನು ಪರೀಕ್ಷಿಸಿ, ಆಮೇಲೆ ನ್ಯಾಯರೀತಿಯಿಂದ ಪರಿಗ್ರಹಿಸಬಹುದು" ಎಂದನು. ಆಮೇಲೆ ರಾಜನೀತಿಯಲ್ಲಿ ನಿಪುಣನಾದ ಜಾಂಬವಂತನು, ನೀತಿಶಾಸ್ತ್ರ ಕ್ರಮದಿಂದ ತನ್ನಲ್ಲಿ ತಾನು ಪರ್ಯಾಲೋಚಿಸಿ, ಆ ಅಂಗದನ ಮತ್ತು [1]ಶರಭನ ಮತಗಳೆರಡನ್ನೂ ಒಪ್ಪದೆ ರಾಮನನ್ನು ಕುರಿತು, ಗುಣಯುಕ್ತವಾಗಿಯೂ, ದೋಷರಹಿತವಾಗಿಯೂ ಇರುವ ಮಾತಿನಿಂದ, "ರಾಮಾ! ಇವರಿಬ್ಬರೂ ಹೇಳಿದಂತೆ ಈ ವಿಭೀಷಣನೊಡನೆ ನೀನಾಗಿ ಬಳಕೆಮಾಡುವುದರಿಂದಾಗಲಿ, ಚಾರರಿಂದಾಗಲಿ, ಪರೀಕ್ಷಿಸುವುದು ಸಾಧ್ಯವಲ್ಲ. ಈತನನ್ನು ನಂಬುವುದೂ ಸರ್ವಪ್ರಕಾರದಿಂದಲೂ ಸರಿಯಲ್ಲ. ಆ ರಾವಣನೋ ನಮ್ಮಲ್ಲಿ ಬದ್ಧವೈರವುಳ್ಳವನು, ಮಹಾವಂಚಕನು, ಬಹಳಪಾಪಿಯು. ಪಾಪವೇ ಸಹಜಸ್ವಭಾವವುಳ್ಳ ರಾಕ್ಷಸರಿಗೂ ರಾಜನು. ಅಂತಹ ರಾವಣನ ಕಡೆಯಿಂದಲೇ ಈ ವಿಭೀಷಣನು ಇಲ್ಲಿಗೆ ಬಂದಿರುವನು. "ಆ ರಾವಣನು ದುಷ್ಟನಾದ ಮಾತ್ರಕ್ಕೆ ಇವನು ಸಾಧುವಾಗಿರಬಾರದೆ" ಎಂದು ನೀನು ಶಂಕಿಸಬಹುದು! ಇವನು ಈಗ ನಮ್ಮಲ್ಲಿಗೆ ಬಂದಿರುವ [2]ಕಾಲದೇಶಸ್ಥಿತಿಯೂ ಕೂಡ ಶಂಕಾಸ್ಪದವಾಗಿರುವುದು. ಹೀಗೆ ಅಕಸ್ಮಾತ್ತಾಗಿ ಈತನು ಶತ್ರುವಿನಕಡೆಯಿಂದ ಬಂದವನಾದುದರಿಂದ, ಸರ್ವಪ್ರಕಾರದಿಂದಲೂ ಇವನ ವಿಷಯದಲ್ಲಿ ಶಂಕಿಸಬೇಕಾದುದೇ ಯುಕ್ತವು" ಎಂದನು. ಆಮೇಲೆ ನ್ಯಾಯಾನ್ಯಾಯಗಳನ್ನು ನಿಶ್ಚಯಿಸುವುದರಲ್ಲಿ ನಿಪುಣನಾಗಿಯೂ, ಆ

---

1. ಇಲ್ಲಿ ಶರಭನು "ಗುಣವಿದ್ದರೆ ಪರಿಗ್ರಹಿಸಬಹುದೆಂದು ಮಾತ್ರವೇ ಹೇಳಿದನೇ ಹೊರತು, ದೋಷವಿದ್ದರೆ ತ್ಯಜಿಸಬೇಕೆಂದು ಹೇಳದೆ ಬಿಟ್ಟುದೇಕೆ?" ಎಂದರೆ, ರಾಮನಿಗೆ ಶರಣಾಗತರಲ್ಲಿರುವ ವಾತ್ಸಲ್ಯಾತಿಶಯವನ್ನು ನೋಡಿ, ಅವನ ಮುಂದೆ ಆ ಮಾತನ್ನು ಹೇಳುವುದಕ್ಕೆ ಹೆದರಿ, ಅಷ್ಟರಲ್ಲಿಯೇ ಬಿಟ್ಟನೆಂದು ತಿಳಿಯಬೇಕು.

2. ಇಲ್ಲಿ "ಅದೇಶಕಾಲೇ ಸಂಪ್ರಾಪ್ತಃ" ಎಂದು ಮೂಲವು. ಋಶ್ಯಮೂಕ ಪರ್ವತವೇ ಈತನು ಬಂದು ಮರೆಹೊಗಬೇಕಾದ ಪ್ರದೇಶವೆಂದೂ, ಆಗಲೇ ಉಚಿತಕಾಲವೆಂದೂ, ಹಾಗಿಲ್ಲದೆ ನಾವು ಇಷ್ಟು ದೂರದವರೆಗೆ ಬಂದು ಲಂಕೆಯನ್ನು ಸಮೀಪಿಸಿದಮೇಲೆ, ಈ ರಾತ್ರಿ ಕಾಲದಲ್ಲಿ ಬಂದಿರುವುದರಿಂದ ಇವನು ಬಂದ ಈ ಕಾಲದೇಶಗಳೆರಡೂ ಸಂದೇಹಾಸ್ಪದಗಳೆಂದೂ ತನಿಶ್ಲೋಕಿ ವ್ಯಾಖ್ಯಾನವು. "ನಾವು ಲಂಕೆಗೆ ಇನ್ನೂ ದೂರವಾಗಿರುವುದರಿಂದ, ಈ ಕಾಲದಲ್ಲಿ ಇವನಿಗೆ ನಮ್ಮಿಂದ ಭಯಕ್ಕೆ ಕಾರಣವೇ ಇಲ್ಲ. ಇವನು ಈ ಸ್ಥಳಕ್ಕೆ ಬರಬೇಕಾದ ಕೆಲಸವೂ ಇಲ್ಲ! ಇದಲ್ಲದೆ ತನ್ನ ಸ್ವಾಮಿಯಾದ ರಾವಣನಿಗೆ ಶತ್ರುಗಳೊಡನೆ ಯುದ್ಧವು ಸಮೀಪಿಸಿರುವಾಗ ಆತನನ್ನು ಬಿಟ್ಟುಬರುವುದಕ್ಕೂ ಇದು ತಕ್ಕ ಕಾಲವಲ್ಲ" ವೆಂದು ಗೋವಿಂದರಾಜ ವ್ಯಾಖ್ಯಾನವು.

ನಿಶ್ಚಯವನ್ನು ಚೆನ್ನಾಗಿ ಉಪಪಾದಿಸಿ ಹೇಳುವುದಕ್ಕೆ ತಕ್ಕ ವಚನಸಂಪತ್ತಿಯುಳ್ಳವನಾಗಿಯೂ ಇರುವ ಮೈಂದನು, ತನ್ನಲ್ಲಿ ತಾನು "ವಿಭೀಷಣನು ಸರ್ವವಿಧದಿಂದಲೂ ಶಂಕಾಸ್ಪದನಾಗಿದ್ದರೂ, ಯಾವುದಾದರೂ ಸುಲಭೋಪಾಯದಿಂದ ಆತನನ್ನು ಪರೀಕ್ಷಿಸದೆಯೇ ಅವನನ್ನು ನಿರಾಕರಿಸಿಬಿಟ್ಟರೆ, ತಾನಾಗಿ ಕೈಗೆ ಬಂದ ಬಲವನ್ನೂ ಕಳೆದುಕೊಂಡಂತಾಗುವು"ದೆಂದೆಣಿಸಿ, ಆ ವಿಭೀಷಣನನ್ನು ಪರೀಕ್ಷಿಸುವುದಕ್ಕೆ ಸುಲಭೋಪಾಯವೇನೆಂಬುದನ್ನು ಚೆನ್ನಾಗಿ ನಿರ್ಧರಿಸಿಕೊಂಡು, ಸುಗ್ರೀವಾದಿಗಳು ಹೇಳಿದುದಕ್ಕಿಂತಲೂ ಹೆಚ್ಚಾಗಿ ಯುಕ್ತಿಯುಕ್ತವಾದ ಮಾತಿನಿಂದ ರಾಮನನ್ನು ಕುರಿತು "ಎಲೆ ರಾಜೇಂದ್ರನೆ! ಈಗ ನಾವು ಈ ವಿಭೀಷಣನ ಬಳಿಗೆ ಯಾವನಾದರೂ ಅಪರಿಚಿತನಾದ ಪುರುಷನೊಬ್ಬನನ್ನು ಕಳುಹಿಸಿ, ರಾವಣನು ನಮ್ಮ ವಿಷಯವಾಗಿ ಏನು ಹೇಳುತ್ತಿರುವನೆಂಬುದನ್ನು ಮೊದಲು ತಿಳಿದುಕೊಳ್ಳಬೇಕು. ವಿಭೀಷಣನಿಗೆ ಸ್ವಲ್ಪವಾದರೂ ಸಂದೇಹವುಂಟಾಗದಂತೆ ಸಂಗತಿಗಳನ್ನು ತಿಳಿದುಬರಬೇಕು. ಆತುರಪಡದೆ ಮೆಲ್ಲಗೆ ಮೃದುವಾಕ್ಯಗಳಿಂದ ಕೇಳಬೇಕು. ಹೀಗೆ ನಾವು ಉಪಾಯದಿಂದ ಆ ವಿಭೀಷಣನು ದುಷ್ಟನೇ ಅಲ್ಲವೇ ಎಂಬುದನ್ನು ಪರೀಕ್ಷಿಸಿ, ಅವನ ಭಾವವನ್ನು ಯಥಾಸ್ಥಿತವಾಗಿ ತಿಳಿದುಕೊಳ್ಳುವುದು ಮೇಲು! ಅವನು ದುಷ್ಟನೆಂದು ತೋರಿಬಂದರೆ ಅದಕ್ಕೆ ತಕ್ಕಂತೆಯೂ, ದುಷ್ಟನಲ್ಲವೆಂದು ತೋರಿದಾಗ ಅದಕ್ಕೆ ತಕ್ಕಂತೆಯೂ ನಡೆದುಕೊಳ್ಳಬಹುದು. ರಾಮಾ! ಇದಕ್ಕಾಗಿ ನಿನಗೆ ಬೇರೊಬ್ಬರೊಡನೆ ಮಂತ್ರಾಲೋಚನೆಯೇಕೆ! ನಿನ್ನ ಬುದ್ಧಿಗೆ ತೋರಿದಂತೆ ನಡೆಸು" ಎಂದನು. ಆಮೇಲೆ ಶಾಸ್ತ್ರಾಭ್ಯಾಸದಿಂದ ಚೆನ್ನಾಗಿ ಸಂಸ್ಕಾರಹೊಂದಿದ ಬುದ್ಧಿಯುಳ್ಳ ಮಂತ್ರಿಸತ್ತಮನಾದ ಹನುಮಂತನು, ರಾಮನನ್ನು ಕುರಿತು, ಕಿವಿಗಿಂಪಾಗಿಯೂ, ಮೃದುವಾಗಿಯೂ, ಇರುವ ಮಾತಿನಿಂದ, "ಎಲೆ ರಾಜನೆ! ನೀನಾದರೋ ಬುದ್ಧಿವಂತರಲ್ಲಿ ಮೇಲೆನಿಸಿದವನು. ಕಾರ್ಯಸಮರ್ಥನು. ಮಾತಿನಲ್ಲಿ ಚತುರನು. ಬೃಹಸ್ಪತಿಯಾದರೂ ಮಾತಿನಲ್ಲಿ ನಿನ್ನನ್ನು ಮೀರಲಾರನು. ಇನ್ನು ನಮ್ಮ ಮಾತೇನು? ಆದರೂ ನೀನು ನಮ್ಮಲ್ಲಿ ಗೌರವವನ್ನು ತೋರಿಸಿ, ನಮ್ಮ ಮತವನ್ನು ತಿಳಿಸಬೇಕೆಂದು ಕೇಳಿದುದಕ್ಕಾಗಿ, ನಾನೂ ನನಗೆ ತೋರಿದ ಮಾತನ್ನು ಹೇಳಬೇಕಾಗಿರುವುದು. ಇದು ಹೊರತು ನಾನು ನನ್ನ ವಾದಕೌಶಲದಿಂದಾಗಲಿ, ಇತರರ ಮತವನ್ನು ಖಂಡಿಸಬೇಕೆಂಬ ಸ್ಪರ್ಧೆಯಿಂದಾಗಲಿ, ನಾನೇ ಸ್ವೇಚ್ಛೆಯಿಂದಾಗಲಿ ಮಾತಾಡುವವನಲ್ಲ! ನನ್ನ ಅಭಿಪ್ರಾಯವನ್ನೂ ತಿಳಿಸುವೆನು ಕೇಳು! ಈಗ

ನಮ್ಮಲ್ಲಿಗೆ ಬಂದಿರುವ ಈ ವಿಭೀಷಣನನ್ನು ಪರಿಗ್ರಹಿಸುವುದಕ್ಕೂ, ತ್ಯಜಿಸುವುದಕೂ ಮೊದಲು, ಅವನ ಗುಣದೋಷಗಳನ್ನು ನಿಶ್ಚಯಿಸುವ ನಿಮಿತ್ತವಾಗಿ ಈ ಮಂತ್ರಿಗಳೊಬ್ಬೊಬ್ಬರೂ ತಮತಮಗೆ ತೋರಿದ ಮಾತುಗಳನ್ನು ಹೇಳಿದರಷ್ಟೆ! ಅವುಗಳಲ್ಲಿ ನನಗೆ ದೋಷವೇ ಕಾಣುವುದು. ಮೊದಲು ಈ ಅಂಗದನು ಹೇಳಿದಂತೆ, ವಿಭೀಷಣನನ್ನು ಕರೆಸಿ ಪರೀಕ್ಷಿಸಬೇಕೆಂಬ ಕಾರ್ಯವು ಎಂದಿಗೂ ಸಾಧ್ಯವಲ್ಲ. ಒಬ್ಬನನ್ನು ರಾಜಕಾರ್ಯದಲ್ಲಿ ನಿಯೋಗಿಸಿದ ಹೊರತು, ಅವನ ಗುಣದೋಷಗಳನ್ನು ತಿಳಿಯುವುದು ಸಾಧ್ಯವಲ್ಲ. ಹಾಗೆ ಗುಣದೋಷಗಳನ್ನು ತಿಳಿಯದೆ, ಹೊಸದಾಗಿ ಬಂದ ಅಪರಿಚಿತನಾದ ಪುರುಷನೊಬ್ಬನನ್ನು ತಂದು ನಿಯೋಗಿಸುವುದೂ ದೋಷಾಸ್ಪದವೆಂದೇ ನನಗೆ ತೋರಿರುವುದು. ಹೀಗೆ ಗುಣದೋಷಗಳನ್ನು ಪರೀಕ್ಷಿಸಿದಮೇಲೆಯೇ ಮನುಷ್ಯನನ್ನು ನಿಯೋಗಿಸಬೇಕೆಂದೂ, ನಿಯೋಗಿಸಿದಮೇಲೆಯೇ ಅವನ ಗುಣದೋಷಗಳನ್ನು ಪರೀಕ್ಷಿಸಬೇಕೆಂದೂ ಅನ್ಯೋನ್ಯಾಶ್ರಯವಿರುವುದರಿಂದ, ಈ ಮತವೇ ನನಗೆ ಸರಿಯಾಗಿ ತೋರಲಿಲ್ಲ ಇದರಮೇಲೆ ಮೊದಲು ಚಾರನನ್ನು ಕಳುಹಿಸಿ ರಹಸ್ಯವಾಗಿ ಆತನ ಸಂಗತಿಯನ್ನು ತಿಳಿದುಕೊಳ್ಳುವುದು ಯುಕ್ತವೆಂದು ನಿನ್ನ ಮಂತ್ರಿಗಳಲ್ಲಿ ಬೇರೆ ಕೆಲವರು ಹೇಳಿದರಷ್ಟೆ ? ಅದೂ ಯುಕ್ತವಲ್ಲ. ದೂರದಲ್ಲಿರುವವನ ಬಳಿಗಲ್ಲವೇ ರಹಸ್ಯವಾಗಿ ಚಾರನು ಹೋಗಿ, ಮರೆಯಾಗಿದ್ದು ಆತನ ಸಂಗತಿಯನ್ನು ತಿಳಿದುಕೊಳ್ಳಬೇಕು ? ನಮಗೆ ಬಹಳ ಸಮೀಪದಲ್ಲಿ ಪ್ರತ್ಯಕ್ಷವಾಗಿ ಆಕಾಶಮಧ್ಯದಲ್ಲಿರುವವನ ಬಳಿಗೆ ಚಾರನನ್ನು ಕಳುಹಿಸುವುದು ಹೇಗೆ ? ಈ ಉಪಾಯವೂ ಕೆಲಸಕ್ಕೆಬಾರದು. ಮತ್ತೆ ಕೆಲವರು ಈ ವಿಭೀಷಣನು ನಮ್ಮಲ್ಲಿಗೆ ಬಂದಿರತಕ್ಕ ದೇಶಕಾಲಗಳೆರಡೂ ಸರಿಯಲ್ಲವೆಂದು ಹೇಳಿದರಲ್ಲವೆ ? ಆ ಮಾತೂ ಯುಕ್ತವಲ್ಲ. ಆ ವಿಷಯದಲ್ಲಿ ನನಗೆ ಇದೇ ತಕ್ಕ ದೇಶಕಾಲಗಳೆಂದೂ ತೋರಿರುವುದು ಈ ವಿಚಾರವಾಗಿ ನನಗೆ ತೋರಿದಮಟ್ಟಿಗೆ ಒಂದೆರಡು ಮಾತನ್ನು ಹೇಳಬೇಕೆಂಬ ಕೋರಿಕೆಯುಂಟು. ಅದನ್ನೂ ತಿಳಿಸುವೆನು ಕೇಳು. ಈ ವಿಭೀಷಣನು ದುರಾತ್ಮನಾದ ಆ ರಾವಣನಲ್ಲಿರುವ ದೋಷಗಳನ್ನೂ ನಿನ್ನಲ್ಲಿರುವ ಗುಣಗಳನ್ನೂ ವಿಚಾರಿಸಿ, ಅವನು ನೀಚನೆಂಬುದನ್ನೂ, ನೀನು ಉತ್ತಮನೆಂಬುದನ್ನೂ ತನ್ನ ಮನಸ್ಸಿನಲ್ಲಿ ನಿರ್ಧರಿಸಿಕೊಂಡು, ತನ್ನ ಹಿತೋಪದೇಶಕ್ಕೆ ಒಳಗಾಗದ ಆತನ ಮೂರ್ಖಸ್ವಭಾವವನ್ನೂ, ನಿನ್ನ ಪರಾಕ್ರಮವನ್ನೂ ನೋಡಿ ಆ ಕ್ಷಣವೇ ನಿನ್ನಬಳಿಗೆ ಬಂದಿರುವನು. ಇದು ಅವನ ಬುದ್ಧಿಗೆ ಯುಕ್ತವಾಗಿಯೇ ಇರುವುದು. (ಇತರರ ಗುಣದೋಷಗಳನ್ನು

ಕಂಡಮೇಲೆಯೇ ಅವರಲ್ಲಿ ಮಿತ್ರತ್ವವನ್ನಾಗಲಿ, ಶತ್ರುತ್ವವನ್ನಾಗಲಿ ನಿರ್ಣಯಿಸ ಬೇಕಾದುದರಿಂದ, ಇವನೂ ದೇಶಕಾಲಗಳನ್ನರಿತೇ ಬಂದಿರುವನು) ಅದೂ ಹಾಗಿರಲಿ! ಈ ವಿಭೀಷಣನಿಗೆ ಯಾರಲ್ಲಿ ಪರಿಚಯವಿಲ್ಲವೋ ಅಂತಹ ಕೆಲವು ಪುರುಷರನ್ನು ಕಳುಹಿಸಿ, ಅವರಿಂದ ಆತನನ್ನು ಪ್ರಶ್ನೆಮಾಡಿಸಿ, ಅವರ ಮೂಲಕವಾಗಿ ರಾವಣನ ವಿಷಯವನ್ನು ತಿಳಿಯಬೇಕೆಂದು ಬೇರೆ ಕೆಲವರು ಹೇಳಿದರಲ್ಲವೆ ? ಆ ವಿಷಯವನ್ನೂ ನಾನು ಚೆನ್ನಾಗಿ ವಿಮರ್ಶಿಸಿ ನೋಡಿದುದರಲ್ಲಿ, ಆ ಮತವೂ ನೀತಿವಿರುದ್ಧವೆಂದೇ ನನ್ನ ಬುದ್ಧಿಗೆ ತೋರಿರುವುದು. ಏಕೆಂದರೆ, [1]ಈ ವಿಭೀಷಣನನ್ನು ನಾವು ಸ್ವೀಕರಿಸು ವುದಕ್ಕೆ ಮೊದಲೇ, ಅವನ ಬಳಿಗೆ ಹೊಸಮನುಷ್ಯನೊಬ್ಬನು ಹೋಗಿ, ರಾವಣನ ಸಂಗತಿಗಳೇನೆಂದು ಕೇಳಿದಪಕ್ಷದಲ್ಲಿ, ಬುದ್ಧಿವಂತನಾದ ವಿಭೀಷಣನು ಆಗಲೇ ಸಂದೇಹಪಡುವನು ಅವನನ್ನು ನಾವು ನಮ್ಮೊಳಗೆ ಸೇರಿಸಿಕೊಂಡಮೇಲೆ ಕಾರ್ಯಾ ಲೋಚನೆಯ ಕಾಲದಲ್ಲಿ ನಂಬಿಕೆಯಿಂದ ಕೇಳಬೇಕಾದ ಪ್ರಶ್ನೆಗಳನ್ನು ಮೊದಲೇ ಕೇಳಿಬಿಟ್ಟರೆ, ನಮಗೆ ಇನ್ನೂ ಆತನಲ್ಲಿ ಶತ್ರುತ್ವಶಂಕೆಯೇ ಇರಬಹುದೆಂದು ಅವನಿಗೆ ಅನುಮಾನವು ಹುಟ್ಟುವುದು. ಹೀಗೆ ಅನುಮಾನವು ಹುಟ್ಟುವುದರಿಂದ ನಮ್ಮಲ್ಲಿ ಅವನಿಗೆ ನಂಬಿಕೆಯೂ ತಪ್ಪುವುದು. ಅದರಿಂದ ಅನಾಯಾಸವಾಗಿ ನಮಗೆ ಸಿಕ್ಕಿದ ಮಿತ್ರನನ್ನೂ ನಾವು ಕಳೆದುಕೊಂಡಂತಾಗುವುದು. ಇಷ್ಟೇ ಅಲ್ಲವೆ, ಇಲ್ಲಿಂದ ಹೋಗುವ ಮನುಷ್ಯನು ಎಷ್ಟೇ ಬುದ್ಧಿಶಾಲಿಯಾಗಿದ್ದರೂ, ಶತ್ರುವು ಕಪಟ ಸ್ವಭಾವದವನಾಗಿಯೂ, ಸ್ವಕಾರ್ಯಸಾಧನೆಯಲ್ಲಿ ಬಹಳ ನಿಪುಣನಾಗಿಯೂ ಇದ್ದ ಪಕ್ಷದಲ್ಲಿ ಯಾವವಿಧದಿಂದಲೂ ತನ್ನ ಅಭಿಪ್ರಾಯಗಳನ್ನು ಹೊರಪಡಿಸದೆ, ಮನಸ್ಸಿ ನಲ್ಲಿಯೇ ಇಟ್ಟು ಮಾತನಾಡುವುದರಿಂದ ಅವನ ಅಭಿಪ್ರಾಯಗಳನ್ನು ಥಟ್ಟನೆ ತಿಳಿದು ಕೊಳ್ಳುವುದೂ ಸಾಧ್ಯವಲ್ಲ. ಬಹುಕಾಲದವರೆಗೆ ಪರಿಚಯವನ್ನು ಮಾಡಿದ ಹೊರತು ಅವನ ಅಭಿಪ್ರಾಯವೊಂದೂ ತಿಳಿಯದು. ಆದುದರಿಂದ ಈ ಉಪಾಯದಿಂದ ಮೊದಲೇ ಮಿತ್ರನನ್ನು ಕಳೆದುಕೊಳ್ಳಬೇಕಾಗುವುದಲ್ಲದೆ, ಅವನ ಭಾವವೂ ತಿಳಿಯದೆ ಹೋಗುವುದು. ರಾಮಾ ! ಇದಲ್ಲದೆ ಈತನು ಇದುವರೆಗೆ ಎಷ್ಟೋ ಮಾತುಗಳನ್ನಾ ಡುತ್ತಿದ್ದರೂ, ಅವನಲ್ಲಿ ವಂಚನೆಯನ್ನು ತೋರಿಸತಕ್ಕ ವಿಕಾರಗಳೊಂದೂ ಕಾಣಲಿಲ್ಲ.

---

1. ಇಲ್ಲಿ “ ಮಿತ್ರಂ ಪ್ರದುಷ್ಯೇತ ಮಿಥ್ಯಾಪ್ರಷ್ಟುಸ್ಸುಖಾಗತಂ ” ಎಂದು ಮೂಲವು. “ ಮಿಥ್ಯಾಪೃಷ್ಟಂ ಸುಖಾಗತಂ ” ಎಂಬ ಪಾಠಾಂತರವೂ ಉಂಟು. ಇವೆರಡೂ ಮೇಲಿನ ತಾತ್ಪರ್ಯಾರ್ಥದಲ್ಲಿಯೇ ಪರ್ಯವಸಿತಗಳಾಗುವುವು.

ಅವನ ಮುಖವು ಪ್ರಸನ್ನವಾಗಿಯೇ ಇರುವುದು. ಆದುದರಿಂದ ಅವನ ವಿಷಯದಲ್ಲಿ ನನಗೆ ಸ್ವಲ್ಪವಾದರೂ ಸಂದೇಹವೇ ತೋರಲಿಲ್ಲ. ಮತ್ತು ಈತನನ್ನು ಕಂಡೊಡನೆ ನಮ್ಮ ಕಡೆಯ ವಾನರರು, ಅವನಲ್ಲಿ ಶತ್ರುಭಾವವನ್ನಿಟ್ಟು, ಕೈಗೆ ಸಿಕ್ಕಿದ ಕಲ್ಲುಮರ ಗಳನ್ನೆತ್ತಿ ಹಿಡಿದು, ಆತನನ್ನು ಕೊಲ್ಲುವುದಕ್ಕೆ ಸಿದ್ಧರಾಗಿದ್ದರೂ, ಅವನು ಮನಸ್ಸಿನಲ್ಲಿ ಸ್ವಲ್ಪವಾದರೂ ಅಳುಕಿಲ್ಲದೆ ಮುಂದೆ ಬಂದೇ ನಿಂತಿರುವನು. ಮನಸ್ಸಿನಲ್ಲಿ ಈತನಿಗೆ ನಿಜವಾಗಿಯೂ ದುರಭಿಪ್ರಾಯವಿದ್ದ ಪಕ್ಷದಲ್ಲಿ, ಹೀಗೆ ನಿರ್ಭಯವಾಗಿ ಬಂದು ನಿಲ್ಲುತ್ತಿದ್ದನೆ ? ಈತನ ಮಾತುಗಳೂ ನಿರ್ದೋಷಗಳಾಗಿರುವುವು. ಆದುದರಿಂದ ಈತನ ವಿಷಯದಲ್ಲಿ ಸ್ವಲ್ಪವೂ ಸಂದೇಹಕ್ಕವಕಾಶವಿಲ್ಲ ಮನುಷ್ಯನು ಎಷ್ಟೇವಿಧದಿಂದ ತನ್ನ ಮುಖವಿಕಾರಗಳನ್ನು ಮರೆಸಿಟ್ಟುಕೊಂಡರೂ, ಅವು ಮರೆಯಾಗಿ ನಿಲ್ಲುವುವಲ್ಲ. ಆ ಮುಖವಿಕಾರಗಳೇ ಅವರ ಮನೋಭಾವವನ್ನು ಬಲಾತ್ಕಾರದಿಂದ ಹೊರಕ್ಕೆ ತಂದು ತೋರಿಸುವುವು. ರಾಮಾ ! ನೀನು ಕಾರ್ಯಜ್ಞರಲ್ಲಿ ಮೇಲೆನಿಸಿಕೊಂಡವನಾದು ದರಿಂದ, ಲೋಕದಲ್ಲಿ ನಿನಗೆ ತಿಳಿಯದ ಕಾರ್ಯಗಳಿಲ್ಲ ! ತಕ್ಕ ಕಾಲವನ್ನೂ ತಕ್ಕ ದೇಶ ವನ್ನೂ, ತಕ್ಕ ಪುರುಷರನ್ನೂ ನೋಡಿ ನಮ್ಮ ಕೃತ್ಯಗಳನ್ನು ಪ್ರಯೋಗಿಸಿದ ಪಕ್ಷದಲ್ಲಿ ಅದಕ್ಕೆ ತಕ್ಕ ಫಲವು ಶೀಘ್ರದಲ್ಲಿಯೇ ಕೈಗೂಡುವುದರಲ್ಲಿ ಯಾವ ಅಡ್ಡಿಯೂ ಇಲ್ಲ. ಆದರೆ "ಈ ವಿಭೀಷಣನು ನಮ್ಮಲ್ಲಿ ಸ್ನೇಹವನ್ನು ಬೆಳೆಸುವುದಕ್ಕಾಗಿ ತನ್ನ ಸರ್ವೈಶ್ವರ್ಯ ವನ್ನೂ ಬಿಟ್ಟುಬರಬೇಕಾದ ಕಾರಣವೇನು ? ರಾಜ್ಯಭ್ರಷ್ಟರಾಗಿ ಇಷ್ಟು ದೀನದಶೆ ಯಲ್ಲಿರುವ ನಮ್ಮಿಂದ ಅವನಿಗಾಗಬೇಕಾದುದೇನು ?" ಇವನು ಬೇರೆ ಯಾವುದೋ ಒಂದು ದುರಭಿಪ್ರಾಯದಿಂದಲೇ ಬಂದಿರಬೇಕು ? ಎಂದು ನೀನು ಶಂಕಿಸಬಹುದು. ಇವನು ಈಗ ನಮ್ಮಲ್ಲಿಗೆ ಬರುವುದಕ್ಕೂ ಕಾರಣವುಂಟು ! ಈತನು, ಈಗ ನೀನು ರಾವಣವಧಕ್ಕಾಗಿ ಮಾಡುತ್ತಿರುವ ಪ್ರಯತ್ನವನ್ನೂ, ರಾವಣನ ಕಪಟವ್ಯಾಪಾರ ವನ್ನೂ ತಿಳಿದು, ನೀನು ವಾಲಿಯನ್ನು ಕೊಂದು ಸುಗ್ರೀವನಿಗೆ ಪಟ್ಟಾಭಿಷೇಕವನ್ನು ಮಾಡಿದ ವೃತ್ತಾಂತವನ್ನೂ ಕೇಳಿ, ಹಾಗೆಯೇ ತನಗೂ ನೀನು ರಾವಣನ ರಾಜ್ಯದಲ್ಲಿ ಪಟ್ಟವನ್ನು ಕಟ್ಟಬಹುದೆಂಬ ಆಶೋತ್ತರದಿಂದಲೇ ತನ್ನಣ್ಣನನ್ನು ದ್ವೇಷಿಸಿಕೊಂಡು ಬಂದಿರಬಹುದು. ರಾಜ್ಯಲಾಭವೆಂಬ ತನ್ನ ಪ್ರಯೋಜನವನ್ನು ಕೋರಿ ಸ್ವಬುದ್ಧಿ ಪೂರ್ವಕವಾಗಿಯೇ ಈತನು ಬಂದಿರಬೇಕು. ಈತನು ನಮ್ಮಲ್ಲಿ ನಿಜವಾದ ಸ್ನೇಹಭಾವ ದಿಂದ ಬಾರದಿದ್ದರೂ, ಸ್ವಪ್ರಯೋಜನಕ್ಕಾಗಿ ಬಂದನೆಂಬುದಕ್ಕಾದರೂ ಇವನನ್ನು ಪರಿಗ್ರಹಿಸುವುದರಿಂದ ದೋಷವಿಲ್ಲ. ಎಲೆ ಮಹಾರಾಜನೆ ! ಈ ವಾನರರೆಲ್ಲರೂ

ಈತನು ರಾಕ್ಷಸಜಾತಿಯವನೆಂಬ ಒಂದೇ ಶಂಕೆಯನ್ನಿಟ್ಟು, ಆತನಲ್ಲಿ ತಮತಮಗೆ ತೋರಿದಂತೆ ಅನೇಕ ದೋಷಗಳನ್ನು ಊಹಿಸಿ ಹೇಳಿರುವರಷ್ಟೆ! ನಾನೂ ಆತನ ಋಜುಸ್ವಭಾವವನ್ನು ಕುರಿತು, ನನ್ನ ಶಕ್ತ್ಯನುಸಾರವಾಗಿ ನನಗೆ ತೋರಿದುದನ್ನು ಹೇಳಿದೆನು. ಇದರಮೇಲೆ ನೀನು ಬುದ್ಧಿವಂತರಲ್ಲಿ ಮೇಲೆನಿಸಿಕೊಂಡಿರುವುದರಿಂದ, ಮುಂದೆ ಹೇಗೆ ನಡೆದುಕೊಳ್ಳಬೇಕೆಂಬುದಕ್ಕೆ ನೀನೇ ಪ್ರಮಾಣವು ಎಂದನು.

ಇಲ್ಲಿಗೆ ಹದಿನೇಳನೆಯ ಸರ್ಗವು.

ಶ್ರೀರಾಮನು ಶರಣಾಗತರಕ್ಷಣವೇ ತನಗೆ ಮಹಾವ್ರತವೆಂದು
ಹೇಳಿ ಸುಗ್ರೀವನಿಗೆ ಕಪೋತಾಖ್ಯಾನಾದಿಗಳನ್ನು ತಿಳಿಸಿ,
ವಿಭೀಷಣನನ್ನು ಕರೆತರುವಂತೆ ನಿಯಮಿಸಿದುದು.

1 ಹೀಗೆ ರಾಮನು ವಾಯುಕುಮಾರನಾದ ಹನುಮಂತನ ಮನೋಭಿಪ್ರಾಯವನ್ನು ಕೇಳಿ, ಪ್ರಸನ್ನಮನಸ್ಸುಳ್ಳವನಾಗಿ, ವಿಭೀಷಣನ ವಿಷಯವಾಗಿ ತನ್ನ ಮನಸ್ಸಿನಲ್ಲಿರುವ ಅಭಿಪ್ರಾಯವನ್ನು ಅಲ್ಲಿದ್ದ ವಾನರರಿಗೆ ತಿಳಿಸಬೇಕೆಂಬ ಉದ್ದೇಶ

—: ಅಭಯಪ್ರದಾನಕರಣವು. :—

1. ಇಲ್ಲಿ "ಅಥ ರಾಮಃ ಪ್ರಸನ್ನಾತ್ಮಾ ಶ್ರುತ್ವಾ ವಾಯುಸುತಸ್ಯ ಹ। ಪ್ರತ್ಯಭಾಷತ ದುರ್ಧರ್ಷಃ ಶ್ರುತವಾನಾತ್ಮನಿ ಸ್ಥಿತಂ" ಎಂದು ಮೂಲವು. ವಿಶೇಷಾರ್ಥವು:—(ಅಥ ರಾಮಃ) ಇದೇ ಒಂದು ಪ್ರತ್ಯೇಕವಾಕ್ಯವು. ಆಮೇಲೆ ಆತನು ರಾಮನಾದನು. ಎಂದರೆ ರಾಮನಿಗೆ ಸತ್ತೆಯುಂಟಾಯಿತೆಂದು ಭಾವವು. ರಾಮನು ರಕ್ಷಕತ್ವವೇ ಸ್ವರೂಪವಾಗಿ ಉಳ್ಳವನಾದುದರಿಂದ, ವಿಭೀಷಣನು ಹೇಳಿದ "ಶರಣು" ಎಂಬ ಮಾತನ್ನು ಕೇಳಿದಾಗಲೇ ಅವನನ್ನು ರಕ್ಷಿಸಬೇಕಾಗಿತ್ತು. ಹಾಗೆ ರಕ್ಷಿಸದಿದ್ದುದರಿಂದ ಅವನ ರಕ್ಷಕತ್ವಸ್ವರೂಪಕ್ಕೆ ಹಾನಿಯುಂಟಾಗಿರಬೇಕಷ್ಟೆ! ಅದು ಈಗಲೇ ನಿವರ್ತಿಸಿತೆಂದು ಭಾವವು. ಸಂಸಾರಿಯಾದ ಚೇತನನು, ಭಗವದ್ಜ್ಞಾನದಿಂದ ಸದ್ಭಾವವನ್ನೂ, ಅದಿಲ್ಲದುದರಿಂದ ಅಸದ್ಭಾವವನ್ನೂ ಹೊಂದುವಂತೆ, ರಕ್ಷಕನಿಗೂ ರಕ್ಷಕತ್ವದಿಂದ ಸದ್ಭಾವವೂ, ಅದಿಲ್ಲದೆ ಹೋಗುವುದರಿಂದ ಅಸದ್ಭಾವವೂ ಉಂಟಾಗುವುವು. ಹೀಗೆ ಅಸತ್ಪ್ರಾಯನಾಗಿದ್ದ ರಾಮನಿಗೆ, ಈಗ ಹನುಮಂತನ ವಾಕ್ಯದಿಂದಲೇ ಸತ್ತೆಯುಂಟಾಯಿತೆಂದು ತಾತ್ಪರ್ಯವು. (ಪ್ರಸನ್ನಾತ್ಮಾ) ಧರ್ಮಿಗೆ ಸತ್ತೆಯುಂಟಾದಾಗಲೇ ಧರ್ಮಕ್ಕೂ ಸತ್ತೆಯುಂಟಾಗುವುದು. ರಾಮನಿಗೆ ಸತ್ತೆಯುಂಟಾದ ಮೇಲೆಯೇ ಆತನ ಮನಃಪ್ರಸನ್ನತೆಗೂ ಸತ್ತೆಯುಂಟಾಯಿತೆಂದು ಭಾವವು. ಸುಗ್ರೀವನ

ದಿಂದ, ಮುಂದಿದ್ದ ವಾನರರನ್ನು ಕುರಿತು, “ಎಲೈ ವಾನರರೆ! ಈಗ ನನಗೂ ಕೂಡ ಈ ವಿಭೀಷಣನ ವಿಷಯವಾಗಿ ಒಂದೆರಡು ಮಾತುಗಳನ್ನು ಹೇಳಬೇಕೆಂಬ ಕೋರಿಕೆಯುಂಟು. ನೀವೆಲ್ಲರೂ ನನಗೆ ಶ್ರೇಯಸ್ಸನ್ನು ಕೋರುವವರಾದುದರಿಂದ ನನ್ನ ಮಾತುಗಳೆಲ್ಲವನ್ನೂ ಆಮೂಲಾಗ್ರವಾಗಿ ಕೇಳಬೇಕೆಂದು ಕೋರುವೆನು. [1]ಮುಖ್ಯವಾಗಿ ನಾನು ನನ್ನಲ್ಲಿ ಶರಣಾಗತನಾಗಿ ಬಂದವನನ್ನು ಮಾತ್ರ ಹೇಗೂ

ವಾಕ್ಯದಿಂದ ಇದುವರೆಗೂ ಕಲುಷಿತವಾಗಿದ್ದ ರಾಮನ ಮನಸ್ಸು ಈಗ ಪ್ರಸನ್ನವಾಯಿತೆಂದು ಮುಖ್ಯತಾತ್ಪರ್ಯವು. (ವಾಯುಸುತಸ್ಯ) ಸಮಸ್ತ ಪ್ರಾಣಿಗಳಿಗೂ ಪ್ರಾಣಭೂತನಾದ ವಾಯುದೇವನಿಗೆ, ಅಂತಹ ಗುಣವುಳ್ಳವನಾಗಿಯೇ ಹುಟ್ಟಿದ ಹನುಮಂತನ (ಆತ್ಮನಿ ಸ್ಥಿತಂ ಶ್ರುತ್ವಾ) ಮನಸ್ಸಿನಲ್ಲಿರುವ ಭಾವವನ್ನು ಕೇಳಿ, ಅಥವಾ ತನ್ನ ಮನಸ್ಸಿನಲ್ಲಿರುವಂತೆ ಹೇಳಿದ ಹನುಮಂತನ ವಾಕ್ಯವನ್ನು ಕೇಳಿ (ಹ) ಈ ನಿಪಾತಾನ್ವಯದಿಂದ, ಸರ್ವಜಗದ್ರಕ್ಷಕನಿಗೂ ಕೂಡ ರಕ್ಷಕನೊಬ್ಬನು ಸಿಕ್ಕಿದನೆಂದು ಋಷಿಯು ಆಶ್ಚರ್ಯದಿಂದ ಹಿಗ್ಗಿ ಸ್ತೋತ್ರ ಮಾಡುವುದಾಗಿ ಭಾವವು. (ದುರ್ಧರ್ಷಃ) ಪೂರ್ವಪಕ್ಷದಿಂದ ಧರ್ಷಿಸಲ್ಪಡದೆ ಸ್ವಮತ ಸ್ಥಾಪನದಲ್ಲಿ ಸಮರ್ಥನಾದವನು. (ಶ್ರುತವಾನ್) ವಸಿಷ್ಠಾದಿಗಳಿಂದ ಕಪೋತಕಂಡೂಪಾಖ್ಯಾನಾದಿಗಳನ್ನು ಕೇಳಿ ತಿಳಿದವನು. ಇಂತಹ ರಾಮನು, (ಪ್ರತ್ಯಭಾಷತ) ಪ್ರತ್ಯುತ್ತರವನ್ನು ಹೇಳಿದನು (ತನಿಶ್ಲೋಕಿ).

1. ಇಲ್ಲಿ “ಮಿತ್ರಭಾವೇನ ಸಂಪ್ರಾಪ್ತಂ ನ ತ್ಯಜೇಯಂ ಕಥಂಚನ । ದೋಷೋ ಯದ್ಯಪಿ ತಸ್ಯ ಸ್ಯಾತ್ಸತಾಮೇತದಗರ್ಹಿತಂ” ಎಂದು ಮೂಲವು. ವಿಶೇಷಾರ್ಥವು— (ಮಿತ್ರಭಾವೇನ) ಇಲ್ಲಿನ ಮಿತ್ರಶಬ್ದಕ್ಕೆ “ಮಿತಾತ್ತ್ರಾಯತ ಇತಿ ಮಿತ್ರಂ” ಎಂಬ ವ್ಯುತ್ಪತ್ತಿಯಿಂದ, ಉಪಕಾರಕ್ಕೆ ತಕ್ಕ ಪ್ರತ್ಯುಪಕಾರವನ್ನು ಮಾಡುವವನೆಂಬ ಅರ್ಥವನ್ನು ಹೇಳಕೂಡದು. “ತನ್ಮಿತ್ರಂ ಯತ್ರ ವಿಶ್ವಾಸಃ” ಎಂಬಂತೆ, ಮಿತ್ರನೆಂದರೆ ವಿಶ್ವಸಿಸುವ ಸ್ಥಳವು. ಅದಾದರೋ ಇಲ್ಲಿ ನೈಚ್ಯಾನುಸಂಧಾನಪೂರ್ವಕವಾಗಿ ರಾಮನಲ್ಲಿ ಶರಣಾಗತಿಯು. “ಇದು ವಂಚಕರಲ್ಲಿಯೂ ಇರಬಹುದಲ್ಲವೆ?” ಎಂದರೆ, (ಭಾವೇನ) ಭಾವವೆಂದರೆ ಕ್ರಿಯೆಯು. ವಿಶ್ವಾಸಯೋಗ್ಯವಾದ ವ್ಯಾಪಾರವೆಂದರ್ಥವು. ಅಥವಾ ಇಲ್ಲಿ ಮಿತ್ರಭಾವವೆಂದರೆ ಸ್ನೇಹಭಾವವು. “ಶರಣಾಗತನಾಗಿ ಬಂದವನನ್ನು ಮಿತ್ರನೆಂದು ಹೇಳುವುದು ಹೇಗೆ?” ಎಂದರೆ, ಹಿಂದೆ ಸೀತೆಯು ರಾವಣನನ್ನು ಕುರಿತು ಬುದ್ಧಿವಾದವನ್ನು ಹೇಳುವಾಗ “ತೇನ ಮೈತ್ರೀ ಭವತು ತೇ” ಎಂದು ಕೇವಲ ನೀಚನಾದ ಆ ರಾವಣನಿಗೂ ಗೌರವವನ್ನಾರೋಪಿಸಿ ರಾಮನಿಗೆ ಮಿತ್ರನಾಗಿರೆಂದು ಹೇಳಿದಂತೆ, ಇಲ್ಲಿ ರಾಮನೂ ಶರಣಾಗತ ವಾತ್ಸಲ್ಯದಿಂದ ವಿಭೀಷಣನಲ್ಲಿ ಗೌರವವನ್ನೇ ಆರೋಪಿಸಿ, ತನಗೆ ಸಮಾನನನ್ನಾಗಿ ಹೇಳಿಕೊಂಡಿರುವನೆಂದು ಭಾವವು. (ಸಂಪ್ರಾಪ್ತಂ) ಸಮೀಪಕ್ಕೆ ಬಂದವನು. ಈತನು ಲಂಕೆಯಲ್ಲಿಯೇ ನಿಂತು “ರಾಘವಂ ಶರಣಂ ಗತಃ” ಎಂಬೀಮಾತನ್ನು ಹೇಳಿದ್ದ ಮಾತ್ರದಲ್ಲಿಯೂ ಕೂಡ

ಶರಣಾಗತವತ್ಸಲನಾದ ತಾನು, ಹಿಂದೆ ಗಜೇಂದ್ರರಕ್ಷಣಾರ್ಥವಾಗಿ, "ಅತಂದ್ರಿತಚಮೂಪತಿ ಪ್ರಹಿತಹಸ್ತಂ...ಭಗವತಸ್ತ್ವರಾಯೈನಮಃ" ಎಂಬ ರೀತಿಯಲ್ಲಿ ಹಿಂದುಮುಂದುನೋಡದೆ, ತನ್ನ ಪರಿವಾರವನ್ನೂ ಲಕ್ಷಿಸದೆ ಅತ್ಯಾತುರದಿಂದ ಹೋಗಿ ಆ ಗಜೇಂದ್ರನನ್ನು ರಕ್ಷಿಸಿದಂತೆ ಅಲ್ಲಿಗೇ ಹೋಗಿ ವಿಭೀಷಣನನ್ನೂ ರಕ್ಷಿಸಬೇಕಾಗಿತ್ತಲ್ಲವೆ? ಹಾಗಿಲ್ಲದೆ ಇಲ್ಲಿಗೇ ಬಂದು ಈ ಮಾತನ್ನು ಹೇಳಿದುವುದರಿಂದ ತನ್ನ ಶ್ರಮವನ್ನೂ ತಪ್ಪಿಸಿರುವನು. ಮತ್ತು (ಸಂಪ್ರಾಪ್ತಂ) ಸಾಮಾನ್ಯವಾಗಿ ಬಂದುದುಮಾತ್ರವಲ್ಲ. "ತ್ಯಕ್ತ್ವಾ ಪುತ್ರಾಂಶ್ಚ ದಾರಾಂಶ್ಚ ರಾಘವಂ ಶರಣಂ ಗತಃ" ಎಂಬಂತೆ ಶರಣಾಗತರಿಗೆ ತಕ್ಕ ಪ್ರಾತಿಕೂಲ್ಯವರ್ಜನರೂಪವಾದ ಅಂಗ ದೊಡನೆ ಕ್ರಮವಾಗಿಯೇ ಬಂದವನು. ಇಂತವನನ್ನು (ನ ತ್ಯಜೇಯಂ) ಬಿಡಲಾರೆನು. ಇದು ಸಂಭಾವನಾರ್ಥಕವು. ಈತನು ಬಂದಮಾತ್ರಕ್ಕೆ ನಾವು ಶ್ಲಾಘಿಸಿ ಪುರಸ್ಕರಿಸಬೇಕಾಗಿರುವಾಗ, ತ್ಯಜಿಸಬೇಕೆಂಬ ಸಂಭಾವನೆಗಾದರೂ ಅವಕಾಶವಿಲ್ಲವೆಂದರ್ಥವು. ಮೊದಲು ಅಸಂಭಾವನೆ ಯಾದರೂ ಹುಟ್ಟಿದರಲ್ಲವೇ ಆಮೇಲೆ ನೀವು ಹೇಳಿದಂತೆ ಪರೀಕ್ಷಿಸಿನೋಡಬೇಕಾಗಿ ಬರ ಬಹುದು. ಆ ಅನುಮಾನಕ್ಕೇ ಅವಕಾಶವಿಲ್ಲದಾಗ ಪರೀಕ್ಷಿಸಬೇಕಾದ ಪ್ರಯತ್ನವೇನೆಂದು ಭಾವವು. (ಕಥಂಚನ) ಎಷ್ಟು ದುಷ್ಕರವಾದರೂ ಅದನ್ನು ನಡೆಸಿಯೇ ತೀರಬೇಕು. ಇವನು ರಾವಣನ ತಮ್ಮನೆಂಬುದೂ ನಿಜವು! ಲೋಕಭಯಂಕರನೆಂಬುದೂ ಅವನ ಹೆಸರಿ ನಿಂದಲೇ ತಿಳಿಯುವುದು! ರಾಕ್ಷಸಜಾತಿಯವನೆಂಬುದನ್ನೂ ಒಪ್ಪಿಕೊಳ್ಳಬೇಕಾದುದೇ! ಇವನು ಮುಂದೆ ನಮಗೆ ವಧಭೇದಾದ್ಯುಪಾಯಗಳಿಗೂ ಪ್ರಯತ್ನಿಸಬಹುದು! ಹೀಗಿದ್ದರೂ ನಾನು ಬಿಡಲಾರೆನೆಂದು ಭಾವವು. "ಇಷ್ಟು ದೋಷಯುಕ್ತನೆಂಬುದನ್ನು ತಿಳಿದೂ ನೀನು ಅವನನ್ನು ತ್ಯಜಿಸದಿರುವುದುಂಟೆ?" ಎಂದರೆ, (ದೋಷೋ ಯದ್ಯಪಿ ತಸ್ಯ ಸ್ಯಾತ್) "ಅವನಲ್ಲಿ ಒಂದುವೇಳೆ ದೋಷವಿದ್ದರೂ ಇರಬಹುದು. ಆದರೂ, ಶರಣಾಗತಿಗೆ ಜನ್ಮವೃತ್ತಾದಿ ನಿಯಮಗಳೊಂದೂ ಇಲ್ಲವಾದುದರಿಂದ, ಪ್ರಪತ್ತಿಗಾಗಿ ಬಂದವನಲ್ಲಿ ದೋಷವಿಲ್ಲವೆಂಬುದೇ ನನ್ನ ಪಕ್ಷವು. ನಿಮ್ಮ ಪಕ್ಷದಿಂದ ದೋಷವಿದ್ದರೂ ನಾನು ಬಿಡ ಲಾರೆನು." "ಹೀಗೆ ದುಷ್ಟರನ್ನು ಸ್ವೀಕರಿಸುವುದರಿಂದ ಜನಗಳು ನಿಂದಿಸಲಾರರೆ?" ಎಂದರೆ, (ಸತಾಮೇತದಗರ್ಹಿತಂ) ಸಜ್ಜನರು ಇದನ್ನು ದೋಷವೆಂದೇ ಎಣಿಸಲಾರರು. ಅಸ್ಥಾನಭಯಶಂಕಿತರಾದ ನಿಮಗೆ ಇದು ನಿಂದ್ಯವಾಗಿ ತೋರಿದರೂ ಸತ್ಪುರುಷರಿಗೆ ಇದು ನಿಂದ್ಯವಾಗಿ ತೋರದು. ಅಥವಾ (ದೋಷೋ ಯದ್ಯಪಿ) ಒಂದುವೇಳೆ ದೋಷ ವಿದ್ದರೂ, (ಸ್ಯಾತ್) ಇರಲಿ! ಅವನಲ್ಲಿ ದೋಷವಿರಬೇಕೆಂಬುದೇ ನನ್ನ ಕೋರಿಕೆ! ಗುಣವಂತನನ್ನು ನಾವು ರಕ್ಷಿಸಿದರೂ, ಅವನ ಗುಣಕ್ಕೆ ಪ್ರತಿಫಲದಂತಾಗುವುದೇ ಹೊರತು ಅದರಿಂದ ನಮಗೆ ಅಷ್ಟಾಗಿ ಕೀರ್ತಿಯಿರದು. ದೋಷಿಯಾದವನನ್ನು ರಕ್ಷಿಸುವುದರಿಂದ ಅತಿಶಯವು ಇನ್ನೂ ಹೆಚ್ಚಾಗುವುದಲ್ಲವೆ? ಆದುದರಿಂದ ಹೆಚ್ಚಾಗಿ ದೋಷವಿದ್ದವನನ್ನೇ ರಕ್ಷಿಸಬೇಕಾದುದವಶ್ಯವೆಂದು ಭಾವವು. ಅಥವಾ (ದೋಷೋ ಯದ್ಯಪಿ) ದೋಷ ವಿದ್ದರೂ (ತಸ್ಯ) ಅವನದೇ ಅಲ್ಲವೆ. (ಸ್ಯಾತ್) ಇರಲಿ! ಅವನ ಸಂಬಂಧದಿಂದ

ಆ ದೋಷವೂ ಶ್ಲಾಘ್ಯವೆಂದೇ ಭಾವವು. ಅಥವಾ (ದೋಷೋ ಯದ್ಯಪಿ) ನೀವು ಹೇಳಿದಂತೆ ಅವನಲ್ಲಿ ನಿಜವಾಗಿಯೂ ವಂಚನೆಯಿದ್ದರೂ (ತಸ್ಯ ಸ್ಯಾತ್) ಅದರಂತೆಯೇ ಅವನ ಕಾರ್ಯವು ಕೈಗೂಡಲಿ! ಎಂದರೆ, ಒಂದುವೇಳೆ ಅವನು ನಮ್ಮಲ್ಲಿಗೆ ಶರಣಾಗತವೇಷದಿಂದ ಬಂದು, ನಮ್ಮನ್ನು ಕೊಲ್ಲುವುದಕ್ಕೇ ಉದ್ದೇಶಿಸಿದ್ದರೂ, ಆ ಉದ್ದೇಶವನ್ನೂ ಕೈಗೂಡಿಸಿ ಕೊಳ್ಳಲಿ! ಯಾವ ವಿಧದಿಂದಲಾದರೂ ಶರಣಾಗತನು ತನ್ನ ಕೋರಿಕೆಯನ್ನು ಕೈಗೂಡಿಸಿ ಕೊಂಡು ಸಂತೋಷದಿಂದಿರಬೇಕೆಂಬುದೇ ತನ್ನ ಮುಖ್ಯೋದ್ದೇಶವೆಂದೂ ಭಾವವು. ಈ ಅರ್ಥದಲ್ಲಿಯೇ ರಾಮನು ಮುಂದೆ ಕಪೋತಾಖ್ಯಾನವನ್ನು ದೃಷ್ಟಾಂತವಾಗಿ ಹೇಳುವುದ ರಿಂದ, ಇಲ್ಲಿಯೂ ತದನುಸಾರವಾಗಿ ಈ ಅರ್ಥವನ್ನು ಹೇಳುವುದೇ ಯುಕ್ತವೆಂದು ಶ್ರೀವತ್ಸಾಂಕಮಿಶ್ರರ ಅಭಿಪ್ರಾಯವು. ಈ ಅರ್ಥದಲ್ಲಿಯೇ "ತಸ್ಮಾದಪಿ ವಧ್ಯಂ ಪ್ರಪನ್ನಂ ನ ಪ್ರತಿಯಚ್ಛತಿ" ಎಂದು ಶ್ರುತಿಪ್ರಮಾಣವು. "ಹೀಗೆ ದುಷ್ಟನನ್ನು ಪರಿತ್ಯಜಿಸದಿರುವುದ ರಿಂದ ಗುಣವೇನು? ಪಾಪಕ್ಷಯವೇ? ಅಥವಾ ಪುರುಷಾರ್ಥಸಿದ್ಧಿಯೇ" ಎಂದರೆ, ಇವೊಂದೂ ನನ್ನ ಉದ್ದೇಶವಲ್ಲ. (ಸತಾಮೇತದಗರ್ಹಿತಂ) ಸಜ್ಜನಗೋಷ್ಠಿಯಲ್ಲಿ ನಿಂದೆಗೆ ಪಾತ್ರನಾಗದಿರಬೇಕೆಂಬುದೇ ತನ್ನ ಮುಖ್ಯೋದ್ದೇಶವೆಂದು ಭಾವವು.

ಮತ್ತು ಈ ಶ್ಲೋಕದಿಂದ ರಾಮನು, "ರಾಜನೀತಿಕ್ರಮದಿಂದ ನೋಡಿದರೂ ಅವನನ್ನು ಸ್ವೀಕರಿಸುವುದರಿಂದ ದೋಷವಿಲ್ಲ" ವೆಂದು ನಿರೂಪಿಸುವನು. (ಮಿತ್ರಭಾವೇನ) ಈತನು ನಿಜವಾಗಿ ಸ್ನೇಹಭಾವದಿಂದಲೇ ನಮ್ಮಲ್ಲಿಗೆ ಬಂದಿರುವನೇ ಹೊರತು "ಪ್ರಾಪ್ತ ಶ್ಚತ್ರುರತರ್ಕಿತಃ" ಎಂದೂ, "ರಾವಣೇನ ಪ್ರಣಿಹಿತಂ" ಎಂದೂ ನೀವು ಹೇಳುವಂತೆ, ಶತ್ರುವಾಗಿಯಾಗಲಿ, ದೂತನಾಗಿಯಾಗಲಿ, ಗೂಢಚಾರನಾಗಿಯಾಗಲಿ ಬಂದವನಲ್ಲ. "ಒಂದು ವೇಳೆ ಈಗ ನೀನು ನಂಬುವಂತೆ ಮಿತ್ರಭಾವದಿಂದಲೇ ಬಂದಿದ್ದರೂ, ಈಗ ರಾವಣನನ್ನು ಬಿಟ್ಟುಬಂದ ಹಾಗೆ, ಇನ್ನು ಸ್ವಲ್ಪಕಾಲದೊಳಗೆ ಏನೋ ವ್ಯಾಜವನ್ನಿಟ್ಟುಕೊಂಡು ನಮ್ಮನ್ನೂ ದ್ವೇಷಿಸಿಕೊಂಡು ಹೋಗಲಾರನೆ?" ಎಂದರೆ, ಹಾಗಲ್ಲ! (ಮಿತ್ರಭಾವೇನ) ಅಲ್ಲಿಂದ ಬರುವಾಗಲೂ ತನ್ನಲ್ಲಿ ಕ್ರೂರವಾಕ್ಯವನ್ನಾಡಿ ಧಿಕ್ಕರಿಸಿದ ರಾವಣನಲ್ಲಿಯೂ, ಮಿತ್ರಭಾವವನ್ನೇ ತೋರಿಸುತ್ತ, ಆಗಲೂ ಆ ರಾವಣನಿಗೆ ಪರುಷವಾಕ್ಯದಿಂದಲೇ ಪ್ರತ್ಯುತ್ತರ ವನ್ನು ಹೇಳಿದ "ಸ ತ್ವಂ ಭ್ರಾತಾಸಿ ಮೇ ರಾಜನ್ ಬ್ರೂಹಿ ಮಾಂ ಯದ್ಯದಿಚ್ಛಸಿ। ಜ್ಯೇಷ್ಠೋ ಮಾನ್ಯಃ ಪಿತೃಸಮಃ" ಎಂದು ಪೂಜ್ಯಭಾವವನ್ನೇ ತೋರಿಸಿರುವನು. "ಆತ್ಮಾನಂ ಸರ್ವದಾ ರಕ್ಷ" ಎಂದೂ "ಸ್ವಸ್ತಿ ತೇಽಸ್ತು ಗಮಿಷ್ಯಾಮಿ ಸುಖೀ ಭವ ಮಯಾ ವಿನಾ" ಎಂದೂ ಆಗಲೂ ಆತನಿಗೆ ಸಾರಿಸಾರಿ ಹಿತವನ್ನೇ ಹೇಳಿಬಂದಿರುವನು. ಹೀಗೆ ಶತ್ರುವಿನಲ್ಲಿಯೂ ನಯವನ್ನು ತೋರಿಸತಕ್ಕ ಸ್ವಭಾವವುಳ್ಳ ಈತನ ಮೈತ್ರಿಯು ಎಂದಿಗೂ ಅಪಾಯಕರವಲ್ಲವೆಂದು ಭಾವವು. "ಹಾಗೂ ಆಗಲಿ! ಇವನೊಡನೆ ಮಿತ್ರ ಭಾವವನ್ನು ತೋರಿಸುವುದರಿಂದ ಫಲವೇನು? ಇವನಿರುವುದು ಲಂಕೆಯಲ್ಲವೆ? ಹೇಗಿದ್ದರೂ ಶತ್ರುಮಧ್ಯದಲ್ಲಿ ಸೇರಿಕೊಂಡಿರುವವನಿಂದ, ನಮಗೆ ಯಾವ ಸಹಾಯವುಂಟು?" ಎಂದರೆ

(ಸಂಪ್ರಾಪ್ತಂ) ಇಲ್ಲಿಗೇ ಬಂದು ಚೆನ್ನಾಗಿ ಕಣ್ಣೆದುರಿಗೆ ನಿಂತಿರುವನು. "ಬಂದ ಮಾತ್ರದಿಂದೇನು ? ಇವನು ನಮಗೆ ಅನುಕೂಲನೆಂಬ ನಂಬಿಕೆಯೇನು ?" ಎಂದರೆ (ಸಂಪ್ರಾಪ್ತಂ) ಸಾಮಾನ್ಯವಾಗಿ ಬಂದವನಲ್ಲ. ಚೆನ್ನಾಗಿಯೇ ಬಂದಿರುವನು. ಎಂದರೆ ಸೀತೆಗೆ ತನ್ನ ಮಗಳಾದ ಅನಲೆಯಿಂದ ಆಗಾಗ ದುಃಖಸಮಾಧಾನವನ್ನು ಮಾಡಿಸಿರುವನು. ಲಂಕೆಯಲ್ಲಿ ರಾಕ್ಷಸರು ಹನುಮಂತನನ್ನು ಕೊಲ್ಲುವುದಕ್ಕೆ ಪ್ರಯತ್ನಿಸಿದಾಗ ದೂತವಧವು ಕೂಡದೆಂದು ಅವರಿಗೆ ನೀತಿಯನ್ನುಪದೇಶಿಸಿ ಅವನ ಪ್ರಾಣಗಳನ್ನು ಉಳಿಸಿರುವನು. "ಪ್ರದೀಯತಾಂ ದಾಶರಥಾಯ ಮೈಥಿಲೀ" ಎಂದು ರಾವಣನಿಗೆ ಸಾರಿಸಾರಿ ಹಿತವನ್ನು ಹೇಳಿರುವನು. ಹೀಗೆ ಈತನು ನಮಗೆ ಅನೇಕ ವಿಧದಿಂದ ಉಪಕಾರಕನಾಗಿಯೇ ಬಂದಿರುವನೆಂದು ಭಾವವು. "ಇವನು ನಿಜವಾಗಿಯೇ ನಿನ್ನಲ್ಲಿ ಸ್ನೇಹಕ್ಕಾಗಿ ಬಂದಿದ್ದರೂ ನಮ್ಮಂತೆ ನಿನ್ನಲ್ಲಿ ಮೈತ್ರಿಯನ್ನು ತೋರಿಸಬಲ್ಲನೆ" ಎಂದರೆ (ಸಂಪ್ರಾಪ್ತಂ) ನಿಮಗಿಂತಲೂ ಮೇಲಾಗಿಯೇ ಬಂದಿರುವನು. ನಾವು ಋಶ್ಯಮೂಕಕ್ಕೆ ಬಂದಾಗ "ಜಗಾಮ್ಗಿರಿತಟಾತ್ತಸ್ಮಾದನ್ಯಂ ಶಿಖರಮುತ್ತಮಂ" ಎಂದು ನಿಮ್ಮಹಾಗೆ ಬೆಟ್ಟದಿಂದ ಬೆಟ್ಟಕ್ಕೆ ಹಾರಿಹೋದವನಲ್ಲ. ಮತ್ತು "ಬಾಹುರೇಷ ಪ್ರಸಾರಿತಃ" ಎಂಬಂತೆ ಕೈಚಾಚಿ ನಮ್ಮನ್ನು ಸಾಮ್ಯಬುದ್ಧಿಯಿಂದ ಅಪ್ಪಿಕೊಳ್ಳುವುದಕ್ಕೆ ಬಂದವನಲ್ಲ. "ಪಾದಯೋಶ್ಶರಣಾನ್ವೇಷೀ" ಎಂದು ಎಷ್ಟೋ ವಿನಯದಿಂದ ಪಾದಗಳನ್ನು ಹಿಡಿದು ಮರೆಹುಗುವುದಕ್ಕಾಗಿಯೇ ಬಂದಿರುವನು. ಮತ್ತು "ವಿಜಿತಾರಿಸ್ಸದಾರಶ್ಚ ರಾಜ್ಯೇ ಮಹತಿ ಚ ಸ್ಥಿತಃ |" ಎಂದು ತನ್ನ ಕಾರ್ಯವು ನಡೆದುಹೋದಮೇಲೆ, ರಾಜ್ಯಭೋಗದಲ್ಲಿಯೂ, ಕಾಮಸುಖದಲ್ಲಿಯೂ ಮುಳುಗಿ ನಮ್ಮನ್ನು ಮರೆತ ಈ ಸುಗ್ರೀವನಂತಲ್ಲದೆ "ತ್ಯಕ್ತ್ವಾ ಪುತ್ರಾಂಶ್ಚ ದಾರಾಂಶ್ಚ ರಾಘವಂ ಶರಣಂ ಗತಃ" ಎಂಬಂತೆ ತನ್ನ ರಾಜ್ಯವನ್ನೂ, ತನ್ನ ಭಾರ್ಯೆಯರನ್ನೂ ತಾನಾಗಿಯೇ ಬಿಟ್ಟು ನಮ್ಮನ್ನೇ ನಂಬಿ ಬಂದಿರುವನು. ಮತ್ತು ಮೊದಲು ನಾನು ನಿಮ್ಮಲ್ಲಿಗೆ ಬಂದಾಗ ಸುಗ್ರೀವನು ನನ್ನನ್ನು ನೋಡಿ ಭಯದಿಂದ "ಅಂತರಂಗನಾಗಿ ಬಂದಿರುವನೋ ? ಹಿಡಿಸುವುದಕ್ಕೆ ಬಂದಿರುವನೋ ? ನಿಗ್ರಹಿಸಬೇಕಾದವನೋ ? ಅನುಗ್ರಹಿಸಬೇಕಾದವನೋ ? ವಧ್ಯನೋ ಅವಧ್ಯನೋ ? ಎಂದು ನಾನಾ ವಿಧವಾಗಿ ಶಂಕಿಸಿದಂತಲ್ಲದೆ, ನನ್ನಲ್ಲಿ ಒಂದೇ ನಂಬಿಕೆಯಿಂದ ದೃಢಚಿತ್ತನಾಗಿ ಬಂದಿರುವನು. ಹೀಗೆ ಈತನ ಪ್ರಥಮ ಸಮಾಗಮವೇ ನಿಮ್ಮ ಸೇರುವೆಗಿಂತಲೂ ಹೆಚ್ಚು ವಿಶ್ವಾಸವನ್ನು ಕಾಣಿಸುವುದೆಂದು ಭಾವವು. ಇವನು ಯಾವರೀತಿಯಿಂದ ಬಂದರೇನು ? "ಅತತಾಯಿನಮಾಯಾಂತಂ ಹನ್ಯಾದೇವಾವಿಚಾರಯನ್" ಎಂಬ ರಾಜನೀತಿಯನ್ನನುಸರಿಸಿ, ರಾವಣನಿಗೆ ತಮ್ಮನಾದ ಈತನನ್ನು ಕಂಡಾಗಲೇ ಪೂರ್ವಾಪರಗಳನ್ನು ವಿಚಾರಿಸದೆ ಕೊಲ್ಲಬೇಡವೆ" ? ಎಂದರೆ, ಕೊಲ್ಲುವುದು ಹಾಗಿರಲಿ! (ನ ತ್ಯಜೇಯಂ) ಮೊದಲು ನಾನು ಅವನನ್ನು ಬಿಡುವವನೇ ಅಲ್ಲ. ಒಂದುವೇಳೆ ನಿಮ್ಮ ಮಾತನ್ನಾದರೂ ಬಿಡುವೆನೇ ಹೊರತು ಅವನನ್ನು ಮಾತ್ರ ಎಂದಿಗೂ ಬಿಡಲಾರೆನು. "ಹಾಗೆ ಅವನನ್ನು ಬಿಡಬಾರದಾಗಿದ್ದ ಪಕ್ಷದಲ್ಲಿ ನಮ್ಮನ್ನೇ ಕಳೆದುಕೊಳ್ಳ

ಬೇಕಾಗಿ ಬರಬಹುದಲ್ಲವೆ?" ಎಂದರೆ (ಕಥಂಚನ) ಹೇಗಿದ್ದರೂ ಆತನನ್ನು ಮಾತ್ರ ಬಿಡಲಾರೆನು. "ಅಪ್ಯಹಂ ಜೀವಿತಂ ಜಹ್ಯಾಂ ತ್ವಾಂ ವಾ ಸೀತೇ ಸಲಕ್ಷ್ಮಣಾಂ" "ಪ್ರಾಣವನ್ನಾದರೂ ಬಿಡಬಲ್ಲೆನು! ಪ್ರಾಣಭೂತಳಾದ ಸೀತೆಯನ್ನಾದರೂ ಬಿಡಬಲ್ಲೆನು! ಅರ್ಧದೇಹದಂತಿರುವ ಲಕ್ಷ್ಮಣನನ್ನಾದರೂ ಬಿಡಬಲ್ಲೆನು! ನನ್ನ ಪ್ರತಿಜ್ಞೆಯನ್ನು ಮಾತ್ರ ನಾನು ಬಿಡಲಾರೆನೆಂದು ಹೇಳಿದೆನಲ್ಲವೆ? ಅದರಂತೆಯೇ ಈಗಲೂ ಮುಂದೆ ಎಷ್ಟೇ ಅನರ್ಥಕ್ಕೆ ಕಾರಣವಾಗಬಹುದಾದರೂ ಶರಣಾಗತನನ್ನುಮಾತ್ರ ನಾನು ಎಂದಿಗೂ ಬಿಡಲಾರೆನು!" "ಹಾಗೂ ಆಗಲಿ! ಶರಣಾಗತರನ್ನು ಬಿಡಬಾರದೆಂದು ಹೇಳಿದೆಯಲ್ಲವೆ! ನಾವೂ ಅವನಂತೆಯೇ ಶರಣಾಗತರಾಗಿ ನಿನ್ನಲ್ಲಿ ಸೇರಿರುವಾಗ ನಮ್ಮಲ್ಲಿಯೂ ಆ ವಾತ್ಸಲ್ಯವಿರಬೇಡವೆ!" ಎಂದರೆ ಹಸುವು ಆಗಲೇ ಹುಟ್ಟಿದ ತನ್ನ ಎಳಗರುವನ್ನು ಕಾಪಾಡುವುದಕ್ಕಾಗಿ, ತನ್ನ ಮೊದಲಿನ ಕರುಗಳನ್ನು ಕೊಂಬುಗಳಿಂದ ತಿವಿದೋಡಿಸುವಂತೆ ಈಗ ಹೊಸದಾಗಿ ಶರಣಾಗತನಾದವನನ್ನು ಹೆಚ್ಚು ಪ್ರೇಮದಿಂದ ಆದರಿಸಬೇಕಾದುದೇ ಉಚಿತವಾಗಿರುವುದರಿಂದ (ಕಥಂಚನ) ಹೇಗೂ ನಾನು ಅವನನ್ನು ಬಿಡಲಾರೆನು. "ಪೂರ್ವಾಪಕಾರಿಣಾಂ ತ್ಯಾಗೇ ನ ಹ್ಯಧರ್ಮೋ ವಿಧೀಯತೇ" ಶರಣಾಗತರಾಗಿದ್ದರೂ "ಮೊದಲು ಅಪಕಾರಮಾಡಿದವರನ್ನು ಬಿಡುವುದರಿಂದ ದೋಷವಿಲ್ಲ"ವೆಂಬ ವಿಧಿಯುಂಟಲ್ಲವೆ? ಇಲ್ಲಿಯೂ ಭಾರ್ಯಾಪಹರಣವನ್ನು ಮಾಡಿದ ರಾವಣನಿಗೆ ತಮ್ಮನಾದ ಈತನು, ಇಲ್ಲಿಗೆ ಬಂದ ಮಾತ್ರಕ್ಕೆ ದೋಷಿಯಾದ ಅವನನ್ನು ಸ್ವೀಕರಿಸುವುದು ಹೇಗೆ? ಎಂದರೆ (ದೋಷೋ ಯದ್ಯಪಿ) ನಿಮ್ಮ ಅಭಿಪ್ರಾಯದಂತೆ ಆತನಿಗೆ ದೋಷವಿದ್ದರೂ (ತಸ್ಯ ಸ್ಯಾತ್) ಅದು ಅವನಿಗಿರಬೇಕಾದುದೇ! ಅದರಿಂದಲೇ ಅವನಿಗೆ ಅಧಿಕಾರಸಂಪತ್ತಿಯುಂಟಾಗುವುದು. "ಅಹಮಸ್ಮ್ಯಪರಾಧಾನಾಮಾಲಯಃ" ಎಂಬಂತೆ ಶರಣಾಗತನ ದೋಷವೇ ಆತನನ್ನು ಶರಣಾಗತಿಗೆ ಅಧಿಕಾರಿಯನ್ನಾಗಿ ಮಾಡುವುದು. "ಹಾಗೆ ದ್ರೋಹಿಯನ್ನಾದರೂ ಸ್ವೀಕರಿಸಿ ಕಾಪಾಡುವುದರಿಂದ ಪ್ರಯೋಜನವೇನು?" ಎಂದರೆ, (ಸತಾಮೇತದಗರ್ಹಿತಂ) ಸಾಧುಕೋಟಿಯಲ್ಲಿ ಸೇರಿಸಿಕೊಳ್ಳಲ್ಪಡುವುದೇ ಇದರ ಮುಖ್ಯ ಪ್ರಯೋಜನವು. ಯಯಾತಿಯನ್ನು ರಕ್ಷಿಸಿದ ಶೈಬ್ಯಾದಿಗಳ ಗೋಷ್ಠಿಗೂ, ಶುನಶ್ಶೇಫಾದಿಗಳನ್ನು ರಕ್ಷಿಸಿದ ವಿಶ್ವಾಮಿತ್ರಾದಿಗಳ ಗೋಷ್ಠಿಗೂ ಹೊರಗಾಗದಿರಬೇಕೆಂದೇ ತನ್ನ ಕೋರಿಕೆಯೆಂದು ಭಾವವು.

ಮುಖ್ಯವಾಗಿ ಇದುವರೆಗಿನ ವಿಚಾರಗಳಿಂದ ಪ್ರತಿಪಾದಿಸಲ್ಪಡುವ ಮುಖ್ಯಾರ್ಥವೇನೆಂದರೆ, ಮೊದಲು ಸುಗ್ರೀವಾದಿಗಳು "ವಿಭೀಷಣನು ದುಷ್ಟನಾದುದರಿಂದ ಆತನನ್ನು ಪರಿಗ್ರಹಿಸಬಾರದೆಂದು ಹೇಳಿದರು. ಅಂಗದಾದಿಗಳು ವಿಭೀಷಣನನ್ನು ಮೊದಲು ಪರೀಕ್ಷಿಸಿ, ಆತನು ದುಷ್ಟನಲ್ಲವೆಂದು ತೋರಿದರೆ ಆಮೇಲೆ ಪರಿಗ್ರಹಿಸಬಹುದೆಂದರು. ವಿಭೀಷಣನಲ್ಲಿ ದೋಷವಿಲ್ಲವೆಂದೂ ಈ ಕಾರಣದಿಂದ ಅವನನ್ನು ಪರಿಗ್ರಹಿಸಬಹುದೆಂದೂ ಹನುಮಂತನು ಹೇಳಿದನು. ರಾಮನಾದರೋ ತನ್ನಲ್ಲಿ ಬಂದು "ಶರಣು" ಎಂಬ ಮಾತನ್ನು ಹೇಳಿದವನು. ದುಷ್ಟನಾಗಿದ್ದರೂ, ಇಲ್ಲದಿದ್ದರೂ ಪರಿಗ್ರಹಿಸಿಯೇ ತೀರಬೇಕೆಂದನು. ಇದರಿಂದ ಸುಗ್ರೀ

ಬಿಡಲಾರೆನು. ನಿಮ್ಮ ಪಕ್ಷದಂತೆ ಒಂದುವೇಳೆ ದೋಷವಿದ್ದರೂ ಇರಲಿ! ಹೇಗಿದ್ದರೂ ಶರಣಾಗತನಾಗಿ ಬಂದವನನ್ನು ಪರಿಗ್ರಹಿಸುವುದು ಸತ್ಪುರುಷರಿಗೆ ಆದರಣೀಯವೇ ಹೊರತು ನಿಂದಾಸ್ಪದವಲ್ಲ" ಎಂದನು. ಇದನ್ನು ಕೇಳಿ ವಾನರೋತ್ತಮನಾದ ಸುಗ್ರೀವನು, ಆ ವಾಕ್ಯಾರ್ಥವನ್ನು ತನ್ನಲ್ಲಿ ತಾನೇ ಚೆನ್ನಾಗಿ ವಿಮರ್ಶಿಸಿನೋಡಿ, ನೀತಿಯುಕ್ತವಾಗಿಯೂ ತನ್ನ ಸ್ವಾಮಿಗೆ ಹಿತಕರವಾಗಿಯೂ ಇರುವ ಶುಭವಾಕ್ಯದಿಂದ ರಾಮನನ್ನು ಕುರಿತು "ರಾಮಾ! ಈ ರಾಕ್ಷಸನು ಕೇವಲ ದುಷ್ಟನಾಗಿದ್ದರೇನು? ನಿರ್ದೋಷಿಯಾಗಿದ್ದರೇನು? ಇವನಂತೂ ರಾಕ್ಷಸನು. ಇವನಿಂದ ನಮಗೆ ನಡೆಯಬೇಕಾದ ಕೆಲಸವೇನು?[1] ಇವನು ತನ್ನಣ್ಣನಾದ ರಾವಣ

ವನು ದುಷ್ಟನೆಂದು ಹೇಳಿದ ಕಾರಣವೂ ಸರಿಯಲ್ಲ. ಅದಕ್ಕಾಗಿ ಅವನನ್ನು ಪರಿಗ್ರಹಿಸಬಾರದೆಂಬ ಮತವೂ ಸಾಧುವಲ್ಲ. ದೋಷವಿದ್ದರೂ ಶರಣಾಗತನನ್ನು ಪರಿಗ್ರಹಿಸಬೇಕೆಂಬುದೇ ಅದಕ್ಕೆ ಖಂಡನವು. ಅಂಗದಾದಿಗಳು ಹೇಳಿದಂತೆ ಮೊದಲು ಅವನನ್ನು ಪರೀಕ್ಷಿಸಿ, ಅವನು ದುಷ್ಟನಲ್ಲವೆಂದು ತೋರಿದಾಗ ಪರಿಗ್ರಹಿಸಬಹುದೆಂಬ ನಿಬಂಧನವೂ ಸರಿಯಲ್ಲ. ಶರಣಾಗತನ ವಿಷಯದಲ್ಲಿ ಗುಣದೋಷ ಪರೀಕ್ಷೆಯೇ ಯುಕ್ತವಲ್ಲವೆಂಬುದು ಅದಕ್ಕೆ ಖಂಡನವು. ಹನುಮಂತನು ಪರಿಗ್ರಹಿಸಬಹುದೆಂದು ಹೇಳಿದ ವಾಕ್ಯವೊಂದು ಮಾತ್ರವೇ ಸರಿಯೇ ಹೊರತು ಅದಕ್ಕೆ ಕಾರಣವಾಗಿ ದುಷ್ಟನಲ್ಲವೆಂದು ಹೇಳಿದ ವಾಕ್ಯವೂ ಅಂಗೀಕರಿಸತಕ್ಕುದಲ್ಲ. ಶರಣಾಗತನು "ಶರಣು" ಎಂದು ಹೇಳಿದ ಈ ಮೂರಕ್ಷರಗಳು ಮಾತ್ರವೇ ಅವನನ್ನು ಪರಿಗ್ರಹಿಸುವುದಕ್ಕೆ ಮುಖ್ಯ ಕಾರಣವೇ ಹೊರತು, ಅವನು ದುಷ್ಟನಲ್ಲವೆಂಬುದು ಕಾರಣವಾಗುವುದಿಲ್ಲವೆಂದು ಹನುಮಂತನ ಮತಕ್ಕೂ ಖಂಡನವು. ಹೀಗೆ ರಾಮನು ಇವರೆಲ್ಲರ ಮತಗಳನ್ನೂ ಲಲಿತವಾಗಿ ನಿರಸನಮಾಡಿ, ಶರಣಾಗತಿಯೊಂದೇ ತನ್ನ ಪರಿಗ್ರಹಕ್ಕೆ ಮುಖ್ಯಕಾರಣವೆಂದು ಸಿದ್ಧಾಂತೀಕರಿಸಿರುವುದಾಗಿ ಗ್ರಾಹ್ಯವು. ಮತ್ತು ಇದರಿಂದ ಭಗವಂತನು "ನ ಸ್ಮರತ್ಯಪಕಾರಾಣಾಂ ಶತಮಪ್ಯಾತ್ಮವತ್ತಯಾ। ಕಥಂಚಿದುಪಕಾರೇಣ ಕೃತೇನೈಕೇನ ತುಷ್ಯತಿ" ಎಂದೂ, ಕ್ಷಾಂತಮಿತ್ಯಬ್ರವೀದ್ಧರಿ" ಎಂದೂ, "ಮಾಂ ವ್ರಜ। ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ" ಎಂದೂ, "ಮದ್ಭಕ್ತಂ ನಯಾಮಿ ಪರಮಾಂ ಗತಿಂ" ಎಂದೂ, ಅಲ್ಲಲ್ಲಿ ಹೇಳಿರುವಂತೆ, ಪ್ರಪತ್ತ್ಯಧಿಕಾರಿಯಲ್ಲಿ ಎಷ್ಟೇ ದೋಷವಿದ್ದರೂ, ಅವನನ್ನು ಪ್ರತಿಗ್ರಹಿಸುವ ವಿಷಯದಲ್ಲಿ ಎಷ್ಟೇ ಪ್ರತಿಬಂಧಕಗಳು ಬಂದರೂ, ಅವೊಂದನ್ನೂ ಲಕ್ಷಿಸದೆ ಆತನನ್ನು ಕೈಸೇರಿಸಿಕೊಳ್ಳುವನೆಂಬರ್ಥವು ಪ್ರತಿಪಾದಿತವಾಗುವುದು.

1. "ಈದೃಶಂ ವ್ಯಸನಂ ಪ್ರಾಪ್ತಂ ಭ್ರಾತರಂ ಯಃ ಪರಿತ್ಯಜೇತ್। ಕೋ ನಾಮ ನ ಭವೇತ್ತಸ್ಯ ಯಮೇಷಾ ನ ಪರಿತ್ಯಜೇತ್" ಎಂದು ಮೂಲವು. ವಿಶೇಷಾರ್ಥವು "ಗುಣದೋಷಗಳ ವಿಚಾರದಲ್ಲಿ ನಮ್ಮಿಬ್ಬರಿಗೂ ಅಭಿಪ್ರಾಯಭೇದವಿದ್ದರೂ, ಜಾತಿಯಲ್ಲಿ ಇವನು ರಾಕ್ಷಸನಾದುದರಿಂದ ಆ ಮಾತ್ರಕ್ಕೇ ನಾವು ಇವನನ್ನು ತ್ಯಜಿಸಬೇಕಾಗುವುದು. ಇದರ

ನಿಗೆ ಇಂತಹ ಮಹಾವ್ಯಸನವು ಪ್ರಾಪ್ತವಾಗಿರುವಾಗಲೂ ಆತನಲ್ಲಿ ಒಡಹುಟ್ಟಿದ ಮರುಕವನ್ನೂ ತೋರಿಸದೆ ಬಿಟ್ಟು ಬಂದವನಲ್ಲವೇ? ಹಾಗೆ ಸಹೋದರನನ್ನೇ ಅಷ್ಟು ಕಷ್ಟದಶೆಯಲ್ಲಿಯೂ ತೊರೆದು ಬಂದ ಈ ಪರಮನಿರ್ಘೃಣನು ಬೇರೆ ಯಾರನ್ನು ತಾನೇ ಸಮಯದಲ್ಲಿ ಕೈಬಿಟ್ಟು ಹೋಗಲಾರನು? ಇವನು ಕೇವಲ ಕೃತಘ್ನನೆಂಬುದಕ್ಕೆ ಇದೊಂದೇ ಸಾಕಾದ ನಿದರ್ಶನವಲ್ಲವೇ?" ಎಂದನು. ಸತ್ಯ ಪರಾಕ್ರಮನಾಗಿಯೂ, ಕಕುತ್ಸ್ಥ ಕುಲತಿಲಕನಾಗಿಯೂ ಇರುವ ರಾಮನು, ಸುಗ್ರೀವನ ಈ ಮಾತನ್ನು ಕೇಳಿ ಮುಗುಳ್ನಗೆಯಿಂದ ನಗುತ್ತ, ಮುಂದಿದ್ದ ಸಮಸ್ತ ವಾನರರನ್ನೂ ನೋಡಿ, ರಾಜನೀತಿಯನ್ನನುಸರಿಸಿಯೇ ಆತನ ಮಾತಿಗೆ ಪ್ರತ್ಯುತ್ತರವನ್ನು ಹೇಳುವವನಾಗಿ, ಪುಣ್ಯಲಕ್ಷಣವುಳ್ಳ ತನ್ನ ತಮ್ಮನಾದ [1]ಲಕ್ಷ್ಮಣನನ್ನು ಕುರಿತು, "ವತ್ಸ ಲಕ್ಷ್ಮಣಾ! ಈ ವಾನರೇಶ್ವರನಾದ ಸುಗ್ರೀವನು ಹೇಳಿದ ಮಾತನ್ನು ಕೇಳಿದೆಯಷ್ಟೆ? ಶಾಸ್ತ್ರಗಳನ್ನೋದದೆಯೂ, ವೃದ್ಧರನ್ನು ಸೇವಿಸದೆಯೂ ಇರುವವನಿಗೆ ಈ ವಿಧವಾದ ಮಾತನ್ನಾಡುವುದು ಎಂದಿಗೂ ಸಾಧ್ಯವಲ್ಲ! ಸುಗ್ರೀವನು ಹೇಳಿದಂತೆ ಈ ವಿಭೀಷಣನು ತನ್ನಣ್ಣನನ್ನೂ ಬಿಟ್ಟು ನಮ್ಮಲ್ಲಿಗೆ ಬಂದುದರಲ್ಲಿ ಅತಿಸೂಕ್ಷ್ಮವಾದ ಯಾವುದೋ ಒಂದು ರಾಜನೀತಿಯು

ಮೇಲೆ ಇವನು ನಡೆಸಿಬಂದಿರುವ ಕೃತ್ಯದಿಂದಲೂ, ಇವನು ಯಾರಿಗೂ ವಿಶ್ವಾಸಾರ್ಹನಲ್ಲವೆಂದೂ ವ್ಯಕ್ತವಾಗುವುದು" ಎಂದು ಹೇಳಿ ಸುಗ್ರೀವನು ಅದನ್ನು ನಿರೂಪಿಸುವನು. (ಈದೃಶಂ)ಇಷ್ಟು ಸರ್ವೈಶ್ವರ್ಯಸಮೃದ್ಧಿಯುಳ್ಳವನಾಗಿಯೂ (ವ್ಯಸನಂ ಪ್ರಾಪ್ತಂ)ಇಂತಹ ಮಹಾವ್ಯಸನಕ್ಕೆ ಎಂದರೆ ಲಂಕಾದಹನ ಬಂಧುವಧಾದಿ ವ್ಯಸನಕ್ಕೆ ಸಿಕ್ಕಿದವನಾಗಿಯೂ ಇದರ ಮೇಲೆ (ಭ್ರಾತರಂ) ಸಾಕ್ಷಾತ್ಸಹೋದರನಾಗಿಯೂ ಇರುವ ರಾವಣನನ್ನೇ ಈ ಸ್ಥಿತಿಯಲ್ಲಿ ಬಿಟ್ಟುಬಂದವನು, ಬೇರೆ ಯಾರನ್ನು ತಾನೇ ಬಿಟ್ಟು ಹೋಗಲಾರನು? ತನಗೆ ಬೇಕಾದವನಲ್ಲಿ ಐಶ್ವರ್ಯಸಮೃದ್ಧಿ, ವ್ಯಸನ ಪ್ರಾಪ್ತಿ, ಬಂಧುತ್ವಾಭಿಮಾನಗಳೆಂಬ ಈ ಮೂರರಲ್ಲಿ ಒಂದೊಂದಿದ್ದರೂ ಅಂತವರನ್ನು ಬಿಡುವುದಕ್ಕೆ ಮನಸ್ಸು ಬಾರದು. ಹೀಗಿರುವಾಗಲೂ ಈ ಮೂರೂ ಪೂರ್ಣವಾಗಿದ್ದವನನ್ನೇ ಬಿಟ್ಟು ಬಂದವನು ಬೇರೆ ಯಾರನ್ನು ಬಿಡಲಾರನೆಂದು ಭಾವವು.

1. ಇಲ್ಲಿ ರಾಮನು ಲಕ್ಷ್ಮಣನನ್ನು ಕುರಿತು ಹೇಳುವುದರಿಂದಲೂ, ಉಪಸಂಹಾರದಲ್ಲಿ (ಸಹಲಕ್ಷ್ಮಣಃ) ಎಂದು ಲಕ್ಷ್ಮಣಸಹಿತನಾದ ಸುಗ್ರೀವನೆಂದು ಹೇಳುವುದರಿಂದಲೂ, ಸುಗ್ರೀವಲಕ್ಷ್ಮಣರಿಬ್ಬರೇ ಈ ಮಾತನ್ನು ಹೇಳಿದರೆಂದೂ, ಅವರಿಬ್ಬರನ್ನು ಕುರಿತೇ ರಾಮನೂ ಈ ಉತ್ತರವನ್ನು ಹೇಳುವನೆಂದೂ ಊಹಿಸಬೇಕು.

ಇದ್ದೇ ಇರಬೇಕು. [1]ಆದರೆ ನನಗೆ ಈ ವಿಷಯದಲ್ಲಿ ಅದಕ್ಕಿಂತಲೂ ಸೂಕ್ಷ್ಮವಾದ ರಾಜನೀತಿಯೊಂದು ತೋರಿರುವುದು. ಇದು ಪ್ರತ್ಯಕ್ಷವಾಗಿಯೇ ಕಾಣುವುದಲ್ಲದೆ ಲೋಕವ್ಯವಹಾರಸಿದ್ಧವಾಗಿಯೂ ಇರುವುದು. ಈ ನೀತಿಯನ್ನು ಸಮಸ್ತ ರಾಜರಲ್ಲಿಯೂ ಕಾಣಬಹುದು. ಜ್ಞಾತಿಗಳಾಗಲಿ, ಪರ್ಯಂತರಾಜರಾಗಲಿ ವ್ಯಸನ ಕಾಲದಲ್ಲಿ ಮೇಲೆಬಿದ್ದು ಪ್ರಹರಿಸುವರಾದುದರಿಂದ ಅವರನ್ನು ಶತ್ರುಗಳೆಂದೇ ತಿಳಿಯಬೇಕು. ಈ ವಿಭೀಷಣನೂ ಈಗ ತನ್ನಣ್ಣನಾದ ರಾವಣನು ಕಷ್ಟಕ್ಕೆ ಸಿಕ್ಕಿರುವುದನ್ನು ನೋಡಿ, ಆತನನ್ನು ನಿಗ್ರಹಿಸಬೇಕೆಂಬುದಕ್ಕಾಗಿಯೇ ನಮ್ಮಲ್ಲಿಗೆ ಬಂದಿರಬೇಕು. ಇಲ್ಲವೇ ಆ ರಾವಣನೇ ತನಗುಂಟಾದ ಈ ವ್ಯಸನದಲ್ಲಿ ತನ್ನ ಜ್ಞಾತಿಯಾದ ವಿಭೀಷಣನು ತನ್ನನ್ನು ಪ್ರಹರಿಸುವನೆಂಬ ಭಯದಿಂದ ಇವನನ್ನು ರಾಜ್ಯದಿಂದೋಡಿಸಿರಬೇಕು! ಹೇಗಿದ್ದರೂ ನಾವು ಇವನನ್ನು ಪರಿಗ್ರಹಿಸುವುದರಲ್ಲಿ ದೋಷವಿಲ್ಲ. ಜ್ಞಾತಿಗಳಾಗಿದ್ದರೂ, ಪಾಪಬುದ್ಧಿಯಿಲ್ಲದೆ ಕೆಲವರು ಮಾತ್ರ, ತಮಗೆ ಇಷ್ಟರಾದ ಜ್ಞಾತಿಗಳನ್ನು ತಪ್ಪದೆ ಗೌರವಿಸುವುದೂ ಉಂಟು. ಆದರೇನು? ಲೋಕದ ನಡತೆಯೇ ಹೀಗೆ ಪಾಪಭೂಯಿಷ್ಠವಾಗಿರುವುದರಿಂದ, ಅಂತಹ ಪುಣ್ಯಾತ್ಮರಾದ ರಾಜರಿಗೂ ಕೂಡ, ಉತ್ತಮಗುಣವುಳ್ಳ ಜ್ಞಾತಿಗಳಲ್ಲಿಯೂ ಶಂಕಿಸಬೇಕಾಗಿ ಬರುವುದು. ಹೀಗಿರುವಾಗ ಪಾಪಬುದ್ಧಿಯುಳ್ಳ ರಾಜನಿಗೆ, ತನ್ನ ಜ್ಞಾತಿಯ ವಿಷಯದಲ್ಲಿ ಶಂಕೆಯುಂಟಾಗುವುದೆಂಬುದನ್ನು ಹೇಳಬೇಕಾದುದೇನು?

---

1. ಇಲ್ಲಿ "ಅಸ್ತಿ ಸೂಕ್ಷ್ಮತರಂ ಕಿಂಚಿತ್ ಯದತ್ರ ಪ್ರತಿಭಾತಿ ಮೇ। ಪ್ರತ್ಯಕ್ಷಂ ಲೌಕಿಕಂ ವಾಪಿ ವಿದ್ಯತೇ ಸರ್ವರಾಜಸು" ಎಂದು ಮೂಲವು. ವಿಶೇಷಾರ್ಥವು (ಅಸ್ತಿ ಸೂಕ್ಷ್ಮತರಂ) ಸುಗ್ರೀವನ ವಾಕ್ಯವೇ ಸೂಕ್ಷ್ಮವಾದುದು. ಈಗ ನಾನು ಹೇಳುವ ಮಾತು ಅದಕ್ಕಿಂತಲೂ ಸೂಕ್ಷ್ಮತರವು. ಇದಕ್ಕೆ ಮೇಲೆ ಪೂರ್ವಪಕ್ಷವೇ ಇಲ್ಲವೆಂದು ಭಾವವು. (ಕಿಂಚಿತ್) ತನ್ನ ವಾಕ್ಯವು ಸುಗ್ರೀವನ ವಾಕ್ಯಕ್ಕಿಂತಲೂ ಮೇಲಾಗಿದ್ದರೂ, ಆತ್ಮಸ್ತುತಿಯನ್ನು ತಗ್ಗಿಸುವುದಕ್ಕಾಗಿ (ಕಿಂಚಿತ್) ಎಂದು, ಲಘುತ್ವಸೂಚಕವಾದ ಶಬ್ದವು. (ಪ್ರತ್ಯಕ್ಷಂ ಲೌಕಿಕಂ ವಾಪಿ ವಿದ್ಯತೇ ಸರ್ವರಾಜಸು) ಈ ರಾಜಧರ್ಮಸೂಕ್ಷ್ಮವು ಪ್ರತ್ಯಕ್ಷವಾಗಿಯೂ, ಲೋಕ ವ್ಯವಹಾರ ಸಿದ್ಧವಾಗಿಯೂ ಇರುವುದಲ್ಲದೆ, ಸಮಸ್ತರಾಜರಲ್ಲಿಯೂ, ಇದು ನಡೆಯುತ್ತಲೇ ಇರುವುದೆಂದರ್ಥವು. ಇದರಿಂದ ಈ ಸುಗ್ರೀವನು ಈಗ ನಮ್ಮಲ್ಲಿರುವ ಪ್ರೇಮಾತಿಶಯದಿಂದ ಈ ಮಾತನ್ನಾಡುತ್ತಿದ್ದರೂ, ಈ ಜಾತಿವಧವೆಂಬ ರಾಜನೀತಿಯನ್ನು ಹಿಂದೆ ನಾವು ಇವನಲ್ಲಿಯೇ ಪ್ರತ್ಯಕ್ಷವಾಗಿ ನೋಡಿರುವೆವಲ್ಲವೆ?" ಎಂದು ರಾಮನು ಸುಗ್ರೀವನಿಗೆ ಮರ್ಮೋದ್ಘಾಟನವಾಗುವಂತೆ ಹೇಳಿದುದಾಗಿ ಭಾವವು.

ಆದುದರಿಂದ ಈಗ ಈ ವಿಭೀಷಣನೂ ಕೂಡ, ಪಾಪಿಯಾದ ರಾವಣನು ತನ್ನಲ್ಲಿ ಶಂಕಿಸುವುದನ್ನು ನೋಡಿ, ಅವನೊಡನೆ ವಿರೋಧಿಸಿಕೊಂಡೇ ಬಂದಿರಬೇಕು. ಆದರೆ ಈಗ ಶತ್ರುಪಕ್ಷದವನಾದ ಈತನನ್ನು ಕೈಸೇರಿಸಿಕೊಳ್ಳುವ ವಿಷಯದಲ್ಲಿ ನೀನು ದೋಷವನ್ನು ಹೇಳಿದೆಯಷ್ಟೇ ? ಅದಕ್ಕೂ ತಕ್ಕ ಸಮಾಧಾನವನ್ನು ಹೇಳಬಹುದು. ನೀನು ಹೇಳಿದ ಆ ದೋಷವನ್ನೇ ಕಾರಣವಾಗಿಟ್ಟುಕೊಂಡು ನಾವು ಅವನನ್ನು ಪರಿಗ್ರಹಿಸಬೇಕೆಂಬುದಕ್ಕೇ ನೀತಿಶಾಸ್ತ್ರಾನುಸಾರವಾದ ಒಂದು ಕಾರಣವೂ ಉಂಟು. ಅದನ್ನೂ ನಿನ್ನ ಮನಸ್ಸಿಗೊಪ್ಪುವಂತೆ ಹೇಳುವೆನು ಕೇಳು. ನಾವು ಈ ರಾಕ್ಷಸನಿಗೆ ಸಮಾನಕುಲದವರಾದ ಜ್ಞಾತಿಗಳೂ ಅಲ್ಲ. ನಾವು ಆಸೆಪಡುವವರಲ್ಲ. ರಾವಣನಲ್ಲಿರುವಂತೆ ಈತನಲ್ಲಿ ನಮಗೆ ಶತ್ರುತ್ವಶಂಕೆಗೂ ಅವಕಾಶವಿಲ್ಲ. ಈತನಾದರೋ ರಾಜ್ಯದಾಸೆಯಿಂದಲೇ ನಮ್ಮಲ್ಲಿಗೆ ಬಂದಿರುವನು. ಈತನಿಗೆ ನಮ್ಮಿಂದ ರಾವಣನನ್ನು ಕೊಲ್ಲಿಸಬೇಕೆಂಬ ಉದ್ದೇಶವೂ ಇರುವುದರಿಂದ, ತನ್ನ ಕಾರ್ಯವು ಕೆಡುವುದೆಂಬ ಭಯದಿಂದಾದರೂ ನಮಗೆ ಕೇಡನ್ನು ಬಯಸಲಾರನು. ಮಂದಬುದ್ಧಿಯುಳ್ಳ ರಾಕ್ಷಸರಿಗೆ ಇಷ್ಟು ದೂರಾಲೋಚನೆಯೇನೆಂದು ಕೇಳುವೆಯಾ ? ರಾಕ್ಷಸರಲ್ಲಿಯೂ ಎಷ್ಟೋ ಬುದ್ಧಿಶಾಲಿಗಳುಂಟು ! ಆದುದರಿಂದ ನಾವು ಈತನನ್ನು ಪರಿಗ್ರಹಿಸುವುದರಿಂದ ದೋಷವಿಲ್ಲ. ಅವರಲ್ಲಿ ಐಕಮತ್ಯವು ಮಾತ್ರ ಎಂದಿಗೂ ಹುಟ್ಟದು. ಅವಸರವು ಬಂದಾಗ ಕ್ಷಣಮಾತ್ರದಲ್ಲಿ ಥಟ್ಟನೆ ಕದಲಿಹೋಗುವುದು. ಈಗ ಈ ವಿಭೀಷಣನ ದೊಡ್ಡ ಕಂಠಧ್ವನಿಯನ್ನೂ, ಇವನ ಮನಸ್ಸಿನಲ್ಲಿರುವ ಆತುರವನ್ನೂ ನೋಡಿದರೆ ಇವನು ತನ್ನ ಜ್ಞಾತಿಯಾದ ರಾವಣನಿಗೆ ಹೆದರಿ ಬಂದಿರುವಂತೆಯೇ ಕಾಣುವುದು. ಆ ಭಯದಿಂದಲೇ ಆತ್ಮರಕ್ಷಣವನ್ನು ಕೋರಿ ನಮ್ಮಲ್ಲಿಗೆ ಬಂದಿರಬಹುದಾದುದರಿಂದ, ಇವನನ್ನು ಪರಿಗ್ರಹಿಸುವುದೇ ಯುಕ್ತವು. "ಎಷ್ಟೇ ದುಷ್ಟನಾಗಿದ್ದರೂ, ಅಣ್ಣನನ್ನನುವರ್ತಿಸಬೇಕಾದುದೇ ಧರ್ಮವಲ್ಲವೆ ?" ಎಂದು ನೀನು ಹೇಳಬಹುದು. [1]ಸುಗ್ರೀವಾ !

ಇಲ್ಲಿ "ನ ಸರ್ವೇ ಭ್ರಾತರಸ್ತಾತ ಭವಂತಿ ಭರತೋಪಮಾಃ । ಮದ್ವಿಧಾ ವಾ ಪಿತುಃ ಪುತ್ರಾಃ ಸುಹೃದೋ ವಾ ಭವದ್ವಿಧಃ" ಎಂದು ಮೂಲವು. ವಿಶೇಷಾರ್ಥವು. ಎಷ್ಟೇ ದುಷ್ಟನಾದರೂ ಜ್ಯೇಷ್ಠನನ್ನನುವರ್ತಿಸಬೇಕಾದುದೇ ಧರ್ಮವಲ್ಲವೆ ? ಎಂದರೆ ಈ ಧರ್ಮವು ಎಲ್ಲಾ ಕಡೆಯಲ್ಲಿಯೂ ಸಂಭವಿಸದೆಂದು ಹೇಳುವನು. (ಸರ್ವೇ ಭ್ರಾತರಃ ಭರತೋಪಮಾ ನ ಭವಂತಿ) ಒಡಹುಟ್ಟಿದವರೆಲ್ಲರೂ ಭರತನಂತೆಯೇ ಇರಲಾರರು. ತನ್ನ ತಾಯಿಯಾದ

ಲೋಕದಲ್ಲಿ ಒಡಹುಟ್ಟಿದವರೆಲ್ಲರೂ ಭರತನಂತೆಯೇ ಇರುವರೆಂದೂ, ತಂದೆಯ ಮಕ್ಕಳೆಲ್ಲರೂ ನನ್ನಂತೆಯೇ ಇರುವರೆಂದೂ, ಮಿತ್ರರೆಲ್ಲರೂ ನಿನ್ನಂತೆಯೇ ಇರುವ

ಕೈಕೇಯಿಯು ತನಗಾಗಿ ಎಷ್ಟೋ ಕಷ್ಟಪಟ್ಟು ತನ್ನ ತಂದೆಯಿಂದ ರಾಜ್ಯವನ್ನು ಕೊಡಿಸಿದರೂ, ನಿರಾಯಾಸವಾಗಿ ಕೈಗೆ ಬಂದ ಆ ರಾಜ್ಯವನ್ನೂ ಪರಿತ್ಯಜಿಸಿ, ಕಾಡಿಗೆ ಬಂದ ನನ್ನನ್ನೇ ಹಿಂಬಾಲಿಸಿ ಬಂದು "ರಾಜ್ಯವು ನಿನಗೆ ಸೇರಿದುದು. ಇದನ್ನು ನೀನೇ ಅಂಗೀಕರಿಸಬೇಕು. ನಾನು ನಿನಗೆ ದಾಸ್ಯವನ್ನು ಮಾಡುತ್ತಿರುವೆನು" ಎಂದು ಹೇಳುವಂತವನು ಭರತನ ಹಾಗೆ ಬೇರೊಬ್ಬನುಂಟೆ? ಭರತನಿಗಿಂತಲೂ, ಲಕ್ಷ್ಮಣನಿಗೆ ರಾಮನಲ್ಲಿ ಪ್ರೀತಿವಿಶ್ವಾಸಗಳು ಹೆಚ್ಚಾಗಿದ್ದರೂ, ಇಂತಹ ಪ್ರಸಕ್ತಿಯು ಲಕ್ಷ್ಮಣನಿಗಿಲ್ಲದುದರಿಂದ ಆತನನ್ನು ಇಲ್ಲಿ ಗ್ರಹಿಸಲಿಲ್ಲವು. (ಮದ್ವಿಧಾ ವಾ ಪಿತುಃ ಪುತ್ರಾಃ) ತಂದೆಗೆ ನನ್ನಂತಹ ಮಕ್ಕಳಾಗಲಿ ಇರಲಾರರು. ರಾಜ್ಯದಲ್ಲಿ ನನಗೆ ಸಂಪೂರ್ಣವಾದ ಬಾಧ್ಯತೆಯಿದ್ದರೂ, ಪಿತೃವಚನಪರಿಪಾಲನಾರ್ಥವಾಗಿಯೇ ರಾಜ್ಯವನ್ನು ಬಿಟ್ಟು ಕಾಡಿಗೆ ಬಂದ ನನ್ನಂತೆ, ಲೋಕದಲ್ಲಿ ಬೇರೆ ಯಾವ ರಾಜಪುತ್ರನುಂಟೆಂದು ಭಾವವು. ಇಲ್ಲಿ ರಾಮನು ಯಥಾರ್ಥವನ್ನು ಹೇಳುವುದರಿಂದ, ಆತ್ಮಪ್ರಶಂಸಾರೂಪವಾದ ದೋಷವಿಲ್ಲವು "ಕೃಪಾವಾನವಿಕತ್ಥನಃ" ಎಂದು ಹೆಮ್ಮೆಯನ್ನು ಹೇಳಿಕೊಳ್ಳದಿರುವುದೇ ಧೀರೋದಾತ್ತಲಕ್ಷಣವಾಗಿದ್ದರೂ, "ಸತಾಂ ಹಿ ಸಂದೇಹಪದೇಷು ವಸ್ತುಷು ಪ್ರಮಾಣಮಂತಃಕರಣಪ್ರವೃತ್ತಯಃ" ಎಂಬುದಾಗಿ ದುಷ್ಯಂತನು ತಮ್ಮಂತಹ ಸತ್ಪುರುಷರ ಮನಃಪ್ರವೃತ್ತಿಯೇ ಸಂದೇಹವನ್ನು ನಿರ್ಣಯಿಸುವ ಪ್ರಮಾಣವೆಂದೂ "ವೈನತೇಯಮಹಂ ಶಕ್ತಃ ಪರಿಗಂತುಂ ಸಹಸ್ರಧಾ" ಎಂದು ಹನುಮಂತನು, ತನ್ನ ಗಮನಶಕ್ತಿಗೆ ಎಣೆಯೇ ಇಲ್ಲವೆಂದೂ, ಹೇಳಿಕೊಂಡುದೆಲ್ಲವೂ ಯಥಾರ್ಥೋಕ್ತಿಯಾದುದರಿಂದ, ಅವುಗಳಿಗೆ ಹೇಗೆ ಆತ್ಮಸ್ತುತಿ ದೋಷವಿಲ್ಲವೋ ಹಾಗೆಯೇ ಇಲ್ಲಿಯೂ ಗ್ರಹಿಸಬೇಕು. ಅಥವಾ (ಮದ್ವಿಧಾ ವಾ ಪಿತುಃ ಪುತ್ರಾ) ತಂದೆಯುಳ್ಳವರಲ್ಲಿ ನನ್ನಂತವರು ಬೇರೊಬ್ಬರೂ ಇಲ್ಲವೆಂದೂ ಅರ್ಥಾಂತರವನ್ನು ಹೇಳಬಹುದು. ಅರುವತ್ತುಸಾವಿರ ವರ್ಷಗಳ ವರೆಗೆ ರಾಜ್ಯಭಾರವನ್ನು ಮಾಡಿ, ಮಹಾತಪಸ್ಸಿನಿಂದ ನನ್ನನ್ನು ಪಡೆದು, ನನ್ನ ವಿಯೋಗದುಃಖದಿಂದಲೇ ಲೋಕಾಂತರವನ್ನೂ ಹೊಂದಿದಂತಹ ಅಸಾಧಾರಣ ಪುತ್ರವಾತ್ಸಲ್ಯವುಳ್ಳ ತಂದೆಯನ್ನು ನಾನೊಬ್ಬನಲ್ಲದೆ ಬೇರೆಯಾವ ಮಕ್ಕಳು ಪಡೆದಿರುವರೆಂದು ಭಾವವು. (ಸುಹೃದೋ ವಾ ಭವದ್ವಿಧಾಃ) ನಿನ್ನಂತಹ ಸ್ನೇಹಿತರಾಗಲಿ ಲೋಕದಲ್ಲಿ ಬೇರೆಲ್ಲಿಯೂ ಸಿಕ್ಕಲಾರರು. ಹಿಂದೆ ನೀನು ಕಿಷ್ಕಿಂಧೆಯಲ್ಲಿದ್ದಾಗ, ಮಳೆಗಾಲವು ಕಳೆದಮೇಲೆಯೂ ನೀನು ಬಾರದೆ ಕೊಂಚ ತಡಮಾಡಿದುದನ್ನು ನೋಡಿ ನಾನು, "ತ್ವಾಂ ತು ಸತ್ಯಾದತಿಕ್ರಾಂತಂ ಹನಿಷ್ಯಾಮಿ ಸಬಾಂಧವಂ" ಎಂದು ಹೇಳಿ, ಅತ್ಯಾಕ್ರೋಶಗೊಂಡು ಲಕ್ಷ್ಮಣನನ್ನು ಕಳುಹಿಸಲು, ಆತನೂ ನಿನ್ನ ಮುಂದೆ ಆಡಬಾರದ ಮಾತುಗಳನ್ನೆಲ್ಲಾ ಆಡಿದರೂ, ನಮ್ಮಲ್ಲಿರುವ ಪ್ರೇಮಾತಿಶಯದಿಂದ ನೀನು ಅವೊಂದನ್ನೂ ಗಮನಿಸದೆ ಈಗಲೂ ನಮಗೆ ಸಹಾಯ ಮಾಡುತ್ತಿರುವೆಯಲ್ಲವೆ? ಇಂತಹ ಸ್ನೇಹಿತರು ಬೇರೊಬ್ಬರೂ ಇಲ್ಲವೆಂದೂ ಭಾವವು.

ರೆಂದೂ ಎಣಿಸುವುದಕ್ಕಾದೀತೆ ? ಇಂತಹ ಧರ್ಮಾತ್ಮರು ಲೋಕದಲ್ಲಿ ದುರ್ಲಭರಾದುದರಿಂದ, ರಾವಣನು ಈತನಲ್ಲಿ ಒಡಹುಟ್ಟಿದ ಪ್ರೇಮವನ್ನಿಡದೆ, ಇವನನ್ನು ದ್ವೇಷಿಸುತ್ತಿರಬಹುದು. ಅದಕ್ಕಾಗಿಯೇ ಈತನು ಅಣ್ಣನನ್ನಗಲಿ ನಮ್ಮಲ್ಲಿಗೆ ಬಂದಿರಬಹುದು. ಆದುದರಿಂದ ನಾವು ಇವನನ್ನು ಪರಿಗ್ರಹಿಸುವುದೇ ಯುಕ್ತವು." ಎಂದನು. [1]ರಾಮನು ಹೇಳಿದ ಈ ಮಾತನ್ನು ಕೇಳಿ, ಮಹಾಪ್ರಾಜ್ಞನಾದ ಸುಗ್ರೀವನು, ಲಕ್ಷ್ಮಣಸಹಿತನಾಗಿ ಮೇಲಕ್ಕೆದ್ದು ರಾಮನಿಗೆ ತಲೆಬಗ್ಗಿ "ರಾಮಾ ! ತಾಳ್ಮೆಯುಳ್ಳವರಲ್ಲಿ ನೀನು ಮೇಲೆಂಬುದೇನೋ ನಿಜವು. ಆದರೇನು ! ಈ ವಿಭೀಷಣನಲ್ಲಿ ಮಾತ್ರ ಆ ತಾಳ್ಮೆಯನ್ನು ತೋರಿಸಬಾರದು. ಆತನನ್ನು ನಿಗ್ರಹಿಸುವುದೇ ನನಗೆ ಉಚಿತವೆಂದು ತೋರುವುದು. [2]ಈ ರಾಕ್ಷಸನು ರಾವಣನಿಂದ ರಹಸ್ಯ

---

1. ಇದುವರೆಗೆ ಸುಗ್ರೀವನು ನೀತಿಯ ಮೂಲಕವಾಗಿಯೇ ವಿಭೀಷಣನು ತ್ಯಾಜ್ಯನೆಂಬುದನ್ನು ನಾನಾವಿಧದಿಂದ ನಿರೂಪಿಸಿದನು. ಇಷ್ಟಾದರೂ ರಾಮನಿಗೆ ವಿಭೀಷಣನಲ್ಲಿದ್ದ ಪಕ್ಷಪಾತವು ಸ್ವಲ್ಪಮಾತ್ರವೂ ತಗ್ಗದಿರುವುದನ್ನು ನೋಡಿ, ಆ ರಾಕ್ಷಸನನ್ನು ಪರಿಗ್ರಹಿಸುವುದರಿಂದ ಮುಂದೆ ರಾಮನಿಗೆ ಯಾವಾಗ ಯಾವ ಅನರ್ಥವುಂಟಾಗುವುದೋ ಎಂದು ಶಂಕಿಸಿ, ರಾಮನನ್ನು ವಶಪಡಿಸಿಕೊಳ್ಳಬೇಕಾದರೆ ಶರಣಾಗತಿಯಲ್ಲದೆ ಬೇರೆ ಉಪಾಯವಿಲ್ಲವೆಂದೂ ನಿಶ್ಚಯಿಸಿ, ತಾನೂ ಅಲ್ಲಿ ವಿಭೀಷಣನಂತೆಯೇ ಶರಣಾಗತಿಯನ್ನು ಮಾಡಿ ಪ್ರಾರ್ಥಿಸುವನು. (ಸಹಲಕ್ಷ್ಮಣಃ) ಎಂಬುದರಿಂದ ಅಲ್ಲಿ ವಿಭೀಷಣನು ಮಾಡಿದ ಶರಣಾಗತಿಯೊಂದಕ್ಕಿಂತಲೂ, ತಾನು ಲಕ್ಷ್ಮಣನೊಡನೆ ಸೇರಿ ಮಾಡುವ ಶರಣಾಗತಿಯು ಇಮ್ಮಡಿಯಾಗುವುದೆಂದೆಣಿಸಿ, ಆ ವಿಭೀಷಣನನ್ನು ನಿಗ್ರಹಿಸಬೇಕೆಂದು ಶರಣಾಗತಿದ್ವಯಪೂರ್ವಕವಾಗಿ ರಾಮನನ್ನು ಪ್ರಾರ್ಥಿಸುವನೆಂದು ಭಾವವು.

2. ಇಲ್ಲಿ "ರಾವಣೇನ ಪ್ರಣಿಹಿತಂ ತಮವೇಹಿ ನಿಶಾಚರಂ" ಎಂದು ಮೂಲವು. ಸುಗ್ರೀವನು ಇದೇ ವಿಷಯವನ್ನು ಮೊದಲೇ ತಿಳಿಸಿರುವಾಗ, ಈಗಲೂ ತಿರುಗಿ ಆ ವಾಕ್ಯವನ್ನೇ ಹೇಳಿದ ಪ್ರಯೋಜನವೇನೆಂದರೆ, ಮೊದಲು ರಾಮನು ವಿಭೀಷಣನು ಹೇಳಿದ "ಶರಣು" ಎಂಬ ಮಾತಿನಿಂದ ಅಪಹೃತಚಿತ್ತನಾಗಿ, ಆಗ ತನ್ನ ಮಾತನ್ನು ಗಮನಿಸದಿರಬಹುದೆಂದೆಣಿಸಿ, ಈಗ ತಾನೂ ಆ ವಿಭೀಷಣನಂತೆಯೇ ಶರಣಾಗತಿ ಶಬ್ದವನ್ನೇ ಹೇಳಿ ಪ್ರಾರ್ಥಿಸುವುದರಿಂದ, ರಾಮನ ಮನಸ್ಸು ಇತ್ತಲಾಗಿ ತಿರುಗಿ, ತನ್ನ ಮಾತನ್ನೂ ಲಾಲಿಸಿ ಕೇಳಬಹುದೆಂಬ ನಂಬಿಕೆಯಿಂದ, ತಿರುಗಿ ಅದನ್ನೇ ಹೇಳುವುದಾಗಿ ತಿಳಿಯಬೇಕು. ಇದಕ್ಕಾಗಿಯೇ ಇಲ್ಲಿ ನಿಶಾಚರನೆಂಬ ವಿಶೇಷಣವು. ಕಳ್ಳನು ಅರ್ಧರಾತ್ರಿಯಲ್ಲಿ ಮನೆಗೆ ನುಗ್ಗಿ ಪರರ ಸ್ವತ್ತನ್ನು ಅಪಹರಿಸುವಂತೆ, ಈ ರಾಕ್ಷಸನೂ ಮೋಸದಿಂದ ನಿನ್ನ ಮನಸ್ಸನ್ನು ತನ್ನ ಕಡೆಗೆ ಆಕರ್ಷಿಸಿಕೊಂಡಿರಬಹುದೆಂದು ಇದರ ಭಾವವು.

ವಾಗಿ ಕಳುಹಿಸಲ್ಪಟ್ಟವನೆಂದು ನೀನು ಚೆನ್ನಾಗಿ ತಿಳಿ! ಎಲೆ ಮಹಾಬಾಹೋ! ಈ ರಾಕ್ಷಸನು ಕುಟಿಲಬುದ್ಧಿಯುಳ್ಳ ರಾವಣನ ಮಾತಿನ ಮೇಲೆಯೇ ಇಲ್ಲಿಗೆ ಬಂದಿರುವನು. ಅವನು ಈಗ ತನ್ನ ನಿಜವಾದ ಉದ್ದೇಶವನ್ನು ಮರೆಸಿಟ್ಟುಕೊಂಡು, ನಮಗೆ ನಂಬಿಕೆಯನ್ನು ಹುಟ್ಟಿಸಿ, ಆ ನಂಬಿಕೆಯಿಂದ ನಾವು ಎಚ್ಚರತಪ್ಪಿದ್ದಾಗ [1]ನಿನ್ನನ್ನೋ, ನನ್ನನ್ನೋ, ಅಥವಾ ಈ ಲಕ್ಷ್ಮಣನನ್ನೋ ಕೊಲ್ಲುವುದಕ್ಕೆ ಕಾದಿರುವನು. ನಾವು ನಮ್ಮ ಮಂತ್ರಿವರ್ಗಗಳೊಡನೆ ಇವನ ಕೊಲೆಗೆ ಪಾತ್ರರಾಗ ಬೇಕಾಗುವುದು. ಈತನು ಘಾತುಕನಾದ ಆ ರಾವಣನಿಗೆ ತಮ್ಮನೆಂಬುದೊಂದೇ ಸಾಕಲ್ಲವೆ? ಇವನನ್ನು ಹೇಗೆ ನಂಬಬಹುದು?'' ಎಂದನು. ಮಾತುಬಲ್ಲವ ನಾಗಿಯೂ, ವಾನರಸೇನಾಪತಿಯಾಗಿಯೂ ಇರುವ ಸುಗ್ರೀವನು, ಮಾತಿನಲ್ಲಿ ಚತುರನಾದ ರಾಮನನ್ನು ಕುರಿತು, ಇಷ್ಟುಮಾತ್ರವನ್ನು ಹೇಳಿ ಸುಮ್ಮನಿದ್ದನು. ಸುಗ್ರೀವನು ಹೇಳಿದ ಈ ಮಾತನ್ನು ಕೇಳಿ ರಾಮನು ಅದಕ್ಕೆ ಸಮಾಧಾನವೇ ನೆಂದು ತನ್ನಲ್ಲಿ ತಾನು ಚಿಂತಿಸಿ, ತಿರುಗಿ ಆ ಸುಗ್ರೀವನನ್ನು ಕುರಿತು

---

1. ಇಲ್ಲಿ "ಪ್ರಹರ್ತುಂ ತ್ವಯಿ ವಿಶ್ವಸ್ತೇ ಪ್ರಚ್ಛನ್ನೋ ಮಯಿ ಚಾನಘ। ಲಕ್ಷ್ಮಣೇ ವಾ" ಎಂದು ಮೂಲವು. ಇಲ್ಲಿ ಸುಗ್ರೀವನು ತನಗೂ, ಲಕ್ಷ್ಮಣನಿಗೂ ಅನರ್ಥವುಂಟಾಗ ಬಹುದೆಂದು ಹೇಳಿ, ತನ್ನ ಪ್ರಾಣಭಯವನ್ನು ತೋರಿಸಿದುದರಿಂದ ಅವನ ಸ್ವಾರ್ಥಪರತೆಯು ಹೊರಬೀಳುವುದಿಲ್ಲವೆ?" ಎಂದರೆ, ರಾಮನಿಗೆ ತನ್ನ ವ್ಯಸನಕ್ಕಿಂತಲೂ ತನ್ನಲ್ಲಿ ಶರಣಾಗತ ರಾದವರ ವ್ಯಸನವೇ ಮತ್ತಷ್ಟು ಮರ್ಮಭೇದಕವಾಗಬಹುದೆಂಬು ತಿಳಿದು, ಅದನ್ನೇ ರಾಮ ನಿಗೆ ತಿಳಿಸಿ ಆ ಮೂಲವಾಗಿಯಾದರೂ ವಿಭೀಷಣನನ್ನು ನಿಗ್ರಹಿಸುವುದಕ್ಕಾಗಿ ಪ್ರಯತ್ನಿ ಸುವನು. ಇದರಿಂದ ಸುಗ್ರೀವನು ರಾಮನನ್ನು ಕುರಿತು "ರಾಮಾ! ಹಿಂದೆ ನೀನು ತ್ವಯಿ ಕಿಂಚಿತ್ಸಮಾಪನ್ನೇ ಕಿಂ ಕಾರ್ಯಂ ಸೀತಯಾ ಮಮ" ಎಂದು ಹೇಳಿ ಸೀತೆಗಿಂತಲೂ ನನ್ನಲ್ಲಿ ಹೆಚ್ಚಾಗಿ ಪ್ರೇಮವನ್ನು ತೋರಿಸಿದವನಲ್ಲವೆ? ಮತ್ತು ಈಗಲೂ ನೀನು (ಸುಹೃದೋ ವಾ ಭವದ್ವಿಧಾಃ) ನಿನ್ನಂತೆ ಸ್ನೇಹಿತರೇ ಲೋಕದಲ್ಲಿಲ್ಲವೆಂದೂ ಹೇಳಿದವನಲ್ಲವೆ? ಇಷ್ಟುಪ್ರೇಮಾ ಸ್ಪದನಾದ ನನಗಾಗಲಿ, (ಮುಹೂರ್ತಮಪಿ ಜೀವಾಮಃ) ಎಂದು ಯಾವನನ್ನು ಬಿಟ್ಟು ನೀನು ಮುಹೂರ್ತಮಾತ್ರವಾದರೂ ಜೀವಿಸಲಾರೆನೆಂದು ಹೇಳಿರುವೆಯೋ, ಅಂತಹ ಲಕ್ಷ್ಮಣನಿಗಾಗಲಿ, ಇವನು ಏನಾದರೂ ಅಪಾಯವನ್ನು ತಂದಿಡಬಹುದು. ಒಂದುವೇಳೆ ಶರಣಾಗತವಾತ್ಸಲ್ಯದಿಂದ ನಿನ್ನ ಕ್ಷೇಮದಲ್ಲಿ ನೀನು ದೃಷ್ಟಿಯಿಡದೆ ಹೋದರೂ, ಆಶ್ರಿತ ರಾದ ನಮ್ಮನ್ನು ಅಪಾಯವಿಲ್ಲದಂತೆ ರಕ್ಷಿಸುವುದಕ್ಕಾದರೂ ನೀನು ಅವನನ್ನು ನಿಗ್ರಹಿಸಲೇ ಬೇಕೆಂದು ಭಾವವು.

[1]" ಎಲೆ ಸುಗ್ರೀವಾ ! ಈ ರಾಕ್ಷಸನು ದುಷ್ಟನಾದರೇನು ? ಸಾಧುವಾದರೇನು ? ಇವನಿಗಾಗಿ ನಾವು ಹೆದರಬೇಕಾದುದೇನು ? ನಮ್ಮನ್ನು ಇವನೇನು ಮಾಡಬಲ್ಲನು ? ಈತನು ನನಗಾಗಲಿ, ನನ್ನ ಕಡೆಯವರಿಗಾಗಲಿ, ಅಲ್ಪಸ್ವಲ್ಪವಾದರೂ, ಯಾವ ವಿಧದಿಂದಲೂ ಕೇಡನ್ನು ಮಾಡುವುದಕ್ಕೆ ಶಕ್ತನಲ್ಲ. ಈ ರಾಕ್ಷಸಜಾತಿಯೊಂದೇ ಅಲ್ಲದೆ, ಇವರಿಗಿಂತಲೂ ಕ್ರೂರರಾದ ಪಿಶಾಚಗಳಾಗಲಿ, ದಾನವರಾಗಲಿ, ಯಕ್ಷರಾಗಲಿ, ಲಂಕೆಯಲ್ಲಿರುವ ರಾಕ್ಷಸರೇ ಅಲ್ಲದೆ ಭೂಮಿಯಲ್ಲಿರುವ ಬೇರೆ ರಾಕ್ಷಸರಾಗಲಿ ಒಂದಾಗಿ ಸೇರಿ ನನ್ನ ಮೇಲೆ ದಂಡೆತ್ತಿ ಬಂದರೂ, [2]ಅವರನ್ನು ಕೊಲ್ಲಬೇಕೆಂಬ ಇಚ್ಛೆಯು

---

1. ಇಲ್ಲಿ ಸುಗ್ರೀವನು "ವಿಭೀಷಣನು ಕ್ರೂರಜಾತಿಯ ರಾಕ್ಷಸನಾದುದರಿಂದ ಅವನು ತನ್ನ ಜಾತಿಕ್ರೌರ್ಯದಿಂದ ರಾಮನಿಗೆ ಯಾವ ಅನರ್ಥವನ್ನುಂಟುಮಾಡುವನೋ" ಎಂದು ಭಯಪಡುವುದನ್ನು ನೋಡಿ, ಕೊನೆಗೆ ರಾಮನು ತನ್ನ ಸರ್ವಶಕ್ತತ್ವವನ್ನೇ ಅವನಿಗೆ ತಿಳಿಸಿ, ಅವನ ಭಯವನ್ನು ನೀಗಿಸುವನು. "ಸುದುಷ್ಟೋ ವಾಪ್ಯದುಷ್ಟೋ ವಾ ಕಿಮೇಷ ರಜನೀ-ಚರಃ । ಸೂಕ್ಷ್ಮಮಪ್ಯಹಿತಂ ಕರ್ತುಂ ಮಮಾಶಕ್ತಃ ಕಥಂಚನ" ಎಂದು ಮೂಲವು. (ಸುದುಷ್ಟೋ ವಾಪ್ಯದುಷ್ಟೋವಾ) ನಿಮ್ಮ ಪಕ್ಷದಂತೆ ಅವನು ದೋಷಿಯಾದರೂ ಆಗಲಿ ! ಅಥವಾ ನನ್ನ ಪಕ್ಷದಂತೆ ನಿರ್ದೋಷಿಯಾದರೂ ಆಗಲಿ ! ಈ ವಿಚಾರದಿಂದ ಈಗ ಪ್ರಯೋಜನವಿಲ್ಲ. ಶರಣಾಗತನ ವಿಷಯವಾಗಿ ನೀವು ಎಷ್ಟೇ ದೋಷವನ್ನು ಹೇಳಿದರೂ ಅದೊಂದೂ ನನ್ನ ಮನಸ್ಸಿಗೆ ಹಿಡಿಯದು. ಅದರಂತೆಯೇ ನಿಮಗೂ ನಾನು ಎಷ್ಟೇ ವಿಧದಿಂದ ಅವನು ನಿರ್ದೋಷಿಯೆಂಬುದನ್ನು ತೋರಿಸಿದರೂ, ನನ್ನಲ್ಲಿ ನಿಮಗಿರುವ ಪ್ರೇಮಾಂಧತೆಯಿಂದ ನಿಮಗಿರುವ ಭಯವು ನೀಗದು. (ಕಿಮೇಷ ರಜನೀಚರ) ನೀವು ಹೇಳಿದಂತೆ ಈತನು ರಾಕ್ಷಸನಾದುದರಿಂದ ನಮಗೆ ಬಾಧಕನಾಗಿಯೇ ಇರಲಿ! ಇದ್ದರೂ ಭಯವೇನು ? (ಸೂಕ್ಷ್ಮಮಪ್ಯಹಿತಂ ಕರ್ತುಂ ಮಮಾಶಕ್ತಃ) ಈತನಿಗೆ ನನ್ನ ವಿಷಯದಲ್ಲಿ ಮಾತ್ರ ಅತಿಸೂಕ್ಷ್ಮವಾದ ಅಪಕಾರವನ್ನಾದರೂ ಮಾಡುವುದಕ್ಕೆ ಸಾಧ್ಯವಲ್ಲ. "ಒಂದುವೇಳೆ ನೀನು ಆತನಲ್ಲಿ ನಂಬಿಕೆಯಿಟ್ಟು ಪ್ರಮಾದವಶದಿಂದಿದ್ದಾಗ ನಿನ್ನನ್ನು ಬಾಧಿಸಲಾರನೇ ?" ಎಂದರೆ (ಕಥಂಚನ) ಹೇಗೂ ಶಕ್ತನಲ್ಲವೆಂದು ಭಾವವು.

2. "ಇಲ್ಲಿ ಅಂಗುಲ್ಯಗ್ರೇಣ ತಾನ್ ಹನ್ಯಾಮಿಚ್ಛನ್ ಹರಿಗಣೇಶ್ವರ" ಎಂದು ಮೂಲವು. ಇಲ್ಲಿ (ಇಚ್ಛನ್) ಎಂಬುದರಿಂದ. ನನಗೆ ಮಾತ್ರ ಇಚ್ಛೆಯುಂಟಾದರೆ ನನ್ನ ಬೆರಳಿನ ತುದಿಯಿಂದಲೇ ಅವರನ್ನು ತಿಕ್ಕಿ ಕೊಲ್ಲಬಲ್ಲೆನು. ನನಗೆ ಇಚ್ಛೆಯಿಲ್ಲದಿದ್ದರೆ ಮಾತ್ರ ನಾನು ಆ ಕಾರ್ಯವನ್ನು ನಡೆಸಲಾರೆನೇ ಹೊರತು ಶಕ್ತಿಯಿಲ್ಲದುದರಿಂದಲ್ಲ. "ಹಾಗೆ ನಿನ್ನ ಪ್ರಯತ್ನಕ್ಕೆ ಇಚ್ಛೆಯೇ ಕಾರಣವಾಗಿದ್ದಪಕ್ಷದಲ್ಲಿ ನಮಗೆ ಅಷ್ಟು ಮಹಾಪರಾಧಿಯಾದ ಆ ರಾವಣನನ್ನು ಕೊಲ್ಲುವುದಕ್ಕೂ ನಿನಗೆ ಇಚ್ಛೆಯಿಲ್ಲವೆ ?" ಎಂದರೆ, ಅದಕ್ಕೂ ಇಚ್ಛೆಯೇ ಕಾರಣವು.

ಮಾತ್ರ ನನಗೆ ಹುಟ್ಟಿದರೆ, ಅವರೆಲ್ಲರನ್ನೂ ಈ ನನ್ನ ಕಿರುಬೆರಲಿನ ತುದಿಯಿಂದಲೇ ಅನಾಯಾಸವಾಗಿ ಧ್ವಂಸಮಾಡುವೆನೆಂದು ತಿಳಿ! ಇದಕ್ಕಾಗಿ ನಾನು ಆಯುಧಾದಿ ಸಹಾಯಗಳನ್ನೂ ಅಪೇಕ್ಷಿಸುವವನಲ್ಲ. ಸುಗ್ರೀವಾ! [1]ಪೂರ್ವದಲ್ಲಿ ಧರ್ಮಾರ್ಥಿ

ವಿಭೀಷಣನಂತೆ ಆ ರಾವಣನೂ ಇಲ್ಲಿಗೆ ಬಂದು ಈಗಲೂ ಶರಣಾಗತನಾದಪಕ್ಷದಲ್ಲಿ ಆತನನ್ನೂ ಪ್ರಾಣದೊಡನೆ ಬಿಟ್ಟುಬಿಡಬೇಕೆಂಬುದೇ ಈಗಲೂ ನನ್ನ ಇಚ್ಛೆಯೆಂದು ಭಾವವು. ಮತ್ತು ಇಲ್ಲಿ (ಅಂಗುಳ್ಯಗ್ರೇಣ ತಾನ್ ಹನ್ಯಾಮಿಚ್ಛನ್) ಎಂಬುದರಿಂದ, ನಮ್ಮ ವೈರಿಗಳನ್ನು ಕೊಲ್ಲುವುದಕ್ಕೆ ಇಲ್ಲಿ ನಾವು ಕರೆತಂದಿರುವ ಸೈನ್ಯಗಳೂ ಬೇಕಾದುದಿಲ್ಲ! ನನ್ನಲ್ಲಿರುವ ಶಸ್ತ್ರಾಸ್ತ್ರಗಳು ಬೇಕಾದುದಿಲ್ಲ! ಅಥವಾ ಈ ನನ್ನ ಭುಜಬಲವೂ ಅವಶ್ಯವಿಲ್ಲ! ಈ ನನ್ನ ಒಂದು ಬೆರಳೇ ಸಾಕು! ಆ ಬೆರಳಿನಲ್ಲಿಯೂ ಏಕದೇಶವಾದ ಅದರ ಕೊನೆಯೇ ಸಾಕು! ಕೊನೆಗೆ ಆ ಅಲ್ಪಪ್ರಯತ್ನವೂ ಬೇಕಾದುದಿಲ್ಲ. ನನ್ನ ಮನಸ್ಸಂಕಲ್ಪವೇ ಸಾಕೆಂದು ರಾಮನು ಸುಗ್ರೀವನಿಗೆ ತನ್ನ ಸರ್ವಶಕ್ತಿತ್ವವನ್ನು ತೋರಿಸಿದುದಾಗಿ ಗ್ರಾಹ್ಯವು. (ಹರಿಗ-ಣೇಶ್ವರ) ಒಂದುವೇಳೆ ನಿನಗೆ ನನ್ನಲ್ಲಿರುವ ಪ್ರೇಮಾಂಧತೆಯಿಂದ ನಾನು ಶಕ್ತನೆಂಬ ನಂಬಿಕೆಯು ಹುಟ್ಟದಿದ್ದರೂ, ಅನೇಕ ವಾನರರ ಸಹಾಯಸಂಪತ್ತಿಯುಳ್ಳ ನಿನ್ನ ಬಲದಲ್ಲಿ ನನಗೆ ಪೂರ್ಣವಾದ ನಂಬಿಕೆಯುಂಟೆಂದೂ ಭಾವವು.

1. ಇಲ್ಲಿ "ಶ್ರೂಯತೇ ಹಿ ಕಪೋತೇನ ಶತ್ರುಶ್ಶರಣಮಾಗತಃ | ಅರ್ಚಿತಶ್ಚ ಯಥಾನ್ಯಾಯಂ ಸ್ವೈಶ್ಚ ಮಾಂಸೈರ್ನಿಮಂತ್ರಿತಃ ||" ಎಂದು ಮೂಲವು. ಇದರಿಂದ ರಾಮನು ಶತ್ರುವನ್ನು ನಿಗ್ರಹಿಸುವುದಕ್ಕೆ ತನಗೆ ಶಕ್ತಿಯಿರಲಿ, ಇಲ್ಲದಿರಲಿ, ತನ್ನ ಪ್ರಾಣವೇ ಹೋಗುವ ಹಾಗಿದ್ದರೂ ಶರಣಾಗತನನ್ನು ಮಾತ್ರ ಪರಿಗ್ರಹಿಸಿಯೇ ತೀರಬೇಕೆಂಬುದಕ್ಕೆ ಕಪೋತಾಖ್ಯಾನವನ್ನು ಪ್ರಮಾಣವಾಗಿ ಹೇಳುವನು. (ವಿಶೇಷಾರ್ಥವು) (ಶ್ರೂಯತೇಹಿ) ನೀವು ನಾವೆಲ್ಲರೂ ಈ ಇತಿಹಾಸವನ್ನು ಈಗಲೂ ಕೇಳುತ್ತಿರುವೆನೆಂದು ಭಾವವು. ಇಲ್ಲಿ (ಶ್ರೂ-ಯತೇ) ಎಂಬುದರಿಂದ, ಈ ವಿಷಯವು ಶ್ರುತಿಪ್ರಮಾಣದಂತೆ ಸರ್ವಜನಕ್ಕೂ ಉಪಾದೇಯವೆಂದೂ ಸೂಚಿತವು (ಕಪೋತೇನ) ಶಾಸ್ತ್ರಾಧಿಕಾರವಿಲ್ಲದ ಒಂದು ತಿರ್ಯಕ್ಕೂ ಕೂಡ ವಿಚಾರವಿಲ್ಲದೆ ಈ ಧರ್ಮವನ್ನನುಷ್ಠಿಸಿರುವಾಗ, ಇನ್ನು ಜ್ಞಾನಿಗಳಾದ ನಮಗೆ ಹೇಳಬೇಕಾದುದೇನು? (ಕಪೋತೇನ) ಆ ಪಾರಿವಾಳವು ತನ್ನನ್ನು ತಡೆಯುವವರು ಬೇರೊಬ್ಬರೂ ಇಲ್ಲದೆ, ತಾನು ಏಕಾಕಿಯಾಗಿದ್ದುದರಿಂದಲೇ ಶರಣಾಗತರಕ್ಷಣವೆಂಬ ಈ ಸತ್ಕಾರ್ಯವು ಅದಕ್ಕೆ ಸುಲಭವಾಗಿ ಸಿದ್ಧಿಸಿಹೋಯಿತು. ಇಲ್ಲಿ ನನಗಾದರೋ ನಿಮ್ಮಂತಹ ಪ್ರತಿಬಂಧಕಗಳು ಸುತ್ತಿಮುತ್ತಿ ಸೇರಿರುವುದರಿಂದ, ನನ್ನ ಈ ಉದ್ದೇಶವನ್ನು ಸುಲಭವಾಗಿ ನೆರವೇರಿಸಿಕೊಳ್ಳುವುದಕ್ಕೆ ಇಲ್ಲದೆ ಹೋಯಿತೆಂದು ಈ ಏಕವಚನದ ಸ್ವಾರಸ್ಯವು. (ಶತ್ರುಃ) ಆ ಪಾರಿವಾಳಕ್ಕೆ ಬೇಡನು ಸಾಕ್ಷಾಚ್ಛತ್ರುವಾಗಿದ್ದರೂ ಅದನ್ನು ವಿಚಾರಿಸದೆ, ಆ ಹಕ್ಕಿಯು ಅವನನ್ನು ಕಾಪಾಡಿತು. ವಿಭೀಷಣನು ನಮ್ಮ ಶತ್ರುವಿಗೆ ಸಂಬಂಧಿಸಿದವನು ಮಾತ್ರ ಹೊರತು ಸಾಕ್ಷಾಚ್ಛತ್ರುವಲ್ಲ. ಹೀಗಿದ್ದರೂ ನಾವು ಈ ವಿಷಯದಲ್ಲಿ ವಿಚಾರಮಾಡುತ್ತಿರುವೆವಲ್ಲವೆ! ತನಗೆ

ಕಾರವಿಲ್ಲದ ಕೇವಲ ತಿರ್ಯಕ್ಕೆನಿಸಿದ ಒಂದು ಪಾರಿವಾಳವೂ ಕೂಡ, ತನಗೆ ಸಹಜವೈರಿಯಾದ ಬೇಡನೊಬ್ಬನು ಚಳಿಯಿಂದ ನಡುಗುತ್ತ ತಾನಿದ್ದ ಗಿಡದ ಮರೆಗೆ ಬಂದು ನಿಂತುದನ್ನು ನೋಡಿ, ಅವನಿಗೆ ಬೇಕಾದ ಉಪಚಾರಗಳನ್ನು ನಡೆಸಿ, ತನ್ನ ದೇಹದ ಮಾಂಸವನ್ನೂ ಅವನ ಆಹಾರಕ್ಕಾಗಿ ಒಪ್ಪಿಸಿತೆಂಬ ವೃತ್ತಾಂತವನ್ನು ನಾವೆಲ್ಲರೂ ಕೇಳಿಯೇ ಇರುವೆವಲ್ಲವೆ? [1]ಕೇವಲ ತಿರ್ಯಗ್ಜಂತುವಾದ ಪಾರಿವಾಳವೂ ಕೂಡ, ಆಗಲೇ ತನ್ನ ಭಾರ್ಯೆಯನ್ನು ಕೊಂದು ಮಹಾಪರಾಧವನ್ನು ಮಾಡಿದ ಬೇಡನು

ಸಹಜ ಶತ್ರುವಾದವನನ್ನೇ ಒಂದು ತಿರ್ಯಕ್ಕು ಹಾಗೆ ರಕ್ಷಿಸಿರುವಾಗ ಶತ್ರು ಸಂಬಂಧಿಮಾತ್ರನನ್ನು ನಮ್ಮಂತವರು ರಕ್ಷಿಸುವುದಕ್ಕೆ ಹೆದರಿದರೆ, ನಮ್ಮ ಪೌರುಷವೇನೆಂದು ಭಾವವು. (ಶರಣಮಾಗತಃ) ಶರಣವೆಂದರೆ ವಾಸಸ್ಥಲವು. ಪಾರಿವಾಳವು ವಾಸಮಾಡುತ್ತಿದ್ದ ಮರದ ಕೆಳಗೆ ಆ ಬೇಡನು ದೈವಿಕವಾಗಿ ಬಂದು ನಿಂತನೇ ಹೊರತು, ಬಾಯಿಬಿಟ್ಟು ಅದನ್ನು ಪ್ರಾರ್ಥಿಸಿದವನಲ್ಲ. ಆದರೆ ಆತನು ತನಗುಂಟಾದ ಚಳಿಯನ್ನು ತಡೆಯಲಾರದೆ (ಸೋಽಂಜಲಿಂ ಶಿರಸಾ ಬಧ್ವಾ ವಾಕ್ಯಮಾಹ ವನಸ್ಪತಿಂ। ಶರಣಂ ಹಿ ಗತೋಽಸ್ಮ್ಯದ್ಯ ದೇವತಾಮಿಹ ವಾಸಿನೀಂ), ಎಂದು ಅಲ್ಲಿನ ವನದೇವತೆಯನ್ನು ಮಾತ್ರವೇ ಕುರಿತು ಪ್ರಾರ್ಥಿಸಿದನು. ಈ ಮಾತನ್ನು ಕೇಳಿದ ಮಾತ್ರದಲ್ಲಿಯೇ ಆ ಹಕ್ಕಿಯು ಸಹಿಸಲಾರದೆ, ಅವನನ್ನು ರಕ್ಷಿಸಿತು. ಇಲ್ಲಿ ನಾವಾದರೋ (ತ್ಯಕ್ತ್ವಾ ಪುತ್ರಾಂಶ್ಚ ದಾರಾಂಶ್ಚ ರಾಘವಂ ಶರಣಂ ಗತಃ) ಎಂದು ತನ್ನ ಬಂಧುವರ್ಗವನ್ನೂ ಬಿಟ್ಟು ನಮ್ಮ ಹೆಸರನ್ನು ಹಿಡಿದು ಮರೆಹೊಕ್ಕ ಈ ವಿಭೀಷಣನನ್ನು ಕುರಿತು ವಿಚಾರಮಾಡುತ್ತಿರುವೆವು! ಅದೂ ಹಾಗಿರಲಿ! (ಅರ್ಚಿತಶ್ಚ) ಆ ಬೇಡನು ತನಗೆ ಸಹಜಶತ್ರುವಾಗಿದ್ದರೂ, ತನ್ನ ಭಾರ್ಯೆಯನ್ನು ಕೊಂದುದರಿಂದ ಮಹಾಪರಾಧಿಯಾಗಿದ್ದರೂ, ಅತಿಥಿಯಾಗಿ ಬಂದ ಆತನನ್ನು ದೇವತೆಯಂತೆಯೇ ತಿಳಿದು, ಅವನ ಚಳಿಯನ್ನು ನೀಗಿಸುವುದಕ್ಕಾಗಿ ಬೆಂಕಿಯನ್ನುರಿಸಿ ಆರಾಧಿಸಿತು. ಇಲ್ಲಿ ನಾವಾದರೋ (ವಧ್ಯತಾಮೇಷ ತೀವ್ರೇಣ ದಂಡೇನ ಸಚಿವೈಸ್ಸಹ) ಎಂದು ಆವನನ್ನೂ ಅವನ ಮಂತ್ರಿಗಳನ್ನೂ ಕೊಲ್ಲುವದಕ್ಕೆ ಪ್ರಯತ್ನಿಸುತ್ತಿರುವೆವು. (ಯಥಾನ್ಯಾಯಂ) ಹಾಗೆ ಆ ಹಕ್ಕಿಯು ಬೇಡನನ್ನು ರಕ್ಷಿಸಿ ಸತ್ಕರಿಸಿದುದೂ ಕೂಡ ನ್ಯಾಯ ಪ್ರಾಪ್ತವೆಂಬುದಕ್ಕಾಗಿಯೇ ಹೊರತು ಪ್ರತಿಷ್ಠಾಕಾಂಕ್ಷೆಯಿಂದಲ್ಲ. (ಸ್ವೈಶ್ಚ ಮಾಂಸೈರ್ನಿಮಂತ್ರಿತಃ) ಇಲ್ಲಿ ಸ್ವಶಬ್ದವು ಆತ್ಮಸ್ವರೂಪದಲ್ಲಿಯೂ, ಸ್ವಕೀಯವಾದುದರಲ್ಲಿಯೂ ವರ್ತಿಸುವುದು. ಪಕ್ಷಿಗಳಿಗೆ ದೇಹಾತ್ಮಭೇದವು ತಿಳಿಯದುದರಿಂದ ದೇಹವೇ ಆತ್ಮವೆಂದು ಭ್ರಮಿಸಿ, ತನ್ನ ದೇಹವನ್ನೊಪ್ಪಿಸಿತು. ದೇಹಾತ್ಮಭೇದ ವಿವೇಕವುಳ್ಳ ನಾವೇ ಹೀಗೆ ಸಂದೇಹಿಸುವುದುಂಟೆ? ಎಂದು ಭಾವವು.

1. ಇಲ್ಲಿ "ಸ ಹಿ ತಂ ಪ್ರತಿಜಗ್ರಾಹ ಭಾರ್ಯಾಹರ್ತಾರಮಾಗತಂ। ಕಪೋತೋ ವಾನರಶ್ರೇಷ್ಠ ಕಿಂಪುನರ್ಮದ್ವಿಧೋ ಜನಃ" ಎಂದು ಮೂಲವು. ವಿಶೇಷಾರ್ಥವು:—(ಸಃ) ನಮ್ಮಂತೆ ಧರ್ಮಾನುಷ್ಠಾನವನ್ನರಿತ ಮನುಷ್ಯ ಜಾತಿಯಲ್ಲಿಯೂ ಹುಟ್ಟಿದುದಲ್ಲ! ಶರಣ್ಯನಾದ ರಘು

ತನ್ನ ಬಳಿಗೆ ಬಂದೊಡನೆ, ಅವನನ್ನು ಪ್ರತಿಗ್ರಹಿಸಿತಲ್ಲವೆ? ಇನ್ನು ನನ್ನಂಥವನು, ಮರೆಹೊಕ್ಕು ಬಂದವರಲ್ಲಿ ಹೇಗೆ ನಡೆದುಕೊಳ್ಳಬೇಕೆಂಬುದನ್ನು ಹೇಳಬೇಕಾ

ವಂಶಾದಿಗಳಲ್ಲಿಯೂ ಹುಟ್ಟಿದುದಲ್ಲ! ಹೀಗಿದ್ದರೂ ಆ ಪಾರಿವಾಳವು (ತಂ) ಹಾಗೆ ತನಗೆ ಸಹಜಶತ್ರುವಾಗಿದ್ದರೂ (ಭಾರ್ಯಾಹರ್ತಾರಂ) ತನ್ನ ಕಷ್ಟಸುಖಗಳಿಗೆ ಸಮಭಾಗಿನಿಯಾದ ತನ್ನ ಪತ್ನಿಯನ್ನೇ ಕೊಂದವನಾಗಿದ್ದರೂ, ಇಲ್ಲಿ ಭಾರ್ಯಾಹರಣವನ್ನು ಸೂಚಿಸುವುದರಿಂದ, ತಿರ್ಯಗ್ಜಂತುವಾದ ಆ ಪಾರಿವಾಳವೂ ಕೂಡ ತನ್ನ ಪತ್ನಿಯನ್ನು ಕೊಂದ ಬೇಡನನ್ನು ಎಷ್ಟೋ ಪ್ರೀತಿಯಿಂದ ಪರಿಗ್ರಹಿಸಿತಲ್ಲವೆ? ಈ ಶಿಷ್ಟಾಚಾರವನ್ನನುಸರಿಸಿ, ಈಗ ನಾನು ನನ್ನ ಪತ್ನಿಯನ್ನಪಹರಿಸಿದ ಆ ರಾವಣನೇ ಸಾಕ್ಷಾತ್ತಾಗಿ ಬಂದರೂ ಪರಿಗ್ರಹಿಸಿ ರಕ್ಷಿಸ ಬೇಕಾದುದೇ ನ್ಯಾಯವು (ಆಗತಂ) ಆ ಪಾರಿವಾಳವು ತಾನಿದ್ದ ಮರದ ಕೆಳಕ್ಕೆ ಆ ಬೇಡನು ಬಂದು ನಿಂತುದನ್ನೇ ಅವನನ್ನು ರಕ್ಷಿಸುವುದಕ್ಕೆ ಹೇತುವಾಗಿ ಗ್ರಹಿಸಿತೇ ಹೊರತು ಆ ಬೇಡನು ವೃಕ್ಷದೇವತೆಯನ್ನು ಕುರಿತು, 'ಶರಣು' ಎಂದು ಹೇಳಿದ ಮಾತಾದರೂ ಅದರ ಕಿವಿಗೆ ಬೀಳಲಿಲ್ಲ. ಈ ವಿಭೀಷಣನಂತೆ ದೈನ್ಯಸೂಚಕವಾದ ಒಂದು ಮಾತನ್ನಾದರೂ ಆ ಬೇಡನು ಕಪೋತದ ಮುಂದೆ ಆಡಿದವನಲ್ಲ. ಹಾಗಿದ್ದರೂ ಪಾರಿವಾಳವು ಅವನನ್ನು ರಕ್ಷಿಸಿರುವಾಗ, ಹೀಗೆ ನಮ್ಮಲ್ಲಿ ಶರಣಾಗತನಾಗಿಯೇ ಬಂದು ದೈನ್ಯದಿಂದ ಬೇಡುವವನನ್ನು ನಾವು ಪರಿಗ್ರಹಿಸದಿರುವುದುಂಟೆ? (ವಾನರಶ್ರೇಷ್ಠ) ವ್ಯಾಘ್ರವಾನರ ಸಂವಾದನ್ನಾದರೂ ನೀನು ಕೇಳಿಲ್ಲವೆ! ಅದರಲ್ಲಿ ಸಾಮಾನ್ಯವಾದ ಒಂದು ಕಪಿಯು ತನ್ನಲ್ಲಿ ಮಹಾಪರಾಧಿಯಾಗಿದ್ದರೂ ಮರೆಬಿದ್ದವನನ್ನು ರಕ್ಷಿಸಲಿಲ್ಲವೆ! ವಾನರಶ್ರೇಷ್ಠನಾದ ನೀನು ಇದು ನಿನಗೆ ಸ್ವಜಾತಿ ಧರ್ಮವೆಂಬುದನ್ನಾದರೂ ಭಾವಿಸಿ ಇವನನ್ನು ರಕ್ಷಿಸಬೇಕಲ್ಲದೆ, ಒಂದುವೇಳೆ ನಾನು ಇದಕ್ಕೊಪ್ಪದಿದ್ದರೂ ನೀನೇ ನನ್ನನ್ನು ತಿದ್ದಬೇಕಲ್ಲವೆ? (ಕಿಂಪುನರ್ಮದ್ವಿಧೋ ಜನಃ) ಒಂದು ತಿರ್ಯಗ್ಜಂತುವಿನ ಅನುಷ್ಠಾನವೇ ಹೀಗಿರುವಾಗ, ಶರಣಾಗತರಕ್ಷಣೆಯಲ್ಲಿ ಪ್ರಸಿದ್ಧವಾದ ರಘುವಂಶದಲ್ಲಿ ಹುಟ್ಟಿದ ನನ್ನ ವಿಷಯದಲ್ಲಿ ಹೇಳಬೇಕಾದುದೇನು? (ಮದ್ವಿಧಃ) "ಷಷ್ಟಿರ್ವರ್ಷಸಹಸ್ರಾಣಿ ಲೋಕಸ್ಯ ಚರತಾ ಹಿತಂ" ಎಂಬಂತೆ ಅರುವತ್ತುಸಾವಿರ ವರುಷಗಳವರೆಗೆ ಲೋಕರಕ್ಷಣದಲ್ಲಿಯೇ ದೀಕ್ಷಿತನಾದ ದಶರಥನಿಗೆ ಮಗನಾಗಿ, ವಸಿಷ್ಠ ವಿಶ್ವಾಮಿತ್ರರಿಗೆ ಶಿಷ್ಯನಾಗಿ ಮಹಾಯೋಗಿಯೆನಿಸಿಕೊಂಡ ಜನಕನೊಡನೆಯೂ ಸಂಬಂಧವನ್ನು ಬೆಳೆಸಿದವನಾಗಿ "ರಾಮೋ ವಿಗ್ರಹವಾನ್ ಧರ್ಮಃ" ಎಂಬಂತೆ ಧರ್ಮಮೂರ್ತಿಯೆಂದು ಲೋಕಪ್ರಸಿದ್ಧನಾದ ನಾನೇ ಹೀಗೆ ಮರೆಹೊಕ್ಕು ಬಂದವನನ್ನು ನಿಗ್ರಹಿಸಿಬಿಟ್ಟಪಕ್ಷದಲ್ಲಿ, ಇನ್ನು ಲೋಕವೆಂತದಾಗುವುದು? (ಕಿಂಪುನರ್ಮದ್ವಿಧೋ ಜನಃ) ಸುಗ್ರೀವಾ! ಇನ್ನು ಹೆಚ್ಚಾಗಿ ಹೇಳಿದುದರಿಂದೇನು? 'ದೋಷೋ ಯದ್ಯಪಿ ತಸ್ಯ ಸ್ಯಾತ್' ಎಂದು ದೋಷವಿದ್ದರೂ ಶರಣಾಗತನನ್ನು ಬಿಡಬಾರದೆಂದು ನಾನು ಹೇಳಿದ ಆಶಯವನ್ನು ಈ ತಿರ್ಯಗ್ಜಂತುವೇ ಮೊದಲೇ ಸಾಧಿಸಿಬಿಟ್ಟಿರುವುದು. ಇನ್ನುಮೇಲೆ ನಾನೂ ಅದನ್ನೇ ಮಾಡಿದರೂ, ಈ ತಿರ್ಯಕ್ಕು ಮಾಡಿದು

ದುದೇನು? [1]ಕಣ್ವಮಹರ್ಷಿಗೆ ಪುತ್ರನಾಗಿಯೂ ಸತ್ಯವಾದಿಯಾಗಿಯೂ ಇದ್ದ ಕಂಡುಮಹಾಮುನಿಯು, ಪೂರ್ವದಲ್ಲಿ ಶರಣಾಗತಿಧರ್ಮಬೋಧಕವಾದ ಒಂದು

ದನ್ನೇ ನಾನೂ ಪುನಃ ಮಾಡಿದಂತಾಗುವುದೇ ಹೊರತು ಅದರಿಂದ ನನಗೇನೂ ಮೇಲ್ಮೆಯಿಲ್ಲ ವೆಂದೂ ಭಾವವು.

ರಾಮನು ಈ ಮೇಲಿನ ಇತಿಹಾಸವನ್ನು ಉದಾಹರಿಸಿದುದರ ಮುಖ್ಯಭಾವವೇ ನೆಂದರೆ:—ಸಹಜವಾದ ಅಜ್ಞಾನವುಳ್ಳ ಒಂದು ಪಾರಿವಾಳವು, ತನಗೆ ಸಾಕ್ಷಾಚ್ಛತ್ರುವಾದ ಬೇಡನೊಬ್ಬನು ಚಳಿಯಿಂದ ಪೀಡಿತನಾಗಿ ತಾನಿದ್ದ ಮರದ ಕೆಳಗೆ ಬಂದು ನಿಂತ ಮಾತ್ರ ದಲ್ಲಿಯೇ, ಅವನ ಮುಂದೆ ಒಣಗಿದ ಹುಲ್ಲುಕಡ್ಡಿಗಳನ್ನು ತಂದು ಸೇರಿಸಿ, ಬೆಂಕಿಯನ್ನುರಿಸಿ ಆತನಿಗೆ ಶೀತಬಾಧೆಯನ್ನು ನಿವರ್ತಿಸಿದುದಲ್ಲದೆ, ಅವನ ಹಸಿವನ್ನಾರಿಸುವುದಕ್ಕಾಗಿ ತನ್ನ ದೇಹದ ಮಾಂಸವನ್ನೇ ಚೆನ್ನಾಗಿ ಪಚನಮಾಡಿ ಅವನಿಗೊಪ್ಪಿಸಬೇಕೆಂದು ತಾನೂ ಚಿತೆಯಲ್ಲಿ ಬಿದ್ದಿತು. ಹೀಗೆ ಅಜ್ಞಾನಜಂತುವಾದ ಕೇವಲಪಕ್ಷಿಯೊಂದು, ತನಗೆ ಪ್ರತ್ಯಕ್ಷ ಶತ್ರುವಾ ಗಿದ್ದರೂ ತನ್ನ ಮರೆಗೆ ಬಂದವನನ್ನು ಸತ್ಕರಿಸುವುದಕ್ಕಾಗಿ ತನ್ನ ಪ್ರಾಣವನ್ನೇ ಒಪ್ಪಿಸಿರು ವುದು. ಹೀಗಿರುವಾಗ ಜ್ಞಾನಿಗಳಾಗಿಯೂ, ಶರಣಾಗತರಕ್ಷಣೆಯಿಂದ ಪ್ರಸಿದ್ಧಿಹೊಂದಿದ ಇಕ್ಷ್ವಾಕುಕುಲದಲ್ಲಿ ಜನಿಸಿದವರಾಗಿಯೂ ಎಷ್ಟೇ ವಿರೋಧಗಳು ಬಂದರೂ ಸಮರ್ಥಿಸತಕ್ಕ ಶಕ್ತಿಯುಳ್ಳವರಾಗಿಯೂ ಇರುವ ನನ್ನಂತವರು, ಶರಣಾಗತರ ವಿಷಯದಲ್ಲಿ ಹೇಗೆ ನಡೆಯ ಬೇಕೆಂಬುದನ್ನು ಕೇಳಬೇಕೆ? ಇದರಮೇಲೆ ಈಗ ನಮ್ಮಲ್ಲಿಗೆ ಬಂದಿರುವವನೂ ಶತ್ರು ಸಂಬಂಧವುಳ್ಳವನು ಮಾತ್ರವೇ ಹೊರತು ಬೇಡನಂತೆ ಸಾಕ್ಷಾಚ್ಛತ್ರುವಲ್ಲ! ಭಾರ್ಯೆಯನ್ನಪ ಹರಿಸಿದವನು ಮಾತ್ರವೇ ಹೊರತು ಬೇಡನಂತೆ ಭಾರ್ಯೆಯನ್ನು ಕೊಂದವನಲ್ಲ! ಇವನು ತಾನಾಗಿ ನಾವಿದ್ದಕಡೆಗೆ ಬಂದು ನಮ್ಮನ್ನು ಬಾಯಿಬಿಟ್ಟು ಪ್ರಾರ್ಥಿಸುತ್ತಿರುವನೇ ಹೊರತು ಆ ಬೇಡನಂತೆ ಸುಮ್ಮನೆ ಬಂದು ನಿಂತವನಲ್ಲ! ಕೇವಲ ತಿರ್ಯಕ್ಕಾದ ಪಾರಿವಾಳವು, ಹಾಗೆ ದೋಷಭೂಯಿಷ್ಠನಾದ ಆ ಬೇಡನನ್ನು ರಕ್ಷಿಸುವುದಕ್ಕಾಗಿ ತನ್ನ ಪ್ರಾಣವನ್ನೇ ಒಪ್ಪಿಸಿರು ವಾಗ, ಜ್ಞಾನಿಗಳಾದ ನಾವು ಗುಣಭೂಯಿಷ್ಠನಾದ ಇವನನ್ನು ರಕ್ಷಿಸುವುದಕ್ಕಾಗಿ ನಡೆಸ ಬೇಕಾದ ಅತ್ಯಲ್ಪಕಾರ್ಯಕ್ಕೆ ಹಿಂದೆಗೆಯುವುದೆಂದರೇನು?" ಎಂದು ಭಾವವು.

1. ಇದರಮೇಲೆ "ಶಾಸ್ತ್ರಾಧಿಕಾರವಿಲ್ಲದ ಈ ತಿರ್ಯಗ್ಜಂತುಗಳ ಅನುಷ್ಠಾನವೇ ನಮಗೆ ಉಪಾದೇಯವಲ್ಲ. ಆ ತಿರ್ಯಕ್ಕುಗಳು ತಮ್ಮ ಸ್ವಭಾವಾನುಗುಣವಾಗಿ ಮಾಡಿದುದು ಧರ್ಮ ವೆನಿಸುವುದೆ? ಶಾಸ್ತ್ರವಿಧಿಯನ್ನನುಸರಿಸಿ ನಡೆಸುವುದೇ ಧರ್ಮವೆನಿಸುವುದು. ಹಾಗೆ ಇದಕ್ಕೆ ಶಾಸ್ತ್ರಚೋದನವೆಲ್ಲಿ? ಎಂದು ಸುಗ್ರೀವನು ಆಕ್ಷೇಪಿಸಬಹುದೆಂಬುದಕ್ಕಾಗಿ, ರಾಮನು ಈ ವಿಷಯದಲ್ಲಿ ಆಪ್ತವಾಕ್ಯಪ್ರಮಾಣವೂ ಉಂಟೆಂದು ತೋರಿಸುತ್ತ, ಕಂಡುಮುನಿಯ ವಾಕ್ಯವನ್ನು ತಿಳಿಸುವನು. ಇದರಿಂದ ಜ್ಞಾನಹೀನವಾದ ತಿರ್ಯಕ್ಕನ್ನೂ, ಜ್ಞಾನಿಗಳಲ್ಲಿ ಮೇಲೆನಿಸಿಕೊಂಡ ಮಹರ್ಷಿಯನ್ನೂ ಈ ಶರಣಾಗತ ರಕ್ಷಣಕ್ಕೆ ಪ್ರಮಾಣವಾಗಿ ತೋರಿಸಿರು

ಗಾಥೆಯನ್ನು ಹೇಳಿರುವನು. ಅದನ್ನೂ ತಿಳಿಸುವೆನು ಕೇಳು. [1]ಶರಣಾಗತನಾಗಿ ಬಂದು ದುಃಖದಿಂದ ಕೈಜೋಡಿಸಿ ನಿಂತವನು, ತನಗೆ ಶತ್ರುವಾಗಿದ್ದರೂ ಅವನನ್ನು ಕೊಲ್ಲಬಾರದು! ಹಾಗಿಲ್ಲದಿದ್ದರೆ ಅಂತಹವನಿಗೆ ಕ್ರೂರನೆಂಬ ಲೋಕಾಪವಾದವು

ವುದರಿಂದ, ಶರಣಾಗತರಕ್ಷಣವೆಂಬ ಧರ್ಮವು ಕೇವಲ ಚೈತನ್ಯ ಪ್ರಯುಕ್ತವಾದುದೆಂದೂ, ಆ ಚೇತನವಸ್ತುವಿಗೆ ಪಾರಿವಾಳದಂತೆ ಜ್ಞಾನಸಂಕೋಚವಿದ್ದರೂ, ಋಷಿಯಂತೆ ಜ್ಞಾನ ವಿಕಾಸವಿದ್ದರೂ ಒಂದೇ ಹೊರತು, ಈ ಸಂಕೋಚ ವಿಕಾಸಗಳು ಈ ವಿಷಯದಲ್ಲಿ ತಾರ ತಮ್ಯವನ್ನು ಹುಟ್ಟಿಸುವುದಿಲ್ಲವೆಂದೂ ಭಾವವು.

1. ಇಲ್ಲಿ "ಬದ್ಧಾಂಜಲಿಪುಟಂ ದೀನಂ ಯಾಚಂತಂ ಶರಣಾಗತಂ। ನ ಹನ್ಯಾದಾ-ನೃಶಂಸ್ಯಾರ್ಥಮಪಿ ಶತ್ರುಂ ಪರಂತಪ" ಎಂದು ಮೂಲವು. ಇದರಿಂದ ತನ್ನಲ್ಲಿ ಮರೆ ಹೊಕ್ಕು ಬಂದವನು ಕೇವಲ ಶತ್ರುವಾಗಿದ್ದರೂ, ಪೂರ್ಣವಾಗಿ ಶರಣಾಗತಿಯನ್ನು ನಡೆಸ ದಿದ್ದರೂ ಅವನನ್ನು ಹಿಂಸಿಸಬಾರದೆಂಬರ್ಥವು ಸೂಚಿಸಲ್ಪಡುವುದು. (ಬದ್ಧಾಂಜಲಿ-ಪುಟಂ ದೀನಂ ಯಾಚಂತಂ) ಕಾಯಿಕವಾದ ಅಂಜಲಿಯನ್ನಾಗಲಿ, ಮಾನಸಿಕವಾದ ಆದರ ವನ್ನಾಗಲಿ, ವಾಚಿಕವಾದ ಪ್ರಾರ್ಥನೆಯನ್ನಾಗಲಿ, ಈ ಮೂರರಲ್ಲಿ ಯಾವುದೊಂದನ್ನು ಮಾಡಿದರೂ ಅದನ್ನೇ ಶರಣಾಗತಿಯೆಂದು ಗ್ರಹಿಸಬಹುದು. ಅಥವಾ (ಶರಣಾಗತಂ) ಅಂಜಲಿ ಮೊದಲಾದುವೂ ಅಮುಖ್ಯಗಳು. ತಾನು ಶರಣಾಗತನೆಂಬ ಅಧ್ಯವಸಾಯರೂಪ ವಾದ ಜ್ಞಾನವಿಶೇಷವೇ ಮುಖ್ಯವೆಂದೂ ಭಾವವು. (ಶತ್ರುಮಪಿ ನ ಹನ್ಯಾತ್) ಹಿಂದೆ ಹೇಳಿದಂತೆ ಗೌಣವಾಗಿಯೋ, ಮುಖ್ಯವಾಗಿಯೋ ಯಾವ ರೀತಿಯಾಗಿ ಶರಣಾಗತಿಯನ್ನು ಮಾಡಿದರೂ, ಅವನನ್ನು ರಕ್ಷಿಸಬೇಕಾದುದು ಮಾತ್ರವೇ ಹೊರತು, ಅವನಲ್ಲಿ ಶತ್ರುತ್ವವಿರುವು ದೆಂದು ಹಿಂಸಿಸಬಾರದು. "ಇದೇನು ಪಾಪನಿವೃತ್ತಿಗಾಗಿಯೇ? ಪುಣ್ಯಸಿದ್ಧಿಗಾಗಿಯೇ? ಎಂದರೆ ಇವೊಂದಕ್ಕೂ ಅಲ್ಲ. (ಆನೃಶಂಸ್ಯಾರ್ಥಂ) ಲೋಕವು ತನ್ನನ್ನು ಕ್ರೂರಕರ್ಮ ನೆಂದು ನಿಂದಿಸದಿರುವುದಕ್ಕಾಗಿಯೇ ಹೀಗೆ ನಡೆಸಬೇಕೇಹೊರತು ಬೇರೆಯಲ್ಲವು. ಇಲ್ಲಿ ಕ್ರಮವಾಗಿ "ಬದ್ಧಾಂಜಲಿಪುಟಂ, ದೀನಂ, ಯಾಚಂತಂ ಶರಣಾಗತಂ" ಎಂಬ ವಿಶೇಷಣ ಗಳಿಂದ ತೋರುವುದೇನೆಂದರೆ; ಮರೆಹೊಕ್ಕು ಬಂದವನಲ್ಲಿ ಅನುಕೂಲವಾದ ಬುದ್ಧಿ ಯಾಗಲಿ, ಮಾತಾಗಲಿ, ನಡತೆಯಾಗಲಿ, ಯಾವುದೊಂದಿಲ್ಲದ್ದರೂ, ಅವನನ್ನು ರಕ್ಷಿಸುವು ದಕ್ಕೆ "ಅಂಜಲಿಃ ಪರಮಾ ಮುದ್ರಾ ಕ್ಷಿಪ್ರಂ ದೇವಪ್ರಸಾದಿನೀ" ಎಂಬುದಾಗಿ ದೇವತೆ ಗಳಿಗೂ ಕ್ಷಣಮಾತ್ರದಲ್ಲಿ ದಯೆಯನ್ನು ಹುಟ್ಟಿಸುವ ಅವನ ಅಂಜಲಿಯೊಂದೇ ಸಾಕು! ಆ ಅಂಜಲಿಬಂಧಮಾತ್ರವೂ ಇಲ್ಲದೆ ಹೋದರೂ, ಕಾರ್ಪಣ್ಯವನ್ನು ತೋರಿಸುವ ಆತನ ದೀನತ್ವವೇ ಸಾಕು! ಅಂಜಲಿಯನ್ನು ಮಾಡದೆ, ಕಾರ್ಪಣ್ಯವನ್ನೂ ತೋರಿಸದೆ ಹೋದರೂ, ಅವನು ಬಾಯಿಬಿಟ್ಟು ಪ್ರಾರ್ಥಿಸಿದರೆ ಸಾಕು. ಇವು ಮೂರೂ ಇಲ್ಲದೆ ಹೋದರೂ ರಕ್ಷಕನಿರುವ ಸ್ಥಳಕ್ಕೆ ಹೋಗಿ ಸೇರುವುದೊಂದೇ ಸಾಕೆಂದು ಭಾವವು.

ಎಂದಿಗೂ ತಪ್ಪದು. [1]ನಿಜವಾಗಿ ಭಯಪಟ್ಟಾಗಲಿ, ಭಯಪಟ್ಟಂತೆ ನಟಿಸುತ್ತಾಗಲಿ, ಶತ್ರುಗಳ ಕಡೆಯಿಂದ ತನ್ನಲ್ಲಿಗೆ ಬಂದು ವಂಚನೆಯಿಂದಾದರೂ 'ಶರಣು' ಎಂಬೀ ಮೂರಕ್ಷರಗಳನ್ನು ಬಾಯಿಂದಾಡಿದ ಮಾತ್ರಕ್ಕೆ, ಧರ್ಮವಿಶ್ವಾಸವುಳ್ಳ ಸತ್ಪುರುಷನು, ತನ್ನ ಪ್ರಾಣವನ್ನು ಪರಿತ್ಯಜಿಸಿಯಾದರೂ ಅವನನ್ನು ರಕ್ಷಿಸಬೇಕು! ಹಾಗಿಲ್ಲದೆ ಶತ್ರುವೆಂಬ ಭಯದಿಂದಲೋ ಧರ್ಮಸೂಕ್ಷ್ಮವನ್ನು ತಿಳಿಯದ ಅಜ್ಞಾನದಿಂದಲೋ, ಅಥವಾ ಅವನನ್ನು ರಕ್ಷಿಸದೆ ಬಿಡುವುದರಿಂದ ಬರಬಹುದಾದ ಲಾಭದಾಸೆಯಿಂದಲೋ, ಮರೆಹೊಕ್ಕು ಬಂದವನನ್ನು ತನ್ನ ಶಕ್ತಿಮೀರಿ ನಿರ್ವಂಚನೆಯಾಗಿ ರಕ್ಷಿಸದೆಹೋದರೆ, ಅದು ಲೋಕದಲ್ಲಿ ಕೇವಲನಿಂದಿತವಾದ ಪಾಪವೆನಿಸುವುದು. ಇಷ್ಟೇ ಅಲ್ಲದೆ ಶರಣಾಗತನನ್ನು ರಕ್ಷಿಸುವುದಕ್ಕೆ ತನಗೆ ಶಕ್ತಿಯಿದ್ದರೂ ರಕ್ಷಿಸದೆ ಸುಮ್ಮನೆ ನಿಂತು ನೋಡುತ್ತಿದ್ದರೆ, ಇಷ್ಟರಲ್ಲಿ ಅವನಿಗೂ ನಾಶವುಂಟಾದರೆ, ರಕ್ಷಿಸಲ್ಪಡದವನು, ರಕ್ಷಿಸದಿದ್ದವನ ಸಮಸ್ತಪುಣ್ಯಗಳಿಗೂ ತಾನೇ ಭಾಗಿಯಾಗಿ, ಆ ಪುಣ್ಯಕ್ಕೆ ಫಲರೂಪವಾದ ಉತ್ತಮಲೋಕಗಳನ್ನೂ ತಾನೇ ಹೊಂದುವನು. ಹೀಗೆ ಮರೆಹೊಕ್ಕವರನ್ನು ರಕ್ಷಿಸದೆ ಹೋಗುವುದರಿಂದ ಮಹಾದೋಷವುಂಟು. ಶರಣಾಗತರನ್ನು ರಕ್ಷಿಸದೆಬಿಡುವುದರಿಂದ ಸ್ವರ್ಗಾದಿಪುಣ್ಯಲೋಕಗಳೂ ತಪ್ಪುವುವು.

---

1. ಇಲ್ಲಿ "ಆರ್ತೋ ವಾ ಯದಿ ವಾ ದೃಪ್ತಃ ಪರೇಷಾಂ ಶರಣಾಗತಃ | ಅರಿಃ ಪ್ರಾಣಾನ್ ಪರಿತ್ಯಜ್ಯ ರಕ್ಷಿತವ್ಯಃ ಕೃತಾತ್ಮನಾ" ಎಂದು ಮೂಲವು. ಇಲ್ಲಿ ಆರ್ತನೆಂದರೆ ಸ್ವಲ್ಪ ಮಾತ್ರವೂ ವಿಳಂಬವನ್ನು ಸಹಿಸದೆ ಆತುರದಿಂದ ಫಲಸಿದ್ಧಿಯನ್ನು ಕೋರಿಬಂದವನು. ದೃಪ್ತನೆಂದರೆ ವಿಳಂಬಾವಿಳಂಬಗಳಲ್ಲಿ ದೃಷ್ಟಿಯಿಡದೆ ಫಲಸಿದ್ಧಿಯನ್ನು ಮಾತ್ರ ಕೋರುವವನು. ಹಾಗೆಯೇ ಮುಮುಕ್ಷುಪಕ್ಷದಲ್ಲಿಯೂ ಸಂಸಾರದಲ್ಲಿ ಜುಗುಪ್ಸೆಯಿಂದ ಆಗಲೇ ದೇಹನಿವೃತ್ತಿಯನ್ನಪೇಕ್ಷಿಸುವವನು ಆರ್ತನೆಂದೂ, ಶರೀರಾವಸಾನದಲ್ಲಿ ಮುಕ್ತಿಯನ್ನು ಕೋರುವವನು ದೃಪ್ತನೆಂದೂ ಭೇದವನ್ನು ಗ್ರಹಿಸಬೇಕು. ಅಥವಾ ಆಕಿಂಚನ್ಯವನ್ನೂ, ಅನನ್ಯಗತಿತ್ವವನ್ನೂ ತೋರ್ಪಡಿಸಿ ಪ್ರಪತ್ತಿಯನ್ನು ಮಾಡಿದವನು ಆರ್ತನೆಂದೂ, ಸ್ತೋಭಹೇಳನಾದಿರೂಪದಿಂದಾದರೂ ತಾನು ಶರಣಾಗತನೆಂದು ಬಂದವನು ದೃಪ್ತನೆಂದೂ ಗ್ರಹಿಸಬಹುದು. ಇಂತವನು ಮುಂದೆಬಂದು ಶರಣಾಗತಿಯೆಂಬ ಶಬ್ದಮಾತ್ರವನ್ನು ಹೇಳಿದರೂ, (ಅರಿಃ) ಅವನು ಶತ್ರುವೇ ಆಗಿದ್ದರೂ, ಅವನನ್ನು ರಕ್ಷಿಸಬೇಕೆಂದು ಭಾವವು. (ಪ್ರಾಣಾನ್ ಪರಿತ್ಯಜ್ಯ) ಅಸ್ಥಿರಗಳಾದ ಪ್ರಾಣಗಳನ್ನಾದರೂ ಬಿಟ್ಟು ಸ್ಥಿರವಾದ ಶರಣಾಗತರಕ್ಷಣಧರ್ಮವನ್ನೇ ಸಾಧಿಸಬೇಕೆಂದು ಭಾವವು. (ಕೃತಾತ್ಮನಾ) ಎಂಬುದರಿಂದ ಶಾಸ್ತ್ರಪರಿಶ್ರಮವುಳ್ಳವನು ಈ ಧರ್ಮವನ್ನತಿಕ್ರಮಿಸಿದರೆ, ಹೆಚ್ಚು ದೋಷಾಸ್ಪದವೆಂದೂ ಸೂಚಿತವು.

ಲೋಕಾಪವಾದಕ್ಕೂ ಹೇತುವಾಗುವುದು. ದೇಹದಲ್ಲಿರುವ ಬಲವೀರ್ಯಾದಿಗಳೂ ಕೆಡುವುವು. ಆದುದರಿಂದ ಎಲೈ ವಾನರೇಂದ್ರನೇ! ಆ ಕಂಡುಮಹಾಮುನಿಯು ಹೇಳಿದ ನೀತಿಯನ್ನನುಸರಿಸಿ ನಡೆಯಬೇಕೆಂಬುದೇ ನನ್ನ ಉದ್ದೇಶವು. ಸರ್ವಲೋಕಾದೃತವಾಗಿಯೂ, ಯಥಾರ್ಥವಾಗಿಯೂ, ಸರ್ವೋತ್ತಮವಾಗಿಯೂ ಇರುವ ಆ ಮುನಿವಾಕ್ಯದಂತೆಯೇ ನಾನು ನಡೆಯುವೆನು. ಆ ಋಷಿವಾಕ್ಯವು ಧರ್ಮಯುಕ್ತವಾದುದು. ಪಾಪನಿವಾರಕವಾದುದು. ಇಹದಲ್ಲಿ ಕೀರ್ತಿಯನ್ನೂ, ಪರದಲ್ಲಿ ಸ್ವರ್ಗವನ್ನೂ ಕೈಗೂಡಿಸುವುದು. ಹೀಗೆ ಐಹಿಕಾಮುಷ್ಮಿಕಫಲಪ್ರದವಾದ ಆ ನೀತಿವಾಕ್ಯವನ್ನು ಮೀರಿ ನಡೆಯುವುದು ಸರ್ವಥಾಯುಕ್ತವಲ್ಲ. ಎಲೆ ಕಪಿಶ್ರೇಷ್ಠನೇ! ಇನ್ನು ಹೆಚ್ಚಾಗಿ ಹೇಳಿದುದರಿಂದೇನು? [1]ಒಂದಾವೃತ್ತಿ ನನ್ನಲ್ಲಿ

---

1. ಇಲ್ಲಿ "ಸಕೃದೇವ ಪ್ರಪನ್ನಾಯ ತವಾಸ್ಮೀತಿ ಚ ಯಾಚತೇ । ಅಭಯಂ ಸರ್ವಭೂತೇಭ್ಯೋ ದದಾಮ್ಯೇತದ್ವ್ರತಂ ಮಮ" ಎಂದು ಮೂಲವು. ಹಿಂದೆ "ಮಿತ್ರಭಾವೇನ ಸಂಪ್ರಾಪ್ತಂ" ಇತ್ಯಾದಿ ಶ್ಲೋಕದಿಂದ ಭಗವಂತನು ತನ್ನ ಪ್ರಕೃತಿಯನ್ನು ತಿಳಿಸಿದನು. ಈ ಶ್ಲೋಕದಿಂದ ಆ ಪ್ರಕೃತಿಗೆ ಅನುಗುಣವಾದ ಪ್ರತಿಜ್ಞೆಯನ್ನು ಮಾಡುವನು ಮತ್ತು "ಶ್ರುತಿಸ್ಮೃತಿಸ್ಸದಾಚಾರಸ್ಸ್ವಸ್ಯ ಚ ಪ್ರಿಯಮಾತ್ಮನಃ । ಸಮ್ಯಕ್ಸಂಕಲ್ಪಜಃ ಕಾಮೋ ಧರ್ಮಮೂಲಮಿದಂ ಸ್ಮೃತಂ" ಎಂದು ಯಾಜ್ಞವಲ್ಕ್ಯಮುನಿಯಿಂದ ಹೇಳಲ್ಪಟ್ಟ ಐದು ಧರ್ಮಪ್ರಮಾಣಗಳಲ್ಲಿ, ಶರಣಾಗತಿಧರ್ಮಕ್ಕೆ "ತಸ್ಮಾದಪಿ ವಧ್ಯಂ ಪ್ರಪನ್ನಂ ನ ಪ್ರತಿಪ್ರಯಚ್ಛಂತಿ" ಇತ್ಯಾದಿಗಳಿಂದ ಶ್ರುತಿಪ್ರಮಾಣವು ತೋರಿಸಲ್ಪಟ್ಟಿತು. ಕಂಡುಗಾಥೆಯಿಂದ ಸ್ಮೃತಿಪ್ರಮಾಣವು ತೋರಿಸಲ್ಪಟ್ಟಿರುವುದು. ಹಾಗೆಯೇ ಕಪೋತಾದಿಗಳಿಂದ ಶಿಷ್ಟಾಚಾರಪ್ರಮಾಣವೂ ರಾಮನು ಪ್ರತಿಪಕ್ಷದವರನ್ನು ನಿರಸನಮಾಡಿ ಹಟದಿಂದ ಪ್ರಪನ್ನತ್ರಾಣವನ್ನೇ ಉಪಪಾದಿಸುವುದರಿಂದ, ಅದು ತನ್ನ ಮನಸ್ಸಿಗೆ ಪ್ರಿಯವೆಂಬುದನ್ನೂ ತೋರಿಸಿರುವನು. ಹೀಗೆ ನಾಲ್ಕು ಪ್ರಮಾಣಗಳನ್ನೂ ತೋರಿಸಿ, ಈ ಶ್ಲೋಕದಿಂದ "ಸಮ್ಯಕ್ಸಂಕಲ್ಪಜಃ ಕಾಮಃ" ಎಂಬ ಐದನೆಯ ಪ್ರಮಾಣವನ್ನು ತೋರಿಸುವನು. (ಸಕೃದೇವ) ಒಂದಾವೃತ್ತಿಯೇ ಎಂದರೆ, ಭಕ್ತಿ ಮೊದಲಾದ ಉಪಾಯಗಳಲ್ಲಿ ಎರಡುಮೂರೆಂಬ ಆವೃತ್ತಿಯು ಶಾಸ್ತ್ರಾರ್ಥವಾಗುವುದೇ ಹೊರತು, ಪ್ರಪತ್ತಿಯ ವಿಷಯದಲ್ಲಿ ಮಾತ್ರ ತಿರುಗಿ ಆವೃತ್ತಿಯಿಲ್ಲವೆಂಬುದೇ ಶಾಸ್ತ್ರಾರ್ಥವು. "ಸಕೃದೇವ ಹಿ ಶಾಸ್ತ್ರಾರ್ಥಃ ಕೃತೋಽಯಂ ತಾರಯೇನ್ನರಂ" ಎಂಬುದು ಪ್ರಪತ್ತಿಶಾಸ್ತ್ರವು. (ಪ್ರಪನ್ನಾಯ) ಬಂದು ಸೇರಿದವನಿಗೆ, ಎಂದರೆ ಪ್ರಪತ್ತಿಮಾಡಿದವನಿಗೆಂದರ್ಥವು. ಗತ್ಯರ್ಥಕಗಳೆಲ್ಲವೂ ಜ್ಞಾನಾರ್ಥಕಗಳಾಗುವುವೆಂಬ ನ್ಯಾಯದಿಂದ, ಪ್ರಪನ್ನ ಶಬ್ದವು ಜ್ಞಾನರೂಪವಾದ ಮಾನಸಿಕ ಪ್ರಪತ್ತಿಯನ್ನು ತೋರಿಸುವುದು. (ತವಾಸ್ಮೀತಿಚ) ಎಂಬುದರಿಂದ, ವಾಚಿಕ ಪ್ರಪತ್ತಿಯು ಹೇಳಲ್ಪಡುವುದು. ಇಲ್ಲಿ ಇವೆರಡನ್ನೂ ಹೇಳಿರುವುದರಿಂದ,

ಇವೆರಡರಲ್ಲಿ ಯಾವುದೊಂದಿದ್ದರೂ ತನಗೆ ಪರಿಗ್ರಾಹ್ಯವೆಂದು ಭಾವವು. (ಪ್ರಪನ್ನಾಯ) ಎಂಬುದರಿಂದ ಉಪಾಯವೂ (ತವಾಸ್ಮೀತಿಚ ಯಾಚತೇ) ಎಂಬುದರಿಂದ ತಚ್ಛೇಷವೃತ್ತಿ ಯೆಂಬ ಫಲವಿಶೇಷಪ್ರಾರ್ಥನೆಯೂ ಸೂಚಿಸಲ್ಪಡುವುದು. ಇಂತಹ ಅಧಿಕಾರಿಗಾಗಿ (ಸರ್ವ ಭೂತೇಭ್ಯಃ) ಸಮಸ್ತ ಭೂತಗಳ ದೆಸೆಯಿಂದಲೂ, (ಅಭಯಂ) ಭಯವಿಲ್ಲದಿರುವಿಕೆಯನ್ನು (ದದಾಮಿ) ಕೊಡುವೆನು" ಎಂದರ್ಥವು. ಇಲ್ಲಿ ಅಭಯವೆಂದರೆ ಮೋಕ್ಷವು. "ಅಥ ಸೋಽಭಯಂ ಗತೋ ಭವತಿ" "ಆನಂದೋ ಬ್ರಹ್ಮಣೋ ವಿದ್ವಾನ್ನ ಬಿಭೇತಿ ಕುತಶ್ಚನ" ಇತ್ಯಾದಿ ಶ್ರುತಿಗಳು ಅಭಯವನ್ನು ಬ್ರಹ್ಮವಿದ್ಯೆಗೆ ಫಲವಾಗಿ ಹೇಳಿರುವುದರಿಂದ, ಇಲ್ಲಿಯೂ ಅಭಯ ವೆಂಬುದು ಮೋಕ್ಷಪರ್ಯಾಯವು. (ತವಾಸ್ಮಿ) ಎಂಬುದಕ್ಕೆ ಫಲವಿಶೇಷಪ್ರಾರ್ಥನೆಯೆಂಬ ಪಕ್ಷದಲ್ಲಿ ಮಾತ್ರವೇ ಈ ಅರ್ಥವು ಅನುಕೂಲಿಸುವುದು. ಪಕ್ಷಾಂತರದಲ್ಲಿಯೂ ಭಗವಂತನೇ ಸಕಲಫಲಪ್ರದನಾದುದರಿಂದ, ಈ ಅಭಯಶಬ್ದವು ಮೋಕ್ಷಕ್ಕೆ ಮಾತ್ರವೇ ಅಲ್ಲದೆ, ಧರ್ಮಾರ್ಥ ಕಾಮಫಲಗಳಿಗೂ ಉಪಲಕ್ಷಣವಾಗಬಹುದು. (ಏತದ್ವ್ರತಂ ಮಮ)ಇದು ನನ್ನ ವ್ರತವು. ವ್ರತಾನುಷ್ಠಾನದಂತೆ ಎಂತಹ ಕಷ್ಟದಶೆಯಲ್ಲಿಯೂ ಇದನ್ನು ಬಿಡದೆ ತಾನು ನಡೆಸಿಯೇ ತೀರಬೇಕೆಂದು ಭಾವವು. ಅಥವಾ ಮೇಲಿನ (ಸರ್ವಭೂತೇಭ್ಯಃ) ಎಂಬುದಕ್ಕೆ ಪಂಚಮ್ಯರ್ಥ ವನ್ನು ಬಿಟ್ಟು, ಸಮಸ್ತಪ್ರಾಣಿಗಳಿಗೂ ಅಭಯವನ್ನು ಕೊಡುವುದಾಗಿ ಚತುರ್ಥ್ಯರ್ಥವನ್ನೂ ಹೇಳಬಹುದು. ಇದರಿಂದ ತನ್ನಲ್ಲಿ ಯಾರೇ ಶರಣಾಗತನಾದರೂ, ಅವರ ಜಾತಿಗುಣಾದಿ ಭೇದಗಳೊಂದನ್ನೂ ಎಣಿಸದೆ, ಅಂತವರೆಲ್ಲರಿಗೂ ತಾನು ಅಭಯವನ್ನು ಕೊಡುವುದಾಗಿ ತಾತ್ಪರ್ಯವು. ಅಥವಾ, "ಪಶುರ್ಮನುಷ್ಯಃ ಪಕ್ಷೀ ವಾ ಯೇ ಚ ವೈಷ್ಣವಸಂಶ್ರಯಾಃ। ತೇನೈವ ತೇ ಪ್ರಯಾಸ್ಯಂತಿ ತದ್ವಿಷ್ಣೋಃ ಪರಮಂ ಪದಂ" ಎಂಬ ವಚನವನ್ನನುಸರಿಸಿ, ಅಂತಹ ಪ್ರಪನ್ನರನ್ನಾಶ್ರಯಿಸಿರುವ ಪಶು ಪಕ್ಷಿ ಮೃಗ ಮನುಷ್ಯಾದಿಗಳಾವುವುಂಟೋ ಅವೆಲ್ಲವೂ ಅವರೊಡನೆಯೇ ವಿಷ್ಣುಪದವನ್ನು ಹೊಂದುವುವೆಂದು ಹೇಳಿರುವಂತೆ, ಭಗವಂತನು ತನ್ನಲ್ಲಿ ಸಾಕ್ಷಾತ್ತಾಗಿ ಶರಣಾಗತಿ ಮಾಡಿದವನೊಬ್ಬನನ್ನು ಮಾತ್ರವೇ ಅಲ್ಲದೆ, ಆತನಿಗೆ ಸಂಬಂಧಪಟ್ಟ ಸಮಸ್ತಪ್ರಾಣಿಗಳಿಗೂ ತಾನು ಅಭಯವನ್ನು (ಮೋಕ್ಷವನ್ನು) ಕೊಟ್ಟು ಉದ್ಧರಿಸುವುದಾಗಿ ಭಾವವು.

ಇಲ್ಲಿ ಸಕೃಚ್ಛಬ್ದಕ್ಕೆ (ಸಹಸಾ) ಎಂಬ ಆದೇಶವೆಂದು ಶ್ರೀವತ್ಸಾಂಕಮಿತ್ರರು, (ಸಹಸೈವ ಪ್ರಪನ್ನಾಯ) ಎಂದರೆ, ಮೊದಲು ತನ್ನ ಅಯೋಗ್ಯತೆಯನ್ನು ನೋಡಿ ಸುಮ್ಮನಿದ್ದು, ಆಮೇಲೆ ಶರಣ್ಯನ ಗುಣಗಳನ್ನು ನೋಡಿದೊಡನೆ, ತಟ್ಟನೆ ಒಂದೇ ನಂಬಿಕೆ ಯಿಂದ ಬಂದು ಮರೆಹೊಕ್ಕವನೆಂದರ್ಥವು. ಮೊದಲು ಅನಾದಿಕಾಲದಿಂದ ಸಂಸಾರಕ್ಕೆ ಸಿಕ್ಕಿದವನು, ಮುಂದೆ ಅನಂತಕಾಲದವರೆಗೆ ಫಲವನ್ನೂ ಅನುಭವಿಸಬೇಕಾಗಿರುವುದರಿಂದ, ಈ ನಡುವೆ ತಾನು ಪ್ರಪತ್ತಿಯನ್ನು ಮಾಡಿದುದು ಮೊದಲು, ತನ್ನ ಜೀವಾವಧಿ ಅದನ್ನನು ವರ್ತಿಸುತ್ತಿದ್ದರೂ, "ಸಕೃತ್" ಒಂದಾವರ್ತಿಯೇ ಎಂದು ಹೇಳಿದಷ್ಟೇ ಆಗುವುದೆಂದು ಗೋವಿಂದಾಚಾರ್ಯರ ನಿರ್ವಾಹವು. ಈಶ್ವರನನ್ನು ವಿಷಯೀಕರಿಸುವುದಕ್ಕೆ ಸಕೃದಾವರ್ತಿಯೇ

ಸಾಕಾಗಿರುವುದು. ಅದನ್ನು ಪುನರಾವರ್ತನಮಾಡುವುದು ಆ ಉಪಾಯ ವೈಭವದಲ್ಲಿರುವ ಅಸಾಧ್ಯತೆಯಿಂದಲೇಹೊರತು ಬೇರೆಯಲ್ಲವೆಂದು ಪರಾಶರಭಟ್ಟರ ಮತವು. (ಸಕೃದೇವ) ಎಂಬಲ್ಲಿರುವ ಏವಕಾರದಿಂದ ಒಂದಾವೃತ್ತಿಯೇ ಪ್ರಪತ್ತಿಯೇ ಹೊರತು, ಅದಕ್ಕೆ ಅನೇಕಾ ವೃತ್ತಿಯು ವ್ಯಕ್ತವಾಗಿ ನಿಷೇಧಿಸಲ್ಪಟ್ಟಿರುವುದೆಂದೂ, (ತವಾಸ್ಮೀತಿ ಚ ಯಾಚತೇ) ನಿನಗೆ ನಿಯತವಾಗಿ ಕಿಂಕರನಾಗುವೆನೆಂದು ಉಪಾಯವನ್ನೂ ಕೂಡ ಪ್ರಾರ್ಥಿಸುವವನಿಗೆ (ಸಕೃ-ದೇವ ಪ್ರಪನ್ನಾಯ) ಎಂಬುದರಿಂದ ಪ್ರಪತ್ತಿಯೂ, (ತವಾಸ್ಮೀತಿ ಚ ಯಾಚತೇ) ಎಂಬಲ್ಲಿ ವರ್ತಮಾನ ನಿರ್ದೇಶವಿರುವುದರಿಂದ ಅನವರತ ಭಾವನಾರೂಪವಾದ ಭಕ್ತಿಯೂ ಹೇಳಲ್ಪಡು ವುದೆಂದು ಬೇರೆ ಕೆಲವು ಆಚಾರ್ಯರ ನಿರ್ವಾಹವು

ಆದರೆ "ವೇದೋಪಬೃಂಹಣಾರ್ಥಾಯ ತಾವಗ್ರಾಹಯತ ಪ್ರಭುಃ" ಎಂಬಂತೆ, ಈ ಪ್ರಬಂಧವು ವೇದೋಪಬೃಂಹಣದಲ್ಲಿ ತಾತ್ಪರ್ಯವುಳ್ಳುದಾಗಿರಬೇಕಲ್ಲವೆ? ಇಲ್ಲಿ ಇದು ಯಾವ ವೇದಾರ್ಥವನ್ನು ಉಪಬೃಂಹಣಮಾಡುವುದು? ಆ ವೇದವಾಕ್ಯವಾವುದು? ಎಂದರೆ, "ತಂ ಹ ದೇವಮಾತ್ಮಬುದ್ಧಿಪ್ರಸಾದಂ ಮುಮುಕ್ಷುರ್ವೈ ಶರಣಮಹಂ ಪ್ರಪದ್ಯೇ" "ಪ್ರಯತ ಪಾಣಿಶ್ಶರಣಮಹಂ ಪ್ರಪದ್ಯೇ". "ಸ್ವಸ್ತಿ ಸಂಭಾಧೇಷ್ವಭಯಂ ನೋ ಅಸ್ತು" ಎಂದು ಹೇಳಲ್ಪಡುವ ಪ್ರಪತ್ತ್ಯುಪಾಯ ವೈಭವಗಳೆಲ್ಲವನ್ನೂ ಇದು ಉಪಬೃಂಹಣಮಾಡುವುದು. "ಪ್ರಯತಪಾಣಿಶ್ಶರಣಮಹಂ ಪ್ರಪದ್ಯೇ" ಎಂಬ ವೇದವಾಕ್ಯದಲ್ಲಿ (ಪ್ರಯತಪಾಣಿಃ) ಎಂದರೆ ಶುದ್ಧಹಸ್ತನಾಗಿರಬೇಕೆಂಬುದು. ಆ ಶುದ್ಧಹಸ್ತತ್ವವು ಯಾವುದೆಂದರೆ "ಸರ್ವ ಧರ್ಮಾನ್ ಪರಿತ್ಯಜ್ಯ" ಎಂದೂ, "ಸರ್ವಧರ್ಮಾಂಶ್ಚ ಸಂತ್ಯಜ್ಯ ಸರ್ವಕಾಮಾಂಶ್ಚ ಸಾಕ್ಷರಾನ್" ಎಂದೂ, ಉಪಾಯಾಂತರಗಳೆಲ್ಲವನ್ನೂ ತ್ಯಜಿಸಿಬಿಡುವುದು. "ಈ ಮೇಲಿನ ಸಕೃದೇವ ಪ್ರಪನ್ನಾಯ" ಇತ್ಯಾದಿ ಶ್ಲೋಕವು ಮೇಲಿನ ವೇದವಾಕ್ಯವನ್ನು ಹೇಗೆ ಉಪಬೃಂಹಣ ಮಾಡುವುದು?" ಎಂದರೆ, (ಸಕೃದೇವ) ಎಂಬ ಪದವು ಅಸಕೃದಾವರ್ತಿಯನ್ನಪೇಕ್ಷಿಸುವ ಭಕ್ತಿಯನ್ನು ವ್ಯಾವರ್ತಿಸುವಂತೆ ಮಾಡುವುದರಿಂದ, ಅದರಿಂದ ಸರ್ವಧರ್ಮತ್ಯಾಗಬೋಧಕ ವಾದ (ಪ್ರಯತಪಾಣಿಃ) ಎಂಬ ಪದವೂ, (ಪ್ರಪನ್ನಾಯ) ಎಂಬ ಪದದಿಂದ "ಶರಣಂ ಪ್ರಪದ್ಯೇ" ಎಂಬ ಪದಗಳೂ, ತವಾಸ್ಮೀತಿ ಚ ಯಾಚತೇ ಎಂಬ ವಾಕ್ಯದಿಂದ, 'ಸ್ವಸ್ತ್ಯಸ್ತು' ಎಂಬ ವಾಕ್ಯವೂ (ಅಭಯಂ ದದಾಮಿ) ಎಂಬ ವಾಕ್ಯದಿಂದ "ಅಭಯಮಸ್ತು" ಎಂಬ ವಾಕ್ಯವೂ, ಉಪಬೃಂಹಣಮಾಡಲ್ಪಡುವುದೆಂದು ತಿಳಿಯಬೇಕು.

ಹಾಗೆ ಇಲ್ಲಿ ವೇದೋಕ್ತವಾದ ಪ್ರಪತ್ತಿಯೇ ಉಪಬೃಂಹಣಮಾಡಲ್ಪಡುವುದಾಗಿದ್ದರೆ "ಅಹಮಸ್ಮ್ಯಪರಾಧಾನಾಮಾಲಯೋಽಕಿಂಚನೋಽಗತಿಃ । ತ್ವಮೇವೋಪಾಯಭೂತೋ ಮೇ ಭವೇತಿ ಪ್ರಾರ್ಥನಾ ಮತಿಃ ॥ ಶರಣಾಗತಃ ಎಂದು ಹೇಳಿರುವ ಪ್ರಪತ್ತಿಲಕ್ಷಣವೆಲ್ಲವೂ ಈ ವಿಭೀಷಣಶರಣಾಗತಿಯಲ್ಲಿ ಸೇರಿರುವುವೇ?" ಎಂದರೆ, ಆ ಲಕ್ಷಣಗಳೆಲ್ಲವೂ ಇದರಲ್ಲಿ ಸಂಪೂರ್ಣವಾಗಿಯೇ ಇರುವುವು. ಹೇಗೆಂದರೆ, ವಿಭೀಷಣನು ತನ್ನ ನಾಮನಿರ್ವಚನ

ಪೂರ್ವಕರಾಗಿ ತನಗೆ ಸ್ವರೂಪಸಿದ್ಧವಾದ ದೋಷವನ್ನೂ, ದುಷ್ಟನಾದ ರಾವಣನ ಸಂಬಂಧ ದಿಂದ ತನಗುಂಟಾದ ದೋಷವನ್ನೂ, ಮೊದಲೇ ಹೇಳಿಕೊಂಡಿರುವುದರಿಂದ (ಅಹಮಸ್ಯ ಪರಾಧಾನಾಮಾಲಯಃ ಎಂದರ್ಥವು) ಸೂಚಿಸಲ್ಪಟ್ಟಿತು (ರಾಜ್ಯಂ ಪ್ರಾರ್ಥಯಮಾನಶ್ಚ) ಎಂದು ಅವನು ರಾಜ್ಯವನ್ನಪೇಕ್ಷಿಸಿ ಬಂದುದೇಹೊರತು ರಾವಣನಿಗೆ ಯಾವುದೊಂದು ಕಿಂಚಿತ್ಕಾರ್ಯವನ್ನು ಮಾಡುವುದಕ್ಕೂ ತಾನು ಬಂದಂತೆ ತೋರಿಸಲಿಲ್ಲವಾದುದರಿಂದ, ಆಕಿಂಚನತ್ವವು ಸೂಚಿತವಾಗುವುದು. ತನಗೆ ಒಡಹುಟ್ಟಿದವನಾದ ರಾವಣನಿಂದ ತಿರಸ್ಕೃತ ನಾಗಿ ಬೇರೆ ದಿಕ್ಕಿಲ್ಲದೆ ಬಂದವನಾದುದರಿಂದ, (ಅಗಃ ಎಂಬರ್ಥವು) ಹೇಳಲ್ಪಡುವುದು. (ಭವಂತಂ ಶರಣಂ ಗತಃ) ಎಂದು ಹೇಳಿರುವುದರಿಂದ "ತ್ವಮೇವೋಪಾಯಭೂತೋ ಮೇ ಭವೇತಿ ಪ್ರಾರ್ಥನಾಮತಿಃ" ಎಂದು ವಾಕ್ಯಾರ್ಥವು ಸೂಚಿಸಲ್ಪಡುವುದು. ಆದುದರಿಂದ ಮೇಲೆ ಹೇಳಿದ ಪ್ರಪತ್ತಿ ಲಕ್ಷಣಗಳೆಲ್ಲವೂ ಈತನ ಶರಣಾಗತಿಯಲ್ಲಿ ಪೂರ್ಣವಾಗಿಯೇ ಸಿದ್ಧಿ ಸಿರುವುವು. ಇದರಂತೆಯೇ ಆನುಕೂಲ್ಯ ಸಂಕಲ್ಪವೇ ಮೊದಲಾದ ಆರು ಪ್ರಪತ್ತ್ಯಂಗ ಗಳೂ ಉಂಟೆಂದು ಹಿಂದೆಯೇ ಸೂಚಿಸಲ್ಪಟ್ಟಿರುವುದು. ಆದುದರಿಂದ ಈ ವಿಭೀಷಣನು ಸಲಕ್ಷಣವಾಗಿಯೂ, ಸಾಂಗವಾಗಿಯೂ ಇರುವ ಪ್ರಪತ್ತಿಯನ್ನೇ ಮಾಡಿರುವನೆಂದು ಸಿದ್ಧವು.

ಹೀಗೆ ಸಲಕ್ಷಣವಾಗಿಯೂ ಸಾಂಗವಾಗಿಯೂ ಪ್ರಪತ್ತಿಯನ್ನು ಮಾಡಿ ಅದಕ್ಕೆ ಫಲವಾಗಿ ಬೇರೆ ಪ್ರಯೋಜನಾಂತರಂಗದಲ್ಲಿ ದೃಷ್ಟಿಯಿಡದ ನನ್ನನ್ನೇ ನಂಬಿ ಬಂದವನಿಗೆ ಸ್ಥೂಲಭಯನಿವೃತ್ತಿಯನ್ನೂ ಮಾಡಬೇಕೆಂಬುದೇ ನನ್ನ ವ್ರತವೆಂದು ಈ ಶ್ಲೋಕದಿಂದ ಹೇಳುವನು. ಹೇಗೆಂದರೆ (ಸಕೃದೇವ ಪ್ರಪನ್ನಾಯ) ಸಕೃತ್ಪ್ರಪನ್ನನಾಗಿರುವವನಿಗೆ ಎಂದರೆ, ಸಲಕ್ಷಣವಾದ ಪ್ರಪತ್ತಿಯನ್ನು ಮಾಡಿದವನಿಗೆಂದರ್ಥವು. ಸಕೃತ್ತೆಂದರೆ "ಆವೃತ್ತಿರಸಕೃದುಪದೇಶಾತ್" ಎಂದೂ "ಅನೇಕಜನ್ಮಸಂಸಿದ್ಧಃ" ಎಂದೂ, ಭಕ್ತಿಯಂತೆ ಸ್ವರೂಪನಿಷ್ಪತ್ತಿಯಾಗಲಿ, ಫಲನಿಷ್ಪತ್ತಿಯಾಗಲಿ ಚಿರಕಾಲಸಾಧ್ಯವಾದಲ್ಲದೆ, "ತದ್ದ್ವಯಂ ಸಕೃದುಚ್ಚಾರೋ ಭವತಿ" ಎಂದೂ ! ಉಪಾಯೋಽಯಂ ಚತುರ್ಥಸ್ತೇ ಪ್ರೋಕ್ತಶ್ಶೀಘ್ರ ಫಲೋದಯಃ" ಎಂದೂ ಆ ಸ್ವರೂಪಫಲ ನಿಷ್ಪತ್ತಿಗಳೆರಡೂ ಒಂದೇಸಾರಿಯಾಗಿರುವು ದೆಂದರ್ಥವು. ಪ್ರಪತ್ತಿಗೆ ಪುನರಾವೃತ್ತಿಯೇ ಇಲ್ಲವೆಂದು ವಾಕ್ಯಾರ್ಥವು ಅಥವಾ (ಪ್ರಪನ್ನಾ-ಯೈವ ಅಂತಹ ಪ್ರಪತ್ತಿಯನ್ನು ಮಾಡಿದವನಿಗೆ ಮಾತ್ರವೆ ಎಂದರೆ, "ಮಂತ್ರೇ ವ್ಯೂಹೇ ನಯೇ ಚಾರೇ ಯುಕ್ತೋ ಭವಿತುಮರ್ಹತಿ" ಎಂಬ ಕರ್ಮಯೋಗನಿಷ್ಠನಾದ ನಿನಗೂ ನಾನು ಅಷ್ಟು ವಶನಲ್ಲ. "ಜಾಂಬವಾಂಸ್ತ್ವಥ ಸಂಪ್ರೇಕ್ಷ್ಯ ಶಾಸ್ತ್ರಬುದ್ಧ್ಯಾ ವಿಚಕ್ಷಣಃ" ಎಂಬಂತೆ ಜ್ಞಾನಯೋಗನಿಷ್ಠರಾದ ಜಾಂಬವಂತಾದಿಗಳಿಗೂ ನಾನು ಅಷ್ಟು ಸುಲಭನಲ್ಲ. "ಭಕ್ತಿಶ್ಚ ನಿಯತಾ ವೀರ" ಎಂದು ಭಕ್ತಿಯೋಗನಿಷ್ಠನಾದ ಹನುಮಂತನಿಗೂ ನಾನು ಅಷ್ಟು ಸುಲಭನಲ್ಲ. ಈ ವಿಭೀಷಣನಂತೆ "ರಾಘವಂ ಶರಣಂ ಗತಃ" ಎಂಬುದಾಗಿ ಪ್ರಪತ್ತಿಯನ್ನು ಮಾಡಿದವನೊಬ್ಬನಿಗೇ ನಾನು ಒಲಿಯತಕ್ಕವನೆಂದು ಭಾವವು. ಕರ್ಮ

ಜ್ಞಾನಭಕ್ತಿಗಳಿಗಿಂತಲೂ ಪ್ರಪತ್ತಿಯೇ ಭಗವದನುಗ್ರಹಲಾಭಕ್ಕೆ ಸುಲಭೋಪಾಯವೆಂದು ಮುಖ್ಯತಾತ್ಪರ್ಯವು.

ಪ್ರಪತ್ತ್ಯುಪಾಯವೆಂದರೆ, ಭಗವಂತನೇ ಉಪಾಯವಾಗುವನೆಂದರ್ಥವು. ಪ್ರಪತ್ತಿಯೆಂದರೆ "ತ್ವಮೇವೋಪಾಯಭೂತೋ ಮೇ ಭವೇತಿ ಪ್ರಾರ್ಥನಾಮತಿಃ । ಶರಣಾಗತಿಃ" ಎಂದು ಚೇತನನು ಭಗವಂತನನ್ನೇ ಉಪಾಯನಾಗಿರಬೇಕೆಂದು ಪ್ರಾರ್ಥಿಸುವ ಜ್ಞಾನರೂಪವಾದುದು. ಪ್ರಾರ್ಥ್ಯನಾದ ಒಬ್ಬ ಪರಮಚೇತನನೆನಿಸಿದ ಭಗವಂತನನ್ನು ಅಚೇತನವಾದ ಪ್ರಪತ್ತ್ಯುಪಾಯವೆಂದು ಹೇಳುವುದು ಹೇಗೆ? ಎಂದರೆ, "ನೀಲಜ್ಞಾನಂ, ಪೀತಜ್ಞಾನಂ" ಎಂಬ ಕಡೆಗಳಲ್ಲಿ ಜ್ಞಾನಕ್ಕೆ ಯಾವ ವಿಧವಾದ ವರ್ಣವೂ ಇಲ್ಲದಿದ್ದರೂ, ಅದಕ್ಕೆ ವಿಷಯ-ಭೂತಗಳಾದ ವಸ್ತುಗಳಲ್ಲಿರುವ ನೀಲ ಪೀತಾದಿ ವರ್ಣಗಳನ್ನೇ ವಿಷಯಿಯೊಡದ ಜ್ಞಾನದಲ್ಲಿಯೂ ಉಪಚರಿಸುವಂತೆ, ಪ್ರಪತ್ತಿಗೆ ವಿಷಯಭೂತನಾದ ಭಗವಂತನೇ ಅದಕ್ಕುಪಾಯವಾಗಿರುವದರಿಂದ, ಅವನನ್ನು ವಿಷಯೀಕರಿಸುವ ಪ್ರಪತ್ತಿ ಜ್ಞಾನದಲ್ಲಿಯೂ ಉಪಚರಿಸಿ ಹೇಳುವುದರಿಂದ, ಇಲ್ಲಿ ಯಾವ ವಿರೋಧವೂ ಇಲ್ಲವು.

ಅದು ಹಾಗಿರಲಿ! "ಸ ಸ್ವೇನೈವ ಫಲಪ್ರದಃ ಫಲಮಪಿ ಸ್ವೇನೈವ ನಾರಾಯಣಃ" ಎಂದೂ, "ಮಾಂ ವ್ರಜ" "ಮಾಮೇವೇಷ್ಯಸಿ" ಎಂದೂ, ಭಾವನೆ ಉಪಾಯ ರೂಪವಾಗಿಯೂ ಉಪೇಯರೂಪವಾಗಿಯೂ ಹೇಳಲ್ಪಡುವನಲ್ಲವೆ? ಉಪಾಯವೆಂದರೆ ಕಾರಣವು. ಉಪೇಯನೆಂದರೆ ಕರ್ತೃವು. ಯದನಂತರಂ ಯದ್ದೃಶ್ಯತೇ ತತ್ತಸ್ಯ ಕಾರಣಂ, ನಿಯತಪೂರ್ವಭಾವಿ ಕಾರಣಂ ಎಂದು, ಮೊದಲಿರುವುದು ಕಾರಣವೆನಿಸುವುದು. ಹಾಗೆಯೇ "ನಿಯತಪಶ್ಚಾದ್ಭಾವಿತಂ ಚ ಕಾರ್ಯತ್ವಂ ಎಂದೂ, ಪ್ರಾಗಸತ್ಸತ್ತಾಯೋಗಿತ್ವಂ ಕಾರ್ಯತ್ವಂ" ಎಂದೂ, ಮೊದಲಿಲ್ಲದೆ ಆಮೇಲೆ ಬರುವುದೇ ಕಾರ್ಯವೆನಿಸುವುದಲ್ಲವೆ? ಹೀಗಿರುವಾಗ "ನಿತ್ಯಂ ವಿಭುಂ" ಎಂದು ನಿತ್ಯವಾಗಿಯೂ ಏಕವಾಗಿಯೂ ಇರುವ ಭಗವದ್ವಸ್ತುವಿಗೆ, ಪರಸ್ಪರ ವಿರುದ್ಧಗಳಾದ ಈ ಭಾವಾಭಾವಾತ್ಮಕ ಧರ್ಮಗಳೆರಡೂ ಹೇಗೆ ಸರಿಹೋಗುವುವು?" ಎಂದರೆ, "ಸದೇವ ಸೋಮ್ಯೇದಮಗ್ರ ಆಸೀತ್, ಏಕಮೇವಾದ್ವಿತೀಯಂ" ಎಂದೂ, "ಅವಿಕಾರಾಯ, ಶುದ್ಧಾಯ ನಿತ್ಯಾಯ" ಎಂದೂ, ವಿಕಾರರಹಿತವಾಗಿಯೂ, ನಿತ್ಯವಾಗಿಯೂ, ಏಕವಾಗಿಯೂ ಇರುವ ಬ್ರಹ್ಮಕ್ಕೆ "ಬ್ರಹ್ಮವನಂ ಬ್ರಹ್ಮ ಸವೃಕ್ಷ ಆಸೀತ್" ಎಂದೂ, "ಸೋಽಕಾಮಯತ ಬಹುಸ್ಯಾಂ ಪ್ರಜಾಯೇಯೇತಿ" ಎಂದೂ, "ಸ ಏವ ಸೃಜ್ಯಸ್ಸ ಚ ಸರ್ಗಕರ್ತಾ ಸ ಪಾತ್ಯತ್ತಿ ಚ ಪಾಲ್ಯತೇ ಚ" ಎಂದೂ ತ್ರಿವಿಧ ಕಾರಣತ್ವವೂ, ಸೃಷ್ಟಿಕರ್ತೃತ್ವಸೃಜ್ಯತ್ವಗಳೂ ಪರಸ್ಪರ ವಿರುದ್ಧವಾಗಿದ್ದರೂ "ಸೂಕ್ಷ್ಮಚಿದಚಿದ್ವಿಶಿಷ್ಟ ಬ್ರಹ್ಮಕಾರಣಂ" "ಸ್ಥೂಲಚಿದಚಿದ್ವಿಶಿಷ್ಟಬ್ರಹ್ಮಕಾರ್ಯಂ" ಎಂದು, ಆ ವಿರುದ್ಧ ಧರ್ಮಗಳೆಲ್ಲವೂ ಅವನಿಗೆ ವಿಶೇಷಣಗಳಾದ ಚಿದಚಿತ್ತುಗಳಲ್ಲಿಯೇ ನಿರ್ವಹಿಸಲ್ಪಟ್ಟಿರುವುವು. ಆಗ ಸ್ಥೂಲಸೂಕ್ಷ್ಮಾವಸ್ಥೆಗಳಿಂದ ವಿಶಿಷ್ಟನಾದ ಬ್ರಹ್ಮನೊಬ್ಬನೇ ಆಗುವುದರಿಂದ ಅವನ ನಿತ್ಯತ್ವ ನಿರ್ವಿಕಾರತ್ವಾದಿಗಳಿಗೆ ಬಾಧಕವೇನೂ ಬಾರದು. ಹಾಗೆಯೇ ಇಲ್ಲಿಯೂ, ಧಾತುಃ

ಪ್ರಸಾದಾನ್ಮಹಿಮಾನಮೀಶಂ" ಎಂದೂ, "ತಸ್ಮಿನ್ ಪ್ರಸನ್ನೇ ಕ್ಲೇಶಸಂಕ್ಷಯಃ" ಎಂದೂ ಪ್ರಸಾದವಿಶಿಷ್ಟನೇ ಉಪಾಯನೆನಿಸುವನು. "ಪ್ರಹರ್ಷಯಿಷ್ಯಾಮಿ" ಎಂದೂ ತ್ವತ್ಪ್ರೀತಯೇ" ಎಂದೂ ಪ್ರೀತಿವಿಶಿಷ್ಟನೇ ಉಪೇಯನೆನಿಸುವನು. ಹೀಗೆ ಪ್ರಸಾದಪ್ರೀತಿಗಳೆಂಬ ವಿಶೇಷಗಳಿಂದಲೇ ಉಪಾಯೋಪೇಯತ್ವಭೇದವು ಸಂಭವಿಸಿರುವುದರಿಂದ ವಿಶೇಷಣಗಳಿಂದ ಭೇದವು ತೋರಿಬಂದರೂ, ಅವುಗಳಿಂದ ವಿಶಿಷ್ಟನಾದ ಭಗವಂತನಿಗೆ ಐಕ್ಯವೇ ಗ್ರಹಿಸಲ್ಪಡುವುದು. ಇದರಿಂದ ಭಗವಂತನಿಗೇ ಉಪಾಯೋಪೇಯತ್ವಗಳೆರಡೂ ಒಪ್ಪುವುವು. ಎಂದರೆ ಪೂರ್ವಭಾವಿಯಾದ ಕಾರಣವೂ, ಪಶ್ಚಾದ್ಭಾವಿಯಾದ ಕಾರ್ಯವೂ, ಪ್ರಸಾದ ಪ್ರೀತಿಗಳೆಂಬ ವಿಶೇಷಣಭೇದಗಳಿಂದಲೇ ಹುಟ್ಟುವುವೇ ಹೊರತು ಸ್ವರೂಪದಿಂದಲ್ಲ. ಇದರಿಂದ ಭಗವಂತನಿಗೆ ಪ್ರಾಗಭಾವ ಪಶ್ಚಾದ್ಭಾವಿತ್ವವಾಗಲಿ (ಮೊದಲಿಲ್ಲದೆ ಈಗ ಇರುವುದು) ಪ್ರಾಗ್ಭಾವ ಪಶ್ಚಾದಭಾವವಾಗಲಿ (ಮೊದಲಿದ್ದು ಈಗ ಇಲ್ಲದಿರುವುದು ಸಂಭವಿಸದು) ಇದಕ್ಕಾಗಿಯೇ ಪ್ರಸಾದವೇ ಉಪಾಯವೆಂದೂ, ಪ್ರೀತಿಯೇ ಉಪೇಯವೆಂದೂ ಆಚಾರ್ಯರ ನಿರ್ವಾಹವು.

ಆದರೆ "ಅನನ್ಯಸಾಧ್ಯೇ ಸ್ವಾಭಿಷ್ಟೇ" ಎಂದು ಪ್ರಪತ್ತಿ ಮೊದಲಾದುವುಗಳಿಂದ ಸಾಧ್ಯವಾದುದೇ ಮೋಕ್ಷವಲ್ಲವೆ? ಸಾಧ್ಯವೆಂದರೆ, ಮೊದಲಿಲ್ಲದೆ ಕೊನೆಗೆ ಉತ್ಪನ್ನವಾದುದು. "ಉತ್ಪನ್ನಸ್ಯ ವಿನಾಶಯೋಗಾತ್" ಎಂಬ ನ್ಯಾಯದಿಂದ ಉತ್ಪನ್ನವಾದ ವಸ್ತುವಿಗೆ ನಾಶವೆಂಬುದು ಸಿದ್ಧವು. ಇಲ್ಲಿಯೂ ಉಪೇಯವಾದ ಭಗವತ್ಪ್ರಾಪ್ತಿ ರೂಪ ಮೋಕ್ಷಕ್ಕೆ ಸಾಧ್ಯತ್ವವನ್ನು ಹೇಳುವುದರಿಂದ ಮೋಕ್ಷವನ್ನೂ ನಶ್ವರವೆಂದು ಹೇಳಬೇಕಾಗುವುದಲ್ಲವೆ? ಇದು ಹೇಗೆ?" ಎಂದರೆ, ಮೋಕ್ಷವೆಂಬುದು ನಶಿಸದು. ಇದಕ್ಕೆ ಎರಡು ಪ್ರಕಾರಗಳುಂಟು. ಅದರಲ್ಲಿ ಸಾಧ್ಯವೆಂಬುದೊಂದು. ಈ ಸಾಧ್ಯವೆಂಬುದು ಉತ್ಪಾದ್ಯವೆಂದೂ, ಪ್ರಾಪ್ಯವೆಂದೂ, ವಿಕಾರ್ಯವೆಂದೂ ಸಂಸ್ಕಾರವೆಂದೂ ನಾಲ್ಕು ಬಗೆಯಾಗಿರುವುದು. ಅವುಗಳಲ್ಲಿ ಉತ್ಪಾದ್ಯವೆಂದರೆ, ಘಟಪಟನಿರ್ಮಾಣಗಳಂತೆ ಮೊದಲಿಲ್ಲದೆ ಆಮೇಲೆ ಹುಟ್ಟುವುದು. ಪ್ರಾಪ್ಯವೆಂದರೆ, "ಗ್ರಾಮಂ ಗಚ್ಛತಿ" "ರಾಜಾನಂ ಗಚ್ಛತಿ" "ಗಾಂ ದೋಗ್ಧಿ ಪಯಃ" ಗ್ರಾಮಕ್ಕೆ ಹೋಗುವನು, ರಾಜನಿಗೆ ಸೇರುವುದು. ಹಸುವನ್ನು ಹಾಲು ಕರೆಯುವನು ಎಂಬಂತೆ ಮೊದಲೇ ಸಿದ್ಧವಾದ ವಸ್ತುವನ್ನು ಅಧಿಕಾರಿಯು ವಶಕ್ಕೊಪ್ಪಿಸುವುದು. ವಿಕಾರವೆಂದರೆ ಹಾಲನ್ನು ಮೊಸರಾಗಿಸುವಂತೆಯೂ ಸೀಸವನ್ನು ಕರಗಿಸುವಂತೆಯೂ, ಮೊದಲಿದ್ದುದನ್ನೇ ರೂಪಾಂತರಹೊಂದಿಸುವುದು. ಸಂಸ್ಕಾರ್ಯವೆಂದರೆ ಮೊದಲಿದ್ದ ವಸ್ತುವನ್ನೇ ಕಾರ್ಯಾಂತರಯೋಗ್ಯವಾಗುವಂತೆ ಮಾಡುವುದು. ಹೀಗಿರುವುದರಿಂದ ಇಲ್ಲಿಯೂ "ಬ್ರಹ್ಮವಿದಾಪ್ನೋತಿ ಪರಂ" ಎಂದೂ, "ಪರಾತ್ಪರಂ ಪುರುಷಮುಪೈತಿ ದಿವ್ಯಂ" ಎಂದೂ, "ಪರಂ ಜ್ಯೋತಿರುಪಸಂಪದ್ಯ" ಎಂಬೂ, ಮೊದಲೇ ಸಿದ್ಧರೂಪನಾಗಿರುವ ಪರಮಾತ್ಮನನ್ನು ಚೇತನನು ಸೇರುವುದರಿಂದ, ಈ ಪ್ರಾಪ್ಯವಸ್ತುವು ಸಾಧ್ಯವಾದರೂ ನಿತ್ಯವೆನಿಸುವುದು. ಇದೊಂದು ರೀತಿಯು. ಮತ್ತೊಂದು ಪ್ರಕಾರವೇ

ನೆಂದರೆ "ನಿತ್ಯೋ ನಿತ್ಯಾನಾಂ" ಎಂದೂ, "ಅಜೋ ಹ್ಯೇಕಃ" ಎಂದೂ "ನಹಿ ವಿಜ್ಞಾತುರ್ವಿಜ್ಞಾತೋರ್ವಿಪರಿಲೋಪೋ ವಿದ್ಯತೇ" ಎಂದೂ, ಆತ್ಮಗಳು ನಿತ್ಯಗಳಾದುದರಿಂದ ಆ ಆತ್ಮಧರ್ಮಗಳಿಂದ ಜ್ಞಾನಾನಂದಾದಿಗಳೂ ನಿತ್ಯಗಳು, ಹೀಗೆ ನಿತ್ಯವಾದ ಆತ್ಮಕ್ಕೆ "ತಮಸಾ ಗೂಢಮಗ್ರೇ ಪ್ರಕೇತಂ" ಎಂದೂ, "ತಯಾ ತಿರೋಹಿತತ್ವಾಚ್ಛಕ್ತಿಃ ಕ್ಷೇತ್ರಜ್ಞಸಂಜ್ಞಿತಾ" ಎಂದೂ ಆತ್ಮಸ್ವರೂಪಕ್ಕೂ, ಆತ್ಮ ಧರ್ಮಗಳಿಗೂ ತಿರೋಧಾನವನ್ನುಂಟು ಮಾಡುವುದು ಪ್ರಕೃತಿಸಂಸರ್ಗವು. ಆ ಸಂಸರ್ಗವು ನಶಿಸಿಹೋದಮೇಲೆ "ಸ್ವೇನ ರೂಪೇಣಾಭಿನಿಷ್ಪದ್ಯತೇ" ಎಂದೂ, "ಆವಿರ್ಭೂತಸ್ವರೂಪಸ್ತು" ಎಂದೂ, "ಪ್ರಕಾಶ್ಯಂತೇ ನ ಜನ್ಯಂತೇ ನಿತ್ಯಾ ಏವಾತ್ಮನೋ ಹಿ ತೇ" ಎಂದೂ ಆ ವಿಚಾರಗಳು ಆತ್ಮಕ್ಕೆ ನಿತ್ಯಗಳಾದುದರಿಂದ ಮೊದಲು ಮರೆಸಲ್ಪಟ್ಟಿದ್ದು, ತತ್ಕಾಲದಲ್ಲಿ ಪ್ರಕಾಶಿಸುವುದೇ ಹೊರತು, ಹೊಸದಾಗಿ ಹುಟ್ಟಿದುವಲ್ಲ ಮತ್ತು ಆತ್ಮದ ಸ್ವಾಭಾವಿಕಾಕಾರವೂ ವಿಸ್ಮೃತವಾಗಿದ್ದು ಆವಿರ್ಭವಿಸಿದುದೇ ಹೊರತು ಉತ್ಪಾದ್ಯವಲ್ಲದುದರಿಂದ ಮೋಕ್ಷಾತ್ಮಗಳೆರಡೂ ನಿತ್ಯಗಳು.

ಶರಣಾಗತಿಯ ಮೇಲ್ಮೆಯು.

"ಭಕ್ತಿಗೆ ಶಾಸ್ತ್ರವಿಹಿತಗಳಾದ ವರ್ಣಾಶ್ರಮ ಧರ್ಮಗಳಾದರೂ ಉಂಟು. ಪ್ರಪತ್ತಿಗಾದರೋ "ಸರ್ವಧರ್ಮಾನ್ ಪರಿತ್ಯಜ್ಯ" ಎಂದು, ಇದ್ದ ಧರ್ಮಗಳನ್ನೂ ಬಿಡುವಂತೆ ಹೇಳಲ್ಪಟ್ಟಿರುವುದು. ಆದುದರಿಂದ ಪ್ರಪತ್ತಿಗಿಂದಲೂ ಭಕ್ತಿಯೇ ಮೇಲೆಂದು ತೋರುವುದಲ್ಲವೆ?" ಎಂದರೆ, ಹಾಗಲ್ಲ. "ಶಬ್ದಪ್ರಮಾಣಕೇ ಹ್ಯರ್ಥೇ ಯಥಾಶಬ್ದಂ ವ್ಯವಸ್ಥಿತಿಃ" ಎಂದು ಶಾಸ್ತ್ರಪ್ರಮಾಣವುಳ್ಳವರಾಗಿದ್ದರೆ, ಆ ಶಾಸ್ತ್ರವು ಹೇಳಿದಂತೆ ಗ್ರಹಿಸತಕ್ಕವರಾಗಿರುವೆವು, ಎಂದರೆ "ಬಹವೋ ಹಿ ಯಥಾ ಮಾರ್ಗಾ ವಿಶನ್ತ್ಯೇಕಂ ಮಹಾಪುರಂ! ತಥಾ ಜ್ಞಾನಾನಿ ಸರ್ವಾಣಿ ಪ್ರವಿಶಂತಿ ತಮೀಶ್ವರಂ" ಎಂಬುದಾಗಿ, ಒಂದು ಪಟ್ಟಣವನ್ನು ಪ್ರವೇಶಿಸುವುದಕ್ಕೆ ಹಲವು ದಾರಿಗಳು ಏರ್ಪಟ್ಟಿರುವಂತೆ, ಭಗವತ್ಪ್ರಾಪ್ತಿಗೆ ಹಲವು ಉಪಾಯಗಳುಂಟೆಂದು ಹೇಳಿ, ಒಂದುಪಾಯವು ಸ್ವತಃ ಅಶಕ್ತವಾದರೆ, ಅದಕ್ಕೆ ಬೇರೆ ಕೆಲವು ಸಹಕಾರಿಗಳನ್ನು ವಿಧಿಸಿ, ಯಾವ ಉಪಾಯವು ಸ್ವತಃ ಶಕ್ತವಾಗಿದೆಯೋ ಅದಕ್ಕೆ ಬೇರೆ ಸಹಕಾರಿಯು ಬೇಕಾದುದಿಲ್ಲವೆಂದೂ ಶಾಸ್ತ್ರವು ವಿಧಿಸಿರುವುದು. ಈ ಪ್ರಕಾರಭೇದದಿಂದ ಒಂದಕ್ಕೊಂದಕ್ಕೆ ವೈಲಕ್ಷಣ್ಯವೇನೂ ಬಾರದು. ಆದರೆ ಸ್ವರೂಪ ನಿರೂಪಕ ಧರ್ಮಗಳೆಂದೂ ನಿರೂಪಿತಸ್ವರೂಪಕ್ಕೆ ವಿಶೇಷ ಸಮರ್ಪಕ ಧರ್ಮಗಳೆಂದೂ ಎರಡು ಬಗೆಯುಂಟು. ಆ ವಿಶೇಷ ಸಮರ್ಪಕಗಳನ್ನು ನೋಡಿದರೆ ಪ್ರಪತ್ತಿಯೇ ಮೇಲೆನಿಸುವುದು. ಹೇಗೆಂದರೆ—"ಸೋಽನ್ವೇಷ್ಟವ್ಯಸ್ಸ ವಿಜಿಜ್ಞಾಸಿತವ್ಯಃ" ಎಂದೂ "ಬ್ರಹ್ಮವಿದಾಪ್ನೋತಿ ಪರಂ" "ಜ್ಞಾತ್ವಾ ದೇವಂ ಮುಚ್ಯತೇ ಸರ್ವಪಾಪೈಃ" ಎಂದೂ, "ತಮೇವೈಕಂ ಜಾನಥಾತ್ಮಾನಂ ಅನ್ಯಾ ವಾಚೋ ವಿಮುಂಚಥ, ಅಮೃತಸ್ಯೈಷ ಹೇತುಃ" ಎಂದೂ "ಮುಮುಕ್ಷುರ್ವೈ ಶರಣಮಹಂ ಪ್ರಪದ್ಯೇ" ಎಂದೂ ವೇದಾಂತವಿಹಿತವಾಗಿಯೂ ಮೋಕ್ಷಾದಿಸಾಧನವಾಗಿಯೂ ಇರುವುದ

ರಲ್ಲಿ, ಭಕ್ತಿಪ್ರಪತ್ತಿಗಳೆರಡೂ ಸಮಾನಗಳಾಗಿಯೇ ಇರುವುವು. ಆದರೆ ಪ್ರಪತ್ತ್ಯುಪಾಯ ಸ್ವರೂಪವು ಭಕ್ತ್ಯುಪಾಯಸ್ವರೂಪದಂತೆ ಇವನಿಂದ ಸಾಧಿಸಲ್ಪಡಬೇಕಾದ ಸ್ಥಿತಿಯಲ್ಲಿಲ್ಲದೆ, "ಸಿದ್ಧರೂಪಂ ಪರಬ್ರಹ್ಮ" ಎಂದು ಮೊದಲೇ ಸಿದ್ಧರೂಪವಾಗಿರುವುದು. "ಧ್ಯಾಯತೇ" "ಧ್ರುವಾ ಸ್ಮೃತಿಃ" ಎಂದು ಸ್ಮೃತಿಸಂತಾನರೂಪವಾದ ಜ್ಞಾನವಾಗಿ ಅಚೇತನವೆನಿಸಿ ಕೊಳ್ಳದೆ, "ಯಸ್ಸರ್ವಜ್ಞಸ್ಸ ಸರ್ವವಿತ್" "ಸತ್ಯಂ ಜ್ಞಾನಂ" ಇತ್ಯಾದಿ ರೀತಿಯಿಂದ ತಾನೇ ಜ್ಞಾತೃವಾಗಿಯೂ, ಸನಾತನ ಜ್ಞಾನಸ್ವರೂಪವಾಗಿಯೂ ಇರುವುದು. ಆ ಉಪಾಯ ವನ್ನು ಸ್ವೀಕರಿಸಿದ ಪಕ್ಷದಲ್ಲಿ "ಆವೃತ್ತಿರಸಕೃದುಪದೇಶಾತ್" "ಅನೇಕ ಜನ್ಮ ಸಂಸಿದ್ಧಃ" ಎಂಬಂತೆ, ಚಿರಕಾಲಸಾಧ್ಯವೆನಿಸಿಕೊಳ್ಳದೆ "ತದ್ದ್ವಯಂ ಸಕೃದುಚ್ಚಾರೋ ಭವತಿ" ಎಂಬಂತೆ ಸಕೃತ್ಪ್ರಯೋಗಲಭ್ಯವಾಗಿರುವುದು. "ತಸ್ಯ ತಾವದೇವ ಚಿರಂ ಯಾವದಧಿಕಾರಂ" ಎಂಬಂತೆ ಅತಿವಿಳಂಬವಾಗಿ ಫಲವನ್ನು ತೋರಿಸತಕ್ಕುದಾಗಿಲ್ಲದೆ "ಉಪಾಯೋಽಯಂ ಚತುರ್ಥಸ್ತೇ ಪ್ರೋಕ್ತಶೀಘ್ರಫಲೋದಯಃ" ಎಂಬಂತೆ ಶೀಘ್ರಫಲಪ್ರದವಾಗಿರುವುದು. "ತಪಸಾಽನಾಶಕೇನ" ಎಂದೂ, "ಯಜ್ಞೋ ದಾನಂ ತಪಶ್ಚೈವ" ಎಂದೂ, "ಪಂಚಾಗ್ನ-ಯೋ ಯೇಚ ತ್ರಿಣಾಚಿಕೇತಾಃ" ಎಂದೂ, ತಪಸ್ಸಂತಾಪಲಬ್ಧಸ್ತೇ ಯೋಽಯಂ ಧರ್ಮ-ಪರಿಗ್ರಹಃ" ಎಂದೂ, "ಕಾರ್ಯಂ ತ್ರಿಷ್ವಭಿಷೇಕಶ್ಚ ಕಾಲೇ ಕಾಲೇಚ ನಿತ್ಯಶಃ" ಎಂದೂ, ಮಳೆಬಿಸಿಲೆನ್ನದೆ, ತಪಸ್ಸಿನ ನೆವದಿಂದ ಅಹೋರಾತ್ರಿಯೂ ಬೆಂಕಿಗೂ ಚಳಿಗೂ ಮೈಯೊಡ್ಡಿ ಕಷ್ಟಪಟ್ಟು ದೇಹವನ್ನು ಶೋಷಿಸುವಂತಲ್ಲದೆ "ಆನಂದೋ ಬ್ರಹ್ಮ" "ಕಂ ಬ್ರಹ್ಮ ಖಂ ಬ್ರಹ್ಮ" ಎಂದೂ, "ಸರ್ವಗಂಧಸರ್ವರಸಃ" ಎಂದೂ ಕೇವಲ ನಿತ್ಯಾನಂದರೂಪವಾಗಿರು ವುದು. "ಜ್ಞಾನದೋಷ ಪರಿಭ್ರಷ್ಟಶ್ಚಾಂಡಾಲೀಂ ಯೋನಿಮಾಗತಃ" ಎಂದೂ "ಮಿಥ್ಯಾ ಪ್ರಯುಕ್ತೋ ಯಜಮಾನಂ ಹಿನಸ್ತಿ" ಎಂದೂ ಸ್ವಲ್ಪ ತಪ್ಪಿ ನಡೆದರೂ ಮಹಾಪಾಪಕ್ಕೆ ಹೇತುಗಳಾದ ಜ್ಞಾನಯಜ್ಞಾದಿಗಳಂತಲ್ಲದೆ, "ಯಥಾತಥಾವಾಪಿ ಸಕೃತ್ಕೃತೋಂಜಲಿಃ" ಎಂಬಂತೆ ಅಪಾಯರಹಿತವಾಗಿರುವುದಲ್ಲದೆ, "ದುರಾಚಾರೋಪಿ ಸರ್ವಾಶೀ ಕೃತಘ್ನೋ ನಾಸ್ತಿಕಃ ಪುರಾ | ಸಮಾಶ್ರಯೇದಾದಿದೇವಂ ಶ್ರದ್ಧಯಾ ಶರಣಂ ಯದಿ | ನಿರ್ದೋಷಂ ವಿದ್ಧಿ ತಂ ಜಂತುಂ ಪ್ರಭಾವಾತ್ಪರಮಾತ್ಮನಃ" ಎಂಬಂತೆ, ಒಂದು ವೇಳೆ ಪದ್ಧತಿಯನ್ನು ತಪ್ಪಿ ನಡೆದರೂ, ಆ ದೋಷಗಳನ್ನು ನೀಗಿಸಿ ಅನುಷ್ಠಾತೃವನ್ನು ಉಜ್ಜೀವಿಸುವಂತೆ ಮಾಡು ವುದು ಇವೇ ಮೊದಲಾದ ಇನ್ನೂ ಅನೇಕ ಗುಣಪೌಷ್ಕಲ್ಯಗಳಿಂದ ಭಕ್ತ್ಯಾದಿಗಳಿಗಿಂತಲೂ ಪ್ರಪತ್ತಿಯೇ ಮೇಲೆಂಬುದು ಸಿದ್ಧವು.

ಹೀಗಿದ್ದರೂ ಈ ವಿಭೀಷಣನು ಈಗ ಪ್ರಪತ್ತಿಯನ್ನು ಮಾಡಿದುದು ಕೇವಲ ಕ್ಷುದ್ರ ಪ್ರಯೋಜನಕ್ಕಾಗಿಯೇ ಅಲ್ಲವೆ? "ರಾಜ್ಯಂ ಪ್ರಾರ್ಥಯಮಾನಶ್ಚ ಬುದ್ಧಿಪೂರ್ವಮಿಹಾಗತಃ" ಎಂದು ನಿಮ್ಮ "ಹನುಮಂತನೇ ಹೇಳಿದನಲ್ಲವೆ?" ಎಂದರೆ, ಹಾಗಲ್ಲ (ತವಾಸ್ಮೀತಿ ✱ ಯಾಚತೇ) ಅನನ್ಯಪ್ರಯೋಜನನಾಗಿಯೇ ಬಂದಿರುವನು. ಇಲ್ಲಿನ ಚಕಾರವು ಅವಧಾರ-ಣಾರ್ಥಕವು. ಒಂದುವೇಳೆ ಹನುಮಂತನು ಹಿಂದೆ ತಾನು ರಾವಣನ ಕೈಗೆ ಸಿಕ್ಕಿಬಿದ್ದಾಗ,

ವಿಭೀಷಣನು ರಾವಣನಿಗೆ ದೂತವಧವು ಕೂಡದೆಂದು ಹೇಳಿ, ತನ್ನ ಕೊಲೆಯನ್ನು ತಪ್ಪಿಸಿ ಕಾಪಾಡಿದ ಉಪಕಾರಕ್ಕೆ ಪ್ರತ್ಯುಪಕಾರವಾಗಿ ಈಗ ಅವನಿಗೆ ರಾಜ್ಯವನ್ನು ಕೊಡಬೇಕೆಂದು ಹೇಳಿರಬಹುದೇ ಹೊರತು, ವಿಭೀಷಣನು ತಾನಾಗಿ ಆ ಮಾತನ್ನು ಹೇಳಿದವನಲ್ಲ. "ತ್ಯಕ್ತ್ವಾ ಪುತ್ರಾಂಶ್ಚ" ಎಂದೂ, "ಪರಿತ್ಯಕ್ತಾ ಮಯಾ ಲಂಕಾ ಮಿತ್ರಾಣಿ ಚ ಧನಾನಿ ಚ | ಭವದ್ಗತಂ ಮೇ ರಾಜ್ಯಂ ಚ ಜೀವಿತಂ ಚ ಸುಖಾನಿ ಚ" ಎಂದೂ, ತನ್ನ ಸರ್ವಸ್ವವನ್ನೂ ಒತ್ತೆಯಿಟ್ಟು "ನಿನ್ನವನೇ ನಾನೆಂದು" ಬಂದಿರುವನು, ಮತ್ತು (ತವಾಸ್ಮಿ) ನಾನು ನನಗೆಂದು ಸ್ವಾತಂತ್ರ್ಯವನ್ನು ತೋರಿಸಿದವನಲ್ಲ! ತಾನು ರಾವಣನ ಕಡೆಯವನೆಂದೇ ಇತರ ಪಾರತಂತ್ರ್ಯವನ್ನೂ ತೋರಿಸಿದವನಲ್ಲ. ನಾನು ನಿನ್ನವನೇ ಎಂದು ನನ್ನಲ್ಲಿಗೆ ಬಂದಿರುವನು (ತವಾಸ್ಮಿ) "ಅಹಂ ಬ್ರಹ್ಮಾಸ್ಮಿ" ಎಂಬಂತೆ ಸಾಮಾನಾಧಿಕರಣ್ಯದಿಂದ ಹೇಳಿದರೂ ಶೇಷ-ಶೇಷಿಭಾವವು ಸಿದ್ಧಿಸುವುದಲ್ಲವೆ ? ಹಾಗಿಲ್ಲದೆ ವ್ಯಧಿಕರಣವಾಗಿಯೇ ಹೇಳಿರುವುದೇಕೆ ಎಂದರೆ, ಸಾಮಾನಾಧಿಕರಣ್ಯದಿಂದ ಜೀವಾತ್ಮರಿಗೆ ಸ್ವರೂಪೈಕ್ಯವು ತೋರುವುದರಿಂದ ಭ್ರಮೆಯುಂಟಾಗಬಹುದೆಂದೂ ಈ ಐಕ್ಯವಿಲ್ಲವೆಂಬುದನ್ನು ಪೂರ್ವಾಪರಗಳಿಂದಲೂ, ಪ್ರಮಾಣಾಂತರಗಳಿಂದಲೂ, ಉಪಪಾದಿಸಬೇಕಾಗಿ ಬರುವುದೆಂದೂ ಭಾವಿಸಿ, ಜೀವಪರಮಾತ್ಮ ಭೇದವು ವ್ಯಕ್ತವಾಗಿ ತಿಳಿಯುವುದಕ್ಕಾಗಿಯೇ ಹೇಳಿರುವನೆಂದು ಗ್ರಾಹ್ಯವು. ಆದರೆ ಸ್ವರೂಪಾನುಗುಣವಾದ ಶೇಷತ್ವವು "ಶ್ರೀಮತೇ ನಾರಾಯಣಾಯ" ಎಂದೂ, "ಸಹ ವೈದೇಹ್ಯಾ ಅಹಂ ಸರ್ವಂ ಕರಿಷ್ಯಾಮಿ" ಎಂದೂ, ಅವರಿಬ್ಬರ ಸೇರುವೆಯಲ್ಲಿಯೇ ಅಲ್ಲವೇ! ಹಾಗಿಲ್ಲದೆ ಪ್ರತ್ಯೇಕವಾಗಿ ನಿನ್ನಲ್ಲಿ ಮಾತ್ರ ಶೇಷತ್ವವನ್ನವಲಂಬಿಸಿದರೆ ಏಕಾಯನನಾಗುವುದಲ್ಲವೆ ? ಎಂದರೆ ಹಿಂದೆ "ಪಿತ್ರಾ ಚ ಪರಿತ್ಯಕ್ತಃ" ಎಂಬಲ್ಲಿ "ಮಾತ್ರಾ ಚ ಪರಿತ್ಯಕ್ತಃ" ಎಂದು ಅನುಕ್ತಸಮುಚ್ಚಯದಲ್ಲಿಯೇ ಅಪೇಕ್ಷಿತವೆಂದು ಭಾವವು. ಆದರೆ ಈ ಧರ್ಮಗಳೆಲ್ಲವನ್ನೂ ಬಲ್ಲ ವಿಭೀಷಣನು ಸರ್ವವಿಷಯದಲ್ಲಿಯೂ ನಿನಗೆ ಪರತಂತ್ರನಾಗಿ ನೀನು ನಡೆಸಿದಂತೆಯೇ ಹೋಗಬೇಕಾಗಿರುವಾಗ ಹೀಗೆ ನಿನ್ನನ್ನು ನಿರ್ಬಂಧಿಸುವುದುಂಟೆ ? ಎಂದರೆ, "ಯಾಚತೇ" ತನಗಿದು ಅಭಿಮತವೆಂಬುದನ್ನು ತೋರಿಸುವುದಕ್ಕಾಗಿ ಯಾಚಿಸುವನೇ ಹೊರತು ನಿರ್ಬಂಧವಲ್ಲವು. "ಆದರೆ ನೀನು ಇದಕ್ಕಾಗಿ ಅವನಿಗೆ ಮಾಡಬೇಕಾದ ಅನುಗ್ರಹವೇನು ? ಎಂದರೆ (ಸರ್ವಭೂತೇಭ್ಯಃ ಅಭಯಂ ದದಾಮಿ)" ಅಥ ಸೋಽಭಯಂ ಗತೋ ಭವತಿ " ಎಂಬಂತೆ, ಸಮಸ್ತ ಭೂತಗಳಿಂದಲೂ ಭಯ ನಿವೃತ್ತಿರೂಪವಾದ ಮೋಕ್ಷವನ್ನು ಕೊಡುವೆನೆಂದು ಭಾವವು (ಏತದ್ವ್ರತಂ) " ಪರಿತ್ರಾಣಾಯ ಸಾಧೂನಾಂ ಸಂಭವಾಮಿ " ಎಂಬಂತೆ, ಇದು ನನಗೆ ಸತ್ಯಾಪ್ರಯುಕ್ತವು. ಇದು ಮುಖ್ಯವಾಗಿ ಯಾರಿಗೆ ಅನುಷ್ಠೇಯವೆಂದರೆ (ಮಮ) ಸೃಷ್ಟಿಕರ್ತನಾದ ಬ್ರಹ್ಮನಿಗೂ ಕೃತ್ಯವಲ್ಲ. ಸಂಹಾರಕನಾದ ರುದ್ರನಿಗೂ ಕೃತ್ಯವಲ್ಲ. " ನಹಿ ಪಾಲನಸಾಮರ್ಥ್ಯಮೃತೇ ಸರ್ವೇಶ್ವರಾದ್ಧರೇಃ " ಎಂದೂ, " ರಕ್ಷಾರ್ಥಂ ಸರ್ವ-ಲೋಕಾನಾಂ ವಿಷ್ಣುತ್ವಮುಪಜಗ್ಮಿವಾನ್ " ಎಂದೂ, ರಕ್ಷಣಕಾರ್ಯವೆಂಬುದು ನನಗೊಬ್ಬನಿಗೇ ಮುಖ್ಯಕೃತ್ಯವೆಂದೂ ಭಾವವು.

ಚರಮ ಶ್ಲೋಕತ್ವ ಸಮರ್ಥನವು

ಮಹಾಭಾರತದಲ್ಲಿ ಭಗವದ್ಗೀತೆಯ ಕೊನೆಯಲ್ಲಿರುವ "ಸರ್ವಧರ್ಮಾನ್ಪರಿತ್ಯಜ್ಯ" ಇತ್ಯಾದಿ ಚರಮಶ್ಲೋಕದಂತೆ ರಾಮಾಯಣಕ್ಕೆ ಇದೇ ಚರಮಶ್ಲೋಕವೆಂದು ನಿರ್ಣಯಿಸಿರುವರು. ಆದರೆ ಸರ್ಗದ ನಡುವೆ ಇರುವ ಈ ಶ್ಲೋಕಕ್ಕೆ ಚರಮಶ್ಲೋಕತ್ವವೆಂಬ ವ್ಯವಹಾರವು ಹೇಗೆ ಎಂದರೆ, ಇಲ್ಲಿ ಚರಮತ್ವಕ್ಕೆ ಆದ್ಯಂತಗಳು ಕಾರಣವಲ್ಲ. ಭಾರತದಲ್ಲಿ ಕರ್ಮಜ್ಞಾನಾದ್ಯುಪಾಯಗಳನ್ನು ಮೊದಲು ವಿಸ್ತಾರವಾಗಿ ವಿವರಿಸಿ, ಕೊನೆಗೆ ಪ್ರಪತ್ತಿಯನ್ನು ಚರಮೋಪಾಯವಾಗಿ ವಿಧಿಸಿದುದರಿಂದಲೇ, ಅದು ಚರಮಶ್ಲೋಕವೆನಿಸಿತು. ಇದರಲ್ಲಿಯೂ ಮೊದಲು ಅಂಗದಾದಿಗಳು ವಿಭೀಷಣನನ್ನು ಸ್ವೀಕರಿಸಕೂಡದೆಂದು ತಮ್ಮತಮ್ಮ ಮತಗಳನ್ನು ಬೇರೆ ಬೇರೆಯಾಗಿ ತಿಳಿಸಲು, ಅವೆಲ್ಲವನ್ನೂ ಆಕ್ಷೇಪಸಮಾಧಾನಗಳೊಡನೆ ಸಿದ್ಧಾಂತೀಕರಿಸಿ, ಕೊನೆಗೆ ಹೇಳಿದ ಶ್ಲೋಕವಾದುದರಿಂದ ಚರಮವೆನಿಸಿಕೊಳ್ಳುವುದು. ಅಲ್ಲಿಯೂ (ಮಹಾಭಾರತದಲ್ಲಿಯೂ) ಐಶ್ವರ್ಯವನ್ನು ಕಳೆದುಕೊಂಡವನಿಗೆ ಆ ಐಶ್ವರ್ಯವು ಲಭಿಸುವಂತೆ ಮಾಡಬೇಕಾಯಿತು. ಇಲ್ಲಿಯೂ ರಾಜ್ಯಭ್ರಷ್ಟನಾಗಿ ಬಂದ ವಿಭೀಷಣನಿಗೆ ರಾಜ್ಯವನ್ನು ಕೊಡಿಸಬೇಕಾಗಿರುವುದು. ಅಲ್ಲಿಯೂ ಸೇನೆಯ ನಡುವೆ ನಿಂತು ಹೇಳಿದ ವಾಕ್ಯವಾಗಿರುವುದು. ಇಲ್ಲಿಯೂ ಸೇನೆಯ ನಡುವೆ ನಿಂತು ಹೇಳಿದ ವಾರ್ತೆಯು. ಅಲ್ಲಿ ಅರ್ಜುನನ ಶೋಕನಿವೃತ್ತಿಗಾಗಿ ಹೇಳಿದ ವಾರ್ತೆಯು. ಇಲ್ಲಿಯೂ ವಿಭೀಷಣನ ಶೋಕನಿವೃತ್ತಿಗಾಗಿ ಹೇಳುವ ವಾರ್ತೆಯಾಗಿರುವುದು. ಅದೂ ಒಬ್ಬ ಗೋಪಾಲನ (ಗೊಲ್ಲನ) ವಾಕ್ಯವು. ಇದೂ ಒಬ್ಬ ಗೋಪಾಲನ (ಭೂಪಾಲನ) ವಾಕ್ಯವು. ಹೀಗೆ ಇವೆರಡಕ್ಕೂ ಪರಸ್ಪರಸಾಮ್ಯವು ಪೂರ್ಣವಾಗಿರುವುದರಿಂದ ಇದು ರಾಮಾಯಣದ ಚರಮಶ್ಲೋಕವೆಂದೇ ಗ್ರಾಹ್ಯವು.

ಇಷ್ಟೇ ಅಲ್ಲದೆ ಭಾರತ ಚರಮಶ್ಲೋಕಕ್ಕಿಂತಲೂ ಈ ರಾಮಾಯಣ ಚರಮಶ್ಲೋಕದಲ್ಲಿ ಕೆಲವು ವಿಶೇಷಗಳುಂಟೆಂದೂ ಹೇಳಬಹುದು. ಹೇಗೆಂದರೆ:—ಅದು ರಥದಮೇಲೆ ನಿಂತು ಹೇಳಿದ ಮಾತು, ಇದು ನೈಷ್ಠಿಕನಂತೆ ನೆಲದಮೇಲೆ ನಿಂತು ಹೇಳಿದ ವಾಕ್ಯವು. ಅದರಲ್ಲಿ "ಮಾಂ ವ್ರಜ" ನನ್ನನ್ನು ಸೇರು ! ಎಂದು ಶರಣ್ಯನು ತಾನಾಗಿ ಆಶೆಪಟ್ಟಂತೆ ಹೇಳಲ್ಪಟ್ಟಿರುವುದು. ಇಲ್ಲಿಯೋ "ಸಂಪ್ರಾಪ್ತಂ" ಎಂಬುದಾಗಿ ಶರಣಾರ್ಥಿಯು ತಾನೇ ಸಮ್ಮತಿಸಿ ಬಂದಂತೆ ಹೇಳಲ್ಪಟ್ಟಿರುವುದು. ಅದರಲ್ಲಿ "ಧರ್ಮಾನ್ಪರಿತ್ಯಜ್ಯ" ಎಂದು ಧರ್ಮತ್ಯಾಗವು ಮಾಡಲ್ಪಟ್ಟಿರುವುದು. ಇಲ್ಲಿಯೋ "ಪರಿತ್ಯಕ್ತಾ ಮಯಾ ಲಂಕಾ ಮಿತ್ರಾಣಿ ಚ ಧನಾನಿ ಚ" ಎಂದು ಧರ್ಮತ್ಯಾಗವೇ ನಡೆಸಲ್ಪಟ್ಟಿರುವುದು. ಅದರಲ್ಲಿ "ಷೋಡಶ ಸ್ತ್ರೀ ಸಹಸ್ರಾಣಿ" ಎಂದು ಬಹುದಾರಪರಿಗ್ರಹವನ್ನು ಮಾಡಿದವನು ಉಪದೇಶಿಸಿದ ವಾಕ್ಯವು. ಇದು "ನ ರಾಮಃ ಪರದಾರಾಂಶ್ಚ ಚಕ್ಷುರ್ಭ್ಯಾಮಪಿ ಪಶ್ಯತಿ" ಎಂಬಂತೆ ಪರಸ್ತ್ರೀಯರನ್ನು ಕಣ್ಣೆತ್ತಿಯೂ ನೋಡದ ಪರಮಶುದ್ಧನಾದ ಏಕದಾರವ್ರತನ ಮಾತು. ಅದನ್ನು ಹೇಳಿದವನು ಲೋಕದಲ್ಲಿ ಕಪಟನಾಟಕಸೂತ್ರಧಾರಿಯೆಂದು ಪ್ರಸಿದ್ಧಿಹೊಂದಿದವನು. ಇದನ್ನು ಹೇಳಿದವನು

ಮರೆಹೊಕ್ಕು "ನಾನು ನಿನ್ನವನು" ಎಂದು ಹೇಳಿ ಯಾಚಿಸಿದ ಪಕ್ಷದಲ್ಲಿ, ಅಂತ ವನಿಗೆ ನಾನು ಸಮಸ್ತಭೂತಗಳಿಂದಲೂ ಭಯವಿಲ್ಲದಂತೆ ಅಭಯವನ್ನು ಕೊಡು ವೆನು. ಇದೇ ನನ್ನ ವ್ರತವು. [1]ಆದುದರಿಂದ ಎಲೈ ಸುಗ್ರೀವನೆ! ಮೊದಲು ನಿನ್ನನ್ನೇ ಪುರುಷಕಾರಕ್ಕಾಗಿ ಕೇಳಿಕೊಂಡ ಆ ವಿಭೀಷಣನನ್ನು ನೀನೇ ಹೋಗಿ ಇಲ್ಲಿಗೆ ಕರೆತಂದುಬಿಡು! ಎಲೆ ಮಿತ್ರನೆ! ಇನ್ನು ನಿನ್ನೊಡನೆ ಮುಚ್ಚುಮರೆಯೇಕೆ? ಆತನು ಅಂತರಿಕ್ಷದಲ್ಲಿ ನಿಂತು "ಶರಣು" ಎಂಬೀ ಮಾತನ್ನು ಹೇಳಿದಾಗಲೇ ನಾನು ಅವನಿಗೆ ಅಭಯವನ್ನೂ ಕೊಟ್ಟಾಯಿತು. ಇನ್ನು ನಿಮ್ಮ ವಿವಾದದಿಂದ

"ಸತ್ಯವಾಕ್ಯಃ" ಎಂದೂ "ರಾಮೋ ದ್ವಿರ್ನಾಭಿಭಾಷತೇ" ಎಂದೂ ಮಹಾಸತ್ಯಸಂಧನೆಂದೂ ಪ್ರಸಿದ್ಧನಾದ ರಾಮನು. ಅಲ್ಲಿ ಕುದುರೆಯ ಚಾಟಿಯನ್ನು ಕೈಯಲ್ಲಿ ಹಿಡಿದ ಸಾರಥಿಯ ವಾಕ್ಯವು. ಇಲ್ಲಿ ಕೈಯಲ್ಲಿ ಧನುರ್ಬಾಣಗಳನ್ನು ಹಿಡಿದ ರಾಜನಾದ ದಾಶರಥಿಯ ವಾಕ್ಯವು. ಅಲ್ಲಿ ಶರಣಾಗತನ ಅಧ್ಯವಸಾಯವು ಹೇಳಲ್ಪಟ್ಟಿರುವುದು. ಇಲ್ಲಿ ಶರಣ್ಯನ ಅಧ್ಯವಸಾಯವೇ ಹೇಳಲ್ಪಡುವುದು. ಅಲ್ಲಿ ಶರಣಾಗತನನ್ನು ಪಾಪದಿಂದ ಮಾತ್ರವೇ ಬಿಡಿಸುವುದಾಗಿ ಹೇಳು ವನು. ಇಲ್ಲಿ ತಾನು ಶರಣಾಗತನನ್ನೇ ಬಿಡುವುದಿಲ್ಲವೆಂದು ಹೇಳುವನು. ಅದರಲ್ಲಿ ದೋಷಿಯಾದವನನ್ನೂ ದೋಷದಿಂದ ಬಿಡಿಸುವುದಾಗಿ ಮಾತ್ರ ಹೇಳುವನು. ಇಲ್ಲಿ ದೋಷ ಯುಕ್ತನನ್ನಾದರೂ ತಾನೂ ಬಿಡಲಾರೆನೆಂದು ಹೇಳುವನು. ಅದರಲ್ಲಿ ಕಾಲಾಂತರದಲ್ಲಿ ಸಂಭವಿಸಬಹುದಾದ ಅದೃಷ್ಟಫಲವು ಹೇಳಲ್ಪಡುವುದು. ಇಲ್ಲಿ ಸದ್ಯಃಫಲವಾದ ದೃಷ್ಟಪ್ರಯೋ ಜನವೇ ಹೇಳಲ್ಪಡುವುದು. ಅಲ್ಲಿ ಪ್ರತಿಬಂಧಕರಾರೂ ಇಲ್ಲದಿದ್ದಾಗ ಶರಣಾಗತನನ್ನು ರಕ್ಷಿಸಿದಂತೆ ಕಾಣಿಸಲ್ಪಟ್ಟಿರುವುದು. ಇಲ್ಲಿ ಪ್ರತಿಬಂಧಕರಿದ್ದಾಗಲೂ ರಕ್ಷಿಸಿದ ರೀತಿಯು ಹೇಳಲ್ಪಡುವುದು. ಅಲ್ಲಿ "ಮೋಕ್ಷಯಿಷ್ಯಾಮಿ" ಎಂಬ ಭವಿಷ್ಯದ್ರೂಪದಿಂದ ಫಲಕ್ಕೆ ಕಾಲವಿಳಂಬವು ತೋರುವುದು. ಇಲ್ಲಿ 'ದದಾಮಿ' ಎಂಬ ವರ್ತಮಾನನಿರ್ದೇಶದಿಂದ ಸದ್ಯಃಫಲವು ಕಾಣುವುದು. ಈ ಕಾರಣಗಳಿಂದ ಭಾರತ ಚರಮಶ್ಲೋಕಕ್ಕಿಂತಲೂ ಈ ರಾಮಾಯಣ ಚರಮಶ್ಲೋಕವೇ ಮೇಲೆನಿಸುವುದೆಂದು ಗ್ರಾಹ್ಯವು (ತನಿಶ್ಲೋಕಿ).

1. ಇಲ್ಲಿ "ಆನಯೈನಂ ಹರಿಶ್ರೇಷ್ಠ ದತ್ತಮಸ್ಯಾಭಯಂ ಮಯಾ। ವಿಭೀಷಣೋ ವಾ ಸುಗ್ರೀವ ಯದಿ ವಾ ರಾವಣಸ್ಸ್ವಯಮ್" ಎಂದು ಮೂಲವು. ವಿಶೇಷಾರ್ಥವು:-ರಾಮನು ತನ್ನಲ್ಲಿ ಆರ್ತಿತನಾದ ಸುಗ್ರೀವನೊಡನೆ ಇದುವರೆಗೂ ವಾದಿಸಿ ಚರ್ಚಿಸುತಿದ್ದು, ಕೊನೆಗೆ ಆಶ್ರಿತವಾತ್ಸಲ್ಯದಿಂದ ಅವನನ್ನು ಕುರಿತು ಎಲೆ ವಾನರೇಂದ್ರನೆ! ಇದುವರೆಗೆ "ಮಿತ್ರ ಭಾವನೆ" ಇತ್ಯಾದಿಕದಿಂದ ನನ್ನ ಸಂಕಲ್ಪವನ್ನು ತಿಳಿಸಿದೆನು. ನೀವು ನಿರ್ಭಯವಾಗಿ ಆತನನ್ನು ಸ್ವೀಕರಿಸಬಹುದೆಂಬುದಕ್ಕಾಗಿ 'ಪಿಶಾಚಾನ್' ಇತ್ಯಾದಿ ಶ್ಲೋಕದಿಂದ ನನ್ನ ಸರ್ವ ಶಕ್ತತ್ವವನ್ನೂ ನಿರೂಪಿಸಿದೆನು. ಕೇವಲತಿರ್ಯಕ್ಕಾದ ಕಪೋತವೇ ಇದನ್ನನುಷ್ಠಿಸಿರುವುದರಿಂದ ನಮಗೂ ಈ ಧರ್ಮವು ಅವಶ್ಯಾನುಷ್ಠೇಯವೆಂಬುದನ್ನೂ ತೋರಿಸಿದೆನು. ಕಂಡುಗಾಥೆ

ಫಲವಿಲ್ಲ! ಅವನು ವಿಭೀಷಣನಾಗಿದ್ದರೂ, ಇರಲಿ! ಕೊನೆಗೆ ವಿಭೀಷಣ ವೇಷದಿಂದ ರಾವಣನೇ ತಾನಾಗಿ ಬಂದಿದ್ದರೂ, ನೀನು ಮತ್ತೊಮ್ಮೆ ನನ್ನಲ್ಲಿಗೆ ಬಂದು ಕೇಳಿಹೋಗಬೇಕಾದುದಿಲ್ಲ! ಸ್ವಲ್ಪವೂ ಸಂದೇಹಿಸದೆ ಅವನನ್ನು ಕರೆದುಬಿಡು!" ಎಂದನು. ವಾನರೇಂದ್ರನಾದ ಸುಗ್ರೀವನು ಹೀಗೆ ರಾಮನು ಹೇಳಿದ ಮಾತನ್ನು ಕೇಳಿ, ಆತನಿಗಿರುವ ಶರಣಾಗತವಾತ್ಸಲ್ಯಕ್ಕೂ, ವಿಭೀಷಣನನ್ನು ಕರೆತರುವುದಕ್ಕಾಗಿ ತನ್ನನ್ನೇ ನಿಯಮಿಸಿದುದರಿಂದ, ತನ್ನನ್ನೊಪ್ಪಿಸಿಯೇ ಆತನನ್ನು ಸ್ವೀಕರಿಸುವಂತೆ, ತನ್ನಲ್ಲಿ ತೋರಿಸಿದ ಎಣೆಯಿಲ್ಲದ ಮಿತ್ರವಾತ್ಸಲ್ಯಕ್ಕೂ ಮರುಳಾಗಿ, ರಾಮನನ್ನು ಕುರಿತು, ರಾಮಾ! ನೀನು ಸಮಸ್ತಧರ್ಮ ಸೂಕ್ಷ್ಮಗಳನ್ನೂ ತಿಳಿದವನು! ಸಮಸ್ತ ಲೋಕಗಳನ್ನೂ ರಕ್ಷಿಸತಕ್ಕ ಪ್ರಭುವು! ಇತರರ ಕ್ಷೇಮಕ್ಕಾಗಿಯೇ ಅವತರಿಸಿದವನು! ಸರ್ವಶಕ್ತನು! ಧರ್ಮಸಂಸ್ಥಾಪನವೆಂಬ ಸನ್ಮಾರ್ಗದಲ್ಲಿಯೇ ಸ್ಥಿರವಾಗಿ ನೆಲೆಗೊಂಡವನು! ಹೀಗಿರುವ ನೀನು! ಧರ್ಮಯುಕ್ತವಾದ ಈ ಮಾತನ್ನಾಡಿದೆಯೆಂದರೆ,

---

ಯೆಂಬ ಸ್ಮೃತಿಪ್ರಮಾಣವನ್ನು ನಿರೂಪಿಸಿ ಅದರಿಂದ ಶರಣಾಗತರನ್ನು ರಕ್ಷಿಸುವುದರಿಂದಲೂ, ತ್ಯಜಿಸುವುದರಿಂದಲೂ ಸಂಭವಿಸಬಹುದಾದ ಗುಣದೋಷಗಳನ್ನೂ ತೋರಿಸಿದೆನು. ಇವೆಲ್ಲಕ್ಕೂ ಮೇಲೆ, ಅವನು ಎಂತವನೇ ಆಗಿದ್ದರೂ ನನ್ನನ್ನು ಕುರಿತು 'ಶರಣು' ಎಂದು ಹೇಳಿದಾಗಲೇ ಅಭಯವನ್ನೂ ಕೊಟ್ಟಂತಾಯಿತು. ಇಷ್ಟಾದರೂ ನಿಮ್ಮ ಅನುಮತಿಯಿಲ್ಲದೆ ಆ ಕಾರ್ಯವನ್ನು ನಡೆಸಲಾರೆನಾದುದರಿಂದ, ನೀವು ನಡೆಸಬೇಕಾದ ಅನುಮತಿಕಾರ್ಯವೊಂದೇ ಈಗ ಉಳಿದಿರುವುದು. ಇದು ನಿಮ್ಮಿಂದಲೇ ನಡೆಯಬೇಕು" ಎಂದು ವಿಭೀಷಣನನ್ನು ಕರೆತರುವುದಕ್ಕೆ ಸುಗ್ರೀವನನ್ನೇ ಕೇಳಿಕೊಳ್ಳುವುದಾಗಿ ಇದರ ಭಾವವು. ಇದರಿಂದ ಭಗವಂತನಲ್ಲಿರುವ ಅಸಾಧಾರಣವಾದ ಆಶ್ರಿತಪಾರತಂತ್ರ್ಯವು ವ್ಯಕ್ತವಾಗುವುದು. ಸುಗ್ರೀವನನ್ನು ಪ್ರಸನ್ನನಾಗಿಸಬೇಕೆಂಬುದಕ್ಕಾಗಿಯೇ ಇಲ್ಲಿ "ಹರಿಶ್ರೇಷ್ಠ" ಎಂಬ ಸ್ತುತಿರೂಪವಾದ ಸಂಬೋಧನೆಯು. ಮತ್ತು (ವಿಭೀಷಣೋ ವಾ ರಾವಣಸ್ಸ್ವಯಂ ಯದಿ ವಾ) ಅವನು ವಿಭೀಷಣನಾಗಿದ್ದರೂ ಇರಲಿ! ಹಾಗಿಲ್ಲದೆ ಕೊನೆಗೆ ರಾವಣನು ತಾನಾಗಿ ಈ ವೇಷದಿಂದ ಬಂದಿದ್ದ ಪಕ್ಷದಲ್ಲಿ ಇನ್ನೂ ಉತ್ತಮವು, ಏಕೆಂದರೆ ವಿಭೀಷಣನನ್ನು ಸ್ವೀಕರಿಸಿದರೆ, ವಿಭೀಷಣನು "ಧರ್ಮಾತ್ಮಾ" ಎಂದು, ಧರ್ಮಾತ್ಮನನ್ನು ಸ್ವೀಕರಿಸುವುದರಿಂದ ನಮಗೆ ಅಷ್ಟಾಗಿ ಉತ್ಕರ್ಷವಿಲ್ಲವು. "ರಾವಣಸ್ಯ ನೃಶಂಸಸ್ಯ" ಎಂದು, ಆ ಘಾತುಕನನ್ನು ಸ್ವೀಕರಿಸಿದರೆ, ಈಗ ಇವನೊಡನೆ ಬಂದಿರುವ, ನಾಲ್ಕುಮಂದಿ ರಾಕ್ಷಸರೊಡನೆ ಸೇರಿ ಐದು ಮಂದಿಯನ್ನೇ ರಕ್ಷಿಸಿದಂತಾಗುವುದು. ಆ ರಾವಣನನ್ನು ಸ್ವೀಕರಿಸುವುದರಿಂದಲೋ, ನಾವು ಆ ಲಂಕೆಯನ್ನೇ ಅಲ್ಲಿನ ಸಮಸ್ತರಾಕ್ಷಸರೊಡನೆ ರಕ್ಷಿಸಿದಂತಾಗುವುದರಿಂದ ನಮಗೆ ದೊಡ್ಡ ಲಾಭವುಂಟೆಂದು ಭಾವವು.

ಅದರಲ್ಲಿ ಆಶ್ಚರ್ಯವೇನಿರುವುದು ? ರಾಮಾ ! ನಿರ್ಹೇತುಕ ವಾತ್ಸಲ್ಯವುಳ್ಳ ನಿನ್ನ ವಿಷಯವು ಹಾಗಿರಲಿ ! ಮೊದಲು ಈ ವಿಭೀಷಣನನ್ನು ಕೊಲ್ಲಬೇಕೆಂದು ಕೈಯೆತ್ತಿದ ನನ್ನ ಮನಸ್ಸಿಗೂ ಕೂಡ, ಈಗ ಈ ವಿಭೀಷಣನು ಶುದ್ಧಸ್ವಭಾವವುಳ್ಳವನೆಂದೇ ತೋರಿರುವುದು. ನನ್ನ ಮನಸ್ಸಾಕ್ಷ್ಯವೊಂದೇ ಅಲ್ಲ ! ಮೊದಲು ನೀನೂ ಈ ಹನುಮಂತನೂ, ಹೇಳಿ ತಿಳಿಸಿದ ಅನುಮಾನಗಳಿಂದಲೂ, ಅವನ ಮೃದು ಸ್ವಭಾವದಿಂದಲೂ, ಮತ್ತು ನಾನೂ ಕೊಲ್ಲಬೇಕೆಂದು ಹೇಳಿದಾಗಲೂ, ನೀನು ರಕ್ಷಿಸಬೇಕೆಂದು ಹೇಳಿದಾಗಲೂ ಒಂದೇ ಸ್ಥಿತಿಯಲ್ಲಿದ್ದ ಈತನ ಧೈರ್ಯದಿಂದಲೂ, ಇವನನ್ನು ಸರ್ವವಿಧದಿಂದಲೂ ಪರೀಕ್ಷಿಸಿದಂತಾಯಿತು. ಆದುದರಿಂದ ಇನ್ನುಮೇಲೆ ಇವನೂ ನಮಗೆ ಸಮಾನವಾಗಿ ನಿನ್ನೊಡನೆ ಒಂದಾಗಿ ಕಲೆತಿರಲಿ! ನಮ್ಮಲ್ಲಿಯೂ ಸ್ನೇಹವನ್ನು ಬೆಳೆಸಲಿ" ಎಂದನು. ಸುಗ್ರೀವನು ಹೇಳಿದ ಈ ಮಾತುಗಳನ್ನು ಕೇಳಿ ರಾಮನು ಆ ಸುಗ್ರೀವನನ್ನೇ ಕಳುಹಿಸಿ, ವಿಭೀಷಣನನ್ನು ಬರಮಾಡಿಕೊಂಡು ದೇವೇಂದ್ರನು ಗರುಡನೊಡನೆ ಸೇರಿದಂತೆ [1]ತಾನೇ ಮುಂದೆಹೋಗಿ ತಟ್ಟನೆ ಆ ವಿಭೀಷಣನೊಡನೆ ಸ್ನೇಹದಿಂದ ಒಂದಾಗಿ ಸೇರಿಕೊಂಡನು.

ಇಲ್ಲಿಗೆ ಹದಿನೆಂಟನೆಯ ಸರ್ಗವು.

ಶ್ರೀರಾಮನು ಸಮಸ್ತ ವಾನರರ ಮಧ್ಯದಲ್ಲಿ ವಿಭೀಷಣನಿಗೆ ಲಂಕಾರಾಜ್ಯದಲ್ಲಿ ಪಟ್ಟವನ್ನು ಕಟ್ಟಿದುದು. ಸಮುದ್ರಲಂಘನ ಸನ್ನಾಹವು.

ರಘುಕುಲೋತ್ತಮನಾದ ರಾಮನು ಹೀಗೆ ಅಭಯವನ್ನು ಕೊಟ್ಟೊಡನೆ, ಮಹಾಪ್ರಾಜ್ಞನಾದ ವಿಭೀಷಣನು, ತನ್ನ ಕೋರಿಕೆಯು ಕೈಗೂಡಿತೆಂಬ ಸಂತೋಷ

---

1. ಇಲ್ಲಿ ರಾಮನು ತಾನೇ ಹೋಗಿ ವಿಭೀಷಣನೊಡನೆ ತಟ್ಟನೆ ಸೇರಿಕೊಂಡನೆಂಬುದರಿಂದ, ಸುಗ್ರೀವನ ಮನಸ್ಸಿನಲ್ಲಿರುವ ಅನುಕೂಲ್ಯವು ಚಲಿಸಿಹೋದಪಕ್ಷದಲ್ಲಿ, ಕಾರ್ಯವು ಕೆಡುವುದೆಂದೆಣಿಸಿ ಆ ಸುಗ್ರೀವನೊಡನೆ ಸೇರಿಕೊಂಡನೆಂದು ಭಾವವು. ಇದರಿಂದ ಭಗವಂತನಿಗೆ ಆಶ್ರಿತರೊಡನೆ ಸಂಶ್ಲೇಷವನ್ನು ಹೊಂದಿ ಅವರನ್ನು ರಕ್ಷಿಸುವುದರಲ್ಲಿರುವ ತ್ವರಾತಿಶಯವು ಸೂಚಿತವಾಗುವುದು.

ದಿಂದುಬ್ಬಿದವನಾಗಿ [1]ತನ್ನಭಕ್ತರಾದ ನಾಲ್ಕುಮಂತ್ರಿಗಳೊಡನೆ ತಟ್ಟನೆ ಆಕಾಶ ದಿಂದಿಳಿದನು. ಅವನು ಅಂತರಿಕ್ಷದಿಂದಿಳಿಯುವಾಗ ಪ್ರಭುವಾದ ರಾಮನ ಬಳಿಗೆ ತನ್ನ ಕಾಲುಗಳನ್ನು ಮುಂದೆ ಚಾಚಿ ಇಳಿದು ಹೋಗುವುದು ಅನುಚಿತವೆಂದೆಣಿಸಿ, ಬಹಳ ವಿನಯದಿಂದ ತನ್ನ ಪೂರ್ವಕಾಯವನ್ನೇ ಕೆಳಕ್ಕೆ ತಗ್ಗಿಸಿ, ತಾನು ಇಳಿಯಬೇಕಾದ ಸ್ಥಳವನ್ನು ಕಣ್ಣಿಟ್ಟು ನೋಡುತ್ತ ಮೆಲ್ಲಗೆ ಕೆಳಕ್ಕಿಳಿದನು. [2]ಶರಣಾಗತಿ ಧರ್ಮದಲ್ಲಿ ಸ್ಥಿರಬುದ್ಧಿಯುಳ್ಳ ಆ ವಿಭೀಷಣನು, ಕೆಳಕ್ಕಿಳಿದೊಡನೆ, ತನ್ನ ಅನುಚರರಾದ ನಾಲ್ವರು ರಾಕ್ಷಸರೊಡನೆ ಶರಣಾರ್ಥಿಯಾಗಿ ರಾಮನ ಪಾದಗಳಮೇಲೆಯೂ ಬಿದ್ದನು. ಆಮೇಲೆ ಆತನು ರಾಮನನ್ನು ಕುರಿತು ಧರ್ಮಯುಕ್ತವಾಗಿಯೂ ಕಾಲೋಚಿತವಾಗಿಯೂ, ಸಂತೋಷಜನಕವಾಗಿಯೂ ಇರುವ ಮಾತಿನಿಂದ "ಸ್ವಾಮಿ! ನಾನು ರಾವಣನ ತಮ್ಮನು. ಆತನಿಂದ ತಿರಸ್ಕೃತನಾಗಿ ಇಲ್ಲಿಗೆ ಬಂದಿರುವೆನು. ನೀನು ಸಮಸ್ತಲೋಕಗಳಿಗೂ ರಕ್ಷಕನಾದುದರಿಂದ, ನಾನೂ ನಿನ್ನಲ್ಲಿಯೇ ಮರೆಹೊಕ್ಕಿರುವೆನು. [3]ಈಗ ನಾನು, ನನಗೆ ವಾಸಸ್ಥಾನವಾದ ಲಂಕೆಯನ್ನೂ,

---

1. ಇಲ್ಲಿ "ಭಕ್ತೈರನುಚರೈಸ್ಸಹ" ಎಂದು ಮೂಲವು. ಭಕ್ತರೆಂದರೆ ವಿಭೀಷಣನು ಮೊದಲು ಲಂಕೆಯನ್ನು ಬಿಟ್ಟು ಹೊರಟಾಗಲೂ, "ಉತ್ಪಪಾತ ಗದಾಪಾಣಿಶ್ಚತುರ್ಭಿಸ್ಸಹ ರಾಕ್ಷಸೈಃ" ಎಂದು, ಅವನೊಡನೆ ತಾವೂ ದೇಶಭ್ರಷ್ಟರಾಗಿ, "ವಧ್ಯತಾಮೇಷ ತೀವ್ರೇಣ ದಂಡೇನ ಸಚಿವೈಸ್ಸಹ" ಎಂದು ವಧೋದ್ದೇಶದಲ್ಲಿಯೂ ತಾವು ಭಾಗಿಗಳಾಗಿ, ಹಾಗೆಯೇ ಈಗ ಸ್ವೀಕಾರದಶೆಯಲ್ಲಿಯೂ ಭಾಗಿಗಳಾದುದರಿಂದ, ಸುಖದುಃಖಗಳಿಗೆ ಸಮಭಾಗಿಗಳಾದವರೆಂದು ಭಾವವು.

2. ಇಲ್ಲಿ ಧರ್ಮಾತ್ಮನೆಂದರೆ ಸರ್ವಾವಸ್ಥೆಗಳಲ್ಲಿಯೂ ಶರಣಾಗತಿ ಧರ್ಮದಿಂದ ಮನಸ್ಸು ಕದಲದೆ ಅದರಲ್ಲಿಯೇ ನೆಲೆನಿಂತವನೆಂದರ್ಥವು. ತಾನು ವಾನರರ ದೃಷ್ಟಿಗೆ ಬಿದ್ದುದು ಮೊದಲು, ಈ ಕಡೆಯವರು ತನ್ನನ್ನು ಕುರಿತು ಕ್ರಮವಾಗಿ "ವಧ್ಯತಾಮ್" "ಶಂಕ್ಯತಾಮ್" "ನ ತ್ಯಜೇಯಮ್" "ಆನಯೈನಮ್" "ಅಸ್ಮಾಭಿಸ್ತುಲ್ಯೋ ಭವಂತು" ಎಂದು ಹೇಳಿದ ಈ ಸರ್ವಾವಸ್ಥೆಗಳಲ್ಲಿಯೂ ವಿಕಾರವಿಲ್ಲದೆ ಒಂದೇ ದೃಢಾಧ್ಯವಸಾಯದಿಂದ ಏಕರೂಪವಾಗಿದ್ದವನೆಂದು ಭಾವವು.

3. ಇಲ್ಲಿ "ಪರಿತ್ಯಕ್ತಾ ಮಯಾ ಲಂಕಾ ಮಿತ್ರಾಣಿ ಚ ಧನಾನಿ ಚ । ಭವದ್ಗತಂ ಮೇ ರಾಜ್ಯಂ ಚ ಜೀವಿತಂ ಚ ಸುಖಾನಿ ಚ" ಎಂದು ಮೂಲವು. ಇದರಿಂದ ವಿಭೀಷಣನು ಸೋಪಾಧಿಕ ಸಂಬಂಧಗಳೆಲ್ಲವನ್ನೂ ನಿಶ್ಶೇಷವಾಗಿ ಬಿಟ್ಟುಬಂದುದಾಗಿ ಸೂಚಿತವು. ಇಲ್ಲಿ ಹೇಳಿರುವ ಲಂಕಾಮಿತ್ರಧನಾದಿಗಳೇ ಮುಮುಕ್ಷುವಿಗೆ ಶಾಸ್ತ್ರಸಿದ್ಧವಾಗಿ ತ್ಯಾಜ್ಯಗಳಾದ ಪಾಪಾಭ್ಯಾಸಗಳೆಲ್ಲಕ್ಕೂ ಉಪಲಕ್ಷಣಗಳು. ರಾಜ್ಯವೆಂಬುದು ಪರಿಗ್ರಹಗಳಿಗೆಲ್ಲಾ ಉಪಲಕ್ಷಣವು.

ನನ್ನ ಮಿತ್ರರನ್ನೂ, ನನ್ನ ಸಮಸ್ತಧನಗಳನ್ನೂ ಪರಿತ್ಯಜಿಸಿ ನೀನೇ ಪತಿಯೆಂದು ಬಂದಿರುವೆನು. ಇನ್ನು ನನ್ನರಾಜ್ಯವೂ, ನನ್ನಸುಖವೂ ನಿನ್ನಧೀನಗಳು" ಎಂದನು. ಹೀಗೆ ವಿಭೀಷಣನು ಹೇಳಿದ ಮಾತುಗಳನ್ನು ಕೇಳಿ, ರಾಮನೂ [1]ಉಪಚಾರವಾಕ್ಯ ಗಳಿಂದ ಆತನನ್ನು ಸಮಾಧಾನಪಡಿಸಿ, ಕಣ್ಣುಗಳಿಂದ ಕುಡಿದುಬಿಡುವಂತೆ ಆತನನ್ನು ಪ್ರೀತಿಪೂರ್ವಕವಾಗಿ ನೋಡಿ "ಎಲೆ ಮಿತ್ರನೆ! ಉಳಿದ ಸಂಗತಿಗಳೆಲ್ಲವೂ ಹಾಗಿರಲಿ! ಲಂಕೆಯೊಳಗಣ ರಾಕ್ಷಸರ ಬಲಾಬಲಗಳನ್ನು ಇದ್ದುದಿದ್ದಂತೆ ನನಗೆ ವಿವರವಾಗಿ ತಿಳಿಸು" ಎಂದನು. ಈ ಮಾತನ್ನು ಕೇಳಿದೊಡನೆ ವಿಭೀಷಣನು ರಾವಣನ ಬಲಸಮೃದ್ಧಿಗಳೆಲ್ಲವನ್ನೂ ವಿವರಿಸುವುದಕ್ಕೆ ತೊಡಗಿ "ಎಲೈ ರಾಜಪುತ್ರನೆ! ನನ್ನಣ್ಣ ನಾದ ರಾವಣನು ಬ್ರಹ್ಮನ ವರದ ಬಲದಿಂದ, ದೈತ್ಯಗಂಧರ್ವರಾಕ್ಷಸರೇ ಮೊದಲಾದ ದೇವಜಾತಿಗಳಿಗೂ, ಉಳಿದ ಸಮಸ್ತಪ್ರಾಣಿಗಳಿಗೂ ಅವಧ್ಯನಾಗಿರುವನು. ಆ ರಾವಣನಿಂದೀಚೆಗೆ ನನಗೆ ಕುಂಭಕರ್ಣನೆಂಬ ಜ್ಯೇಷ್ಠಸಹೋದರನು ಬೇರೊಬ್ಬನುಂಟು. ಅವನೂ ಬಹಳ ವೀರ್ಯವುಳ್ಳವನು! ಮತ್ತು ಆ ರಾವಣನಿಗೆ ಪ್ರಹಸ್ತನೆಂಬ ಸೇನಾ ಪತಿಯೊಬ್ಬನಿರುವನು. ಹಿಂದೆ ಕೈಲಾಸದಲ್ಲಿ ನಡೆದ ಯುದ್ಧದಲ್ಲಿ, ಆ ಪ್ರಹಸ್ತನು ಮಾಣಿಭದ್ರನೆಂಬ ಕುಬೇರನ ಸೇನಾಪತಿಯನ್ನೇ ಓಡಿಸಿರುವನು. ನೀನೂ ಅವನ

ಜೀವಿತವೆಂಬುದು ಧಾರಕ ಪೋಷಕ ಭೋಗ್ಯಗಳಿಗೆ ಉಪಲಕ್ಷಣವು. ಸುಖವೆಂಬುದು ಐಹಿಕಾಮುಷ್ಮಿಕ ಸುಖಗಳೆಲ್ಲಕ್ಕೂ ಉಪಲಕ್ಷಣವು. ಅವೆಲ್ಲವೂ ಭಗವತ್ಪಾದ ಸೇವೆಯೊಂದ ರಲ್ಲಿಯೇ ಅಂತರ್ಭೂತವೆಂದು ಭಾವವು "ಸಂಬಂಧೇಪಿ ನ ಸಂಬಂಧ ಆತ್ಮನಃ ಪ್ರಾಣಿ ಕಾಯಯೋಃ। ಪುತ್ರಮಿತ್ರಕಳತ್ರಾದಿ ಸಂಬಂಧಃ ಕೇನ ಹೇತುನಾ" ಆತ್ಮಕ್ಕೆ ಪ್ರಾಣಶರೀರ ಗಳೊಡನೆ ಸಂಬಂಧವಿದ್ದಂತೆ ತೋರಿದರೂ ಸಂಬಂಧವಿಲ್ಲದೆಯೇ ಹೀಗಿರುವಾಗ ಪುತ್ರ-ಮಿತ್ರಕಳತ್ರಾದಿಗಳೊಡನೆ ಸಂಬಂಧವೆಂದರೇನು? ಆದುದರಿಂದ ಸರ್ವವಿಧ ಬಂಧುವೂ ಸ್ವಾಮಿಯಹಾದ ಭಗವಂತನೊಬ್ಬನೇ ಹೊರತು ಬೇರೆಯಲ್ಲ. ಹಾಗೆಯೇ "ಪಿತೃಮಾತೃ-ಸುಹೃದ್ಭ್ರಾತೃದಾರಪುತ್ರಾದಯೋಪಿ ವಾ। ಏಕೈಕ ಫಲಲಾಭಾಯ ಸರ್ವೇ ಲಾಭಾಯ ಕೇಶವಃ" ತಾಯಿ, ತಂದೆ, ಮೊದಲಾದವರು ಒಂದೊಂದು ಲಾಭಕ್ಕಾದರೂ ಸರ್ವಲಾಭ ಕ್ಕಾಗಿ ಭಗವಂತನೆಂಬಂತೆ ನೀನೇ ಸರ್ವಪುರುಷಾರ್ಥವೆಂದು ವಿಭೀಷಣನು ಆತ್ಮಭರನ್ಯಾಸ ವನ್ನು ಮಾಡಿದುದಾಗಿ ಗ್ರಾಹ್ಯವು.

1. ಇಲ್ಲಿ "ವಚಸಾ ಸಾಂತ್ವಯಿತ್ವೈನಂ ಲೋಚನಾಭ್ಯಾಂ ಪಿಬನ್ನಿವ" ಎಂದು ಮೂಲವು. ಇದರಿಂದ ರಾಮನು ವಿಭೀಷಣನನ್ನು ಮೊದಲು ತನ್ನ ಮೃದುವಾಕ್ಯಗಳಿಂದ ಕರಗಿಸಿ (ನೀರಾಗಿ ಮಾಡಿ) ಕಣ್ಣುಗಳಿಂದ ಕುಡಿದುಬಿಡುವಂತೆ ಅವನಲ್ಲಿ ಅಸಾಧಾರಣ ವಾತ್ಸಲ್ಯವನ್ನು ತೋರಿಸಿ ಮಾತಾಡಿದುದಾಗಿ ಭಾವವು.

ವಿಷಯುವನ್ನು ಹನುಮಂತನ ಮೂಲಕವಾಗಿ ಮೊದಲೇ ಕೇಳಿರಬಹುದು. ರಾಮಾ! ಲಂಕಾಧಿಪತಿಯಾದ ಆ ರಾವಣನಿಗೆ ಇಂದ್ರಜಿತ್ತೆಂಬ ಪುತ್ರನೊಬ್ಬನಿರುವನೆಂದೂ ನೀನು ಕೇಳಿರಬಹುದಷ್ಟೆ? ಅವನೂ ವೀರ್ಯದಲ್ಲಿ ಬಹಳ ಪ್ರಸಿದ್ಧಿಗೊಂಡವನು. ಅವನು ಉಡುವಿನ ಚರ್ಮದಿಂದ ಮಾಡಲ್ಪಟ್ಟ ಕೈಚೀಲಗಳನ್ನೂ, ಅಭೇದ್ಯಕವಚಗಳನ್ನೂ ಧರಿಸಿ, ಧನುರ್ಧಾರಿಯಾಗಿ ಯುದ್ಧಕ್ಕೆ ಬಂದು ನಿಂತಾಗಲೂ ಶತ್ರುಗಳಿಗೆ ಅದೃಶ್ಯನಾಗಿಯೇ ಇರುವನು. ಆತನು ಯುದ್ಧಕಾಲಗಳಲ್ಲಿ ಸೇನಾವ್ಯೂಹಗಳನ್ನು ನಿರ್ಮಿಸಿ, ಅವುಗಳ ಮಧ್ಯದಲ್ಲಿಯೇ ಹೋಮಕಾರ್ಯದಿಂದ ಅಗ್ನಿಯನ್ನು ತೃಪ್ತಿಗೊಳಿಸಿ ಆ ಅಗ್ನಿಯ ವರಪ್ರಭಾವದಿಂದ ಶತ್ರುಗಳ ಕಣ್ಣಿಗೆ ಬೀಳದಂತೆಯೇ ಅವರನ್ನು ಕೊಲ್ಲುವನು ಇದಲ್ಲದೆ ಆ ರಾವಣನಿಗೆ ಮಹೋದರನೆಂದೂ ಮಹಾಪಾರ್ಶ್ವನೆಂದೂ ಅಕಂಪನನೆಂದೂ ಪ್ರಸಿದ್ಧರಾದ ಮೂವರು ಸೇನಾಪತಿಗಳುಂಟು! ಆ ಮೂವರೂ ಯುದ್ಧದಲ್ಲಿ ಲೋಕಪಾಲರಿಗೆ ಸಾಟಿಯಾಗಿರುವರು! ಆ ನಮ್ಮ ಲಂಕಾನಗರಿಯಲ್ಲಿ ಕಾಮರೂಪಿಗಳಾಗಿಯೂ, ರಕ್ತಮಾಂಸಾಹಾರಿಗಳಾಗಿಯೂ ಇರುವ ಇಂತಹ ಹತ್ತು ಸಹಸ್ರಕೋಟಿ ರಾಕ್ಷಸಯೋಧರು ರಾವಣನಿಗೆ ಬೆಂಬಲವಾಗಿರುವರು. ರಾವಣನು ಲಂಕಾವಾಸಿಗಳಾದ ಆ ರಾಕ್ಷಸರೆಲ್ಲರೊಡಗೂಡಿ, ಹಿಂದೆ ಸಮಸ್ತ ಲೋಕಪಾಲಕರೊಡನೆಯೂ ಯುದ್ಧವನ್ನಾರಂಭಿಸಿದನು. ಮಹಾಬಲವುಳ್ಳ ಆ ರಾವಣನಿಂದ ಅವರೆಲ್ಲರೂ ತಮ್ಮ ದೇವಸೇನೆಯೊಡನೆ ಪರಾಜಿತರಾಗಿ ಓಡಿಹೋದರು" ಎಂದನು. ದೃಢಪರಾಕ್ರಮಿಯಾದ ರಾಮನು, ವಿಭೀಷಣನು ಹೇಳಿದ ಈ ಮಾತನ್ನು ಕೇಳಿ ಅವೆಲ್ಲವನ್ನೂ ತನ್ನಲ್ಲಿಯೂ ಪರ್ಯಾಲೋಚಿಸಿ ತಿರುಗಿ ವಿಭೀಷಣನನ್ನು ಕುರಿತು "ವಿಭೀಷಣಾ! ನೀನು ಇದುವರೆಗೆ ರಾವಣನು ಹಿಂದೆ ಯಾವಯಾವ ಪರಾಕ್ರಮ ಕಾರ್ಯಗಳನ್ನು ನಡೆಸಿದನೆಂದು ಹೇಳಿದೆಯೋ ಅವೊಂದನ್ನೂ ನಾನು ಸ್ವಲ್ಪವೂ ಲಕ್ಷ್ಯದಲ್ಲಿಡುವವನಲ್ಲ (ಅದೊಂದು ಶೌರ್ಯವೆಂದೇ ನನಗೆ ತೋರಲಿಲ್ಲ). ನಾನು ರಾವಣನನ್ನು ಅವನ ಬಂಧುಗಳೊಡನೆಯೂ, ಪ್ರಹಸ್ತಾದಿ ಮಂತ್ರಿಗಳೊಡನೆಯೂ ಕೊಂದು ಲಂಕಾರಾಜ್ಯಕ್ಕೆ ನಿನ್ನನ್ನೇ ರಾಜನನ್ನಾಗಿ ಮಾಡುವೆನು ನೋಡು! ಇದು ಸತ್ಯವೆಂದು ತಿಳಿ! ಆ ರಾವಣನು ಭೂಮಿಯನ್ನು ಹೊಕ್ಕು ರಸಾತಲಕ್ಕೆ ಹೋದರೂ, ಪಾತಾಳದಲ್ಲಿ ಪ್ರವೇಶಿಸಿದರೂ ಕೊನೆಗೆ ತನಗೆ ವರವನ್ನು ಕೊಟ್ಟ ಬ್ರಹ್ಮದೇವನಲ್ಲಿಯೇ ಮರೆಹೊಕ್ಕರೂ ನನ್ನ ಕೈಯಿಂದ ತಪ್ಪಿಸಿಕೊಂಡು ಬದುಕಿ ಹೋಗಲಾರನು. ನಾನು ಯುದ್ಧದಲ್ಲಿ ರಾವಣನನ್ನು ಅವನ ಮಕ್ಕಳೊಡನೆಯೂ, ಅವನ ಬಂಧುವರ್ಗಗಳೊಡ

ನೆಯೂ, ಅವನ ಸೈನ್ಯಗಳೊಡನೆಯೂ ಕೊಂದಲ್ಲದೆ ಅಯೋಧ್ಯೆಗೆ ಪ್ರವೇಶಿಸುವವನಲ್ಲ ! ಇದು ನಿಜವು! ಬೇಕಾದರೆ ಈ ವಿಷಯದಲ್ಲಿ ನನಗೆ ಪ್ರಾಣಭೂತರಾದ ನನ್ನ ಮೂವರು ತಮ್ಮಂದಿರ ಮೇಲೆಯೂ ಆಣೆಯಿಟ್ಟು ಹೇಳುವೆನು" ಎಂದನು. ಎಂತಹ ಅಸಾಧ್ಯಕಾರ್ಯವನ್ನಾದರೂ ಅನಾಯಾಸವಾಗಿ ಸಾಧಿಸಬಲ್ಲ ಮಹಾತ್ಮನಾದ ಆ ಶ್ರೀರಾಮನು, ಹೀಗೆ ಪ್ರತಿಜ್ಞಾಪೂರ್ವಕವಾಗಿ ಹೇಳಿದ ಮಾತನ್ನು ಕೇಳಿ, ಶರಣಾಗತಧ್ವಸಿಷ್ಟನಾದ ವಿಭೀಷಣನು ಆತನಿಗೆ ತಲೆಬಗ್ಗಿ ನಮಸ್ಕರಿಸಿ "ಎಲೈ ಮಹಾತ್ಮನೆ ! ಈ ನಿನ್ನ ರಾಕ್ಷಸವಧ ಕಾರ್ಯದಲ್ಲಿ ನಾನೂ [1]ಸಹಾಯಕನಾಗಿರುವೆನು. ನನ್ನ ಶಕ್ತ್ಯನುಸಾರವಾಗಿ ನಾನೂ ಲಂಕೆಯನ್ನು ಭಂಗಿಸುವೆನು. ನಾನೂ ನನ್ನಿಂದಾದ ಮಟ್ಟಿಗೆ ರಾಕ್ಷಸಸೈನ್ಯವನ್ನು ಪ್ರವೇಶಿಸಿ ಯುದ್ಧಮಾಡುವೆನು" ಎಂದನು. ಹೀಗೆ ಹೇಳುತ್ತಿರುವಾಗಲೇ ರಾಮನು ಪರಮಸಂತೋಷದಿಂದ ಆ ವಿಭೀಷಣನನ್ನು ಆಲಿಂಗಿಸಿಕೊಂಡು, ಲಕ್ಷ್ಮಣನನ್ನು ಕುರಿತು "ವತ್ಸ ಲಕ್ಷ್ಮಣಾ ! ಈಗಲೇ ನೀನು ಹೋಗಿ, ಸಮುದ್ರದಿಂದ ಪುಣ್ಯತೀರ್ಥವನ್ನು ತಂದು ಅದರಿಂದ ಪ್ರಾಜ್ಞನಾದ ಈತನಿಗೆ ಈಗಲೇ ಲಂಕಾಧಿಪತ್ಯಕ್ಕಾಗಿ ಅಭಿಷೇಕವನ್ನೂ ನಡೆಸಿಬಿಡು ! ಈತನು ಅದನ್ನು ಕೋರದಿದ್ದರೂ ನನಗೆ ಹಾಗೆ ನಡೆಸಬೇಕೆಂದು ಇವನಲ್ಲಿ ಅನುಗ್ರಹವು ಹುಟ್ಟಿರುವುದು. ನನ್ನ ಅನುಗ್ರಹಕ್ಕೆ ತಕ್ಕ ಫಲವನ್ನು ತೋರಿಸಿ ಬಹುಮಾನಿಸತಕ್ಕ ಭಾರವು ನಿನ್ನದಲ್ಲವೆ?" ಎಂದನು. ರಾಮನು ಹೀಗೆಂದು ಹೇಳಿದಕ್ಷಣವೇ ಲಕ್ಷ್ಮಣನು [2] ರಾಜಾಜ್ಞೆಯಂತೆ ತೀರ್ಥವನ್ನು ತಂದು ಅಲ್ಲಿದ್ದ ಸಮಸ್ತ ವಾನರ ವೀರರ ನಡುವೆ, ವಿಭೀಷಣನನ್ನು ರಾಕ್ಷಸರಾಜ್ಯಾಧಿಪತ್ಯಕ್ಕಾಗಿ ಅಭಿಷೇಕಿಸಿದನು. ಹೀಗೆ ರಾಮನು ವಿಭೀಷಣನಲ್ಲಿ ಅಷ್ಟು ಶೀಘ್ರವಾಗಿ ಪರಮಾನುಗ್ರಹವನ್ನು ತೋರಿಸಿದುದನ್ನು ನೋಡಿ ಅಲ್ಲಿದ್ದ ಸಮಸ್ತ ವಾನರರೂ ಸಂತೋಷದಿಂದ ಕೂಗುತ್ತ "ಭಲೆ ಭಲೆ ! ಎಂದು ಮಹಾತ್ಮನಾದ ರಾಮನನ್ನು ಕೊಂಡಾಡಿದರು. ಆಮೇಲೆ ಮತ್ತೊಮ್ಮೆ ಅವರೆಲ್ಲರೂ

---

1. ರಾಮನಿಗೆ ಬೇರೆ ಸಹಾಯಾಂತರವು ಅವಶ್ಯವಿಲ್ಲದಿದ್ದರೂ ಇಲ್ಲಿ ವಿಭೀಷಣನು ರಾಕ್ಷಸವಧದಲ್ಲಿ ತಾನು ರಾಮನಿಗೆ ಸಹಾಯಮಾಡುವುದಾಗಿ ಹೇಳಿದುದರ ಭಾವವೇನೆಂದರೆ, ತನ್ನ ಸ್ವರೂಪಸಿದ್ಧಿಗಾಗಿ ಯುದ್ಧದಲ್ಲಿ ಧನುರ್ಬಾಣಗಳನ್ನೆತ್ತಿ ಕೊಡುವುದೇ ಮೊದಲಾದ ಸಹಾಯಗಳನ್ನು ಮಾಡುವುದಾಗಿ ಗ್ರಾಹ್ಯವು.

2. "ಮಧ್ಯೇ ವಾನರಮುಖ್ಯಾನಾಮ್" ಎಂದು ದೊಡ್ಡ ವಾನರಸಭೆಯಲ್ಲಿ ಹೇಳಿದುದರಿಂದಲೂ, "ರಾಜಶಾಸನಾತ್" ಎಂದು ರಾಜಾಜ್ಞೆಯಾದುದರಿಂದಲೂ, ಬಿಡಲಾರದೆ ವಿಭೀಷಣನು ರಾಜ್ಯಾಭಿಷೇಕಕ್ಕೆ ಅನುಮತಿಸಿದುದಾಗಿ ಗ್ರಾಹ್ಯವು.

ಸೇರಿ ಮುಂದಿನ ಕೆಲಸವನ್ನು ಕುರಿತು ಯೋಚಿಸುವಾಗ, ಸುಗ್ರೀವ ಹನುಮಂತರಿಬ್ಬರೂ ವಿಭೀಷಣನನ್ನು ಕುರಿತು "ಎಲೆ ರಾಕ್ಷಸೇಂದ್ರನೆ! ವರುಣದೇವನಿಗೆ ನಿತ್ಯನಿವಾಸವಾದ ಈ ಮಹಾಸಮುದ್ರವಾದರೋ, ಅಕ್ಷೋಭ್ಯವಾಗಿ ಬೇರೊಬ್ಬರಿಗೆ ದಾಟಲಸಾಧ್ಯವಾಗಿರುವುದು. ನಾವೆಲ್ಲರೂ ಈ ಸಮಸ್ತ ವಾನರವೀರರೊಡನೆ ಇದನ್ನು ದಾಟಿ ಹೋಗಬೇಕಾದರೆ ಉಪಾಯವೇನು ? ನದನದೀಪತಿಯಾದ ಈ ಸಮುದ್ರವನ್ನು ದಾಟುವುದಕ್ಕೆ ನಮ್ಮಲ್ಲಿ ಯಾರಿಗೂ ಯಾವುದೊಂದುಪಾಯವೂ ತೋರಲಿಲ್ಲ. ಆದುರಿಂದ ನೀನೇ ಈಗ ನಮಗೆ ತಕ್ಕ ದಾರಿಯನ್ನು ತಿಳಿಸಬೇಕು" ಎಂದನು. ಇದನ್ನು ಕೇಳಿ ಧರ್ಮಜನಾದ ವಿಭೀಷಣನು ಅವರನ್ನು ಕುರಿತು "ಎಲೆ ವಾನರೋತ್ತಮರೆ! ಇದಕ್ಕೆ ಬೇರೆ ಉಪಾಯವೇನಿರುವುದು? ರಘುವಂಶಜನಾದ ಈ ಶ್ರೀರಾಮನೇ ಸಮುದ್ರರಾಜನಲ್ಲಿ ಮರೆಹೊಕ್ಕು ಪ್ರಾರ್ಥಿಸಬೇಕು. ಈ ಸಮುದ್ರದ ಉತ್ಪತ್ತಿಗೂ, ಇವನಿಗೆ ಇಷ್ಟೊಂದು ಮಹಾ ಮಹಿಮೆಯುಂಟಾಗುವುದಕ್ಕೂ ಸಗರ ಚಕ್ರವರ್ತಿಯೇ ಕಾರಣಭೂತನು. ಆ ಸಗರನು ಈ ನಮ್ಮ ರಾಮನಿಗೆ ಕೂಟಸ್ಥನು. ಆದುದರಿಂದ ಈ ಸಮುದ್ರನು ಈಗಲೂ ಆ ಉಪಕಾರವನ್ನು ಮನಸ್ಸಿನಲ್ಲಿಟ್ಟಿರುವನು. ರಾಮನು ಅವನಲ್ಲಿ ಮರೆಹೊಕ್ಕು ಪ್ರಾರ್ಥಿಸಬೇಕಾದುದೊಂದೇ ತಡ! ಇದು ರಾಮನಿಗೆ ಅವಶ್ಯಕಕಾರ್ಯವೆಂದು ತಿಳಿದರೆ, ಆತನುಅದನ್ನೇ ನೆವವಾಗಿ ಮಾಡಿಕೊಂಡು ಪ್ರತ್ಯುಪಕಾರ ಮಾಡುವುದರಲ್ಲಿ ಸಂದೇಹವಿಲ್ಲ" ಎಂದನು. ರಾಕ್ಷಸನಾದುದರಿಂದ ಸಮುದ್ರ ಸಂಚಾರದಲ್ಲಿ ಬಳಕೆಯುಳ್ಳವನಾಗಿಯೂ, ಪಂಡಿತನಾದುದರಿಂದ ಕಾಲೋಚಿತಬುದ್ಧಿಯುಳ್ಳವನಾಗಿಯೂ ಇರುವ ವಿಭೀಷಣನು ಹೇಳಿದ ಈ ಮಾತನ್ನು ಕೇಳಿದೊಡನೆ ಸುಗ್ರೀವನು, ರಾಮಲಕ್ಷ್ಮಣರಿದ್ದಕಡೆಗೆ ಬಂದು, ವಿಭೀಷಣನು ಹೇಳಿದ ಶುಭವಾಕ್ಯವನ್ನು ತಿಳಿಸಿದನು. ರಾಮನು ಸಹಜವಾಗಿಯೇ ಧರ್ಮಶೀಲನಾದುದರಿಂದ, ಆತನಿಗೂ, ಧರ್ಮಹೇತುವಾದ ಆ ಉಪಾಸನವೇ ಕಾಲೋಚಿತವೆಂದು ಬುದ್ಧಿಗೆ ತೋರಿತು. ಮಹಾ ತೇಜಸ್ವಿಯಾದ ರಾಮನು ತನಗೆ ತೋರಿದ ಕಾರ್ಯವನ್ನು ತನ್ನಿಷ್ಟದಂತೆ ನಡೆಸುವುದಕ್ಕೆ ಸಮರ್ಥನಾಗಿದ್ದರೂ, ಲೋಕನೀತಿಯನ್ನನುಸರಿಸಿ ಲಕ್ಷ್ಮಣ ಸುಗ್ರೀವರಲ್ಲಿ ಗೌರವವನ್ನು ತೋರಿಸುವುದಕ್ಕಾಗಿ, ಅವರಿಬ್ಬರನ್ನೂ ನೋಡಿ ಮಂದಹಾಸಪೂರ್ವಕವಾಗಿ "ವತ್ಸ ಲಕ್ಷ್ಮಣಾ! ವಿಭೀಷಣನು ಹೇಳಿದ ಆಲೋಚನೆಯೇ ನನಗೂ ಬಹಳ ಸಮ್ಮತವಾಗಿರುವುದು. ಆದರೆ ಈ ವಿಷಯದಲ್ಲಿ ನಿಮ್ಮಿಬ್ಬರ ಅಭಿಪ್ರಾಯವನ್ನೂ ನಾನು ಕೇಳಿ ತಿಳಿಯಬೇಕಾಗಿರುವುದು. ಈ ಸುಗ್ರೀವನು

ಕಾರ್ಯಾಕಾರ್ಯಗಳನ್ನು ಚೆನ್ನಾಗಿ ಬಲ್ಲವನು. ನೀನೂ ಮಂತ್ರಾಲೋಚನೆಯಲ್ಲಿ ಸಮರ್ಥನು. ಆದುದರಿಂದ ನೀವಿಬ್ಬರೂ ಈ ವಿಷಯವನ್ನು ಚೆನ್ನಾಗಿ ಪರ್ಯಾಲೋಚಿಸಿ ನಿಮಗೆ ಯಾವುದಿಷ್ಟವೆಂಬುದನ್ನು ನಿರ್ಧರಿಸಿ ತಿಳಿಸಬೇಕು" ಎಂದನು. ಈ ಮಾತನ್ನು ಕೇಳಿ ಲಕ್ಷ್ಮಣಸುಗ್ರೀವರಿಬ್ಬರೂ ರಾಮನನ್ನು ಕುರಿತು ಉಪಚಾರಪೂರ್ವಕವಾಗಿ, 'ಎಲೆ ಪುರುಷೋತ್ತಮನೆ! ನಾವು ಸಮುದ್ರವನ್ನು ದಾಟುವುದಕ್ಕೆ ದಾರಿತೋರದೆ ಚಿಂತಿಸುತ್ತಿರುವಕಾಲದಲ್ಲಿ, ಈ ವಿಭೀಷಣನು ಇಷ್ಟು ಸುಲಭೋಪಾಯವನ್ನು ನಮಗೆ ಹೇಳಿರುವಾಗ, ನಾವು ಒಪ್ಪಲಾರೆವೆ? ಭಯಂಕರವಾದ ಈ ಮಹಾಸಾಗರ ದಲ್ಲಿ ಸೇತುವನ್ನು ಕಟ್ಟದಹೊರತು, ಇಂದ್ರನೊಡಗೂಡಿದ ದೇವಾಸುರರಿಗಾದರೂ ಲಂಕೆಯನ್ನು ಸಾಧಿಸುವುದು ಶಕ್ಯವಲ್ಲ. ಆದುದರಿಂದ ಮಂತ್ರಾಲೋಚನೆಯಲ್ಲಿ ಸಮರ್ಥನಾದ ಈ ವಿಭೀಷಣನು ಹೇಳಿದುದು ಯಥಾರ್ಥವು. ಅವನ ಮಾತಿನಂತೆಯೇ ನಡೆಸಬೇಕು, ಇನ್ನು ಕಾಲವನ್ನು ಕಳೆದುದು ಸಾಕು! ನಾವು ನಮ್ಮ ಸೇನೆಯೊಡನೆ ರಾವಣಪಾಲಿತವಾದ ಲಂಕೆಗೆ ಹೋಗಿ ಸೇರುವಂತೆ ಈ ಸಮುದ್ರವನ್ನು ಪ್ರಾರ್ಥಿಸು" ಎಂದರು. ಈ ಮಾತನ್ನು ಕೇಳಿ ರಾಮನು ಆಗಲೇ ಸಮುದ್ರತೀರದಲ್ಲಿ ದರ್ಭಾಸ್ತರಣ ವನ್ನು ಹಾಸಿ, ವೇದಿಕೆಯಲ್ಲಿರುವ ಅಗ್ನಿಯಂತೆ ಅದರಮೇಲೆ ಶಯನಿಸಿದನು.

ಇಲ್ಲಿಗೆ ಹತ್ತೊಂಬತ್ತನೆಯ ಸರ್ಗವು.

ರಾಮನು ಸೇನಾಸಮೇತನಾಗಿ ಸಮುದ್ರತೀರಕ್ಕೆ ಬಂದಿರುವುದನ್ನು ರಾವಣನು ಶಾರ್ದೂಲನೆಂಬ ರಾಕ್ಷಸನಿಂದ ಕೇಳಿ, ಸುಗ್ರೀವನನ್ನು ರಾಮನಿಂದ ಬೇರ್ಪಡಿಸುವುದಕ್ಕಾಗಿ ಶುಕನನ್ನು ಕಳುಹಿಸಿದಾಗ ವಾನರರು ಅವನನ್ನು ಕೊಲ್ಲಹೋಗಲು, ರಾಮನು ಬೇಡವೆಂದು ಅವರನ್ನು ತಡೆದುದು.

ಇಷ್ಟರಲ್ಲಿ ಶಾರ್ದೂಲನೆಂಬ ರಾಕ್ಷಸನೊಬ್ಬನು ಅಕಸ್ಮಾತ್ತಾಗಿ ಸಮುದ್ರ ತೀರಕ್ಕೆ ಬಂದು, ಅಲ್ಲಿ ಸುಗ್ರೀವನಿಂದ ರಕ್ಷಿತವಾದ ದೊಡ್ಡ ವಾನರಸೈನ್ಯವನ್ನು ನೋಡಿಬಿಟ್ಟನು. ಈ ರಾಕ್ಷಸನು ದುರಾತ್ಮನಾದ ಆ ರಾವಣನಿಗೆ ಚಾರನಾಗಿ ಸುತ್ತು ತಿದ್ದವನಾದುದರಿಂದ, ಅವನು ಸಮುದ್ರತೀರದಲ್ಲಿದ್ದ ಆ ವಾನರಸೈನ್ಯವನ್ನು ಬಹಳ ಎಚ್ಚರಿಕೆಯಿಂದ ಸುತ್ತಲೂ ನೋಡಿ ಬಂದು ವೇಗದಿಂದ ಹಿಂತಿರುಗಿ ಲಂಕೆಗೆ ಹೋಗಿ, ರಾವಣನನ್ನು ಕುರಿತು ಹೇಳುವನು. "ಎಲೆ ಮಹಾರಾಜನೇ! ಅದೋ! ಸಮುದ್ರದ

ಆಚೆಯ ದಡದಲ್ಲಿ ಅಷ್ಟಿಷ್ಟೆಂದು ನಿರ್ಣಯಿಸುವುದಕ್ಕಾಗದೆ ಎರಡನೆಯ ಸಮುದ್ರವೋ ಎಂಬಂತೆ ಅಗಾಧವಾದ ವಾನರಭಲ್ಲೂಕಸೈನ್ಯವು ಅಪಾರವಾಗಿ ಬಂದು ಸೇರಿರುವುದು. ನಮ್ಮ ಲಂಕೆಯನ್ನು ಮುತ್ತುವುದಕ್ಕೂ ಸಿದ್ಧವಾಗಿರುವುದು. ದಶರಥಪುತ್ರರಾದ ರಾಮಲಕ್ಷ್ಮಣರೆಂಬ ಅಣ್ಣತಮ್ಮಂದಿರಿಬ್ಬರೂ ಉತ್ತಮಾಯುಧಗಳನ್ನು ಧರಿಸಿ ನೆಟ್ಟಗೆ ಸೀತೆಯಿರುವ ಸ್ಥಳಕ್ಕೆ ಬರುವುದರಲ್ಲಿರುವರು. ಮಹಾತೇಜಸ್ವಿಗಳಾದ ಅವರಿಬ್ಬರೂ ಸಮುದ್ರತೀರದಲ್ಲಿಯೇ ಆ ಸೈನ್ಯವನ್ನಿಳಿಸಿರುವರು. ಯಾವಕಡೆಗೆ ತಿರುಗಿ ನೋಡಿದರೂ ಹತ್ತು ಯೋಜನಗಳ ದೂರದವರೆಗೆ ಆ ದೊಡ್ಡ ವಾನರಸೈನ್ಯವೇ ವಿಶಾಲವಾಗಿ ವ್ಯಾಪಿಸಿರುವುದು. ಎಲೆ ರಾಜೇಂದ್ರನೆ ! ಈಗ ನಾನು ಸಾಮಾನ್ಯವಾಗಿ ನೋಡಿಬಂದಿರುವೆನು ! ಇನ್ನೂ ವಿವರವಾಗಿ ಅಲ್ಲಿನ ನಿಜಸ್ಥಿತಿಯನ್ನು ತಿಳಿಯ ಬೇಕಾದರೆ, ಶೀಘ್ರದಲ್ಲಿಯೇ ನೀನು ಬೇರೆ ಯಾರನ್ನಾದರೂ ಕಳುಹಿಸಿ, ಅವರಿಂದ ತಿಳಿದುಕೊಳ್ಳಬೇಕು. ಆದುದರಿಂದ ಈಗಲೇ ಕೆಲವು ದೂತರಿಗೆ ಆಜ್ಞೆಮಾಡಿ ಕಳುಹಿಸು. ಅವರು ಇದ್ದ ಸ್ಥಿತಿಯನ್ನು ಚೆನ್ನಾಗಿ ತಿಳಿದು ಬರಲಿ ! ಆ ವಾನರಸೈನ್ಯವೇನೋ ಬಹಳ ದೊಡ್ಡದಾಗಿರುವುದು ಈಗಲೇ ಈವಿಷಯದಲ್ಲಿ ದಾನವನ್ನೋ ಸಾಮವನ್ನೋ ಭೇದವನ್ನೋ ಪ್ರಯೋಗಿಸಿ ನೋಡುವುದುಮೇಲು! ದಂಡೋಪಾಯಕ್ಕೆ ಅವಕಾಶವೇ ಇಲ್ಲ" ಎಂದನು. ಶಾರ್ದೂಲನ ಮಾತನ್ನು ಕೇಳಿದೊಡನೆ ರಾಕ್ಷಸೇಶ್ವರನಾದ ರಾವಣನು ಬೆಜ್ಜರಗೊಂಡು, ತನ್ನಲ್ಲಿ ತಾನು ಮುಂದೆ ಮಾಡಬೇಕಾದ ಕಾರ್ಯವೇ ನೆಂದು ನಿರ್ಧರಿಸಿಕೊಂಡು, ತನ್ನ ಮುಂದಿದ್ದ ಶುಕನೆಂಬ ರಾಕ್ಷಸನನ್ನು ಕುರಿತು "ಎಲೆ ಶುಕಾ ! ಈಗಲೇ ನೀನು ಇಲ್ಲಿಂದ ಹೊರಟು, ವಾನರರಾಜನಾದ ಸುಗ್ರೀವನನ್ನು ನೋಡಿ ನನ್ನ ಮಾತನ್ನು ಅವನಿಗೆ ಹೇಳು ! ಅಲ್ಲಿ ನೀನು ಧೈರ್ಯವನ್ನು ಮಾತ್ರ ಬಿಡದೆ, ಮೃದುವಾದ ಮಾತಿನಿಂದಲೇ ನಾನು ಹೇಳುವ ಈ ಮಾತುಗಳನ್ನು ಹೀಗೆಯೇ ಹೇಳಬೇಕು. 'ಎಲೈ ಕಪಿಸಾರ್ವಭೌಮನೆ ! ನನ್ನಂತೆ ನೀನೂ ಮಹಾರಾಜ ಕುಲದಲ್ಲಿ ಹುಟ್ಟಿ, ರಾಜಪದವಿಯಲ್ಲಿರುವವನು. ಆದುದರಿಂದ ನಿಷ್ಕಾರಣವಾಗಿ ನಮ್ಮೊಡನೆ ವೈರವನ್ನು ಬೆಳಸಬಾರದು. ಇದರಮೇಲೆ ನೀನು ಮಹಾಬಲಾಢ್ಯನಾದುದ ರಿಂದ, ಅಲ್ಪಬಲವುಳ್ಳ ಆ ರಾಮನೊಡನೆ ನಿನಗೆ ಸ್ನೇಹವೂ ಯೋಗ್ಯವಲ್ಲ. ಇಷ್ಟೇ ಅಲ್ಲದೆ, ನೀನು ಬ್ರಹ್ಮಪುತ್ರನಾದ ಋಕ್ಷರಜಸ್ಸಿಗೆ ಮಗನಾದುದರಿಂದ, ನಮ್ಮಿಬ್ಬರಿಗೆ ಪರಸ್ಪರಬಾಂಧವ್ಯವೂ ಇರುವುದು. ಇದಿಷ್ಟೂ ಹಾಗಿರಲಿ! ರಾಮನನ್ನಾಶ್ರಯಿಸುವುದ ರಿಂದ ನಿನಗೆ ಯಾವ ಲಾಭವಾಗಲಿ ಅವನನ್ನು ಬಿಡುವುದರಿಂದ ನಷ್ಟವಾಗಲಿ ಇಲ್ಲ.

ನಮ್ಮೊಡನೆ ನಿನಗೆ ಈ ವ್ಯರ್ಥವಾದ ವೈರವು ಯುಕ್ತವಲ್ಲ. ನನಗೂ ನಿನ್ನಣ್ಣನಾದ ವಾಲಿಗೂ ಎಷ್ಟುಸ್ನೇಹವೆಂಬುದನ್ನು ನೀನು ಕಾಣೆಯಾ ? ಆ ಸಂಬಂಧದಿಂದ ನಾನೂ ನಿನ್ನನ್ನು ಒಡಹುಟ್ಟಿದವನೆಂದೇ ಭಾವಿಸಿರುವೆನು. ಆದುದರಿಂದ ಎಲೈ ವಾನರೇಶ್ವರನೆ! ಈಗಲೂ ನೀನು ರಾಮನನ್ನು ಬಿಟ್ಟು ನನ್ನೊಡನೆ ಸ್ನೇಹವನ್ನು ಬೆಳೆಸು ! ನಾನು ಆ ರಾಮನ ಭಾರ್ಯೆಯನ್ನು ಕದ್ದು ತಂದಮಾತ್ರಕ್ಕೆ ಅದರಿಂದ ನಿನಗೇನು ? ನಿನ್ನ ಪಾಡಿಗೆ ನೀನು ಕಿಷ್ಕಿಂಧೆಗೆ ಹೋಗಿ ನಿನ್ನ ರಾಜ್ಯದಲ್ಲಿ ಸುಖದಿಂದಿರು ! ಆದರೆ ಆರಂಭಿಸಿದ ಕಾರ್ಯವನ್ನು ಹೇಗೆ ಬಿಡುವುದೆಂದು ಕೇಳುವೆಯಾ ? ನೀನು ಈಗ ಉದ್ದೇಶಿಸಿ ಬಂದಿರುವ ಕಾರ್ಯವನ್ನು ಪೂರಯಿಸಬೇಕೆಂದರೆ ನಿನ್ನಿಂದ ಸಾಧ್ಯವೆ ? ಎಂದಿಗೂ ಸಾಧ್ಯವಲ್ಲ. ಮನುಷ್ಯರಿಗಾಗಲಿ ಕಪಿಗಳಿಗಾಗಲಿ ಎಂದಿಗೂ ಈ ಲಂಕೆಯನ್ನು ಪ್ರವೇಶಿಸುವುದು ಶಕ್ಯವಲ್ಲ. ದೇವಗಂಧರ್ವಾದಿಗಳಾದರೂ ಇದನ್ನು ಪ್ರವೇಶಿಸಲಾರರು. ಇನ್ನು ನಿಮ್ಮಂತಹ ನರವಾನರರ ಸಂಗತಿಗಳನ್ನು ಹೇಳಬೇಕಾದುದೇನು ?' ಎಂದು ನಾನು ಹೇಳಿದುದಾಗಿ ಸುಗ್ರೀವನಿಗೆ ಹೇಳು" ಎಂದನು ಹೀಗೆ ರಾಕ್ಷಸೇಂದ್ರನಾದ ರಾವಣನು ಆಜ್ಞೆ ಮಾಡಿದೊಡನೆ, ಶುಕನು ಪಕ್ಷಿರೂಪವನ್ನು ಧರಿಸಿ, ಆಗಲೇ ಆಕಾಶಕ್ಕೆ ಹಾರಿ ಸುಗ್ರೀವನಿದ್ದ ಸ್ಥಳಕ್ಕೆ ಹೊರಟನು. ಹೀಗೆ ಶುಕನು ಸಮುದ್ರದ ಮೇಲೆ ಅಂತರಿಕ್ಷಮಾರ್ಗದಿಂದ ಬಹುದೂರದವರೆಗೆ ಹಾರಿಬಂದು, ಸುಗ್ರೀವನನ್ನು ಕುರಿತು ರಾವಣನು ತನ್ನೊಡನೆ ಹೇಳಿಕಳುಹಿಸಿದ ಮಾತುಗಳಲ್ಲಿ ಒಂದನ್ನೂ ಬಿಡದೆ ಕ್ರಮವಾಗಿ ಹೇಳಿದನು. ಹೀಗೆ ಶುಕನು ರಾವಣನ ಸಂದೇಶಗಳನ್ನು ತಿಳಿಸುತ್ತಿರುವಷ್ಟರಲ್ಲಿಯೇ ಅಲ್ಲಿದ್ದ ವಾನರರೆಲ್ಲರೂ ಕೋಪಗೊಂಡು ತಟ್ಟನೆ ಆಕಾಶಕ್ಕೆ ಹಾರಿ ಅವನನ್ನು ಮುಷ್ಟಿಗಳಿಂದ ಹೊಡೆದು, ರೆಕ್ಕೆಗಳನ್ನು ದಿರಿಸಬೇಕೆಂಬ ಉದ್ದೇಶದಿಂದ ಸುತ್ತಲೂ ಮುತ್ತಿದರು. ವಾನರರೆಲ್ಲರೂ ಬಲಾತ್ಕಾರದಿಂದ ಆ ಶುಕನನ್ನು ಹಿಡಿದು ನಿಗ್ರಹಿಸಿ ಕೆಡಹಲು ಆಗಲೇ ಅವನು ಶಕ್ತಿಗುಂದಿ ಧೊಪ್ಪನೆ ನೆಲಕ್ಕೆ ಬಿದ್ದನು. ಹೀಗೆ ವಾನರರು ಸುತ್ತಿಮುತ್ತಿರಲು ಶುಕನು ಅವರ ಹಿಂಸೆಯನ್ನು ತಡೆಯಲಾರದೆ, ರಾಮನನ್ನು ಕೂಗಿ ಮೊರೆಯಿಡುತ್ತ "ಎಲೆ ಕಕುತ್ಸ್ಥವಂಶಶಿಖಾಮಣಿಯೇ ! ಲೋಕದಲ್ಲಿ ದೂತರಾಗಿ ಬಂದವರನ್ನು ಕೊಲ್ಲುವುದುಂಟೇ ? ಈ ವಾನರರು ನನ್ನನ್ನು ಕೊಲ್ಲುತ್ತಿರುವರಲ್ಲಾ ! ನೀನಾದರೂ ಇವರನ್ನು ತಡೆದು ನನ್ನನ್ನು ಬದುಕಿಸಬೇಡವೆ? ಯಾವನು ತನ್ನ ಪ್ರಭುವು ಹೇಳಿಕಳುಹಿಸಿದ ಅಭಿಪ್ರಾಯವನ್ನು ಬಿಟ್ಟು, ತನಗೆ ತೋರಿದಂತೆ ತನ್ನ ಮತವನ್ನು ಹೇಳುವನೋ, ಅಂತಹ ದೂತನು ತನ್ನ ಸ್ವಾಮಿಯ

ಸಂದೇಶವನ್ನು ಮೀರಿನಡೆದ ಹೀನದೂತನೆನಿಸಿಕೊಳ್ಳುವುದರಿಂದ, ಅಂತಹ ದೂತರನ್ನು ಕೊಂದರೂ ದೋಷವಿಲ್ಲ. ಹಾಗಿಲ್ಲದೆ ನಾನು ನನ್ನ ಪ್ರಭುವಿನ ಸಂದೇಶವನ್ನು ಇದ್ದುದಿದ್ದಂತೆ ತಿಳಿಸುತ್ತಿರುವಾಗಲೂ ಈ ವಾನರರು ನನ್ನನ್ನು ಕೊಲ್ಲುತ್ತಿರುವರಲ್ಲಾ" ಎಂದನು. ಹೀಗೆ ಶುಕನು ದೈನ್ಯದಿಂದ ಗೋಳಿಡುವುದನ್ನು ಕೇಳಿ, ರಾಮನು ಅವನಲ್ಲಿ ಮರುಕಗೊಂಡು, ಅವನನ್ನು ಸುತ್ತಿಮುತ್ತಿ ಹೊಡೆಯುತಿದ್ದ ವಾನರರನ್ನು ಕುರಿತು "ಎಲೆ ವಾನರರೆ ! ಅವನನ್ನು ಕೊಲ್ಲಬೇಡಿರಿ" ಎಂದು ನಿಯಮಿಸಿದನು. ರಾಮಾಜ್ಞೆಯಿಂದ ವಾನರರು ಅವನನ್ನು ಬಿಟ್ಟುಬಿಡಲು, ಅವನು ಸ್ವಲ್ಪ ಧೈರ್ಯವನ್ನು ಹೊಂದಿ, ಮುರಿದ ರೆಕ್ಕೆಗಳಿಂದಲೇ ಪ್ರಯತ್ನಪಟ್ಟು ತಿರುಗಿ ಮೇಲೆ ಹಾರಿ, ಅಂತರಿಕ್ಷದಲ್ಲಿ ನಿಂತು ವಾನರರನ್ನು ಕುರಿತು "ಸುಗ್ರೀವಾ ! ನೀನು ಮಹಾಬಲವುಳ್ಳವನು, ಶಕ್ತಿಸಂಪನ್ನನು, ಮೇಲಾದ ಪರಾಕ್ರಮವುಳ್ಳವನು. ಘಾತುಕನಾದ ರಾವಣನು ಸಮಸ್ತಲೋಕಗಳನ್ನೂ ಗೋಳಾಡಿಸತಕ್ಕವನೆಂಬುದನ್ನು ನೀನು ಕಾಣೆಯಾ ? ಈಗ ನಾನು ನಿನ್ನಿಂದ ಅವನ ಮಾತಿಗೆ ತಕ್ಕಪ್ರತ್ಯುತ್ತರವನ್ನು ತಿಳಿದುಕೊಳ್ಳದೆ ಹೋದಪಕ್ಷದಲ್ಲಿ ನನ್ನನ್ನು ಕೊಂದು ಬಿಡುವನು. ಆದುದರಿಂದ ಈಗ ನಾನು ನಿನ್ನ ಮಾತಿನಿಂದ ಅವನಿಗೆ ತಿಳಿಸಬೇಕಾದುದೇನು ? ಹೇಳು" ಎಂದನು. ಶುಕನು ಹೇಳಿದ ಈ ಮಾತನ್ನು ಕೇಳಿ, ವಾನರರಾಜನಾಗಿಯೂ, ಮಹಾಬಲಾಢ್ಯನಾಗಿಯೂ ಇರುವ ಸುಗ್ರೀವನು, ತನ್ನ ಎಣೆಯಿಲ್ಲದ ಧೈರ್ಯಗುಣಕ್ಕೆ ತಕ್ಕಂತೆ ಆ ದೂತನನ್ನು ಕುರಿತು "ಎಲೆ ರಾಕ್ಷಸದೂತನೆ ! ನೀನು ನನ್ನ ಮಾತಿನಿಂದ ರಾವಣನನ್ನು ಕುರಿತು ನೀನು ನನಗೆ ಮಿತ್ರನೂ ಅಲ್ಲ ! ನಿನ್ನಲ್ಲಿ ನಾನು ದಯೆಯನ್ನು ತೋರಿಸಬೇಕಾದುದೂ ಇಲ್ಲ ! ಹಿಂದೆ ಯಾವಾಗಲೂ ನಾನು ನಿನ್ನಿಂದ ಉಪಕಾರವನ್ನು ಪಡೆದವನೂ ಅಲ್ಲ ! ನಿನ್ನಲ್ಲಿ ನನಗೆ ಪ್ರೀತಿಗೂ ಕಾರಣವಿಲ್ಲ ಇಷ್ಟೇ ಅಲ್ಲದೆ ನೀನೂ, ನನಗೆ ಸಂಬಂಧಿಸಿದವರೆಲ್ಲರೂ ನನ್ನ ಮಿತ್ರನಾದ ರಾಮನಿಗೆ ಶತ್ರುಗಳಾದುದರಿಂದ ನನಗೂ ನೀನು ಶತ್ರುವೇಹೊರತು ಬೇರೆಯಲ್ಲ. ನನ್ನಣ್ಣನಾದ ವಾಲಿಗೆ ನೀನು ಪರಮಮಿತ್ರನೆಂದು ಹೇಳಿಕೊಂಡೆಯಲ್ಲವೆ ! ಅದೇ ಕಾರಣದಿಂದ ನೀನು ನನಗೆ ಶತ್ರುವಂತೆ ವಧ್ಯನೇ ಹೊರತು ವಿಶ್ವಾಸಪಾತ್ರನಲ್ಲ. ನಮ್ಮಿಂದ ಲಂಕೆಗೆ ಪ್ರವೇಶಿಸುವುದೇ ಸಾಧ್ಯವಲ್ಲವೆಂದು ಹೇಳಿದೆಯಷ್ಟೆ ? ಎಲೆ ಹುಚ್ಚನೆ ! ಆ ಭ್ರಾಂತಿಯನ್ನು ಬಿಡು ! ಇನ್ನು ಶೀಘ್ರದಲ್ಲಿಯೇ ನಾನು ಲಂಕೆಗೆ ಬಂದು ಅಲ್ಲಿನ ಯುದ್ಧದಲ್ಲಿ ರಾಕ್ಷಸರಾಜನಾದ ನಿನ್ನನ್ನೂ, ನಿನ್ನ ಮಕ್ಕಳನ್ನೂ, ನಿನ್ನ ಬಂಧುಗಳನ್ನೂ, ನಿನ್ನ ದಾಯಾದರನ್ನೂ, ಇನ್ನೂ ನಿನಗೆ ಸೇರಿದವರೆಲ್ಲರನ್ನೂ ವಧಿಸುವೆನು ನೋಡು !

ನಿಮಿಷಮಾತ್ರದಲ್ಲಿ ನಿನ್ನ ಲಂಕಾನಗರಿಯನ್ನೇ ಸುಟ್ಟು ಬೂದಿ ಮಾಡುವೆನೆಂದು ತಿಳಿ! ಎಲೆ ಮೂಢ ರಾವಣಾ ! ಇನ್ನು ಮೇಲೆ ನಿನ್ನನ್ನು ದೇವತೆಗಳೊಡಗೂಡಿದ ದೇವೇಂದ್ರನೇ ಬಂದು ಬಚ್ಚಿಟ್ಟುಕೊಂಡರೂ, ನಿನ್ನ ಮಾಯೆಯಿಂದ ನೀನೇ ಕಣ್ಣಿಗೆ ಕಾಣದೆ ತಲೆತಪ್ಪಿಸಿಕೊಂಡರೂ, ಸೂರ್ಯಬಿಂಬದ್ವಾರದಲ್ಲಿ ಪ್ರವೇಶಿಸಿದರೂ ರಾಮನ ಕೈಯಿಂದ ತಪ್ಪಿಸಿಕೊಳ್ಳಲಾರೆ ! ಇದು ನಿಜವು ! ರಾಮನ ದ್ವೇಷಕ್ಕೆ ಪಾತ್ರನಾದ ನಿನ್ನನ್ನು ಪಿಶಾಚರಲ್ಲಿಯಾಗಲಿ, ರಾಕ್ಷಸರಲ್ಲಿಯಾಗಲಿ, ಗಂಧರ್ವರಲ್ಲಿಯಾಗಲಿ, ದೈತ್ಯ ರಲ್ಲಿಯೇ ಆಗಲಿ, ಮೂರು ಲೋಕಗಳಲ್ಲಿಯೂ ಯಾವನೊಬ್ಬನೂ ರಕ್ಷಿಸಿಕೊಳ್ಳ ಬಲ್ಲನೆಂದು ನನಗೆ ತೋರಲಿಲ್ಲ. ಮುಷ್ಟಿಯಿಂದ ಕೇವಲ ಬಲಹೀನನಾದ ಜಟಾಯು ವನ್ನು ಕೊಂದ ನಿನ್ನ ವೀರ್ಯಕ್ಕೆ ನೀನೇ ಹಿಗ್ಗುವೆಯಾ ? ಛೀ ಮೂಢನೆ ! ನಮ್ಮನ್ನು ಹಾಗೆಣಿಸಬೇಡ ! ಅದೂ ಹೋಗಲಿ ! ರಾಮನಾಗಲಿ ಲಕ್ಷ್ಮಣನಾಗಲಿ ಕಣ್ಣೆದಿರಿ ಗಿದ್ದಾಗ, ನೀನು ನಿನ್ನ ವೀರ್ಯವನ್ನು ತೋರಿಸಿ, ಸೀತೆಯನ್ನು ಕರೆತಂದೆಯಾ ? ಅದೂ ಇಲ್ಲ ! ಕಳ್ಳನಂತೆ ಹೊಂಚುಹಾಕಿ ಆಕೆಯನ್ನು ಕದ್ದುತಂದೆಯಲ್ಲಾ ! ಈಗಲೂ ನಿನಗೆ ಮುಂದೆ ಬರಬಹುದಾದ ಅನರ್ಥವೇನೆಂದು ತಿಳಿದಿಲ್ಲ ! ಮಹಾಬಲಾಢ್ಯ ನಾಗಿಯೂ, ಮಹಾಬುದ್ಧಿವಂತನಾಗಿಯೂ ದೇವತೆಗಳಿಗೂ ದುರ್ಜಯನಾಗಿಯೂ, ಇರುವ ರಘುಕುಲತಿಲಕನಾದ ಶ್ರೀರಾಮನೇ ನಿನ್ನ ಪ್ರಾಣಗಳನ್ನು ಕಳೆಯತಕ್ಕವನೆಂದು ಇನ್ನೂ ನಿನಗೆ ತಿಳಿಯಲಿಲ್ಲವೆ ? ಎಂದು ನಾನು ಹೇಳಿದುದಾಗಿ ತಿಳಿಸು" ಎಂದನು. ಇಷ್ಟರಲ್ಲಿ ವಾಲಿಪುತ್ರನಾದ ಅಂಗದನು ಸುಗ್ರೀವನನ್ನು ಕುರಿತು ಎಲೆ ಮಹಾರಾಜನೆ ಇದೇನು ? ಈ ನೀಚರಾಕ್ಷಸನೊಡನೆ ನಿನಗೆ ಇಷ್ಟು ಸಂಭಾಷಣಗಳೇಕೆ ? ಇವನು ನಿಜವಾಗಿಯೂ ದೂತನಾಗಿ ಬಂದವನಲ್ಲ ! ಇವನು ರಾವಣನಿಗೆ ಗೂಢಚಾರನೆಂದೇ ನನಗೆ ತೋರುವುದು. ಇವನು ಇಲ್ಲಿ ನಮ್ಮೆದಿರಾಗಿ ನಿಂತು ಮಾತಾಡುವ ನೆವದಿಂದಲೆ ನಮ್ಮ ಸೈನ್ಯದ ಪ್ರಮಾಣಗಳನ್ನೆಲ್ಲಾ ಕಂಡುಕೊಳ್ಳುತ್ತಿರುವನು. ಇವನನ್ನು ನಾವು ಇಲ್ಲಿಯೇ ಹಿಡಿದು ಕೊಂದುಬಿಡಬೇಕು. ಇವನನ್ನು ತಿರುಗಿ ಲಂಕೆಯ ಕಡೆಗೆ ಬಿಡಬಾರ ದೆಂದೇ ನನಗೆ ತೋರುವುದು" ಎಂದನು. ಇಷ್ಟರಲ್ಲಿಯೇ ಸುಗ್ರೀವಾಜ್ಞೆಯಿಂದ ಕೆಲವು ವಾನರರು ಆಕಾಶಕ್ಕೆ ಹಾರಿ, ಆ ಶುಕನನ್ನು ಹಿಡಿದು ಅನಾಥನಂತೆ ಗೋಳಿಡುತ್ತಿರುವ ಆ ರಾಕ್ಷಸನನ್ನು ಹಗ್ಗಗಳಿಂದ ಕಟ್ಟಿ ತಂದರು. ಆಮೇಲೆ ಕೋಪಸ್ವಭಾವವುಳ್ಳ ಕೆಲವು ವಾನರರು ಆ ಶುಕನನ್ನು ಸುತ್ತಿಮುತ್ತಿ ಪೀಡಿಸುತ್ತಿರಲು, ಆತನು ತಿರುಗಿ ಮಹಾತ್ಮ ನಾದ ರಾಮನನ್ನು ಕುರಿತು "ಅಯ್ಯೋ ! ರಾಮಾ! ಈ ವಾನರರು ನನ್ನ ರೆಕ್ಕೆಗಳನ್ನು

ಮುರಿದು ಕಣ್ಣುಗಳನ್ನು ಕೀಳುತ್ತಿರುವರಲ್ಲಾ ! ಇನ್ನು ನನ್ನ ಗತಿಯೇನು ! ನಾನು ನಿಜವಾಗಿಯೂ ಯಾವ ತಪ್ಪನ್ನೂ ಮಾಡಿದವನಲ್ಲ ! ದೂತಕಾರ್ಯಕ್ಕಾಗಿ ಬಂದವನು ಹೀಗಿರುವಾಗಲೂ ಈ ವಾನರರ ಹಿಂಸೆಯಿಂದ ನಾನು ಇಲ್ಲಿ ಪ್ರಾಣವನ್ನು ಬಿಟ್ಟರೆ, ನೀನೇ ನನ್ನನ್ನು ಕೊಲ್ಲಿಸಿದಂತಾಗುವುದು. ನಾನು ಹುಟ್ಟಿದುದು ಮೊದಲು ಸಾಯುವ ವರೆಗೂ ಮಾಡಿದ ಪಾಪಗಳಿಗೆಲ್ಲಕ್ಕೂ ನೀನೇ ಭಾಗಿಯಾಗಬೇಕಾಗುವುದು" ಎಂದು ಕೂಗಿಕೊಂಡನು. ಈ ವಿಲಾಪವನ್ನು ಕೇಳಿದೊಡನೆ ರಾಮನು ಅವನಲ್ಲಿ ಮರುಕ ಗೊಂಡು, ವಾನರರನ್ನು ಕುರಿತು, ಎಲೆ ವಾನರರೆ ! ಅವನು ದೂತನು. ಅವನನ್ನು ಕೊಲ್ಲಬೇಡಿರಿ ! ಅವನ ಕಟ್ಟುಗಳನ್ನು ಬಿಚ್ಚಿ ಕಳುಹಿಸಿಬಿಡಿರಿ" ಎಂದು ಹೇಳಿ ಆ ವಾನರರಿಗೆ ಆಜ್ಞೆ ಮಾಡಿದನು.

ಇಲ್ಲಿಗೆ ಇಪ್ಪತ್ತನೆಯ ಸರ್ಗವು.

ರಾಮನು ದರ್ಭಶಯನದಲ್ಲಿದ್ದು ಮೂರುರಾತ್ರಿಗಳವರೆಗೆ ಸಮುದ್ರ
ವನ್ನಾರಾಧಿಸಿದರೂ, ಸಮುದ್ರನು ಪ್ರಸನ್ನನಾಗದಿರಲು,
ಕೋಪದಿಂದ ಬಾಣಪ್ರಯೋಗಕ್ಕೆ ತೊಡಗಿದುದು.
ಲಕ್ಷ್ಮಣನು ಬೇಡವೆಂದು ತಡೆದುದು.

ಆಮೇಲೆ ರಘುನಂದನನಾದ ಶ್ರೀರಾಮನು, ಸಮುದ್ರ ತೀರದಲ್ಲಿ ದರ್ಭೆಗಳನ್ನು ಹಾಸಿಕೊಂಡು, ಸಮುದ್ರಕ್ಕೆದಿರಾಗಿ ಕೈಮುಗಿದು ಪೂರ್ವಾಭಿಮುಖವಾಗಿ ಮಲಗಿ ಬಿಟ್ಟನು. ಪರಂತಪನಾದ ಆ ರಾಮನು ಹೀಗೆ ದರ್ಭಶಯನದಲ್ಲಿರುವಾಗ ಸರ್ಪ ದೇಹದಂತೆ ಮೃದುವಾಗಿ ಉದ್ದವಾದ ತನ್ನ ಬಲದೋಳನ್ನೇ ತಲೆದೆಸೆಗಿಟ್ಟುಕೊಂಡು ಆ ಸಮುದ್ರಕ್ಕಿದಿರಾದ ಬೇರೊಂದು ಮಹಾಸಮುದ್ರದಂತೆ ಮಲಗಿದ್ದನು. ಮೊದಲು ಅಯೋಧ್ಯೆಯಲ್ಲಿದ್ದಾಗ, ಯಾವಭುಜವು ಬಗೆಬಗೆಯ ರತ್ನಾಭರಣಗಳಿಂದಲಂಕೃತ ವಾಗಿ ಶೋಭಿಸುತ್ತಿತ್ತೋ, [1]ಯಾವಭುಜವನ್ನು ಎಷ್ಟೋಮಂದಿ ಉತ್ತಮಸ್ತ್ರೀಯರು,

---

1. ಇಲ್ಲಿ "ಭುಜೈಃ ಪರಮನಾರೀಣಾಮಭಿಮೃಷ್ಟಮನೇಕಧಾ" ಎಂದು ಮೂಲವು. ಇಲ್ಲಿ ರಾಮನ ಭುಜಕ್ಕೆ ಅನೇಕ ಸ್ತ್ರೀಯರ ಕರಸ್ಪರ್ಶವನ್ನು ಹೇಳಿರುವುದರಿಂದ ರಾಮನಿಗೆ ಸೀತೆಯೊಬ್ಬಳೇ ಅಲ್ಲದೆ ಇನ್ನೂ ಅನೇಕ ಪತ್ನಿಯರುಂಟೆಂದು ಕೆಲವರು ಹೇಳುವರು. ಇದು ಸರಿಯಲ್ಲ. ಇಲ್ಲಿ ಪರಮನಾರಿಯರೆಂದರೆ ಅಂತಃಪುರದಲ್ಲಿ ಅಲಂಕಾರಕಾರ್ಯಕ್ಕೆ ನಿಯೋಗಿಸ

ಕಟಕಕೇಯೂರಾದಿ ಮುಕ್ತಾಭರಣಗಳಿಂದಲಂಕೃತಗಳಾದ ತಮ್ಮ ಕೈಗಳಿಂದ ಅನೇಕ ಪ್ರಕಾರವಾಗಿ ಒತ್ತುತಿದ್ದರೋ ಯಾವಭುಜವು ಪೂರ್ವದಲ್ಲಿ ಅಗರುಚಂದನಾದ್ಯನೇಕಸುಗಂಧಗಳಿಂದಲೂ ಬಾಲಸೂರ್ಯನಂತೆ ಹೊಳೆಯುವ ರಕ್ತ ಚಂದನದಿಂದಲೂ

ಲ್ಪಡತಕ್ಕ ಉತ್ತಮಪುರಂಧ್ರಿಯರೆಂದರ್ಥವು. ಹಾಗೆಯೇ "ಅಭಿಮೃಷ್ಟವತ್" ಎಂಬುದಕ್ಕೂ ಸ್ಪರ್ಶಯೋಗ್ಯವೆಂದೇ ಅರ್ಥವು. ಅಥವಾ ಪರಮನಾರಿಯರೆಂದರೆ ಭೂನೀಳಾದಿ ದಿವ್ಯಮಹಿಷಿಯರೆಂದೂ ಅರ್ಥಮಾಡಬಹುದು. ಮನುಷ್ಯರೂಪದಿಂದಿರುವ ರಾಮನಿಗೆ ಭೂನೀಳಾದಿ ದಿವ್ಯಮಹಿಷಿಯರೊಡನೆ ಸಂಬಂಧವು ಹೇಗೆ? ಎಂದು ಶಂಕಿಸಬಹುದು. ರಾಮನು "ಆತ್ಮಾನಂ ಮಾನುಷಂ ಮನ್ಯೇ" ಎಂದು ತನಗೆ ತಾನು ಮನುಷ್ಯನೆಂಬ ಭಾವನೆಯಿಂದಿದ್ದರೂ, ಮೊದಲು ಬಾಲಕಾಂಡದಲ್ಲಿ "ಜಜ್ಞೇ ವಿಷ್ಣುಸ್ಸನಾತನಃ" ಎಂದು ನಿಜಸ್ಥಿತಿಯನ್ನರಿತು ಹೇಳಿದ ವಾಲ್ಮೀಕಿಮಹಾಮುನಿಗೆ, ಅವನಲ್ಲಿ ಪರತ್ವಜ್ಞಾನವೇ ಸ್ಥಿರವಾಗಿ ನೆಲೆಗೊಂಡಿರುವುದರಿಂದ ಆ ಭಾವನೆಯಿಂದಲೇ ಈ ವಾಕ್ಯವನ್ನು ಹೇಳಿರಬಹುದು. ಆದುದರಿಂದ ಪರಮನಾರಿಯರೆಂಬುದಕ್ಕೆ ಇತರ ಪತ್ನಿಯರೆಂದರ್ಥವಲ್ಲವು. ರಾಮನಿಗೆ ಬೇರೆ ಪತ್ನಿಯರಿಲ್ಲದುದಕ್ಕಾಗಿಯೇ ಉತ್ತರಕಾಂಡದಲ್ಲಿ ಇವನು ಯಜ್ಞಕಾರ್ಯಕ್ಕಾಗಿ ಸುವರ್ಣದಿಂದ ಸೀತಾ ಪ್ರತಿಮೆಯನ್ನು ಮಾಡಿಟ್ಟುಕೊಂಡುದಾಗಿ ಕಾಣಿಸಿದೆ. "ಆದರೆ ಭಟ್ಟಾಚಾರ್ಯರು, ಪತ್ನಿಯರಿಗೆ ಪ್ರತಿನಿಧಿಭಾವವನ್ನು ತಿಳಿಸಲಿಲ್ಲವಲ್ಲಾ" ಎಂದು ಆಕ್ಷೇಪಿಸಬಹುದು. "ಈ ವಿಷಯದಲ್ಲಿ ಧರ್ಮಸಂಸ್ಥಾಪನಾರ್ಥವಾಗಿ ಅವತರಿಸಿರುವ ಆ ರಾಮನ ಆಚಾರವೇ ಮೇಲಾದ ಪ್ರಮಾಣವಾಗಿರುವಾಗ, ಇದಕ್ಕೆ ಬೇರೆ ಪ್ರಮಾಣವೇಕೆ? ವಾಸ್ತವಕ್ಕೆ ಆಚಾರವೇ ಪ್ರಥಮ ಪ್ರಮಾಣವು. ಶ್ರುತಿಯೂ ಪೂರ್ವಾಚಾರವನ್ನು ಪ್ರದರ್ಶಿಸಿಯೇ ಕರ್ಮವನ್ನು ವಿಧಿಸುವುದು. ಆಪಸ್ತಂಬರೂಕೂಡ "ಧರ್ಮಜ್ಞಸಮಯಃ ಪ್ರಮಾಣಂ ವೇದಾಶ್ಚ" ಎಂದು ಧರ್ಮಜ್ಞಸಮಯರೂಪವಾದ ಆಚಾರವನ್ನೇ ಪ್ರಥಮ ಪ್ರಮಾಣವನ್ನಾಗಿ ಹೇಳಿರುವರು. ಹಾಗೆಯೇ ಸ್ಮೃತಿಕಾರರೂ, "ಶ್ರುತಿರ್ವಿಭಿನ್ನಾ ಸ್ಮೃತಯೋಽಪಿ ಭಿನ್ನಾ ನಚಾನ್ಯಋಷೇರ್ದರ್ಶನಮಸ್ತಿ ಕಿಂಚಿತ್ | ಧರ್ಮಸ್ಯ ತತ್ತ್ವಂ ನಿಹಿತಂ ಗುಹಾಯಾಂ ಮಹಾಜನೋ ಯೇನ ಗತಸ್ಸ ಪಂಥಾಃ" ಎಂದು ಶಿಷ್ಟಾಚಾರವೇ ಪ್ರಮಾಣವೆಂದು ನಿರ್ಣಯಿಸಿರುವರು. ಆದುದರಿಂದ ರಾಮನ ಆಚಾರವೇ ಉತ್ತಮವಾದ ಪ್ರಮಾಣವೇಹೊರತು, ಅದರ ಮುಂದೆ ವಿರುದ್ಧ ನ್ಯಾಯಗಳಾವುವೂ ನಿಲ್ಲವು. ರಾಜಸೂಯಾಶ್ವಮೇಧಾದಿಗಳಲ್ಲಿ ಪಟ್ಟಮಹಿಷಿಯಂತೆ ವಾವಾತೆ, ಪರಿವೃತ್ತಿಯೆಂಬವರಿಬ್ಬರೂ ಇರಬೇಕಾದುದು ವಿಧಿಯು. ಹೀಗಿದ್ದರೂ ಅವರಿಲ್ಲದ ಸಂದರ್ಭಗಳಲ್ಲಿ ಅವರಿಂದ ನಡೆಯಬೇಕಾದ ಕಾರ್ಯವು ಮಾತ್ರನಡೆಸಲ್ಪಡುವುದಿಲ್ಲವಷ್ಟೇಹೊರತು. ಅದರಿಂದ ಕರ್ಮಕ್ಕೇನೂ ವೈಕಲ್ಯವು ಬಾರದು. ಕುಂಟರು ಕುರುಡರು ಮೊದಲಾದ ಅಂಗಹೀನರಿಗೆ ಯಜ್ಞದಲ್ಲಿ, ವಿಷ್ಣುಕ್ರಮವೆಂಬ ನಡೆ, ಆಜ್ಯಾವೇಕ್ಷಣ, ಇವೇ ಮೊದಲಾದವು ಲೋಪಿಸಬಹುದಾದರೂ, ಅವರ ಯಜ್ಞಕ್ಕೆ ಲೋಪವೇನೂ ಬಾರದು. ಅಂತಹ ಸಂದರ್ಭಗಳಲ್ಲಿ ಆಯಾ ಮಂತ್ರೋ

ಲೇಪಿತವಾಗಿ ಘಮಘಮಿಸುತಿತ್ತೋ ಯಾವಭುಜವು ಮೊದಲು ಹಂಸತೂಲಿಕಾತಲ್ಪ ದಲ್ಲಿ ಗಂಗಾಪ್ರವಾಹದಲ್ಲಿರುವ ತಕ್ಷಕದೇಹದಂತೆ ಕಾಣಿಸುತ್ತ ಸೀತೆಯ ತಲೆಗೆ ಆಗಾಗ ಸುಖಾಶ್ರಯವಾಗುತ್ತಿತ್ತೋ, ಈಗಲೂ ಯಾವಭುಜವು ಗೋಪುರದ ಬಾಗಿಲಗುಳಿ ಯಂತೆ ಶತ್ರುನಿವಾರಕವಾಗಿ, ನೋಡುವಾಗಲೇ ಶತ್ರುಗಳಿಗೆ ಭಯವನ್ನೂ, ಸುಹೃತ್ತು ಗಳಿಗೆ ಆನಂದವನ್ನೂ ಉಂಟುಮಾಡುತ್ತಿರುವುದೋ ಈಗಲೂ ಯಾವಭುಜವು ಸಮುದ್ರಾಂತವಾದ ಸಮಸ್ತಭೂಮಿಗೂ ಆಶ್ರಯವೆನಿಸಿರುವುದೋ, ಎಡಗೈಯಿಂದ ಬಾಣವನ್ನು ಬಿಡುವಾಗ ಯಾವಭುಜದಲ್ಲಿ ಬಿಲ್ಲಿನ ನಾಣಿನ ಬಡಿತದಿಂದ ಚರ್ಮ ವೆದ್ದು, ಅಲ್ಲಲ್ಲಿ ಪಟ್ಟುಗಟ್ಟಿರುವುದೋ ದೊಡ್ಡ ಕಬ್ಬಿಣದಗುಳಿಯಂತೆ ದುಂಡಗೆ ದಪ್ಪನಾಗಿ ನೀಡಿರುವ ಯಾವಭುಜವು ಇದುವರೆಗೆ ಎಷ್ಟೋ ಸಹಸ್ರಗೋವುಗಳನ್ನು ದಾನಮಾಡಿ ಪ್ರಸಿದ್ಧಿಹೊಂದಿರುವುದೋ ಆ ತನ್ನ ಬಲದೋಳನ್ನೇ ರಾಮನು ತನ್ನ ತಲೆದೆಸೆಗಿಟ್ಟು ಮಲಗಿ ತನ್ನಲ್ಲಿ ತಾನು ಈಗ ನನಗೆ ಹೀಗೆಯೇ ಮರಣವಾಗಲಿ, ಸಮುದ್ರಶರಣವಾಗಲಿ, ಈ ಎರಡರಲ್ಲಿ ಯಾವುದಾದರೂ ಒಂದು ಸಿದ್ಧಿಸಲಿ!" ಎಂದು ದೃಢಬುದ್ಧಿಯಿಂದ ಸಂಕಲ್ಪಿಸಿ ಸ್ನಾನಾದಿಗಳಿಂದ ದೇಹಶುದ್ಧಿಯನ್ನು ಮಾಡಿಕೊಂಡು ವಾಙ್ನಿಯಮನಿಂದಲೂ, ಮನೋನಿಯಮದಿಂದಲೂ ಕೂಡಿ ಶಾಸ್ತ್ರೋಕ್ತವಿಧಿಯಿಂದ ಸಮುದ್ರಕ್ಕಿದಿರಾಗಿ ಮಲಗಿದನು. ಹೀಗೆ ರಾಮನು ನಿಯಮವನ್ನು ಹಿಡಿದು ಎಚ್ಚರಿಕೆ ದರ್ಭಶಯನದ ಮೇಲೆ ಮಲಗಿರಲು ಹಾಗೆಯೇ ಮೂರುರಾತ್ರಿಗಳು ಕಳೆದು ಹೋದುವು. [1]ನೀತಿಜ್ಞನಾಗಿಯೂ, ಧರ್ಮವತ್ಸಲನಾಗಿಯೂ ಇದ್ದ ರಾಮನು

ಚ್ಚಾರಣಮಾತ್ರದಿಂದಲೇ ಕಾರ್ಯವು ನೆರವೇರಿದಂತೆ ಗ್ರಹಿಸಬೇಕಾಗುವುದಲ್ಲವೆ ? ಆದುದರಿಂದ ಇಲ್ಲಿಯೂ ಕೇವಲ ನ್ಯಾಯಸಂಚಾರವನ್ನು ಹಿಡಿದು ಅಪನ್ಯಾಯಮಾರ್ಗವನ್ನನುಸರಿಸ ಬಾರದು. ರಾಮನ ಆಚಾರವೇ ಲೋಕಕ್ಕೆ ಮುಖ್ಯಪ್ರಮಾಣವೆಂದು ತಿಳಿಯಬೇಕು. ಆದುದರಿಂದ ರಾಮನಿಗೆ ಸೀತೆಯೊಬ್ಬಳು ಹೊರತು ಬೇರೆ ಪತ್ನಿಯರಿಲ್ಲವೆಂಬುದು ಸಿದ್ಧಾಂತವು. ಈ ವಿಚಾರವು ಅಯೋಧ್ಯಾಕಾಂಡದ ಎಂಟನೆಯ ಸರ್ಗದ ವ್ಯಾಖ್ಯಾನದಲ್ಲಿ ಇನ್ನೂ ವಿವರವಾಗಿ ಚರ್ಚಿಸಿ ಸಿದ್ಧಾಂತೀಕರಿಸಲ್ಪಟ್ಟಿದೆ.

1. ಇಲ್ಲಿ "ಸ ತ್ರಿರಾತ್ರೋಷಿತಸ್ತತ್ರ ನಯಜ್ಞೋ ಧರ್ಮವತ್ಸಲಃ" ಉಪಾಸತ ತದಾ ರಾಮಸ್ಸಾಗರಂ ಸರಿತಾಂಪತಿಂ ॥ ನಚ ದರ್ಶಯತೇ ಮನ್ದಸ್ತದಾ ರಾಮಸ್ಯ ಸಾಗರಃ" ಎಂದು ಮೂಲವು. ರಾಮನು ಸರ್ವಶಕ್ತನಾಗಿರುವಾಗ ಸಮುದ್ರದಲ್ಲಿ ಶರಣಾಗತಿಯನ್ನು ಮಾಡಿದುದೇಕೆ ? ಎಂದರೆ, "ಧರ್ಮವತ್ಸಲಃ" ಶರಣಾಗತಿಧರ್ಮದಲ್ಲಿ ಪ್ರೀತಿಯುಳ್ಳವ ನಾದುದರಿಂದಲೇ ಹಾಗೆ ನಟಿಸಿದುದಾಗಿ ಸಾಭಿಪ್ರಾಯವಿಶೇಷಣವು. ಹಾಗೆಯೆ (ಸರಿತಾಂಪತಿಂ)

ಹೀಗೆ ಮೂರುರಾತ್ರಿಗಳವರೆಗೂ ಎದೆಬಿಡದೆ ಹಾಗೆಯೇ ಮಲಗಿ, ನದೀನಾಥನಾದ ಸಮುದ್ರನನ್ನು ಉಪಾಸನಮಾಡಿದನು. ಮದಾಂಧನಾದ ಸಮುದ್ರನಾದರೋ ಇಷ್ಟಾದರೂ ರಾಮನಿಗೆ ತನ್ನ ರೂಪವನ್ನು ತೋರಿಸಲಿಲ್ಲ. ಹೀಗೆ ರಾಮನು ಎಷ್ಟೋ ನಿಯಮದಿಂದ ವಿಧಿಯನ್ನನುಸರಿಸಿ ಆರಾಧಿಸುತ್ತಿದ್ದರೂ, ಸಮುದ್ರನು ಪ್ರತ್ಯಕ್ಷವಾಗದಿರಲು ಆಗ ರಾಮನಿಗೆ ಸಮುದ್ರದಮೇಲೆ ಸ್ವಲ್ಪಸ್ವಲ್ಪವಾಗಿ ಕೋಪವು ಅಂಕುರಿಸಿತು. ಅವನ ಕಡೆಕಣ್ಣುಗಳು ಕೆಂಪೇರಿದುವು. ಹೀಗೆ ಕೋಪಗೊಂಡ ರಾಮನು ಸಮೀಪದಲ್ಲಿದ್ದ ಲಕ್ಷ್ಮಣನನ್ನು ಕುರಿತು "ವತ್ಸಲಕ್ಷ್ಮಣಾ ! ಇಷ್ಟಾದರೂ ನಮಗೆ ಪ್ರತ್ಯಕ್ಷನಾಗದಿರುವ ಈ ಸಮುದ್ರದ ಗರ್ವವನ್ನು ನೋಡಿದೆಯಾ ? ಲೋಕದಲ್ಲಿ ನಿಗ್ರಹಿಸುವುದೂ ತಪ್ಪನ್ನು ಮನ್ನಿಸುವುದೂ, ಋಜುಸ್ವಭಾವವೂ, ಯಾವಾಗಲೂ ಪ್ರಿಯವಾಕ್ಯವನ್ನು ನುಡಿಯುವುದೂ, ಈ ಮೊದಲಾದ ಗುಣಗಳೆಲ್ಲವೂ ಸತ್ಪುರುಷರಿಗೆ ಅವಶ್ಯವಾಗಿರಬೇಕಾದ ಸುಗುಣಗಳೆಂಬುದರಲ್ಲಿ ಸಂದೇಹವಿಲ್ಲ. ಆದರೇನು ? ಈ ಸದ್ಗುಣಗಳನ್ನೇ ಹೀಗೆ ನೀಚರಾದವರಲ್ಲಿ ತೋರಿಸಿದರೆ, ಅವರು ಆ ಗುಣವುಳ್ಳವರನ್ನು ಅಸಮರ್ಥರೆಂದು ಗ್ರಹಿಸಿಬಿಡುವರು. ಇಂತಹ ಅವಿವೇಕಿಗಳಲ್ಲಿ ಈ ಸದ್ಗುಣಗಳನ್ನು ತೋರಿಸುವುದರಿಂದ ಕೈಲಾಗದವನೆಂದು ಹೇಳಿಸಿಕೊಳ್ಳುವದೊಂದೇ ಫಲವು. ಅಜ್ಞರಾದ ಜನರು ಆತ್ಮಸ್ತುತಿ ಮಾಡಿಕೊಳ್ಳುವವನನ್ನೂ, ದಯೆಯಿಲ್ಲದವನನ್ನೂ, ವಂಚಕನನ್ನೂ, ಜನರಲ್ಲಿ ಸಲಿಗೆಯಿಲ್ಲದವನನ್ನೂ, ನ್ಯಾಯ ವಿವೇಚನೆಯಿಲ್ಲದೆ ಶಿಕ್ಷಿಸುವವನನ್ನೂ ಬಹಳ ಸಮರ್ಥನೆಂದು ತಿಳಿದು ಗೌರವಿಸುವರು. ಲಕ್ಷ್ಮಣಾ ! ಮುಖ್ಯವಾಗಿ ಲೋಕದಲ್ಲಿ ಮೃದುತ್ವದಿಂದ ಬಲವಂತನೆಂಬ ಕೀರ್ತಿಯೂ ಬಾರದು. ಪರಾಕ್ರಮವುಳ್ಳವನೆಂಬ ಯಶಸ್ಸೂ ಬಾರದು. ಯುದ್ಧದಲ್ಲಿ ಜಯವೂ ಬಾರದು. ದುರ್ಜನರಲ್ಲಿ ಸಾಮವೆಂಬುದು ಕೆಲಸಕ್ಕೇ ಬಾರದು. ಇಂಥವರಲ್ಲಿ ದಂಡೋಪಾಯವೇ ಮೇಲಾದ

ಎಂಬ ವಿಶೇಷಣದಿಂದ, ವಿಷ್ಣುರೂಪಿಯಾದ ತನ್ನನ್ನಾಶ್ರಯಿಸುವುದಕ್ಕೆ ಲಕ್ಷ್ಮೀದೇವಿಯು ಪುರುಷಕಾರವಿರುವಂತೆ ಸಮುದ್ರನೂ ತನ್ನನ್ನಾಶ್ರಯಿಸುವುದಕ್ಕೆ ಪುರುಷಕಾರಭೂತರಾದ ಸರಿತ್ತುಗಳೊಡನೆ ಕೂಡಿ ಬಂದಿರುವುದಾಗಿ ಭಾವವು. ಆದರೆ ರಾಮನು ಹೀಗೆ ಕ್ರಮವಾಗಿ ಮಾಡಿದ ಶರಣಾಗತಿಯೂ ಫಲಿಸದೆ ಹೋದುದೇಕೆ ? ಎಂದರೆ, ರಾಮನು ಎಂದಿಗೂ ಅಂತಹ ಶರಣಾಗತಿಗೆ ಅಧಿಕಾರಿಯಲ್ಲ. ಅಕಿಂಚನನೇ ಅದಕ್ಕಧಿಕಾರಿಯು. ಬ್ರಾಹ್ಮಣನು ಕ್ಷತ್ರಿಯರಿಗೆ ವಿಹಿತವಾದ ರಾಜಸೂಯವನ್ನು ಎಷ್ಟೇ ಕ್ರಮವಾಗಿ ನಡೆಸಿದರೂ ಹೇಗೆ ಫಲಿಸದೋ, ಹಾಗೆಯೇ ಅನಧಿಕಾರಿಯಾದ ರಾಮನು ನಡೆಸಿದ ಶರಣಾಗತಿಯು ಅವನಿಗೆ ಫಲಿಸಲಿಲ್ಲವೆಂದು ಗ್ರಾಹ್ಯವು.

ಸಾಧನವು. ಎಲೆ ವತ್ಸನೆ ! ಇದೋ ನೋಡು ! ಈಗಲೇ ನಾನೂ ನನ್ನ ಬಾಹುಗಳಿಂದ ಈ ಸಮುದ್ರವನ್ನು ಕಲಕಿ ಬಿಡುವೆನು. ನನ್ನ ಬಾಣಗಳಿಂದ ಇದರಲ್ಲಿರುವ ಮಹಾಮಕರಗಳೆಲ್ಲವೂ ಭಿನ್ನ ಭಿನ್ನಗಳಾಗಿ ಈ ಸಮುದ್ರದ ನೀರನೆಲ್ಲಾ ವ್ಯಾಪಿಸಿ ಮೇಲೆ ತೇಲಾಡುವಂತೆ ಮಾಡುವೆನು ನೋಡು ! ಅಲ್ಲಲ್ಲಿರುವ ಮಹಾಸರ್ಪಗಳ ದೊಡ್ಡ ದೇಹಗಳೂ ಗಜಾಕೃತಿಯುಳ್ಳ ಮೀನುಗಳ ಸುಂಡಿಲುಗಳೂ. ನನ್ನ ಬಾಣಗಳಿಂದ ಕತ್ತರಿಸಲ್ಪಡುವುದನ್ನೂ ನೋಡು. ಈಗಲೇ ನನ್ನ ಬಾಣಗಳನ್ನು ಪ್ರಯೋಗಿಸಿ ಶಂಖಗಳಿಂದಲೂ ಮುತ್ತು ಚಿಪ್ಪುಗಳಿಂದಲೂ, ಮೀನುಗಳಿಂದಲೂ ತುಂಬಿದ ಈ ಸಮುದ್ರವನ್ನು ನಿಮಿಷಮಾತ್ರದಲ್ಲಿ ಶೋಷಿಸುವುದನ್ನಾದರೂ ನೋಡು ! ಲಕ್ಷ್ಮಣಾ ! ನಾನು ತಾಳ್ಮೆಯಿಂದ ಸುಮ್ಮನಿರುವುದನ್ನು ನೋಡಿ ಈ ಸಮುದ್ರವು ನನ್ನನ್ನು ಕೈಲಾಗದವನೆಂದು ತಿಳಿದಹಾಗಿದೆ ! ಛಿ ! ಇಂತಹ ನೀಚ ಜನದಲ್ಲಿ ತಾಳ್ಮೆಯೆಂಬುದು ಎಂದಿಗೂ ಕೆಲಸಕ್ಕೆ ಬಾರದು ! ಇಂತವನಲ್ಲಿ ಕೋಪವು ಯುಕ್ತವೇ ಹೊರತು, ಸಾಮದಿಂದ ಈ ಸಮುದ್ರವು ನಮಗೆ ತನ್ನ ರೂಪವನ್ನು ತೋರಿಸುವ ಹಾಗಿಲ್ಲ. [1]ವತ್ಸಲಕ್ಷ್ಮಣಾ ! ನನ್ನ ಬಿಲ್ಲನ್ನೂ, ವಿಷಸರ್ಪಗಳಂತಿರುವ ನನ್ನ ಕ್ರೂರಬಾಣಗಳನ್ನೂ ತಂದುಕೊಂಡು ! ಈ ಸಮುದ್ರವನ್ನು

1. ಇಲ್ಲಿ "ಚಾಪಮಾನಯ ಸೌಮಿತ್ರೇ ಶರಾಂಶ್ಚಾಶೀವಿಷೋಪಮಾನ್" ಎಂದು ಮೂಲವು. ಸರ್ವಶಕ್ತನಾದ ರಾಮನು ಮೊದಲು ಎಷ್ಟೋ ವಿನಯದಿಂದ ಸಮುದ್ರನನ್ನು ಉಪಾಸನೆಮಾಡಿ ಪ್ರಾರ್ಥಿಸಿದರೂ, ಅವನು ಪ್ರತ್ಯಕ್ಷನಾಗದುದಕ್ಕಾಗಿ, ಆಗಲೇ ಅವನನ್ನು ನಿಗ್ರಹಿಸಿಬಿಡಬಹುದಾಗಿದ್ದರೂ, ದಯಾಸ್ವಭಾವದಿಂದ ಅವನನ್ನು ನಿಗ್ರಹಿಸಲಾರದೆ, ಹೇಗಾದರೂ ಅವನು ತನಗೆ ಪ್ರತ್ಯಕ್ಷನಾಗಲೆಂದು ಇದುವರೆಗೆ ಮಾತಿನಿಂದ ಹೆದರಿಸಿ, ಈಗ ಕಾರ್ಯದಿಂದಲೂ ಹೆದರಿಸುವನು. ಇಷ್ಟು ಕಾಲವಿಳಂಬಕ್ಕೂ ಅವನ ದಯಾಸ್ವಭಾವವೇ ಕಾರಣವೇ ಹೊರತು ಬೇರೆಯಲ್ಲವು. ಮೇಲಿನ ವಾಕ್ಯಗಳ ಗೂಢಾರ್ಥವೇನೆಂದರೆ:— (ಚಾಪಮಾನಯ) ಗುಣಹೀನನಾದ ಇವನನ್ನು ನಿಗ್ರಹಿಸುವುದಕ್ಕೆ ಗುಣಯುಕ್ತವಾದ ನನ್ನ ಬಿಲ್ಲನ್ನು ತಂದಿಡು ! (ಚಾಪಮಾನಯ) ಈತನ ಅನಮ್ರತೆಯನ್ನು ನೀಗಿಸುವುದಕ್ಕಾಗಿ ನಮ್ರವಾದ ಬಿಲ್ಲನ್ನು ತಂದುಕೊಡು ! (ಚಾಪಮಾನಯ) ಇವನ ಕಟ್ಟನ್ನು ಕದಲಿಸುವದಕ್ಕಾಗಿ ಕಟ್ಟುಳ್ಳ ನನ್ನ ಬಿಲ್ಲನ್ನು ತಂದುಕೊಡು ! (ಸೌಮಿತ್ರೇ) "ರಾಮೇ ಪ್ರಮಾದಂ ಮಾಕಾರ್ಷೀಃ" ಎಂದು ನಿನ್ನ ತಾಯಿಯಾದ ಸುಮಿತ್ರೆಯು ನಿನಗೆ ಹೇಳಿದ ಮಾತನ್ನು ಮರೆತೆಯೇನು ? (ಶರಾಂಶ್ಚಾಶೀವಿಷೋಪಮಾನ್) ಮುಳ್ಳನ್ನು ಮುಳ್ಳಿನಿಂದಲೇ ಕೀಳಬೇಕು. ಉಷ್ಣವನ್ನು ಉಷ್ಣದಿಂದಲೇ ಶಮನ ಮಾಡಬೇಕು. ವಿಷವನ್ನು ವಿಷದಿಂದಲೇ ಅಡಗಿಸಬೇಕಲ್ಲವೆ ? ಹಾಗೆಯೇ ಇಲ್ಲಿನ ಶರವನ್ನು (ನೀರನ್ನು) ಶೋಷಿಸುವುದಕ್ಕಾಗಿ ಶರಗಳನ್ನೇ (ಬಾಣಗಳನ್ನು) ತಂದುಕೊಡು ! ಎಂದು ಹೇಳಿದುದಾಗಿ ಭಾವವು.

ಶೋಷಿಸಿಬಿಡುವೆನು ! ನಮ್ಮ ಕಡೆಯ ಕಪಿಗಳು ಇದನ್ನು ಕಾಲುನಡೆಯಿಂದಲೇ ದಾಟಿಹೋಗಲಿ ! ಈ ಸಮುದ್ರನು ಅಕ್ಷೋಭ್ಯನೆಂದು ಲೋಕದಲ್ಲಿ ಖ್ಯಾತಿಹೊಂದಿದ ವನಲ್ಲವೆ ? ಈಗ ನಾನು ಅವನಿಗೆ ಆ ಖ್ಯಾತಿಯನ್ನೇ ಹೋಗಲಾಡಿಸುವೆನು ನೋಡು! ಆಗಾಗ ಅಲೆಗಳಿಂದ ತುಂಬಿ ತುಳುಕುತ್ತಿದ್ದರೂ, ಸುತ್ತಲೂ ಇರುವ ತನ್ನ ಎಲ್ಲೆ ಕಟ್ಟನ್ನು ಮೀರದೆ ಸ್ಥೈರ್ಯದಿಂದಿರುವ ಈ ಸಮುದ್ರನನ್ನು, ಈಗ ನನ್ನ ಬಾಣಗಳಿಂದ ತನ್ನ ಎಲ್ಲೆಯನ್ನು ಮೀರುವಂತೆ ಮಾಡುವೆನು ನೋಡು ! ಈ ಮಹಾ ಸಮುದ್ರವನ್ನು ನಾನು ಅದರಲ್ಲಿ ಕಾವಲಿರುವ ಅನೇಕ ದೈತ್ಯದಾನವ ಸಮೂಹ ದೊಡನೆ ಕ್ಷೋಭೆಹೊಂದಿಸುವುದನ್ನಾದರೂ ನೋಡು!" ಎಂದನು. ಹೀಗೆಂದು ಹೇಳಿ ರಾಮನು ಕೈಯಲ್ಲಿ ಧನುಸ್ಸನ್ನು ಹಿಡಿದು ಕೋಪದಿಂದ ಕಣ್ಣಾಲೆಗಳನ್ನು ತಿರುಗಿಸುತ್ತ ಪ್ರಳಯಕಾಲಾಗ್ನಿಯಂತೆ ಜ್ವಲಿಸುತಿದ್ದನು. ಅವನನ್ನು ತಡೆಯುವುದು ಯಾರಿಗೂ ಸಾಧ್ಯವಿಲ್ಲದಂತಾಯಿತು ಹೀಗೆ ಕೋಪೋದ್ರಿಕ್ತನಾದ ರಾಮನು ಸಮಸ್ತಜಗತ್ತನ್ನೂ ನಡುಗಿಸುತ್ತ ಭಯಂಕರವಾದ ತನ್ನ ಧನುಸ್ಸನ್ನೆಳೆದು ಕಟ್ಟಿ ಇಂದ್ರನು ವಜ್ರಾಯುಧ ಗಳನ್ನು ಪ್ರಯೋಗಿಸುವಂತೆ ಅನೇಕ ಕ್ರೂರಬಾಣಗಳನ್ನು ಪ್ರಯೋಗಿಸಿದನು. ತೇಜಸ್ಸಿನಿಂದ ಜ್ವಲಿಸುತಿದ್ದ ಆ ಬಾಣಗಳೆಲ್ಲವೂ ಮಹಾವೇಗವುಳ್ಳವುಗಳಾಗಿ ಬಂದು ಸಮುದ್ರಜಲದೊಳಗೆ ಪ್ರವೇಶಿಸುತಿದ್ದುವು. ಆಗ ಪಾತಾಳದವರೆಗಿದ್ದ ಮಹಾಸರ್ಪ ಗಳೆಲ್ಲವೂ ಭಯದಿಂದ ನಡುಗಿಹೋದುವು. ಅನೇಕ ಮತ್ಸ್ಯಗಳಿಂದಲೂ ಮೊಸಳೆ ಗಳಿಂದಲೂ ತುಂಬಿದ ಆ ಮಹಾಸಮುದ್ರದಲ್ಲಿ ಅಲೆಗಳ ಪ್ರವಾಹವೇಗವು, ಬಾಣದ ಗಾಳಿಯ ಬಡಿತದಿಂದುಂಟಾದ ಮಹಾಧ್ವನಿಯೊಡನೆ ಮತ್ತಷ್ಟು ಭಯಂಕರವಾಯಿತು ಆಗ ಆ ಸಮುದ್ರದ ಸ್ಥಿತಿಯನ್ನು ಕೇಳಬೇಕೆ ? ಸುತ್ತಲೂ ಅಲೆಗಳು ಮೇಲೆ ಮೇಲೆ ಉಬ್ಬಿಬಂದು, ತೀರಪ್ರದೇಶಕ್ಕೆ ಅಪ್ಪಳಿಸಿ ಹೊಡೆಯುತ್ತಿರುವುವು. ಕೆಳಗಿದ್ದ ಶಂಖಗಳೂ ಮುತ್ತು ಚಿಪ್ಪುಗಳೂ ಮೇಲೆದ್ದು ತೇಲುತ್ತಿರುವುವು. ನಡುನಡುವೆ ಸಮುದ್ರಜಲವು ಶೋಷಿಸುತ್ತಬಂದು ಹೊಗೆಯೇಳುತ್ತಿರುವುದು. ಒಳಗಿದ್ದ ಮಹಾಸರ್ಪಗಳೆಲ್ಲವೂ ಬಾಣವೇಗಕ್ಕೆ ಸಿಕ್ಕಿ ಸಂಕಟಪಟ್ಟು ತತ್ತಳಿಸುತ್ತ ಮುಖಗಳಿಂದಲೂ ಕಣ್ಣುಗಳಿಂದಿಲೂ ಉರಿಯನ್ನು ಕಾರುತ್ತಿರುವುವು. ಪಾತಾಳವಾಸಿಗಳಾದ ಮಹಾವೀರ್ಯವುಳ್ಳ ದಾನವರೂ ಕೂಡ ಭಯದಿಂದ ನಡುಗುತ್ತಿರುವರು. ಆ ಸಮುದ್ರದಮೇಲೆ ದೊಡ್ಡದೊಡ್ಡ ತರಂಗ ಗಳು ವಿಂಧ್ಯ ಮಂದರಪರ್ವತಗಳಂತೆ ಮಹೋನ್ನತಗಳಾಗಿ ಮೊಸಳೆ,ಮೀನು ಮುಂತಾದ ಪ್ರಾಣಿಗಳೊಡನೆ ಲಕ್ಷೋಪಲಕ್ಷ ಸಂಖ್ಯೆಯಿಂದ ಹಾರಿ ಬೀಳುತ್ತಿರುವುವು. ಅಲ್ಲಲ್ಲಿ

ದೊಡ್ಡ ದೊಡ್ಡ ಅಲೆಗಳು ಸುತ್ತಿಸುತ್ತಿ ಹೊಡೆಯುತ್ತಿರುವುವು. ಪಾತಾಳವಾಸಿಗಳಾದ ಉರಗರೂ ರಾಕ್ಷಸರೂ ಭಯದಿಂದ ತತ್ತಳಿಸುವರು. ಅಲ್ಲಲ್ಲಿ ಮಹಾಗ್ರಾಹಗಳು ತಲೆ ಕೆಳಗಾಗಿ ಉರುಳುತ್ತಿರುವುವು. ಆ ಮಹಾಸಮುದ್ರವನ್ನೇ ಅಡಿ ಮೇಲಾಗಿ ಮಗುಚಿ ದಂತೆ ಜಲಪ್ರವಾಹವು ಉಕ್ಕಿ ಬರುತ್ತಿರುವುದು. ಹೀಗೆ ಸಮುದ್ರಕ್ಕುಂಟಾದ ಮಹಾ ಕ್ಷೋಭವನ್ನೂ, ಇತ್ತಲಾಗಿ ರಾಮನು ಅತ್ಯುಗ್ರ ವೇಗದಿಂದ ಧನುಸ್ಸನ್ನೆಳೆಯುತ್ತ, ಕೋಪದಿಂದ ಆಗಾಗ ನಿಟ್ಟುಸಿರುಬಿಡುತ್ತಿರುವುದನ್ನೂ ನೋಡಿ ಲಕ್ಷ್ಮಣನು ಭಯ ಪಟ್ಟು, ಇನ್ನು ತಾನು ಸುಮ್ಮನಿದ್ದರೆ ಲೋಕವೆಲ್ಲವೂ ದಗ್ಧವಾಗುವುದೆಂದೆಣಿಸಿ, ಥಟ್ಟನೆ ಮುಂದೆ ಬಂದು "ಅಣ್ಣಾ ! ಬೇಡಬೇಡ" ಎಂದು ತಡೆಯುತ್ತ ಕೊನೆಗೆ ರಾಮನ ಕೈಯಲ್ಲಿದ್ದ ಧನುಸ್ಸನ್ನೇ ತನ್ನ ಕೈಯಿಂದ ಹಿಡಿದು ತಡೆದನು.

ಇಲ್ಲಿಗೆ ಇಪ್ಪತ್ತೊಂದನೆಯ ಸರ್ಗವು

ರಾಮನು ಬ್ರಹ್ಮಾಸ್ತ್ರವನ್ನು ಬಿಡುವುದಕ್ಕೆ ಯತ್ನಿಸಿದಮೇಲೆ ಸಮುದ್ರನು ಪ್ರತ್ಯಕ್ಷವಾಗಿ ಸೇತುವನ್ನು ಕಟ್ಟುವುದಕ್ಕಾಗಿ ನಲನನ್ನು ನಿಯೋಗಿಸಿ ರಾಮನು ಹೂಡಿದ ಬ್ರಹ್ಮಾಸ್ತ್ರವನ್ನು ತನ್ನಲ್ಲಿದ್ದ ದ್ರುಮಕುಲ್ಯದ ಮೇಲೆ ಬಿಡುವಂತೆ ಪ್ರಾರ್ಥಿಸಿದುದು. ರಾಮನು ನಲನಿರ್ಮಿತವಾದ ಸೇತುವಿನಿಂದ ಸಮುದ್ರವನ್ನು ದಾಟಿ ಸಂವೇಲಾಪ್ರಾಂತ್ಯದಲ್ಲಿ ಸೈನ್ಯವನ್ನಿಳಿಸಿದುದು. ದೇವತೆಗಳ ಸ್ತೋತ್ರವು.

ಇಷ್ಟಾದರೂ ಸಮುದ್ರವು ತನಗೆ ಕಾಣಿಸಿಕೊಳ್ಳದಿರುವುದನ್ನು ನೋಡಿ ರಾಮನು ಕೋಪಗೊಂಡು ಸಮುದ್ರನನ್ನು ಕುರಿತು ಭಯಂಕರವಾಕ್ಯದಿಂದ "ಎಲೆ ಸಮುದ್ರಾ! ಇದೋ ! ಈಗಲೇ ನಿನ್ನನ್ನು ಪಾತಾಳದವರೆಗೂ ಶೋಷಿಸುವಂತೆ ಮಾಡುವೆನು ! ನನ್ನ ಬಾಣಗಳಿಂದ ಇನ್ನು ಕ್ಷಣಕಾಲದಲ್ಲಿಯೇ ನಿನ್ನ ಜಲವೆಲ್ಲವೂ ಕುದಿದು, ಹಬೆ ಯಾಗಿ ಹಾರಿಹೋಗುವಂತೆ ಮಾಡುವೆನಲ್ಲದೆ, ನೆಲದೊಳಗೆ ತೇವವೇ ಇಲ್ಲದಂತೆ ಒಣಗಿಸುವೆನು ನೋಡು ! ಇನ್ನು ನಿನ್ನಲ್ಲಿ ಒಂದು ಜಲಜಂತುವಾದರೂ ಬದುಕದೆ ಎಲ್ಲವೂ ದಗ್ಧವಾಗುವುವು. ನಿನ್ನ ನೀರೊಣಗಿ ದೊಡ್ಡ ಧೂಳಿಯು ಮೇಲೇಳುವುದು! ಎಲೆ ಸಮುದ್ರನೆ ! ನನ್ನ ಬಿಲ್ಲಿನಿಂದ ಹೊರಟ ಬಾಣವನ್ನೇ ಸೇತುವನ್ನಾಗಿ ಮಾಡಿ, ಅದರಿಂದ ಈ ಕಪಿಗಳನ್ನು ಕಾಲುನಡೆಯಿಂದಲೇ ದಾಟಿಸುವೆನೆಂದು ತಿಳಿ ! ಅನೇಕ

ರಾಕ್ಷಸರಿಗೆ ನೀನು ಆಶ್ರಯನಾಗಿರುವೆ. ಅವರ ಸಹವಾಸ ದೋಷದಿಂದಲೇ ನಿನಗೆ ಇಷ್ಟಾದರೂ ನನ್ನ ವೀರ್ಯವಾಗಲಿ, ನನ್ನ ಬಲವಾಗಲಿ, ತಿಳಿಯಲಿಲ್ಲವೆಂದು ತೋರುತ್ತಿದೆ. ಮುಂದೆ ನನ್ನಿಂದ ನಿನಗೆ ಸಂಭವಿಸಬಹುದಾದ ಕಷ್ಟವನ್ನಾದರೂ ನೀನು ಆಲೋಚಿಸಿ ತಿಳಿಯದಿರುವೆ ! ಆದರೇನು ? ಇರಲಿ ! ಇನ್ನು ನನ್ನ ಶಕ್ತಿಯನ್ನು ನಿನಗೆ ತೋರಿಸುವೆನು ನೋಡು !" ಎಂದನು. ಹೀಗೆಂದು ಹೇಳಿದೊಡನೆ ಮಹಾ ಬಲಾಢ್ಯನಾದ ರಾಮನು [2] ಬ್ರಹ್ಮದಂಡಕ್ಕೆ ಸಮಾನವಾದ ಒಂದು ಕ್ರೂರಬಾಣವನ್ನು ತೆಗೆದು ಅದನ್ನು ಬ್ರಹ್ಮಾಸ್ತ್ರಮಂತ್ರದಿಂದ ಅಭಿಮಂತ್ರಿಸಿ, ಧನುಸ್ಸಿನಲ್ಲಿ ಸಂಧಾನ ಮಾಡಿ ಅದರ ನಾಣನ್ನೆಳೆದನು ರಾಮನು ಬ್ರಹ್ಮಾಸ್ತ್ರವನ್ನು ಪ್ರಯೋಗಿಸಿ ನಾಣನ್ನೆಳೆ ದೊಡನೆ, ಬ್ರಹ್ಮಾಂಡಕಟಾಹವು ಭೇದಿಸಿದಂತಾಯಿತು. ಭೂಮ್ಯಾಕಾಶಗಳೆರಡೂ ಎರಡು ಹೋಳಾಗುವಂತೆ ತೋರಿತು. ಪರ್ವತಗಳೆಲ್ಲವೂ ನಡುಗಿಹೋದುವು. ಸಮಸ್ತ ಲೋಕಕ್ಕೂ ಗಾಂಢಾಂಧಕಾರವು ಮುಚ್ಚಿದಂತಾಯಿತು. ಸಮಸ್ತದಿಕ್ಕುಗಳೂ ಮಲಿನ ವಾದುವು. ! ನದಿಗಳೂ, ಸರೋವರಗಳೂ ಕಲಗಿಹೋದವು. ಸೂರ್ಯಚಂದ್ರರಿಬ್ಬರೂ ನಕ್ಷತ್ರಗಳೊಡನೆ ವಕ್ರಗತಿಯಿಂದ ನಡೆಯಲಾರಂಭಿಸಿದರು. ಸೂರ್ಯಕಿರಣಗಳ ಪ್ರಕಾಶವೂ ತಗ್ಗಿತು. [2] ಉಲ್ಕೆಗಳಂತೆ ನಕ್ಷತ್ರಗಳು ಉದಿರುತಿದ್ದುವು. ಅಂತರಿಕ್ಷದಲ್ಲಿ ಮಹಾಧ್ವನಿಗಳೊಡನೆ [3]ನಿರ್ಘಾತವು ಹೊರಡುತಿತ್ತು. ಆಕಾಶದಲ್ಲಿ ಅವಹ ನಿವಾಹಾದಿ

---

1. ಇಲ್ಲಿ ಬ್ರಹ್ಮದಂಡವೆಂದರೆ ಬ್ರಹ್ಮಶಾಪವು. ಬ್ರಹ್ಮಶಾಪದಂತೆ ಅಮೋಘವಾದು ದೆಂದು ಭಾವವು. ಅಥವಾ ಬ್ರಹ್ಮದಂಡವೆಂದರೆ ಭಯಂಕರವಾದ ಒಂದು ಉತ್ಪಾತಕೇತು ವಿಶೇಷವು. ನಾರದಸಂಹಿತೆಯಲ್ಲಿ "ಪಿತಾಮಹಾತ್ಮಜಃ ಕ್ರೂರಸ್ತ್ರಿವರ್ಣಶ್ಶಿಖರಾನ್ವಿತಃ । ಬ್ರಹ್ಮದಂಡಾಹ್ವಯಃ ಕೇತುಸ್ಸರ್ವಭೂತವಿನಾಶನಃ" ಬ್ರಹ್ಮನಿಂದ ಹುಟ್ಟಿ, ಕ್ರೂರವಾಗಿ, ಮೂರುವರ್ಣವುಳ್ಳದಾಗಿ, ಶಿಖರದಿಂದ ಕೂಡಿದುದು ಬ್ರಹ್ಮದಂಡನಾಮಕವಾದ ಕೇತು ವೆಂದೂ, ಇದು ಸರ್ವಭೂತವಿನಾಶಕವೆಂದೂ ಹೇಳಲ್ಪಟ್ಟಿದೆ.

2. ಉಲ್ಕೆಯೆಂದರೆ "ಉಲ್ಕಾ ಶಿರಸಿ ವಿಶಾಲಾ ನಿಪತಂತೀ ವರ್ಧತೇಚ ತನುಪುಚ್ಛಾ" ಅಗಲವಾದ ತಲೆಯಿಂದಲೂ, ಸಣ್ಣಬಾಲದಿಂದಲೂ ಕೂಡಿ ಕೆಳಗೆ ಬೀಳುತ್ತ ಬೀಳುತ್ತ ಹೆಚ್ಚಿ ಬರುವುದು ಉಲ್ಕೆ (ಅಥವಾ ಆಕಾಶದ ಕೊಳ್ಳಿ) ಯೆಂದು ವರಾಹಮಿಹಿರವಚನವು.

3. ನಿರ್ಘಾತವೆಂದರೆ, "ಪವನಃ ಪವನಾಭಿಹತೋ ಗಗನಾದವನೌ ಯದಾ ಸಮಾ- ಪತತಿ! ಭವತಿ ತದಾ ನಿರ್ಘಾತಸ್ಸಚ ಪಾಪೋ ದೀರ್ಘಖಗವಿರುತಃ" ಬಿರುಗಾಳಿಯು ಒಂದಕ್ಕೊಂದು ಇದಿರಿದಿರಾಗಿ ಬಂದು ಅಪ್ಪಳಿಸಿ ಆಕಾಶದಿಂದ ಕೆಳಕ್ಕಿಳಿಯುವಾಗ ಭಯಂ ಕರವಾಗಿ ಹುಟ್ಟುವ ಧ್ವನಿಯೇ ನಿರ್ಘಾತವೆನಿಸುವುದೆಂದು ವರಾಹಮಿಹಿರರು.

ಸಪ್ತಮಾರುತಗಳೂ ಕ್ರಮವಾಗಿ ಮಹಾವೇಗದಿಂದ ಬೀಸುತಿದ್ದುವು. ವಾಯುವೇಗದಿಂದ ಚದರಿದ ಮೇಘಗಳು ಆಕಾಶವೆಲ್ಲವನ್ನೂ ವ್ಯಾಪಿಸಿದುವು. ದೊಡ್ಡ ವೃಕ್ಷಗಳೆಲ್ಲವೂ ಮುರಿದುಬಿದ್ದುವು. ಪರ್ವತಶಿಖರಗಳೂ, ಖಂಡ ಪರ್ವತಗಳೂ ವಾಯುವೇಗದಿಂದ ಉರುಳುತಿದ್ದುವು. ಆಕಾಶದಲ್ಲಿ ಮಹಾಮೇಘಗಳು ಒಂದಾಗಿ ಸೇರಿ ಮಹಾಧ್ವನಿಯೊಡನೆ ಮಿಂಚಿನ ಕಿಡಿಗಳನ್ನು ಕಕ್ಕುತಿದ್ದುವು. ಆ ಕಿಡಿಗಳು [1]ಮಹಾಶನಿಗಳಂತೆ ನೆಲಕ್ಕೆ ಬೀಳುತಿದ್ದುವು. ಪ್ರಪಂಚದಲ್ಲಿ ಕಣ್ಣಿಗೆ ಕಾಣುವ ಮನುಷ್ಯಾದಿಭೂತಗಳೂ, ಅದೃಶ್ಯಗಳಾದ ಪಿಶಾಚಾದಿ ಭೂತಗಳೂ ಭಯದಿಂದ ನಡುಗಿ ತತ್ತಳಿಸುತ್ತ ಭಯಂಕರ ಧ್ವನಿಯೊಡನೆ ನೆಲಕ್ಕುರುಳಿ ದುಃಖದಿಂದಲೂ ಸಂಕಟದಿಂದಲೂ ನಿಶ್ಚಲವಾಗಿ ಬಿದ್ದಿದ್ದುವು. ರಾಮನು ಬ್ರಹ್ಮಾಸ್ತ್ರವನ್ನು ಸಂಧಾನಮಾಡಿದಾಗಲೇ ಆ ಮಹಾಸಮುದ್ರವು ತನ್ನಲ್ಲಿರುವ ಸಮಸ್ತ ಭೂತಗಳೊಡನೆಯೂ ಸರ್ಪಗಳೊಡನೆಯೂ, ರಾಕ್ಷಸರೊಡನೆಯೂ ದೊಡ್ಡ ದೊಡ್ಡ ಅಲೆಗಳೊಡನೆಯೂ, ಉಲ್ಲೋಲಕಲ್ಲೋಲವಾಗಿ, ಮೊದಲು ರಾಮನು ಸಾಮಾನ್ಯವಾಗಿ ತನ್ನ ಮೇಲೆ ಬಾಣವನ್ನು ಬಿಟ್ಟಾಗ ತನಗುಂಟಾದ ದುರವಸ್ಥೆಗಿಂತಲೂ ಅತಿ ಭಯಂಕರವಾದ ಸ್ಥಿತಿಯನ್ನು ಹೊಂದಿತು. ರಾಮನು ಬ್ರಹ್ಮಾಸ್ತ್ರವನ್ನು ಸಂಧಿಸಿದೊಡನೆ ಸಮುದ್ರ ಜಲಪ್ರವಾಹವು ತನ್ನ ಎಲ್ಲೆಯನ್ನೇ ಮೀರಿ ಅತ್ತಲಾಗಿ ಒಂದು ಯೋಜನದೂರಕ್ಕೆ ಒತ್ತಿಹೋಯಿತು. ಒಂದು ಯೋಜನೆಯಷ್ಟು ಕೆಳಕ್ಕಿಳಿದು ಹೋಯಿತು. ಆಗ ಪರಂತಪನಾದ ರಾಮನಾದರೋ, ಹೀಗೆ ಭಯದಿಂದ ಪಲಾಯನಮಾಡುತ್ತಿರುವ ಆ ಸಮುದ್ರನ ಮೇಲೆ ಮರುಕದಿಂದ ಮುಂದೆ ಬಾಣವನ್ನು ಪ್ರಯೋಗಿಸಲಾರದೆ ನಿಂತಿರಲು, ಇಷ್ಟರಲ್ಲಿ ಉಬ್ಬಿ ಬರುತ್ತಿದ್ದ ಜಲಪ್ರವಾಹದ ಮಧ್ಯದಿಂದ ಸಮುದ್ರರಾಜನು ಮೇಲಕ್ಕೆದ್ದು ಮೇರುಪರ್ವತದಿಂದ ಉದಿಸಿಬರುವ ಸೂರ್ಯನಂತೆ ಪ್ರಕಾಶಿಸಿದನು. ಆಗ ಸಮುದ್ರನು ನುಣುಪಾದ ವೈಡೂರ್ಯಮಣಿಯಂತೆ ಬಣ್ಣವುಳ್ಳವನಾಗಿಯೂ, ಮೇಲಾದ ಸ್ವರ್ಣಾಭರಣಗಳಿಂದಲಂಕೃತನಾಗಿಯೂ, ಕೆಂಪುಬಟ್ಟೆಯನ್ನೂ ಕೆಂಪಾದ ಪುಷ್ಪಮಾಲಿಕೆಯನ್ನೂ ಧರಿಸಿದವನಾಗಿಯೂ ಕಮಲದಳದಂತೆ ಕಣ್ಣುಳ್ಳವನಾಗಿಯೂ ಗೋಚರಿಸಿದನು. ಅವನ ಸುತ್ತಲೂ

---

1. ಅಶನಿಯೆಂದರೆ " ಅಶನಿಸ್ಸ್ವನೇನ ಮಹತಾ ಯುಕ್ತಾ ನೃಗಜಾಶ್ವಪಶುತರುಮುಖೇಷು। ನಿಪತತಿ ವಿದಾರಯಂತೀ ಧರಾತಲಂ ಚಕ್ರಸಂಸ್ಥಾನಾ " ಮಹಾಧ್ವನಿಯಿಂದ ಕೂಡಿ ಚಕ್ರಾಕಾರವಾಗಿ ಮನುಷ್ಯ ಗಜಾದಿಗಳ ಮುಖದಲ್ಲಿ ಬೀಳುತ್ತ ಭೂಮಿಯನ್ನು ಭೇದಿಸಿಕೊಂಡು ಹೋಗುವುದು ಅಶನಿಯೆಂದು ವರಾಹಮಿಹಿರರು.

ಉರಿಯನ್ನು ಕಾರುವ ಮಹಾಸರ್ಪಗಳು ಹೆಡೆಯಾಡುತಿದ್ದುವು. ಅವನ ತಲೆಯಲ್ಲಿ ಸಮಸ್ತಪುಷ್ಪಗಳನ್ನೂ ಸೇರಿಸಿ ಕಟ್ಟಿದ ಪುಷ್ಪಮಾಲಿಕೆಯು ಶೋಭಿಸುತಿತ್ತು. ಸ್ವರ್ಣಾಭರಣಗಳಿಂದಲೂ ಕುಂದಣದೊಡವೆಗಳಿಂದಲೂ ರತ್ನಖಚಿತಗಳಾದ ಇತರ ಭೂಷಣಗಳಿಂದಲೂ ಅಲಂಕೃತನಾಗಿನಿಂತಿದ್ದ ಆ ಸಮುದ್ರರಾಜನು, ಅನೇಕ ಗೈರಿಕಾದಿಧಾತುಗಳಿಂದ ಶೋಭಿತವಾದ ಹಿಮವತ್ಪರ್ವತದಂತೆ ತೋರುತಿದ್ದನು. ಅವನ ಕಂಠದಲ್ಲಿ ಒಂದೆಳೆಯ ಮುತ್ತಿನ ಹಾರವೂ ಅದರ ನಡುವೆ ಮಹಾವಿಷ್ಣುವಿನ ಕೌಸ್ತುಭಕ್ಕೆ ಒಡಹುಟ್ಟಿದ ಕೆಂಪುಕಲ್ಲಿನ ಪದಕವೂ ಆತನ ವಿಸ್ತಾರವಾದ ಎದೆಯಲ್ಲಿ ಅತ್ಯಂತಕಾಂತಿ ವಿಶಿಷ್ಟವಾಗಿ ಹೊಳೆಯುತಿತ್ತು. ಮತ್ತು ಸುತ್ತಿಸುತ್ತಿ ಬರುವ ತರಂಗ ಪರಂಪರೆಗಳಿಂದಲೂ ತನಗೆ ಅನುಚರರಾದ ವಾತಮೇಘಗಳಿಂದಲೂ, ಅಲ್ಲಲ್ಲಿ ಬೆದರಿ ಬೀಳುತ್ತಿರುವ ಮಹಾಗ್ರಾಹಗಳಿಂದಲೂ ಭಯದಿಂದ ತತ್ತಳಿಸುವ ಪನ್ನಗರಾಕ್ಷಸಾದಿ ದೇವಯೋನಿಗಳಿಂದಲೂ ಕೂಡಿದವನಾಗಿ, (ನಾನಾವಿಧ ಸುಂದರ ರೂಪವುಳ್ಳ ಗಂಗೆ, ಸಿಂಧು ಮೊದಲಾದ ನದೀದೇವತೆಗಳಿಂದಲೂ ಪರಿವೇಷ್ಟಿತನಾಗಿ) ರಾಮನಿಗೆ [1]ಪ್ರತ್ಯಕ್ಷನಾದನು. ವೀರ್ಯವಂತನಾದ ಆ ಸಮುದ್ರನು ತಾನಾಗಿಯೇ ರಾಮನ ಹೆಸರನ್ನು ಹಿಡಿದು ಕೂಗಿ ಕರೆಯುತ್ತ ಮುಂದೆ ಬಂದು ಧನುರ್ಬಾಣಗಳನ್ನು ಧರಿಸಿನಿಂತಿದ್ದ ಆ ರಘುಕುಲೋತ್ತಮನಿಗೆ ಕೈಮುಗಿದು ವಿನಯದಿಂದ ವಿಜ್ಞಾಪಿಸುವನು. "ಎಲೆ ಸೌಮ್ಯನೆ! ಪ್ರಪಂಚದಲ್ಲಿ ಪೃಥಿವಿ, ಅಪ್ಪು, ತೇಜಸ್ಸು ವಾಯು, ಆಕಾಶಗಳೆಂಬ ಪಂಚಭೂತಗಳೂ ತಮತಮಗೆ ಸ್ಥಿರವಾದ ಒಂದೊಂದು [2]ಮರ್ಯಾದೆಯನ್ನು ಹಿಡಿದು ತಮ್ಮ ತಮ್ಮ ಸ್ವಭಾವದಿಂದಿರುವುವು. ಇದು ನಿನಗೆ ತಿಳಿಯದ ವಿಷಯವಲ್ಲ. ಅದರಂತೆ ನಾನೂ ಇತರರಿಗೆ ದಾಟಲಸಾಧ್ಯನಾಗಿರುವುದು ನನಗೆ ಸ್ವಭಾವವೇ ಹೊರತು ಬೇರೆಯಲ್ಲ. ನಾನು ಈ ಸ್ವಭಾವವನ್ನು ಬಿಟ್ಟು, ಹೋಗಬಹುದೆ ? ಆಳವಿಲ್ಲದೆ ಇತರರಿಂದ ಸುಲಭವಾಗಿ ದಾಟಿಹೋಗುವುದಕ್ಕೆ ತಕ್ಕಂತೆ ನಾನು ನನ್ನ ಸ್ವಭಾವವನ್ನು ವ್ಯತ್ಯಾಸಪಡಿಸಿಕೊಂಡರೆ,

---

1. ಸಮುದ್ರನು ತನಗೆ ವಿರೋಧಿಗಳಾದ ದ್ರುಮಕುಲ್ಯವಾಸಿಗಳನ್ನು ಕೊಲ್ಲಿಸುವುದಕ್ಕಾಗಿಯೇ, ರಾಮನು ಬ್ರಹ್ಮಾಸ್ತ್ರವನ್ನು ಸಂಧಾನಮಾಡುವವರೆಗೂ ತಾನು ಕಾಣಿಸಿಕೊಳ್ಳದೆ ತಡಮಾಡಿದನೆಂದು ತಿಳಿಯಬೇಕು.

2. ಇಲ್ಲಿ ಭೂಮಿಗೆ ಕಾಠಿನ್ಯವೂ, ವಾಯುವಿಗೆ ಸದಾಗಮನ ತಿರ್ಯಗ್ಗಮನಗಳೂ, ಆಕಾಶಕ್ಕೆ ಅವಕಾಶಪ್ರದಾನವೂ, ನೀರಿಗೆ ಅಗಾಧತ್ವವೂ, ಅಗ್ನಿಗೆ ಊರ್ಧ್ವಜ್ವಲನವೂ ಸಹಜಸ್ವಭಾವವೆಂದು ತಿಳಿಯಬೇಕು.

ವಿರುದ್ಧಸ್ವಭಾವವನ್ನು ಹೊಂದಿದಂತಾಗುವುದಲ್ಲವೆ ? ಇದ್ದ ಸ್ಥಿತಿಯನ್ನು ನಿನಗೆ ತಿಳಿಸಿರುವೆನು. ಇದಕ್ಕಾಗಿಯೇ ನಾನು ನಿನಗೆ ಕಾಣಿಸಿಕೊಳ್ಳದಿದ್ದೆನು. ರಾಮಾ ! ಒಂದು ವೇಳೆ ನೀನು "ಜಲವನ್ನಾದರೂ ಸ್ತಂಭಿಸಿಟ್ಟುಕೊಂಡು ನನಗೆಮಾತ್ರ ದಾರಿಯನ್ನು ಕೊಡಬಾರದೆ ?" ಎಂದು ಕೇಳಬಹುದು. ನೀನು ರಾಜಕುಮಾರನಾದುದರಿಂದ ಲೋಕದಲ್ಲಿ ಅವರವರ ಮರ್ಯಾದೆಯನ್ನು ನೀನೇ ನಿರ್ಣಯಿಸತಕ್ಕವನು. ಇತರರಿಗೆ ಬಾಧೆಯಿಲ್ಲದಂತೆ ರಕ್ಷಿಸತಕ್ಕವನೂ ನೀನೇ ಅಲ್ಲವೇ? ಹೀಗಿರುವಾಗ ನಾನು ಕಾಮದಿಂದಲಾಗಲಿ ಲೋಭದಿಂದಲಾಗಲಿ, ನಿನ್ನ ಭಯಕ್ಕಾಗಲಿ, ಅನೇಕಜಲಜಂತುಗಳಿಗಾಶ್ರಯವಾದ ನನ್ನ ಜಲವನ್ನು ಸ್ತಂಭಿಸಿಟ್ಟ ಪಕ್ಷದಲ್ಲಿ, ಆ ಪ್ರಾಣಿಗಳಿಗೆಲ್ಲಕ್ಕೂ ಬಾಧೆಯುಂಟಾಗುವುದಲ್ಲವೆ! ಆದುದರಿಂದ ನನ್ನ ನೀರನ್ನು ನಾನು ಎಷ್ಟು ಮಾತ್ರವೂ ಸ್ತಂಭಿಸಲಾರೆನು. ಆದರೆ ಇದರಿಂದ ನಿನ್ನ ಕಾರ್ಯವು ಕೆಡುವುದೆಂದೆಣಿಸಬೇಡ! ನನ್ನಿಂದ ಸಾಧ್ಯವಾದ ಮಟ್ಟಿಗೆ ನಿನಗೆ ಸಹಾಯಮಾಡುವೆನು. ನಿನ್ನ ಸೇನೆಯು ಈ ನನ್ನ ಜಲಪ್ರವಾಹವನ್ನು ದಾಟಿಹೋಗುವವರೆಗೂ ನನ್ನಲ್ಲಿರುವ ಮೀನು ಮೊಸಳೆ ಮುಂತಾದ ಜಲಜಂತುಗಳಾವುವೂ ಬಾಧಿಸದಂತೆ ತಡೆದಿಡಬಲ್ಲೆನು. ಇಷ್ಟು ಸಹಾಯವನ್ನು ಮಾತ್ರ ನಾನು ಮಾಡಬಹುದು ಮತ್ತು ಈ ವಾನರರು ಸಮುದ್ರವನ್ನು ದಾಟುವ ವಿಷಯದಲ್ಲಿ ನಾನು ಬೇರೊಂದುವಿಧವಾದ ಸಹಾಯವನ್ನೂ ಮಾಡಬಹುದು. ಇವರು ಸೇತುವನ್ನು ಕಟ್ಟುವುದಕ್ಕಾಗಿ ಅದಕ್ಕೆ ಬೇಕಾದ ಸಾಮಗ್ರಿಗಳನ್ನು ನನ್ನ ಮೇಲೆ ಸಂಗ್ರಹಿಸಿಟ್ಟರೂ, ಅದನ್ನು ಚದರಿಸದೆ ಸುಸ್ಥಿರವಾಗಿ ನಿಲ್ಲಿಸಿಕೊಳ್ಳುವೆನು. ನೀನು ಸೇತುವನ್ನು ಕಟ್ಟಿಸಬಹುದು ಎಂದನು. ಆಗ ರಾಮನು ಸಮುದ್ರವನ್ನು ನೋಡಿ "ಎಲೆ ಸಮುದ್ರರಾಜನೆ ! ಒಳ್ಳೆಯದು ! ಹಾಗಿದ್ದ ಪಕ್ಷದಲ್ಲಿ ಈಗ ನಾನು ನಿನ್ನ ಮೇಲೆ ಪ್ರಯೋಗಿಸುವುದಕ್ಕಾಗಿ ಈ ಬ್ರಹ್ಮಾಸ್ತ್ರವನ್ನು ಬಿಲ್ಲಿನಲ್ಲಿ ಸಂಧಾನಮಾಡಿರುವೆನು. ಈ ಬಾಣವು ಅಮೋಘವಾದುದು ! ಇದು ವ್ಯರ್ಥವಾಗತಕ್ಕುದಲ್ಲ. ಇದನ್ನು ಎಲ್ಲಿಗೆ ಬಿಡಲಿ? ಹೇಳು" ಎಂದನು. ಆಗ ಸಮುದ್ರನು ರಾಮನು ಬಿಲ್ಲಿನಲ್ಲಿ ಸಂಧಾನ ಮಾಡಿದ್ದ ಬಾಣವನ್ನು ನೋಡಿ, ತನ್ನಲ್ಲಿ ರಾಮನು ಪ್ರಸನ್ನನಾದುದಕ್ಕಾಗಿ ಉಲ್ಲಾಸ ಹೊಂದಿದ ಮುಖವುಳ್ಳವನಾಗಿ, ರಾಮನನ್ನು ಕುರಿತು, "ಎಲೈ ರಾಜಪುತ್ರನೆ! ಇಲ್ಲಿಗೆ ಸಮೀಪವಾಗಿ ಉತ್ತರಭಾಗದಲ್ಲಿ ಬಹಳರಮಣೀಯವಾದ ದ್ರುಮಕುಲ್ಯವೆಂಬ ಒಂದು ಪ್ರದೇಶವುಂಟು. ಅದು ಅತ್ಯಂತಪರಿಶುದ್ಧವಾದುದು. ನಿನ್ನಂತೆಯೆ ಲೋಕದಲ್ಲಿ ಮಹಾ ಪ್ರಸಿದ್ಧಿಯನ್ನುಹೊಂದಿರುವುದು. ಆದರೆ ಆ ಸ್ಥಳದಲ್ಲಿ ಘೋರರೂಪಿಗಳಾಗಿಯೂ

*

ಕ್ರೂರಕರ್ಮಿಗಳಾಗಿಯೂ ಇರುವ ಕೆಲವು ಶೂದ್ರರು ವಾಸಮಾಡುತ್ತಿರುವರು. ಅವರು ನನಗೆ ಕೇವಲಶತ್ರುಗಳು! ಬಹಳ ಪಾಪಾತ್ಮರು. ಅವರು ನನ್ನನ್ನು ಮುಟ್ಟಿ ನನ್ನ ನೀರನ್ನು ಕುಡಿಯುತ್ತಿರುವರು. ಪಾಪಕರ್ಮಿಗಳಾದ ಆ ದುಷ್ಟರ ಸ್ಪರ್ಶವನ್ನು ನಾನು ಸಹಿಸಲಾರೆನು. ಆದುದರಿಂದ ಅಮೋಘವಾದ ಈ ನಿನ್ನ ಬಾಣವನ್ನು ಅವರಮೇಲೆ ಪ್ರಯೋಗಿಸಿ ಸಾರ್ಥಕಪಡಿಸು" ಎಂದನು. ಈ ಮಾತನ್ನು ಕೇಳಿ ರಾಮನು ಸಮುದ್ರರಾಜನ ಇಷ್ಟದಂತೆ ಅವನು ಕೈ ತೋರಿಸಿದಕಡೆಗೆ ತನ್ನ ಬಾಣವನ್ನು ಪ್ರಯೋಗಿಸಿಬಿಟ್ಟನು. ಸಿಡಿಲಿಗೆ ಸಮಾನವಾಗಿ ಜ್ವಲಿಸುತಿದ್ದ ಆ ಬಾಣವನ್ನು ಪ್ರಯೋಗಿಸಿದೊಡನೆ, ಆ ಸ್ಥಳವೆಲ್ಲವೂ ಅದರಿಂದ ದಗ್ಧವಾಗಿ ಮರುಕಾಂತಾರವೆಂದು ಲೋಕದಲ್ಲಿ ಪ್ರಸಿದ್ಧವಾಯಿತು. ಆ ಬಾಣದಲಗು ಭೂಮಿಗೆ ನಾಟಿಕೊಂಡು ಹೋಗುವಾಗ ಆ ರಂಧ್ರದ ಮೂಲಕವಾಗಿ ಪಾತಾಳದಿಂದ ನೀರು ಮೇಲಕ್ಕೆ ಹಾರಿತು. ಅದರಿಂದ ಮಹಾಧ್ವನಿಯೊಂದು ಹುಟ್ಟಿತು! ಆ ರಂಧ್ರವೇ ಒಂದು ದೊಡ್ಡಬಾವಿಯಂತಾಯಿತು. ಆ ರಂಧ್ರಕ್ಕೆ ವ್ರಣಕೂಪವೆಂದೂ ಹೆಸರಾಯಿತು. ಈ ವ್ರಣಕೂಪದಿಂದ ನೀರು ಮೇಲಕ್ಕೆ ಹಾರಿ ಎಡೆಬಿಡದೆ ಪ್ರವಹಿಸುತ್ತಿರುವುದರಿಂದ ಸಮುದ್ರಜಲದಂತೆ ಯಾವಾಗಲೂ ಅಶೋಷ್ಯವಾಗಿ ಕಾಣುತ್ತಿರುವುದು. ಆ ಸ್ಥಳದಲ್ಲಿ ರಾಮಬಾಣವು ಬಿದ್ದುದರಿಂದುಂಟಾದ ಮಹಾಧ್ವನಿಯು ಅತ್ಯಂತ ಭಯಂಕರವಾಯಿತು. ದ್ರುಮಕುಲ್ಯವೆಂಬ ಪ್ರದೇಶದಲ್ಲಿ ಮೊದಲು ಶೂದ್ರಾದಿಪಾಪಜಾತಿಗಳಿಂದ ಸ್ಪರ್ಶಿಸಲ್ಪಡುತ್ತಿದ್ದ ನೀರೆಲ್ಲವೂ, ರಾಮನು ಬಿಟ್ಟ ಬಾಣದಿಂದ ಕ್ಷಣಮಾತ್ರದಲ್ಲಿ ಶೋಷಿಸಿಹೋಗಲು, ಮೂರು ಲೋಕಗಳಲ್ಲಿಯೂ ಆ ಸ್ಥಳವು ಮರುಕಾಂತಾರವೆಂದೇ ಪ್ರಸಿದ್ಧವಾಯಿತು. [1]ಹೀಗೆ ದಶರಥಪುತ್ರನಾದ ರಾಮನು ಸಮುದ್ರದನಡುವೆ ಇದ್ದ ಮರುಕಾಂತಾರವನ್ನು ದಹಿಸಿ, ಕೊನೆಗೆ ಪ್ರಸನ್ನನಾಗಿ, ಆ ಮರುಕಾಂತಾರಕ್ಕೆ ವರವನ್ನು ಕೊಟ್ಟಿರುವನು. ಹೀಗೆ ರಾಮನು ವರವನ್ನು ಕೊಟ್ಟಮೇಲೆ, ಆ ಮರುಕಾಂತಾರವು ಪಶುಗಳಿಗೆ ಬೇಕಾದ ಗರಿಕೆ ಮೊದಲಾದುವುಗಳಿಂದ ಸಮೃದ್ಧವಾಗಿಯೂ, ರೋಗನಿವಾರಕವಾಗಿಯೂ, ಬಗೆ

1. ಇಲ್ಲಿ "ಶೋಷಯಿತ್ವಾ ತತಃ ಕುಕ್ಷಿಂ......ವರಂ ತಸ್ಮೈ ದದೌ ವಿದ್ವಾನ್ಮರವೇಽಮರವಿಕ್ರಮಃ" ಎಂದು ಮೂಲವು. ಮನುಷ್ಯ ಸ್ವಭಾವವುಳ್ಳ ರಾಮನಿಗೆ ವರದಾನಶಕ್ತಿಯೆಲ್ಲಿ? " ಎಂಬ ಭ್ರಾಂತಿಯನ್ನು ನಿವಾರಿಸುವುದಕ್ಕಾಗಿಯೇ "ಅಮರವಿಕ್ರಮನೆಂಬ ವಿಶೇಷಣವು. ಇಲ್ಲಿ "ಶೋಷಯಿತ್ವಾ" ಎಂಬುದಕ್ಕೆ "ಮೋಕ್ಷಯಿತ್ವಾ" ಎಂಬ ಪಾಠಾಂತರವೂ ಉಂಟು. ಈ ಪಾಠದಲ್ಲಿ "ಶೂದ್ರಸ್ಪರ್ಶದಿಂದ ಬಿಡಿಸಿ" ಎಂದರ್ಥವು.

ಬಗೆಯ ಹಣ್ಣುಗಳಿಂದಲೂ ಹೂಗಳಿಂದಲೂ, ಮಧುಪದಾರ್ಥಗಳಿಂದಲೂ ತುಂಬಿದುದಾಗಿಯೂ, ತುಪ್ಪ, ಹಾಲು, ಸುಗಂಧದ್ರವ್ಯಗಳು, ಬಗೆಬಗೆಯ ಮೂಲಿಕೆಗಳು ಮುಂತಾದ ಸಮಸ್ತಭೋಗ್ಯದ್ರವ್ಯಗಳಿಂದಲೂ ಶೋಭಿತವಾಯಿತು. ರಾಮನ ವರಪ್ರದಾನದಿಂದ ಅಲ್ಲಿನ ಪ್ರದೇಶವೆಲ್ಲವೂ ಈಗಲೂ ಶುಭಕರವಾಗಿಯೇ ಪ್ರಕಾಶಿಸುತ್ತಿರುವುದು. ಆಮೇಲೆ ಸಮುದ್ರನು ರಾಮನನ್ನು ಕುರಿತು, "ಎಲೆ ಸೌಮ್ಯನೆ! ಇದೋ! ಈ ನಳನೆಂಬವನು ವಿಶ್ವಕರ್ಮನ ಮಗನು. ಇವನ ತಂದೆಯು ತನ್ನ ಪತ್ನಿಗೆ "ನಿನಗೆ ನನ್ನಂತಹ ಕುಮಾರನೇ ಹುಟ್ಟಲಿ" ಎಂದು ವರವನ್ನು ಕೊಟ್ಟುದರಮೇಲೆ, ಈತನು ವಿಶ್ವಕರ್ಮನಿಗೆ ಸಮಾನನಾಗಿಯೇ ಹುಟ್ಟಿರುವನು. ಶಿಲ್ಪ ವಿದ್ಯೆಯಲ್ಲಿ ತನ್ನ ತಂದೆಗೆ ಸಾಟಿಯಾಗಿರುವನು. ಈ ನಳನೆಂಬ ವಾನರನು ನಿಶ್ಚಿಂತೆಯಿಂದ ನನ್ನ ಮೇಲೆ ಸೇತುವನ್ನು ಕಟ್ಟಲಿ! ಆ ಸೇತುವನ್ನು ಮುಳುಗಿಸದಂತೆ ನಾನು ಧರಿಸುವೆನು! ವಿಶ್ವಕರ್ಮನಂತೆಯೇ ಈತನು ನನಗೆ ಪ್ರೀತಿಪಾತ್ರನು" ಎಂದನು. ಸಮುದ್ರನು ಈ ಮಾತನ್ನು ಹೇಳಿ ಹಾಗೆಯೇ ಅಂತರ್ಧಾನವನ್ನು ಹೊಂದಿ ಕಣ್ಮರೆಯಾದನು. ಆಗ ವಾನರಶ್ರೇಷ್ಠನಾಗಿಯೂ, ಬಲಾಢ್ಯನಾಗಿಯೂ, ಮಹಾಸಾಹಸಿಗನಾಗಿಯೂ ಇರುವ ನಳನು, ಮೇಲಕ್ಕೆದ್ದು ರಾಮನ ಮುಂದೆ ನಿಂತು "ಎಲೈ ರಾಜನೆ! ವಿಸ್ತಾರವಾದ ಈ ಸಮುದ್ರದಲ್ಲಿ ನಾನು ಸೇತುವನ್ನು ಕಟ್ಟುವೆನು. ಈ ಸಮುದ್ರನು ಹೇಳಿದುದು ನಿಜವು. ನನ್ನ ತಂದೆಯ ಸಾಮರ್ಥ್ಯವೇ ನನಗುಂಟು. ಆ ಶಕ್ತಿಯಿಂದಲೇ ಈಗ ಈ ಕಾರ್ಯವನ್ನು ನೆರವೇರಿಸುವೆನು" ಎಂದು ಹೇಳಿ, ಆಮೇಲೆ ಅಲ್ಲಿದ್ದ ಸಮಸ್ತ ವಾನರರನ್ನೂ ನೋಡಿ "ಎಲೈ ವಾನರರೆ! ಲೋಕದಲ್ಲಿ ಪುರುಷನಿಗೆ ದಂಡೋಪಾಯವೇ ಮೇಲಾದ ಉಪಾಯವೆಂದು ನನ್ನ ಅಭಿಪ್ರಾಯವು. ಕೃತಜ್ಞತೆಯಿಲ್ಲದವರಲ್ಲಿ ತಾಳ್ಮೆಯಾಗಲಿ ಸಾಮವಾಗಲಿ, ದಾನವಾಗಲಿ, ಯಾವುದೂ ಕೆಲಸಕ್ಕೆ ಬಾರದು. ಈ ಸಂದರ್ಭಗಳಲ್ಲಿ ತಾಳ್ಮೆಯನ್ನು ಸುಡಬೇಕು. ಇದಕ್ಕೆ ನಮಗೆ ಬೇರೆ ನಿದರ್ಶನವೇಕೆ! ಭಯಂಕರನಾದ ಈ ಮಹಾಸಮುದ್ರನು ಸಗರನಿಂದಲೇ ನಿರ್ಮಿಸಲ್ಪಟ್ಟವನು. ಹಾಗಿದ್ದರೂ ಈ ಸಮುದ್ರನಿಗೆ ಉಪಕಾರಸ್ಮರಣೆಯಿಲ್ಲದೆ ಹೋಯಿತು. ರಾಮನು ದಂಡಿಸುವನೆಂಬ ಭಯದಿಂದಲೇ ಅವನು ನಮಗೆ ಸ್ವಾಧೀನನಾದನು. ಈತನಿಗೆ ಸೇತುಬಂಧನದ ಕಾರ್ಯವನ್ನು ನೋಡಬೇಕೆಂಬ ಆಶೆಯೂ ಹುಟ್ಟಿದಂತಿದೆ. ಅದರಿಂದಲೇ ನಮಗೆ ಅವಕಾಶವನ್ನು ಕೊಟ್ಟಿರುವನೇ ಹೊರತು ಬೇರೆಯಲ್ಲ! ಮೊದಲು ನನ್ನ ತಂದೆ

ಯಾದ ವಿಶ್ವಕರ್ಮನು ಮಂದರಪರ್ವತದಲ್ಲಿ ನನ್ನ ತಾಯಿಗೆ ತನ್ನಂತೆಯೇ ಪುತ್ರನು ಹುಟ್ಟುವಂತೆ ವರವನ್ನು ಕೊಟ್ಟುದೂ ನಿಜವು. ನಾನು ವಿಶ್ವಕರ್ಮನಿಗೆ ಮಗನು. ಶಿಲ್ಪವಿದ್ಯೆಯಲ್ಲಿಯೂ ನಾನು ಆತನಿಗೆ ಸಾಟಿಯಾಗಿರುವೆನು. ಆದರೆ ಇದುವರೆಗೆ ಆ ವಿಷಯವೊಂದೂ ನನ್ನ ನೆನಪಿಗೆ ಬಾರದೆಹೋಯಿತು. ಈ ಸಮುದ್ರರಾಜನೇ ನನಗೆ ಈ ವಿಷಯವನ್ನು ನೆನಪಿಗೆ ತಂದಂತಾಯಿತು. ಇದೂ ಅಲ್ಲದೆ ನನ್ನ ಗುಣಗಳನ್ನು ನಾನಾಗಿಯೇ ಹೇಳಿಕೊಳ್ಳುವುದು ನನ್ನ ಸ್ವಭಾವವಲ್ಲ. ಈ ಸಮುದ್ರರಾಜನು ಹೇಳುವುದಕ್ಕೆ ಮೊದಲು ನಾನಾಗಿಯೇ ಅದನ್ನು ನಿಮಗೆ ತಿಳಿಸಿದ್ದರೂ, ಅದು ಆತ್ಮಸುತ್ತಿಯಾಗುತ್ತಿದ್ದುದರಿಂದ, ನಾನು ಈ ಮಹಾ ಕಾರ್ಯವನ್ನು ಆರಂಭಿಸುವ ವಿಷಯದಲ್ಲಿ ನಿಮಗೆ ನಂಬಿಕೆಯೂ ಹುಟ್ಟುತ್ತಿರಲಿಲ್ಲ. ಸಮುದ್ರದಲ್ಲಿ ಸೇತುವನ್ನು ಕಟ್ಟುವುದಕ್ಕೆ ನಿಜವಾಗಿಯೂ ನನಗೆ ಶಕ್ತಿಯುಂಟು. ಈಗಲೇ ನಮ್ಮ ಕಡೆಯ ಸಮಸ್ತವಾನರರೂ ಈ ಸೇತುಬಂಧನಕ್ಕೆ ತಕ್ಕ ಪ್ರಯತ್ನವನ್ನು ಮಾಡಲಿ!" ಎಂದನು. ಆಗ ಸಮಸ್ತವಾನರರೂ ರಾಮಾಜ್ಞೆ ಯನ್ನು ಪಡೆದು, ಅತ್ಯುತ್ಸಾಹದಿಂದ ಗುಂಪುಗುಂಪಾಗಿ ಸೇರಿ ಶತಸಹಸ್ರಸಂಖ್ಯೆ ಯಿಂದ ಅಲ್ಲಲ್ಲಿನ ಕಾಡುಗಳಿಗೆ ನುಗ್ಗಿದರು. ಹೀಗೆ ಪರ್ವತಾಕಾರವುಳ್ಳ ಅನೇಕ ವಾನರಶ್ರೇಷ್ಠರು ಕಾಡುಕಾಡಾಗಿ ಹೊರಟು, ಅಲ್ಲಲ್ಲಿರುವ ನಾನಾವೃಕ್ಷಗಳನ್ನು ಕಿತ್ತು ತಂದು ಸಮುದ್ರದ ಕಡೆಗೆ ಸೇರಿಸುತ್ತಿದ್ದರು. ಆ ವಾನರರು ಅಲ್ಲಲ್ಲಿ ಸಿಕ್ಕಿದ, ಸಾಲೆ, ಅಶ್ವಕರ್ಣ, ಆಲ, ಬದಿರು, ಗಿರಿಮಲ್ಲಿಕೆ, ತಾಳೆ, ಅರ್ಜುನ, ತಿಲಕ, ನೇಮಿ, ಬಿಲ್ವ, ಏಳಿಲೆಬಾಳೆ, ಪುಷ್ಪಭರಿತಗಳಾದ ಕರ್ಣಿಕಾರಗಳು, ಮಾವು, ಅಸುಗೆ, ಮುಂತಾದ ನಾನಾಬಗೆಯ ಮರಗಿಡಗಳನ್ನೆಲ್ಲಾ ಕಿತ್ತುತಂದು ಸಮುದ್ರಕ್ಕೆ ತುಂಬು ತಿದ್ದರು. ಆ ವಾನರರೊಬ್ಬೊಬ್ಬರೂ ಕಾರ್ಯಾತುರದಿಂದ ಕೆಲವು ಮರಗಳನ್ನು ಮೂಲಸಹಿತವಾಗಿಯೇ ಕೀಳುವರು. ಕೆಲವನ್ನು ಬೇರಿಲ್ಲದೆ ಮುರಿದು ಹಾಕು ವರು. ಹೀಗೆ ಕೈಗೆ ಸಿಕ್ಕಿದುವನ್ನೆಲ್ಲಾ ಜೋಡಿಸಿಕೊಂಡು ಇಂದ್ರಧ್ವಜಗಳಂತೆ ಅವುಗಳನ್ನು ಮೇಲಕ್ಕೆತ್ತಿ ಹಿಡಿದುತಂದು ಸಮುದ್ರದಲ್ಲಿ ಹಾಕುತಿದ್ದರು. ಮತ್ತು ಅಲ್ಲಲ್ಲಿ ಕೆಲವರು ತಾಳೆಯ ಮರಗಳನ್ನೂ, ಕೆಲವರು ದಾಳಿಂಬಿಯ ಹೊದರು ಗಳನ್ನೂ, ಕೆಲವರು ತೆಂಗಿನ ತೋಲೆಗಳನ್ನೂ, ಕೆಲವರು ವಿಭೀತಕವೃಕ್ಷಗಳನ್ನೂ, ಪಗಡೆಯ ಮರಗಳನ್ನೂ, ಕೆಲವರು ಖದಿರವೃಕ್ಷಗಳನ್ನೂ, ಕೆಲವರು ಬೇವಿನದಿಂಡು ಗಳನ್ನೂ ಹೊತ್ತುತಂದು ಸೇರಿಸಿದರು. ಮಹಾಬಲವುಳ್ಳವರಾಗಿಯೂ, ಮಹಾ

ಕಾಯವುಳ್ಳವರಾಗಿಯೂ ಇದ್ದ ಕೆಲವು ವಾನರವೀರರು, ಆನೆಯ ಪ್ರಮಾಣವುಳ್ಳ ದೊಡ್ಡ ದೊಡ್ಡ ಕಲ್ಲುಬಂಡೆಗಳನ್ನೂ, ಪರ್ವತಗಳನ್ನೂ ಪಿಾಟಿ ತೆಗೆದು, ಬಂಡಿ ಮೊದಲಾದ ಯಂತ್ರಗಳಿಂದ ಅವುಗಳನ್ನು ಸಾಗಿಸಿ ತರುತಿದ್ದರು. ಹೀಗೆ ಆ ವಾನರರು ಪರ್ವತಗಳನ್ನು ಸಮುದ್ರದಲ್ಲಿ ತಂದು ಹಾಕುತಿದ್ದಾಗ, ಆ ವೇಗಕ್ಕೆ ಸಮುದ್ರದ ನೀರು ಮೇಲೆ ಹಾರಿ, ಅಂತರಿಕ್ಷವನ್ನೆಲ್ಲಾ ವ್ಯಾಪಿಸುವಂತಾಯಿತು. ಈ ವಾನರರ ಕಾರ್ಯಸಂಭ್ರಮದಲ್ಲಿ ಸಮುದ್ರವೆಲ್ಲವೂ ಸುತ್ತಲೂ ಕ್ಷೋಭೆ ಹೊಂದಿತು. ಕೆಲವರು ಕಟ್ಟಿದ ಸೇತುವನ್ನೆಳೆಯುವುದಕ್ಕಾಗಿ ನೂರು ಯೋಜನ ದುದ್ದದ ನೂಲನ್ನು ಹಿಡಿದು ನಿಂತಿದ್ದರು. ನಳನು ಮುಂದಾಳಾಗಿ ನಿಂತು ಸಮುದ್ರದ ನಡುವೆ ಸೇತುವನ್ನು ಕಟ್ಟುತ್ತ ಬಂದನು. ಭಯಂಕರಾಕಾರವುಳ್ಳ ಇತರ ವಾನರರೂ ಕೂಡ ಆ ನಳನನ್ನು ಹಿಂಬಾಲಿಸಿ, ಕಟ್ಟಿದ ಭಾಗವನ್ನು ಸರಿಮಾಡುತ್ತ ಬಂದರು. ಆ ವಾನರರಲ್ಲಿ ಅಳತೆಯ ಕೋಲನ್ನು ಹಿಡಿದು ನಿಂತವರು ಕೆಲವರು! ಅಲ್ಲಲ್ಲಿ ಕಾರ್ಯನಿಯಾಮಕರಾಗಿ ಕೈಯಲ್ಲಿ ದಂಡವನ್ನು ಹಿಡಿದು, ವಾನರರನ್ನು ತ್ವರೆಪಡಿಸುತಿದ್ದವರು ಕೆಲವರು! ಮೇಲೆಮೇಲೆ ಕಲ್ಲು ಮಣ್ಣುಗಳನ್ನು ತಂದು ಸೇರಿಸುತಿದ್ದವರು ಕೆಲವರು! ಹಳ್ಳತಿಟ್ಟುಗಳನ್ನು ಪರೀಕ್ಷಿಸಿ ನೋಡುವವರು ಕೆಲವರು. ವೈಗಳ್ಳರಾರೆಂದು ಹುಡುಕಿ ನೋಡುವವರು ಕೆಲವರು! ಹೀಗೆ ನೂರಾರುಮಂದಿ ವಾನರರು ಗುಂಪುಗುಂಪಾಗಿ ಸೇರಿ, ರಾಮಾಜ್ಞೆಯನ್ನು ಮುಂದಿಟ್ಟುಕೊಂಡು, ಮಹಾಮೇಘಗಳಂತಿರುವ ಪರ್ವತಶಿಖರಗಳನ್ನೂ, ಹುಲ್ಲು ಕಡ್ಡಿಗಳನ್ನೂ, ಪುಷ್ಪಿತಗಳಾದ ಗಿಡಗಳನ್ನೂ, ಸೇರಿಸಿ ಸೇತುವನ್ನು ಸರಿಮಾಡುತ್ತ ಬಂದರು. ಕೆಲವರು ಸೇತುವಿನಮೇಲೆ ಕಾಲಿಗೆ ಮೃದುವಾಗಿರುವುದಕ್ಕಾಗಿ ಹೂಗಿಡ ಗಳನ್ನು ತಂದೊಡ್ಡುತ್ತಿದ್ದರು. ಅಲ್ಲಲ್ಲಿ ಕೆಲವು ವಾನರರು ಬೆಟ್ಟದಂತಿರುವ ಕಲ್ಲುಗಳನ್ನೂ, ಪರ್ವತಶಿಖರಗಳನ್ನೂ, ಹೊತ್ತುಕೊಂಡು ಮಹಾಗಜಗಳಂತೆ ಅತ್ತಿತ್ತ ಓಡಾಡುತಿದ್ದರು. ಹೀಗೆ ವಾನರರು ಕಲ್ಲುಗಳನ್ನೂ, ಪರ್ವತ ಶಿಖರಗ ಳನ್ನೂ ಸಮುದ್ರದಲ್ಲಿ ತಂದು ಬಿಸಾಡುವಾಗ ಅದರಿಂದ ಹುಟ್ಟಿದ ಮಹಾಧ್ವನಿಯು ದಿಕ್ಕುಗಳೆಲ್ಲವನ್ನೂ ವ್ಯಾಪಿಸಿತು. ಆ ವಾನರರೆಲ್ಲರೂ ಸೇರಿ ಮೊದಲನೆಯ ದಿನದಲ್ಲಿ ಹದಿನಾಲ್ಕು ಯೋಜನಗಳ ಸೇತುವನ್ನು ಮುಗಿಸಿದರು. ಕಾರ್ಯೋತ್ಸಾಹವುಳ್ಳವ ರಾಗಿಯೂ ಇದ್ದ ಆ ವಾನರರೇ ಎರಡನೆಯ ದಿನದಲ್ಲಿ ಇಪ್ಪತ್ತು ಯೋಜನಗಳ ಸೇತುವೆಯನ್ನು ಕಟ್ಟಿದರು. ಮಹಾಕಾಯವುಳ್ಳ ಆ ವಾನರರು ಮೂರನೆಯ

ದಿನದಲ್ಲಿ ಮತ್ತಷ್ಟು ತ್ವರೆಯಿಂದ ಕೆಲಸಮಾಡಿ, ಇಪ್ಪತ್ತೊಂದು ಯೋಜನಗಳನ್ನು ಮುಗಿಸಿದರು. ನಾಲ್ಕನೆಯ ದಿನದಲ್ಲಿ ಇನ್ನೂ ತ್ವರೆಯಿಂದ ಇಪ್ಪತ್ತೆರಡುಯೋಜನಗಳ ದೂರವನ್ನು ಕಟ್ಟಿದರು. ಐದನೆಯ ದಿನದಲ್ಲಿ ಆ ವಾನರರೇ ಮತ್ತಷ್ಟು ತ್ವರೆಯಿಂದ ಕೆಲಸಮಾಡಿ ಸುವೇಲಪರ್ವತದವರೆಗೆ ಉಳಿದಿದ್ದ ಇಪ್ಪತ್ತುಮೂರು ಯೋಜನಗಳನ್ನೂ ಆ ದಿನವೇ ಕಟ್ಟಿ ಪೂರೈಸಿಬಿಟ್ಟರು. ಶ್ರೀಮಂತನಾಗಿಯೂ, ವಿಶ್ವಕರ್ಮಪುತ್ರನಾಗಿಯೂ, ಬಲಾಢ್ಯನಾಗಿಯೂ ಇದ್ದ ನಳನು, ತನ್ನ ತಂದೆಯಂತೆಯೇ ಮಹಾದ್ಭುತವಾದ ಶಿಲ್ಪಸಾಮರ್ಥ್ಯದಿಂದ ಸಮುದ್ರದಲ್ಲಿ ಸೇತುವನ್ನು ಕಟ್ಟಿ ಮುಗಿಸಿದನು. ಮಹಾಸಮುದ್ರದಲ್ಲಿ ನಳನಿರ್ಮಿತವಾದ ಆ ಸೇತುವು, ಆಕಾಶದಲ್ಲಿ [1]ಛಾಯಾಪಥದಂತೆ ಮಹಾಮಹಿಮೆಯುಳ್ಳದಾಗಿಯೂ, ಕಾಂತಿವಿಶಿಷ್ಟವಾಗಿಯೂ ಶೋಭಿಸುತಿತ್ತು. ಆಗ ದೇವಗಂಧರ್ವಸಿದ್ಧವಿದ್ಯಾಧರಾದಿಗಳೂ, ಮಹರ್ಷಿಗಳೂ ಆ ಅದ್ಭುತವನ್ನು ನೋಡುವುದಕ್ಕಾಗಿ ಆಕಾಶದಲ್ಲಿ ನೆರೆದರು. ದೇವತೆಗಳೂ, ಗಂಧರ್ವರೂ, ಅಲ್ಲಿ ಹತ್ತು ಯೋಜನಗಳ ವಿಸ್ತಾರಕ್ಕೂ, ನೂರುಯೋಜನದುದ್ದಕ್ಕೂ ವ್ಯಾಪಿಸಿ, ಇತರರಿಗೆ ದುಷ್ಕರವಾಗಿ ನಲನಿರ್ಮಿತವಾದ ಆ ಸೇತುವನ್ನೇ ಆಶ್ಚರ್ಯಭರಿತರಾಗಿ ನಟ್ಟ ದೃಷ್ಟಿಯಿಂದ ನೋಡುತ್ತಿದ್ದರು. ಇತ್ತಲಾಗಿ ವಾನರರೂ ಕೂಡ ತಾವು ಸೇತುವನ್ನು ಕಟ್ಟಿ ಮುಗಿಸಿದ ಸಂತೋಷದಿಂದ ಮೈಮರೆತು ಆಗಾಗ ಹಾರಿಹಾರಿ ಕುಣಿಯುವರು! ನಗೆಯುವರು! ಗರ್ಜಿಸುವರು! ಅದನ್ನೇ ನೋಡಿ ನೋಡಿ ಹಿಗ್ಗುವರು! ಇದಕ್ಕೆ ಮೊದಲು ಮನಸ್ಸಿನಿಂದಲೂ ಚಿಂತಿಸಲಸಾಧ್ಯವಾಗಿಯೂ, ಬೇರೊಬ್ಬರಿಗೆ ಯತ್ನಿಸಲಶಕ್ಯವಾಗಿಯೂ, ಮೈಯಲ್ಲಿ ರೋಮಾಂಚ

---

1. ಇಲ್ಲಿ "ಶುಶುಭೇ ಸುಭಗಶ್ಶ್ರೀಮಾನ್ ಸ್ವಾತೀಪಥ ಇವಾಂಬರೇ" ಎಂದು ಮೂಲವು. ಸ್ವಾತೀಪಥವೆಂದರೆ ಛಾಯಾಪಥವು ಅಥವಾ ಸೂರ್ಯಾದಿಗಳ ದ್ಯುಮಾರ್ಗದಲ್ಲಿರುವ ಮಧ್ಯವೀಧಿಯಾದ ಸ್ವಾತೀವೀಧಿಯು. "ಸೂರ್ಯಾದೀನಾಂ ತ್ರಯೋ ಮಾರ್ಗಾ ದಕ್ಷಿಣೋತ್ತರಮಧ್ಯಮಾಃ" ದಕ್ಷಿಣೋತ್ತರಮಧ್ಯಗಳೆಂದು ಸೂರ್ಯಾದಿಗ್ರಹಗಳಿಗೆ ಮೂರು ಸಂಚಾರಮಾರ್ಗಗಳುಂಟು. ಅವುಗಳಲ್ಲಿಯೂ ಮಧ್ಯಮಾರ್ಗವೆಂಬುದರಲ್ಲಿ, ಆರ್ಷಭಿ, ಮಧ್ಯೆ, ಅಜಗವಿಯೆಂಬ ಮೂರು ವೀಥಿಗಳಿರುವುವು. ಸ್ವಾತೀನಕ್ಷತ್ರಮಾರ್ಗವು ಮಧ್ಯವೀಧಿಯಲ್ಲಿ ಸೇರುವುದು. ಈ ವಿವರವು ವಾಯುಪುರಾಣದಲ್ಲಿ "ತಥಾ ದ್ವೇ ಚಾಪಿ ಫಲ್ಗುನ್ಯೌ ಮಘಾ ಚೈವಾರ್ಷಭೀ ಮತಾ। ಹಸ್ತಶ್ಚಿತ್ರಾ ತಥಾ ಸ್ವಾತೀ ಮಧ್ಯ ವೀಧ್ಯಭಿಕೀರ್ತಿತಾ। ಜ್ಯೇಷ್ಠಾ ವಿಶಾಖಾನುರಾಧಾ ವೀಧಿರಾಜಗವೀ ಮತಾ। ಏತಾಸ್ತು ವೀಧಯಸ್ತಿಸ್ರೋ ಮಧ್ಯಮೋ ಮಾರ್ಗ ಉಚ್ಯತೇ" ಎಂದು ವಿವರಿಸಲ್ಪಟ್ಟಿದೆ.

ವನ್ನು ಹುಟ್ಟಿಸುವಂತೆ ಆಶ್ಚರ್ಯಕರವಾಗಿಯೂ, ಇದ್ದ ಆ ಸೇತುಬಂಧನವನ್ನು ಸಮಸ್ತಭೂತಗಳೂ ಕುತೂಹಲದಿಂದ ನೋಡುತ್ತಿದ್ದುವು. ಹೀಗೆ ಮಹಾಬಲವುಳ್ಳ ಕೋಟಿಸಹಸ್ರವಾನರರು ಸೇರಿ ಸಮುದ್ರದ ಕೊನೆಯವರೆಗೆ ಸೇತುವನ್ನು ಕಟ್ಟಿ ಮುಗಿಸಿದರು. ಆ ಮಹಾಸೇತುವು ಅತ್ಯಂತವಿಶಾಲವಾಗಿಯೂ ಬಲವಾದ ಕಟ್ಟುಳ್ಳು ದಾಗಿಯೂ, ಅಂದವಾಗಿಯೂ, ಸಮತಲವಾಗಿಯೂ, ಅಪಾಯರಹಿತವಾಗಿಯೂ ನಿರ್ಮಿಸಲ್ಪಟ್ಟುದಲ್ಲದೆ, ಸಮುದ್ರಕ್ಕೆ ಸೀಮಂತರೇಖೆಯಂತೆ ಪ್ರಕಾಶಿಸುತಿತ್ತು. ಆಮೇಲೆ ವಿಭೀಷಣನು ಕೈಯಲ್ಲಿ ಗದೆಯನ್ನು ಹಿಡಿದು, ಆ ಸಮುದ್ರದ ದಕ್ಷಿಣ ತೀರಕ್ಕೆ ಹೋಗಿ ತನ್ನ ಮಂತ್ರಿಗಳೊಡನೆ ಅಲ್ಲಿ ಶತ್ರುಗಳನ್ನು ತಡೆಯುವುದಕ್ಕಾಗಿ ಕಾವಲಿರುತಿದ್ದನು. ಆಮೇಲೆ ಇತ್ತಲಾಗಿ ಸುಗ್ರೀವನು ಸತ್ಯಪರಾಕ್ರಮನಾದ ರಾಮನನ್ನು ಕುರಿತು, “ ರಾಮಾ ! ನೀನು ಈ ಹನುಮಂತನ ಭುಜವನ್ನೇರು ! ಲಕ್ಷ್ಮಣನು ಅಂಗದನನ್ನೇರಲಿ ! ಈ ಸಾಗರವು ಬಹಳ ವಿಸ್ತಾರವಾಗಿರುವುದು. ಅಷ್ಟು ದೂರದವರೆಗೆ ನೀವಿಬ್ಬರೂ ನಡೆದು ಹೋಗುವುದೇ ಸರಿಯಲ್ಲ. ಈ ವಾನರರಿಬ್ಬರೂ ನಿಮ್ಮನ್ನು ಅಂತರಿಕ್ಷಗತಿಯಿಂದಲೇ ಅಲ್ಲಿಗೆ ಸಾಗಿಸಿಬಿಡಬಲ್ಲರು ” ಎಂದನು. ಆಮೇಲೆ ಧರ್ಮಾತ್ಮನಾದ ಶ್ರೀರಾಮನು ಧನುರ್ಧಾರಿಯಾಗಿ, ಲಕ್ಷ್ಮಣ [1]ಸುಗ್ರೀವರೊಡಗೂಡಿ ಆ ಸೇನೆಗೆ ಮುಂದಾಗಿ ಹೊರಟನು. ಕೆಲವು ವಾನರ ವೀರರು ಪಾರ್ಶ್ವಭಾಗದಲ್ಲಿ ನಡೆದು ಬಂದರು. ಕೆಲವರು ನಡೆಯುವುದಕ್ಕೆ ದಾರಿಯಿಲ್ಲದುದಕ್ಕಾಗಿ ಅಲ್ಲಲ್ಲಿ ನೀರಿಗಿಳಿದು ಜಲಮಾರ್ಗದಿಂದಲೇ ಬರುತಿದ್ದರು. ಕೆಲವರು ಅದಕ್ಕೂ ಅವಕಾಶವಿಲ್ಲದೆ ಸ್ವಲ್ಪಕಾಲದವರೆಗೆ ಹಿಂದುಳಿದಿದ್ದು, ಆಮೇಲೆ ಪ್ರಯಾಣ ಮಾಡಿದರು. ಕೆಲವರು ಗರುತ್ಮಂತರಂತೆ ಅಂತರಿಕ್ಷದಿಂದಲೇ ಹಾರಿಹೋದರು. ಹೀಗೆ ಭಯಂಕರವಾದ ಆ ವಾನರಸೈನ್ಯವು ಸೇತುಮಾರ್ಗವಾಗಿ ಸಮುದ್ರವನ್ನು ದಾಟುತಿದ್ದಾಗ, ಆ ಸೈನ್ಯದಲ್ಲಿ ಹುಟ್ಟಿದ ಕೋಲಾಹಲಧ್ವನಿಯು ಸಮುದ್ರಘೋಷವನ್ನೂ ಮರೆಸುವಂತೆ ಅತಿಭಯಂಕರವಾಗಿ ವ್ಯಾಪಿಸಿತು. ಹೀಗೆ ಆ ಸುಗ್ರೀವನಿಗೆ ಸೇರಿದ ಕಪಿಸೇನೆಯೆಲ್ಲವೂ ನಳನಿರ್ಮಿತವಾದ ಸೇತುವಿನಿಂದ ಸಮುದ್ರವನ್ನು ದಾಟಿ, ದಕ್ಷಿಣತೀರವನ್ನು ಸೇರಿ, ಅಲ್ಲಿ ಫಲಮೂಲಗಳಿಂದಲೂ ಜಲದಿಂದಲೂ, ಸಮೃದ್ಧವಾದ ಪ್ರದೇಶಕ್ಕೆ ಬಂದಿಳಿಯಿತು. ದೇವತೆಗಳೂ, ಸಿದ್ಧರೂ, ಚಾರಣರೂ,

---

1. ಇದರಿಂದ ಸುಗ್ರೀವನೂ ರಾಮಲಕ್ಷ್ಮಣರಂತೆಯೇ ಆಕಾಶಗತಿಯಿಂದ ಹೋದುದಾಗಿ ಗ್ರಾಹ್ಯವು.

ಮಹರ್ಷಿಗಳೂ, ಅತ್ಯಾಶ್ಚರ್ಯಕರವಾಗಿಯೂ, ಬೇರೊಬ್ಬರಿಗೆ ಸಾಧಿಸಲಶಕ್ಯವಾಗಿಯೂ ಇದ್ದ ಆ ರಾಮನ ಕಾರ್ಯವನ್ನು ನೋಡಿ ಸಂತೋಷದಿಂದ ಬೇಗನೆ ರಾಮನ ಬಳಿಗೆ ಬಂದು, ಮಂಗಳತೀರ್ಥಗಳಿಂದ ಆತನನ್ನು ಪ್ರೋಕ್ಷಿಸಿದರು. ಮತ್ತು ಅವರೆಲ್ಲರೂ ರಾಮನನ್ನು ಕುರಿತು "ಎಲೆ ರಾಜೇಂದ್ರನೆ! ನಿನಗೆ ಜಯವಾಗಲಿ! ನಿನ್ನ ಸಮಸ್ತಶತ್ರುಗಳನ್ನೂ ಜಯಿಸಿ, ಸಮುದ್ರವ ಮೇಖಲೆಯಾದ ಸಮಸ್ತಭೂಮಿಯನ್ನೂ ಬಹುಕಾಲದವರೆಗೆ ಸುಖದಿಂದ ಪಾಲಿಸು!" ಎಂದು ನಾನಾವಿಧಗಳಾದ ಶುಭವಾಕ್ಯಗಳಿಂದ ಅವನನ್ನು ಪೂಜಿಸಿದರು.

ಇಲ್ಲಿಗೆ ಇಪ್ಪತ್ತೆರಡನೆಯ ಸರ್ಗವು.

{ ಶ್ರೀರಾಮನು ಯುದ್ಧಸೂಚಕಗಳಾದ ಮಹೋತ್ಪಾತಗಳನ್ನು ಕಂಡು ಅವುಗಳನ್ನು ಲಕ್ಷ್ಮಣನಿಗೆ ತೋರಿಸಿದುದು. }

[1]ನಿಮಿತ್ತಶಾಸ್ತ್ರವನ್ನು ಚೆನ್ನಾಗಿ ಬಲ್ಲವನಾದ ಶ್ರೀರಾಮನು, ಆ ಸಮುದ್ರತೀರದಲ್ಲಿ ಕೆಲವು ಶಕುನಗಳನ್ನೇ ನೋಡಿ, ತಾನು ಬಹುಕಾಲದಿಂದ ಕೋರುತಿದ್ದ ಯುದ್ಧವು ಸಮೀಪಿಸಿತೆಂಬ ಸಂತೋಷದಿಂದ ಲಕ್ಷ್ಮಣನನ್ನು ಆಲಿಂಗಿಸಿಕೊಂಡು, ಅವನೊಡನೆ ಹೇಳುವನು. "ವತ್ಸ ಲಕ್ಷ್ಮಣಾ? ಈಗ ನಾವು ಶೀತಲಜಲದಿಂದಲೂ ಫಲಗಳಿಂದಲೂ ತುಂಬಿದ ಪ್ರದೇಶದಲ್ಲಿ ನಮ್ಮ ಸೈನ್ಯವನ್ನಿಳಿಸಿ, ಈಗಲೇ ಆ ಸೈನ್ಯಗಳನ್ನು ಬೇರೆಬೇರೆಯಾಗಿ ವಿಭಾಗಿಸಿ, ಗರುಡವ್ಯೂಹವನ್ನಾಗಿ ನಿಲ್ಲಿಸುವುದು ಮೇಲು! ಅದೋ ನೋಡು! ಕ್ಷುದ್ರಜನಗಳಿಗೆ ನಾಶಸೂಚಕಗಳಾಗಿಯೂ, ಭಯಂಕರವಾಗಿಯೂ, ಇರುವ ಯುದ್ಧವು ಸಮೀಪಿಸಿದಂತೆ ತೋರುವುದು.

---

1. ಇಲ್ಲಿ "ನಿಮಿತ್ತಾನಿ ನಿಮಿತ್ತಜ್ಞಃ" ಎಂದು ಮೂಲವು. "ನಿಮಿತ್ತಾನ್ಯೇವ ಶಂಸಂತಿ ಶುಭಾಶುಭಫಲೋದಯಂ। ತಸ್ಮಾದೇತಾನಿ ಶಾಸ್ತ್ರಜ್ಞೋ ರಾಜಾ ಸಮುಪಲಕ್ಷಯೇತ್" ಎಂದು ನಿಮಿತ್ತಗಳು ಮುಂದೆ ಬರಬಹುದಾದ ಶುಭಾಶುಭಫಲಗಳನ್ನು ಸೂಚಿಸುವುದರಿಂದ, ರಾಜನು ಅವುಗಳನ್ನು ಅವಶ್ಯವಾಗಿ ನೋಡಿ ತಿಳಿಯಬೇಕೆಂದು ರಾಜನೀತಿಯು. ಆ ರಾಜನೀತಿಯನ್ನನುಸರಿಸಿ ಇಲ್ಲಿ ರಾಮನೂ ನಿಮಿತ್ತಗಳನ್ನು ನೋಡಿದನೆಂದು ಗ್ರಾಹ್ಯವು.

ಇದರಿಂದ ಕಪಿಗಳಲ್ಲಿಯೂ ಕರಡಿಗಳಲ್ಲಿಯೂ, ರಾಕ್ಷಸರಲ್ಲಿಯೂ, ಪ್ರಮುಖರಾದ ವೀರರಿಗೆ ವಿಶೇಷವಾಗಿ ನಾಶವುಂಟಾಗುವಂತೆಯೂ ನನಗೆ ತೋರುತ್ತಿರುವುದು. ವಾಯುವು ಕಲುಷವಾಗಿ ಬೀಸುತ್ತಿರುವುದು. [1]ಭೂಮಿಯು ನಡುಗುವುದು. ಪರ್ವತಾಗ್ರಗಳು ಅದುರುತ್ತಿರುವುವು. ಮರಗಳು ಇದ್ದಕ್ಕಿದ್ದಹಾಗೆ ಮುರಿದುಬೀಳುವುವು. ಅದೋ ಮೇಘಗಳು ತೋಳಗಳಂತೆ ಬಣ್ಣವುಳ್ಳವುಗಳಾಗಿ, ಭಯಂಕರಸ್ವರೂಪದಿಂದ ಕಾಣಿಸಿ ಕ್ರೂರಸ್ವರದಿಂದ ಮೊಳಗುತ್ತಿರುವುವು. [2]ಮತ್ತು ಆ ಮೇಘಗಳು ರಕ್ತಬಿಂದುಗಳೊಡನೆ ಮಿಶ್ರವಾದ ಜಲವನ್ನು ವರ್ಷಿಸುತ್ತಿರುವುವು. ರಕ್ತಚಂದನದಂತಿರುವ ಮೇಘದೊಡನೆ ಸೇರಿ ಸಂಧ್ಯಾಕಾಲವು ಅತ್ಯಂತ ಭಯಂಕರವಾಗಿರುವುದು. ಜ್ವಲಿಸುತ್ತಿರುವ ಸೂರ್ಯಬಿಂಬದಿಂದ ಅಗ್ನಿಪಿಂಡಗಳು ಉದುರುವುವು ನೋಡು! ಮೃಗಪಕ್ಷಿಗಳೆಲ್ಲವೂ ಕ್ರೂರಸ್ವರದಿಂದ ಕೂಗುತ್ತಿರುವುವು. ಇವೆಲ್ಲವೂ ನೋಡುವಾಗಲೇ ಮಹಾಭಯವನ್ನು ಹುಟ್ಟಿಸುತ್ತಿರುವುವು. [3]ರಾತ್ರಿಯಲ್ಲಿ ಚಂದ್ರನು ಕಾಂತಿಗುಂದಿ ತನ್ನ ಕಿರಣದಿಂದ ಸಂತಾಪಗೊಳಿಸುತ್ತಿರುವನು. ಅದೋ! ಅಲ್ಲಿ ಸೂರ್ಯನ ಸುತ್ತಲೂ [4]ಕೆಂಪು, ಕಪ್ಪು, ಮತ್ತು ಎಳಗೆಂಪುಬಣ್ಣಗಳ ಮಿಶ್ರರೇಖೆಯುಳ್ಳ ಪರಿವೇಷವು ಕುರುಚಾಗಿ, ಭಯಂಕರವಾಗಿ, ಹಿಂದೆ ಯಾವಾಗಲೂ ನೋಡದ

---

1. ಸಂಧ್ಯಾಕಾಲದ ಭೂಕಂಪವು ರಾಜರಿಗೆ ಮಹಾನಿಷ್ಟಸೂಚಕವೆಂದು ನಿಮಿತ್ತಶಾಸ್ತ್ರವು. ಈ ವಿಷಯದಲ್ಲಿ "ಯಾಮತ್ರಯಾಚ್ಚ ಭೂಕಂಪೋ ದ್ವಿಜಾತೀನಾಮರಿಷ್ಟದಃ । ಅರಿಷ್ಟದಃ ಕ್ಷಿತೀಶಾನಾಂ ಸಂಧ್ಯಯೋರುಭಯೋರಪಿ" ಎಂದು ವಸಿಷ್ಠವಚನವು.

2. ದಿವ್ಯೋಲ್ಕಾಪತನಂಚೈವ ದಿವಾ ನಕ್ಷತ್ರದರ್ಶನಂ । ದಿವಾಶನಿಸ್ತಥಾಕಾಷ್ಠ ತೃಣ ರಕ್ತ ಪ್ರವರ್ಷಣಂ" ಎಂದು ರಕ್ತವರ್ಷವು ಸುರಿಯುವುದು ಬಹಳ ದೊಡ್ಡ ದುರ್ನಿಮಿತ್ತವೆಂದು ವಿಹಿರವಚನವು.

3. ಚಂದ್ರಕಿರಣವು ಸಂತಾಪಕರವಾಗಿದ್ದರೆ ಮಹೋತ್ಪಾತಸೂಚಕವೆಂದು ನಿಮಿತ್ತಶಾಸ್ತ್ರವು.

4. ಇಲ್ಲಿ ಮೂರು ಬಣ್ಣಗಳಿಂದ ಮೂರು ಮಂಡಲವನ್ನು ಹೇಳುವುದರಿಂದಲೂ, ಸಾಯಂಕಾಲದ ವೇಳೆಯಾದುದರಿಂದಲೂ, ಇಲ್ಲಿ ಹೇಳಲ್ಪಟ್ಟ ಪರಿವೇಷವು ರಾಜನಿಗೆ ನಾಶಸೂಚಕವೆಂದು ಗ್ರಹಿಸಬೇಕು. ಈ ವಿಷಯದಲ್ಲಿ "ದ್ವಿಮಂಡಲಶ್ಚ ಮೂಪಘ್ನೋ ನೃಪಘ್ನಃ" ಎಂದು ಕಾಶ್ಯಪವಚನವು. ಇದಲ್ಲದೆ ದಿನಕರಪರಿವೇಷಃ ಪೂರ್ವಯಾಮೇ ತು ಪೀಡಾ । ದಿನಕರ ಪರಿವೇಷೋ ವೃಷ್ಟಿಯುದ್ಧಂ ದ್ವಿತೀಯೇ । ದಿನಕಪರಿವೇಷಂ ಕ್ಷೇಮಮಾಹುಸ್ತೃತೀಯೇ । ದಿನಕರಪರಿವೇಷಸ್ಸರ್ವನಾಶಶ್ಚತುರ್ಥೇ ॥" ಎಂದು ಈ ಪರಿವೇಷವೇ

ಅದ್ಭುತಾಕಾರದಿಂದ ಕಾಣುವುದು ನೋಡು. ಇದನ್ನು ನೋಡಿದರೆ ಪ್ರಳಯಕಾಲ ದಲ್ಲಿ ಲೋಕಕ್ಷಯಸೂಚಕವಾಗಿ ಹುಟ್ಟುವ ಪರಿವೇಷದಂತೆಯೇ ತೋರುತ್ತಿರು ವುದು. ವತ್ಸ ಲಕ್ಷ್ಮಣಾ! ಇದೋ! ಅತ್ತಲಾಗಿ [1]ನಿರ್ಮಲವಾದ ಸೂರ್ಯ ಮಂಡಲದ ನಡುವೆ, ರಂಧ್ರಾಕಾರವಾಗಿ ಕಪ್ಪಾದ ಕಳಂಕವು ಕಾಣುವುದು ನೋಡು. ಆಕಾಶದ ನಕ್ಷತ್ರಗಳೆಲ್ಲವೂ ವಿಶೇಷವಾಗಿ ಧೂಳಿಯಿಂದ ಮುಚ್ಚಿ, ಕಾಂತಿಗುಂದಿ, ಮಲಿನವಾಗಿ ಲೋಕಕ್ಕೆ ಪ್ರಳಯವನ್ನು ಸೂಚಿಸುವಂತಿರುವುವು. ಕಾಗೆ, ಹದ್ದು, ಮೊದಲಾದ ಬಹಳ ಬಲವುಳ್ಳ ಮಾಂಸಾಹಾರಿಪಕ್ಷಿಗಳೂ ಕೂಡ, ಕೇವಲ ದುರ್ಬಲಗಳಾದ ಸಣ್ಣಸಣ್ಣ ಹಕ್ಕಿಗಳಿಂದ ಪ್ರತಿಹತಗಳಾಗಿ ಕೆಳಗೆ ಬೀಳುವು ದನ್ನು ನೋಡು. ಅಲ್ಲಲ್ಲಿ ನರಿಗಳು ಭಯಂಕರವಾದ ಅಮಂಗಳ ಧ್ವನಿಯಿಂದ ಊಳಿಡುತ್ತಿರುವುವು. ವತ್ಸ ಲಕ್ಷ್ಮಣಾ! ಈ ಮಹೋತ್ಪಾತಗಳನ್ನು ನೋಡಿದರೆ, ಇನ್ನುಮುಂದೆ ನಮಗೂ, ರಾಕ್ಷಸರಿಗೂ ದೊಡ್ಡ ಯುದ್ಧವು ಪ್ರಾಪ್ತವಾಗಿ, ಅದರಲ್ಲಿ ಶೂರರಾದ ವಾನರರೂ, ರಾಕ್ಷಸರೂ ಒಬ್ಬರಮೇಲೊಬ್ಬರು ಪ್ರಯೋಗಿಸುವ ಬೆಟ್ಟಗುಡ್ಡಗಳಿಂದಲೂ, ಖಡ್ಗಾದ್ಯಾಯುಧಗಳಿಂದಲೂ, ಭೂಮಿಯೆಲ್ಲವೂ ವ್ಯಾಪ್ತವಾಗಿ, ರಕ್ತಮಾಂಸಗಳ ಕೆಸರಿನಿಂದಲೇ ತುಂಬಿಹೋಗಬಹುದೆಂದೂ ತೋರು ವುದು. ಎಲೆ ವತ್ಸನೆ! ಇನ್ನು ನಾವು ತಡಮಾಡಬಾರದು. ನಮ್ಮ ವಾನರ ರೊಡಗೂಡಿ ಈಗಲೇ ಲಂಕೆಯನ್ನು ಮುತ್ತುವೆವು" ಎಂದನು. ಧರ್ಮಾತ್ಮ ನಾಗಿಯೂ, ಯುದ್ಧೋತ್ಸಾಹವುಳ್ಳವನಾಗಿಯೂ, ಉತ್ತಮ ಧನುಸ್ಸನ್ನು ಕೈಯಲ್ಲಿ ಹಿಡಿದವನಾಗಿಯೂ ಇದ್ದ ರಾಮನು ಈ ಮಾತನ್ನು ಹೇಳಿ, ಆಗಲೇ ಲಂಕಾಭಿ ಮುಖವಾಗಿ ಆ ವಾನರ ಸೈನ್ಯದ ಮುಂದೆ ಹೊರಟನು. ಅಲ್ಲಿದ್ದ ಸಮಸ್ತವಾನರ ವೀರರೂ ವಿಭೀಷಣಸುಗ್ರೀವರನ್ನು ಮುಂದಿಟ್ಟುಕೊಂಡು ಶತ್ರುಗಳನ್ನು ಕೊಲ್ಲುವ ವಿಷಯದಲ್ಲಿ ದೃಢನಿಶ್ಚಯವುಳ್ಳವರಾಗಿ, ಸಂತೋಷದಿಂದ ಸಿಂಹನಾದವನ್ನು ಮಾಡುತ್ತಬಂದರು. ಶ್ರೀರಾಮನ ಪ್ರೀತಿಗಾಗಿ, ವೀರರಾದ ಆ ವಾನರರೆಲ್ಲರೂ, ಬಾಲಗಳನ್ನಾಡಿಸುವುದೇ ಮೊದಲಾದ, ಯುದ್ಧೋತ್ಸಾಹಸೂಚಕಗಳಾದ ಚೇಷ್ಟೆ

ಚತುರ್ಥಯಾಮದಲ್ಲಿ ಎಂದರೆ ಸಾಯಂಕಾಲದಲ್ಲಿ ಕಾಣಿಸಿದಾಗ ಸರ್ವನಾಶಸೂಚಕವೆಂದು ವಚನವು.

1. "ಚಂದ್ರಾರ್ಕಮಂಡಲಚ್ಛಿದ್ರಂ ದೃಷ್ಟ್ವಾ ಜನಪದಕ್ಷಯಃ" ಎಂಬಂತೆ ಸೂರ್ಯ ಬಿಂಬದಲ್ಲಿ ರಂಧ್ರವು ಕಾಣುವುದು ರಾಜನಾಶಸೂಚಕವೆಂದು ಶಕುನಶಾಸ್ತ್ರವು.

ಗಳನ್ನು ಮಾಡುತ್ತಿರಲು, ರಾಮನು, [1]ಅವರ ಮಹೋತ್ಸಾಹವನ್ನು ನೋಡಿ ಸಂತೋಷಿಸುತ್ತ ಮುಂದೆ ನಡೆದನು.

ಇಲ್ಲಿಗೆ ಇಪ್ಪತ್ತಮೂರನೆಯ ಸರ್ಗವು.

ರಾಮನು ಸೇನೆಯನ್ನು ಗರುಡವ್ಯೂಹವಾಗಿ ನಿಲ್ಲಿಸಿದುದು. ಅತ್ತಲಾಗಿ ಶುಕನು ರಾವಣನಬಳಿ ಹೋಗಿ ಪಡಮೋಲೆ, ರಾಮನನ್ನು ಗೆಲ್ಲುವುದಸಾಧ್ಯವೆಂದು ಅವನಿಗೆ ತಿಳಿಸಿ, ಸೀತೆಯನ್ನು ರಾಮನಿಗೊಪ್ಪಿಸುವಂತೆ ಹಿತವನ್ನು ಹೇಳಿದುದು.

ಹೀಗೆ ರಾಮನು ತನ್ನ ಸೈನ್ಯವನ್ನು ತಂದಿಳಿಸಿದಾಗ, ಆ ವಾನರವೀರರ ಸೇನೆಯು, ಚಂದ್ರನನ್ನನುಸರಿಸಿ ನಿಂತ ಶುಭನಕ್ಷತ್ರಗಳಿಂದ ತುಂಬಿದ ಶರತ್ಕಾಲದ ಪೂರ್ಣಿಮಾರಾತ್ರಿಯಂತೆ ಶೋಭಿಸುತಿತ್ತು. ಮಹಾಸಮುದ್ರದಂತೆ ಕೊನೆಮೊದಲಿಲ್ಲದ ಆ ದೊಡ್ಡ ವಾನರಸೇನೆಯು ಬಂದಿಳಿದಾಗ, ಅದರ ಪೀಡೆಯಿಂದ ಭಯಪಟ್ಟಂತೆ ಭೂಮಿಯು ನಡುಗಿತು. ಈ ವಾನರಸೈನ್ಯವು ಅಲ್ಲಿಗೆ ಬಂದಿಳಿದಾಗಲೇ ಲಂಕೆಯೊಳಗಣ ರಾಕ್ಷಸಸೈನಿಕರ ಆಕ್ರೋಶವೂ, ಭೇರೀಮೃದಂಗಾದಿ ವಾದ್ಯಧ್ವನಿಗಳ ಗದ್ದಲವೂ ಈ ವಾನರರ ಕಿವಿಗೆ ಕೇಳಿಸಿತು. ಆ ಅಟ್ಟಹಾಸವನ್ನು ಕೇಳಿದಾಗ ಒಬ್ಬೊಬ್ಬ ವಾನರರಿಗೂ ಕೋಪದಿಂದ ಮೈಯಲ್ಲಿ ರೋಮಾಂಚವು ಹುಟ್ಟಿತು. ಆ ರಾಕ್ಷಸರ ವೀರವಾದವನ್ನು ಕೇಳುತಿದ್ದಷ್ಟೂ, ಇವರಿಗೆ ಮೇಲಿಮೇಲೆ ಸಂತೋಷವೂ ಉಕ್ಕಿಬರುತಿತ್ತು. ಆ ರಾಕ್ಷಸರ ಅಟ್ಟಹಾಸವನ್ನು ಕೇಳಿ ಸಹಿಸಲಾರದೆ ಒಬ್ಬೊಬ್ಬರೂ ಆದಕ್ಕಿಂತಲೂ ಮೇಲೆ ಉಚ್ಚಧ್ವನಿಯಿಂದ ಸಿಂಹನಾದವನ್ನು ಮಾಡುತಿದ್ದರು. ಆಕಾಶದಲ್ಲಿ ಮೇಘಗಳು ಗುಡುಗಿದಂತೆ ವಾನರರು ದರ್ಪದಿಂದ ಮಾಡಿದ ಗರ್ಜನಗಳನ್ನು ಲಂಕೆಯಲ್ಲಿದ್ದ ರಾಕ್ಷಸರೂ ಕೇಳಿದರು. ಅಲ್ಲಿ ರಾಮನು ವಿಚಿತ್ರಗಳಾದ ಧ್ವಜಗಳಿಂದಲೂ, ಪತಾಕೆಗಳಿಂದಲೂ ಶೋಭಿತವಾದ ಲಂಕಾನಗರಿಯನ್ನು ದೂರದಿಂದಲೇ ನೋಡಿದನು ಆಗಲೇ ಅವನಿಗೆ ಸೀತೆಯ

---

1. ರಾಮನಿಗೆ ವಾನರರು ಈ ದುರ್ಗವನ್ನು ನೋಡಿ ಉತ್ಸಾಹಭಂಗವನ್ನು ಹೊಂದಿರಬಹುದೆಂಬ ಶಂಕೆಯುಂಟಾಗಿದ್ದು, ಈಗ ಅವರ ಉತ್ಸಾಹಚೇಷ್ಟೆಯನ್ನು ನೋಡುವುದರಿಂದ ಆ ಶಂಕೆಯು ನಿವರ್ತಿಸಿ ಸಂತೋಷವುಂಟಾಯಿತೆಂದು ತಿಳಿಯಬೇಕು.

ಸ್ಮರಣವುಂಟಾಯಿತು. ಅವನ ಮನಸ್ಸಿನಲ್ಲಿ ವ್ಯಸನವೂ ಹುಟ್ಟಿತು. ಹೀಗೆ ದುಃಖಿತನಾದ ರಾಮನು ತನ್ನಲ್ಲಿ ತಾನು, "ಹಾ! ನಮ್ಮ ಸಾಕೇತನಗರದಲ್ಲಿ ಸಮಸ್ತರಾಜಭೋಗಗಳನ್ನೂ ಅನುಭವಿಸುತ್ತಿರಬೇಕಾದ ಆ ಹರಿಣಾಕ್ಷಿಯು ಈಗ ಈ ಲಂಕೆಯಲ್ಲಿ ಅಂಗಾರಕನಿಂದ ಭಂಗಹೊಂದಿದ ರೋಹಿಣಿಯಂತೆ ದುಷ್ಟನಾದ ರಾವಣನ ಕೈಯಲ್ಲಿ ಸೆರೆಸಿಕ್ಕಿರುವಳಲ್ಲಾ!" ಎಂದು ಮಹಾವ್ಯಸನದಿಂದ ಬಿಸಿಬಿಸಿಯಾಗಿ ನಿಟ್ಟುಸಿರನ್ನು ಬಿಟ್ಟನು. ರಾಮನಿಗೆ ಮನಸ್ಸಿನಲ್ಲಿ ಇಷ್ಟು ವ್ಯಸನವಿದ್ದರೂ, ಶತ್ರುಜಯಕ್ಕಾಗಿ ಹೊರಡುವಾಗ ದುಃಖದಿಂದ ಉತ್ಸಾಹಭಂಗವನ್ನು ತೋರಿಸಬಾರದೆಂದು, ಆ ವ್ಯಸನವನ್ನು ತನ್ನಲ್ಲಿಯೇ ಅಡಗಿಸಿಟ್ಟುಕೊಂಡು, ಕಾಲೋಚಿತವಾಕ್ಯದಿಂದ ಸಮೀಪದಲ್ಲಿದ್ದ ಲಕ್ಷ್ಮಣನನ್ನು ನೋಡಿ, "ಲಕ್ಷ್ಮಣಾ! ಆಕಾಶವನ್ನು ಭೇದಿಸುವಂತೆ ಮಹೋನ್ನತವಾಗಿ ಕಾಣಿಸುತ್ತಿರುವ ಲಂಕಾನಗರಿಯನ್ನು ನೋಡಿದೆಯಾ? ವಿಶ್ವಕರ್ಮನು ಆ ತ್ರಿಕೂಟಪರ್ವತದ ಶಿಖರದಮೇಲೆ ತನ್ನ ಸಂಕಲ್ಪದಿಂದಲೇ ನಿರ್ಮಿಸಿದಂತೆ ಕಾಣುವುದು ನೋಡು! ಬಿಳುಪಾದ ಅನೇಕ ಸೌಧಗಳಿಂದ ತುಂಬಿದ ಆ ಲಂಕಾನಗರಿಯು, ಬಿಳೀಮೇಘಗಳಿಂದ ಮುಚ್ಚಿದ ಆಕಾಶದಂತೆಯೇ ಕಾಣುವುದು ನೋಡು! ಅಲ್ಲಿನ ಪುಷ್ಪಿತಗಳಾದ ತೋಟಗಳು, ಬಗೆಬಗೆಯ ವನಪಕ್ಷಿಗಳ ಕಲಕಲಧ್ವನಿಯಿಂದಲೂ, ಮಲ್ಲಿಗೆ ಮೊದಲಾದ ಹೂಗಿಡಗಳಿಂದಲೂ ಹೇಗೆ ಶೋಭಿಸುತ್ತಿರುವುವು ನೋಡಿದೆಯಾ? ಅಲ್ಲಲ್ಲಿ ಫಲರಸವನ್ನು ಕುಡಿದು ಕೊಬ್ಬಿದ ವನಪಕ್ಷಿಗಳಿಂದಲೂ, ಮಕರಂದ ಪಾನದಿಂದ ಕೊಬ್ಬಿ ಕೂಗಿಡುವ ದುಂಬಿಗಳಿಂದಲೂ, ಚಿಗುರುಗಳ ಗೊಂಚಲಲ್ಲಿ ಸೇರಿ ನಲಿಯುವ ಕೋಗಿಲೆಗಳಿಂದಲೂ ಮನೋಹರಗಳಾದ ಅಲ್ಲಿನ ತೋಟಗಳನ್ನು ಸುಖಸ್ಪರ್ಶವಾದ ಮಂದಮಾರುತವು ಆಗಾಗ ಅಲುಗಿಸುತ್ತಿರುವ ಸೊಗಸನ್ನು ನೋಡು" ಎಂದು ತೋರಿಸುತಿದ್ದನು. ಹೀಗೆ ರಾಮನು ಲಕ್ಷ್ಮಣನಿಗೆ ಲಂಕೆಯ ಸೊಗಸನ್ನು ತೋರಿಸುತಿದ್ದು, ಕೊನೆಗೆ ಶಾಸ್ತ್ರರೀತಿಯಿಂದ ತನ್ನ ಕಡೆಯ ಸೈನ್ಯವನ್ನು ವ್ಯೂಹರೂಪವಾಗಿ ವಿಭಾಗಿಸಬೇಕೆಂದೆಣಿಸಿ, ಅಲ್ಲಿದ್ದ ವಾನರಸೇನಾಪತಿಗಳನ್ನು ಕುರಿತು "ಎಲೈ ವಾನರರೆ! ಈಗಲೇ ನಾವು ಇಲ್ಲಿ ವ್ಯೂಹವನ್ನು ನಿರ್ಮಿಸಬೇಕು. ಆದುದರಿಂದ ನಿಮ್ಮಲ್ಲಿ, ವೀರ್ಯವಂತನಾದ ಅಂಗದನು ನೀಲನೊಡನೆ ಸೇರಿ ತನ್ನ ಸೇನೆಯೊಡಗೂಡಿ ವ್ಯೂಹಕ್ಕೆ ವಕ್ಷಸ್ಥಲದಲ್ಲಿರಲಿ! ವಾನರಶ್ರೇಷ್ಠನಾದ ಋಷಭನು ತನ್ನ ಕಡೆಯ ವಾನರರೊಡನೆ ಆ ವ್ಯೂಹಕ್ಕೆ ಬಲಭಾಗದಲ್ಲಿರಲಿ! ಮದದಾನೆ

ಯಂತೆ ದುರ್ಜಯನಾಗಿಯೂ, ವೇಗಶಾಲಿಯಾಗಿಯೂ ಇರುವ ಗಂಧಮಾದನನು ತನ್ನ ಸೈನ್ಯದೊಡನೆ ಆ ವ್ಯೂಹದ ಎಡಭಾಗವನ್ನು ರಕ್ಷಿಸುತ್ತಿರಲಿ! ನಾನು ಲಕ್ಷ್ಮಣನೊಡನೆ ಸೇರಿ, ಆದರ ತಲೆಯ ಕಡೆಯಲ್ಲಿ ಎಚ್ಚರಿಕೆಯಿಂದ ಕಾವಲಿರುವೆನು. ಜಾಂಬವಂತನೂ ಸುಷೇಣನೂ, ವೇಗದರ್ಶಿಯೂ ಈ ಮೂವರೂ ಬುದ್ಧಿವಂತ ರಾಗಿಯೂ ವಾನರಭಲ್ಲೂಕ ಸಮೂಹಗಳಿಗೆ ಪ್ರಮುಖರಾಗಿಯೂ ಇರುವುದರಿಂದ ಅವರು ಅದರ ಉದರಸ್ಥಾನವನ್ನು ರಕ್ಷಿಸುತ್ತಿರಲಿ! ಕಪಿರಾಜನಾದ ಸುಗ್ರೀವನು ತನ್ನ ಸೇನೆಯೊಡನೆ ಜಘನಸ್ಥಾನದಲ್ಲಿದ್ದುಕೊಂಡು, ತೇಜಸ್ವಿಯಾದ ವರುಣನು ಭೂಮಿಯ ಪಶ್ಚಿಮಭಾಗವನ್ನು ರಕ್ಷಿಸುವಂತೆ ಅದರ ಪುಚ್ಛಭಾಗವನ್ನು ರಕ್ಷಿಸು ತ್ತಿರಲಿ!" ಎಂದನು. ಹೀಗೆ ರಾಮಾಜ್ಞೆಯಿಂದ ಆ ವಾನರಸೇನೆಯೆಲ್ಲವೂ ಗರುಡ ವ್ಯೂಹವಾಗಿ ನಿಲ್ಲಿಸಲ್ಪಟ್ಟಿತು ರಾಮಾಜ್ಞೆಯಂತೆಯೇ ವಾನರಪ್ರಭುಗಳು ಆಯಾ ಕಡೆಗಳಲ್ಲಿ ನಿಂತು ಎಚ್ಚರಿಕೆಯಿಂದ ಅದನ್ನು ರಕ್ಷಿಸುತ್ತಿದ್ದರು. ಹೀಗೆ ವ್ಯೂಹವಾಗಿ ನಿಲ್ಲಿಸಲ್ಪಟ್ಟ ಆ ದೊಡ್ಡವಾನರಸೈನ್ಯವು ಮೇಘಗಳ ಸಂಚಾರಯೋಗ್ಯವಾದ ಆಕಾಶದಂತೆ ಕಾಣಿಸುತಿತ್ತು ಆಗಲೇ ಅಲ್ಲಿದ್ದ ವಾನರರು ಪರ್ವತಶಿಖರಗಳನ್ನೂ ದೊಡ್ಡ ದೊಡ್ಡ ಮರಗಳನ್ನೂ ಹಿಡಿದು, ಯುದ್ಧದಲ್ಲಿ ರಾಕ್ಷಸರನ್ನು ಕೊಲ್ಲಬೇಕೆಂಬ ಮಹೋತ್ಸಾಹದಿಂದ ಪ್ರಯಾಣಸನ್ನದ್ಧರಾಗಿ ನಿಂತು, ತಮ್ಮಲ್ಲಿ ತಾವು, "ಈ ಪರ್ವತಶಿಖರಗಳಿಂದ ಬೀಸಿಬಡಿದಾಗಲಿ, ನಮ್ಮ ಮುಷ್ಟಿಗಳಿಂದ ಹೊಡೆದಾಗಲಿ ಆ ಲಂಕೆಯನ್ನು ಪುಡಿಪುಡಿಯಾಗಿ ಮಾಡಿ ಧೂಳೆಬ್ಬಿಸಿಯೇ ಬರಬೇಕು" ಎಂದು ಮನಸ್ಸಿನಲ್ಲಿ ಸಂಕಲ್ಪಿಸಿಕೊಂಡರು. ಆಮೇಲೆ ಮಹಾತೇಜಸ್ವಿಯಾದ ರಾಮನು ಸುಗ್ರೀವನನ್ನು ಕುರಿತು "ಎಲೈ ವಾನರರಾಜನೆ! ನಮ್ಮ ಸೇನೆಯೆಲ್ಲವನ್ನೂ ನಾವು ಕ್ರಮವಾಗಿ ವಿಭಾಗಿಸಿ ಬಲಪಡಿಸಿಕೊಂಡುದಾಯಿತಲ್ಲವೆ? ಇನ್ನಾದರೂ ಈ ಶುಕ ನನ್ನು ಬಿಟ್ಟುಬಿಡು" ಎಂದನು. ಈ ರಾಮಾಜ್ಞೆಯನ್ನು ಕೇಳಿದೊಡನೆ ಸುಗ್ರೀ ವನು ರಾವಣದೂತನಾದ ಶುಕನನ್ನು ಬಿಡಿಸಿ ಕಳುಹಿಸಿಬಿಟ್ಟನು. ವಾನರರ ಕೈಯಿಂದ ಬಲವಾಗಿ ಪೆಟ್ಟುತಿಂದು ಕೊನೆಗೆ ರಾಮನ ಮಾತಿನಿಂದ ಬಿಡುಗಡೆ ಹೊಂದಿದ ಆ ಶುಕನು ಭಯದಿಂದ ನಡುಗುತ್ತ, ನಿಮಿಷಮಾತ್ರವೂ ಅಲ್ಲಿ ನಿಲ್ಲದೆ, ಹಿಂತಿರುಗಿ ತನ್ನ ಪ್ರಭುವಾದ ರಾವಣನ ಬಳಿಗೆ ಹೋದನು. ಈ ಶುಕನನ್ನು ನೋಡಿದೊಡನೆ ರಾವಣನು ನಗುತ್ತ, ಆತನನ್ನು ಕುರಿತು 'ಶುಕಾ! ಇದೇನು? ಬಹಳ ನೊಂದುಬಂದವನಂತೆ ಕಾಣುವೆಲ್ಲಾ! ನಿನ್ನ ರೆಕ್ಕೆಗಳೂ ಮುರಿದಹಾಗಿದೆ?

ಕಪಿಗಳು ನಿನ್ನ ರೆಕ್ಕೆಗಳನ್ನು ಕಟ್ಟಿಹಾಕಿದ್ದರೇನು ? ಕಪಿಗಳು ಚಪಲಸ್ವಭಾವವುಳ್ಳವರಾದುದರಿಂದ, ಅವರು ಕೈಗೆ ಸಿಕ್ಕಿದವರನ್ನು ಸುಮ್ಮಗೆ ಬಿಡುವವರಲ್ಲ ! ನೀನು ಅವರ ಕೈಗೇನೂ ಸಿಕ್ಕಿ ಬೀಳಲಿಲ್ಲವಷ್ಟೇ ?" ಎಂದು ಕೇಳುತಿದ್ದು ಕೊನೆಗೆ ಅದು ಹೇಗಾದರೂ ಇರಲಿ ! ವಾನರರಾಜನಾದ ಸುಗ್ರೀವನು ನನ್ನ ಮಾತಿಗೆ ಹೇಳಿದ ಪ್ರತ್ಯುತ್ತರವೇನು ? ಅದನ್ನು ಮೊದಲು ಹೇಳು ?" ಎಂದನು. ಹೀಗೆ ರಾವಣನು ಆತುರದಿಂದ ತನ್ನನ್ನು ಕೇಳಲು, ಶುಕನು ಭಯದಿಂದ ತಡವರಿಸುತ್ತ, ರಾವಣನನ್ನು ನೋಡಿ "ಎಲೆ ಮಹಾರಾಜನೆ! ನಾನು ಇಲ್ಲಿಂದ ಹೊರಟನಷ್ಟೆ ? ಆ ಕ್ಷಣವೇ ಸಮುದ್ರದ ಉತ್ತರತೀರಕ್ಕೆ ಹೋಗಿ, ಅಲ್ಲಿ ಸುಗ್ರೀವನನ್ನು ನೋಡಿ, ಮೃದುವಾಗಿಯೂ ಕಿವಿಗಿಂಪಾಗಿಯೂ ಇರುವ ಮಾತಿನಿಂದಲೇ ಆತನಿಗೆ ನೀನು ಹೇಳಿದ ಮಾತುಗಳನ್ನೆಲ್ಲಾ ಕ್ರಮವಾಗಿ ಒಂದನ್ನೂ ತಪ್ಪದೆ ವಿವರವಾಗಿ ಹೇಳಿದೆನು. ಆ ವಾನರರು ನನ್ನನ್ನು ನೋಡಿದ ಮಾತ್ರದಲ್ಲಿಯೇ ಬಹಳ ಕೋಪಗೊಂಡವರಾಗಿ ಆಕಾಶಕ್ಕೆ ಹಾರಿ ನನ್ನನ್ನು ಬಹಳ ಬಿಗಿಯಾಗಿ ಅಲ್ಲಾಡದಂತೆ ಹಿಡಿದುಕೊಂಡರು. ಹಿಡಿದುದು ಮಾತ್ರವೇ ಅಲ್ಲ ! ಮುಷ್ಟಿಗಳಿಂದ ಹೊಡೆದು ನನ್ನ ಸುಳಿವೇ ಇಲ್ಲದಂತೆ ಕೊಲ್ಲುವುದಕ್ಕೂ ಪ್ರಯತ್ನಿಸಿದರು. ಎಲೆ ರಾಕ್ಷಸೇಂದ್ರನೆ ! ನನಗೆ ಅವರೊಡನೆ ಬಾಯೆತ್ತಿ ಮಾತಾಡುವುದಕ್ಕೂ ಅವಕಾಶವಿಲ್ಲದೆ ಹೋಯಿತು. ಇನ್ನು ಅವರಿಂದ ಪ್ರತ್ಯುತ್ತರವನ್ನು ಕೇಳಿ ತಿಳಿಯುವುದೆಲ್ಲಿ ? ಉಸಿರೆತ್ತುವುದಕ್ಕೂ ಸಾಧ್ಯವಿಲ್ಲದೆ ಹೋಯಿತು. ಆ ವಾನರರು ಸಹಜವಾಗಿಯೇ ಬಹಳ ಕೋಪಸ್ವಭಾವವುಳ್ಳವರು ! ಮಹಾಪ್ರಭೂ ! ಇನ್ನು ಹೆಚ್ಚಾಗಿ ಹೇಳಿದುದರಿಂದೇನು ? ವಿರಾಧನನ್ನೂ ಕಬಂಧನನ್ನೂ, ಖರನನ್ನೂ ಕೊಂದ ಪ್ರಸಿದ್ಧ ವೀರನಾದ ಆ ರಾಮನು ಇತ್ತಲಾಗಿ ಸೀತೆಯಿರುವ ಸ್ಥಲವನ್ನೇ ಕುರಿತು ಹೊರಟುಬಂದಿರುವನು . ಇದಕ್ಕಾಗಿ ಮಹಾಧನುರ್ಧಾರಿಯಾದ ಆತನು ಈ ಸಮುದ್ರದಲ್ಲಿ ಸೇತುವನ್ನು ಕಟ್ಟಿ ಅದನ್ನು ದಾಟಿಯೂ ಬಂದನು. ನಮ್ಮ ಕಡೆಯ ರಾಕ್ಷಸರನ್ನು ಹುಲ್ಲಿಗಿಂತಲೂ ಕಡೆಯಾಗಿ ಎಣಿಸಿರುವನು. ಅದೋ ! ಆಗಲೇ ! ನಮ್ಮ ಲಂಕಾದ್ವಾರಕ್ಕೂ ಬಂದು ಸೇರಿಬಿಟ್ಟನು. ಪರ್ವತಗಳಂತೆಯೂ, ಮೇಘಗಳಂತೆಯೂ ಮಹಾಕಾಯವುಳ್ಳ ಅನೇಕ ಋಕ್ಷವಾನರರಸೈನ್ಯವು ಸಹಸ್ರಸಂಖ್ಯೆಯಿಂದ ಸೇರಿ ಈ ಭೂತಲವೆಲ್ಲವನ್ನೂ ವ್ಯಾಪಿಸುವಂತೆ ನಿಂತಿರುವುದು. ಎಲೆ ಮಹಾರಾಜನೆ ! ಅಲ್ಪವಾದ ನಮ್ಮ ರಾಕ್ಷಸ ಸೇನೆಯೆಲ್ಲಿ ? ಮಹತ್ತರವೂ ಮಹಾಪರಾಕ್ರಮವುಳ್ಳದ್ದೂ ಆದ ಆ ವಾನರಸೇನೆಯೆಲ್ಲಿ?

ದೈತ್ಯರಿಗೂ ದೇವತೆಗಳಿಗೂ ಹೇಗೋ ಹಾಗೆ ಎಷ್ಟುಮಾತ್ರವೂ ಸಂಬಂಧವಿಲ್ಲ. ಅದೋ ! ಆ ಸೇನೆಯು ಆಗಲೇ ಕೋಟೆಯನ್ನು ಹತ್ತಿಬರುತ್ತಿರುವುದು. ನೀನು ಸೀತೆಯನ್ನಾದರೂ ಒಪ್ಪಿಸಿಬಿಡು ! ಇಲ್ಲವೇ ಚೆನ್ನಾಗಿ ಯುದ್ಧವನ್ನು ನಡೆಸುವುದಕ್ಕೆ ತಕ್ಕ ಪ್ರಯತ್ನವನ್ನಾದರೂ ಮಾಡು. ಇವೆರಡರಲ್ಲಿ ಯಾವುದಾದರೂ ಒಂದು ಕೆಲಸವನ್ನು ಶೀಘ್ರದಲ್ಲಿಯೇ ನಡೆಸಬೇಕು. ಈಗಮಾತ್ರ ಕಾಲವಿಳಂಬವನ್ನು ಮಾಡಬಾರದು" ಎಂದನು. ಶುಕನು ಹೇಳಿದ ಆ ಮಾತನ್ನು ಕೇಳಿದೊಡನೆ ರಾವಣನಿಗೆ ಮಿತಿಮೀರಿದ ಕೋಪವುಂಟಾಯಿತು. ಅವನ ಕಣ್ಣುಗಳೆಲ್ಲವೂ ಕೆಂಡದಂತೆ ಕೆಂಪಾದುವು. ಆ ಶುಕನನ್ನು ತನ್ನ ದೃಷ್ಟಿಯಿಂದಲೇ ಸುಟ್ಟುಬಿಡುವಂತೆ ನೋಡುತ್ತ, "ಶುಕಾ ! ನೀನೇನು ಹೇಳಿದೆ ? ಸೀತೆಯನ್ನು ರಾಮನಿಗೊಪ್ಪಿಸುವುದೆ ? ದೇವಗಂಧರ್ವದಾನವರೆಲ್ಲರೂ ಒಟ್ಟಾಗಿ ಸೇರಿ ನನ್ನೊಡನೆ ಯುದ್ಧಕ್ಕೆ ಬಂದರೂ, ನಾನು ಸೀತೆಯನ್ನೊಪ್ಪಿಸುವವನಲ್ಲ ! ದೇವಜಾತಿಯೇ ಅಲ್ಲದೆ, ಈ ಚತುರ್ದಶಭುವನಗಳೂ ಒಂದಾಗಿ ಸೇರಿ ಬಂದು ನನ್ನನ್ನು ಹೆದರಿಸಿದರೂ ನಾನು ಸೀತೆಯನ್ನು ಕೊಡುವವನಲ್ಲ ! ವಸಂತಋತುವಿನಲ್ಲಿ ಪುಷ್ಪಿಸಿದ ಗಿಡಗಳಮೇಲೆ ಮದಿಸಿದ ದುಂಬಿಗಳು ಬಂದು ಬೀಳುವಂತೆ ನನ್ನ ಬಾಣಗಳು ಯಾವಾಗ ರಾಮನ ಮೇಲೆ ಬೀಳುವುವೆಂದೇ ನಾನು ಇದಿರುನೋಡುತ್ತಿರುವೆನು. ಬಹುಕಾಲದಿಂದ ಯುದ್ಧವಿಲ್ಲದೆ ಬತ್ತಳಿಕೆಯಲ್ಲಿ ಶಾಂತವಾಗಿ ಮಲಗಿರುವ ಜಾಜ್ವಲ್ಯಮಾನಗಳಾದ ನನ್ನ ಬಾಣಗಳು, ನನ್ನ ಬಿಲ್ಲಿನಿಂದ ತಂಡತಂಡವಾಗಿ ಹೊರಟು, ಕೊಳ್ಳಿಗಳಿಂದ ಕಾಡಾನೆಗಳನ್ನು ಓಡಿಸುವಂತೆ ಯಾವಾಗ ಆ ರಾಮನನ್ನು ಓಡಿಸುವುವೆಂದೇ ನಿರೀಕ್ಷಿಸುತ್ತಿರುವುವು. ಎಲೆ ಚಾರನೆ ? ಆ ರಾಮನು ವಿರಾಧಾದಿರಾಕ್ಷಸರನ್ನು ಕೊಂದವನೆಂದು ಅವನ ಬಲವನ್ನು ಹೇಳಿದೆಯಲ್ಲವೆ ? ಆದರೇನು ? ಸೂರ್ಯನು ಉದಿಸಿಬರುವಾಗಲೇ ಇತರ ಗ್ರಹಗಳ ಕಾಂತಿಯನ್ನಡಗಿಸುವಂತೆ, ನಾನು ದೊಡ್ಡ ಸೇನೆಯೊಡನೆ ಹೋಗಿ ನಿಂತಾಗಲೇ, ಅವನ ಶಕ್ತಿಯು ನಿಶ್ಶೇಷವಾಗಿ ಅಡಗಿ ಹೋಗುವುದೆಂದು ತಿಳಿ ! ನನಗೆ ಸಮುದ್ರದಂತೆ ವೇಗವೂ, ವಾಯುವಿನಂತೆ ಗತಿಯೂ ಇರುವುದೆಂದು ಇನ್ನೂ ಆ ರಾಮನಿಗೆ ತಿಳಿದಿಲ್ಲವೆಂದು ತೋರುತ್ತಿದೆ. ಅದಕ್ಕಾಗಿಯೇ ಅವನು ನನ್ನೊಡನೆ ಯುದ್ಧಕ್ಕೆ ಪ್ರಯತ್ನಿಸುತ್ತಿರುವನು. ವಿಷಸರ್ಪಗಳಂತೆ ನನ್ನ ಬತ್ತಳಿಕೆಯಲ್ಲಿ ಮಲಗಿರುವ ನನ್ನ ಬಾಣಗಳ ರೀತಿಯನ್ನು ಆ ರಾಮನು ಇದುವರೆಗೆ ಕಂಡಿಲ್ಲ. ಅದಕ್ಕಾಗಿಯೇ ಯುದ್ಧಕ್ಕೆ ಬರುತ್ತಿರುವನು. ಆ

ರಾಮನು ಇದುವರೆಗೆ ಯುದ್ಧದಲ್ಲಿ ನನ್ನ ವೀರ್ಯವನ್ನೂ ಕಂಡವನಲ್ಲ. ಶುಕಾ! ಇನ್ನು ಹೆಚ್ಚು ಮಾತಿನಿಂದೇನು ? ಇದೋ ! ಈ ನನ್ನ ಬಿಲ್ಲೇ ವೀಣೆಯು ! ಬಾಣಗಳೆಂಬ ತಾಡನದಂಡಗಳಿಂದ ಅದನ್ನು ನುಡಿಸುವೆನು ನೋಡು ! ಅದರಲ್ಲಿ ಹುಟ್ಟುವ ಧನುಷ್ಟಂಕಾರ ಧ್ವನಿಯೂ, ಯುದ್ಧದಲ್ಲಿ ನನ್ನ ಬಾಣದಿಂದ ನೊಂದು ಕೂಗಿಡುವವರ ರೋದನಧ್ವನಿಯೂ, ಬಾಣಗಳನ್ನು ತಟ್ಟುವಧ್ವನಿಯೂ, ಮಂದ್ರ, ಮಧ್ಯಮ, ತಾರಗಳೆಂಬ ಮೂರು ಸ್ವರಗಳೆಂದು ತಿಳಿ ! ಇಂತಹ ವೀಣಾಧ್ವನಿಯೊಡನೆ ತಾನು ಯುದ್ಧರಂಗವೆಂಬ ರಂಗಸ್ಥಳವನ್ನು ಪ್ರವೇಶಿಸಿ ನಡೆಸುವ ಚಮತ್ಕಾರವನ್ನಾದರೂ ನೋಡು ! ಎಲೆ ಚಾರನೆ ! ಈಗ ಮುಂದೆ ಬರುವ ಯುದ್ಧವು ನನಗೊಂದು ವಿನೋದವೇ ಹೊರತು ಬೇರೆಯಲ್ಲ ! ಸಾವಿರಕಣ್ಣುಳ್ಳ ದೇವೇಂದ್ರನಿಂದಾಗಲಿ, ವರುಣನಿಂದಾಗಲಿ, ಯಮನಿಂದಾಗಲಿ, ಕುಬೇರನಿಂದಾಗಲಿ, ಯುದ್ಧದಲ್ಲಿ ನನ್ನನ್ನು ಎಷ್ಟೋ ಕ್ರೂರ ಬಾಣಗಳಿಂದಾದರೂ ತಡೆಯುವುದು ಸಾಧ್ಯವಲ್ಲ" ಎಂದನು.

ಇಲ್ಲಿಗೆ ಇಪ್ಪತ್ತನಾಲ್ಕನೆಯ ಸರ್ಗವು.

ತಿರುಗಿ ರಾವಣನು ಶುಕಸಾರಣರೆಂಬ ಚಾರರಿಬ್ಬರನ್ನು ಕಳುಹಿಸಿದುದು. ವಿಭೀಷಣನು ಅವರನ್ನು ಹಿಡಿದು ರಾಮನಿಗೊಪ್ಪಿಸಿದುದು. ರಾಮನು ಅವರಲ್ಲಿ ಕರುಣೆಯಿಂದ ಅವರಿಗೆ ವಾನರಸೈನ್ಯವೆಲ್ಲವನ್ನೂ ತೋರಿಸಿ ಅವರನ್ನು ಬಿಡಿಸಿ ಕಳುಹಿಸಿದುದು. ಅವರು ತಾವು ಹೋಗಿಬಂದ ವೃತ್ತಾಂತವನ್ನು ರಾವಣನಿಗೆ ತಿಳಿಸಿದುದು.

ದಶರಥಪುತ್ರನಾದ ರಾಮನು ವಾನರಸೈನ್ಯದೊಡನೆ ಸಮುದ್ರವನ್ನೂ ದಾಟಿ ಬಂದನೆಂಬ ಸುದ್ದಿಯನ್ನು ಕೇಳಿ ರಾವಣನು, ತನ್ನ ಮಂತ್ರಿಗಳಾದ ಶುಕಸಾರಣರಿಬ್ಬರನ್ನೂ ನೋಡಿ "ಎಲೈ ಮಂತ್ರಿಗಳೇ ? ವಾನರಸೈನ್ಯವೆಲ್ಲವೂ ದುಸ್ತರವಾದ ಆ ಸಮುದ್ರವನ್ನು ದಾಟಿ ಬಂದುಬಿಟ್ಟಿರುವುದು, ಸಮುದ್ರದಲ್ಲಿ ಸೇತುಬಂಧನವೆಂಬುದನ್ನು ನಾವು ಹಿಂದೆ ಯಾವಾಗಲೂ ಕಂಡು ಕೇಳಿದುದೇ ಇಲ್ಲ. ರಾಮನು ಸಮುದ್ರದಲ್ಲಿಯೂ ಸೇತುವನ್ನು ಕಟ್ಟಿರುವನಂತೆ ! ಆದರೆ ಇನ್ನೂ ನನಗೆ ಆ ವಿಷಯದಲ್ಲಿ ನಂಬಿಕೆಯು ಹುಟ್ಟಿಲ್ಲ. ಮಹಾಸಮುದ್ರವೆಂದರೇನು? ಸೇತುವನ್ನು ಕಟ್ಟುವುದೆಂದರೇನು ? ಅದು ಹೇಗಾದರೂ ಹೋಗಲಿ ! ಈಗ ಮುಖ್ಯವಾಗಿ ನನಗೆ ಆ ವಾನರಸೈನ್ಯವು ಯಾವ ರೀತಿಯಲ್ಲಿರುವುದೆಂದು ಚೆನ್ನಾಗಿ ತಿಳಿಯಬೇಕಾಗಿದೆ. ಆದುದರಿಂದ

ನೀವು ಆ ವಾನರರಿಗೆ ತಿಳಿಯದಂತೆ ರಹಸ್ಯವಾಗಿ ಅವರ ಸೈನ್ಯವನ್ನು ಪ್ರವೇಶಿಸಿ, ಆ ವಾನರಸೇನೆಯ ಪರಿಮಾಣವನ್ನೂ, ಅವರ ವೀರ್ಯವನ್ನೂ, ಅವರಲ್ಲಿ ಪ್ರಮುಖರಾರೆಂಬುದನ್ನೂ ರಾಮನಿಗೂ ಸುಗ್ರೀವನಿಗೂ ಯಾರುಯಾರು ಮಂತ್ರಿಗಳೆಂಬುದನ್ನೂ ತಿಳಿದು ಬರಬೇಕು. ಮತ್ತು ಆ ವಾನರ ಸೇನೆಯಲ್ಲಿ ಯುದ್ಧಕ್ಕೆ ಮುಂದಾಗಿ ನಿಲ್ಲುವ ಧೀರರಾರೆಂಬುದನ್ನೂ ತಿಳಿದು ಬರಬೇಕು. ಇದಲ್ಲದೆ ಆ ಮಹಾಸಮುದ್ರದಲ್ಲಿ ಸೇತುವನ್ನು ಕಟ್ಟಿದ ರೀತಿಯೇನೆಂಬುದನ್ನೂ ಅವರ ಸೇನಾನಿವೇಶಸ್ಥಳವನ್ನೂ, ಈಗ ರಾಮನು ಮಾಡುತ್ತಿರುವ ಪ್ರಯತ್ನವನ್ನೂ, ಅವನ ವೀರ್ಯವೆಷ್ಟೆಂಬುದನ್ನೂ ಅವನ ಆಯುಧಗಳ ರೀತಿಯನ್ನೂ ಲಕ್ಷ್ಮಣನ ಪರಾಕ್ರಮವನ್ನೂ ಇದ್ದುದಿದ್ದಂತೆ ನೀವು ತಿಳಿದು ಬರಬೇಕು ಮತ್ತು ಮಹಾತೇಜಸ್ವಿಗಳಾದ ಆ ವಾನರರಿಗೆ ಪ್ರಧಾನ ಸೇನಾಪತಿ ಯಾರೆಂಬುದನ್ನೂ ಕಂಡುಕೊಳ್ಳಬೇಕು. ನೀವಿಬ್ಬರೂ ಈಗಲೇ ಹೋಗಿ ಈ ವಿಷಯಗಳೆಲ್ಲವನ್ನೂ, ಯಥಾಸ್ಥಿತವಾಗಿ ತಿಳಿದುಬನ್ನಿರಿ!" ಎಂದು ನಿಯಮಿಸಿದನು. ಶುಕಸಾರಣರಿಬ್ಬರೂ ರಾವಣಾಜ್ಞೆಯಂತೆ ಆಗಲೇ ಲಂಕೆಯನ್ನು ಬಿಟ್ಟು ಹೊರಟು ತಮ್ಮ ಮಾಯೆಯಿಂದ ಕಪಿಗಳಂತೆಯೇ ರೂಪವನ್ನು ಧರಿಸಿ ವಾನರಸೈನ್ಯಕ್ಕೆ ನುಗ್ಗಿದರು. ಆ ರಾಕ್ಷಸರಿಬ್ಬರೂ ಅಲ್ಲಿ ಹೋಗಿ ನೋಡುವಾಗಲೇ ಭಯದಿಂದ ರೋಮಾಂಚವನ್ನು ಹುಟ್ಟಿಸುವಂತೆ ಕೊನೆಮೊದಲಿಲ್ಲದೆ ನಿಂತಿದ್ದ ಆ ದೊಡ್ಡ ಸೈನ್ಯವನ್ನು ನೋಡಿ ಆಶ್ಚರ್ಯದಿಂದ ಬೆರಗಾಗಿ, ಅದರ ಪರಿಮಾಣವೆಷ್ಟೆಂದು ತಿಳಿಯಲಾರದೆ ಹೋದರು. ಗವಿಗಳಲ್ಲಿಯೂ, ಕಮರಿಗಳಲ್ಲಿಯೂ ಗುಹೆಗಳಲ್ಲಿಯೂ, ಸಮುದ್ರ ತೀರಗಳಲ್ಲಿಯೂ, ಕಾಡುಗಳಲ್ಲಿಯೂ, ಉದ್ಯಾನವನವಲ್ಲಿಯೂ ಚಲ್ಲಾಚದರಾಗಿ ಸೇರಿಕೊಂಡಿದ್ದುದರಿಂದ ಅವರು ಅವನ್ನು ಲೆಕ್ಕ ಮಾಡುವುದಕ್ಕೂ ಸಾಧ್ಯವಿಲ್ಲದೆಹೋಯಿತು. ಅದಲ್ಲದೆ ಆ ವಾನರರಲ್ಲಿ ಇನ್ನೂ ಸಮುದ್ರವನ್ನು ದಾಟಿ ಬರುತ್ತಿದ್ದರು! ಆಗಲೇ ದಾಟಿ ಬಂದವರು ಕೆಲವರು ! ದಾಟುವುದಕ್ಕೆ ಉದ್ಯೋಗಿಸಿದ್ದವರು ಕೆಲವರು. ಮೊದಲೇ ಬಂದಿದ್ದವರು ಕೆಲವರು ! ಆಗಾಗ ಇಳಿಯುತ್ತಿದ್ದವರು ಕೆಲವರು ! ಆ ಸೈನ್ಯವು ನಾನಾದಿಕ್ಕುಗಳಿಂದಲೂ, ನಾನಾರೀತಿಯಿಂದ ಬಂದು ಸೇರುತ್ತ ಆಗಾಗ ಅತಿಭಯಂಕರವಾದ ಸಿಂಹನಾದವನ್ನೂ ಮಾಡುತ್ತಿತ್ತು. ಮಹಾಬಲಸಂಪನ್ನವಾಗಿಯೂ, ಅಕ್ಷೋಭ್ಯವಾಗಿಯೂ ಇದ್ದ ಆ ವಾನರಸೈನ್ಯವು ಬೇರೊಂದು ಸಮುದ್ರವೋ ಎಂಬಂತೆ ಈ ರಾಕ್ಷಸರಿಗೆ ಕಾಣಿಸಿತು. ಇಷ್ಟರಲ್ಲಿ ಈ ರಾಕ್ಷಸರಿಬ್ಬರೂ ವೇಷಧಾರಿಗಳಾಗಿ ಬಂದಿರುವರೆಂಬ ಸಂಗತಿಯೂ ವಿಭೀಷಣನಿಗೆ ತಿಳಿದುಹೋಯಿತು. ಆಗಲೇ ವಿಭೀಷಣನು ಆ ಶುಕ

*

ಸಾರಣರಿಬ್ಬರನ್ನೂ ಹಿಡಿದು ತಂದು ರಾಮನ ಮುಂದೆ ನಿಲ್ಲಿಸಿ, "ರಾಮಾ! ಇವರಿಗೆ ಶುಕಸಾರಣರೆಂದು ಹೆಸರು. ಇವರಿಬ್ಬರೂ ನಮ್ಮ ರಹಸ್ಯವನ್ನು ತಿಳಿದುಕೊಂಡು ಹೋಗುವುದಕ್ಕಾಗಿ ಕಪಿವೇಷದಿಂದ ಗೂಢಚಾರರಾಗಿ ಬಂದಿರುವರು" ಎಂದನು. ಇದನ್ನು ಕೇಳಿದೊಡನೆ, ಶುಕಸಾರಣರಿಬ್ಬರೂ ತಮ್ಮ ಪ್ರಾಣದಮೇಲೆ ಆಸೆಯನ್ನು ಬಿಟ್ಟು, ಭಯದಿಂದ ನಡುಗುತ್ತಾ, ರಾಮನ ಮುಂದೆ ಕೈಮುಗಿದು ನಿಂತು "ಎಲೆ ಸೌಮ್ಯನೆ! ನಾವಿಬ್ಬರೂ ರಾವಣಾಜ್ಞೆಯಿಂದ ನಿನ್ನ ಸೈನ್ಯದ ಪರಿಮಾಣವೆಷ್ಟೆಂದು ತಿಳಿದುಕೊಂಡು ಹೋಗುವುದಕ್ಕಾಗಿ ಗೂಢಚಾರರಾಗಿ ಇಲ್ಲಿಗೆ ಬಂದೆವು. ಇದು ನಿಜವು" ಎಂದನು. ರಾಮನು ಮಹಾತ್ಮನಾಗಿಯೂ, ಸರ್ವಭೂತಹಿತಪರನಾಗಿಯೂ, ಕೃಪೆಯೇ ಸಹಜಸ್ವಭಾವವುಳ್ಳವನಾಗಿಯೂ, ಇದ್ದುದರಿಂದ, ಶತ್ರುಗಳಾಗಿ ಬಂದ ರಾಕ್ಷಸರಲ್ಲಿಯೂ, ವಾತ್ಸಲ್ಯವನ್ನು ತೋರಿಸುತ್ತ, ಅವರ ಮಾತನ್ನು ಅಕ್ಕರೆಯಿಂದ ಕೇಳಿ, ರಾವಣನ ಮಂದಬುದ್ಧಿಯನ್ನು ಕುರಿತು ನಸುನಗುತ್ತ, ಅವರನ್ನು ಕುರಿತು "ಎಲೆ ರಾಕ್ಷಸರೆ! ಹೆದರಬೇಡಿರಿ! ನೀವು ನಿಮ್ಮ ಪ್ರಭುವಿನ ಆಜ್ಞೆಯಂತೆ, ಈ ನಮ್ಮ ಸೈನ್ಯವೆಲ್ಲವನ್ನೂ ಚೆನ್ನಾಗಿ ನೋಡಿ, ನಮ್ಮನ್ನೂ ಪರೀಕ್ಷಿಸಿ, ನಿಮ್ಮ ಕಾರ್ಯವೆಲ್ಲವನ್ನೂ ಪೂರ್ಣವಾಗಿ ಮುಗಿಸಿಕೊಂಡಿದ್ದ ಪಕ್ಷದಲ್ಲಿ, ಈಗಲೂ ನೀವು ಯಥೇಚ್ಛವಾಗಿ ನಿಮ್ಮ ಪಟ್ಟಣಕ್ಕೆ ತಿರುಗಿ ಹೋಗಬಹುದು. ಹಾಗಿಲ್ಲದೆ ಇಲ್ಲಿ ನಿಮಗೆ ತಿಳಿಯಬೇಕಾದ ಅಂಶವೇನಾದರೂ ಉಳಿದಿದ್ದರೆ, ಮತ್ತೊಮ್ಮೆ ನೀವು ಚೆನ್ನಾಗಿ ನೋಡಿಯೂ ಬರಬಹುದು. ನಿಮಗೆ ಸಮ್ಮತವಾದರೆ ಈ ವಿಭೀಷಣನೇ ನಿಮ್ಮನ್ನು ಕರೆದುಕೊಂಡು ಹೋಗಿ ತೋರಿಸುವನು. ನೀವು ನನ್ನ ಕೈಗೆ ಸಿಕ್ಕಿದ ಮಾತ್ರಕ್ಕೆ ನಿಮ್ಮ ಪ್ರಾಣವುಳಿಯದೆಂದು ಭಯಪಡಬೇಕಾದುದಿಲ್ಲ. ಆಯುಧವಿಲ್ಲದವರನ್ನಾಗಲಿ, ದೂತರಾಗಿ ಬಂದವರನ್ನಾಗಲಿ ಯಾವಾಗಲೂ ಕೊಲ್ಲಬಾರದು. ಈ ಎರಡು ವಿಧದಿಂದಲೂ ನೀವು ಅವಧ್ಯರಾಗಿರುವಿರಿ! ಹೆದರಬೇಡಿರಿ!" ಎಂದು ಹೇಳಿ, ಆಮೇಲೆ ವಿಭೀಷಣನನ್ನು ಕುರಿತು "ವಿಭೀಷಣಾ! ಇವರನ್ನು ಬಿಟ್ಟುಬಿಡು! ಇವರು ಸಾಮಾದ್ಯುಪಾಯಗಳಿಂದ ಶತ್ರುಪಕ್ಷವನ್ನು ಭೇದಿಸುವುದರಲ್ಲಿ ಸಮರ್ಥರೆಂಬುದೇನೋ ನಿಜವು. ಈಗ ಆ ಕಾರ್ಯಕ್ಕಾಗಿಯೇ ನಮ್ಮಲ್ಲಿ ಬಂದವರಾಗಿದ್ದರೂ, ಅಭಯವನ್ನು ಕೇಳುತ್ತಿರುವರು. ಆದುದರಿಂದ ಇವರನ್ನು ಬಿಟ್ಟುಬಿಡು" ಎಂದು ಹೇಳಿ, ತಿರುಗಿ ಆ ಚಾರರನ್ನು ಕುರಿತು "ಎಲೆ ರಾಕ್ಷಸರೇ! ನೀವು ಇಲ್ಲಿಂದ ಲಂಕೆಗೆ ಹೋಗಿ, ನಿಮ್ಮ ಪ್ರಭುವಾದ ರಾವಣನೊಡನೆ ಈಗ ನಾನು ಹೇಳುವ ಈ ಮಾತು

ಗಳನ್ನು ಹೀಗೆಯೇ ಹೇಳಬೇಕು. " "ರಾವಣಾ! ನೀನು ಯಾವ ಭುಜಬಲವನ್ನು ನಂಬಿ ನನ್ನ ಪತ್ನಿಯಾದ ಸೀತೆಯನ್ನು ಕದ್ದು ತಂದೆಯೋ ಆ ನಿನ್ನ ಬಲವನ್ನು ಈಗ ನೀನು ನಿನ್ನ ಸೈನ್ಯಗಳೊಡನೆಯೂ, ನಿನ್ನ ಬಂಧುವರ್ಗಗಳೊಡನೆಯೂ ಯಥೇಷ್ಟವಾಗಿ ತೋರಿಸಬಹುದು! ನಾಳೆ ಪ್ರಾತಃಕಾಲದಲ್ಲಿ ನಿನ್ನ ಲಂಕಾಪುರವು, ಅದರ ಕೋಟೆ ಕೊತ್ತಲಗಳೊಡನೆಯೂ, ಪುರದ್ವಾರಗಳೊಡನೆಯೂ, ಅಲ್ಲಿನ ರಾಕ್ಷಸಸೈನ್ಯಗಳೊಡನೆಯೂ, ನನ್ನ ಬಾಣಗಳಿಂದ ಧೂಳಿದ್ದು ಹೋಗುವುದನ್ನು ನೋಡು, ರಾವಣಾ! ನಾಳೆ ಬೆಳಗಾಗುವಷ್ಟರಲ್ಲಿ, ವಜ್ರಧಾರಿಯಾದ ಇಂದ್ರನು ದಾನವರ ಮೇಲೆ ತನ್ನ ವಜ್ರವನ್ನು ಪ್ರಯೋಗಿಸುವಂತೆ, ನಾನು ಸೇನಾಸಮೇತನಾದ ನಿನ್ನಮೇಲೆ ಭಯಂಕರವಾದ ನನ್ನ ಕೋಪವನ್ನು ಪ್ರಯೋಗಿಸುವ ರೀತಿಯನ್ನಾದರೂ ನೋಡು! ಇನ್ನು ನೀನು ನಿನ್ನ ಸೈನ್ಯಗಳೊಡನೆ ಸಿದ್ಧನಾಗಿರು" ಎಂದು ನಾನು ಹೇಳಿದುದಾಗಿ ತಿಳಿಸಿರಿ!" ಎಂದನು　ಹೀಗೆ ರಾಮನು ರಾವಣನಿಗೆ ತನ್ನ ಸಂದೇಶವನ್ನು ಹೇಳಲು ಶುಕಸಾರಣರಿಬ್ಬರೂ ರಾಮನ ದಯಾಸ್ವಭಾವಕ್ಕೂ, ಆವನ ಧರ್ಮವತ್ಸಲತೆಗೂ ಸಂತೋಷಗೊಂಡು ರಾಮನನ್ನು ಜಯಜಯಶಬ್ದದಿಂದ ಹೊಗಳಿ, ಆಗಲೇ ಹಿಂತಿರುಗಿ ರಾವಣನಬಳಿಗೆ ಬಂದರು. ಅಲ್ಲಿ ಅವರಿಬ್ಬರೂ ರಾವಣನನ್ನು ನೋಡಿ "ಎಲೆ ರಾಕ್ಷಸೇಶ್ವರನೆ! ನಾವು ಇಲ್ಲಿಂದ ಹೋದೊಡನೆ, ವಿಭೀಷಣನು ನಮ್ಮನ್ನು ಹಿಡಿದುಕೊಂಡು, ವಧಾರ್ಹರನ್ನಾಗಿ ರಾಮನ ಮುಂದೆ ತಂದು ನಿಲ್ಲಿಸಿದನು. ರಾಮನು ಧರ್ಮಾತ್ಮನಾದುದರಿಂದ, ದೂತವಧವು ಕೂಡ ದೆಂದು ವಿಭೀಷಣನಿಗೆ ಹೇಳಿ, ನಮ್ಮನ್ನು ಬಿಡಿಸಿ ಕಳುಹಿಸಿಬಿಟ್ಟನು. ಆ ರಾಮನು ಮಹಾಪ್ರತಾಪವುಳ್ಳವನಾದುದರಿಂದ, ನಮ್ಮ ವಿಷಯದಲ್ಲಿ ನಿರ್ಭಯನಾಗಿರುವನು. ಎಲೆ ಮಹಾರಾಜನೆ! ಮುಖ್ಯವಾಗಿ ಆ ಶತ್ರುಪಕ್ಷದಲ್ಲಿ ಮಹಾಶೂರರಾಗಿಯೂ, ಸರ್ವಾಸ್ತ್ರವಿಶಾರದರಾಗಿಯೂ, ದೃಢಪರಾಕ್ರಮವುಳ್ಳವರಾಗಿಯೂ ಇರುವ ನಾಲ್ಕು ಮಂದಿ ಪ್ರಧಾನ ಪುರುಷರಿರುವರು. ಒಬ್ಬೊಬ್ಬರೂ ದಿಕ್ಪಾಲಕರಂತಿರುವರು. ಅವರು ಯಾರೆಂದು ಕೇಳುವೆಯಾ? ಶ್ರೀಮಂತನಾಗಿಯೂ, ದಶರಥಪುತ್ರನಾಗಿಯೂ ಇರುವ ಆ ರಾಮನೊಬ್ಬನು! ಅವನ ತಮ್ಮನಾದ ಲಕ್ಷ್ಮಣನೊಬ್ಬನು! ನಿನ್ನ ಒಡಹುಟ್ಟಿದವನಾದ ವಿಭೀಷಣನೊಬ್ಬನು! ಮ ಹಾ ತೇ ಜ ಸ್ವಿ ಯಾ ಗಿ ಯೂ, ಮಹೇಂದ್ರಪರಾಕ್ರಮವುಳ್ಳವನಾಗಿಯೂ ಇರುವ ಸುಗ್ರೀವನೊಬ್ಬನು! ಹೀಗೆ ಪುರುಷಸಿಂಹರೆನಿಸಿಕೊಂಡ ಈ ನಾಲ್ವರೂ ನಮ್ಮ ಲಂಕೆಯನ್ನು ಮರ್ದಿಸುವುದಕ್ಕಾಗಿ

ಒಂದೇ ಕಡೆಯಲ್ಲಿ ಸೇರಿ ಐಕಮತ್ಯದಿಂದಿರುವರು. ಇತರ ವಾನರಸೈನ್ಯಗಳೆಲ್ಲವೂ ಹಾಗಿರಲಿ! ಈ ನಾಲ್ಕು ಮಂದಿಯೇ ನಮ್ಮ ಲಂಕೆಯನ್ನು, ಇದರ ಪ್ರಾಕಾರಗಳೊಡನೆ ತಮ್ಮ ಬಲದಿಂದ ಸಮುದ್ರದಲ್ಲಿ ಕಿತ್ತೆಸೆಯಬಲ್ಲರು. ಕೊನೆಗೆ ಆ ಮೂವರೂ ಹಾಗಿರಲಿ! ಆ ರಾಮನ ರೂಪವನ್ನೂ, ಆತನ ಆಯುಧಗಳನ್ನೂ ನೋಡಿದರೆ ನಮ್ಮ ಈ ಲಂಕೆಯನ್ನು ಧ್ವಂಸಮಾಡುವುದಕ್ಕೆ ಅವನೊಬ್ಬನೇ ಸಾಕೆಂದೂ ನಮಗೆ ತೋರಿರುವುದು. ಎಲೆ ರಾಜೇಂದ್ರನೆ! ನಮ್ಮ ಪುರದ್ವಾರಕ್ಕೆ ಬಂದು ನಿಂತಿರುವ ಆ ವಾನರಸೇನೆಯನ್ನು ಇದಿರಿಸಿ ನಿಲ್ಲಬೇಕೆಂದರೆ, ಇಂದ್ರನೊಡಗೂಡಿದ ದೇವಾಸುರರಿಗೂ ಸಾಧ್ಯವಲ್ಲ! ಎಲೆ ಮಹಾರಾಜನೆ! ಇನ್ನು ಹೆಚ್ಚಾಗಿ ಹೇಳಿದುದರಿಂದೇನು? ಹತ್ತು ಯೋಜನಗಳ ವಿಸ್ತಾರಕ್ಕೂ, ನೂರುಯೋಜನಗಳ ಉದ್ದಕ್ಕೂ ಅವರು ಮಹಾಸಮುದ್ರದಲ್ಲಿಯೇ ಸೇತುವನ್ನು ಕಟ್ಟಿಬಿಟ್ಟಿರುವರು. ಆ ಸೇತುವಿನ ಮಾರ್ಗವಾಗಿಯೇ ವಾನರಸೇನೆಯೆಲ್ಲವೂ ಸಮುದ್ರವನ್ನು ದಾಟಿಯೂ ಬಂದುಬಿಟ್ಟಿತು. ರಾಮನು ಆ ಸೇನೆಯನ್ನು ತಂದು ದಕ್ಷಿಣತೀರದಲ್ಲಿರಿಸಿರುವನು. ಸೈನ್ಯಗಳಲ್ಲಿ ಕೆಲವು ದಾಟಿ ಬಂದಿರುವುವು! ಈಗಲೂ ಕೆಲವು ದಾಟುತ್ತಿರುವುವು! ಆ ಸೈನ್ಯಕ್ಕೆ ಕೊನೆ ಯಾವುದೆಂದೇ ತಿಳಿಯಲಿಲ್ಲ. ಆ ವಾನರ ಸೈನ್ಯದಲ್ಲಿ ಒಬ್ಬೊಬ್ಬರೂ ಯುದ್ಧೋತ್ಸಾಹದಿಂದಲೇ ನಿಂತಿರುವರು! ಒಬ್ಬೊಬ್ಬರೂ ದೃಢವಾದ ಸಂಕಲ್ಪವನ್ನೇ ಹಿಡಿದು ಬಂದಿರುವರು. ಒಬ್ಬೊಬ್ಬರೂ ಹರ್ಷದಿಂದ ಉಬ್ಬುತ್ತಿರುವರು. ಆದುದರಿಂದ ಎಲೈ ಮಹಾರಾಜನೆ! ಅವರೊಡನೆ ನಿನಗೆ ಇನ್ನುಮೇಲೆ ವಿರೋಧವು ಸಾಕು! ಕೋಪವನ್ನು ಬಿಟ್ಟುಬಿಡು! ಈಗಲೂ ರಾಮನಿಗೆ ಸೀತೆಯನ್ನೊಪ್ಪಿಸಿ ಬಿಡು!" ಎಂದನು.

ಇಲ್ಲಿಗೆ ಇಪ್ಪತ್ತೈದನೆಯ ಸರ್ಗವು.

ರಾವಣನು ವಾನರಸೇನೆಯನ್ನು ನೋಡುವುದಕ್ಕಾಗಿ ಲಂಕೆಯಲ್ಲಿ ಮಹೋನ್ನತವಾದ ಒಂದು ಉಪ್ಪರಿಗೆಯನ್ನೇರಿದುದು. ಅಲ್ಲಿ ಸಾರಣನು ರಾವಣನಿಗೆ ವಾನರಸೇನೆಯಲ್ಲಿದ್ದ ಯೂಥಪತಿಗಳನ್ನು ಬೇರೆಬೇರೆಯಾಗಿ ತೋರಿಸಿ, ಅವರವರ ಬಲಪರಾಕ್ರಮಾದಿಗಳನ್ನೂ ತಿಳಿಸಿದುದು.

ಸಾರಣನು ಹೀಗೆ ನಿರ್ಭಯವಾಗಿ ನಿಂತು ಹಿತವಾಕ್ಯವನ್ನು ಹೇಳುತ್ತಿರುವಾಗಲೇ ರಾವಣನು ಕೋಪದಿಂದ ಆತನನ್ನು ನಿಂದಿಸುತ್ತ, "ಸಾರಣಾ! ಸಾಕು

ಸುಮ್ಮನಿರು! ದೇವಗಂಧರ್ವದಾನವರೆಲ್ಲರೂ ಒಂದಾಗಿ ಸೇರಿ ನನ್ನೊಡನೆ ಯುದ್ಧಕ್ಕೆ ಬಂದರೂ, ಸಮಸ್ತಲೋಕಗಳೂ ನನ್ನನ್ನು ಹೆದರಿಸಿದರೂ, ಎಷ್ಟು ಮಾತ್ರಕ್ಕೂ ನಾನು ಸೀತೆಯನ್ನು ಬಿಡುವವನಲ್ಲ! ನೀನು ಕೇವಲಸೌಮ್ಯನೇ ಹೊರತು ಶೂರನಲ್ಲ. ಆ ವಾನರ ಪ್ರಹಾರಕ್ಕೆ ಸಿಕ್ಕಿಬಂದುದರಿಂದಲೇ ನೀನು ಬಹಳ ಭಯಪಟ್ಟು ನಡುಗುವಂತಿದೆ! ಆ ಭಯಕ್ಕಾಗಿಯೇ ಈಗ ನಿನಗೆ ಸೀತೆಯನ್ನು ಹಿಂತಿರುಗಿ ರಾಮನಿಗೆ ಕೊಟ್ಟುಬಿಡುವುದೇ ಮೇಲೆಂದೂ ತೋರಿದಂತಿದೆ! ಅಯ್ಯೋ ಹುಚ್ಚನೆ! ನನ್ನನ್ನು ಯುದ್ಧದಲ್ಲಿ ಜಯಿಸತಕ್ಕ ಶತ್ರುವು ಲೋಕದಲ್ಲಿ ಬೇರೊಬ್ಬನುಂಟೆ?" ಎಂದನು. ಹೀಗೆ ರಾಕ್ಷಸೇಶ್ವರನಾದ ರಾವಣನು ಸಾರಣನನ್ನು ಪರುಷವಾಕ್ಯದಿಂದ ಧಿಕ್ಕರಿಸಿ, ಆ ವಾನರಸೈನ್ಯವನ್ನು ತಾನೇ ಕಣ್ಣಾರೆ ನೋಡಬೇಕೆಂಬ ಕುತೂಹಲವುಳ್ಳವನಾಗಿ ಆಗಲೇ ಅಲ್ಲಿಂದ ಹೊರಟು, ಹಿಮದಂತೆ ಬಿಳುಪಾಗಿಯೂ, ಅನೇಕ ತಾಳವೃಕ್ಷಗಳ ಪ್ರಮಾಣದಷ್ಟು ಮಹೋನ್ನತವಾಗಿಯೂ ಇದ್ದ ಒಂದು ಪ್ರಾಸಾದವನ್ನೇರಿದನು. ಕೋಪೋದ್ರಿಕ್ತನಾದ ಆ ರಾವಣನು ಶುಕಸಾರಣರೊಡಗೂಡಿ ಪ್ರಾಸಾದದಮೇಲೆ ನಿಂತು, ಅಲ್ಲಿಂದ ಸಮುದ್ರವನ್ನೂ, ಪರ್ವತಗಳನ್ನೂ, ಕಾಡುಗಳನ್ನೂ ನೋಡುತ್ತ, ತ್ರಿಕೂಟಪರ್ವತಕ್ಕೆ ಕೆಳಗಿದ್ದ ಭೂಪ್ರದೇಶವೆಲ್ಲವೂ ವಾನರಸೇನೆಯಿಂದಲೇ ನಿಬಿಡವಾಗಿ ತುಂಬಿ ಹೋಗಿರುವುದನ್ನೂ ಕಂಡನು. ಹೀಗೆ ಕೊನೆಮೊದಲಿಲ್ಲದೆ ಅಸಂಖ್ಯಾತವಾಗಿದ್ದ ಆ ದೊಡ್ಡವಾನರಸೇನೆಯನ್ನು ನೋಡಿ ರಾವಣನು, ಸಾರಣನನ್ನು ಕುರಿತು "ಸಾರಣಾ! ಈ ವಾನರರ ಗುಂಪಿನಲ್ಲಿ ಬಹಳ ಶೂರರೆನಿಸಿದವರಾರು? ಯಾರಿಗೆ ಹೆಚ್ಚು ಬಲವುಂಟು? ಇವರಲ್ಲಿ ಯಾರ ಮಾತನ್ನು ಸುಗ್ರೀವನು ವಿಶೇಷವಾಗಿ ನಂಬುವನು? ಇವರಲ್ಲಿ ಪ್ರಧಾನಯೂಥಪತಿಗಳಾರು? ಸೇನಾಪತಿಗಳಾದ ಕಪಿಗಳಾರು? ಇವೆಲ್ಲವನ್ನೂ ಯಥಾಸ್ಥಿತವಾಗಿ ನನಗೆ ತಿಳಿಸು!" ಎಂದು ಕೇಳಿದನು. ಈ ಮಾತನ್ನು ಕೇಳಿ ಸಾರಣನು, ಆ ವಾನರಪ್ರಮುಖರ ಬಲಪರಾಕ್ರಮಗಳನ್ನು ಚೆನ್ನಾಗಿ ತಿಳಿದವನಾದ್ದುದರಿಂದ, ರಾವಣನಿಗೆ ಅವರವರನ್ನು ಬೇರೆಬೇರೆಯಾಗಿ ತಿಳಿಸುತ್ತ, ಆತನನ್ನು ಕುರಿತು "ಎಲೆ ಮಹಾರಾಜನೆ! ಅದೋ! ಅಲ್ಲಿ ಒಬ್ಬ ವಾನರನು ನಮ್ಮ ಲಂಕೆಗಿದಿರಾಗಿ ಸಿಂಹನಾದವನ್ನು ಮಾಡುತ್ತ, ಲಕ್ಷಯೂಥಪತಿಗಳಿಂದ ಪರಿವೃತನಾಗಿ ನಿಂತಿರುವುದನ್ನು ನೋಡಿದೆಯಾ? ಅವನ ಮಹಾಧ್ವನಿಗೆ ನಮ್ಮ ಲಂಕೆಯೆಲ್ಲವೂ ತೋರಣಪ್ರಾಕಾರಗಳೊಡನೆಯೂ, ಪರ್ವತಾರಣ್ಯಗಳೊಡ

ನೆಯೂ, ಪುರೋಪವನಗಳೊಡನೆಯೂ ನಡುಗುವಂತಿರುವುದು ನೋಡು. ಅವನಿಗೆ ನೀಲನೆಂದು ಹೆಸರು. ವಾನರೇಂದ್ರನಾಗಿಯೂ, ಮಹಾತ್ಮನಾಗಿಯೂ ಇರುವ ಸುಗ್ರೀವನ ಸಮಸ್ತಸೈನ್ಯಕ್ಕೂ ಈತನೇ ಪ್ರಧಾನಸೇನಾನಾಯಕನು. ಅದೋ! ಅಲ್ಲಿ ತೋಳುಗಳನ್ನು ಮೇಲಕ್ಕೆತ್ತಿ ನೆಲದಮೇಲೆ ಕಾಲೂರಿ ನಿಂತಿರುವ ವೀರ್ಯವಂತನಾದ ಮತ್ತೊಬ್ಬ ವಾನರನು ನಮ್ಮ ಲಂಕೆಗಿದಿರಾಗಿ ಮೇಲೆಮೇಲೆ ಕೋಪದಿಂದ ಉಬ್ಬುವುದನ್ನೂ, ಪರ್ವತಶಿಖರದಂತಿರುವ ಆತನ ಮಹೋನ್ನತಾಕಾರವನ್ನೂ, ಕಮಲಕಿಂಜಲ್ಕದಂತಿರುವ ಅವನ ಮೈಬಣ್ಣವನ್ನೂ ನೋಡಿದೆಯಾ? ಆ ವಾನರಯೂಥಪತಿಯು ಆಗಾಗ ಕೋಪದಿಂದ ತನ್ನ ಬಾಲವನ್ನೆತ್ತಿ ಬಡಿಯುತ್ತಿರುವಾಗ, ಅದರಿಂದುಟಾದ ಮಹಾಧ್ವನಿಯೇ ಹತ್ತುದಿಕ್ಕುಗಳಲ್ಲಿಯೂ ಪ್ರತಿಧ್ವನಿಯನ್ನುಂಟುಮಾಡುವುದನ್ನು ನೋಡಿದೆಯಾ? ಇವನನ್ನೇ ವಾನರರಾಜನಾದ ಸುಗ್ರೀವನು ಯೌವರಾಜ್ಯದಲ್ಲಿ ಇರಿಸಿರುವನು. ಇವನಿಗೆ ಅಂಗದನೆಂದು ಪ್ರಸಿದ್ಧವಾದ ಹೆಸರು. ಇವನು ವಾಲಿಗೆ ತಕ್ಕ ಪುತ್ರನು! ಸುಗ್ರೀವನಿಗೆ ಬಹಳ ಪ್ರೇಮಪಾತ್ರನು. ದೇವೇಂದ್ರನಿಗೆ ವರುಣನು ಹೇಗೋ, ಹಾಗೆ, ಇವನು ರಾಮನಿಗಾಗಿ ತನ್ನ ಪರಾಕ್ರಮದ ಸರ್ವಸ್ವವನ್ನೂ ತೋರಿಸಬೇಕೆಂದು ಪ್ರಯತ್ನಿಸಿರುವನು. ಹಿಂದೆ ಮಹಾವೇಗಶಾಲಿಯಾದ ಹನುಮಂತನು ರಾಮನ ಕಾರ್ಯಕ್ಕಾಗಿ ಇಲ್ಲಿಗೆ ಬಂದು ಸೀತೆಯನ್ನು ನೋಡಿಹೋದನಷ್ಟೆ? ಅವೆಲ್ಲಕ್ಕೂ ಇವನ ಬುದ್ಧಿಯೇ ಮೂಲವು! ವೀರ್ಯವಂತನಾದ ಈ ಅಂಗದನು ತನ್ನೊಡನೆ ಕೊನೆಮೊದಲಿಲ್ಲದಷ್ಟು ವಾನರಸೇನೆಯನ್ನೂ ಕರೆತಂದಿರುವನು. ಆ ಸೈನ್ಯದಿಂದಲೇ ನಿನ್ನನ್ನು ಇದಿರಿಸುವುದಕ್ಕೆ ಸಿದ್ಧನಾಗಿಯೂ ನಿಂತಿರುವನು. ಈತನನ್ನು ಜಯಿಸುವುದು ಲೋಕದಲ್ಲಿ ಯಾರಿಗೂ ಸಾಧ್ಯವಿಲ್ಲ. ಅದೋ! ಅಲ್ಲಿ ವಾಲಿಪುತ್ರನಾದ ಅಂಗದನ ಹಿಂದೆ ದೊಡ್ಡ ಸೈನ್ಯದೊಡನೆ ನಿಂತಿರುವವನೇ ನಳನೆಂಬುವನು! ಆತನೂ ನಿನ್ನೊಡನೆ ಯುದ್ಧಕ್ಕಾಗಿಯೇ ಕಾದಿರುವನು. ಅವನೇ ಸೇತುವನ್ನು ಕಟ್ಟಿದವನು. ಎಲೆ ಮಹಾರಾಜನೇ! ಅದೋ ಅಲ್ಲಿ ಆ ನಳನ ಹಿಂದೆ, ದೇಹವನ್ನುಬ್ಬಿಸಿ, ಸಿಂಹನಾದಗಳಿಂದ ಗರ್ಜಿಸುತ್ತ, ಕೋಪದಿಂದ ಮೇಲೆದ್ದು ನಿಂತಿರುವ ಕೆಲವು ವಾನರವೀರರನ್ನು ನೋಡಿದೆಯಾ? ಅವರನ್ನಿದಿರಿಸುವುದು ಯಾರಿಗೂ ಸಾಧ್ಯವಲ್ಲ. ಒಬ್ಬೊಬ್ಬರೂ ಭಯಂಕರಾಕಾರವುಳ್ಳವರು! ಒಬ್ಬೊಬ್ಬರೂ ಬಹಳ ಕ್ರೂರರು! ಒಬ್ಬೊಬ್ಬರೂ ಚಂಡಪರಾಕ್ರಮವುಳ್ಳವರು. ಅವರ ಸಂಖ್ಯೆಯೆಷ್ಟೆಂಬುದನ್ನು ನೋಡು? ಒಂದು ಸಹಸ್ರ

ಕೋಟಿಗೆ ಮೇಲೆ ಎಂಬತ್ತುಲಕ್ಷವಿರುವುದು. ಈ ಸೈನ್ಯವಲ್ಲದೆ ಚಂದನವನವಾಸಿಗಳಾದ ಬೇರೆ ಅನೇಕವಾನರವೀರರೂ ಈ ನಳನನ್ನು ಹಿಂಬಾಲಿಸಿ ಬಂದಿರುವರು. ಈ ಸಮಸ್ತಸೇನೆಯೂ ನಳನ ಪರಿವಾರವು. ಈ ನಳನೊಬ್ಬನೇ ತನ್ನ ಸೇನೆಯೊಡನೆ ನಮ್ಮ ಲಂಕೆಯನ್ನು ಮರ್ದಿಸಬೇಕೆಂದಿರುವನು. ಅದೋ! ಅತ್ತಲಾಗಿ ಬೆಳ್ಳಿಯಂತೆ ಶುಭ್ರದೇಹವುಳ್ಳ ವಾನರನೊಬ್ಬನಿರುವನು ನೋಡು. ಅವನಿಗೆ ಶ್ವೇತನೆಂದು ಹೆಸರು. ಈತನಿಗೆ ಯುದ್ಧದಲ್ಲಿ ಬಹಳ ಕುತೂಹಲವುಂಟು. ಪರಾಕ್ರಮದಲ್ಲಿಯೂ,ಬುದ್ಧಿಯಲ್ಲಿಯೂ, ವೀರ್ಯದಲ್ಲಿಯೂ, ಇವನು ಮೂರುಲೋಕದಲ್ಲಿಯೂ ಪ್ರಸಿದ್ಧಿಹೊಂದಿದವನು. ಎಲೆ ಮಹಾರಾಜನೆ! ಆತನಿಗಿರುವ ಯುದ್ಧಾತುರವೆಷ್ಟೆಂಬುದನ್ನು ನೋಡಿದೆಯಾ? ಆಗಲೇ ಅವನು ಸುಗ್ರೀವನಲ್ಲಿಗೆ ಹೋಗಿ, ತಾನೊಬ್ಬನೇ ಲಂಕೆಯನ್ನು ಧ್ವಂಸಮಾಡಿ ಬರುವುದಾಗಿ ಹೇಳಿ, ಅವನ ಅನುಮತಿಯನ್ನೂ ಪಡೆದು, ಅದಕ್ಕೆ ತಕ್ಕಂತೆ ತನ್ನ ವಾನರಸೈನ್ಯವನ್ನೂ ಕ್ರಮವಾಗಿ ವಿಭಾಗಿಸಿ ಅವರನ್ನು ಮೇಲೆಮೇಲೆ ಪ್ರೋತ್ಸಾಹಿಸುತ್ತ ಆತುರದಿಂದ ಬರುತ್ತಿರುವನು ನೋಡು. ಇದೋ ಇತ್ತಲಾಗಿರುವವನು ಕುಮುದನೆಂಬ ಯೂಥಪತಿಯು. ಇವನು ಪೂರ್ವದಲ್ಲಿ ಗೋಮತೀತೀರದಲ್ಲಿ ಅತಿರಮಣೀಯವಾಗಿಯೂ, ನಾನಾವೃಕ್ಷಗಳಿಂದ ನಿಬಿಡವಾಗಿಯೂ ಇದ್ದ ಸಂಕೋಚನವೆಂಬ ಪರ್ವತದಮೇಲೆ ಸುತ್ತುತ್ತಾ, ಅಲ್ಲಿನ ರಾಜ್ಯವನ್ನು ಪಾಲಿಸುತ್ತಿದ್ದನು. ಈಗ ಸುಗ್ರೀವನ ಸಹಾಯಕ್ಕಾಗಿ ಬಂದಿರುವನು. ಇವನು ತನ್ನ ಕಡೆಯಿಂದ ಹತ್ತುಕೋಟಿ ವಾನರಸೇನೆಯನ್ನು ಕರೆತಂದಿರುವನು. ಇವನ ಬಾಲದಲ್ಲಿರುವ ಕೂದಲುಗಳೇ ಎಷ್ಟೋ ಮಾರುದ್ದವಿರುವುವು. ಅವುಗಳ ವಿಚಿತ್ರವರ್ಣವನ್ನು ನೋಡಿದೆಯಾ? ಕೆಂಪು, ಹಳದಿ, ಬಿಳುಪು ಮುಂತಾದ ನಾನಾಬಣ್ಣದ ಕೂದಲುಗಳು ಕಲೆತಿರುವುವು. ಈ ಕುಮುದನೆಂಬ ಕಪಿಯು ಬಹಳ ಭಯಂಕರ ಕಾರ್ಯಗಳನ್ನು ನಡೆಸತಕ್ಕವನು. ಎಂತಹ ಮಹಾಪತ್ತಿನಲ್ಲಿಯೂ ಸ್ವಲ್ಪ ಮಾತ್ರವೂ ದೈನ್ಯವನ್ನು ತೋರಿಸುವವನಲ್ಲ! ಬಹಳ ಪ್ರಚಂಡನು! ಅತ್ಯಂತ ಕೋಪಸ್ವಭಾವವುಳ್ಳವನು! ಯುದ್ಧಕ್ಕಾಗಿಯೇ ಕಾಲೆತ್ತಿ ನಿಂತಿರುವನು. ಈತನೂ ತನ್ನ ಸೈನ್ಯದೊಡನೆ ತಾನೊಬ್ಬನೇ ನಮ್ಮ ಲಂಕೆಯನ್ನು ಮರ್ದಿಸಬೇಕೆಂದು ಉತ್ಸಾಹಪಡುತ್ತಿರುವವನು. ಎಲೈ ರಾಜನೆ! ಅದೊ ಅತ್ತಲಾಗಿ ನೋಡು! ಸಿಂಹದಂತೆ ಕಪಿಲವರ್ಣನಾಗಿ, ಅಗಲವಾದ ಕಣ್ಣುಳ್ಳವನಾಗಿ, ಕಣ್ಣಿನಿಂದಲೇ ನಮ್ಮ ಲಂಕೆಯನ್ನು ಸುಟ್ಟುಬಿಡುವಂತೆ ಎವೆಮುಚ್ಚದೆ ಈ ಕಡೆಗೆ ನೋಡು

ತ್ತಿರುವ ಆ ಯೂಥಪತಿಯನ್ನು ನೋಡು. ಅವನಿಗೆ ರಂಭನೆಂದು ಹೆಸರು. ಇವನು ಯಾವಾಗಲೂ ವಿಂಧ್ಯಪರ್ವತದಲ್ಲಿಯೂ, ಕೃಷ್ಣಗಿರಿಯಲ್ಲಿಯೂ, ಸಹ್ಯಸುದರ್ಶನಗಳೆಂಬ ಪರ್ವತಗಳಲ್ಲಿಯೂ ವಾಸಮಾಡುತ್ತಿರುವನು. ಶೂರರಾಗಿಯೂ, ಪ್ರಚಂಡರಾಗಿಯೂ, ಚಂಡಪರಾಕ್ರಮವುಳ್ಳವರಾಗಿಯೂ ಇರುವ ನೂರುಮೂವತ್ತುಲಕ್ಷ ವಾನರರು ಇವನಿಗೆ ಬೆಂಬಲವಾಗಿರುವರು. ಅವರೆಲ್ಲರೂ ನಮ್ಮ ಲಂಕೆಯನ್ನು ಧ್ವಂಸಮಾಡುವುದರಲ್ಲಿ ಉತ್ಸಾಹದಿಂದ ನಿಂತಿರುವರು. ಅದೋ ! ಅತ್ತಲಾಗಿ ಕಿವಿಗಳನ್ನು ನಿಗುರಿಸಿ, ಆಗಾಗ ದೊಡ್ಡದಾಗಿ ಬಾಯನ್ನು ಬಿಟ್ಟು ಆಕಳಿಸುತ್ತಿರುವ ಆ ವಾನರಯೂಥಪತಿಯನ್ನು ನೋಡು ! ಅವನಿಗೆ ಶರಭನೆಂದು ಹೆಸರು. ಅವನಾದರೋ ಮೃತ್ಯುದೇವತೆಗೂ ಹೆದರುವವನಲ್ಲ. ಯಾವ ಯುದ್ಧಕ್ಕೂ ಹಿಂಜರಿಯುವವನಲ್ಲ! ಅವನು ಕೋಪದಿಂದುಬ್ಬುತ್ತಿರುವುದನ್ನೂ, ಅತ್ತಿತ್ತ ದೃಷ್ಟಿಯನ್ನು ತಿರುಗಿಸಿ ನೋಡುವ ಅವನ ಓರೆನೋಟವನ್ನೂ ನೋಡು. ಮತ್ತು ಅವನು ಆಗಾಗ ತನ್ನ ಬಾಲವನ್ನು ನೋಡಿ, ತನಗೆ ತಾನೇ ಹಿಗ್ಗಿ ಸಂತೋಷದಿಂದ ಸಿಂಹನಾದವನ್ನು ಮಾಡುವನು. ಬಲಾಢ್ಯನಾಗಿಯೂ, ಭಯರಹಿತನಾಗಿಯೂ ವೇಗಶಾಲಿಯಾಗಿಯೂ, ಇರುವ ಈತನು, ಯಾವಾಗಲೂ ರಮಣೀಯವಾದ ಸಾಲ್ವೆಯವನು. ಇವನಲ್ಲಿ ನಾಲ್ವತ್ತುಲಕ್ಷ ವಾನರವೀರರಿರುವರು. ಎಲ್ಲರೂ ಬಹಳ ಬಲಾಢ್ಯರು ! ಎಲೆ ರಾಕ್ಷಸೇಂದ್ರನೆ ! ಅದೋ ! ಅತ್ತಲಾಗಿ ಮಹಾಮೇಘದಂತೆ ಆಕಾಶವನ್ನಾವರಿಸಿ, ದೇವತೆಗಳ ನಡುವೆ ದೇವೇಂದ್ರನಂತೆ ವಾನರರ ನಡುವೆ ನಿಂತಿರುವ ಆತನೇ ಪನಸನೆಂಬ ಯೂಥಪತಿಯು. ಯುದ್ಧೋದ್ಯುಕ್ತರಾಗಿರುವ ವಾನರರ ನಡುವೆ ನಿಂತಿರುವ ಇವನ ಕಂಠಧ್ವನಿಯು, ಅನೇಕ ಭೇರಿಗಳಿಂದ ಹುಟ್ಟಿದ ಮಹಾಧ್ವನಿಯಂತೆ ಮೊಳಗುತ್ತಿರುವುದನ್ನು ಕೇಳಿದೆಯಾ ? ಯುದ್ಧದಲ್ಲಿ ಇವನೊಡನೆ ನಿಲ್ಲುವುದು ಬಹಳ ಕಷ್ಟವು. ಇವನು ಪಾರಿಯಾತ್ರವೆಂಬ ಪರ್ವತದಲ್ಲಿ ವಾಸಮಾಡುತ್ತಿರುವನು. ಐವತ್ತುಲಕ್ಷ ಯೂಥಪತಿಗಳು ಇವನ ಕೈಕೆಳಗಿರುವರು. ಆ ಯೂಥಪತಿಗಳಲ್ಲಿಯೂ, ಒಬ್ಬೊಬ್ಬನಿಗೂ ಬೇರೆಬೇರೆ ಯೂಥಗಳುಂಟು. ಆ ಯೂಥಗಳೆಲ್ಲವೂ ತಮ್ಮ ಶಕ್ತಿಯನ್ನು ಮೀರಿ ಇವನನ್ನು ಸೇವಿಸುತ್ತಿರುವುವು. ಅದೋ ! ಅಲ್ಲಿ ಸಮುದ್ರತೀರದಲ್ಲಿರುವ ಬೇರೊಂದು ಮಹಾಸಮುದ್ರದಂತೆ ಅತಿ ಭಯಂಕರವಾಗಿ, ಉತ್ಸಾಹದಿಂದುಬ್ಬುತ್ತಿರುವ ಆ ದೊಡ್ಡ ವಾನರಸೈನ್ಯದ ನಡುವೆ ಇರುವವನು ವಿನತನೆಂಬ ಯೂಥಪತಿಯು ಇವನು (ಗಂಗಾತೀರದಲ್ಲಿ ಪ್ರಸಿದ್ಧ

ವಾದ) ದರ್ದರಪರ್ವತದಂತೆ ಕಾಣುತ್ತ, ನದಿಗಳಲ್ಲಿ ಮೇಲೆನಿಸಿಕೊಂಡ ಪರ್ಣಾಸಾ ನದಿಯ ನೀರನ್ನು ಕುಡಿದು ಕೊಬ್ಬಿ ಅದರ ತೀರದಲ್ಲಿರುವನು. ಅರುವತ್ತುಲಕ್ಷ ವಾನರಸೈನ್ಯವು ಇವನ ವಶದಲ್ಲಿರುವುದು. ಇದೋ ಇತ್ತಲಾಗಿ ಕ್ರೋಧನನೆಂಬ ಬೇರೊಬ್ಬ ಯೂಥಪತಿಯು ಆಗಲೇ ನಿನ್ನನ್ನು ಯುದ್ಧಕ್ಕೆ ಕರೆಯುತ್ತಿರುವನು ನೋಡು. ಮಹಾಬಲಪರಾಕ್ರಮವುಳ್ಳ ಅನೇಕವಾನರರು ಬೇರೆ ಬೇರೆ ಯೂಥ ಗಳಾಗಿ ಇವನಲ್ಲಿರುವರು. ಅದೋ! ಅಲ್ಲಿ ಗೈರಿಕದಂತೆ ಕೆಂಪಾದ ತನ್ನ ದೇಹವನ್ನು ಯುದ್ಧೋತ್ಸಾಹದಿಂದುಬ್ಬಿಸುತ್ತ ಬಲದಿಂದ ಕೊಬ್ಬಿದ ಇತರ ವಾನರರೆಲ್ಲರನ್ನೂ ಯಾವಾಗಲೂ ತೃಣೀಕರಿಸುತ್ತಿರುವ ಈತನೇ ಗವಯನೆಂಬ ಯೂಥಪತಿಯು. ಇವನು ಮಹಾತೇಜಸ್ವಿಯು! ಕೋಪದಿಂದ ನಿನ್ನ ಮೇಲೆ ದಂಡೆತ್ತಿ ಬರುತ್ತಿರು ವನು. ಎಪ್ಪತ್ತುಲಕ್ಷಮಂದಿವಾನರರು ಇವನ ಕೈಕೆಳಗಿರುವರು. ಇವನೊಬ್ಬನೇ ತನ್ನ ಸೈನ್ಯದಿಂದ ನಮ್ಮ ಲಂಕೆಯನ್ನು ಕೊಳ್ಳೆಹೊಡೆಯಬೇಕೆಂದು ಕಾದಿರುವನು. ಎಲೆ ಮಹಾರಾಜನೆ! ಮುಖ್ಯವಾಗಿ ಈಗ ನನಗೊಂದು ತೋರಿರುವುದು! ಈ ವಾನರಸೇನೆಯಲ್ಲಿ ಯೂಥಪತಿಗಳಾದ ಅಂಗದಾದಿಗಳನ್ನಾಗಲಿ, ಆ ಯೂಥಪತಿ ಗಳಿಗೂ ಪ್ರಧಾನರಾದ ಸುಗ್ರೀವಾದಿಗಳನ್ನಾಗಲಿ ಇದಿರಿಸಿ ನಿಲ್ಲಬೇಕೆಂದರೆ, ಎಂತವ ರಿಗೂ ಸಾಧ್ಯವಲ್ಲ! ಇವರಲ್ಲಿ ಒಬ್ಬೊಬ್ಬರ ವಶದಲ್ಲಿಯೂ, ಬೇರೆಬೇರೆ ಯೂಥ ಗಳುಂಟು! ಆದುದರಿಂದ ಇವರೊಡನೆ ಈಗ ನಮಗೆ ಯುದ್ಧವೇ ಉಚಿತವಲ್ಲ"ಎಂದನು

ಇಲ್ಲಿಗೆ ಇಪ್ಪತ್ತಾರನೆಯ ಸರ್ಗವು

{ ಸಾರಣನು ಮತ್ತು ಕೆಲವು ಪ್ರಧಾನ ವಾನರಯೂಥಪತಿ ಗಳನ್ನು ರಾವಣನಿಗೆ ತೋರಿಸಿದುದು. }

"ಎಲೆ ಮಹಾರಾಜನೆ! ಆ ರಾಮನಿಗಾಗಿ ತಮ್ಮ ಪ್ರಾಣವನ್ನೂ ಲಕ್ಷಿಸದೆ ಹೋರಾಡಶಕ್ಕ ಇನ್ನೂ ಕೆಲವು ಪ್ರಧಾನಪತಿಗಳನ್ನು ತೋರಿಸುವೆನು ನೋಡು! ಇದೋ ಇವನು ಹರನೆಂಬ ಯೂಥಪತಿಯು! ಭಯಂಕರಾಕಾರವುಳ್ಳ ಈತನ ಬಾಲದಲ್ಲಿರುವ ಕೂದಲುಗಳೇ ಎಷ್ಟೋ ಮಾರುದ್ದವಿರುವುವು! ಮತ್ತು ಅವು ಕೆಂಪು, ಹಳದಿ, ಬಿಳುಪು, ಮುಂತಾದ ವಿಚಿತ್ರವರ್ಣಗಳಿಂದ ಕೂಡಿ ಮೇಘಗಳಲ್ಲಿ

ಇಂದ್ರಧನುಸ್ಸೇ ಮೊದಲಾದ ರೂಪಗಳಿಂದ ಪ್ರಸರಿಸುವ ಸೂರ್ಯಕಿರಣಗಳಂತೆ ವಿರಳವಾಗಿ ಮೇಲಕ್ಕೆ ನಿಗುರಿರುವುವು ನೋಡು! ಈತನ ಹಿಂದೆ ಸುಗ್ರೀವನಿಗೆ ಕಿಂಕರವಾದ ಅನೇಕ ವಾನರಶ್ರೇಷ್ಠರು, ನೂರುನೂರಾಗಿಯೂ, ಸಾವಿರವಾಗಿಯೂ ಗುಂಪುಸೇರಿ, ದೊಡ್ಡದೊಡ್ಡ ಗಿಡಗಳನ್ನೇ ಕೈಯಿಂದೆತ್ತಿಕೊಂಡು, ಈ ಲಂಕೆಯನ್ನು ಮುತ್ತುವುದಕ್ಕಾಗಿ ಆತುರದಿಂದ ಬರುವರು ನೋಡು. ಈ ಹರನೆಂಬುವನು ಮಹಾತೇಜಸ್ವಿಗಳಾದ ಸಹಸ್ರಕೋಟಿ ವಾನರರೊಡಗೂಡಿ, ಯುದ್ಧದಲ್ಲಿ ನಿನ್ನನ್ನು ತಾನೇ ಜಯಿಸಿಬಿಡಬೇಕೆಂಬ ಆತುರದಿಂದಿರುವನು. ಎಲೈ ರಾಜನೆ, ಅದೋ! ಅಲ್ಲಿ ಕಾಲಮೇಘಗಳಂತೆಯೂ ಕಾಡಿಗೆಯಂತೆಯೂ, ಕಪ್ಪುಬಣ್ಣವುಳ್ಳ ಆ ಕರಡಿಗಳ ಗುಂಪನ್ನು ನೋಡಿದೆಯಾ? ಅವುಗಳನ್ನು ಲೆಕ್ಕಮಾಡುವುದಕ್ಕೇ ಸಾಧ್ಯವಲ್ಲ! ಇವುಗಳನ್ನು ನಿನಗೆ ಪ್ರತ್ಯೇಕವಾಗಿ ನಿರ್ದೇಶಿಸಿ ತೋರಿಸಬೇಕೆಂದರೂ ನನಗೆ ಶಕ್ಯವಲ್ಲ. ಈ ಸೈನ್ಯವು ಸಮುದ್ರ ವೇಲೆಯಂತೆ ಅಪಾರವಾಗಿ ನಿಂತಿರುವುದು. ಇವರಲ್ಲಿ ಒಬ್ಬೊಬ್ಬರೂ ಸತ್ಯಪರಾಕ್ರಮವುಳ್ಳವರು. ಇವರಲ್ಲಿ ಕೆಲವರು ಪರ್ವತ ಗಳಲ್ಲಿಯೂ, ಕೆಲವರು ವಿಷಮಪ್ರದೇಶಗಳಲ್ಲಿಯೂ ವಾಸವಾಗಿರತಕ್ಕವರು. ಈ ಭಯಂಕರವಾದ ಭಲ್ಲೂಕಸೈನ್ಯವೆಲ್ಲವೂ ನಿನ್ನ ಮೇಲೆ ಯುದ್ಧಕ್ಕಾಗಿಯೇ ಬರು ತ್ತಿರುವುವು. ಅದೋ! ಅಲ್ಲಿ ಭಯಂಕರಗಳಾದ ಕಣ್ಣುಗಳಿಂದಲೂ, ಭಯಂಕರಾ ಕಾರದಿಂದಲೂ ಕೂಡಿ, ಮೇಘಗಳ ನಡುವೆ ಕಾಣುವ ಪರ್ಜನ್ಯನಂತೆ ಆ ಭಲ್ಲೂಕ ಸೇನೆಯ ಮಧ್ಯದಲ್ಲಿರುವ ಈತನು, ಧೂಮ್ರನೆಂಬ ಯೂಥಪತಿಯು! ಇವನೇ ಭಲ್ಲೂಕ ಸೈನ್ಯಕ್ಕೆ ಮುಖ್ಯಾಧಿಪತಿಯು! ನರ್ಮದಾನದಿಯ ನೀರನ್ನು ಕುಡಿದು ಕೊಬ್ಬಿ, ಋಕ್ಷವಂತವೆಂಬ ಪರ್ವತದಲ್ಲಿ ವಾಸಮಾಡುತ್ತಿರುವನು. ಇದೋ ಇತ್ತಲಾಗಿ ಪರ್ವತದಂತೆ ಮಹಾಕಾಯವುಳ್ಳ ಈತನನ್ನು ನೋಡು! ಇವನು ಆ ಧೂಮ್ರನ ತಮ್ಮನು. ರಣದಲ್ಲಿ ಅಣ್ಣನಿಗೆ ಸಮಾನವಾಗಿ, ಪರಾಕ್ರಮದಲ್ಲಿ ಅವನಿ ಗಿಂತಲೂ ಮೇಲೆನಿಸಿಕೊಂಡಿರುವನು. ಇವನೇ ಜಾಂಬವಂತನೆಂಬವನು. ಅಲ್ಲಿ ಕಾಣುವ ದೊಡ್ಡ ಸೈನ್ಯದಲ್ಲಿ ಪ್ರಧಾನರಾದ ಯಾವಯಾವ ಯೂಥಪತಿಗಳುಂಟೋ, ಅವರೆಲ್ಲರಿಗೂ ಈತನು ಪ್ರಧಾನನು! ಮಹಾಪರಾಕ್ರಮಿಯು! ಪ್ರಭುವಿನ ಮನಸ್ಸನ್ನು ಅನುವರ್ತಿಸಿ ನಡೆಯತಕ್ಕವನು! ಯುದ್ಧದಲ್ಲಿ ಶತ್ರುಗಳ ಪರಾಕ್ರಮ ವನ್ನು ಸ್ವಲ್ಪಮಾತ್ರವೂ ಸಹಿಸಲಾರನು! ಮಹಾಧೀಮಂತನಾದ ಈ ಜಾಂಬ ವಂತನು, ಮೊದಲು ದೇವಾಸುರಯುದ್ಧದಲ್ಲಿ, ಇಂದ್ರನಿಗೆ ದೊಡ್ಡ ಸಹಾಯವನ್ನು

ಮಾಡಿ ಅವನಿಂದ ಎಷ್ಟೋ ವರಗಳನ್ನು ಪಡೆದು ಬಂದಿರುವನು. ಈ ಜಾಂಬವಂತನಲ್ಲಿರುವ ಸೈನ್ಯಗಳನ್ನು ಇಷ್ಟಿಷ್ಟೆಂದು ನಿರ್ಣಯಿಸುವುದಕ್ಕೂ ಸಾಧ್ಯವಿಲ್ಲ! ಇವನ ಕಡೆಯ ಸೈನಿಕರೆಲ್ಲರೂ ಪರ್ವತದಂತೆ ದೊಡ್ಡ ಆಕಾರವುಳ್ಳವರು! ದೊಡ್ಡ ರೋಮಗಳುಳ್ಳವರು! ಅಗ್ನಿಯಂತೆ ತೇಜಸ್ಸುಳ್ಳವರು! ಮೃತ್ಯುದೇವತೆಗಾದರೂ ಹೆದರುವವರಲ್ಲ! ರಾಕ್ಷಸರಿಗೂ, ಪಿಶಾಚರಿಗೂ ಸಮಾನರಾಗಿರುವರು. ಇವರು ಆಗಾಗ ಪರ್ವತಶಿಖರಗಳನ್ನೇರಿ ಅಲ್ಲಿ ಮಹಾಮೇಘಗಳಂತಿರುವ ವಿಸ್ತಾರವಾದ ಕಲ್ಲುಗಳನ್ನು ಕಿತ್ತು, ಅವನ್ನೇ ಆಯುಧಗಳಂತೆ ಪ್ರಯೋಗಿಸುವರು! ಎಲೆ ರಾಜನೆ! ಅದೋ ಅತ್ತಲಾಗಿ ಮಹೋತ್ಸಾಹದಿಂದ ಹಾರಿಹಾರಿ ನೆಗೆಯುವಂತೆ ಕಾಣುವ ಆ ವಾನರವೀರನನ್ನು ನೋಡಿದೆಯಾ? ಇತರ ವಾನರರೆಲ್ಲರೂ ಅವನನ್ನು ಆಶ್ಚರ್ಯದಿಂದ ನೋಡುತ್ತ ನಿಂತಿರುವುದನ್ನೂ ನೋಡು! ಇವನೇ ದಂಭನೆಂಬ ಯೂಥಪತಿಯು! ಅವನು ಬಹಳ ಬಲಾಢ್ಯನಾದುದರಿಂದ, ಆಗಾಗ ದೇವಾಸುರ ಯುದ್ಧದಲ್ಲಿ ತನ್ನ ಬಲವನ್ನು ತೋರಿಸಿ, ಇಂದ್ರನನ್ನು ಸಂತೋಷಪಡಿಸಿ ಬರುತ್ತಿರುವನು. ಇದೋ! ಇವನು ಸನ್ನಾದನೆಂಬ ಯೂಥಪತಿಯು. ವಾನರರೆಲ್ಲರಿಗೂ ಪಿತಾಮಹನು. ಈತನು ನಡೆಯುವಾಗ ತನ್ನ ಒಂದೊಂದು ಹೆಜ್ಜೆಗೂ ಒಂದೊಂದು ಯೋಜನದುದ್ದವುಳ್ಳ ಪರ್ವತವನ್ನೇ ದಾಟಿ ಹೋಗಬಲ್ಲನು. ಇವನು ಮೇಲಕ್ಕೆದ್ದು ನಿಂತರೆ, ಒಂದು ಯೋಜನದುದ್ದವುಳ್ಳ ಪರ್ವತವೂ ಕೂಡ ಇವನ ದೇಹಕ್ಕಿಂತಲೂ ತಗ್ಗಾಗಿ ಕಾಣುವುದು. ಚತುಷ್ಪಾತ್ತುಗಳಲ್ಲಿ ಇವನಿಗಿಂತಲೂ ದೊಡ್ಡ ರೂಪವುಳ್ಳ ಪ್ರಾಣಿಯು ಒಂದಾದರೂ ಇಲ್ಲ. ಮೊದಲು ದೇವದಾನವರ ಯುದ್ಧದಲ್ಲಿ ಈತನೂ ಸೇರಿ ಯುದ್ಧಮಾಡಿ ಪರಾಜಯವನ್ನು ಹೊಂದದೆ ಬಂದವನು. ವೀರ್ಯದಲ್ಲಿ ಇಂದ್ರನಿಗೆ ಸಮಾನನಾಗಿರುವನು. ಇವನು ಒಬ್ಬ ಗಂಧರ್ವಕನ್ಯೆಯಲ್ಲಿ ಅಗ್ನಿದೇವನಿಗೆ ಹುಟ್ಟಿದವನು. ದೇವಾಸುರ ಯುದ್ಧದಲ್ಲಿ ದೇವತೆಗಳ ಸಹಾಯಕ್ಕಾಗಿಯೇ ಅಗ್ನಿಯು ಇವನನ್ನು ಹುಟ್ಟಿಸಿದನು. ಎಲೆ ರಾಕ್ಷಸೇಂದ್ರನೆ! ಅದೋ! ಅತ್ತಲಾಗಿ ಕ್ರಥನನೆಂಬ ಬೇರೊಬ್ಬ ಯೂಥಪತಿಯಿರುವನು ನೋಡು! ಕುಬೇರನಿಂದ ಪಾಲಿತವಾಗಿಯೂ, ಪ್ರಸಿದ್ಧವಾದ ಜಂಬೂವೃಕ್ಷದಿಂದ ಕೂಡಿದುದಾಗಿಯೂ, ಅನೇಕ ಕಿನ್ನರರಿಂದ ಸೇವಿಸಲ್ಪಟ್ಟ ಪರ್ವತಗಳೆಲ್ಲಕ್ಕೂ ರಾಜನಾಗಿಯೂ, ನಿನ್ನಣ್ಣನಾದ ಕುಬೇರನ ಸುಖಾಶ್ರಯವಾಗಿಯೂ ಇರುವ ಹಿಮವತ್ಪರ್ವತವೇ ಇವನ ವಾಸಸ್ಥಳವು. ಶ್ರೀಮಂತನಾಗಿಯೂ, ಬಲಾಢ್ಯನಾಗಿಯೂ ಇರುವ ಈ ವಾನ

ರೋತ್ತಮನು, ಯುದ್ಧದಲ್ಲಿ ಯಾವಾಗಲೂ ಆತ್ಮಸ್ತುತಿಯನ್ನು ಮಾಡಿಕೊಳ್ಳುವವನಲ್ಲ. ಅದೋ! ಅವನು ಸಹಸ್ರಕೋಟಿವಾನರರೊಡನೆ ನಿನ್ನ ಮೇಲೆ ದಂಡೆತ್ತಿ ಬರುತ್ತಿರುವನು ನೋಡು! ಇವನು ತಾನೊಬ್ಬನೇ ನಮ್ಮ ಲಂಕೆಯೆಲ್ಲವನ್ನೂ ಧ್ವಂಸಮಾಡಬೇಕೆಂಬ ಆತುರದಿಂದಿರುವನು. ಇದೋ! ಇತ್ತಲಾಗಿ ಬೇರೊಬ್ಬ ಯೂಥಪತಿಯಿರುವನು ನೋಡು. ಇವನಿಗೆ ಪ್ರಮಾಥಿಯೆಂದು ಹೆಸರು. ಇವನು [1]ಪೂರ್ವದಲ್ಲಿ ಗಜಾಕಾರದಿಂದ ಮಹರ್ಷಿಗಳನ್ನು ಬಾಧಿಸುತಿದ್ದ ಶಂಬಸಾದನನೆಂಬ ರಾಕ್ಷಸನದೆಸೆಯಿಂದ ಆನೆಗಳಿಗೂ, ಕಪಿಗಳಿಗೂ ಹುಟ್ಟಿದ ದೊಡ್ಡ ವೈರವನ್ನು ಈಗಲೂ ಮನಸ್ಸಿನಲ್ಲಿಟ್ಟುಕೊಂಡು, ಗಂಗಾಸಮೀಪದಲ್ಲಿರುವ ಆನೆಗಳ ಹಿಂಡನ್ನು ಸುತ್ತಲೂ ಹೆದರಿಸಿ ಓಡಿಸುತ್ತ, ಅಲ್ಲಲ್ಲಿ ಸುತ್ತುತ್ತಿರುವನು. ಈತನು ರಣರಂಗದಲ್ಲಿ ಶ್ರಮಪಟ್ಟು ಯುದ್ಧಮಾಡಬೇಕಾದ ಅವಶ್ಯವೇ ಇಲ್ಲ. ತನ್ನ ಸಂಚಾರದಿಂದಲೇ ಶತ್ರುಗಳನ್ನು ನಾಶಮಾಡಬಲ್ಲನು! ಇವನು ಅಲ್ಲಲ್ಲಿ ಪರ್ವತಗುಹೆಗಳಲ್ಲಿಯೇ ವಾಸಮಾಡುತ್ತಿದ್ದು, ಅಲ್ಲಲ್ಲಿ ಕೈಗೆ ಸಿಕ್ಕಿದ ಗಿಡಗಳಿಂದ ಆನೆಗಳನ್ನೂ, ಆನೆಗಳಿಂದ ಗಿಡಗಳನ್ನೂ, ಬೆಟ್ಟಗಳಿಂದ ಆನೆಗಳನ್ನೂ, ಆನೆಗಳಿಂದ ಬೆಟ್ಟಗಳನ್ನೂ ಬಡಿದು ಧ್ವಂಸಮಾಡುತ್ತಿರುವನು. ಈ ಸೇನಾಪತಿಯು ದೇವಲೋಕದಲ್ಲಿ ದೇವೇಂದ್ರನು ಹೇಗೋ ಹಾಗೆ, ಗಂಗಾನದಿಯ ಸಮೀಪದಲ್ಲಿ ಮಂದರಪರ್ವತಕ್ಕೆ ಸಮಾನವಾದ ಉಶೀರಬೀಜವೆಂಬ ಬೆಟ್ಟದಮೇಲೆ ಸುಖವಾಗಿ ವಿಹರಿಸುತ್ತಿರುವನು. ಅವನ ಕೈಕೆಳಗೆ ಹತ್ತುಕೋಟಿ ವಾನರರಿರುವರು ಅವರಲ್ಲಿ ಒಬ್ಬೊಬ್ಬರೂ ಮಹಾಪರಾಕ್ರಮಿಗಳು! ಒಬ್ಬೊಬ್ಬರೂ ಯುದ್ಧದಲ್ಲಿ ಉತ್ಸಾಹವುಳ್ಳವರು! ಒಬ್ಬೊಬ್ಬರೂ ಮದದಿಂದ ಕೊಬ್ಬಿ ಸಿಂಹನಾದಮಾಡುವವರು! ಒಬ್ಬೊಬ್ಬರೂ ಧೀರರು! ಇಂತಹ ಹತ್ತುಕೋಟಿ ವಾನರರಿಗೆ ಈತನು ನಾಯಕನಾಗಿರುವನು. ಎಲೆ ರಾಜನೆ! ಬಿರುಗಾಳಿಯ ಬಡಿತದಿಂದುಬ್ಬಿರುವ ಮಹಾಮೇಘದಂತೆ, ಅದ್ಭುತಾಕಾರದಿಂದ

---

1 ಪೂರ್ವದಲ್ಲಿ ಶಂಬಸಾದನನೆಂಬ ರಾಕ್ಷಸನೊಬ್ಬನು, ಗಜಾಕಾರದಿಂದ ಮುನಿಗಳನ್ನು ಬಹಳ ಬಾಧಿಸುತ್ತಿರಲು, ಆ ಮಹರ್ಷಿಗಳು ಹನುಮಂತನ ತಂದೆಯಾದ ಕೇಸರಿಯೆಂಬ ವಾನರನನ್ನು ಪ್ರೇರಿಸಿ, ಅವನ ಕೈಯಿಂದ ಆ ರಾಕ್ಷಸನನ್ನು ಕೊಲ್ಲಿಸಿದರು. ಇದಕ್ಕಾಗಿ ಋಷಿಗಳು ಸಂತೋಷಿಸಿ, ಅವನಿಗೆ ಮಹಾಪರಾಕ್ರಮಶಾಲಿಯಾದ ಹನುಮಂತನು ಪುತ್ರನಾಗಿ ಹುಟ್ಟುವಂತೆ ವರವನ್ನು ಕೊಟ್ಟರು. ಅದು ಮೊದಲು ಆನೆಗಳಿಗೂ ಕಪಿಗಳಿಗೂ ವೈರವು ಹುಟ್ಟಿತೆಂದು ಪೂರ್ವಕಥೆಯು.

ಕಾಣುವ ಈ ಪ್ರಮಾಥಿಯೆಂಬ ಯೂಥಪತಿಯನ್ನಿದಿರಿಸುವುದು. ಲೋಕದಲ್ಲಿ ಬೇರೆ ಯಾರಿಗೂ ಸಾಧ್ಯವಿಲ್ಲ! ಎಲೆ ರಾಜನೆ! ಅದೋ ಅತ್ತಲಾಗಿ ವಾಯು ವೇಗದಿಂದ ಸುತ್ತಿಸುತ್ತಿ ನಾನಾಕಡೆಗಳಿಗೂ ವ್ಯಾಪಿಸಿ ಕೆಂಪಾದ ದೊಡ್ಡ ಧೂಳಿ ಯೊಡನೆ, ಮಹಾಸೈನ್ಯವೊಂದು ಒಹಳ ಸಂಭ್ರಮದಿಂದ ನಿಂತಿರುವುದಲ್ಲವೆ? ಅದೇ ಪ್ರಮಾಥಿಯ ಸೈನ್ಯವು. ಅದೋ ಅಲ್ಲಿ ಕರಿಯ ಮುಖವುಳ್ಳವುಗಳಾಗಿಯೂ, ಮಹಾ ಬಲವುಳ್ಳವುಗಳಾಗಿಯೂ ಭಯಂಕರಗಳಾಗಿಯೂ ಇರುವ ಗೋಲಾಂಗೂಲಗಳು, (ಸಿಂಗಳೀಕಗಳು) ಆ ಸೇತುಬಂಧವನ್ನು ನೋಡಿ ಉತ್ಸಾಹದಿಂದುಬ್ಬುತ್ತ, ಲಕ್ಷೋಪ ಲಕ್ಷವಾಗಿ ಗುಂಪುಗೂಡಿ, ಗವಾಕ್ಷನೆಂಬ ತಮ್ಮ ಯೂಥಪತಿಯನ್ನು ಹಿಂಬಾಲಿಸಿ, ಈ ನಮ್ಮ ಲಂಕೆಯನ್ನು ಸೂರೆಮಾಡಬೇಕೆಂದು ಬರುತ್ತಿರುವುವು ನೋಡು. ಎಲೆ ಮಹಾರಾಜನೇ! ಯಾವ ಪರ್ವತದಲ್ಲಿ, ಯಾವಾಗಲೂ ಪುಷ್ಪಫಲಸಮೃದ್ಧಗಳಾ ಗಿಯೂ, ಕೇಳಿದವರಿಗೆ ಕೇಳಿದುದನ್ನು ಕೊಡತಕ್ಕವುಗಳಾಗಿಯೂ, ಭ್ರಮರಗಳಿಗೆ ನಿತ್ಯನಿವಾಸವಾಗಿಯೂ ಇರುವ ವೃಕ್ಷಗಳು ತುಂಬಿರುವುವೋ, ಯಾವುದರ ಸಮೀಪದಲ್ಲಿ ಸೂರ್ಯನು ಅದರಂತೆಯೇ ಬಂಗಾರದ ಬಣ್ಣವನ್ನು ಹೊಂದಿ ಸಂಚ ರಿಸುವನೋ, ಯಾವುದರ ಕಾಂತಿಯಿಂದ ಅಲ್ಲಿನ ಮೃಗಪಕ್ಷಿಗಳೂ ಅಲ್ಲದೇ ಎಷ್ಟೋ ಮಂದಿ ಮಹರ್ಷಿಗಳು ಎಡೆಬಿಡದೆ ವಾಸಮಾಡುತ್ತಿರುವರೋ ಎಲ್ಲಿ ಯಾವಾಗಲೂ ಫಲಸಮೃದ್ಧಗಳಾಗಿಯೂ, ರುಚಿರುಚಿಯಾದ ಹಣ್ಣುಗಳನ್ನು ಬಿಡತಕ್ಕುವುಗಳಾ ಗಿಯೂ ಇರುವ ಗಿಡಗಳೂ, ಮೇಲಾದ ಜೇನಿನ ರಸಗಳೂ ಹೇರಳವಾಗಿರುವುವೋ, ಅಂತಹ ಮನೋಹರವಾದ ಮೇರುಪರ್ವತದಲ್ಲಿ ಈ ಕೇಸರಿಯೆಂಬ ಯೂಥಪತಿಯು ಕ್ರೀಡಿಸುತ್ತಿರುವನು. ಎಲೆ ರಾಜನೇ! ಅತ್ತಲಾಗಿ ಅರುವತ್ತು ಸಾವಿರ ಬೆಟ್ಟ ಗಳುಂಟು! ಅವೆಲ್ಲವೂ ಸುವರ್ಣಮಯಗಳಾಗಿ ಅತಿರಮಣೀಯಗಳಾಗಿರುವುವು. ರಾಕ್ಷಸರಲ್ಲಿ ನೀನು ಹೇಗೋ ಹಾಗೆ ಆ ಪರ್ವತಗಳಿಗೆ ಮೇರುಪರ್ವತವೇ ಮುಖ್ಯ ವೆನಿಸಿಕೊಂಡಿರುವುದು. ಅಲ್ಲಿ ಹೀಗೆ ಕಪಿಲವರ್ಣವುಳ್ಳವರೂ, ಶ್ವೇತವರ್ಣವುಳ್ಳ ವರೂ ವಾಸಮಾಡುತ್ತಿರುವರು. ಅವರೊಬ್ಬೊಬ್ಬರಿಗೂ ಅತಿತೀಕ್ಷ್ಣಗಳಾದ ಉಗುರುಗಳೂ, ಕೋರೆಹಲ್ಲುಗಳೂ ಇರುವುವು. ಅವುಗಳನ್ನೇ ಅವರು ಆಯುಧ ಗಳನ್ನಾಗಿ ಉಪಯೋಗಿಸುವರು. ಅವರೆಲ್ಲರೂ ನಾಲ್ಕು ಕೋರೆಗಳುಳ್ಳ ಸಿಂಹಗಳಂ ತೆಯೂ, ಇದಿರಿಸುವುದಕ್ಕಾಗದ ಹೆಬ್ಬುಲಿಗಳಂತೆಯೂ ಇರುವರು! ಒಬ್ಬೊಬ್ಬರೂ ಅಗ್ನಿಯಂತೆ ಉಗ್ರಸ್ವರೂಪವುಳ್ಳವರು! ವಿಷಸರ್ಪಗಳಂತೆ ಕೋಪಸ್ವಭಾವವುಳ್ಳ

ವರು. ! ಉದ್ದವಾದ ದೊಡ್ಡ ಬಾಲವುಳ್ಳವರು ! ಒಬ್ಬೊಬ್ಬರೂ ಮದದಾನೆಗಳನ್ನು ಮಗುಚುವ ದೇಹಬಲವುಳ್ಳವರು ! ದೊಡ್ಡಬೆಟ್ಟಗಳಂತೆ ಆಕಾರವುಳ್ಳವರು. ಮಹಾಮೇಘದಂತೆ ಧ್ವನಿಯುಳ್ಳವರು ! ದುಂಡಗೆ ಪಿಂಗಳವರ್ಣವಾಗಿ ಕೊನೆಯಲ್ಲಿ ಕೆಂಪುವರ್ಣವುಳ್ಳ ಕಣ್ಣುಳ್ಳವರು ! ಅವರ ನಡೆಯೂ, ಅವರ ಧ್ವನಿಯೂ, ಅತಿ ಭಯಂಕರವಾಗಿರುವುವು. ಅವರೆಲ್ಲರೂ ನಮ್ಮ ಲಂಕೆಯನ್ನು ನೋಡಿ ಈಗಲೇ ಇದನ್ನು ಮರ್ದಿಸಿ ಧ್ವಂಸಮಾಡುವಂತೆ ಕಾಣುವರು. ಎಲೆ ರಾಜನೆ ! ಅದೋ ಆ ವಾನರರ ನಡುವೆ ಅವರೆಲ್ಲರಿಗೂ ಪ್ರಮುಖನಾದ ಸೇನಾಪತಿಯೊಬ್ಬನಿರುವನು ನೋಡು. ಅವನು ಬಹಳ ವೀರ್ಯಶಾಲಿಯು. ಲೋಕದಲ್ಲಿ ಈತನಿಗೆ ಶತಬಲಿಯೆಂದು ಪ್ರಸಿದ್ಧವಾದ ಹೆಸರುಂಟು. ಈತನೂ ಜಯಾಪೇಕ್ಷೆಯಿಂದ ಯಾವಾಗಲೂ ಸೂರ್ಯನನ್ನು ಉಪಾಸನೆ ಮಾಡುತ್ತಿರುವನು. ಈತನೂ ತಾನೊಬ್ಬನೇ ಈ ಲಂಕೆಯನ್ನು ಸೂರೆಮಾಡಬೇಕೆಂದಿರುವನು. ಎಣೆಯಿಲ್ಲದ ಬಲಪರಾಕ್ರಮಗಳಿಂದ ಕೂಡಿ ಲೋಕದಲ್ಲಿ ಶೂರನೆನಿಸಿಕೊಂಡು ಈತನು, ಎಷ್ಟುಮಾತ್ರವೂ ತನ್ನ ಪೌರುಷವನ್ನು ಬಿಡತಕ್ಕವನಲ್ಲ. ಈ ಶತಬಲಿಯೂ ರಾಮನಿಗೆ ಪ್ರಿಯವನ್ನುಂಟುಮಾಡುವ ವಿಷಯದಲ್ಲಿ ತನ್ನ ಪ್ರಾಣಗಳನ್ನೂ ಲಕ್ಷಿಸುವವನಲ್ಲ ! ಎಲೆ ಮಹಾರಾಜನೇ ಗಜನೆಂದೂ, ಗವಾಕ್ಷನೆಂದೂ, ಗವಯನೆಂದೂ, ನಲನೆಂದೂ, ನೀಲನೆಂದೂ ಪ್ರಸಿದ್ಧರಾದ ಐದು ಮಂದಿ ಯೂಥಪತಿಗಳುಂಟು. ಅವರಲ್ಲಿ ಒಬ್ಬೊಬ್ಬನಿಗೂ ಹತ್ತು ಕೋಟಿಸೈನ್ಯಗಳುಂಟು. ಇದಲ್ಲದೆ ವಿಂಧ್ಯಪರ್ವತದಲ್ಲಿ ವಾಸಮಾಡತಕ್ಕ ವಾನರರು ಬೇರೆ ಎಷ್ಟೋಮಂದಿಯಿರುವರು. ಅವರನ್ನು ಲೆಕ್ಕಮಾಡುವುದೇ ಸಾಧ್ಯವಲ್ಲ ! ವಾನರರೆಲ್ಲರೂ ಮಹಾಮಹಿಮೆಯುಳ್ಳವರು ! ಎಲ್ಲರೂ ಪರ್ವತಾಕಾರವುಳ್ಳವರು ! ಎಲ್ಲರೂ ಕ್ಷಣಮಾತ್ರದಲ್ಲಿ ಈ ಪ್ರಪಂಚದಲ್ಲಿರುವ ಪರ್ವತಗಳೆಲ್ಲವನ್ನೂ ತಮ್ಮ ಬಾಹುಬಲದಿಂದಲೇ ಬಡಿದು ಪುಡಿಪುಡಿಯಾಗಿ ಮಾಡುವುದಕ್ಕೂ ಸಮರ್ಥರು." ಎಂದನು.

ಇಲ್ಲಿಗೆ ಇಪ್ಪತ್ತೇಳನೆಯ ಸರ್ಗವು.

{ ಸಾರಣನು ತಿಳಿಸದೆಬಿಟ್ಟ ಬೇರೆ ಕೆಲವು ವಿಷಯಗಳನ್ನು
ಶುಕನು ರಾವಣನಿಗೆ ಹೇಳಿ ತೋರಿಸಿದುದು. }

ಹೀಗೆ ಸಾರಣನು ಹೇಳಿದುದೆಲ್ಲವನ್ನೂ ಕೇಳಿ ಶುಕನು, ಅವನು ಪೂರ್ಣವಾಗಿ ಹೇಳದೆ ಬಿಟ್ಟ ಕೆಲವು ವಿಷಯಗಳನ್ನು ತಾನು ರಾವಣನಿಗೆ ತಿಳಿಸಬೇಕೆಂದು

ಮುಂದೆಬಂದು, ಕೈನೀಡಿ ರಾವಣನಿಗೆ ವಾನರಸೈನ್ಯವನ್ನು ತೋರಿಸುತ್ತ "ಎಲೆ ರಾಜನೇ ! ಅದೋ! ಅಲ್ಲಿ ಮದಿಸಿದ ಮಹಾಗಜಗಳಂತೆಯೂ, ಗಂಗಾತೀರದಲ್ಲಿರುವ ಆಲದ ಮರಗಳಂತೆಯೂ, ಹಿಮವತ್ಪರ್ವತದ ಮೇಲಿನ ಸಾಲೆಯು ಮರಗಳಂತೆಯೂ ಮಹಾಕಾಯವುಳ್ಳ ಆ ವಾನರರೊಡನೆ ನಿಲ್ಲುವುದೇ ಅಸಾಧ್ಯವು. ಅವರೆಲ್ಲರೂ ಬಹಳ ಬಲಾಢ್ಯರು ಕಾಮರೂಪಿಗಳು! ದೈತ್ಯದಾನವರಿಗೆ ಸಾಟಿಯಾದವರು! ಯುದ್ಧ ದಲ್ಲಿ ದೇವತೆಗಳಂತೆ ಪರಾಕ್ರಮವುಳ್ಳವರು ! ಅವರಲ್ಲಿ ಒಂಬತ್ತು ಸಹಸ್ರ ಕೋಟಿಗಳಾಗಿಯೂ, ಕೆಲವರು ಐದು ಸಹಸ್ರ ಕೋಟಿಗಳಾಗಿಯೂ, ಕೆಲವರು ಏಳು ಸಹಸ್ರ ಕೋಟಿಗಳಾಗಿಯೂ, ಕೆಲವರು ಸಾವಿರ ಶಂಖ ಸಂಖ್ಯೆಯುಳ್ಳವರಾಗಿಯೂ ಕೆಲವರು ನೂರಾರುಬೃಂದಗಳಾಗಿಯೂ, ಅಲ್ಲಲ್ಲಿ ಬೇರೆಬೇರೆ ಸೇನೆಗಳಾಗಿ ಕೂಡಿರು ವರು. ಇವರೆಲ್ಲರೂ ಸುಗ್ರೀವನಿಗೆ ಸಹಾಯಕರು. ಯಾವಾಗಲೂ ಅವನಿಗೆ ಬೆಂಬಲ ವಾಗಿ ಕಿಷ್ಕಿಂಧೆಯಲ್ಲಿಯೇ ಇರುವರು. ಎಲ್ಲರೂ ದೇವಗಂಧರ್ವಾಂಶಗಳಿಂದ ಕಾಮ ರೂಪಿಗಳಾಗಿಯೇ ಹುಟ್ಟಿರುವರು. ಎಲೆ ದೇವನೇ ! ಅದೋ ! ಅಲ್ಲಿ ಅಂದವಾದ ರೂಪಯೌವನಗಳುಳ್ಳ ಇಬ್ಬರು ವಾನರರನ್ನು ನೋಡುತ್ತಿರುವೆಯಲ್ಲವೆ? ಅವರಿಬ್ಬ ರಿಗೂ ಮೈಂದದ್ವಿವಿದರೆಂದು ಹೆಸರು. ಯುದ್ಧದಲ್ಲಿ ಅವರಿಗೆ ಸಾಟಿಯಾದವರು ಯಾರೂ ಇಲ್ಲ ! ಅವರಿಬ್ಬರೂ ಬ್ರಹ್ಮನ ಅನುಜ್ಞೆಯಿಂದ ಅಮೃತಪಾನಮಾಡಿರು ವರು. ತಾವಿಬ್ಬರೇ ಈ ಲಂಕೆಯನ್ನು ಧ್ವಂಸಮಾಡಬೇಕೆಂದಿರುವರು. ಅವರಿಬ್ಬ ರಿಗೂ ಪಕ್ಕದಲ್ಲಿ ಪರ್ವತಾಕಾರವುಳ್ಳ ಮತ್ತಿಬ್ಬರು ವಾನರರು, ಹತ್ತು ಕೋಟಿ ವಾನರಸೈನ್ಯದಿಂದ ಪರಿವೃತರಾಗಿ ನಮ್ಮ ಲಂಕೆಯನ್ನು ಕಣ್ಣಿಟ್ಟು ನೋಡುತ್ತಿರು ವರು ನೋಡು. ಅವರಿಬ್ಬರಿಗೂ ಸುಮುಖದುರ್ಮುಖರೆಂದು ಹೆಸರು. ಅವರು ಮೃತ್ಯುದೇವನ ಮಕ್ಕಳು. ತಂದೆಯಾದ ಯಮನಂತೆಯೇ ಎಣೆಯಿಲ್ಲದ ಪರಾಕ್ರಮ ವುಳ್ಳವರು. ಎಲೆ ರಾಜನೇ ! ಇದೋ ಇತ್ತಲಾಗಿ ಮದದಾನೆಯಂತೆ ನಿಂತಿರುವ ಒಬ್ಬ ವಾನರನನ್ನು ನೋಡುವೆಯಲ್ಲವೆ ! ಇವನಿಗೆ ಕೋಪವುಂಟಾದರೆ ಮಾತ್ರ ಸಮುದ್ರವನ್ನೇ ಕಲಕಿಬಿಡಬಲ್ಲನು. ಇವನೇ ಮೊದಲು ನಮ್ಮ ಲಂಕೆಗೆ ಬಂದು ಸೀತೆಯನ್ನು ನೋಡಿ, ನಿನ್ನೊಡನೆ ಮಾತಾಡಿ ಹೋದವನು. ಮೊದಲೇ ನೀನು ಈತನನ್ನು ನೋಡಿರುವೆ ! ತಿರುಗಿ ಬಂದಿರುವನು ನೋಡು ! ಇವನು ಕೇಸರಿ ಯೆಂಬ ವಾನರಕ್ಷೇತ್ರದಲ್ಲಿ ಹುಟ್ಟಿದವನು. ವಾಯುವಿಗೆ ಹುಟ್ಟಿದವನೆಂದು ಹೇಳಿ ಕೊಳ್ಳುವರು. ಇವನನ್ನು ಹನುಮಂತನೆನ್ನುವರು. ಇವನು ಮೊದಲು ಸಮುದ್ರ

ವನ್ನು ಹಾರಿ ಇಲ್ಲಿಗೆ ಬಂದಿದ್ದವನು. ಇವನು ಕಾಮರೂಪಿಯು! ವಾಯುವಿನಂತೆ ತಡೆಯಿಲ್ಲದ ಗಮನವೇಗವುಳ್ಳವನು. ಬಹಳ ಸಮರ್ಥನು! ಮೊದಲು ಈತನು ಹುಟ್ಟಿದಾಗಲೇ ಹಸಿವಿನ ಆತುರದಿಂದ, ಆಗಲೇ ಉದಿಸಿಬಂದ ಸೂರ್ಯಬಿಂಬವನ್ನು ನೋಡಿ, ತನ್ನ ಬಲದ ಕೊಬ್ಬಿನಿಂದ "ನನಗೆ ಎಷ್ಟಾದರೂ ಹಸಿವುತೀರದು. ಈ ಸೂರ್ಯನನ್ನು ಹಿಡಿದು ಭಕ್ಷಿಸುವೆನು" ಎಂದು ಮನಸ್ಸಿನಲ್ಲಿ ನಿರ್ಧರಿಸಿಕೊಂಡು ಆ ಸೂರ್ಯಬಿಂಬವನ್ನೇ ಕಿತ್ತು ತಿನ್ನಬೇಕೆಂದೆಣಿಸಿ ಮೂರು ಸಹಸ್ರ ಯೋಜನಗಳ ದೂರದವರೆಗೆ ತಾನಿದ್ದ ಮೇರುಪರ್ವತದಿಂದ [1] ಕೆಳಕ್ಕೆ ಧುಮುಕಿ, ದೇವಋಷಿದಾನವಾದಿಗಳಿಗೂ ಸಮೀಪಿಸಲಸಾಧ್ಯನಾದ ಸೂರ್ಯನಿಗಿದಿರಾಗಿ ಹೋದನು. ಆದರೆ ಸೂರ್ಯಬಿಂಬದ ಬಳಿಗೆ ಹೋಗುವುದಕ್ಕೆ ಅವನಿಗೂ ಸಾಧ್ಯವಿಲ್ಲದೆ ಹೋಯಿತು. ಅಲ್ಲಿಂದ ಹಾಗೆಯೇ ಉದಯಪರ್ವತದಮೇಲೆ ಬಿದ್ದನು. ಇವನು ವೇಗದಿಂದ ಕೆಳಕ್ಕೆ ಬಿದ್ದಾಗ, ಆ ಪರ್ವತದ ಮೇಲಿನ ಒಂದು ಶಿಲೆಗೆ ಇವನ ದವಡೆಯು ತಾಡಿಸಿತು. ಆ ಪೆಟ್ಟಿನಿಂದ ಸ್ವಲ್ಪವಾಗಿ ಗಾಯ ತಗುಲಿ ಆ ದವಡೆಯು ಉಬ್ಬಿಕೊಂಡಿತು. ಅದರಿಂದಲೇ ಈತನಿಗೆ ಹನುಮಂತನೆಂದೂ ಹೆಸರಾಯಿತು. ವಿಶ್ವಾಸಾರ್ಹನಾದ ಒಬ್ಬ ಆಪ್ತನಿಂದ ನನಗೆ ಈ ಹನುಮಂತನ ಸಂಗತಿಯು ತಿಳಿಯಿತು. ಇವನು ಕಾಮರೂಪಿಯಾದುದರಿಂದ, ಇವನ ಬಲವನ್ನಾಗಲೀ, ರೂಪವನ್ನಾಗಲೀ, ಮಹಿಮೆಯನ್ನಾಗಲೀ ಹೀಗೆಂದು ನಿರ್ಣಯಿಸಿ ಹೇಳುವುದಕ್ಕೆ ಸಾಧ್ಯವಲ್ಲ. ಇವನು ತಾನೊಬ್ಬನೇ ಈ ಲಂಕೆಯುಲ್ಲವನ್ನೂ ಧ್ವಂಸಮಾಡಿ ಹೋಗಬೇಕೆಂದು ಕಾದಿರುವನು. ಎಲೆ ಮಹಾರಾಜನೇ! ಇವರೆಲ್ಲರೂ ಹಾಗಿರಲಿ! ಅದೋ! ಆ ಹನು

---

1. ಇಲ್ಲಿ "ಸೂರ್ಯಬಿಂಬವು ಎಲ್ಲಕ್ಕಿಂತಲೂ ಮೇಲಿರುವಾಗ, ಹನುಮಂತನು ಮೂರು ಸಹಸ್ರಯೋಜನಗಳ ದೂರಕ್ಕೆ ಕೆಳಕ್ಕೆ ಧುಮುಕಿದನೆಂಬುದು ಹೇಗೆ?" ಎಂಬ ಶಂಕೆಯುಂಟಾಗಬಹುದು. ಕೇಸರಿಯೆಂಬ ಹನುಮಂತನ ತಂದೆಯು ಮೇರುಪರ್ವತಶಿಖರದಲ್ಲಿ ವಾಸಮಾಡುವನು. ಸೂರ್ಯನು ಆ ಪರ್ವತದ ಮಧ್ಯಭಾಗದಲ್ಲಿರುವನು. ಈ ಸೂರ್ಯರಥಮಾರ್ಗಕ್ಕಿಂತಲೂ ಶಿಖರವು ಮೂರು ಸಹಸ್ರ ಯೋಜನಗಳ ಎತ್ತರದಲ್ಲಿದ್ದುದರಿಂದ, ಅಲ್ಲಿಂದ ಇಳಿದುಬಂದುದಾಗಿಯೇ ಹೇಳಬೇಕು. ಅಥವಾ ಇಲ್ಲಿ ಮೂಲದಲ್ಲಿರುವ "ತ್ರಿಯೋಜನಸಹಸ್ರಂ ತು ಆಧ್ವಾನಮವತೀರ್ಯವಾ" ಎಂಬ ವಾಕ್ಯದಲ್ಲಿ, ತ್ರಿಯೋಜನಸಹಸ್ರವೆಂಬುದನ್ನು ಅನೇಕ ಯೋಜನಗಳಿಗೆ ಉಪಲಕ್ಷಣವಾಗಿಟ್ಟುಕೊಂಡು, ಬಹುದೂರಕ್ಕೆ ಹಾರಿಹೋದನೆಂದೂ ಹೇಳಬಹುದು. ಸೂರ್ಯನಿಗೂ ಭೂಮಿಗೂ ಒಂದು ಲಕ್ಷ ಯೋಜನದೂರವಿರುವುದಾಗಿ ನಿರ್ಣಯಿಸಲ್ಪಟ್ಟಿರುವುದರಿಂದ ಹಾಗೆ ಗ್ರಹಿಸಬೇಕಾಗುವುದು.

ಮಂತನ ದೇಹದೊಡನೆ ಒಂದಾಗಿ ಸೇರಿಹೋದಂತೆ, ಅವನ ಹೆಗಲನ್ನೇರಿ ಕುಳಿತಿರುವ ಮಹಾಪುರುಷನನ್ನು ನೋಡಿದೆಯಾ ? ಆ ಹನುಮಂತನ ಭುಜವನ್ನೇರಿರುವುದರಿಂದಲೇ ಅವನು ಎಂತಹ ಶೂರನೆಂಬುದು ವ್ಯಕ್ತವಾಗುವುದು. ಅವನ ಶ್ಯಾಮವರ್ಣವಾದ ದೇಹಕಾಂತಿಯನ್ನೂ, ಅರಳಿದ ಕಮಲಗಳಂತಿರುವ ಆತನ ಕಣ್ಣುಗಳನ್ನೂ ನೋಡು ! ಮೇರುಪರ್ವತದ ಸುವರ್ಣಶಿಖರವನ್ನೇರಿ ಕುಳಿತ ಕಾಲಮೇಘದಂತೆ ಕಾಣುವನು ನೋಡು ! ಆತನೇ ಇಕ್ಷ್ವಾಕುವಂಶದವರಲ್ಲಿ ಅತಿರಥನೆನಿಸಿಕೊಂಡವನು. ಅ ವ ನೇ ಖರವಧಾದಿಗಳಿಂದ ಲೋಕಪ್ರಸಿದ್ಧವಾದ ಪೌರುಷವುಳ್ಳವನು. [1] ಧರ್ಮವನ್ನು ಮೀರಿ ಹೋಗುವವನಲ್ಲ. ಬ್ರಹ್ಮಾಸ್ತ್ರವನ್ನು ಚೆನ್ನಾಗಿ ಬಲ್ಲವನು. ಸಮಸ್ತವೇದಗಳನ್ನೂ ತಿ ಳಿ ದ ವ ನು. ವೇದವಿತ್ತುಗಳಾದ ವಸಿಷ್ಠಾದಿಗಳಿಗೂ ಮೇಲೆನಿಸಿದವನು. ಇವನ ಪೌರುಷವನ್ನು ಸಾಮಾನ್ಯವೆಂದು ತಿಳಿಯಬೇಡ! ಇವನು ತನ್ನ ಬಾಣಗಳಿಂದ ಆಕಾಶದಲ್ಲಿ ಸಂಚರಿಸುವ ವಿಮಾನಾದಿಗಳನ್ನೂ ಭೇದಿಸಬಲ್ಲನು. ಪರ್ವತಗಳನ್ನೂ ಪುಡಿಮಾಡುವನು ! ಮೃತ್ಯುವಿನಂತೆ ಕೋಪವುಳ್ಳವನು ! ಇಂದ್ರನಂತೆ ಪರಾಕ್ರಮವುಳ್ಳವನು ! ನೀನು ಜನಸ್ಥಾನದಿಂದ ಕದ್ದು ತಂದಿರುವ ಸೀತೆಯೆಂಬವಳು ಇವನ ಹೆಂಡತಿಯೇ ! ಎಲೆ ರಾಜನೇ ! ಇವನೇ ರಾಮನು ! ನಿನ್ನ ಮೇಲೆ ಯುದ್ಧಕ್ಕಾಗಿ ದಂಡೆತ್ತಿ ಬರುತ್ತಿರುವನು ! ಅದೋ ! ಅವನ ಬಲಪಾರ್ಶ್ವದಲ್ಲಿ ಅಚ್ಚಬಂಗಾರದಂತೆ ಮೈಬಣ್ಣವುಳ್ಳವನಾಗಿಯೂ, ವಿಸ್ತಾರವಾದ ಎದೆಯುಳ್ಳವನಾಗಿಯೂ, ಕೋಪದಿಂದ ಕೆಂಪೇರಿದ ಕಣ್ಣುಳ್ಳವನಾಗಿಯೂ, ಸುರುಳಿಗಟ್ಟಿದ ಕಪ್ಪಾದ ತಲೆಕೂದಲುಳ್ಳವನಾಗಿಯೂ ಇರುವ ಆ ರಾಜಕುಮಾರನನ್ನು. ನೋಡಿದೆಯಾ ? ಅ ವ ನೇ ಆ ರಾಮನಿಗೆ ತಮ್ಮನಾದ ಲಕ್ಷ್ಮಣನೆಂಬವನು. ರಾಮನಿಗೆ ಇವನು ಪ್ರಾಣದಂತೆ ಪ್ರಿಯನಾದವನು. ಇವನು ರಾ ಜ ನೀ ತಿಯಲ್ಲಿಯೂ ಬಹಳ ನಿಪುಣನು. ಸಮಸ್ತ ಶಾಸ್ತ್ರಗಳನ್ನೂ ಬಲ್ಲವನು. ಶತ್ರುಗಳ ವೀರ್ಯವನ್ನು ಸಹಿಸತಕ್ಕವನಲ್ಲ! ಲೋಕದಲ್ಲಿ ಇವನನ್ನು ಜಯಿಸುವುದು ಬೇರೊಬ್ಬರಿಗೆ

---

1. "ಖರಯುದ್ಧದಲ್ಲಿ ಹಿಂದಕ್ಕೆ ಸರಿದುದು ; ಕಣ್ಮರೆಯಾಗಿದ್ದು ವಾಲಿಯನ್ನು ಕೊಂದುದು—ಇವೆಲ್ಲವೂ ರಾಮನಲ್ಲಿ ಧರ್ಮಾತಿಕ್ರಮವಲ್ಲವೆ ?" ಹೀಗಿರುವಾಗ ರಾಮನನ್ನು ಧರ್ಮವನ್ನು ಮೀರುವವನಲ್ಲವೆಂದು ಹೇಗೆ ಹೇಳಬಹುದು ?" ಎಂಬ ಶಂಕೆಯುಂಟಾಗಬಹುದು. ಇವೊಂದೂ ಧರ್ಮವಿರುದ್ಧವಲ್ಲವೆಂಬುದಕ್ಕೆ ಆಯಾ ಸಂದರ್ಭಗಳಲ್ಲಿಯೇ ತಕ್ಕ ಕಾರಣಗಳನ್ನು ನಿರೂಪಿಸಿ ವ್ಯಾಖ್ಯಾನವನ್ನು ಕಾಣಿಸಿರುವೆವು.

ಸಾಧ್ಯವೇ ಇಲ್ಲ. ಬಹಳ ಜಯಶೀಲನು ! ಪರಾಕ್ರಮಶಾಲಿಯು ! ಬಲದಲ್ಲಿಯೂ, ಬುದ್ಧಿಯಲ್ಲಿಯೂ ಮೇಲೆನಿಸಿಕೊಂಡವನು. ರಾಮನಿಗೆ ಬಲದ ಭುಜದಂತೆಯೂ, ಹೊರಗಿನ ಪ್ರಾಣದಂತೆಯೂ ಇರುವವನು. ಈತನು ರಾಮನ ಕೆಲಸಕ್ಕಾಗಿ ಪ್ರಾಣವನ್ನಾದರೂ ಕೊಡುವನು. ರಾಮನಿಗೆ ಸ್ವಲ್ಪವೂ ಶ್ರಮವಿಲ್ಲದಂತೆ ತಾನೊಬ್ಬನೇ ನಿಂತು ಇಲ್ಲಿನ ಸಮಸ್ತರಾಕ್ಷಸರನ್ನೂ ಕೊಲ್ಲಬೇಕೆಂದು ಆತುರಪಡುತ್ತಿರುವನು. ಅದೋ ! ಅಲ್ಲಿ ರಾಮನ ಎಡಭಾಗದಲ್ಲಿ ನಿಂತಿರುವವನನ್ನು ನೋಡಿದೆಯಾ ! ಅವನೇ ಮುಂದೆ ಈ ನಮ್ಮ ಲಂಕಾರಾಜ್ಯಕ್ಕೆ [1] ರಾಜನಾಗಬೇಕಾದ ನಮ್ಮ ವಿಭೀಷಣನು ! ಅವನನ್ನು ಸುತ್ತಿನಿಂತಿರುವ ನಾಲ್ಕು ಮಂದಿ ರಾಕ್ಷಸರನ್ನು ನೋಡು. ಎಲೆ ಮಹಾರಾಜನೆ ! ಆಗಲೇ ರಾಮನು, ತಾನು, ಅವಾಪ್ತಸಮಸ್ತಕಾಮನಾದುದರಿಂದ ಲಂಕಾರಾಜ್ಯವನ್ನಪೇಕ್ಷಿಸದ ಮಹಾ ಶ್ರೀಮಂತನಾದರೂ, ವಿಭೀಷಣ ಸುಗ್ರೀವಾದಿಗಳನ್ನು ತನ್ನ ಕೈಕೆಳಗಿನ ರಾಜರನ್ನಾಗಿರಿಸಿ, ತಾನು ರಾಜರಾಜನೆನಿಸಿಕೊಳ್ಳಬೇಕೆಂದು ಆ ವಿಭೀಷಣನಿಗೆ ಲಂಕಾರಾಜ್ಯದ ಅಭಿಷೇಕವನ್ನೂ ನಡೆಸಿಬಿಟ್ಟನು ! ನಿನ್ನ ತಮ್ಮನಾದ ಈ ವಿಭೀಷಣನೂ, ರಾಮನ ಸಹಾಯಾರ್ಥವಾಗಿ ನಿನ್ನ ಮೇಲೆ ಯುದ್ಧೋದ್ಯುಕ್ತನಾಗಿ ಆತುರದಿಂದ ಬರುತ್ತಿರುವನು. ಅದೋ ! ಆ ರಾಮನಿಗೂ, ವಿಭೀಷಣನಿಗೂ ನಡುವೆ ಬೆಟ್ಟದಂತೆ ನಿಶ್ಚಲವಾಗಿ ನಿಂತಿರುವ ವಾನರನೊಬ್ಬನನ್ನು ನೋಡುವೆಯಲ್ಲವೆ ! ಅವನೇ ವಾನರರಾಜನಾದ ಸುಗ್ರೀವನು ! ಯಾವ ಯುದ್ಧದಲ್ಲಿಯೂ ಪರಾಜಯವಿಲ್ಲದವನು. ಪರ್ವತಗಳಲ್ಲಿ ಹಿಮವಂತವು ಹೇಗೋ ಹಾಗೆ ಸಮಸ್ತ ವಾನರರಿಗೂ ಮೇಲೆನಿಸಿಕೊಂಡು, ತೇಜಸ್ಸಿನಿಂದಲೂ, ಯಶಸ್ಸಿನಿಂದಲೂ, ಬುದ್ಧಿಯಿಂದಲೂ ಜ್ಞಾನದಿಂದಲೂ, ವಂಶೋನ್ನತಿಯಿಂದಲೂ, ಎಲ್ಲರನ್ನೂ ಮೀರಿಸಿರುವನು. ಕಾಡುಗಳಿಂದಲೂ ವೃಕ್ಷಗಳಿಂದಲೂ ದುರ್ಗಮವಾದ ಕಿಷ್ಕಿಂಧೆಯೆಂಬ ಗುಹೆಯೇ ಇವನ ವಾಸಸ್ಥಳವು. ಪ್ರಾಕಾರಾದಿ ಪರ್ವತದುರ್ಗಗಳಿಂದ ಪ್ರವೇಶಿಸಲಸಾಧ್ಯವಾದ ಆ ಕಿಷ್ಕಿಂಧೆಯಲ್ಲಿ ಈತನು ತನ್ನ ಪ್ರಧಾನಯೂಥಪತಿಗಳೊಡಗೂಡಿ ವಾನರರಾಜ್ಯವನ್ನು ನಡೆಸುತ್ತಿರುವನು. ಇವನ ಎದೆಯಲ್ಲಿ ನೂರುಕಮಲಗಳುಳ್ಳ

1. ಇಲ್ಲಿ "ರಾಜಹ್ಯೇಷ ವಿಭೀಷಣಃ" ಎಂದು ಮೂಲವು. ಇಲ್ಲಿ "ಹಿ" ಎಂಬ ವರ್ಣವು ಗಾಯತ್ರಿಯ ಹದಿನಾರನೆಯ ಅಕ್ಷರವಾದುದರಿಂದ, ಇಲ್ಲಿ ಹದಿನಾರನೆಯ ಗ್ರಂಥ ಸಹಸ್ರವು ಆರಂಭಿಸುವುದೆಂದು ಗ್ರಾಹ್ಯವು.

ಕಾಂಚನಮಾಲಿಕೆಯೊಂದು ಶೋಭಿಸುತ್ತಿರುವುದು ನೋಡು ? ಇದು ದೇವ ಜಾತಿಗೂ, ಮನುಷ್ಯಜಾತಿಗೂ ಕೂಡ ಆಸೆಯನ್ನು ಹುಟ್ಟಿಸುವಷ್ಟು ಮಹಾ ಮಹಿಮೆಯುಳ್ಳುದು ! ಇದರಲ್ಲಿ ವೀರಲಕ್ಷ್ಮಿಯು ನೆಲೆಗೊಂಡಿರುವುದರಿಂದ ಈ ಮಾಲಿಕೆಯನ್ನು ಧರಿಸಿ ನಿಂತವನಿಗೆ ಎಂದಿಗೂ ಅಪಜಯವಿಲ್ಲ. ರಾಮನು ವಾಲಿ ಸುಗ್ರೀವರ ಯುದ್ಧದಲ್ಲಿ ವಾಲಿಯನ್ನು ಕೊಂದು, ಅವನಲ್ಲಿದ್ದ ಈ ಕಾಂಚನಮಾಲಿಕೆ ಯನ್ನೂ, ತಾರೆಯನ್ನೂ, ಶಾಶ್ವತವಾದ ವಾನರರಾಜ್ಯವನ್ನೂ ಈ ಸುಗ್ರೀವನಿಗೆ ಸೇರಿಸಿಬಿಟ್ಟನು. ಎಲೆ ಮಹಾರಾಜನೆ ! ಇನ್ನು ಇಲ್ಲಿ ಕಾಣುವ ವಾನರಸೈನ್ಯದ ಒಟ್ಟು ಸಂಖ್ಯೆಯನ್ನು ತಿಳಿಸುವೆನು ಕೇಳು. ನೂರುಸಹಸ್ರಗಳನ್ನು ಒಂದುಲಕ್ಷ ವೆಂದೂ, ನೂರು ಲಕ್ಷಗಳನ್ನು ಒಂದುಕೋಟಿಯೆಂದೂ ಪಂಡಿತರು ನಿರ್ಣಯಿಸಿರು ವರಷ್ಟೆ ? ನೂರು ಸಹಸ್ರ ಕೋಟಿಗಳು ಒಂದು ಶಂಖವೆನಿಸುವುದು. ನೂರು ಸಾವಿರಶಂಖಗಳಿಗೆ ಮಹಾಶಂಖವೆಂದು, ವ್ಯವಹಾರವು. ನೂರುಸಾವಿರ ಮಹಾ ಶಂಖಗಳಿಗೆ ಒಂದು ಬೃಂದವೆಂದು ಹೆಸರು. ಅಂತಹ ನೂರುಸಾವಿರ ಮಹಾ ಬೃಂದಗಳು ಪದ್ಮವೆನಿಸುವುದು. ಅಂತಹ ನೂರುಸಾವಿರಪದ್ಮಗಳಿಗೆ ಮಹಾಪದ ವೆಂದು ಹೆಸರು. ನೂರುಸಾವಿರ ಮಹಾಪದ್ಮಗಳಿಗೆ ಖರ್ವವೆಂದು ವ್ಯವಹಾರವು. ನೂರುಸಾವಿರಖರ್ವಗಳನ್ನು ಮಹಾಖರ್ವವೆನ್ನುವರು. ಸಾವಿರ ಮಹಾಖರ್ವಗಳು ಸಮುದ್ರವೆನಿಸುವುದು. ನೂರುಸಾವಿರಸಮುದ್ರಗಳು ಓಘವೆನಿಸುವುದು. ನೂರು ಸಾವಿರ ಓಘಗಳಿಗೆ ಮಹೌಘವೆಂದು ಹೆಸರು. ಹೀಗೆ ಆಯಾ ಸೇನಾಪತಿಗಳ ಕೆಳಗೆ ಬೇರೆಬೇರೆಯಾಗಿ ಸಹಸ್ರಕೋಟಿಗಳು ನೂರುಶಂಖಗಳು, ಸಹಸ್ರ ಮಹಾ ಶಂಖಗಳು, ನೂರುಬೃಂದಗಳು, ಸಾವಿರಮಹಾಬೃಂದಗಳು, ನೂರುಸಮುದ್ರಗಳು, ನೂರು ಮಹೌಘಗಳು, ಕೋಟಿ ಮಹೌಘಗಳು ಹೀಗೆ ಸಮುದ್ರದಂತೆ ಅಪಾರವಾದ ದೊಡ್ಡ ಸೇನೆಯಿರುವುದು. ಇಂತಹ ಸೇನಾಪತಿಗಳೊಡಗೂಡಿ ವಿಭೀಷಣನನ್ನೂ, ಅವನ ಮಂತ್ರಿಗಳನ್ನೂ ಸಂಗಡ ಕರೆದುಕೊಂಡು, ಸುಗ್ರೀವನು ನಿನ್ನ ಮೇಲೆ ಯುದ್ಧಕ್ಕಾಗಿ ಬರುತ್ತಿರುವನು. ಎಲೆ ಮಹಾರಾಜನೆ ! ಜ್ವಲಿಸುವ ಕ್ರೂರಗ್ರಹ ದಂತೆ ಕಾಣುತ್ತಿರುವ ಈ ಮಹಾಸೈನ್ಯವನ್ನು ಚೆನ್ನಾಗಿ ನೋಡು ! ಇನ್ನು ಮುಂದೆ ನಮಗೆ ಈ ಶತ್ರುಗಳಿಂದ ಪರಾಜಯವಿಲ್ಲದೆ ಹೇಗೆ ಜಯವುಂಟಾಗ ಬೇಕೋ ಅದಕ್ಕೆ ತಕ್ಕ ಪ್ರಯತ್ನಮಾಡು " ಎಂದನು.

ಇಲ್ಲಿಗೆ ಇಪ್ಪತ್ತೆಂಟನೆಯ ಸರ್ಗವು.

ರಾವಣನು ಶುಕಸಾರಣರನ್ನು ಧಿಕ್ಕರಿಸಿ ತಿರುಗಿ ರಾಮನ ಬಳಿಗೆ ಶಾರ್ದೂಲಾದಿಚಾರರನ್ನು ಕಳುಹಿಸಿದುದು. ಅವರನ್ನು ವಿಭೀಷಣನು ಹಿಡಿದು ರಾಮನ ಮುಂದೆ ನಿಲ್ಲಿಸಿದುದು.

ರಾವಣನು, ಶುಕನು ತೋರಿಸಿದ ವಾನರಯೂಥಪತಿಗಳನ್ನೂ, ರಾಮನನ್ನೂ ಅವನ ಸಮೀಪದಲ್ಲಿದ್ದ ತನ್ನ ತಮ್ಮನಾದ ವಿಭೀಷಣನನ್ನೂ, ರಾಮನಿಗೆ ಬಲದ ಭುಜದಂತಿದ್ದ ಲಕ್ಷ್ಮಣನನ್ನೂ, ಭಯಂಕರಪರಾಕ್ರಮವುಳ್ಳ ವಾನರರಾಜನಾದ ಸುಗ್ರೀವನನ್ನೂ ಕ್ರಮವಾಗಿ ನೋಡುತ್ತ ಬಂದನು. ಹಾಗೆಯೇ. ಗಜ, ಗವಾಕ್ಷ, ಗವಯ, ಮೈಂದ, ದ್ವಿವಿದರೇ ಮೊದಲಾದ ಯೂಥಪತಿಗಳೂ, ವಾಯುಪುತ್ರನಾದ ಅಂಗದನನ್ನೂ ಮಹಾಪರಾಕ್ರಮಿಯಾದ ಹನುಮಂತನನ್ನೂ, ದುರ್ಜಯನಾದ ಜಾಂಬವಂತನನ್ನೂ, ಸುಷೇಣನನ್ನೂ, ಕುಮುದನನ್ನೂ, ನೀಲನನ್ನೂ, ನಲನನ್ನೂ ನೋಡಿದನು. ಇವರೆಲ್ಲರನ್ನೂ ನೋಡಿದಮೇಲೆ ಅವನ ಮನಸ್ಸಿಗೆ ಸ್ವಲ್ಪವಾಗಿ ಭಯವು ತೋರಿತು. ಹಾಗಿದ್ದರೂ ಆ ಭಯವನ್ನು ಹೊರಕ್ಕೆ ತೋರಿಸದೆ ಶತ್ರುಸ್ತುತಿಯನ್ನು, ಮಾಡುತಿದ್ದ ಆ ಶುಕಸಾರಣರ ಮಾತಿಗೆ ಕೋಪಗೊಂಡು ಅವರನ್ನು ಪರುಷವಾಕ್ಯಗಳಿಂದ ಬೆದರಿಸಿದನು, ವಿನಯದಿಂದ ನಮ್ರರಾಗಿ ನಿಂತಿದ್ದ ಆ ಶುಕಸಾರಣರಿಬ್ಬರನ್ನೂ ನೋಡಿ, ರಾವಣನು ಕೋಪದಿಂದ ತಡವರಿಸುವ ನುಡಿಗಳಿಂದ "ಎಲೆ ಚಾರರೆ! ಸಾಕು ಸುಮ್ಮನಿರಿ! ನಿಗ್ರಹಾನುಗ್ರಹಗಳಲ್ಲಿ ಸಮರ್ಥನಾದ ರಾಜನಮುಂದೆ, ಅವನ ಆಶ್ರಯದಿಂದ ಬದುಕುತ್ತಿರುವ ಮಂತ್ರಿಗಳು, ಅವನ ಮನಸ್ಸಿಗೆ ಹಿತವಲ್ಲದ ಮಾತನ್ನು ಹೇಳುವುದು ಎಷ್ಟು ಮಾತ್ರವೂ ಯುಕ್ತವಲ್ಲ. ಹೀಗಿರುವಾಗ ನಮ್ಮ ಶತ್ರುಗಳು ನಮ್ಮ ಮೇಲೆ ದಂಡೆತ್ತಿ ಬಂದಿರುವಾಗ, ಈ ಯುದ್ಧಾರಂಭಕಾಲದಲ್ಲಿ ನೀವಿಬ್ಬರೂ ಹೀಗೆ ಆ ನನ್ನ ಶತ್ರುಗಳನ್ನೇ ನನ್ನ ಮುಂದೆ ಸ್ತೋತ್ರಮಾಡುತ್ತಿರುವಿರಲ್ಲಾ! ನಿಮಗೆ ರಾಜನೀತಿಶಾಸ್ತ್ರದಲ್ಲಿ ಸಾರಭೂತನಾದ ಭೃತ್ಯರ ನಡತೆಯೇ ತಿಳಿದಿಲ್ಲವೆಂದು ತೋರುತ್ತಿದೆ. ಜ್ಞಾನವೃದ್ಧರಾಗಿಯೂ ಶೀಲಸಂಪನ್ನರಾಗಿಯೂ ಇದ್ದು ನೀತಿಶಾಸ್ತ್ರಗಳನ್ನು ನೀವು ಚೆನ್ನಾಗಿ ತಿಳಿದಿಲ್ಲ. ಒಂದುವೇಳೆ ಆ ಅರ್ಥವನ್ನು ತಿಳಿದಿದ್ದರೂ ನಿಮ್ಮಲ್ಲಿ ಅದಕ್ಕೆ ತಕ್ಕ ಅನುಷ್ಠಾನವಿಲ್ಲ. ಇದರಿಂದ ನೀವು ಕೇವಲ ಜ್ಞಾನಭಾರವನ್ನು ಹೊತ್ತು ತಿರುಗುವಂತಾಯಿತೇ ಹೊರತು, ಆ ಜ್ಞಾನದಿಂದ ಉಪಯೋಗವನ್ನು ಪಡೆದವರಲ್ಲ. ಹೀಗೆ

ನಿಮ್ಮಂತಹ ಮೂರ್ಖರಾದ ಮಂತ್ರಿಗಳಿಂದ ಕೂಡಿದ ನಾನು, ಯಾವಾಗಲೊ ಶತ್ರುಗಳಿಂದ ಹತನಾಗಿ ಸಾಯಬೇಕಾಗಿಯೇ ಇತ್ತು ! ಹಾಗಿದ್ದರೂ ದೈವಯೋಗ ದಿಂದ ನಾನು ಇನ್ನೂ ಜೀತರಿಸಿಕೊಂಡಿರುವೆನು. ಎಲೆ ಚಾರರೆ ! ನಾನು ಆಜ್ಞೆಯನ್ನು ಮಾಡುವಾಗ ನನ್ನ ನಾಲಿಗೆಯೊಂದೇ ಈ ಸಮಸ್ತಲೋಕಕ್ಕೂ ಶುಭಾಶುಭಗಳನ್ನು ಕೈಗೂಡಿಸುವುದು. ಹೀಗಿರುವಾಗಲೂ ನನ್ನ ಮುಂದೆಯೇ ನೀವು ಹೀಗೆ ಕರ್ಣಕಠೋರಗಳಾದ ಮಾತುಗಳನ್ನು ನುಡಿಯುತ್ತಿರುವಿರಲ್ಲಾ ! ಮರಣಕ್ಕೂ ನೀವು ಹೆದರುವವರಲ್ಲವೇನು ? ಎಲೆ ಮೂಢರೆ ! ಹೆಚ್ಚಾಗಿ ಹೇಳಿದು ದರಿಂದೇನು ? ಕಾಡಿನಲ್ಲಿ ದೊಡ್ಡ ಕಾಡುಗಿಚ್ಚು ತಗುಲಿದರೂ ಅಲ್ಲಿನ ಗಿಡಗಳು ಬದುಕಬಹುದು. ರಾಜನಲ್ಲಿ ತಪ್ಪಿನಡೆದ ನಿಮ್ಮಂತಹ ರಾಜದ್ರೋಹಿಗಳು ಮಾತ್ರ ಎಂದಿಗೂ ಕ್ಷೇಮದಿಂದರಲಾರರು ! ನೀವು ನಮಗೆ ಮೊದಲು ಮಾಡಿದ ಉಪಕಾರ ಗಳು ಈಗಲೂ ನನ್ನ ನೆನಪಿಗೆ ಬರುತ್ತಿರುವುದರಿಂದ, ಆ ಕೃತಜ್ಞತೆಯೇ ಈಗ ನನಗೆ ನಿಮ್ಮಲ್ಲಿ ಹುಟ್ಟಿರುವ ತೀವ್ರವಾದ ಕೋಪವನ್ನು ತಗ್ಗಿಸುತ್ತಿರುವುದು ಹಾಗಿಲ್ಲದಿದ್ದರೆ ಶತ್ರುಪಕ್ಷವನ್ನು ಹಿಡಿದು ಕೊಂಡಾಡುತ್ತಿರುವ ಪಾಪಿಗಳಾದ ನಿಮ್ಮನ್ನು ಈಗ ಇಲ್ಲಿಯೇ ಕೊಂದುಬಿಡುತಿದ್ದೆನು. ಛೀ ನೀಚರೆ ! ತೊಲಗಿ ಹೋಗಿರಿ ! ನನ್ನ ಕಣ್ಣೆದಿರಿಗೆ ನಿಲ್ಲಬೇಡಿರಿ ! ನಿಮ್ಮಿಂದ ನಾನು ಮೊದಲು ಪಡೆದಿರುವ ಉಪಕಾರಗಳನ್ನು ನೆನಸಿಕೊಂಡರೆ ನಿಮ್ಮನ್ನು ಕೊಲ್ಲುವುದಕ್ಕೆ ನನಗೆ ಮನಸ್ಸು ಬಾರದು. ನೀವು ಕೃತಘ್ನರೆಂದೂ, ನನ್ನಲ್ಲಿ ಸ್ನೇಹವಿಲ್ಲದವರೆಂದೂ ತೋರಿದಾಗಲೇ ಕೆಟ್ಟರಿ ! ನಿಮಗೆ ಬೇರೆ ವಧವೇ ಬೇಡ!" ಅವರು ಬಹಳ ನಾಚಿಕೆ ಗೊಂಡು ಆಗಲೂ ತಮ್ಮ ಪದ್ಧತಿಯನ್ನು ಬಿಡದೆ ಹೇಳಬೇಕಾದ ಜಯಶಬ್ದವನ್ನು ಹೇಳಿ ಹೊರಟುಹೋದರು. ಆಮೇಲೆ ರಾವಣನು ಸಮೀಪದಲ್ಲಿದ್ದ ಮಹೋದರ ನನ್ನು ಕರೆದು "ಮಹೋದರಾ ! ರಾಜನೀತಿಯಲ್ಲಿ ನಿಪುಣರಾದ ಕೆಲವು ಚಾರ ರನ್ನು ಈಗಲೇ ನನ್ನ ಬಳಿಗೆ ಕರೆತರಿಸು" ಎಂದನು. ರಾಜಾಜ್ಞೆಯಂತೆ ಕೆಲವು ಚಾರರು, ವೇಗದಿಂದ ಬಂದು ರಾವಣನ ಮುಂದೆ ಜಯಶಬ್ದವನ್ನು ಹೇಳಿ ಕೈಮುಗಿದು ನಿಂತರು. ಆಗ ರಾವಣನು ನಂಬಿಕೆಗೆ ಪಾತ್ರರಾಗಿಯೂ, ಶೂರ ರಾಗಿಯೂ ಧೈರ್ಯಶಾಲಿಗಳಾಗಿಯೂ,ತನ್ನಲ್ಲಿ ನಿಜವಾದ ಭಕ್ತಿಯುಳ್ಳವರಾಗಿಯೂ ಇದ್ದ ಆ ಚಾರರನ್ನು ನೋಡಿ " ಎಲೆ ಚಾರರೆ ! ನೀವು ಈಗಲೇ ಇಲ್ಲಿಂದ ರಾಮನ ಬಳಿಗೆ ಹೋಗಿ ಅವನು ಮುಂದೆ ನಡೆಸಬೇಕೆಂದಿರುವ ಪ್ರಯತ್ನವೇನೆಂದು ಪರೀಕ್ಷಿಸಿ

ಚೆನ್ನಾಗಿ ತಿಳಿದುಬರಬೇಕು. ಅವನ ಪ್ರಯತ್ನವು ಶಿಥಿಲವಾಗಿದ್ದಪಕ್ಷದಲ್ಲಿ, ನಾವು ಈಗಲೇ ಆವನನ್ನು ಹೆದರಿಸಿಬಿಡಬಹುದು. ಮಂತ್ರಿಗಳಲ್ಲಿ ಆತನಿಗೆ ಅಂತರಂಗ ಭೂತರಾರೆಂಬುದನ್ನೂ, ಅವನೊಡನೆ ನಿಜವಾದ ಸ್ನೇಹದಿಂದ ಕಲೆತಿರುವ ಸ್ನೇಹಿತ ರಾರೆಂಬುದನ್ನೂ ತಿಳಿದು, ಅವರನ್ನೂ ಚೆನ್ನಾಗಿ ಪರೀಕ್ಷಿಸಿ ಬರಬೇಕು. ಅವರಲ್ಲಿ ಪರಸ್ಪರ ಸ್ನೇಹವೇನಾದರೂ ಶಿಥಿಲವಾಗಿದ್ದಂತೆ ತೋರಿದಪಕ್ಷದಲ್ಲಿ, ನಾವು ಈಗಲೇ ಭೇದೋಪಾಯವನ್ನವಲಂಬಿಸಿ ಅವರಿಗಿರುವ ಸ್ನೇಹದ ಕಟ್ಟನ್ನು ಕದಲಿಸಿಬಿಡ ಬಹುದು. ಇದಲ್ಲದೆ ನೀವು ಅಲ್ಲಿಗೆ ಹೋದಮೇಲೆ, ಆ ರಾಮನು ಹೇಗೆ ನಿದ್ರಿಸು ವನೋ ಹೇಗೆ ಎಚ್ಚರಗೊಂಡಿರುವನೋ, ಯಾವ ಯಾವ ಕೆಲಸಗಳನ್ನು ಮಾಡು ತ್ತಿರುವನೋ, ಅವೆಲ್ಲವನ್ನೂ ಚೆನ್ನಾಗಿ ತಿಳಿದುಬರಬೇಕು. ಅವನು ಒಂಟಿಯಾಗಿ ನಿದ್ರಿಸುವವನಾಗಿದ್ದರೂ, ಎಚ್ಚರಗೊಂಡಾಗ ಚಿಂತಾಪರನಾಗಿದ್ದರೂ, ಮುಂದಿನ ಪ್ರಯತ್ನಗಳಲ್ಲಿ ಅಷ್ಟಾಗಿ ಆತುರವನ್ನು ತೋರಿಸದವನಾಗಿದ್ದರೂ, ನಾವು ಬೇರೆ ಬೇರೆ ಉಪಾಯಗಳಿಂದ ಅವನನ್ನು ನಿಗ್ರಹಿಸುವುದಕ್ಕೆ ಪ್ರಯತ್ನಿಸಬಹುದು. ನೀವು ಪ್ರಚ್ಛನ್ನರಾಗಿಯೇ ಇದ್ದು, ನಾನು ಹೇಳಿದುದೆಲ್ಲವನ್ನೂ ತಿಳಿದುಬರಬೇಕು. ಬುದ್ಧಿ ವಂತರಾದ ರಾಜರು ಚಾರರ ಮೂಲಕವಾಗಿಯೇ ಶತ್ರುವಿನ ರಹಸ್ಯವನ್ನು ಪೂರ್ಣ ವಾಗಿ ತಿಳಿದು, ಯುದ್ಧದಲ್ಲಿ ಸ್ವಲ್ಪ ಪ್ರಯತ್ನದಿಂದಲೇ ಅವರನ್ನು ನಿಗ್ರಹಿಸ ಬಹುದು" ಎಂದನು. ಇದನ್ನು ಕೇಳಿ ಆ ಚಾರರೆಲ್ಲರೂ ಹಾಗೆಯೇ ಆಗಲೆಂದು ಹೇಳಿ, ಅತ್ಯಂತ ಸಂತುಷ್ಟರಾಗಿ, ಶಾರ್ದೂಲನನ್ನು ಮುಂದಿಟ್ಟುಕೊಂಡು ಪ್ರಭು ವಾದ ರಾವಣನಿಗೆ ಪ್ರದಕ್ಷಿಣ ನಮಸ್ಕಾರಗಳನ್ನು ಮಾಡಿ, ಆಗಲೇ ರಾಮಲಕ್ಷ್ಮಣ ರಿದ್ದ ಕಡೆಗೆ ಹೊರಟರು. ಈ ಚಾರರೆಲ್ಲರೂ ತಮ್ಮ ವೇಷವನ್ನು ಮರೆಸಿಕೊಂಡು ಸುವೇಲಪರ್ವತದ ಸಮೀಪಕ್ಕೆ ಬಂದು, ಅಲ್ಲಿ ವಿಭೀಷಣ ಸುಗ್ರೀವರೊಡನೆ ಸೇರಿದ್ದ ರಾಮಲಕ್ಷ್ಮಣರನ್ನು ಕಂಡರು. ವಾನರಸೇನೆಯನ್ನು ನೋಡಿದಾಗಲೇ ಅವರ ಮನಸ್ಸಿನಲ್ಲಿ ಭಯವು ಹುಟ್ಟಿತು. ಇಷ್ಟರಲ್ಲಿ ಧರ್ಮಾತ್ಮನಾದ ವಿಭೀಷಣನು ಆ ರಾಕ್ಷ ಸರು ವೇಷಧಾರಿಗಳಾಗಿ ಬಂದಿರುವುದನ್ನು ತಿಳಿದುಕೊಂಡರು. ಈ ಸಂಗತಿಯು ವಿಭೀಷಣನಿಗೆ ತಿಳಿದೊಡನೆಯೇ ಆತನು, ಅವರನ್ನು ನೋಡಿ ಹೆದರಿಸಿ, ಅವರಲ್ಲಿ ಪ್ರಮುಖನಾಗಿದ್ದ ಶಾರ್ದೂಲನೆಂಬವನನ್ನು ಮಾತ್ರ ಹಿಡಿದು, ಅವನು ಬಹಳ ದುಷ್ಟ ನೆಂಬುದಕ್ಕಾಗಿ ಅಲ್ಲಿದ್ದ ವಾನರಯೂಥಪತಿಗಳ ವಶಕ್ಕೊಪ್ಪಿಸಿಬಿಟ್ಟನು. ಆಗ ಅಲ್ಲಿದ್ದ ವಾನರರೆಲ್ಲರೂ ಸೇರಿ, ಆ ಶಾರ್ದೂಲನನ್ನು ಸುತ್ತಿ ಮುತ್ತಿ ಸಾಯುವ ಹಾಗೆ

ಕೊಲ್ಲುತ್ತಿರಲು, ರಾಮನು ಬಿಡಿಸಿದನು. ಹಾಗೆಯೇ ವಾನರರು ಅಲ್ಲಲ್ಲಿ ಸಿಕ್ಕಿದ ಇತರ ಚಾರರನ್ನೂ ಹೊಡೆಯುತ್ತಿರಲು, ರಾಮನು ಅವರೆಲ್ಲರನ್ನೂ ಬಿಡಿಸಿಬಿಟ್ಟನು. ಹೀಗೆ ಲಂಕೆಯಿಂದ ಬಂದ ರಾಕ್ಷಸದೂತರೆಲ್ಲರೂ, ವಾನರರ ಕೈಗೆ ಸಿಕ್ಕಿ ಸತ್ತು ಸುಣ್ಣವಾಗಿ, ಬದುಕಿದರೆ ಸಾಕೆಂದು ನಿಟ್ಟುಸಿರು ಬಿಡುತ್ತ ಹಿಂತಿರುಗಿ ಲಂಕೆಗೆ ಓಡಿಹೋದರು. ಅವರೆಲ್ಲರೂ ಪರದೇಶದ ವೃತ್ತಾಂತಗಳನ್ನು ಆಗಾಗ ತಿಳಿದು ಬರುವುದರಲ್ಲಿ ಬಹಳ ನಿಪುಣರಾಗಿದ್ದರೂ, ಈ ವಾನರಸೇನೆಯಲ್ಲಿ ತಮ್ಮ ನೈಪುಣ್ಯವು ಸಾಗದೆಹೋದುದಕ್ಕಾಗಿ ಚಿಂತಾಕ್ರಾಂತರಾಗಿ, ರಾವಣನ ಬಳಿಗೆ ಹೋಗಿ, ರಾಮನ ಪ್ರಭಾವವನ್ನೂ, ಆತನಲ್ಲಿರುವ ಭಯಂಕರವಾನರಸೇನೆಯನ್ನೂ, ಅವರೆಲ್ಲರೂ ಸುವೇಲಪರ್ವತದ ಸಮೀಪದಲ್ಲಿ ಬಂದು ಸೇರಿರುವುದನ್ನೂ ಕ್ರಮವಾಗಿ ತಿಳಿಸಿದರು.

ಇಲ್ಲಿಗೆ ಇಪ್ಪತ್ತೊಂಭತ್ತನೆಯ ಸರ್ಗವು.

ರಾಮನು ವಾನರವೀರರೊಡನೆ ಸುವೇಲಾದ್ರಿಯ ಸಮೀಪದಲ್ಲಿ
ಬಂದಿಳಿದಿರುವುದನ್ನು ಶಾರ್ದೂಲಾದಿಗಳು
ರಾವಣನಿಗೆ ತಿಳಿಸಿದುದು.

ಹೀಗೆ ಶಾರ್ದೂಲನೇ ಮೊದಲಾದ ಚಾರರೆಲ್ಲರೂ, ರಾವಣನ ಬಳಿಗೆ ಬಂದು, ರಾಮನು ಮಹಾಸೈನ್ಯದೊಡನೆ ಬಂದು ಸುವೇಲಪರ್ವತದಲ್ಲಿ ಆ ಸೇನೆಯನ್ನಿಳಿಸಿ ರುವನೆಂದು ರಾವಣನಿಗೆ ತಿಳಿಸಿದರು. ಇದನ್ನು ಕೇಳಿ, ರಾವಣನ ಮನಸ್ಸಿನಲ್ಲಿ ಮೊದಲಿದ್ದ ಭಯವು ಇನ್ನೂ ಹೆಚ್ಚಿತು. ಆಗ ಅವನು ಶಾರ್ದೂಲನನ್ನು ನೋಡಿ “ಶಾರ್ದೂಲಾ! ಇದೇನು? ನಿನ್ನ ಮುಖದ ಕಾಂತಿಯು ಮೊದಲಿನಂತೆ ಉಲ್ಲಾಸದಿಂದಿಲ್ಲ, ಬಹಳ ದೀನನಂತೆಯೂ ಕಾಣುವೆಯಲ್ಲಾ! ಕಾರಣವೇನು? ಕೋಪಗೊಂಡ ಆ ಶತ್ರುಗಳ ಕೈಗೆ ನೀನು ಸಿಕ್ಕಲಿಲ್ಲವಷ್ಟೆ! ಅಲ್ಲಿನ ಸಂಗತಿಗಳೆಲ್ಲ ವನ್ನೂ ಚೆನ್ನಾಗಿ ತಿಳಿಯುವುದಕ್ಕೆ ತಕ್ಕ ಅವಕಾಶವೂ ಸಿಕ್ಕಿತಷ್ಟೆ?” ಎಂದನು. ಹೀಗೆ ರಾವಣನು ತನ್ನನ್ನು ಪ್ರಶ್ನೆಮಾಡುತ್ತಿರಲು, ಶಾರ್ದೂಲನು, ತಾನು ವಾನರಸೇನೆಯಲ್ಲಿ ಪಟ್ಟ ಕಷ್ಟವನ್ನು ನೆನೆಸಿಕೊಂಡು, ಭಯದಿಂದ ನಡುಗುತ್ತ, ಕುಗ್ಗಿದ ಧ್ವನಿಯಿಂದ ರಾವಣನನ್ನು ಕುರಿತು, “ಎಲೆ ರಾಜನೆ! ನಾನೇನು ಹೇಳಲಿ? ಆ ವಾನರೋತ್ತಮರ ರಹಸ್ಯವನ್ನು ತಿಳಿಯಬೇಕೆಂದರೆ, ಎಷ್ಟೇ ನಿಪುಣ

ರಾದ ಗೂಢಚಾರರಿಗೂ ಸಾಧ್ಯವಿಲ್ಲ. ಆ ವಾನರರೆಲ್ಲರೂ ಬಹಳ ಬಲಾಢ್ಯರು! ಇದರಮೇಲೆ ಶ್ರೀರಾಮನಿಂದ ರಕ್ಷಿತರಾಗಿರುವುದರಿಂದ, ನಮಗೆ ಅವರೊಡನೆ ಮಾತಾಡುವುದೇ ಶಕ್ಯವಲ್ಲ! ಇನ್ನು ಅವರನ್ನು ಪರೀಕ್ಷಿಸುವುದೆಂದರೇನು? ದಾರಿಯಲ್ಲಿ ಯಾವ ಕಡೆಯಲ್ಲಿ ನೋಡಿದರೂ ಪರ್ವತಾಕಾರವುಳ್ಳ ವಾನರರು ತುಂಬಿರುವರು. ಹಾಗಿದ್ದರೂ ನಾನು ಎಷ್ಟೋ ಪ್ರಯತ್ನದಿಂದ ಆ ಸೇನೆಯೊಳಗೆ ಪ್ರವೇಶಿಸಿಬಿಟ್ಟೆನು. ನಾನು ಅಲ್ಲಿಗೆ ಪ್ರವೇಶಿಸಿದುದು ಮಾತ್ರವೇ ಹೊರತು ಬೇರೆ ಯಾವ ಕಾರ್ಯವೂ ಸಾಗಲಿಲ್ಲ! ಒಂದು ಕಡೆಯನ್ನಾದರೂ ಸುತ್ತಿ ನೋಡಲಿಲ್ಲ. ಇಷ್ಟರಲ್ಲಿಯೇ ಅವರು ನನ್ನನ್ನು ಕಂಡುಹಿಡಿದುಬಿಟ್ಟರು. ನಮ್ಮ ಜಾತಿಯ ಕೆಲವು ರಾಕ್ಷಸರೇ ನನ್ನನ್ನು ಬಲಾತ್ಕಾರದಿಂದ ಹಿಡಿದುಕೊಂಡು ಹೋಗಿ ವಾನರರ ಕೈಗೊಪ್ಪಿಸಿಬಿಟ್ಟರು. ಆಗಲೇ ವಾನರರೆಲ್ಲರೂ ಸೇರಿ, ಮುಷ್ಟಿಗಳಿಂದಲೂ, ಮೊಳಕಾಲುಗಳಿಂದಲೂ, ಅಂಗೈಗಳಿಂದಲೂ, ಹೊಡೆದು, ಬಡಿದು, ಹಲ್ಲುಗಳಿಂದ ಕಡಿದು, ನನ್ನನ್ನು ಸಾಯುವ ಸ್ಥಿತಿಗೆ ತಂದುಬಿಟ್ಟರು. ಬಲಾಢ್ಯರಾದ ಆ ವಾನರ ರೆಲ್ಲರೂ ನನ್ನ ಕೈಕಾಲುಗಳನ್ನು ಕಟ್ಟಿ, ತಮ್ಮ ಸೇನೆಯ ಸುತ್ತಲೂ ಮೆರವಣಿಗೆ ತಂದರು. ನನ್ನ ಅಂಗಾಂಗಳೆಲ್ಲವೂ ರಕ್ತಮಯವಾದುವು. ನನಗೆ ಮೈಮೇಲೆ ಪ್ರಜ್ಞೆತಪ್ಪಿದಂತಾಯಿತು. ನನ್ನ ಇಂದ್ರಿಯಗಳೆಲ್ಲವೂ ಕದಲಿಹೋದುವು. ಹೀಗೆ ವಾನರರೆಲ್ಲರೂ ನನ್ನನ್ನು ಸಾಯಬಡಿಯುತ್ತಿರಲು, ಅವರಿಗೆ ನಾನು ಎಷ್ಟೋ ವಿಧದಿಂದ ಕೈಮುಗಿದು ಬೇಡಿಕೊಳ್ಳುತ್ತಿದ್ದೆನು. ಹಾಗೆಯೇ ಅವರು ನನ್ನನ್ನು ತಮ್ಮ ಸೈನ್ಯದಲ್ಲೆಲ್ಲಾ "ಇದೋ ಇವನು ಚಾರನು! ರಾಕ್ಷಸದೂತನು" ಎಂದು ಸಾರುತ್ತ ಸುತ್ತಿಸಿಕೊಂಡುಬಂದು ರಾಮನಿದ್ದ ಸ್ಥಳಕ್ಕೆ ಕರೆತಂದರು! ಅಲ್ಲಿಯೂ ನಾನು ನನ್ನನ್ನು ಪ್ರಾಣದಿಂದ ಬಿಟ್ಟರೆ ಸಾಕೆಂದು ಕೈಮುಗಿದು ಬೇಡುತ್ತಿದ್ದೆನು. ಆಗ ರಾಮನೇ ನನ್ನನ್ನು ದಯೆಯಿಂದ ರಕ್ಷಿಸಿದನು. ಹೇಗೋ ಅದೃಷ್ಟವಶದಿಂದ ಬದುಕಿಬಂದೆನು. ಅದೋ ಅಲ್ಲಿ ರಾಮನು, ಬೆಟ್ಟಗಳಿಂದಲೂ, ಕಲ್ಲುಗಳಿಂದಲೂ, ಮಹಾಸಮುದ್ರವನ್ನು ತುಂಬಿ, ಸೇತುವಿನ ಮೂಲಕವಾಗಿ ಸಮುದ್ರವನ್ನು ದಾಟಿ ಸರ್ವಾಯುಧಗಳೊಡನೆ ಸಿದ್ಧನಾಗಿ ಬಂದಿರುವನು. ಇನ್ನು ಶೀಘ್ರದಲ್ಲಿಯೇ ನಮ್ಮ ಲಂಕೆಯ ಬಾಗಿಲಿಗೂ ಬರುವುದರಲ್ಲಿರುವನು. ಗರುಡವ್ಯೂಹವಾಗಿ ಏರ್ಪಟ್ಟಿರುವ ತನ್ನ ದೊಡ್ಡ ವಾನರಸೈನ್ಯದೊಡನೆ, ರಾಮನು ತಪ್ಪದೆ ಈ ನಮ್ಮ ಲಂಕೆಗೆ ದಂಡೆತ್ತಿ ಬರುವನು. ಶೀಘ್ರದಲ್ಲಿಯೇ ಅವನು ನಮ್ಮ ಹೊರಗಿನ ಪ್ರಾಕಾರವನ್ನೂ

ಮುತ್ತುವನು. ನೀನು ಈಗಲೇ ರಾಮನಿಗೆ ಸೀತೆಯನ್ನೊಪ್ಪಿಸಿಬಿಡು! ಇಲ್ಲವೇ ಅವನೊಡನೆ ಸರಿಯಾಗಿ ಯುದ್ಧವನ್ನು ನಡೆಸುವುದಕ್ಕಾದರೂ ತಕ್ಕ ಸನ್ನಾಹಗಳಿಂದ ಸಿದ್ಧನಾಗಿರು! ಶೀಘ್ರದಲ್ಲಿಯೇ ಈ ಎರಡರಲ್ಲಿ ಯಾವುದಾದರೂ ಒಂದನ್ನು ನಡೆಸಬೇಕು" ಎಂದನು. ಶಾರ್ದೂಲನು ಹೇಳಿದ ಈ ವಾಕ್ಯವನ್ನು ಕೇಳಿ ರಾವಣನು ತನ್ನಲ್ಲಿ ತಾನೇ ಸ್ವಲ್ಪಹೊತ್ತಿನವರೆಗೆ ಆಲೋಚಿಸಿ ತಿರುಗಿ ಶಾರ್ದೂಲನನ್ನು ಕುರಿತು, "ಶಾರ್ದೂಲಾ! ಏನು ಹೇಳಿದೆ? ಸೀತೆಯನ್ನು ರಾಮನಿಗೆ ಕೊಡುವುದೆ? ಸಾಕು ಸುಮ್ಮನಿರು? ದೇವಗಂಧರ್ವದಾನವರೆಲ್ಲರೂ ಸೇರಿ ಏಕಕಾಲದಲ್ಲಿ ನನ್ನನ್ನಿದಿರಿಸಿದರೂ, ಸಮಸ್ತಲೋಕಗಳೂ ಒಂದಾಗಿ ಸೇರಿ ಬಂದು ನನ್ನನ್ನು ಹೆದರಿಸಿದರೂ, ನಾನು ಸೀತೆಯನ್ನು ರಾಮನಿಗೆ ಕೊಡುವವನಲ್ಲ! ಆ ಮಾತನ್ನು ಬಿಡು!" ಎಂದು ಹೇಳಿ ತಿರುಗಿ ರಾವಣನು ಮುಂದೆ ನಿಂತಿದ್ದ ಆ ಶಾರ್ದೂಲನನ್ನು ಕುರಿತು. "ಎಲೆ ಚಾರನೆ! ಅದು ಹಾಗಿರಲಿ! ನೀನು ಆ ವಾನರಸೇನೆಯನ್ನು ಚೆನ್ನಾಗಿ ಸುತ್ತಿ ನೋಡಿಬಂದಿರುವೆಯಷ್ಟೆ? ಅವರಲ್ಲಿ ಪ್ರಧಾನಶೂರರಾರು? ಅವರ ಆಕಾರವೆಂತದು? ಅವರ ಶಕ್ತಿಯೇನು? ಯಾರನ್ನಿದಿರಿಸುವುದು ಸುಲಭವಲ್ಲ? ಅವರು ಯಾರ ಮಕ್ಕಳು? ಈ ಸಂಗತಿಗಳೆಲ್ಲವನ್ನೂ ಯಥಾಸ್ಥಿತವಾಗಿ ನನಗೆ ತಿಳಿಸು! ಇದನ್ನು ನೀನು ತಿಳಿಸಿದರೆ, ನಾನು ಆ ವಾನರರ ಬಲಾಬಲವನ್ನು ಚೆನ್ನಾಗಿ ತಿಳಿದು, ಅವರ ವಿಷಯದಲ್ಲಿ ಹೇಗೆ ನಡೆಯಬೇಕೋ ಅದನ್ನು ನಿರ್ಣಯಿಸಿಟ್ಟುಕೊಳ್ಳಬಹುದು. ಯುದ್ಧವನ್ನು ನಡೆಸುವವರು ಮೊದಲು ತಮ್ಮ ಶತ್ರುಗಳ ಬಲಾಬಲವನ್ನು ತಿಳಿದುಕೊಳ್ಳಬೇಕಾದುದು ಅತ್ಯವಶ್ಯವು" ಎಂದನು. ಆಮೇಲೆ ಆ ಶಾರ್ದೂಲನೆಂಬ ಚಾರನು ರಾವಣನ ಪ್ರಶ್ನೆಗೆ ತಕ್ಕಂತೆ ಕ್ರಮವಾಗಿ ಉತ್ತರವನ್ನು ಹೇಳುವುದಕ್ಕೆ ತೊಡಗಿ "ಎಲೆ ಮಹಾರಾಜನೆ! ಆ ವಾನರಸೈನ್ಯಕ್ಕೆ ಸುಗ್ರೀವನನೆಂಬವನೇ ರಾಜನು. ಅವನು ಋಕ್ಷರಜಸ್ಸಿನ ಮಗನು. ಯುದ್ಧದಲ್ಲಿ ಎಲ್ಲರಿಗೂ ದುರ್ಜಯನಾಗಿರುವನು. ಅದೋ! ಅಲ್ಲಿ ಜಾಂಬವಂತನೆಂಬ ಮುದುಕನೊಬ್ಬನಿರುವನಲ್ಲವೆ? [1]ಅವನು ಗದ್ಗದನೆಂಬವನ ಮಗನು. ಗದ್ಗದನಿಗೆ ಧೂಮ್ರನೆಂಬ ಕಪಿಯಿರುವನು ನೋಡು. ಆತನೇ ಮೊದಲು

1. ಜಾಂಬವಂತನು ಬ್ರಹ್ಮನ ಆಕಳಿಕೆಯಿಂದ ಹುಟ್ಟಿದವನಾಗಿರುವಾಗ, ಇಲ್ಲಿ ಗದ್ಗದನಿಗೆ ಪುತ್ರನೆಂದು ಹೇಳಿದುದು ಹೇಗೆಂದರೆ; ದ್ರೌಪದಿಯು ಅಗ್ನಿಪುತ್ರಿಯಾಗಿದ್ದರೂ ಪಾಂಚಾಲಿಯೆನಿಸಿಕೊಂಡಂತೆ, ಈತನೂ ಗದ್ಗದನಿಗೆ ಸಾಕುಮಗನೆಂದು ತಿಳಿಯಬೇಕು.

ನಮ್ಮ ಲಂಕೆಗೆ ಬಂದು, ಅಕ್ಷಾದಿ ರಾಕ್ಷಸರೆಲ್ಲರನ್ನೂ ತಾನೊಬ್ಬನೇ ಕೊಂದವನು. ಅವನ ತಂದೆಗೆ ಕೇಸರಿಯೆಂದು ಹೆಸರು. ಆ ಕೇಸರಿಯು ಬೃಹಸ್ಪತಿಯ ಮಗನು. ಅದೋ! ಅಲ್ಲಿ ಧರ್ಮಾತ್ಮನಾಗಿಯೂ, ವೀರ್ಯವಂತನಾಗಿಯೂ ಇರುವ [1]ಸುಷೇಣನು ಧರ್ಮದೇವತೆಯ ಪುತ್ರನು. ಇಲ್ಲಿರುವ ದಧಿಮುಖನೆಂಬ ಕಪಿಯು ಚಂದ್ರನ ಮಗನು. ಅದೋ ಅಲ್ಲಿ ಸುಮುಖನೆಂದೂ, ದುರ್ಮುಖನೆಂದೂ, ವೇಗದರ್ಶಿಯೆಂದೂ ಹೆಸರುಗೊಂಡ ಆ ಮೂವರು ವಾನರೋತ್ತಮರಿರುವರಲ್ಲವೆ ? ಆ ಮೂವರೂ ಬ್ರಹ್ಮನಿಂದ ವಾನರರೂಪದಲ್ಲಿ ಸೃಷ್ಟಿಸಲ್ಪಟ್ಟ ಮೃತ್ಯುಗಳೋ ಎಂಬಂತೆ, ಮೃತ್ಯುಸಮಾನರಾಗಿಯೇ ಇರುವರು. ಅದೋ ಅಲ್ಲಿ ವಾನರಸೇನೆಗೆ ಮುಖ್ಯಾಧಿಪತಿಯಾದ ನೀಲನೆಂಬುವನು ಅಗ್ನಿದೇವನ ಪುತ್ರನು. ಮೊದಲು ಕೇಸರಿಪುತ್ರನೆಂದು ನಾನು ನಿನಗೆ ತೋರಿಸಿದ ಹನುಮಂತನೆಂಬವನು ವಾಯುದೇವನಿಗೆ ಔರಸಪುತ್ರನು. ಅದೋ ಅಲ್ಲಿ ಶತ್ರುಗಳಿಗೆ ದುರ್ಜಯನಾಗಿಯೂ, ಬಲದಿಂದಲೂ ಯೌವನದಿಂದಲೂ ಕೂಡಿದವನಾಗಿಯೂ ಇರುವ ಅಂಗದನೆಂಬವನು ದೇವೇಂದ್ರನ ಮುಮ್ಮಗನು. ಮೈಂದದ್ವಿವಿದರಿಬ್ಬರೂ ಅಶ್ವಿನೀದೇವತೆಗಳ ಮಕ್ಕಳು. ಅದೋ ಅಲ್ಲಿ, ಗಜ, ಗವಯ, ಗವಾಕ್ಷ, ಶರಭ, ಗಂಧಮಾದನರೆಂಬ ಐದುಮಂದಿ ವಾನರವೀರರು ಕಾಲಯಮನಿಗೆ ಸಮಾನರಾಗಿ ನಿಂತಿರುವರು ನೋಡು. ಅವರೆಲ್ಲರೂ ಯಮನ ಮಕ್ಕಳು ! ಎಲೆ ಮಹಾರಾಜನೆ ! ಹೀಗೆ ಶ್ರೀಮಂತರಾಗಿಯೂ, ದೇವಾಂಶದಿಂದ ಹುಟ್ಟಿದವರಾಗಿಯೂ, ಯುದ್ಧೋತ್ಸಾಹವುಳ್ಳವರಾಗಿಯೂ ಇರುವ ಮಹಾಶೂರರಾದ ವಾನರಪ್ರಮುಖರು ಹತ್ತುಕೋಟಿಯವರಿಗೆ ಬಂದಿರುವರು. ಇವರು ಹುಟ್ಟಿದ ಸ್ಥಳವೇ ಮೊದಲಾದ ಇತರ ವಿಶೇಷಗಳೆಲ್ಲವನ್ನೂ ಹೇಳಿ ತಿಳಿಸುವುದಕ್ಕೆ ನನ್ನಿಂದ ಸಾಧ್ಯವಿಲ್ಲ. ಅದೋ ಆ ರಾಮನ ಸ್ವರೂಪವನ್ನು ನೋಡಿದೆಯಾ ? ಸಿಂಹದಂತಿರುವ ಅವನ ಮೈಕಟ್ಟನ್ನೂ, ಅವನ ಯೌವನಸಂಪತ್ತಿಯನ್ನೂ ನೋಡು ! ಅವನೇ ಖರದೂಷಣತ್ರಿಶಿರರೆಂಬ ರಾಕ್ಷಸರನ್ನು ಕೊಂದವನು ! ಅವನೇ ವಿರಾಧನನ್ನು ಕೊಂದವನು ! ಅವನೇ ಕಾಲಯಮನಂತಿದ್ದ ಕಬಂಧನನ್ನೂ ಕೊಂದವನು ! ಅವನು ದಶರಥರಾಜನ ಮಗನು. ಎಲೆ

1. ಹಿಂದೆ ಬಾಲಕಾಂಡದಲ್ಲಿ ಸುಷೇಣನನ್ನು ವರುಣಪುತ್ರನೆಂದು ಹೇಳಿದೆ. ಇಲ್ಲಿ ಧರ್ಮಪುತ್ರನೆಂದು ಹೇಳಿದುದು ಹೇಗೆ ಎಂದರೆ, ಆ ವರುಣನನ್ನೇ ಇಲ್ಲಿ ಧರ್ಮನೆಂದು ಹೇಳಿರುವುದಾಗಿ ಗ್ರಹಿಸಿದರೂ ಗ್ರಹಿಸಬಹುದು. ಇಲ್ಲವೇ ಶಾರ್ದೂಲನೇ ಭಯದಿಂದ ತಬ್ಬಿಬ್ಬಾಗಿ ತಪ್ಪುಮಾತನ್ನಾಡಿರುವನೆಂದಾಗಲಿ, ಅಥವಾ ಈ ಸುಷೇಣನು ಆ ಸುಷೇಣನಿಗಿಂತ ಬೇರೆ ವಾನರನೆಂದಾಗಲಿ ಗ್ರಹಿಸಬಹುದು.

ರಾಜನೇ! ಪರಾಕ್ರಮದಲ್ಲಿ ಆ ರಾಮನಿಗೆ ಸಮನಾದವನು ಪ್ರಪಂಚದಲ್ಲಿ ಬೇರೊಬ್ಬನೂ ಇಲ್ಲವು! ಆ ಗುಣಗಳನ್ನೆಲ್ಲಾ ಹೇಳಬೇಕೆಂದರೆ ಭೂಮಿಯಲ್ಲಿ ಯಾವ ಮನುಷ್ಯನಿಗೂ ಸಾಧ್ಯವಿಲ್ಲ. ಈ ರಾಮನು ತಾನೊಬ್ಬನೇ ನಿಂತು ಜನಸ್ಥಾನ ದಲ್ಲಿದ್ದ ರಾಕ್ಷಸರನ್ನೆಲ್ಲಾ ಕೊಂದನು. ಅದೋ! ಅವನ ಪಕ್ಕದಲ್ಲಿರುವ ಅವನ ತಮ್ಮನಾದ ಲಕ್ಷ್ಮಣನನ್ನು ನೋಡಿದೆಯಾ? ಅವನೂ ದಶರಥರಾಜನ ಪುತ್ರನು. ಬಹಳ ಧರ್ಮಾತ್ಮನು. ಆನೆಯ ಸಲಗದಂತೆ ಎಣೆಯಿಲ್ಲದ ಬಲವುಳ್ಳವನು. ಅವನ ಬಾಣದ ದಾರಿಗೆ ಸಿಕ್ಕಿದಮೇಲೆ ದೇವೇಂದ್ರನೂ ಬದುಕಿ ಹೋಗಲಾರನು. ಅದೋ! ಅಲ್ಲಿ ಶ್ವೇತನೆಂದೂ, ಜ್ಯೋತಿರ್ಮುಖನೆಂದೂ, ಪ್ರಸಿದ್ಧರಾದ ಇಬ್ಬರು ವಾನರವೀರರಿರುವರು ನೋಡು! ಅವರಿಬ್ಬರೂ ಸೂರ್ಯನ ಮಕ್ಕಳು. ಅದೋ ಅಲ್ಲಿರುವ ಹೇಮಕೂಟನೆಂಬ ವಾನರನು ವರುಣನ ಮಗನು. ಶ್ರೇಷ್ಠನಾದ ನಲನು ವಿಶ್ವಕರ್ಮನೆಂಬ ವಾನರಶ್ರೇಷ್ಠನ ಸುಪುತ್ರನು! ಎಲೆ ಮಹಾರಾಜನೆ! ಅದೋ ಅಲ್ಲಿ ಆಗಲೇ ರಾಮನಿಂದ ಲಂಕಾರಾಜ್ಯವನ್ನು ಹೊಂದಿ, ಅದಕ್ಕೆ ತಕ್ಕಂತೆ ತಾನೂ ರಾಮನಿಗೆ ಪ್ರಿಯವನ್ನುಂಟುಮಾಡಬೇಕೆಂಬ ಆಸಕ್ತಿಯುಳ್ಳವನಾಗಿ ನಿಂತಿರುವ ಆ ರಾಕ್ಷಸೋತ್ತಮನನ್ನು ನೋಡಿದೆಯಾ? ಅವನೇ ನಿನ್ನ ತಮ್ಮನಾದ ವಿಭೀಷಣನು! ಎಲೆ ರಾಜನೆ! ಸುವೇಲ ಪರ್ವತಪ್ರಾಂತದಲ್ಲಿ ದಂಡಿಳಿಸಿರುವ ಆ ವಾನರ ಸೇನೆಯ ವಿವರವೆಲ್ಲವನ್ನೂ ನಾನು ಕ್ರಮವಾಗಿ ತಿಳಿಸಿಬಿಟ್ಟೆನು. ಇನ್ನು ಮುಂದಿನ ಕಾರ್ಯವು ನಿನಗೆ ಸೇರಿದುದು" ಎಂದನು.

[1]ಇಲ್ಲಿಗೆ ಮೂವತ್ತನೆಯ ಸರ್ಗವು.

ರಾವಣನು ಮಾಯಾವಿಯಾದ ವಿದ್ಯುಜ್ಜಿಹ್ವನಿಂದ ಕೃತ್ರಿಮವಾದ
ರಾಮಶಿರಸ್ಸನ್ನೂ, ಧನುಸ್ಸನ್ನೂ, ಸೀತೆಯು ಹನುಮಂತನ
ಮೂಲಕವಾಗಿ ಕಳುಹಿಸಿಕೊಟ್ಟ ಚೂಡಾಮಣಿಯನ್ನೂ,
ಮಾಯೆಯಿಂದ ಮಾಡಿಸಿ, ಅವುಗಳನ್ನು
ಸೀತೆಗೆ ತಂದು ತೋರಿಸಿದುದು.

ಹೀಗೆ ಶಾರ್ದೂಲಾದಿಚಾರರೆಲ್ಲರೂ, ಅಪರಿಮಿತವಾದ ಸೈನ್ಯದೊಡನೆ ರಾಮನು ಸುವೇಲ ಪರ್ವತದ ಬಳಿಯಲ್ಲಿ ಬಂದಿಳಿದಿರುವನೆಂದು ರಾವಣನಿಗೆ ತಿಳಿಸಿದರು.

1. ಈ ಸರ್ಗದಲ್ಲಿ ಹೇಳಲ್ಪಟ್ಟಿರುವ ವಾನರಜನ್ಮ ವಿಧಗಳೆಲ್ಲವೂ ಬಹಳವಾಗಿ ಬಾಲಕಾಂಡದಲ್ಲಿ ಹೇಳಲ್ಪಟ್ಟುದ್ದಕ್ಕೆ ವಿರುದ್ಧಗಳಾಗಿರುವುದರಿಂದಲೂ, ಈ ಸರ್ಗವಿಲ್ಲದಿದ್ದರೂ ಪೂರ್ವೋತ್ತರಕಥೆಗಳು ಸರಿಹೋಗುವುದರಿಂದಲೂ, ಈ ಸರ್ಗವು ಕಲ್ಪಿತವೆಂದು ಕೆಲವರ ಅಭಿಪ್ರಾಯವು.

ಮಹಾಬಲಾಢ್ಯನಾದ ರಾಮನು ಹಾಗೆ ದೊಡ್ಡಸೈನ್ಯದೊಡನೆ ಬಂದಿರುವನೆಂಬ ವಿಷಯವನ್ನು ಕೇಳಿ, ರಾವಣನು ಮೇಲೆ ಮೇಲೆ ಭಯಾವಿಷ್ಟನಾಗಿ, ಮಂತ್ರಿಗಳನ್ನು ಕರೆದು ಆಲೋಚಿಸುವನು. "ಎಲೆ ಅಮಾತ್ಯರೆ! ನಮಗೆ ದೊಡ್ಡ ಮಂತ್ರಾಲೋಚನೆಯನ್ನು ನಡೆಸಬೇಕಾದ ಕಾಲವು ಸಮಿಾಪಿಸಿಬಿಟ್ಟಿತು ಎಂದನು. ಮಂತ್ರಾಲೋಚನೆಯಲ್ಲಿ ನಿಪುಣರಾಗಿಯೂ, ನೀತಿಜ್ಞರಾಗಿಯೂ ಇರುವ ಅವರು ರಾಜಾಜ್ಞೆಯನ್ನು ಕೇಳಿದೊಡನೆ ಸಮಸ್ತರೂ ಬೇಗ ಬಂದು ರಾವಣನ ಮುಂದೆ ಸೇರಿದರು. ರಾವಣನು ಅವರೆಲ್ಲರೊಡನೆ ಕಲೆತು, ಸ್ವಲ್ಪಕಾಲದವರೆಗೆ ಆಲೋಚನೆಗಳನ್ನು ನಡೆಸುತಿದ್ದು, ಆ ಮಂತ್ರಿಗಳನ್ನು ಹಿಂದಕ್ಕೆ ಕಳುಹಿಸಿ, ತಾನೂ ತನ್ನ ಮನೆಗೆ ಹೋದನು. ಆಮೇಲೆ ರಾವಣನು, ಮಾಯೆಯಲ್ಲಿ ನಿಪುಣನಾಗಿಯೂ, ಮಹಾಬಲಾಢ್ಯನಾಗಿಯೂ ಇದ್ದ ವಿದ್ಯುಜ್ಜಿಹ್ವನೆಂಬ ರಾಕ್ಷಸನನ್ನು ಕರೆದು, ಅವನನ್ನೂ ತನ್ನ ಹಿಂದೆ ಕರೆದುಕೊಂಡು ಸೀತೆಯಿದ್ದ ಸ್ಥಳಕ್ಕೆ ಹೊರಟನು. ಸೀತೆಯನ್ನು ಸಮಿಾಪಿಸುವಷ್ಟರಲ್ಲಿ ರಾವಣನು ಮಾಯಾವಿಯಾದ ಆ ವಿದ್ಯುಜ್ಜಿಹ್ವನನ್ನು ನೋಡಿ "ಎಲೆ ವಿದ್ಯುಜ್ಜಿಹ್ವಾ! ಈಗ ನಾವು ಏನಾದರೂ ಒಂದು ಮಾಯೆಯಿಂದ ಸೀತೆಯನ್ನು ಮೋಸಪಡಿಸಬೇಕು! ಅದಕ್ಕಾಗಿ ನೀನು ಈಗಲೇ ಹೋಗಿ ನಿನ್ನ ಮಾಯೆಯಿಂದ ರಾಮನ ತಲೆಯ ಹಾಗೆಯೇ ಒಂದು ತಲೆಯನ್ನೂ, ಅವನ ಧನುಸ್ಸಿನಂತೆಯೇ ಬಾಣದಿಂದ ಕೂಡಿದ ಒಂದು ಮಹಾಧನುಸ್ಸನ್ನೂ ಮಾಡಿ ಸಿದ್ಧವಾಗಿಟ್ಟಿರು" ಎಂದನು. ರಾವಣನು ಈ ಮಾತನ್ನು ಹೇಳಿದೊಡನೆ ವಿದ್ಯುಜ್ಜಿಹ್ವನು, "ಮಹಾರಾಜನ ಅಪ್ಪಣೆ! ಹಾಗೆಯೇ ಆಗಲಿ" ಎಂದನು. ಇದನ್ನು ಕೇಳಿ ರಾವಣನು ಬಹಳ ಸಂತೋಷಗೊಂಡು, ಆ ಸಂತೋಷಕ್ಕೆ ಪ್ರತಿಫಲವಾಗಿ ಬೆಲೆಯುಳ್ಳ ಒಂದು ಭೂಷಣವನ್ನು ಅವನ ಕೈಗೆ ಕೊಟ್ಟನು. ಆಮೇಲೆ ರಾಕ್ಷಸರಾಜನಾದ ರಾವಣನು, ಸೀತೆಯನ್ನು ನೋಡಬೇಕೆಂಬ ಆತುರದಿಂದ ಅಶೋಕವನಕ್ಕೆ ಪ್ರವೇಶಿಸಿದನು. ಎಂದಿಗೂ ದುಃಖಾರ್ಹಳಲ್ಲದ ಸೀತೆಯಾದರೋ ಅಲ್ಲಿ ಮಹಾವ್ಯಸನದಿಂದ ಕೊರಗುತ್ತ, ತಲೆಯನ್ನು ತಗ್ಗಿಸಿ, ಬರೀನೆಲದಮೇಲೆ ಕುಳಿತು ತನ್ನ ಪತಿಯನ್ನೇ ಧ್ಯಾನಿಸುತ್ತ ಸಂಕಟದಿಂದ ಕೊರಗುತ್ತಿದ್ದಳು. ಅನೇಕ ಘೋರರಾಕ್ಷಸಿಯರು ಅವಳಮೇಲೆ ಕಾವಲಾಗಿ ಅತ್ತಿತ್ತ ಸುತ್ತುತ್ತಿದ್ದರು. (ಪೂರ್ಣಚಂದ್ರನಿಗೆಣೆಯಾದ ಮುಖವುಳ್ಳ ಆ ಸೀತೆಯು ಹೀಗೆ ಘೋರರಾಕ್ಷಸಿಯರಿಂದ ಪರಿವೃತಳಾಗಿ, ಉತ್ಪಾತಮೇಘಸಮೂಹಗಳಿಂದ ಆವೃತವಾದ ಚಂದ್ರರೇಖೆ

ಯಂತೆ ಕಾಣುತಿದ್ದಳು. ಅವಳ ಮೈಮೇಲೆ ಮುತ್ತೈದೆತನಕ್ಕೆ ಚಿಹ್ನೆಗಳಾದ ಕೆಲವು ಭೂಷಣಗಳು ಮಾತ್ರವೇ ಕಾಣುತಿದ್ದುವು. ಅವಳಾದರೋ ಅಲ್ಲಿ ಗಾಳಿಯಿಂದಾಡಿ ಸಲ್ಪಟ್ಟ ಹೂಬಳ್ಳಿಯಂತೆ ಸಂಕಟದಿಂದ ತೂಗಾಡುವಳು ! ಕ್ಷಣಕಾಲದವರೆಗೆ ತನ್ನಲ್ಲಿ ತಾನೇ ರಾಮನೊಡನೆ ಸೇರಿದಂತೆ ಸಂಕಲ್ಪಿಸಿಕೊಂಡು ಸಂತೋಷ ದಿಂದ ಹಿಗ್ಗುವಳು ! ಉತ್ತರ ಕ್ಷಣದಲ್ಲಿಯೇ ತನ್ನ ದುರವಸ್ಥೆಯನ್ನು ಚಿಂತಿಸಿ ದುಃಖದಿಂದ ಸ್ತಿಮಿತವಾಗಿ ನಿಂತಿರುವ ಗಂಗಾನದಿಯಂತೆ ದುಃಖಾತಿಶಯದಿಂದ ಏನೊಂದೂ ತೋರದೆ ಸ್ತಬ್ಧಳಾಗಿರುವಳು) ಹೀಗೆ ಕುಳಿತಿದ್ದ ಸೀತೆಯ ಸಮೀಪಕ್ಕೆ ಹೋಗಿ ರಾವಣನು, ಅವಳಿಗೆ ದೊಡ್ಡ ಸಂತೋಷವಾರ್ತೆಯನ್ನು ಹೇಳುವವನಂತೆ ನಟಿಸುತ್ತ, ಅವಳನ್ನು ಕುರಿತು ನಿರ್ಭಯವಾಗಿ “ ಎಲೆ ಕಲ್ಯಾಣಿ ! ಇದುವರೆಗೆ ನಾನು ನಿನಗೆ ಎಷ್ಟೋ ಸಮಾಧಾನಗಳನ್ನು ಹೇಳಿದರೂ ಕೇಳದೆ, ಯಾವನ ಆಶ್ರಯ ವನ್ನು ನಂಬಿ ನನ್ನೊಡನೆ ಅಷ್ಟು ನಿಷ್ಠುರವಾಕ್ಯಗಳನ್ನಾಡಿದೆಯೋ, ಆ ನಿನ್ನ ಪತಿಯಾದ ರಾಮನು ಈಗಲೇ ಯುದ್ಧದಲ್ಲಿ ಹತನಾದನು. ಖರಾದಿ ರಾಕ್ಷಸರನ್ನು ಕೊಂದು ನನ್ನೊಡನೆ ಅವನು ವೈರವನ್ನು ಬೆಳೆಸಿದುದಕ್ಕೆ ತಕ್ಕ ಫಲವನ್ನು ತೋರಿಸಿಬಿಟ್ಟೆನು ! ನಿನಗಿದ್ದ ಪ್ರಬಲವಾದ ಆಶ್ರಯವನ್ನು ನಿರ್ಮೂಲವಾಗಿ ಕಿತ್ತು ಬಿಟ್ಟೆನು ! ಇಂದಿಗೆ ನಿನ್ನ ಹೆಮ್ಮೆಯನ್ನು ಮುರಿದೆನು ! ಇನ್ನು ನಾನು ನಿನ್ನನ್ನು ಹಿಂದಿನಂತೆ ಪ್ರಾರ್ಥಿಸಬೇಕಾದ ಅವಶ್ಯಕತೆಯೂ ಇಲ್ಲ. ನಿನ್ನ ವ್ಯಸನದಿಂದಲೇ ನೀನು ಬೇರೆ ದಿಕ್ಕಿಲ್ಲದುದಕ್ಕಾಗಿ ನನಗೆ ಭಾರ್ಯೆಯಾಗಬಹುದು. ಎಲೆ ಬುದ್ಧಿ ಯಿಲ್ಲದವಳೆ ! ಇನ್ನಾದರೂ ನಿನ್ನ ಛಲವನ್ನು ಬಿಡು. ಸತ್ತವನಿಂದ ನಿನಗಾಗುವು ದೇನು ? ಎಲೆ ಭದ್ರೆ ! ಈಗಲೂ ನನ್ನ ಮಾತನ್ನು ಕೇಳು ! ನನ್ನ ಭಾರ್ಯೆಯ ರೆಲ್ಲರಿಗೂ ನೀನೇ ಈಶ್ವರಿಯಾಗಿರು ! ನೀನು ಮಂದಭಾಗ್ಯೆಯಾದುದರಿಂದಲೇ ಇದುವರೆಗೆ ಕೈಗೆ ಬಂದ ಪುರುಷಾರ್ಥವನ್ನನುಭವಿಸುವುದಕ್ಕೂ ಲಭ್ಯವಿಲ್ಲದೆ ಹೋಯಿತು. ಎಲೆ ಮೂಢಳೆ ! ಏನೂ ತಿಳಿಯದಿದ್ದರೂ ಎಲ್ಲವನ್ನೂ ತಿಳಿದವಳೆಂಬ ಹೆಮ್ಮೆಯು ಮಾತ್ರ ನಿನಗೆ ಪೂರ್ಣವಾಗಿರುವುದು. ಎಲೆ ಸೀತೆ ! ನಿನ್ನ ಪತಿಯು ವೃತ್ರಾಸುರನ ಸಾವಿನಂತೆ ಭಯಂಕರವಾದ ಕೊಲೆಗೆ ಸಿಕ್ಕಿ ಸತ್ತಿರುವನು. ನಾನು ಅವನನ್ನು ಕೊಂದ ರೀತಿಯನ್ನೂ ತಿಳಿಸುವೆನು ಕೇಳು ? ನಿನ್ನ ಪತಿಯಾದ ರಾಮನು ನನ್ನನ್ನು ಕೊಲ್ಲಬೇಕೆಂಬ ಉದ್ದೇಶದಿಂದ, ಸುಗ್ರೀವನ ಕಡೆಯ ದೊಡ್ಡ ವಾನರಸೈನ್ಯದೊಡನೆ ಸಮುದ್ರತೀರಕ್ಕೆ ಬಂದನಂತೆ ! ಹೀಗೆ ರಾಮನು ಲವಣ

ಸಮುದ್ರದ ಉತ್ತರತೀರದಲ್ಲಿ ದೊಡ್ಡ ಸೇನೆಯೊಡನೆ ಬಂದಿಳಿಯುವಷ್ಟರಲ್ಲಿ ಸೂರ್ಯನು ಮುಳುಗುತ್ತ ಬಂದನು. ಆ ಸೇನೆಯೆಲ್ಲವೂ ಮಾರ್ಗಾಯಾಸದಿಂದ ಬಹಳ ವಾಗಿ ಬಳಲಿದ್ದುದರಿಂದ ಆ ರಾತ್ರಿಯಲ್ಲಿ ಅಲ್ಲಿಯೇ ಮಲಗಿ ನಿದ್ರೆ ಹೋಗುತಿತ್ತು. ಅರ್ಧರಾತ್ರಿಯಲ್ಲಿ ಆ ಸಮಸ್ತ ಸೈನ್ಯಗಳೂ ಸುಖನಿದ್ರೆಯಿಂದ ನಿದ್ರಿಸುತ್ತಿದ್ದಾಗ ಮೊದಲು ನಾನು ಚಾರರನ್ನು ಕಳುಹಿಸಿ ಅಲ್ಲಿನ ಸಂಗತಿಗಳನ್ನೆಲ್ಲಾ ತಿಳಿದು ಕೊಂಡೆನು. ಆಮೇಲೆ ನಮ್ಮ ಕಡೆಯ ಪ್ರಹಸ್ತನು ದೊಡ್ಡ ಸೈನ್ಯದೊಡನೆ ಹೋಗಿ ಆ ರಾಮಲಕ್ಷ್ಮಣರ ಆಶ್ರಯದಲ್ಲಿದ್ದ ಸಮಸ್ತ ಸೈನ್ಯಗಳನ್ನೂ, ಆ ರಾತ್ರಿಯಲ್ಲಿಯೇ ನಿಶ್ಶೇಷವಾಗಿ ಹತಮಾಡಿಬಂದನು. ಅಲ್ಲಿ ನಮ್ಮ ಕಡೆಯ ರಾಕ್ಷಸರು ಅಡ್ಡಗತ್ತಿ ಗಳನ್ನೂ ಪರಿಘಗಳನ್ನೂ, ಚಕ್ರಗಳನ್ನೂ, ಕಬ್ಬಿಣದ ಗುದಿಗಳನ್ನೂ ಕತ್ತಿ ಗಳನ್ನೂ, ಬಾಣಗಳನ್ನೂ ಶೂಲಗಳನ್ನು ಕೂಟಮುದ್ಗರಾದ್ಯಾಯುಧಗಳನ್ನೂ, ದಂಡಗಳನ್ನೂ, ಕೋಣತಗಳನ್ನೂ, ಈಟಿಗಳನ್ನೂ ಡೊಡ್ಡ ಚಕ್ರಾಯುಧಗಳನ್ನೂ ಕಬ್ಬಿಣದೊನಕೆಗಳನ್ನೂ ಬೀಸಿಬೀಸಿ ಬಡಿದು, ಸಮಸ್ತವಾನರರನ್ನೂ ಕೊಂದು ಕೆಡಹಿದರು. ಆಮೇಲೆ ಶತ್ರುಸಂಹಾರದಲ್ಲಿ ನಿಪುಣನಾಗಿಯೂ ಆಯುಧಗಳನ್ನು ಪ್ರಯೋಗಿಸುವುದರಲ್ಲಿ ಹಸ್ತ ಚಾತುರ್ಯವುಳ್ಳವನಾಗಿಯೂ, ಇದ್ದ ನಮ್ಮ ಪ್ರಹಸ್ತನು, ಸಮಯವನ್ನು ನೋಡಿ ಆ ಸೈನ್ಯದ ನಡುವೆ ನುಗ್ಗಿ ಅಲ್ಲಿ ನಿದ್ರಿಸುತಿದ್ದ ರಾಮನ ತಲೆಯನ್ನೂ ಕತ್ತರಿಸಿಬಿಟ್ಟನು. ಇಷ್ಟರಲ್ಲಿ ನನ್ನ ತಮ್ಮನಾದ ವಿಭೀಷಣನು ಭಯದಿಂದ ಆಕಾಶಕ್ಕೆ ಹಾರಿ ಓಡಿಹೋಗುತ್ತಿರಲು, ದೈವಿಕವಾಗಿ ಅವನೂ ನಮ್ಮ ರಾಕ್ಷಸರ ಕೈಗೆ ಸಿಕ್ಕಿಬಿಟ್ಟನು. ಲಕ್ಷ್ಮಣನೂ ಇತರ ವಾನರರೂ ಚದುರಿ ದಿಕ್ಕು ದಿಕ್ಕಿಗೆ ಪಲಾಯನಮಾಡಿಬಿಟ್ಟರು. ಎಲೆ ಸೀತೆ! ಈಗಲೂ ಅಲ್ಲಿ ವಾನರರಾಜ ನಾದ ಸುಗ್ರೀವನು ಕತ್ತು ಮುರಿದು ಬಿದ್ದಿರುವನು. ಹನುಮಂತನೂ ರಾಕ್ಷಸರಿಂದ ಹತನಾದ ಮುಸುಡಿಯೇ ಇಲ್ಲದೆ ಬಿದ್ದಿರುವನು. ಜಾಂಬವಂತನು ಭಯದಿಂದ ಮೇಲೆ ಹಾರುವಾಗ, ನಮ್ಮ ರಾಕ್ಷಸರು ಅವನನ್ನು ಹಿಡಿದು ಅವನ ಮೊಳಕಾಲು ಗಳನ್ನು ಮುರಿದು ಕೊಂದು ಕೆಡಹಿದರು. ಅವನನ್ನು ನಮ್ಮ ರಾಕ್ಷಸ ಸೈನಿಕರು ನಾನಾವಿಧಗಳಾದ ಪಟ್ಟಸಗಳಿಂದ ಕತ್ತರಿಸಿರುವರು. ಕೊಡಲಿಯಿಂದ ಕಡಿದ ಮರದಂತೆ ಅವನು ರಣರಂಗದಲ್ಲಿ ಬಿದ್ದಿರುವನು. ದೊಡ್ಡ ದೇಹವುಳ್ಳವರಾಗಿಯೂ, ಶತ್ರುಗಳನ್ನಡಗಿಸುವುದರಲ್ಲಿ ಸಮರ್ಥರಾಗಿಯೂ ಇದ್ದ ಮೈಂದದ್ವಿವಿದರೆಂಬ ವಾನರರಿಬ್ಬರನ್ನೂ, ನಮ್ಮ ರಾಕ್ಷಸರು ಹಿಡಿದು ಇವರ ನಡುವನ್ನು ಕತ್ತಿಗಳಿಂದ

ಕತ್ತರಿಸಿ, ಚಿತ್ರವಧೆಮಾಡಿಕೊಲ್ಲುವಾಗ, ಅವರಿಬ್ಬರೂ ರಕ್ತಪ್ರವಾಹದಿಂದ ತೊಯ್ದ ಮೈಯುಳ್ಳವರಾಗಿ ನಿಟ್ಟುಸಿರುಬಿಟ್ಟು ಗೋಳಿಡುತ್ತ ಪ್ರಾಣವನ್ನು ಬಿಟ್ಟರು. ಹಾಗೆಯೇ ಅಲ್ಲಿ ಪನಸನೆಂಬವನು ನಮ್ಮ ರಾಕ್ಷಸಭಟರಿಂದ ಹಲಸಿನ ಹಣ್ಣಿನಂತೆ ಚಿತ್ರವಿಚಿತ್ರವಾಗಿ ಕುಯ್ಯಲ್ಪಟ್ಟು ನೆಲದಲ್ಲಿ ಬಿದ್ದಿರುವನು. ದಧಿಮುಖನೆಂಬುವನು. ಅನೇಕ ಬಾಣಗಳಿಂದ ಗಾಯಪಟ್ಟು ಅಲ್ಲಿನ ಪರ್ವತಗುಹೆಯಲ್ಲಿ ಹೋಗಿ ಮಲಗಿರುವನು, ಮಹಾತೇಜಸ್ವಿಯಾದ ಕುಮುದನು ನಮ್ಮ ರಾಕ್ಷಸರ ಬಾಣಹತಿಯಿಂದ ನೊಂದು ಮಾತಾಡುವುದಕ್ಕೂ ತ್ರಾಣವಿಲ್ಲದೆ ಬಿದ್ದಿರುವನು. ನಮ್ಮ ರಾಕ್ಷಸಭಟರು ಯುವರಾಜನಾದ ಅಂಗದನನ್ನು ಹಿಡಿದು, ಅವನ ಅಂಗಾಂಗಗಳನ್ನೂ ಬಾಣಗಳಿಂದ ಚಿತ್ರವಿಚಿತ್ರವಾಗಿ ಖಂಡಿಸಿರುವರು. ಅವನು ರಕ್ತವನ್ನು ಕಾರುತ್ತ ಕಳಚಿಬಿದ್ದ ತೋಳ್ಬಳೆಗಳೊಡನೆ ನೆಲದಲ್ಲಿ ಬಿದ್ದಿರುವನು. ಎಲೆ ಸೀತೆ ! ಇನ್ನೂ ಅಲ್ಲಿದ್ದ ವಾನರಸೈನಿಕರ ದುರವಸ್ಥೆಯನ್ನು ನಾನೇನೆಂದು ಹೇಳಲಿ ! ನಮ್ಮ ರಾಕ್ಷಸರು ಅಲ್ಲಲ್ಲಿ ಮಲಗಿದ್ದ ವಾನರರಲ್ಲಿ ಕೆಲವರನ್ನು ಆನೆಗಳಿಂದಲೂ, ಕೆಲವರನ್ನು ಕುದುರೆಗಳಿಂದಲೂ ತುಳಿಸಿಬಿಟ್ಟರು. ಕೆಲವರಮೇಲೆ ರಥಗಳನ್ನು ಹರಿಯಿಸಿ ಅವುಗಳಿಂದಲೇ ಅವರ ದೇಹವನ್ನು ಅರೆದುಬಿಟ್ಟರು. ಬೇರೆ ಕೆಲವರು ಬಿರುಗಾಳಿಯ ಬಡಿತಕ್ಕೆ ಸಿಕ್ಕಿದ ಮೇಘಗಳಂತೆ, ಕುದುರೆಗಳ ಕಾಲಿನ ತುಳಿತಕ್ಕೆ ಸಿಕ್ಕಿ ನಜ್ಜುಗುಜ್ಜಾಗಿ ಬಿದ್ದಿರುವರು. ಕೆಲವು ವಾನರರು ಭಯದಿಂದ ನಾನಾದಿಕ್ಕುಗಳಿಗೆ ಪಲಾಯನಮಾಡುತ್ತಿರುವಾಗ, ನಮ್ಮ ರಾಕ್ಷಸರು ಆನೆಗಳ ಮೇಲೆ ಬೀಳುವ ಸಿಂಹಗಳಂತೆ ಅವರನ್ನು ಬೆನ್ನಟ್ಟಿ ಹೋಗಿ ಹಿಡಿದು ಕೊಂದಿರುವರು. ಇದಲ್ಲದೆ ಆ ವಾನರರು ಭಯದಿಂದ ಅಲ್ಲಲ್ಲಿ ಪಲಾಯನಮಾಡುವಾಗ, ಸಮುದ್ರದಲ್ಲಿ ಬಿದ್ದವರು ಕೆಲವರು ! ಆಕಾಶಕ್ಕೆ ಹಾರಿದವರು ಕೆಲವರು ! ಅಲ್ಲಿದ್ದ ಕರಡಿಗಳೆಲ್ಲವೂ ಕಪಿಸ್ವಭಾವವನ್ನವಲಂಬಿಸಿ ಮರವನ್ನೇರಿ ಕುಳಿತವು, ಎಲೆ ಸೀತೆ ! ಇಷ್ಟರಲ್ಲಿ ಮುಗಿಸಲಿಲ್ಲ. ನಮ್ಮ ರಾಕ್ಷಸರು ಸಮುದ್ರತೀರಪ್ರದೇಶಗಳಲ್ಲಿಯೂ, ಬೆಟ್ಟಗಳಲ್ಲಿಯೂ, ಕಾಡುಗಳಲ್ಲಿಯೂ, ಅವಿತುಕೊಂಡಿರುವ ವಾನರರನ್ನು ಹುಡುಕಿಹುಡುಕಿ ಅನೇಕರನ್ನು ಹಿಡಿದು ಕೊಂದಿರುವರು. ಹೀಗೆ ನಮ್ಮ ಸೈನಿಕರು ನಿನ್ನ ಪತಿಯನ್ನೂ ಅವನ ಸೇನೆಯನ್ನೂ ನಿರ್ಮೂಲಮಾಡಿಬಿಟ್ಟರು. ಎಲೆ ಸೀತೆ ! ರಕ್ತದಿಂದ ತೊಯ್ದು, ಧೂಳಿನಿಂದ ತುಂಬಿ ಮಲಿನವಾಗಿರುವ ರಾಮಶಿರಸ್ಸನ್ನು ಕೂಡ ನಮ್ಮ ರಾಕ್ಷಸರು ಇಲ್ಲಿಗೆ ತಂದಿರುವರು'' ಎಂದನು. ದುರಾತ್ಮನಾದ

ರಾವಣನು ಸೀತೆಯನ್ನು ಕುರಿತು ಹೀಗೆಂದು ಹೇಳಿ, ಆಮೇಲೆ ಸಮೀಪದಲ್ಲಿದ್ದ ರಾಕ್ಷಸಿಯೊಬ್ಬಳನ್ನು ಕರೆದು, ಸೀತೆಯ ಕಿವಿಗೆ ಬೀಳುವಂತೆ ಅವಳನ್ನು ಕುರಿತು! "ಎಲೆ ರಾಕ್ಷಸಿ! ಈಗಿನ ಯುದ್ಧದಲ್ಲಿ ಬಹಳ ಭಯಂಕರಕಾರ್ಯವನ್ನು ನಡೆಸಿ ಯುದ್ಧರಂಗದಿಂದ ರಾಮನ ತಲೆಯನ್ನು ತಾನಾಗಿ ಆಸೆಯಿಂದ ತಂದಿಟ್ಟಿರುವ ಆ ವಿದ್ಯುಜ್ಜಿಹ್ವನನ್ನು ಕರೆದುಕೊಂಡು ಬಾ" ಎಂದನು. ಅದರಂತೆಯೇ ರಾಕ್ಷಸಿಯು ಹೋಗಿ ಈ ರಾಜಾಜ್ಞೆಯನ್ನು ತಿಳಿಸಿದಮೇಲೆ ವಿದ್ಯುಜ್ಜಿಹ್ವನು ತಾನು ಮಾಯೆಯಿಂದ ನಿರ್ಮಿಸಿದ ರಾಮನ ತಲೆಯನ್ನೂ, ಧನುಸ್ಸನ್ನೂ ಕೈಗೆತ್ತಿ ಕೊಂಡು ಬಂದು ರಾವಣನ ಮುಂದೆ ನಿಂತು, ಅವನಿಗೆ ತಲೆಬಗ್ಗಿ ನಮಸ್ಕರಿಸಿ ದನು. ಆಗ ರಾವಣನು, ಮುಂದೆ ನಿಂತಿದ್ದ ವಿದ್ಯುಜ್ಜಿಹ್ವನನ್ನು ನೋಡಿ, "ವಿದ್ಯುಜ್ಜಿಹ್ವಾ! ನೀನು ಯುದ್ಧರಂಗದಿಂದ ತಂದ ರಾಮನ ತಲೆಯನ್ನು ಈ ಸೀತೆಯ ಮುಂದೆ ತಂದಿಡು? ಈ ಬಡಹೆಂಗಸು ತನ್ನ ಪತಿಗುಂಟಾದ ಈ ಚರಮಾವಸ್ಥೆಯನ್ನಾದರೂ ಚೆನ್ನಾಗಿ ನೋಡಲಿ" ಎಂದನು. ರಾವಣನು ಈ ಮಾತನ್ನು ಹೇಳಿದೊಡನೆ, ವಿದ್ಯುಜ್ಜಿಹ್ವನು ನೋಡುವುದಕ್ಕೆ ಅತಿಸುಂದರವಾದ ಆ ರಾಮನ ಮಾಯಾಶಿರಸ್ಸನ್ನು ತಂದು ಸೀತೆಯ ಮುಂದೆ ಇರಿಸಿ, ಅಲ್ಲಿ ನಿಮಿಷ ಮಾತ್ರವೂ ನಿಲ್ಲದೆ ಕಣ್ಮರೆಯಾದನು. ಆಮೇಲೆ ರಾವಣನು ವಿದ್ಯುಜ್ಜಿಹ್ವನು ತಂದಿದ್ದ ಲೋಕ ಪ್ರಸಿದ್ಧವಾದ ಮಾಯಾಧನುಸ್ಸನ್ನು ತಾನೇ ತನ್ನ ಕೈಯಿಂದ ತೆಗೆದುಕೊಂಡು ಹೋಗಿ ಸೀತೆಯ ಮುಂದಿಟ್ಟು "ಸೀತೇ! ದೃಢವಾದ ಹೆದೆಯಿಂದ ಕೂಡಿದ ಈ ಧನುಸ್ಸೂ ಕೂಡ ನಿನ್ನ ರಾಮನದು! ಕೇವಲ ಮನುಷ್ಯಮಾತ್ರನಾದ ಆ ರಾಮನನ್ನು ನಮ್ಮ ಪ್ರಹಸ್ತನು ನಿನ್ನಿನ ರಾತ್ರಿಯಲ್ಲಿ ಕೊಂದು ಇವನ್ನು ಇಲ್ಲಿಗೆ ತಂದುಕೊಟ್ಟನು" ಎಂದನು. ಹೀಗೆ ವಿದ್ಯುಜ್ಜಿಹ್ವನೂ, ರಾವಣನೂ ಕ್ರಮವಾಗಿ ಮಾಯಾರಾಮ ಶಿರಸ್ಸನ್ನೂ, ಮಾಯಾಧನುಸ್ಸನ್ನು ಸೀತೆಯ ಮುಂದೆ ತಂದಿಟ್ಟ ಮೇಲೆ ತಿರುಗಿ ರಾವಣನು ಮಹಾಪತಿವ್ರತೆಯೆಂದು ಹೆಸರುಗೊಂಡ ಆ ಸೀತೆ ಯನ್ನು "ಎಲೆ ಭದ್ರೆ! ಇನ್ನಾದರೂ ನನಗೆ ಪ್ರಸನ್ನಳಾಗು" ಎಂದನು.

ಇಲ್ಲಿಗೆ ಮೂವತ್ತೊಂದನೆಯ ಸರ್ಗವು.

—•• ಸೀತೆಯು ಮಾಯಾರಾಮನ ಶಿರಸ್ಸನ್ನು ನೋಡಿ ವಿಲಪಿಸಿದುದು. ••—

ಸೀತೆಯು, ತನ್ನ ಮುಂದೆ ತಂದಿರಿಸಿದ್ದ ಕೃತ್ರಿಮವಾದ ರಾಮಶಿರಸ್ಸನ್ನೂ ಉತ್ತಮವಾದ ಮಾಯಾಧನುಸ್ಸನ್ನೂ ನೋಡಿದಳು. ಹಾಗೆಯೇ ಹನುಮಂತನು ಹಿಂದೆ ತನಗೆ ತಿಳಿಸಿದ, ರಾಮ ಸುಗ್ರೀವ ಸಂಬಂಧವನ್ನು, ಈಗ ರಾವಣನ ಬಾಯಿಂದಲೂ ಕೇಳಿದಳು. ಮತ್ತು ತನ್ನ ಪ್ರಿಯನಾದ ರಾಮನ ಕಣ್ಣುಗಳಂತೆಯೇ ಅಂದವಾದ ಕಣ್ಣುಗಳನ್ನೂ ಅದೇ ಮುಖವರ್ಣವನ್ನೂ, ಅದೇ ವಿಧವಾದ ಮುಖದ ಸೊಗಸನ್ನೂ, ಈ ಮಾಯಾಶಿರಸ್ಸಿನಲ್ಲಿಯೂ ನೋಡಿದಳು. ತಾನು ಗುರುತಿಗಾಗಿ ಹನುಮಂತನ ಕೈಯಲ್ಲಿ, ರಾಮನಿಗೆ ಕಳುಹಿಸಿಕೊಟ್ಟ ಚೂಡಾಮಣಿಯೂ ಅಲ್ಲಿರುವುದನ್ನು ಕಂಡಳು. ಈ ಹೋಲಿಕೆಗಳೆಲ್ಲವೂ, ಅವಳಿಗೆ ಅದೇ ನಿಜವಾದ ರಾಮನ ತಲೆಯೆಂಬ ಭ್ರಾಂತಿಯನ್ನು ಹುಟ್ಟಿಸಿತು. ಅವಳ ದುಃಖವು ಮಿತಿಮೀರಿಹೋಯಿತು. ಸಂಕಟವನ್ನು ತಡೆಯಲಾರದೆ, ಕುರರಪಕ್ಷಿಯಂತೆ ಅತಿ ದೀನಧ್ವನಿಯಿಂದ ರೋದಿಸುವುದಕ್ಕೆ ತೊಡಗಿ, ರಾಮನ ಸ್ಥಿತಿಗಾಗಿ ಕೈಕೇಯಿಯನ್ನು ನಿಂದಿಸುತ್ತ, “ಎಲೆ ಕೈಕೇಯಿ ! ನಿನ್ನ ಕೋರಿಕೆಯು ಕೈಗೂಡಿತೆ! ರಘುಕುಲಕ್ಕೆಲ್ಲವೂ ಆನಂದವರ್ಧನನಾದ ನನ್ನ ಪ್ರಿಯನು ಇದೋ ಹತನಾಗಿರುವನು ! ನಿನ್ನ ಇಷ್ಟಾರ್ಥವು ಕೈಗೂಡಿತೆ ! ಕಲಹವನ್ನೇ ಉದ್ದೇಶವಾಗಿಟ್ಟುಕೊಂಡು ಇಷ್ಟನರ್ಥಗಳನ್ನು ತಂದಿಟ್ಟೆಯಲ್ಲಾ? ಅಯ್ಯೋ? ಆ ನನ್ನ ಪ್ರಿಯನಾದ ರಾಮನನ್ನು ಕಾಡಿಗೋಡಿಸುವ ನೆವದಿಂದ, ಅವನನ್ನು ಕೊಲ್ಲಬೇಕೆಂದೆಣಿಸಿ ಕೊನೆಗೆ ಕುಲವನ್ನೇ ಹಾಳುಮಾಡಿಬಿಟ್ಟೆಯಲ್ಲಾ ? ನಿನ್ನ ಕಲಹವು ಕುಲನಾಶದಲ್ಲಿಯೇ ಪರ್ಯವಸಾನಹೊಂದಿತು ! ಎಲೆ ಕೈಕೇಯಿ ! ನೀನು ಹಾಗೆ ಲೋಕಾಭಿರಾಮನಾದ ಆ ರಾಮನಿಗೆ, ನಾರುಬಟ್ಟೆಯನ್ನುಡಿಸಿ ನನ್ನೊಡನೆ ಸೇರಿಸಿ ಕಾಡಿಗೆ ಕಳುಹಿಸಿದೆಯಲ್ಲವೆ? ಸರ್ವಲೋಕಪ್ರಿಯನಾದ ಆ ರಾಮನು ನಿನಗೆ ಮಾಡಿದ ಅಂತಹ ಅಪ್ರಿಯವೇನು? ಎಂದು ಕೈಕೇಯಿಯನ್ನು ನಾನಾ ವಿಧವಾಗಿ ನಿಂದಿಸಿದಳು. ದುಃಖದಿಂದ ದೀನಗಳಾಗಿ ನಡುಗುತ್ತ ಆ ಸೀತೆಯು, ಹೀಗೆ ಕೈಕೇಯಿಯನ್ನು ನಿಂದಿಸುತಿದ್ದ ಹಾಗೆಯೇ ಸಂಕಟವನ್ನು ತಡೆಯಲಾರದೆ ಕಡಿದ ಬಾಳೆಯಗಿಡದಂತೆ ಪ್ರಜ್ಞೆತಪ್ಪಿ ನೆಲಕ್ಕೆ ಬಿದ್ದಳು. ಆಮೇಲೆ ತಾನಾಗಿಯೇ ಕ್ಷಣಕಾಲದಲ್ಲಿ ಹೇಗೋ ಚೇತರಿಸಿಕೊಂಡು, ತನ್ನ ಮುಂದಿದ್ದ ಮಾಯಾಶಿರಸ್ಸನ್ನು ಕೈಗೆತ್ತಿಕೊಂಡು, ಬಾರಿಬಾರಿಗೂ ಅದನಾಘ್ರಾಣಿಸಿ ಗೋಳಿಡುತಿದ್ದಳು. ಆಗಾಗ ಕಣ್ಣೀರು ತುಳುಕುವುದರಿಂದ ಚೆನ್ನಾಗಿ

ನೋಡುವುದಕ್ಕೂ ಸಾಧ್ಯವಿಲ್ಲದುದಕ್ಕಾಗಿ, ತನ್ನ ಕಣ್ಣುಗಳನ್ನು ಪ್ರಯತ್ನಪಟ್ಟು ವಿಸ್ತಾರವಾಗಿ ಬಿಚ್ಚುವಳು! ಹೀಗೆ ದುಃಖವಶಳಾದ ಸೀತೆಯು ಆ ತಲೆಯನ್ನು ನೋಡಿ ನೋಡಿ "ಅಯ್ಯೋ! ನಾನು ಕೆಟ್ಟೆನು! ಎಲೆ ಮಹಾಬಾಹೂ! ನೀನು ನಿನ್ನ ಶತ್ರುಗಳನ್ನು ಕೊಲ್ಲದೆ ಬಿಡುವವನಲ್ಲವೆಂದು ವೀರವ್ರತವನ್ನು ಹಿಡಿದಿದ್ದವ ನಲ್ಲವೆ? ಆ ನಿನ್ನ ದೃಢವ್ರತವೂ ವಿಫಲವಾಯಿತಲ್ಲಾ! ಹಾ! ಪ್ರಿಯನೆ! ಈ ನಿನ್ನ ಮರಣಾವಸ್ಥೆಯನ್ನು ನಾನೇ ಕಣ್ಣಾರೆ ನೋಡಬೇಕಾಯಿತೆ! ವಿಧವೆ ಯಾದೆನಲ್ಲಾ! ಪತ್ನಿಯ ಕಣ್ಣೆದಿರಿಗೆ ಪತಿಯು ಮೃತಿಹೊಂದಿದಪಕ್ಷದಲ್ಲಿ, ಅದಕ್ಕೆ ಆ ಪತ್ನಿಯಲ್ಲಿರುವ ದೋಷಗಳೇ ಕಾರಣವೆಂದು ಹೇಳುವರು! ಹೀಗೆ ನಾನು ಬದುಕಿರುವಾಗಲೇ ನನ್ನ ಕಣ್ಣೆದಿರಿಗೆ ನೀನು ಮರಣವನ್ನು ಹೊಂದಿದೆ ಯಲ್ಲಾ? ಇದಕ್ಕೆ ನನ್ನ ದೋಷಗಳೇ ಕಾರಣವೇಹೊರತು ಬೇರೆಯಲ್ಲ! ಸದಾ ಚಾರಶೀಲನಾದ ನಿನ್ನಲ್ಲಿ ಲೇಶಮಾತ್ರವೂ ದೋಷವನ್ನೆಣಿಸುವುದಕ್ಕಿಲ್ಲ! ಹಾ! ಪ್ರಿಯನೆ! ಪರಮಪಾಪಿನಿಯಾದ ನನ್ನಿಂದ ನಿನಗೂ ಈ ಅವಸ್ಥೆಯುಂಟಾಯಿತೆ? ಎಲೆ ಆರ್ಯನೆ! ನಾನು ಇದುವರೆಗೆ ದುಃಖವನ್ನೇ ಅನುಭವಿಸುತ್ತ ಬಂದೆನು! ಈಗ ದುಃಖವೆಂಬ ಮಹಾಸಮುದ್ರದಲ್ಲಿ ಮುಳುಗಿಯೇ ಹೋದೆನು! ಮಂದಭಾಗ್ಯೆ ಯಾದ, ನನ್ನನ್ನು ರಕ್ಷಿಸಬೇಕೆಂದು ಬಂದು ನೀನೂ ಈಗ ಹತನಾದೆಯಲ್ಲಾ! ಇನ್ನು ನನ್ನ ಗತಿಯೇನು! ಅತ್ತೆಯಾದ ಕೌಸಲ್ಯಾದೇವಿಯು, ಪರಮಪ್ರೇಮ ಪಾತ್ರನಾದ ನಿನ್ನಂತಹ ಪುತ್ರನನ್ನು ಕಳೆದುಕೊಂಡಮೇಲೆ ಅವಳ ದುಃಖಕ್ಕೆ ಮಿತಿಯುಂಟೆ! ಜ್ಯೋತಿಷ್ಯರು ನಿನ್ನನ್ನು ದೀರ್ಘಾಯುವೆಂದು ಹೇಳುತಿದ್ದರಲ್ಲಾ! ಅವರ ಮಾತುಗಳೆಲ್ಲವೂ ಅಸತ್ಯವಾಯಿತು! ಅಲ್ಪಾಯುಸ್ಸಿನಲ್ಲಿಯೇ ನಿನಗೆ ಮರಣ ವುಂಟಾಯಿತು! ಅಥವಾ ಅವರನ್ನು ಅಸತ್ಯವಾದಿಗಳೆಂದು ಹೇಳುವುದೇಕೆ? ಸಮಸ್ತಭೂತಗಳಿಗೂ ಕಾರಣಭೂತವಾದ ಕಾಲವೆಂಬುದು (ಪರಮಾತ್ಮನು), ಅವರವರ ದುಷ್ಕರ್ಮಗಳನ್ನು ಪಕ್ವಮಾಡುವರೀತಿಗೆ ತಕ್ಕಂತೆ, ಭವಿಷ್ಯದರ್ಥ ಗಳನ್ನು ತಿಳಿದ ಪ್ರಾಜ್ಞನಾದ ಸತ್ಪುರುಷನಿಗೆಕೂಡ ಅವರವರ ವಿಷಯವಾದ ಪ್ರಜ್ಞೆಯು ಬದಲಾಯಿಸಿಹೋಗುವುದು. ಹಾಗೆಯೇ ನಿನ್ನ ವಿಷಯದಲ್ಲಿಯೂ! ಆ ಜ್ಯೋತಿಷ್ಕರ ಪ್ರಜ್ಞೆಯು ಕೆಟ್ಟು ಹೋಗಿರಬಹುದಾದುದರಿಂದಲೇ, ಅವರಮಾತು ಅಸತ್ಯವೆನಿಸಿಕೊಂಡಿತು. ಎಲೆ! ಪ್ರಿಯನೆ! ನೀನು ಸಮಸ್ತ ವ್ಯಸನಗಳನ್ನೂ ನಿವಾರಿಸುವುದಕ್ಕೆ ಬೇಕಾದ ಉಪಾಯಗಳೆಲ್ಲವನ್ನೂ ತಿಳಿದವನು. ನೀತಿಶಾಸ್ತ್ರ

ಗಳನ್ನು ಚೆನ್ನಾಗಿ ಬಲ್ಲವನು. ಹೀಗಿರುವಾಗಲೂ ನೀನು ಮೃತ್ಯುವಿನ ಕೈಗೆ ಸಿಕ್ಕಿ ಬಿದ್ದುದು ಹೇಗೆ? ಹಾ ಕಷ್ಟವೆ? ನೀನು ಸಮುದ್ರತೀರದಲ್ಲಿ ಬಂದಿಳಿದ ಆ ರಾತ್ರಿಯು ಎಷ್ಟು ಘೋರವಾದುದು ! ಕ್ರೂರವಾಗಿಯೂ, ಭಯಂಕರವಾಗಿಯೂ ಇದ್ದ ಆ ಕಾಲರಾತ್ರಿಯು, ಕಮಲದಂತೆ ಕಣ್ಣುಳ್ಳ ನಿನ್ನ ಸೌಂದರ್ಯವನ್ನು ನೋಡಿ ಮೋಹಿಸಿ, ನಿನ್ನನ್ನಾಲಿಂಗಿಸುವುದಕ್ಕಾಗಿಯೇ ನನ್ನನ್ನಗಲಿಸಿ ಕದ್ದುಯ್ದಿರಬೇಕು ! ಎಲೆ ಮಹಾಬಾಹೂ! ದಿಕ್ಕಿಲ್ಲದೆ ದುಃಖಿಸುತ್ತಿರುವ ನನ್ನನ್ನು ಬಿಟ್ಟು ಈ ಭೂಮಿಯನ್ನಾಲಿಂಗಿಸಿ ಮಲಗಿರುವೆಯಲ್ಲಾ ! ನನಗಿಂತಲೂ ಈ ಭೂಮಿಯೇ ನಿನಗೆ ಪ್ರಿಯತಮಳಾದಳೆ? ಪುರುಷೋತ್ತಮನಾದ ನಿನಗಿದು ಯುಕ್ತವೆ? ಎಲೆ ವೀರನೆ! ಚಿನ್ನದ ಕಟ್ಟುಗಳಿಂದ ರಮ್ಯನಾದ ಯಾವ ಈ ನಿನ್ನ ಧನುಸ್ಸನ್ನು ನಾವಿಬ್ಬರೂ ಸೇರಿ ಯಾವಾಗಲೂ ಗಂಧಮಾಲ್ಯಾದಿಗಳಿಂದ ಪೂಜಿಸುತ್ತಿದ್ದೆವೋ, ಅಂತಹ ಪ್ರಿಯ ಧನುಸ್ಸೂ ಹೀಗೆ ದಿಕ್ಕಿಲ್ಲದ ಸ್ಥಿತಿಯನ್ನು ಹೊಂದಿತಲ್ಲಾ ! ಎಲೆ ದೋಷರಹಿತನೆ! ನೀನಾದರೋ ಈಗ ಸ್ವರ್ಗದಲ್ಲಿ ಸಮಸ್ತ ಪಿತೃದೇವತೆಗಳೊಡಗೂಡಿರುವ ಪೂಜ್ಯನಾದ ನಿನ್ನ ತಂದೆ ದಶರಥಮಹಾರಾಜನೊಡನೆ ಸೇರಿ ಸುಖದಿಂದಿರುವೆ! ಮತ್ತು ಇದಕ್ಕೆ ಮೊದಲೇ ಸ್ವರ್ಗವನ್ನು ಸೇರಿದವರಾಗಿಯೂ, ದೊಡ್ಡ ಧರ್ಮಕಾರ್ಯಗಳನ್ನು ನಡೆಸಿ ಆಯಾ ಸತ್ಕರ್ಮಗಳಿಗೆ ತಕ್ಕ ಪದವಿಯಲ್ಲಿರುವವರಾಗಿಯೂ, ಪುಣ್ಯಶಾಲಿಗಳಾಗಿಯೂ ಇರುವ ನಿನ್ನ ವಂಶದ ಪುರಾತನರಾಜರನ್ನು ನೀನು ವಿಮಾನಸ್ಥನಾಗಿ ನೋಡುತ್ತಿರುವೆ? ಎಲೆ ರಾಜನೆ! ನೀನೇಕೆ ನನ್ನನ್ನು ಕಣ್ಣೆತ್ತಿಯೂ ನೋಡುವುದಿಲ್ಲ? ನೀನೇಕೆ ನನ್ನೊಡನೆ ಮಾತನಾಡುವುದಿಲ್ಲ? ನಾನು ಇನ್ನೂ ಏನೂ ತಿಳಿಯದ ಬಾಲೆಯಲ್ಲವೆ? ಬಾಲ್ಯದಲ್ಲಿಯೇ ನಿನ್ನನ್ನು ಕೈಹಿಡಿದವಳೆಂಬುದನ್ನು ಕಾಣೆಯಾ? ನಾನು ನಿನ್ನನ್ನೇ ನಂಬಿ ಬಂದವಳಲ್ಲವೆ? ಕ್ಷಣಮಾತ್ರವೂ ನಿನ್ನನ್ನಗಲದೆ ಅನುಸರಿಸುತಿದ್ದವಳಲ್ಲವೆ? ಇಂತಹ ನಾನು ಇಷ್ಟು ದುರವಸ್ಥೆಯಲ್ಲಿರುವಾಗಲೂ ಉಪೇಕ್ಷಿಸಬಹುದೇ? ಎಲೆ ಕಾಕುತ್ಸ್ಥನೆ ನೀನು ವಿವಾಹದಲ್ಲಿ ನನ್ನ ಕೈಯನ್ನು ಹಿಡಿದಾಗ, ನನ್ನೊಡನೆ ಸೇರಿಯೇ ಎಲ್ಲವನ್ನೂ ನಡೆಸುವುದಾಗಿ ಪ್ರತಿಜ್ಞೆ ಮಾಡಲಿಲ್ಲವೆ? ಅದನ್ನಾದರೂ ಸ್ಮರಿಸಿಕೊಂಡು ಈಗ ದುಃಖಿತಳಾದ ನನ್ನನ್ನು ನಿನ್ನೊಡನೆ ಕರೆದುಕೊಂಡು ಹೋಗು! ರಾಮಾ! ನೀನು ಲೋಕೋತ್ತರವಾದ ನಡತೆಯುಳ್ಳವನು! ನಿನ್ನ ವಿಯೋಗದಿಂದ ಕಂದಿಕುಂದಿ ಕೃಶಳಾಗಿರುವ ಪ್ರಿಯಪತ್ನಿಯಾದ ನನ್ನನ್ನು ಉಪೇಕ್ಷಿಸಿ, ಹೀಗೆ ಈ ಲೋಕವನ್ನೇ ಬಿಟ್ಟು ನೀನು ಪರ

ಲೋಕಕ್ಕೆ ಹೋಗಬಹುದೆ? ಹಾ ಕಷ್ಟವೆ? ಮೊದಲು ಮಂಗಳದ್ರವ್ಯಗಳಿಂದ ಅಲಂಕರಿಸುವುದಕ್ಕೆ ಯೋಗ್ಯವಾಗಿ [1] ನನ್ನೊಬ್ಬಳಿಂದಲೇ ಆಲಿಂಗಸಲ್ಪಡುತಿದ್ದ ಈ ನನ್ನ ಪ್ರಿಯನ ದೇಹವನ್ನು, ಅಯ್ಯೋ! ಈಗ ಹದ್ದು ಮೊದಲಾದ ಮಾಂಸಭಕ್ಷಕಗಳೆಲ್ಲವೂ ಇಲ್ಲಿಂದಲ್ಲಿಗೆ ಎಳೆದಾಡುವಂತಾಯಿತಲ್ಲಾ! [2] ವನವಾಸವು ಮುಗಿದಮೇಲೆ ಭೂರಿದಕ್ಷಿಣೆಗಳುಳ್ಳ ಅಗ್ನಿಷ್ಟೋಮಾದಿಯಾಗಗಳ ಮೂಲಕವಾಗಿ ದೇವತೆಗಳ ಪೂಜೆಯನ್ನು ನಡೆಸಿ ಯಜ್ಞಸಂಬಂಧವಾದ ಅಗ್ನಿಹೋತ್ರದಿಂದ ತಕ್ಕ ಸಂಸ್ಕಾರವನ್ನೂ ಹೊಂದುವುದಕ್ಕಿಲ್ಲದೆ ಹೋಯಿತಲ್ಲಾ! ಹಿಂದೆ ಅಯೋಧ್ಯೆಯನ್ನು ಬಿಟ್ಟು ಕಾಡಿಗೆ ಹೊರಟುಬಂದ ನಾವು ಮೂವರಲ್ಲಿ, ಈಗ ಲಕ್ಷ್ಮಣನೊಬ್ಬನೇ ನಮ್ಮ ಪಟ್ಟಣಕ್ಕೆ ಹಿಂತಿರುಗಿ ಹೋದರೆ, ಅವನನ್ನು ನೋಡಿ ಕೌಸಲ್ಯೆಯು ಆತುರದಿಂದ ಬಂದು, "ಸೀತೆಯೂ ರಾಮನೂ ಎಲ್ಲಿರುವರು?" ಎಂದು ಕೇಳುವುದರಲ್ಲಿ ಸಂದೇಹವಿಲ್ಲ. ಆಗ ಲಕ್ಷ್ಮಣನು ಕೌಸಲ್ಯೆಯ ಮಾತಿಗೆ ಏನೆಂದು ಉತ್ತರವನ್ನು ಕೊಡುವನು? ಮೊದಲೇ ಭಯಾತುರದಿಂದ ಬಂದ ಆ ಕೌಸಲ್ಯೆಯೊಡನೆ ಲಕ್ಷ್ಮಣನು "ಅರ್ಧರಾತ್ರಿಯಲ್ಲಿ ರಾಕ್ಷಸರು ಬಂದು ರಾಮನನ್ನೂ, ಅವನ ಮಿತ್ರಬಲವನ್ನೂ ಕೊಂದರೆಂದು ಹೇಳಬೇಕಾಗುವುದಲ್ಲವೆ? ಈ ಮಾತನ್ನು ಕೇಳಿದರೆ ಕೌಸಲ್ಯೆಯ ಗತಿಯೇನು? ನಿದ್ರಿಸುತಿದ್ದಾಗ ನಿನಗೆ ರಾಕ್ಷಸರಿಂದುಂಟಾದ ವಧವನ್ನೂ, ನಾನು ರಾಕ್ಷಸರ ಕೈಗೆ ಬಿದ್ದಿರುವುದನ್ನೂ ಕೌಸಲ್ಯೆಯು ಕೇಳಿದ ಕ್ಷಣವೇ ಎದೆಯೊಡೆದು ಪ್ರಾಣವನ್ನು ಬಿಡುವಳು. ಹೀಗೆ ದುರ್ಮರಣಕ್ಕೆ ಯೋಗ್ಯನಲ್ಲದ ಮಹಾರಾಜಕುಮಾರನಾದ ಆ ರಾಮನು, ಸಮುದ್ರದಂತೆ ಅತಿಪ್ರಚಂಡರಾದ ಖರಾದಿರಾಕ್ಷಸರನ್ನೆಲ್ಲಾ ಲೀಲಾಮಾತ್ರದಿಂದಲೇ

---

1. ಇದರಿಂದ ರಾಮನಿಗೆ ಭಾರ್ಯಾಂತರವಿಲ್ಲವೆಂದು ಸೂಚಿತವಾಗುವುದು.

2. ವನವಾಸಕ್ಕೆ ಮೊದಲು ರಾಮನಿಗೆ ಅಗ್ನ್ಯಾಧಾನವಿರಲಿಲ್ಲ. ಈ ವನವಾಸಕಾಲವು ಕಳೆದಮೇಲೆ ಅಯೋಧ್ಯೆಗೆ ಬಂದು ಅಗ್ನ್ಯಾಧಾನಾಗ್ನಿಷ್ಟೋಮಾದಿಯಾಗಗಳನ್ನು ನಡೆಸಿ ಆಮೇಲೆ ಕ್ರಮವಾಗಿ ಆಯುಸ್ಸು ತೀರಿದಾಗ ಆ ಸಂಸ್ಕೃತಾಗ್ನಿಯಿಂದಲೆ ದೇಹಸಂಸ್ಕಾರವನ್ನು ಹೊಂದಬೇಕಾಗಿತ್ತೆಂದೂ, ಹಾಗಿಲ್ಲದೆ ಮಧ್ಯಕಾಲದಲ್ಲಿ ಆಕಸ್ಮಿಕ ಮರಣವುಂಟಾಯಿತೆಂದೂ ಹೇಳಿ ಸೀತೆಯು ದುಃಖಿಸಿದುದಾಗಿ ಇಲ್ಲಿನ ಭಾವವು. ಇದರಿಂದ ರಾಮನು ವನವಾಸಕ್ಕೆ ಮೊದಲು ಯಾಗಾಗ್ನಿಗಳನ್ನನುಷ್ಠಿಸಲಿಲ್ಲವೆಂದು ವ್ಯಕ್ತವಾಗುವುದು. ಈ ವಿಚಾರವು ಅಯೋಧ್ಯಾಕಾಂಡದಲ್ಲಿ ಚೆನ್ನಾಗಿ ವಿವರಿಸಲ್ಪಟ್ಟಿದೆ.

ಕೊಂದು, ಆ ಮಹಾಸಮುದ್ರವನ್ನೂ ದಾಟಿ ಬಂದು, ಕೊನೆಗೆ ನಿರ್ಭಾಗ್ಯಳಾದ ನನ್ನ ನಿಮಿತ್ತವಾಗಿ ಹಸುವಿನ ಹೆಜ್ಜೆಯಂತೆ ಅತ್ಯಲ್ಪನಾದ ಆ ಪ್ರಹಸ್ತನಿಂದ ಹತನಾಗುವುದೆಂದರೇನು? (ಅಗಾಧವಾದ ಮಹಾಸಮುದ್ರವನ್ನು ದಾಟಿ ಬಂದ ವನು ಹಸುವಿನ ಹೆಜ್ಜೆಯಿಂದುಂಟಾದ ಹಳ್ಳದಲ್ಲಿ ಮುಳುಗಿ ಸತ್ತಂತಾಯಿತಲ್ಲವೆ!) ಅಯ್ಯೋ? ನಾನು ಕುಲಘಾತುಕಿಯೆಂಬವನ್ನು ತಿಳಿಯದೆ, ರಾಮನು ಅಜ್ಞಾನ ದಿಂದ ನನ್ನನ್ನು ಕೈಹಿಡಿದನು. ಕೈಹಿಡಿದ ಹೆಂಡತಿಯಾದ ನಾನೇ ಅವನಿಗೆ ಮೃತ್ಯುವಾದೆನು. ನಾನು ಪೂರ್ವಜನ್ಮದಲ್ಲಿ ಯಾರೋ ಕನ್ಯಾದಾನವನ್ನು ಮಾಡು ತಿದ್ದಾಗ ಅವರ ಕೈಯನ್ನು ಹಿಡಿದು ತಡೆದಿರಬೇಕು! ಆ ಪಾಪದಿಂದಲೇ ಈಗ ನಾನು ಸರ್ವರಕ್ಷಕನಾಗಿಯೂ, ಸರ್ವಾತಿಥಿಪೂಜಕನಾಗಿಯೂ ಇರುವ ಅಂತಹ ರಾಮನಿಗೆ ಕೈಹಿಡಿದ ಹೆಂಡತಿಯಾಗಿದ್ದರೂ, ಅವನೊಡನೆ ಭೋಗವನ್ನನುಭವಿಸುವ ಕಾಲದಲ್ಲಿ ಇಂತಹ ದುಃಖಕ್ಕೆ ಗುರಿಯಾದೆನು. ರಾವಣಾ! ಇನ್ನು ನೀನಾದರೂ ಶೀಘ್ರ ದಲ್ಲಿಯೇ ನನ್ನನ್ನು ಕೊಂದು, ಈ ರಾಮನ ದೇಹದೊಡನೆ ಸೇರಿಸಿಬಿಡು! ಈ ರೀತಿಯಿಂದಲಾದರೂ ಪತಿಪತ್ನಿಯರನ್ನು ಸೇರಿಸಿದ ಪುಣ್ಯಕ್ಕೆ ಭಾಗಿಯಾಗು! ಇದರಿಂದ ನಿನಗೆ ಸರ್ವೋತ್ತಮವಾದ ಶ್ರೇಯಸ್ಸುಂಟು! ಈ ಸಮಯದಲ್ಲಿ ಇದೇ ಸರ್ವೋತ್ತಮವಾದ ಕಲ್ಯಾಣವು! ಈಗಲೇ ಈ ಕಾರ್ಯವನ್ನು ತಪ್ಪದೆ ನಡೆಸಿಬಿಡು! ರಾವಣಾ! ಈ ರಾಮನ ತಲೆಯೊಡನೆ ನನ್ನ ತಲೆಯನ್ನೂ, ಅವನ ದೇಹದೊಡನೆ ಈ ನನ್ನ ದೇಹವನ್ನೂ ಬೇರೆಬೇರೆಯಾಗಿ ಸೇರಿಸಿಡು! ನಾನು ಮಹಾತ್ಮನಾದ ಆ ಪತಿಯನ್ನೇ ಹಿಂಬಾಲಿಸಿ ಹೋಗುವೆನು. (ನಾನು ಪತಿಯನ್ನಗಲಿದಮೇಲೆ ದಿಕ್ಕಿಲ್ಲದ ಈ ಹಾಳುಬದುಕನ್ನು ಒಂದು ಮುಹೂರ್ತಮಾತ್ರವೂ ಸಹಿಸಲಾರೆನು. ನಾನು ತಂದೆಯ ಮನೆಯಲ್ಲಿದ್ದಾಗ, ವೇದವಿತ್ತುಗಳಾದ ಅನೇಕ ಬ್ರಾಹ್ಮಣರು ಆಗಾಗ ಬಂದು "ಯಾವ ಸ್ತ್ರೀಯರು ತನ್ನ ಪತಿಯನ್ನು ಪ್ರೇಮಿಸುವರೋ, ಅವರಿಗೆ ಬಹಳ ಶ್ರೇಯಸ್ಕರಗಳಾದ ಪುಣ್ಯಲೋಕಗಳುಂಟು" ಎಂದು ಹೇಳುತಿದ್ದುದನ್ನು ಕೇಳಿರುವೆನು; ತಾಳ್ಮೆಯೂ, ಇಂದ್ರಿಯನಿಗ್ರಹವೂ, ದಾನವೂ, ಧರ್ಮವೂ, ಸತ್ಯವೂ, ಕೃತಜ್ಞತೆಯೂ, ಅಹಿಂಸೆ ಮೊದಲಾದ ಇನ್ನೂ ಅನೇಕ ಸದ್ಗುಣಗಳೂ ಯಾವನಲ್ಲಿ ಪೂರ್ಣವಾಗಿ ತುಂಬಿದ್ದುವೋ, ಅಂತಹ ಪತಿಯನ್ನೇ ಕಳೆದುಕೊಂಡ ಮೇಲೆ ಇನ್ನು ನನಗೆ ಬೇರೆ ಗತಿಯೇನು?) ಎಂದು ನಾನಾವಿಧವಾಗಿ ವಿಲಪಿಸು ತಿದ್ದಳು. ಮತ್ತು ಆಕೆಯು ಅಗಲವಾಗಿ ಬಿಚ್ಚಿದ ಕಣ್ಣುಗಳಿಂದ, ಆ ಶಿರಸ್ಸನ್ನೂ

ಧನುಸ್ಸನ್ನೂ, ಬಾರಿಬಾರಿಗೂ ನೋಡಿ ಸಂಕಟದಿಂದ ತತ್ತಳಿಸುತ್ತಿದ್ದಳು. ಹೀಗೆ ಸೀತೆಯು ಬಹಳವಾಗಿ ವಿಲಪಿಸುತ್ತಿರುವಾಗಲೇ ದ್ವಾರಪಾಲಕನಾದ ರಾಕ್ಷಸನೊಬ್ಬನು ಪ್ರಭುವಾದ ರಾವಣನಬಳಿಗೆ ಬಂದು "ಮಹಾರಾಜನಿಗೆ ಜಯವಾಗಲಿ" ಎಂದು ಹೇಳಿ ಕೈಮುಗಿದು ನಮಸ್ಕರಿಸಿ, "ಮಹಾಪ್ರಭೂ! ನಮ್ಮ ಸೇನಾಪತಿಯಾದ ಪ್ರಹಸ್ತನು ಸಮಸ್ತಮಂತ್ರಿಗಳೊಡನೆ ಕೂಡಿ ತಮ್ಮನ್ನು ನೋಡುವುದಕ್ಕಾಗಿ ನಿರೀಕ್ಷಿಸುತ್ತಿರುವನು. ಈ ವಿಷಯವನ್ನು ತಮಗೆ ತಿಳಿಸುವುದಕ್ಕಾಗಿ ನನ್ನನ್ನು ಕಳುಹಿಸಿದನು. ಎಲೆ ಮಹಾರಾಜನೆ! ನಿಜವಾಗಿ ಯಾವುದೋ ದೊಡ್ಡ ಕಾರ್ಯವಿರಬೇಕು? ಅದನ್ನು ಈಗಲೇ ನಡೆಸಿರಬೇಕಾಗಿದ್ದರೂ, ನೀನು ರಾಜನಾದುದರಿಂದ ನಿನ್ನಾಜ್ಞೆಯನ್ನು ನಿರೀಕ್ಷಿಸಬೇಕಾಯಿತು. ಅದು ಬಹಳ ಕಷ್ಟಸಾಧ್ಯವಾಗಿರುವುದು. ಆದುದರಿಂದ ನೀನು ಎಷ್ಟೇ ಅವಶ್ಯಕಾರ್ಯವಿದ್ದರೂ ಬಿಟ್ಟು, ಈಗಲೇ ಹೋಗಿ ಅವರಿಗೆ ದರ್ಶನವನ್ನು ಕೊಡುವುದು ಮೇಲು" ಎಂದನು. ದ್ವಾರಪಾಲಕನ ಮಾತನ್ನು ಕೇಳಿ ರಾವಣನು ಆಗಲೇ ಅಶೋಕವನವನ್ನು ಬಿಟ್ಟು, ಮಂತ್ರಿಗಳನ್ನು ನೋಡುವುದಕ್ಕಾಗಿ ಹೊರಟನು. ರಾವಣನು ರಾಮನ ಪರಾಕ್ರಮವನ್ನೇ ಮನಸ್ಸಿನಲ್ಲಿ ಗುಣಿಸುತ್ತ, ಆ ಮಂತ್ರಿಗಳಿದ್ದ ಸಭೆಗೆ ಪ್ರವೇಶಿಸಿ, ತಾನು ಮುಂದೆ ನಡೆಸಬೇಕಾದ ಕಾರ್ಯವನ್ನು ಮಂತ್ರಿಗಳೊಡನೆ ಆಲೋಚಿಸಿ, ಯುದ್ಧಕಾರ್ಯಗಳಿಗೆ ತಕ್ಕ ಸನ್ನಾಹಗಳನ್ನು ನಿಶ್ಚಯಿಸಿಕೊಂಡನು. ಅತ್ತಲಾಗಿ ರಾವಣನು ಅಶೋಕವನವನ್ನು ಬಿಟ್ಟು ಹೊರಟ ಉತ್ತರಕ್ಷಣದಲ್ಲಿಯೇ ಅಲ್ಲಿದ್ದ ಮಾಯಾನಿರ್ಮಿತವಾದ ರಾಮನ ತಲೆಯೂ ಆ ಧನುಸ್ಸೂ ಅಗೋಚರಗಳಾದುವು. ಇತ್ತಲಾಗಿ ರಾಕ್ಷಸೇಶ್ವರನಾದ ರಾವಣನು, ಭಯಂಕರ ಪರಾಕ್ರಮವುಳ್ಳ ತನ್ನ ಸಮಸ್ತ ಮಂತ್ರಿಗಳೊಡನೆ ಕಲೆತು, ಮುಂದೆ ರಾಮನ ವಿಷಯದಲ್ಲಿ ತಾನು ಮಾಡಿಕೊಳ್ಳಬೇಕಾದ ಸನ್ನಾಹಗಳೇನೆಂಬುದನ್ನು ಮಂತ್ರಾಲೋಚನೆಯಿಂದ ನಿಶ್ಚಯಿಸಿಕೊಂಡು, ಆಗ ತನ್ನ ಸಮೀಪದಲ್ಲಿ ತನಗೆ ಶ್ರೇಯಃಕಾಂಕ್ಷಿಗಳಾದ ಸೇನಾಪತಿಗಳನ್ನು ನೋಡಿ "ಎಲೆ ಬಲಾಧ್ಯಕ್ಷರೆ! ಈಗಲೇ ನೀವು ನಮ್ಮ ರಣಭೇರಿಗಳನ್ನು ಸ್ಪಷ್ಟವಾಗಿ ಮೊಳಗಿಸಿ, ಶೀಘ್ರದಲ್ಲಿಯೇ ನಮ್ಮ ಸೇನೆಗಳೆಲ್ಲವನ್ನೂ ಕರೆಸಬೇಕು. [1] ಕಾರಣವೇನೆಂದು ಯಾರಿಗೂ ತಿಳಿಸಕೂಡದು!"

1. ಇಲ್ಲಿ ರಾವಣನು ತನ್ನ ಮನಸ್ಸಿನಲ್ಲಿರುವ ಯುದ್ಧದ ಕಾರಣವನ್ನು ಪ್ರಕಟವಾಗಿ ಪಟ್ಟಣದಲ್ಲಿ ಸಾರಿಸಿದ ಪಕ್ಷದಲ್ಲಿ, ಈ ವೃತ್ತಾಂತವು ಸೀತೆಯ ಕಿವಿಗೂ ಬೀಳುವುದಲ್ಲವೆ? ಆಗ ತಾನು ಇದುವರೆಗೂ ಸೀತೆಯನ್ನು ಮೋಸಗೊಳಿಸುವುದಕ್ಕಾಗಿ ಅವಳೊಡನೆ ಹೇಳಿಬಂದಿರುವ ರಾಮವಧವೃತ್ತಾಂತವೆಲ್ಲವೂ ಅವಳಿಗೆ ಸುಳ್ಳೆಂದು ತೋರಿಹೋಗುವುದರಿಂದ, ಇಲ್ಲಿ ಕಾರಣವನ್ನು ಮರೆಸಿಟ್ಟನೆಂದು ತಿಳಿಯಬೇಕು.

ಎಂದನು. ಆಗ ಅಲ್ಲಿದ್ದ ಸೇನಾಪತಿಗಳೆಲ್ಲರೂ ವಿನಯದಿಂದ "ಮಹಾರಾಜನೆ! ಅಪ್ಪಣೆ!" ಎಂದು ಹೇಳಿ, ರಾಜಾಜ್ಞೆಯಂತೆ ತಮ್ಮ ತಮ್ಮ ಸೇನೆಗಳೆಲ್ಲವನ್ನೂ ಕರೆಸಿ, ಆ ಸೇನೆಯೆಲ್ಲವೂ ಸಿದ್ಧವಾಗಿ ಬಂದು ನಿಂತಿರುವ ಸಂಗತಿಯನ್ನು ತಮ್ಮ ಪ್ರಭುವಾದ ರಾವಣನಿಗೆ ತಿಳಿಸಿದರು.

ಇಲ್ಲಿಗೆ ಮೂವತ್ತೆರಡನೆಯ ಸರ್ಗವು.

{ ವಿಭೀಷಣನ ಭಾರ್ಯೆಯಾದ ಸರಮೆಯು ಸೀತೆಯನ್ನು ಸಮಾಧಾನಪಡಿಸಿದುದು. }

ಹೀಗೆ ಸೀತೆಯು ಕೃತ್ರಿಮವಾದ ರಾಮಶಿರಸ್ಸನ್ನು ನೋಡಿ ಭ್ರಾಂತಿಪಟ್ಟು ಬಹಳವಾಗಿ ದುಃಖಿಸುವುದನ್ನು ನೋಡಿ, ಆಕೆಯಲ್ಲಿ ನಿಜವಾದ ಪ್ರೇಮವುಳ್ಳವಳಾಗಿಯೂ, ಪ್ರಿಯಸಖಿಯಾಗಿಯೂ, ಇದ್ದ ವಿಭೀಷಣಭಾರ್ಯೆಯಾದ ಸರಮೆಯೆಂಬ ರಾಕ್ಷಸಿಯು, ಆ ಸೀತೆಯ ಸಮೀಪಕ್ಕೆ ಬಂದಳು. ಸೀತೆಯು ರಾಕ್ಷಸೇಶ್ವರನಾದ ರಾವಣನ ಮೋಸಕ್ಕೆ ಸಿಕ್ಕಿ, ತನ್ನ ಪತಿಯಾದ ರಾಮನು ಮೃತನಾದನೆಂದು ದುಃಖಿಸುತ್ತಿರುವಾಗ, ಸರಮೆಯು ಎಷ್ಟೆಷ್ಟೋ ಮೃದುವಾಕ್ಯಗಳನ್ನು ಹೇಳಿ ಅವಳನ್ನು ನಾನಾವಿಧದಿಂದ ಸಮಾಧಾನಪಡಿಸಿದಳು. [1] ಆ ಸರಮೆಯೆಂಬವಳು ರಾವಣಾಜ್ಞೆಯಿಂದಲೇ ಅಲ್ಲಿ ಸೀತೆಯಮೇಲೆ ಕಾವಲಾಗಿರುತಿದ್ದರೂ, ಆಕೆಯು

---

1. ಇಲ್ಲಿ ರಾವಣನೇ ಈ ಸರಮೆಯೆಂಬವಳನ್ನು ಸೀತೆಯಮೇಲೆ ಕಾವಲಿರಿಸಿದುದಾಗಿ ಕಾಣಿಸಲ್ಪಟ್ಟಿದೆ. ಮುಂದೆ ಈ ಸರಮೆಯು ಸೀತೆಯನ್ನು ಸಮಾಧಾನಪಡಿಸುವಾಗ "ಸಖೀಸ್ನೇಹೇನ ತದ್ಭೀರು ಮಯಾ ಸರ್ವಂ ಪ್ರತಿಶ್ರುತಂ। ಲೀನಯಾ ಗಹನೇ ಶೂನ್ಯೇ ಭಯಮುತ್ಸೃಜ್ಯ ರಾವಣಾತ್" ಎಂಬುದಾಗಿ ರಾವಣ ಭಯಕ್ಕಾಗಿ ಮರೆಯಲ್ಲಿದ್ದು ತಾನು ಅವನ ಮಾತುಗಳನ್ನೆಲ್ಲಾ ಕೇಳಿ ಬಂದುದಾಗಿ ಹೇಳುವಳು. ರಾವಣನಿಯುಕ್ತಳಾಗಿದ್ದ ಈಕೆಗೆ ಭಯಕ್ಕೆ ಕಾರಣವೇನು? ಎಂದರೆ, ರಾವಣ ವಿಭೀಷಣರಿಗೆ ಮನಸ್ತಾಪವು ಹುಟ್ಟುವವರೆಗೂ ಈಕೆಯು ಅಂತರಂಗಭೂತಳಂತೆ ನಟಿಸುತ್ತ, ನಿರ್ಭಯಳಾಗಿದ್ದರೂ, ವಿಭೀಷಣನು ಹೊರಟು ಹೋದಮೇಲೆ ರಾವಣನ ಅಂತರಂಗವಾರ್ತೆಗಳನ್ನು ಕೇಳುವುದಕ್ಕೆ ಭಯಪಟ್ಟು, ಗೂಢವಾಗಿ ಕೇಳಿದಳೆಂದು ಗ್ರಹಿಸಬಹುದು. ಅಥವಾ ರಾವಣನಿಗೆ ಸೊಸೆಯಂತಿರುವ ತಾನು ಅವನ ಮುಂದೆ ನಿಲ್ಲುವುದಕ್ಕೆ ನಾಚಿಕೆಗೊಂಡು ಕಣ್ಮರೆಯಾಗಿ ನಿಂತುದಾಗಿಯೂ ಊಹಿಸಬಹುದು. ಈ ಸರಮೆಯು ಬೇರೊಬ್ಬಳಾಗಿರಬಹುದೆಂದೂ ಕೆಲವರ ಅಭಿಪ್ರಾಯವು.

ಬಹಳ ದಯಾಸ್ವಭಾವವುಳ್ಳವಳಾದುದರಿಂದ, ಅವಳಿಗೆ ಸೀತೆಯಲ್ಲಿ ಒಂದುವಿಧವಾದ ಮಧುರಸ್ನೇಹಭಾವವು ಹುಟ್ಟಿಹೋಯಿತು. ಮತ್ತು ಆಕೆಯು ಬಹಳ ಸ್ಥಿರ ಬುದ್ಧಿಯುಳ್ಳವಳಾಗಿಯೂ ಇದ್ದುದರಿಂದ ಆಕೆಗೆ ಸೀತೆಯಲ್ಲಿ ಮೊದಲು ಹುಟ್ಟಿದ ಪ್ರೇಮವೇ ಸ್ಥಿರವಾಗಿಯೂ ನೆಲೆಗೊಂಡಿತು. ಅಲ್ಲಿ ಸೀತೆಯು ರಾಮನ ವಿಷಯ ವಾಗಿ ಭ್ರಾಂತಿಪಟ್ಟು ದುಃಖದಿಂದ ಆಗಾಗ ನೆಲದಮೇಲೆ ಬಿದ್ದುಹೊರಳುತ್ತ, ಬೂದಿಯಲ್ಲಿ ಬಿದ್ದು ಹೊರಳಿದ ಹೆಣ್ಣುಕುದುರೆಯಂತೆ ಕೊಳೆಮುಚ್ಚಿದ ಮೈಯುಳ್ಳವ ಳಾಗಿ ಕುಳಿತು ಸಂಕಟಪಡುತ್ತಿರಲು, ಸರಮೆಯು ಸಮೀಪಕ್ಕೆ ಬಂದು ಅವಳನ್ನು ಕೈಯಿಂದ ಸವರಿ ಸಮಾಧಾನಪಡಿಸಿ, ಕೊನೆಗೆ ಅವಳಲ್ಲಿ ಎಣೆಯಿಲ್ಲದ ಸ್ನೇಹವಾತ್ಸಲ್ಯಗಳಿಂದ ಅವಳಿಗೆ ರಾವಣನ ರಹಸ್ಯವೃತ್ತಾಂತವನ್ನು ತಿಳಿಸುವವ ಳಾಗಿ "ಎಲವ್ಮಾ ಸೀತೆ! ಸಾಕು ಬಿಡು! ದುಃಖಿಸಬೇಡ! ಸಮಾಧಾನದಿಂದಿರು! ನೀನು ಕೇವಲ ಭಯಸ್ವಭಾವವುಳ್ಳವಳಾದುದರಿಂದ ಹೀಗೆ ನಿಷ್ಕಾರಣವಾಗಿ ಭಯ ಪಡುವಂತಿದೆ! ಈಗ ರಾವಣನು ನಿನಗೆ ಹೇಳಿದ ಮಾತುಗಳನ್ನೂ, ಅದಕ್ಕೆ ನೀನು ಹೇಳಿದ ಪ್ರತ್ಯುತ್ತರಗಳನ್ನೂ ನಾನು ನಿನ್ನಲ್ಲಿರುವ ಪ್ರೇಮದಿಂದ ಕಿವಿಗೊಟ್ಟು ಕೇಳು ತಿದ್ದೆನು. ನಾನು ಆಕಾಶದಲ್ಲಿ ಯಾರೂ ಕಾಣದಂತೆ ಒಂದಾನೊಂದು ವೃಕ್ಷ ರಂಧ್ರದಲ್ಲಿ ಮರೆಯಾಗಿದ್ದು, ನಿಮ್ಮಿಬ್ಬರ ವಿವಾದವನ್ನೂ ಕೇಳಿದೆನು. ಎಲೆ ಸೀತೆ! ನಿನ್ನ ನಿಮಿತ್ತವಾಗಿ ನಾನು ಪ್ರಾಣಗಳಲ್ಲಿಯೂ ಪ್ರೀತಿಯಿಡುವವಳಲ್ಲ! ಆದು ದರಿಂದ ರಾವಣನಿಂದುಂಟಾಗಬಹುದಾದ ಭಯವನ್ನೂ ಯೋಚಿಸದೆ ನಿಮ್ಮ ಮಾತುಗಳನ್ನು ನಾನು ಕೇಳುತಿದ್ದೆನು. ನಿನ್ನ ದುಃಖವನ್ನು ನೋಡಿ ನಾನು ಕ್ಷಣ ಮಾತ್ರವೂ ಸಹಿಸಲಾರೆನು. ಮತ್ತು ಎಲೆ ದೇವಿ! ರಾಕ್ಷಸರಾಜನಾದ ರಾವಣನು ಈಗ ಯಾವ ಉದ್ದೇಶದಿಂದ ಆತುರಪಟ್ಟು ಇಲ್ಲಿಂದ ಓಡಿಹೋದನೋ ಅದನ್ನೂ ನಾನು ಹೊರಗೆ ಹೋಗಿ ತಿಳಿದುಬಂದೆನು. ಎಲೆ ಸೀತೆ! ನಿನ್ನ ಮನಸ್ಸಿನಲ್ಲಿರುವ ಭ್ರಾಂತಿಯನ್ನು ಬಿಡು! ರಾಮನನ್ನು ವಧಿಸುವುದು ಯಾರಿಗೂ ಸಾಧ್ಯವಲ್ಲ! ಮಹಾತ್ಮನಾದ ಆತನನ್ನು ಮಲಗಿರುವಾಗ ಮೋಸದಿಂದ ಕೊಲ್ಲುವುದೆಂದರೇನು? ಪುರುಷೋತ್ತಮನಾದ ಆತನಿಗೆ ಬೇರೆಯವರಿಂದ ಕೊಲೆಯೆಂದರೇನು? ಪುರು ಷೋತ್ತಮನಾದ ಆತನು ಯಾವ ದಶೆಯಲ್ಲಿದ್ದರೂ ಅವನನ್ನು ಕೊಲ್ಲುವುದೇ ಅಸಂಭವವು ಮತ್ತು ಅವನ ಕಡೆಯ ವಾನರರನ್ನಾದರೂ ಕೊಲ್ಲುವುದಕ್ಕೆ ಬೇರೊಬ್ಬರಿಂದ ಸಾಧ್ಯವಲ್ಲ. ಕೈಗೆ ಸಿಕ್ಕಿದ ಮರಗಿಡಗಳಿಂದಲೇ ಅವರು ಎಂತಹ

ಶತ್ರುಗಳೊಡನೆಯಾದರೂ ಹೋರಾಡಬಲ್ಲರು. ಇದರ ಮೇಲೆ ದೇವತೆಗಳಿಗೆ ದೇವೇಂದ್ರನು ಹೇಗೋಹಾಗೆ ರಾಮನೇ ಅವರಿಗೆ ರಕ್ಷಕನಾಗಿ ನಿಂತಿರುವನು. ಅಂತವರಿಗೆ ಬೇರೊಬ್ಬರಿಂದ ವಧವೆಂದರೇನು ? ಎಲೆ ದೇವಿ ! ನಿನ್ನ ಪತಿಯಾದ ರಾಮನೇನು ಸಾಮಾನ್ಯನೆ ? ದುಂಡಗೆ ಉದ್ದವಾದ ಮಹಾಭುಜವುಳ್ಳವನು. ಶ್ರೀಮಂತನು. ಎಣೆಯಿಲ್ಲದ ವೀರ್ಯವುಳ್ಳವನು. ಉತ್ತಮಧನುಸ್ಸನ್ನು ಧರಿಸಿದ ವನು. ! ಅಂದವಾದ ಅವಯವಸನ್ನಿವೇಶವುಳ್ಳವನು. ಧರ್ಮಾತ್ಮನು. ಸಮಸ್ತ ಭೂಮಂಡಲದಲ್ಲಿಯೂ ಪ್ರಸಿದ್ಧಿಹೊಂದಿದವನು. ಎಣೆಯಿಲ್ಲದ ಪರಾಕ್ರಮವುಳ್ಳ ವನು. ಅಂತಹ ರಾಮನು ತನ್ನ ತಮ್ಮನಾದ ಲಕ್ಷ್ಮಣನೊಡನೆ ಕೂಡಿರುವಾಗ, ಸರ್ವದೇಶ ಸರ್ವಕಾಲ ಸರ್ವಾವಸ್ಥೆಗಳಲ್ಲಿಯೂ, ತನ್ನನ್ನು ಮಾತ್ರವೇ ಅಲ್ಲದೆ, ತನಗೆ ಸೇರಿದವರೆಲ್ಲರನ್ನೂ ನಿರಪಾಯವಾಗಿ ರಕ್ಷಿಸಬಲ್ಲನು. ಅವನ ಕ್ಷೇಮಕ್ಕೆ ಎಂದಿಗೂ ಲೋಪವಿಲ್ಲ. ಅವನಿಗೆ ತಿಳಿಯದ ನೀತಿಶಾಸ್ತ್ರಗಳಿಲ್ಲ ! ಎಷ್ಟೇ ಶತ್ರು ಸೈನ್ಯಗಳು ಗುಂಪುಗುಂಪಾಗಿಬಂದರೂ ಲಕ್ಷ್ಯಮಾಡದೆ ಲೀಲಾಮಾತ್ರದಿಂದ ಧ್ವಂಸ ಮಾಡಬಲ್ಲನು. ಅವನಲ್ಲಿರುವ ಬಲಪೌರುಷಗಳನ್ನು ಇಷ್ಟಿಷ್ಟೆಂದು ಹೇಳುವುದಕ್ಕಿಲ್ಲ. ಜಯಲಕ್ಷ್ಮಿಗೆ ನಿತ್ಯನಿವಾಸವಾಗಿರುವನು. ಯಾವ ಶತ್ರುಗಳನ್ನಾದರೂ ಹುಟ್ಟ ಡಗಿಸಬಲ್ಲನು. ಮತ್ತು ಕೇವಲ ಬಲಪೌರುಷಾದಿಗಳಿಂದ ಮಾತ್ರವೇ ಅಲ್ಲದೆ. ಸಮಸ್ತ ಸೌಭಾಗ್ಯಲಕ್ಷಣಗಳಿಂದಲೂ ಕೂಡಿರುವ ರಾಮನನ್ನು ಈ ಪ್ರಪಂಚ ದಲ್ಲಿ ಬೇರೊಬ್ಬನು ಕೊಲ್ಲುವುದೆಂದರೇನು ? ಆ ರಾಮನು ಎಷ್ಟುಮಾತ್ರವೂ ರಾಕ್ಷಸರಿಂದ ಹತನಾಗಿಲ್ಲ. ಇದು ನಿಜವು “ ಹಾಗಿದ್ದರೆ ಇಲ್ಲಿ ರಾಮನ ತಲೆಯೂ, ಬಿಲ್ಲೂ ಬಿದ್ದಿರುವುದಕ್ಕೆ ಕಾರಣವೇನೆಂದು ” ಕೇಳುವೆಯಾ ? ಎಲೆ ಸೀತೆ ! ಇದು ರಾವಣನ ಮೋಸವೇ ಹೊರತು ಬೇರೆಯಲ್ಲ ! ಅವನ ಬುದ್ಧಿಯೂ, ಅವನ ನಡವಳಿಕೆಯೂ ಬಹಳ ಕ್ರೂರಸ್ವಭಾವವುಳ್ಳವು ! ಅವನು ಮಾಯೆಗಳೆಲ್ಲವನ್ನೂ ಬಲ್ಲ ವನು ! ನಿನ್ನನ್ನು ಮೋಸಪಡಿಸುವುದಕ್ಕಾಗಿಯೇ ಈ ಮಾಯೆಯನ್ನು ಪ್ರಯೋ ಗಿಸಿರುವನು. ಎಲೆ ಸೀತೆ ! ಇನ್ನು ನಿನ್ನ ಸಮಸ್ತ ಶೋಕವೂ ನೀಗಿತು. ಶುಭವೂ ನಿನ್ನನ್ನು ಸಮೀಪಿಸುತ್ತಿರುವುದು. ನಿಶ್ಚಯವಾಗಿ ಇನ್ನು ಮೇಲೆ ಲಕ್ಷ್ಮಿಯು ನಿನ್ನನ್ನು ಸೇರುವಳು. ಇದು ನಿಜವು. ನನ್ನ ಪ್ರಿಯವಾಕ್ಯವನ್ನು ಗಮನಿಸಿ ಕೇಳು ! ರಾಮನು ವಾನರ ಸೇನೆಯೊಡನೆ ಸಮುದ್ರವನ್ನು ದಾಟಿ ಅದರ ದಕ್ಷಿಣತೀರ ದಲ್ಲಿ ಆ ಸೇನೆಯನ್ನಿಳಿಸಿರುವನು. ಆ ರಾಮನು ಲಕ್ಷ್ಮಣನೊಡನೆ ಕೃತಕೃತ್ಯ

ನಾಗಿ ಬಂದು ನಿಂತಿರುವುದನ್ನೂ ನೋಡಿದೆನು. ಸಮುದ್ರತೀರದಲ್ಲಿ ವಾನರ ಸೈನ್ಯದಿಂದ ಸುರಕ್ಷಿತನಾಗಿರುವನು. ಆಗಲೇ ರಾವಣನು ರಾಮನ ಸಂಗತಿಯನ್ನು ತಿಳಿದುಬರುವುದಕ್ಕಾಗಿ ವೇಗಶಾಲಿಗಳಾದ ಕೆಲವು ದೂತರನ್ನು ಕಳುಹಿಸಿದ್ದನು. ಅದರಂತೆಯೇ ಅವರು ಅಲ್ಲಿಗೆ ಹೋಗಿಬಂದು, ಆಗಲೇ ರಾಮನು ಸಮುದ್ರವನ್ನು ದಾಟಿ ಬಂದುದಾಗಿ ವೃತ್ತಾಂತವನ್ನು ಕೇಳಿದುದರಿಂದಲೇ ಈಗ ರಾವಣನು ಮಂತ್ರಿಗಳೊಡನೆ ಕಲೆತು ಆಲೋಚಿಸುತ್ತಿರುವನು" ಎಂದಳು. ಹೀಗೆ ಸರಮೆಯು ಮಾತಾಡುತ್ತಿರುವಾಗಲೇ, ಅತ್ತಲಾಗಿ ಪಟ್ಟಣದೊಳಗೆ ಸೈನಿಕರ ಯುದ್ಧಸನ್ನಾಹ ದಿಂದ ಹುಟ್ಟಿದ ಭಯಂಕರ ಕೋಲಾಹಲಧ್ವನಿಯನ್ನೂ, ರಣಭೇರಿಧ್ವನಿ ಯನ್ನೂ ಕೇಳಿ ಮೃದುವಾಕ್ಯದಿಂದ ಸೀತೆಯನ್ನು ಕುರಿತು "ಎಲೆ ಭೀರು ! ನೀನು ನಿಷ್ಕಾರಣವಾಗಿ ಭಯಪಡುವವಳೆಂದು ಈಗ ನಿನಗೆ ಚೆನ್ನಾಗಿ ಗೊತ್ತಾಯಿತೆ? ಅದೋ ಅಲ್ಲಿ ಕೇಳಿದೆಯಾ ? ಸೈನಿಕರನ್ನು ಯುದ್ಧಕ್ಕಾಗಿ ಪ್ರೋತ್ಸಾಹಿಸುವ ರಣಭೇರಿಯು ಎಷ್ಟು ಭಯಂಕರವಾಗಿ ನುಡಿಸಲ್ಪಡುವುದು ನೋಡು. ಗುಡುಗಿನಂತೆ ಗಂಭೀರವಾದ ಆ ಧ್ವನಿಯನ್ನು ಚೆನ್ನಾಗಿ ಕೇಳು ? ಅದೋ ! ಸೈನಿಕರ ಕೋಲಾ ಹಲಗಳನ್ನು ಕೇಳಿದೆಯಾ ? ಈಗ ಅಲ್ಲಲ್ಲಿ ಮಾವುತರು ತಮ್ಮ ಮದದಾನೆಗಳನ್ನು ಅಲಂಕರಿಸುತ್ತಿರುವರು ! ರಥಿಕರು ರಥಗಳಿಗೆ ಕುದುರೆಗಳನ್ನು ಕಟ್ಟುತ್ತಿರುವರು ! ಅಲ್ಲಲ್ಲಿ ರಾವುತರು ಸಾವಿರಾರು ಸಂಖ್ಯೆಯಿಂದ ಸೇರಿ ಕೈಯಲ್ಲಿ ಪ್ರಾಸಗಳನ್ನು ಹಿಡಿದು ಯುದ್ಧೋತ್ಸಾಹದಿಂದ ಸುತ್ತುತ್ತಿರುವರು ! ಅಲ್ಲಲ್ಲಿ ಪದಾತಿಗಳು ಯುದ್ಧ ಸನ್ನದ್ಧರಾಗಿ ಗುಂಪುಕೂಡುತ್ತಿರುವರು. ಹೀಗೆ ಅದ್ಭುತದರ್ಶನವುಳ್ಳ ರಥಗಜ ತುರಗಪದಾತಿಗಳೆಂಬ ಚತುರಂಗಸೈನ್ಯಗಳು ಜಲಪ್ರವಾಹದಿಂದ ಮೊಳಗುವ ಸಮುದ್ರದಂತೆ ಉತ್ಸಾಹದಿಂದ ಸಿಂಹನಾದಗಳನ್ನು ಮಾಡುತ್ತ ಅಲ್ಲಲ್ಲಿನ ರಾಜ್ಯದ ಮಾರ್ಗಗಳನ್ನು ತುಂಬಿ ಮಹಾವೇಗದಿಂದ ಹೊರಟು ಬರುತ್ತಿರುವುವು. ಎಲೆ ಸೀತೆ ! ಈಗಲೇ ಸಾಣೆಹಿಡಿದು ಥಳಥಳಿಸುತ್ತಿರುವ ಶಸ್ತ್ರಗಳಿಂದಲೂ, ಗುರಾಣಿಗಳಿಂದಲೂ, ಯುದ್ಧ ಕವಚಗಳಿಂದಲೂ, ಆನೆ, ಕುದುರೆ, ಮೊದಲಾದ ಚತುರಂಗಸೈನ್ಯಗಳ ಭೂಷಣಗಳಿಂದಲೂ ಮೇಲೆಹೊರಟು ಪ್ರಸರಿಸುತ್ತಿರುವ ಕಾಂತಿಯು, ನಾನಾ ವರ್ಣಗಳಿಂದ ಆಕಾಶದಲ್ಲಿ ವ್ಯಾಪಿಸಿ, ದೊಡ್ಡ ಕಾಡಿನಲ್ಲಿ ಹಬ್ಬಿಬೆಳೆದ ಕಾಡುಗಿಚ್ಚು ಅಲ್ಲಿನ ಬಗೆಬಗೆಯ ಮೂಲಿಕೆಗಳ ಸಂಬಂಧದಿಂದ ನಾನಾವರ್ಣದ ಕಾಂತಿಯನ್ನು ಹರಡುವಂತೆ ವಿಚಿತ್ರವರ್ಣದಿಂದ ಕಾಣುವುದು ನೋಡು ! ಆನೆಗಳಿಗೆ ಕಟ್ಟಿದ

ಗಂಟೆಗಳ ಧ್ವನಿಯನ್ನೂ, ರಥಚಕ್ರಧ್ವನಿಯನ್ನೂ ಕುದುರೆಗಳ ಹೇಷಾಧ್ವನಿಯನ್ನೂ, ರಣವಾದ್ಯ ಧ್ವನಿಗಳನ್ನೂ ಚೆನ್ನಾಗಿ ಕೇಳು. ರಾವಣನ ಭಟರಾದ ರಾಕ್ಷಸರೆಲ್ಲರೂ, ತಮ್ಮ ತಮ್ಮ ಆಯುಧಗಳನ್ನೆತ್ತಿ ಹಿಡಿದು, ನೋಡುವವರಿಗೆ ಭಯವನ್ನು ಹುಟ್ಟಿಸುವಂತೆ ಪ್ರಬಲವಾದ ಸನ್ನಾಹವನ್ನು ನಡೆಸುತ್ತಿರುವರು. ಎಲೆ ಸೀತೆ! ಇನ್ನು ನಿನ್ನ ದುಃಖವೆಲ್ಲವೂ ನೀಗಿತು. ಇನ್ನು ನಿನಗೆ ವಿಜಯಲಕ್ಷ್ಮಿಯು ಕೈಸೇರುವಳು. ರಾಕ್ಷಸರಿಗೂ ಮಹಾಭಯವು ಬಂದೊದಗಿತು! ರಾಮನು ಕಮಲದಂತೆ ಕಣ್ಣುಳ್ಳವನಾದುದರಿಂದ ಅಂತಹ ಸರ್ವೋತ್ತಮವಾದ ನಯನಸೌಭಾಗ್ಯಲಕ್ಷಣವುಳ್ಳ ಆತನನ್ನು ಜಯಲಕ್ಷ್ಮಿಯು ಅವಶ್ಯವಾಗಿ ವರಿಸದೆ ಬಿಡಳು ಮತ್ತು ದೇವತೆಗಳಲ್ಲಿ ದೇವೇಂದ್ರನು ಹೇಗೋ ಹಾಗೆ ಪುರುಷರಲ್ಲಿ ಮೇಲಾಗಿ ಮೆರೆವ ಮಹಾಪ್ರಭಾವವುಳ್ಳ ಆತನನ್ನು ಭಾಗ್ಯಲಕ್ಷ್ಮಿಯು ಎಂದಿಗೂ ಕೈಬಿಡುವವಳಲ್ಲ. ಅವನ ಪರಾಕ್ರಮವನ್ನು ಅಷ್ಟಿಷ್ಟೆಂದು ನಿರ್ಣಯಿಸುವುದಕ್ಕಿಲ್ಲ! ರಾವಣನು ತನಗಿದಿರಾಗಿ ಬರುವುದೊಂದನ್ನೇ ನಿರೀಕ್ಷಿಸುತ್ತ ರಾಮನು ತನ್ನ ಕೋಪವನ್ನು ಇದುವರೆಗೂ ತಡೆದಿಟ್ಟುಕೊಂಡಿರುವನು. ರಾವಣನು ಯುದ್ಧಕ್ಕೆ ಬಂದು ನಿಲ್ಲುವುದೊಂದೇ ತಡ! ಆಗಲೇ ಯುದ್ಧದಲ್ಲಿ ಅವನನ್ನು ಕೊಂದು ನಿನ್ನೊಡನೆ ಸೇರುವನು. ಇಂದ್ರನು ಉಪೇಂದ್ರನೊಡಗೂಡಿ ತನ್ನ ಶತ್ರುಗಳನ್ನಡಗಿಸಿದಂತೆ, ರಾಮನು ಲಕ್ಷ್ಮಣಸಹಿತನಾಗಿ ಇಲ್ಲಿನ ರಾಕ್ಷಸರಲ್ಲಿ ತನ್ನ ಪರಾಕ್ರಮವನ್ನು ಶೀಘ್ರದಲ್ಲಿಯೇ ತೋರಿಸುವನು. ಎಲೆ ದೇವಿ! ಇನ್ನು ಹೆಚ್ಚಾಗಿ ಹೇಳಿದುದರಿಂದೇನು ? ಶೀಘ್ರದಲ್ಲಿಯೇ ರಾಮನು ಇಲ್ಲಿಗೆ ಬಂದು ನಿನ್ನನ್ನು ಪ್ರೀತಿಯಿಂದಾಲಿಂಗಿಸಿ, ತನ್ನ ತೊಡೆಯಲ್ಲಿ ಕುಳ್ಳಿರಿಸಿಕೊಂಡಾಗ ಕೃತಾರ್ಥಳಾಗಿ ಸಂತೋಷದಿಂದಿರುವ ನಿನ್ನನ್ನು ನಾನು ನೋಡುವೆನು. ಎಲೆ ಸೀತೆ! ಆಗ ನಿನ್ನ ಮುಖದಲ್ಲಿ ಕಾಣುವ ಉಲ್ಲಾಸವನ್ನು ನೋಡಬೇಕೆಂಬುದೇ ನನ್ನ ಮುಖ್ಯವಾದ ಕೋರಿಕೆಯು. ಎಲೆ ಭದ್ರೆ! ಇಲ್ಲಿಗೆ ಬಂದು ನಿನ್ನೊಡನೆ ಸೇರಿ ನಿನ್ನನ್ನಾಲಿಂಗಿಸುತ್ತಿರುವ ವಿಶಾಲವಕ್ಷನಾದ ಆ ರಾಮನ ವಕ್ಷಸ್ಥಲದಲ್ಲಿ ನೀನು ಶೀಘ್ರದಲ್ಲಿಯೇ ನಿನ್ನ ಆನಂದಬಾಷ್ಪವನ್ನು ತುಳಕಿಸುವೆ! ನೀನು ನಿನ್ನ ಪ್ರಿಯಪತಿಯನ್ನಗಲಿದುದು ಮೊದಲು, ಇದುವರೆಗೆ ಹಲವು ತಿಂಗಳುಗಳಿಂದ ಯಾವ ಸಂಸ್ಕಾರವೂ ಇಲ್ಲದೆ ಒಂದೇ ಜಡೆಯಾಗಿ ಬೆಳೆದು ನಿನ್ನ ಜಘನಗಳಮೇಲೆ ತೂಗಾಡುತ್ತಿರುವ ಈ ನಿನ್ನ ತುರುಬನ್ನು ಮಹಾಬಲಾಢ್ಯನಾದ ರಾಮನು

ಇನ್ನು ಶೀಘ್ರದಲ್ಲಿಯೇ ತನ್ನ ಬೆರಳುಗಳಿಂದ ಹಿಡಿದು ಸಂಸ್ಕರಿಸುವನು. ಉದಿಸಿದ ಪೂರ್ಣಚಂದ್ರನಂತಿರುವ ಆ ರಾಮನ ಮುದ್ದುಮುಖವನ್ನು ನೋಡಿದೊಡನೆ, ಹಾವು ತನ್ನ ಪರೆಯನ್ನು ಸುಲಿದುಬಿಸುಡುವಂತೆ, ನೀನೂ ದುಃಖಸೂಚಕಗಳಾದ ಈ ಬಾಷ್ಪಗಳನ್ನೂ ಬಿಟ್ಟೊಡದರುವೆ ! ಎಲೆ ದೇವಿ ! ಸುಖಾರ್ಹನಾದ ಆ ನಿನ್ನ ಪ್ರಿಯನು ಇನ್ನು ಶೀಘ್ರದಲ್ಲಿಯೇ ಯುದ್ಧದಲ್ಲಿ ರಾವಣನನ್ನು ಕೊಂದು ಕೃತಾರ್ಥ ನಾಗಿ, ಪ್ರಿಯಭಾರ್ಯೆಯಾದ ನಿನ್ನೊಡಗೂಡಿ ಸುಖಿಸುವನು. ಸಸಿಗಳಿಂದ ಕೂಡಿದ ಭೂಮಿಯು ಸುವೃಷ್ಟಿಯಿಂದ ಉಲ್ಲಾಸಹೊಂದುವಂತೆ, ನೀನೂ ಮಹಾತ್ಮನಾದ ಆ ರಾಮನೊಡಗೂಡಿ ಅವನ ಪರಾಕ್ರಮದಿಂದ ಉಲ್ಲಾಸಹೊಂದುವೆ. ಯಾವನು ಪರ್ವತೋತ್ತಮವಾದ ಮೇರುವಿನ ಸುತ್ತಲೂ, ಕುದುರೆಯಂತೆ ಶೀಘ್ರವಾದ ಮಂಡಲಗತಿಯಿಂದ ಪ್ರದಕ್ಷಿಣವಾಗಿ ಸುತ್ತಿಸುತ್ತಿಬರುವನೋ, ಅಂತಹ ಸೂರ್ಯ ದೇವನನ್ನು ಈಗ ನೀನು ಮರೆಹೊಕ್ಕು ಪ್ರಾರ್ಥಿಸು ! ಈ ಸೂರ್ಯದೇವನೇ ಸಮಸ್ತ ಪ್ರಜೆಗಳಿಗೂ ಕಾರಣಭೂತನು ! ಆದರಿಂದ ನಿನ್ನ ಇಷ್ಟ ಪೂರ್ತಿಯಾಗುವುದು.”

ಇಲ್ಲಿಗೆ ಮೂವತ್ತುಮೂರನೆಯ ಸರ್ಗವು.

ಸರಮೆಯು ರಾವಣನ ಅಭಿಪ್ರಾಯವನ್ನು ತಿಳಿದು
ಬಂದು ಸೀತೆಗೆ ಹೇಳಿದುದು.

ಹೀಗೆ ಸೀತೆಯು ರಾವಣನ ಮೋಸದ ಮಾತಿಗೆ ಮರುಳಾಗಿ ಸಂಕಟಪಡು ತ್ತಿರುವುದನ್ನು ನೋಡಿ ಸರಮೆಯು, ಆಕಾಶವು ಜಲವರ್ಷದಿಂದ ಭೂಮಿಯನ್ನು ತಂಪೇರಿಸುವಂತೆ ಹಿತವಾಕ್ಯಗಳಿಂದ ಅವಳನ್ನು ಸಮಾಧಾನಪಡಿಸಿದಳು. ಸರಮೆಯು ಕಾಲೋಚಿತವಾದ ಕಾರ್ಯವನ್ನು ಬಲ್ಲವಳಾದುದರಿಂದ, ಸೀತೆಗೆ ತನ್ನಿಂದಾದಷ್ಟು ಪ್ರಿಯವನ್ನುಂಟುಮಾಡಬೇಕೆಂದೆಣಿಸಿ, ಮಂದಹಾಸಪೂರ್ವಕವಾಗಿ ಆಕೆಯನ್ನು ಕುರಿತು “ಎಲೆ ನೀಲಾಕ್ಷಿ ! ಈಗ ನಾನು ಯಾರಿಗೂ ತಿಳಿಯದಂತೆ ನಿನ್ನ ಪತಿ ಯಾದ ರಾಮನ ಬಳಿಗೆ ಹೋಗಿ, ನಿನ್ನ ಕ್ಷೇಮವನ್ನು ಅವನಿಗೆ ತಿಳಿಸಿಬರಬೇಕೆಂದಿರು ವೆನು. ಈ ವಿಷಯದಲ್ಲಿ ಅಷ್ಟು ದೂರಕ್ಕೆ ಹೋಗಿಬರಲು ನನಗೆ ಶಕ್ತಿಯಿಲ್ಲವೆಂದೆಣಿಸ ಬೇಡ ! ನಿರಾಧಾರವಾದ ಆಕಾಶದಲ್ಲಿಯೂ ಸಂಚರಿಸಬಲ್ಲೆನು ! ನಾನು ಮಾತ್ರ ಆಕಾಶದಲ್ಲಿ ಹೊರಟರೆ, ವಾಯುವಾಗಲಿ, ಗರುಡನಾಗಲಿ, ನನಗೆ ಸಮಾನರಾಗಿ

ನಡೆದು ನನ್ನನ್ನು ಹಿಂಬಾಲಿಸಲಾರರು, ನಾನು ಅಲ್ಲಿಗೆ ಹೋಗಿ ಬರುವುದು ನಿನಗೆ ಸಮ್ಮತವೆ ?" ಎಂದಳು. ಸರಮೆಯೂ ಹೀಗೆಂದು ಹೇಳಿದ ಮಾತನ್ನು ಕೇಳಿ ಸೀತೆಯು ಕಿವಿಗಿಂಪಾಗಿಯೂ, ಮೃದುವಾಗಿಯೂ ಇರುವ ಮಾತಿನಿಂದ, "ಅಮ್ಮ ಸರಮೆ ! ನಿನ್ನ ಶಕ್ತಿಯನ್ನು ನಾನು ಬಲ್ಲೆನು. ಆಕಾಶಕ್ಕಾಗಲಿ, ಕೆಳಗೆ ಪಾತಾಳಕ್ಕಾಗಲಿ ಹೋಗಿ ಬರುವುದಕ್ಕೂ ನಿನಗೆ ಶಕ್ತಿಯುಂಟು. ನನ್ನ ವಿಷಯವಾಗಿ ಎಷ್ಟೇ ದುಷ್ಕರಕಾರ್ಯವನ್ನಾದರೂ ನೀನು ನಡೆಸಬಲ್ಲೆಯೆಂಬುದನ್ನೂ ಬಲ್ಲೆನು. ಅದು ಹಾಗಿರಲಿ ! ನನಗೆ ಹಿತವನ್ನು ಮಾಡಿಯೇ ತೀರಬೇಕೆಂಬ ಕೋರಿಕೆಯು ನಿನಗೆ ಸ್ಥಿರವಾಗಿದ್ದ ಪಕ್ಷದಲ್ಲಿ, ನೀನು ಈಗಲೇ ರಾವಣನಬಳಿಗೆ ಹೋಗಿ ಅವನ ಸನ್ನಾಹಗಳೇನೆಂದು ತಿಳಿದುಬರಬೇಕು ! ಇದರಿಂದ ಫಲವೇನೆಂದು ಕೇಳುವೆಯಾ ? ಆ ರಾವಣನು ಬಹಳ ಮಾಯಾವಿ ! ಅತಿ ಕ್ರೂರಸ್ವಭಾವವುಳ್ಳವನು ! ದುಷ್ಟಾತ್ಮನು ! ಯಾವಾಗಲೂ ಶತ್ರುಗಳನ್ನು ಗೋಳಾಡಿಸತಕ್ಕವನು. ಮದ್ಯವನ್ನು ಕುಡಿಸಿದಂತೆ, ಅವನು ಮಾತುಮಾತಿಗೂ, ನನ್ನನ್ನು ಆಗಾಗ ಮೋಸಪಡಿಸುತ್ತಿರುವನು. ಮುಖವಿಕಾರಗಳಿಂದಲೂ ಮಾತಿನಿಂದಲೂ ಆಗಾಗ ಹೆದರಿಸುತ್ತಿರುವನು. ನನ್ನ ಮೇಲೆ ಕಾವಲಿರುವ ಈ ಘೋರರಾಕ್ಷಸಿಯರಿಂದಲೂ ಭಯಗೊಳಿಸುತ್ತಿರುವನು. ನನ್ನ ಭಯವೋ ಮಿತಿಮೀರಿಹೋಗಿರುವುದು. ! ನನ್ನ ಜೀವದಲ್ಲಿಯೇ ನನಗೆ ಸಂದೇಹವು ಹುಟ್ಟಿರುವುದು. ನನ್ನ ಮನಸ್ಸಿಗೆ ಕ್ಷಣಮಾತ್ರವೂ ನೆಮ್ಮದಿಯಿಲ್ಲ. ಯಾವಾಗಲೂ ನಾನು ಅವನ ಭಯದಿಂದಲೇ, ಈ ಅಶೋಕವನದಲ್ಲಿ ತತ್ತಳಿಸುತ್ತಿರುವೆನು. ಆದುದರಿಂದ ಆ ರಾವಣನು ಪೂರ್ವೋತ್ತರಗಳೇನೆಂಬುದನ್ನೂ, ಅವನು ಮುಂದೆ ನಡೆಸಬೇಕೆಂದಿರುವ ಕಾರ್ಯವೇನೆಂಬುದನ್ನೂ ನೀನು ತಿಳಿದುಬಂದು ಹೇಳಿದರೆ, ನನಗೆ ಎಷ್ಟೋ ಉಪಕಾರಮಾಡಿದಂತಾಗುವುದು. ಇದೇ ನೀನು ನನ್ನಲ್ಲಿ ತೋರಿಸತಕ್ಕ ಪರಮಾನುಗ್ರಹವು" ಎಂದಳು. ಮಧುರಭಾಷಿಣಿಯಾದ ಸೀತೆಯು ಕಣ್ಣೀರುಬಿಟ್ಟು ಹೀಗೆಂದು ಹೇಳಲು ಸರಮೆಯು ಅವಳ ಕಣ್ಣೀರನ್ನು ಕೈಯಿಂದೊರಸುತ್ತ, "ಎಲೆ ಸೀತೆ ! ಈ ಉದ್ದೇಶವು ನಿನಗಿದ್ದಪಕ್ಷದಲ್ಲಿ ಈಗಲೇ ನಾನು ಹೋಗಿ, ನಿನ್ನ ಶತ್ರುವಾದ ಆ ರಾವಣನ ಅಭಿಪ್ರಾಯವನ್ನು ತಿಳಿದು ಬರುವೆನು ! ಸಂದೇಹಬೇಡ ! ಕ್ಷಣಮಾತ್ರದಲ್ಲಿ ಬರುವೆನು ನೋಡು ! " ಎಂದಳು. ಸರಮೆಯು ಹೀಗೆಂದು ಹೇಳಿ, ಆಗಲೇ ರಾವಣನ ಅರಮನೆಗೆ ಬಂದು, ಅಲ್ಲಿ ಅವನು ತನ್ನ

ಮಂತ್ರಿಗಳೊಡನೆ ಮಾತಾಡುತ್ತಿದ್ದ ವಿಷಯಗಳೆಲ್ಲವನ್ನೂ ರಹಸ್ಯವಾಗಿ ನಿಂತು ಕೇಳಿದಳು. ಇತರರ ಮನೋನಿಶ್ಚಯವನ್ನು ತಿಳಿಯುವುದರಲ್ಲಿ ನಿಪುಣೆಯಾದ ಆ ಸರಮೆಯು, ದುರಾತ್ಮನಾದ ಆ ರಾವಣನ ನಿಶ್ಚಯವೆಲ್ಲವನ್ನೂ ಕಿವಿಯಾರೆ ಕೇಳಿ ತಿಳಿದುಕೊಂಡು ಅಲ್ಲಿಂದ ಹಿಂತಿರುಗಿ ಅಶೋಕವನಕ್ಕೆ ಬಂದಳು. ಅಲ್ಲಿ ಪದ್ಮಪೀಠವನ್ನು ಬಿಟ್ಟುಬಂದಿರುವ ಮಹಾಲಕ್ಷ್ಮಿಯಂತೆ ದೈನ್ಯದಿಂದ ನೆಲದಲ್ಲಿ ಕುಳಿತು ತನ್ನ ಪ್ರತ್ಯಾಗಮನವನ್ನೇ ನಿರೀಕ್ಷಿಸುತ್ತಿರುವ ಸೀತಾದೇವಿಯನ್ನು ಕಂಡಳು. ಸರಮೆಯು ಹಿಂತಿರುಗಿ ಬಂದುದನ್ನು ನೋಡಿದೊಡನೆ ಸೀತೆಯು ಪರಮಾನಂದಭರಿತಳಾಗಿ, ಸಂಭ್ರಮದಿಂದ ಮುಂದೆ ಬಂದು, ಆಕೆಯನ್ನಪ್ಪಿಕೊಂಡು, ತನ್ನ ಕೈಯಿಂದಲೇ ಆಕೆಗೆ ಆಸನವನ್ನು ಕೊಟ್ಟು "ಸಖಿ ಸರಮೆ! ಇದೋ! ಈ ಆಸನದಲ್ಲಿ ಸುಖವಾಗಿ ಕುಳಿತು ನೀನು ತಿಳಿದು ಬಂದ ವಿಷಯವೆಲ್ಲವನ್ನೂ ಯಥಾಸ್ಥಿತವಾಗಿ ತಿಳಿಸು! ಕ್ರೂರನಾಗಿಯೂ ದುರಾತ್ಮನಾಗಿಯೂ, ಇರುವ ಆ ರಾವಣನ ನಿಶ್ಚಯವೇನೆಂಬುದನ್ನು ಹೇಳು!" ಎಂದಳು. ಸೀತೆಯು ಭಯಾತುರದಿಂದ ನಡಗುತ್ತ ಹೀಗೆ ಪ್ರಶ್ನೆಮಾಡಿದೊಡನೆ ಸರಮೆಯು ಆಕೆಗೆ ರಾವಣನ ಉದ್ದೇಶಗಳನ್ನು ತಿಳಿಸುವುದಕ್ಕೆ ತೊಡಗಿ, "ಎಲೆ ಸೀತೆ! ನಡೆದ ಸಂಗತಿಗಳನ್ನೂ ತಿಳಿಸುವೆನು ಕೇಳು! ಅಲ್ಲಿ ರಾವಣನ ತಾಯಿಯಾದ ಕೈಕಸಿಯೂ, ಅವನ ವೃದ್ಧಮಂತ್ರಿಯಾದ ಅವಿದ್ಧನೆಂಬವನೂ, ನಿನ್ನನ್ನು ಬಿಟ್ಟುಬಿಡುವುದಕ್ಕಾಗಿ ರಾವಣನಿಗೆ ಎಷ್ಟೋವಿಧದಿಂದ ನೀತಿಯನ್ನು ಹೇಳಿ ಬೋಧಿಸಿದರು. ಅವರಿಬ್ಬರೂ ಆ ರಾವಣನನ್ನು ಕುರಿತು "ವತ್ಸ ರಾವಣಾ! ಈಗಲೇ ನೀನು ಹೋಗಿ ಬಹುಮಾನಪೂರ್ವಕವಾಗಿ ರಾಮನಿಗೆ ಸೀತೆಯನ್ನೊಪ್ಪಿಸಿಬಿಡು! ಹಾಗೆ ಮಾಡದಪಕ್ಷದಲ್ಲಿ ರಾಮನ ಕೈಯಿಂದ ನಿನಗೆ ಮಹಾನರ್ಥವು ಸಂಭವಿಸುವುದು. ಆತನು ಜನಸ್ಥಾನದಲ್ಲಿ ನಡೆಸಿದ ಮಹಾದ್ಭುತವಾದ ಸಾಹಸವೊಂದೇ ಇದಕ್ಕೆ ಸಾಕಾದ ನಿದರ್ಶನವಲ್ಲವೇ ? ಆ ರಾಮನು ಹಾಗಿರಲಿ! ಅವನ ಭೃತ್ಯನಾದ ಹನುಮಂತನೆಂಬ ಸಾಮಾನ್ಯಕಪಿಯೊಂದು ಈ ಮಹಾಸಮುದ್ರವನ್ನು ಹಾರಿಬಂದಿತು. ಇಲ್ಲಿ ಸೀತೆಯನ್ನೂ ನೋಡಿತು. ಯುದ್ಧದಲ್ಲಿ ತಾನು ಏಕಾಕಿಯಾಗಿ ನಿಂತು, ನಮ್ಮ ಕಡೆಯ ರಾಕ್ಷಸರೆಲ್ಲರನ್ನೂ ಧ್ವಂಸಮಾಡಿತು. ಇದಕ್ಕಿಂತಲೂ ನಿನಗೆ ಬೇರೆ ನಿದರ್ಶನವೇಕೆ ? ಕೇವಲ ಮನುಷ್ಯಮಾತ್ರನಾದ ಬೇರೆ ಯಾವನು ತಾನೇ ಇಷ್ಟು ಕೆಲಸಗಳನ್ನು ಮಾಡಬಲ್ಲನು ? ಆದುದರಿಂದ, ರಾಮನನ್ನೂ, ಅವನ ಕಡೆಯವರನ್ನೂ ನೀನು

ಸಾಮಾನ್ಯರೆಂದೆನಿಸಬೇಡ" ಎಂದು ಅನೇಕ ವಿಧದಿಂದ ಬೋಧಿಸಿದರು. ಹಾಗೆಯೇ ಇನ್ನೂ ಅನೇಕ ಮಂತ್ರಿವೃದ್ಧರೂ ಅವನಿಗೆ ಬುದ್ಧಿವಾದಗಳನ್ನು ಹೇಳಿದರು. ಎಲೆ ದೇವಿ ! ನರನು ಏನಾದರೂ ಬಿಡುವನೇ ಹೊರತು ಹಣವನ್ನು ಬಿಡಲಾರನಲ್ಲವೇ ? ಹಾಗೆಯೇ ರಾವಣನು ನಿನ್ನನ್ನು ಬಿಡುವುದಕ್ಕೊಪ್ಪಲಿಲ್ಲ. ಘಾತುಕನಾದ ಆ ರಾವಣನು ಯುದ್ಧದಲ್ಲಿ ತಾನು ಸತ್ತಲ್ಲದೆ ನಿನ್ನನ್ನು ಬಿಡುವುದಿಲ್ಲವೆಂದು ತನ್ನ ಮಂತ್ರಿಗಳೊಡನೆ ಸೇರಿ ನಿಶ್ಚಯಮಾಡಿಕೊಂಡಿರುವನು. ಅವನಿಗೆ ಮರಣ ಕ್ಕಾಗಿಯೇ ಈ ವಿಧವಾದ ದುರ್ಬುದ್ಧಿಯು ಹುಟ್ಟಿರುವುದೇ ಹೊರತು ಬೇರೆಯಲ್ಲ ! ಅವನನ್ನೂ ಅವನ ಕಡೆಯ ರಾಕ್ಷಸರನ್ನೂ ಯುದ್ಧದಲ್ಲಿ ಕೊಂದಲ್ಲದೆ ಕೇವಲ ಭಯ ಕ್ಕಾಗಿ ನಿನ್ನನ್ನು ಬಿಟ್ಟುಬಿಡುವವನಲ್ಲ! ಎಲೆ ಸೀತೆ ! ನೀನು ಚಿಂತಿಸಬೇಡ. ನಿನ್ನ ಪತಿಯಾದ ರಾಮನು ಮುಂದಿನ ಯುದ್ಧದಲ್ಲಿ ತನ್ನ ತೀಕ್ಷ್ಣ ಬಾಣಗಳಿಂದ ತಪ್ಪದೆ ರಾವಣನನ್ನು ಕೊಂದು ನಿನ್ನನ್ನು ತನ್ನೊಡನೆ ಅಯೋಧ್ಯೆಗೆ ಕರೆದುಕೊಂಡು ಹೋಗುವನು. ಈ ಶುಭೋದಯವನ್ನು ಈ ನಿನ್ನ ನೇತ್ರ ಸೌಭಾಗ್ಯವೇ ಸೂಚಿ ಸುತ್ತಿರುವುದು " ಎಂದಳು. ಸರಮೆಯು ಈ ಮಾತನ್ನು ಹೇಳಿ ಮುಗಿಸುವಷ್ಟ ರಲ್ಲಿಯೇ, ಈ ಶುಭವಾಕ್ಯಕ್ಕೆ ಉಪಶ್ರುತಿಯಂತೆ ಅತ್ತಲಾಗಿ ವಾನರಸೈನ್ಯಗಳ ಸಿಂಹ ನಾದವೂ, ಅಲ್ಲಿನ ಭೇರಿ ಶಂಖಾದಿವಾದ್ಯಧ್ವನಿಗಳೂ, ಭೂಮಿಯನ್ನೇ ನಡುಗಿಸು ವಂತೆ ಕೇಳಿಸಿತು. ಲಂಕೆಯಲ್ಲಿದ ರಾವಣನ ಸೈನಿಕರೆಲ್ಲರೂ ಆ ವಾನರಸೈನ್ಯಗಳ ಸಿಂಹನಾದವನ್ನು ಕೇಳಿ ಭಯದಿಂದ ಬೆಜ್ಜರಬಿದ್ದವರಾಗಿ, ರಾವಣನ ದೋಷದಿಂದ ತಮಗೂ ಇನ್ನು ಉಳಿಗಾಲವಿಲ್ಲವೆಂದು ತಿಳಿದು, ಕಾಂತಿಗುಂದಿ ದೈನ್ಯದಿಂದ ತತ್ತರಿ ಸುತ್ತಿದ್ದರು.

ಇಲ್ಲಿಗೆ ಮೂವತ್ತನಾಲ್ಕನೆಯ ಸರ್ಗವು.

{ ರಾಮನಿಗೆ ಸೀತೆಯನ್ನೊಪ್ಪಿಸುವುದೇ ಅವಶ್ಯಕಾರ್ಯವೆಂದು
ಮಾಲ್ಯವಂತನು ರಾವಣನಿಗೆ ಬೋಧಿಸಿದ್ದು. }

ಹೀಗೆ ವಾನರಸೈನ್ಯದಲ್ಲಿ ಶಂಖಧ್ವನಿಗಳೂ, ಭೇರೀಭಾಂಕಾರಗಳೂ, ತುಮುಲ ವಾಗಿ ಹೊರಡುತ್ತಿರುವಾಗಲೇ ಮಹಾಬಾಹುವಾದ ರಾಮನು ಲಂಕೆಯನ್ನು ಮುತ್ತುವುದಕ್ಕಾಗಿ ಮುಂದೆ ಮುಂದೆ ಸಾಗಿಬರುತ್ತಿದ್ದನು. ಅತ್ತಲಾಗಿ ರಾಕ್ಷಸೇಶ್ವರ

ನಾದ ರಾವಣನೂ ಕೂಡ ಈ ಕಪಿಗಳ ಕೋಲಾಹಲವನ್ನು ಕೇಳಿ ಚಿಂತಾಕ್ರಾಂತನಾಗಿ ಮುಹೂರ್ತಕಾಲದವರೆಗೆ ತನ್ನಲ್ಲಿತಾನೇ ಆಲೋಚಿಸಿ, ತನ್ನ ಮುಂದಿದ್ದ ಮಂತ್ರಿಗಳನ್ನು ಕಣ್ಣೆಟ್ಟು ನೋಡಿದನು. ಹೀಗೆ ಮಹಾಬಲಾಢ್ಯನಾದ ರಾವಣನು ತನ್ನ ದೃಷ್ಟಿಸಂಜ್ಞೆಯಿಂದಲೇ ಮಂತ್ರಿಗಳನ್ನು ಸಮೀಪಕ್ಕೆ ಕರೆದು, ಸಭಾಸ್ಥಾನವೆಲ್ಲವೂ ಪ್ರತಿಧ್ವನಿಸುವಂತ ಅವರನ್ನು ಹೀಗಳೆಯುವ ಕ್ರೂರವಾಕ್ಯದಿಂದ "ಎಲೈ ಮಂತ್ರಿಗಳೇ ! ಬಹಳ ಚೆನ್ನಾಯಿತು ! ರಾಮನು ಸಮುದ್ರವನ್ನು ದಾಟಿಬಂದ ಸಾಹಸವನ್ನೂ, ಅವನ ಪರಾಕ್ರಮವನ್ನೂ, ಅವನ ಸೈನ್ಯದ ಪ್ರಾಬಲ್ಯವನ್ನೂ, ನೀವು ನಿಮ್ಮ ಬಾಯಿಂದಲೇ ನನ್ನ ಮುಂದೆ ಹೇಳಿಹೇಳಿ ಕೊಂಡಾಡುತ್ತಿರುವಿರಿ ! ನನಗೂ ಅವೆಲ್ಲವನ್ನೂ ಕೇಳಿ ಕೇಳಿ ಸಾಕಾಯಿತು ! ನೀವೆಲ್ಲರೂ ಯುದ್ಧದಲ್ಲಿ ಅಮೋಘ ಪರಾಕ್ರಮವುಳ್ಳವರೆಂಬುದನ್ನು ನಾನು ಚೆನ್ನಾಗಿ ಬಲ್ಲೆನು ಹೀಗಿರುವಾಗಲೂ ನೀವು ಆ ರಾಮನ ಪರಾಕ್ರಮವನ್ನು ಕೇಳಿದಂದಿನಿಂದಲೂ ಎದೆಗುಂದಿ ಒಬ್ಬರಿಗೊಬ್ಬರು ಮುಖವನ್ನು ನೋಡಿಕೊಳ್ಳುತ್ತ ನಿರುತ್ಸಾಹರಾಗಿ ಸುಮ್ಮನಿರುವುದನ್ನೂ ನಾನು ಬಲ್ಲೆನು. ಹೀಗೆ ಭಯಪಡುವುದು ರಾಕ್ಷಸರಾದ ನಿಮಗೆ ಕೇವಲ ಸ್ವರೂಪವಿರುದ್ಧವು'' ಎಂದನು. ಆಗ ರಾವಣನ ತಾಯಿಗೆ [1] ಚಿಕ್ಕ ತಂದೆಯಾಗಿಯೂ, ಬಹಳ ಪ್ರಾಜ್ಞನಾಗಿಯೂ ಇದ್ದ ಮಾಲ್ಯವಂತನೆಂಬ ರಾಕ್ಷಸನು ರಾವಣನು ಹೇಳಿದ ಆ ಕಠಿನವಾಕ್ಯವನ್ನು ಕೇಳಿ ಅವನನ್ನು ಕುರಿತು, ‹‹ಎಲೆ ರಾಜನೆ ! ಯಾವ ರಾಜ್ಯಾಧಿಪತಿಯು [2] ಆನ್ವೀಕ್ಷಕಿ, ತ್ರಯಿ, ವಾರ್ತೆ, ದಂಡನೀತಿಗಳೆಂಬ ನಾಲ್ಕು

---

1. ಇಲ್ಲಿ "ಮಾತುಃ ಪೈತಾಮಹೋಽಬ್ರವೀತ್" ಎಂಬುದು ಮೂಲವು. ರಾವಣನ ತಾಯಿಯಾದ ಕೈಕಸಿಯು ಸುಮಾಲಿಯೆಂಬವನ ಮಗಳು. ಈ ವಿಷಯವು ಉತ್ತರ ರಾಮಾಯಣದಲ್ಲಿ ಹೇಳಲ್ಪಡುವುದು. ಈ ಮಾಲ್ಯವಂತನೆಂಬವನು ಸುಮಾಲಿಯ ತಮ್ಮನು. ಆದುದರಿಂದ ಇಲ್ಲಿ ರಾವಣನ ತಾಯಿಯಾದ ಕೈಕಸಿಗೆ ಮಾಲ್ಯವಂತನು ಚಿಕ್ಕತಂದೆಯೆಂದು ತಿಳಿಯಬೇಕು. ಕೆಲವರು ಪೈತಾಮಹ ಶಬ್ದಕ್ಕೆ ತಂದೆಯೆಂದೇ ಅರ್ಥಮಾಡುತ್ತಾರೆ. "ವೃದ್ಧೋ ಮಾತಾ ಮಹೋಽಬ್ರವೀತ್" ಎಂದು ಕೆಲವು ಕಡೆಗಳಲ್ಲಿ ಪಾಠಾಂತರವೂ ಉಂಟು.

2. ಇಲ್ಲಿ ಆನ್ವೀಕ್ಷಕೀಂ ತ್ರಯೀಂ ವಾರ್ತಾಂ ದಂಡನೀತಿಂ ಚ ಪಾರ್ಥಿವಃ। ತದ್ವಿದ್ಭಿಸ್ತತ್ಕ್ರಿಯೋಪೇತೈಶ್ಚಿಂತಯೇದ್ವಿನಯಾನ್ವಿತಃ ॥ ಆನ್ವೀಕ್ಷಕ್ಯಾತ್ಮವಿಜ್ಞಾನಂ ಧರ್ಮಾಧರ್ಮೌ ತ್ರಯೀ ಸ್ಥಿತೌ। ಅರ್ಥಾನರ್ಥೌ ತು ವಾರ್ತಾಯಾಂ ದಂಡನೀತ್ಯಾಂ ನಯಾನಯೌ ॥ ವಿದ್ಯಾಶ್ಚತಸ್ರ ಏವೈತಾ ಯೋಗಕ್ಷೇಮಾಯ ದೇಹಿನಾಂ। ವಿದ್ಯಾವಿನೀತೋ ನೃಪತಿರ್ನಕೃಚ್ಛ್ರೇಷ್ವವಸೀದತಿ ॥" ಎಂಬ ಕಾಮಂದಕ ನೀತಿವಚನಗಳನ್ನು ಅನುಸಂಧಿಸಿಕೊಳ್ಳಬೇಕು.

ವಿದ್ಯೆಗಳಲ್ಲಿಯೂ ಚೆನ್ನಾಗಿ ಶಿಕ್ಷಿತನಾಗಿ, ನೀತಿಶಾಸ್ತ್ರವನ್ನನುಸರಿಸಿ ನಡೆದುಕೊಳ್ಳು ವನೋ, ಅಂತಹ ರಾಜನೇ ಚಿರಕಾಲದವರೆಗೆ ರಾಜ್ಯವನ್ನಾಳುವನು. ಅಂತಹ ರಾಜನೇ ಶತ್ರುಗಳನ್ನೂ ಅಡಗಿಸಬಲ್ಲನು. ಯಾವ ರಾಜನು, ತನ್ನ ಬಲವು ಕ್ಷೀಣಿಸಿದ ಕಾಲದಲ್ಲಿ ಶತ್ರುಗಳೊಡನೆ ಸಂಧಿಯನ್ನು ಮಾಡಿಕೊಳ್ಳುತ್ತ, ತನ್ನ ಬಲವು ಹೆಚ್ಚಿರುವ ಕಾಲದಲ್ಲಿ ಅವರೊಡನೆ ವಿರೋಧವನ್ನು ಬೆಳೆಸಿ. ಕ್ರಮವಾಗಿ ಅವರನ್ನು ನಿಗ್ರಹಿಸಿಬಿಡುವನೋ, ಅಂತಹ ರಾಜನು ದೊಡ್ಡ ಐಶ್ವರ್ಯವನ್ನನುಭವಿ ಸುವನು. ತನ್ನ ಬಲವು ಶತ್ರುಬಲಕ್ಕಿಂತಲೂ ಹೀನವಾಗಿದ್ದರಾಗಲೀ, ಶತ್ರುವು ಸಮಾನ ಬಲವುಳ್ಳವನಾಗಿದ್ದರಾಗಲಿ, ಅಂತಹ ಶತ್ರುವಿನೊಡನೆ ಅವಶ್ಯಕವಾಗಿ ಸಂಧಿ ಯನ್ನೇ ಮಾಡಿಕೊಳ್ಳಬೇಕು. ಶತ್ರುವಿನ ಬಲಕ್ಕಿಂತಲೂ ತನ್ನ ಬಲವು ಹೆಚ್ಚಿದ್ದ ಪಕ್ಷದಲ್ಲಿ, ಇಂತಹ ಶತ್ರುವನ್ನುಪೇಕ್ಷಿಸಿ ಸುಮ್ಮನಿರದೆ ಅವನೊಡನೆ ವೈರವನ್ನಿಟ್ಟು ಕೊಳ್ಳಬೇಕು. ಆದುದರಿಂದ ವತ್ಸಾ ರಾವಣಾ ! ಈಗ ರಾಮನೊಡನೆ ನೀನು ಸಂಧಿಯನ್ನು ಮಾಡಿಕೊಳ್ಳುವುದೇ ಮೇಲು, ಹೇಗಿದ್ದರೂ ರಾಮನು ನಿನಗಿಂತ ಪ್ರಬಲನು. ಈಗ ನಮಗೂ ರಾಮನಿಗೂ, ಯಾವ ಕಾರಣಕ್ಕಾಗಿ ವೈರವು ಬೆಳೆದುಹೋಗಿರುವುದೋ ಆ ಕಾರಣವನ್ನು ಮೊದಲು ಪರಿಹರಿಸಬೇಕು. ಆದುದ ರಿಂದ ಸೀತೆಯನ್ನು ಆತನಿಗೆ ಹಿಂತಿರುಗಿ ಕೊಟ್ಟುಬಿಡು. ದಾನೋಪಾಯದಿಂದಲ್ಲದೆ ಬಲಶಾಲಿಗಳೊಡನೆ ಸಂಧಿಯು ನಡೆಯದು. ಆದುದರಿಂದ ಸೀತೆಯನ್ನು ಕೊಟ್ಟು ಬಿಡುವುದೇ ಈಗ ಕಾಲೋಚಿತವಾದ ದಾನೋಪಾಯವೆಂದು ತಿಳಿ. ರಾಮನು ಅಷ್ಟು ಬಲಾಢ್ಯನೆಂಬುದು ಹೇಗೆಂದು ಕೇಳುವೆಯಾ ? ದೇವರ್ಷಿಗಂಧರ್ವಾದಿಗ ಳೆಲ್ಲರೂ ಅವನಿಗೆ ಜಯವನ್ನೇ ಹಾರೈಸುತ್ತಿರುವರು. ಹೀಗೆ ದೇವಬಲವುಳ್ಳ ಆ ರಾಮನು ಬಲವಂತನೆಂಬುದರಲ್ಲಿ ಸಂದೇಹವೇನಿದೆ ? ಅವನೊಡನೆ ವಿರೋಧಿಸ ಬೇಡ ! ಸಂಧಿಗೆ ಪ್ರಯತ್ನಿಸು ! ದೇವಾದಿಗಳೆಲ್ಲರೂ ಆ ರಾಮನಿಗೇ ಜಯವನ್ನು ಕೋರುತ್ತಿರುವುದಕ್ಕೆ ಕಾರಣವೇನೆಂದು ಕೇಳುವೆಯಾ ? ಸರ್ವಜ್ಞನಾದ ಬ್ರಹ್ಮ ದೇವನು ದೇವತೆಗಳಿಗೂ ದಾನವರಿಗೂ ಅವಲಂಬನವಾಗಿ ಧರ್ಮಾಧರ್ಮಗಳೆರಡನ್ನೂ ಸೃಷ್ಟಿಸಿದನು. ಆದುದರಿಂದ ಈ ಧರ್ಮಾಧರ್ಮಗಳೆರಡೂ ದೇವಾಸುರರನ್ನು ನಂಬಿ ನಿಂತಿರುವುವು. ಅವುಗಳಲ್ಲಿ ಧರ್ಮವೆಂಬುದು ಮಹಾತ್ಮರಾದ ದೇವತೆಗಳ ಪಕ್ಷವೆಂಬು ದನ್ನು ನಾವುಗಳೆಲ್ಲರೂ ಕೇಳಿಬಲ್ಲೆವು. ಅಧರ್ಮವು ಅಸುರರನ್ನೂ ರಾಕ್ಷಸರನ್ನೂ ಸೇರಿರುವುದು. ಹೀಗೆ ದೇವಾದಿಗಳು ಧರ್ಮಪಕ್ಷವನ್ನು ವಹಿಸಿರುವುದರಿಂದಲೂ,

ರಾಮನೂ ಹಾಗೆಯೇ ಧರ್ಮವನ್ನಾಶ್ರಯಿಸಿರುವುದರಿಂದಲೂ, ದೇವತೆಗಳು ಆ ರಾಮನಲ್ಲಿ ಪಕ್ಷಪಾತವನ್ನು ತೋರಿಸುತ್ತಿರುವರು. ಅವನಿಗೆ ಅವರ ಬಲವು ಪೂರ್ಣವಾಗಿ ಇರುವುದು. ಆ ರಾಮನು ಬಲವಂತನೆಂಬುದಕ್ಕೆ ಬೇರೊಂದು ಕಾರಣವೂ ಉಂಟು. ಯಾವಾಗ ಧರ್ಮವು ಪ್ರಬಲವಾಗಿ ಅಧರ್ಮವನ್ನು ನುಟ್ಟುವುದೋ, ಆ ಕಾಲವು ಕೃತಯುಗವೆನಿಸುವುದು. ಧರ್ಮವನ್ನು ಮೆಟ್ಟಿ ಅಧರ್ಮವೇ ಹೆಚ್ಚಿದಾಗ ಕಲಿಯುಗ ಪ್ರವರ್ತಿಸುವುದು. ''ಅದರಿಂದೇನು?" ಎಂದು ಕೇಳುವೆಯಾ ? ರಾವಣ, ಹಿಂದೆ ನೀನು ದಿಗ್ವಿಜಯಾರ್ಥವಾಗಿ ಆಯಾಲೋಕಗಳೆಲ್ಲವನ್ನೂ ಸುತ್ತುತ್ತಿರುವಾಗ ಪರದಾರಪರಿಗ್ರಹಾದಿಗಳಿಂದ ಅಧರ್ಮವನ್ನೇ ಹಿಡಿದು, ಮೇಲಾದ ಧರ್ಮವನ್ನು ತ್ಯಜಿಸಿರುವೆ. ಅಧರ್ಮಪ್ರವರ್ತಕವಾದ ಕಲಿಗಿಂತಲೂ, ಧರ್ಮಪ್ರವರ್ತಕವಾದ ಕೃತವು ಬಲೀಯವಾದುದು. ಅಧರ್ಮದಿಂದ ಕಲಿಪ್ರವೇಶವುಳ್ಳ ನಿನಗಿಂತಲೂ ಧರ್ಮದಿಂದ ಕೃತವನ್ನು ವರ್ತಿಸುವ ರಾಮನೇ ಬಲವಂತನು. ಶುಭಹೇತುವಾದ ಧರ್ಮವನ್ನು ಪ್ರಬಲವಾಗಿ ಹಿಡಿದಿರುವ ರಾಮನೇ ಮೊದಲಾದ ನಮ್ಮ ಶತ್ರುಗಳು, ಅಶುಭಹೇತುವಾದ ಅಧರ್ಮದಲ್ಲಿ ಹೆಚ್ಚಾಗಿ ಪ್ರವರ್ತಿಸಿರುವ ನಮಗಿಂತಲೂ ಬಲಾಢ್ಯರು. ಆದರೆ ನೀನು ಧರ್ಮವನ್ನು ಮೆಟ್ಟಿ ಅಧರ್ಮವೇ ವೃದ್ಧಿಹೊಂದಿರುವಾಗ ಧರ್ಮಾವಲಂಬಿಗಳಾದ ಆ ದೇವತೆಗಳಲ್ಲಿಯೂ ಆ ಧರ್ಮದ ಬಲವು ವ್ಯರ್ಥವಾಗಿಹೋಗಿರಬೇಕಲ್ಲವೆ ? ಎಂದೆಣಿಸಬಹುದು. ಹಾಗಲ್ಲ ! ಅಧರ್ಮದ ಕಾರ್ಯವು ಅತಿವಿಚಿತ್ರವಾದುದು ! ಅಧರ್ಮವೆಂಬುದು ತನಗೆ ಪ್ರಾಬಲ್ಯವು ಹೆಚ್ಚಿಬಂದಹಾಗೆಲ್ಲಾ ಸ್ವಪಕ್ಷದವರನ್ನಡಗಿಸಿ, ಪರಪಕ್ಷವನ್ನು ಹೆಚ್ಚಿಸುತ್ತಿರುವುದು. ನೀನು ಹಿಂದು ಮುಂದು ನೋಡದೆ ಆ ಅಧರ್ಮವನ್ನು ಹೆಚ್ಚಿಸಿಕೊಂಡಿರುವೆ. ನಮ್ಮ ಅಧರ್ಮವು ನಮ್ಮನ್ನು ನುಂಗುತ್ತಿರುವುದಲ್ಲದೆ ದೇವತೆಗಳಿಗೆ ಅನುಕೂಲವಾಗಿ ಅವರ ಪಕ್ಷವನ್ನು ವೃದ್ಧಿಹೊಂದಿಸುತ್ತಲೂ ಇರುವುದು. ಹೀಗೆ ನಮ್ಮ ಅಧರ್ಮವು ನಮ್ಮನ್ನು ನಾಶಮಾಡುವುದು ಮಾತ್ರವೇ ಅಲ್ಲ. ದೇವತೆಗಳ ಬಲಕ್ಕೂ ಉತ್ತೇಜನಕೊಡುತ್ತಿರುವುದು. ನೀನು ವಿಷಯಲೋಲನಾಗಿ ದೇವಾದಿಗಳ ಕನ್ಯೆಯರನ್ನೂ, ಪತ್ನಿಯರನ್ನೂ ಹಿಡಿದು, ಮನಸ್ಸಿಗೆ ತೋರಿದಂತೆ ಎಷ್ಟೋ ಅಕೃತ್ಯಗಳನ್ನು ನಡೆಸಿಬಿಟ್ಟಿರುವೆ. ಇದರಿಂದ ಅಗ್ನಿ ಸಮಾನರಾದ ಮಹರ್ಷಿಗಳೆಲ್ಲರಿಗೂ ನಿನ್ನಲ್ಲಿ ಮನಸ್ತಾಪವು ಹುಟ್ಟಿರುವುದು. ಅವರ ಮಹಿಮೆಯಾದರೋ ಅಗ್ನಿಜ್ವಾಲೆಯಂತೆ ಅತಿ ತೀಕ್ಷ್ಣವಾದುದು. ಎಂತಹವರಿಗೂ ಅವರನ್ನಡಗಿಸುವುದು ಸಾಧ್ಯವಲ್ಲ. ಹೀಗೆ ನಿನ್ನಿಂದ ಮನಸ್ತಾಪಹೊಂದಿದ ಪರಿ

ಶುದ್ಧಾತ್ಮರಾದ ಆ ಮಹರ್ಷಿಗಳು ಧರ್ಮಾಭಿವೃದ್ಧಿಯಲ್ಲಿಯೇ ಆಸಕ್ತರಾದುದರಿಂದ, ತಪಸ್ಸುಗಳಿಂದಲೂ, ಅಗ್ನಿಷ್ಟೋಮವೇ ಮೊದಲಾದ ಉತ್ತಮ ಯಜ್ಞಗಳಿಂದಲೂ, ವೇದಾಧ್ಯಯನಗಳಿಂದಲೂ ಧರ್ಮವನ್ನು ಗಳಿಸುತ್ತಿರುವರು. ನಮ್ಮಂತಹ ರಾಕ್ಷಸರನ್ನು ಪರಾಭವಿಸಿ ಅಧೋಗತಿಗಿಳಿಸಬೇಕೆಂದೇ ವೇದಘೋಷಗಳನ್ನುಚ್ಚರಿಸುವರು. ಈ ಮಹರ್ಷಿಗಳ ಧರ್ಮಾಚರಣೆಗಳಿಂದ ಗ್ರೀಷ್ಮಕಾಲದ ಮೇಘಗಳಂತೆ ರಾಕ್ಷಸರೆಲ್ಲರೂ ದಿಕ್ಕುಗೆಟ್ಟು ಭಯದಿಂದ ಪಲಾಯನಮಾಡುತ್ತಿರುವರು. ಅಗ್ನಿಕಲ್ಪರಾದ ಆ ಮಹರ್ಷಿಗಳು ಹೋಮಮಾಡುವಾಗ, ಅವರ ಅಗ್ನಿಹೋತ್ರದಿಂದ ಹೊರಟ ಹೊಗೆಯೇ ಹತ್ತುದಿಕ್ಕುಗಳನ್ನೂ ವ್ಯಾಪಿಸಿ ರಾಕ್ಷಸರ ತೇಜಸ್ಸನ್ನು ನಂದಿಸುತ್ತಿರುವುದು. ಆಯಾ ಪುಣ್ಯದೇಶಗಳಲ್ಲಿ ಮಹರ್ಷಿಗಳು ದೃಢನಿಯಮವನ್ನು ಹಿಡಿದು ನಡೆಸುವ ತೀವ್ರ ತಪಸ್ಸುಗಳಿಂದ ಇತ್ತಲಾಗಿ ನಮ್ಮ ರಾಕ್ಷಸರೆಲ್ಲರೂ ಬಹಳವಾಗಿ ತಪಿಸುತ್ತಿರುವರು. ಹೀಗೆ ನಮ್ಮಲ್ಲಿರುವ ಅಧರ್ಮದಿಂದ ಋಷಿಗಳಿಗುಂಟಾದ ಮನಸ್ಸಂಕಟವೇ ನಮಗೆ ಹಾನಿಯನ್ನೂ, ದೇವಾದಿಗಳಿಗೆ ಬಲವನ್ನೂ ಹೆಚ್ಚಿಸುತ್ತಿರುವುದು. ವತ್ಸ ರಾವಣಾ ! ದೇವತೆಗಳು, ದಾನವರು ಯಕ್ಷರು ಮುಂತಾಗಿ ಯಾವ ದೇವಜಾತಿಯವರಿಂದಲೂ ಮರಣವಿಲ್ಲದಹಾಗೆ ನೀನು ವರವನ್ನು ಪಡೆದು ಬಂದಿರುವುದೇನೋ ನಿಜವು. ಆದರೇನು ! ಈಗ ಬಂದಿರುವವರೊಬ್ಬರೂ ಆ ಜಾತಿಗೆ ಸೇರಿದವರಲ್ಲ. ಬಲಾಢ್ಯರಾದ ಮತ್ತು ಪರಾಕ್ರಮಶಾಲಿಗಳಾದ ಮನುಷ್ಯರೂ, ಕಪಿಗಳೂ, ಕರಡಿಗಳೂ, ಸಿಂಗಳೀಕಗಳೂ, ಸೇರಿ ದೊಡ್ಡ ಸೈನ್ಯಗಳೊಡನೆ ನಮ್ಮ ಲಂಕಾದ್ವಾರದಲ್ಲಿ ನಿಂತು ಗರ್ಜಿಸುತ್ತಿರುವರು. ನೀನು ಇವರಿಂದ ಸಾವಿಲ್ಲದಂತೆ ವರವನ್ನು ಕೇಳಿದವನಲ್ಲವಷ್ಟೆ ? ಆದುದರಿಂದ ಇವರೇ ನಿನಗೆ ಮೃತ್ಯುಗಳಾಗಬಹುದಲ್ಲವೆ ? ಈ ಶತ್ರುಗಳ ಸಂಗತಿಯೂ ಹಾಗಿರಲಿ, ಅದೋ ಅಲ್ಲಲ್ಲಿ ಕಾಣುವ ಮಹೋತ್ಪಾತಗಳನ್ನು ನೋಡಿದೆಯಾ ? ಅವು ದಿವ್ಯಾಂತರಿಕ್ಷಭೌಮಗಳೆಂಬ ನಾನಾಭೇದವುಳ್ಳವುಗಳಾಗಿ, ಅವುಗಳಲ್ಲಿಯೂ ಇನ್ನೂ ಅನೇಕವಾದ ಅಂತರಾಳಿಕ ಪ್ರಭೇದಗಳನ್ನು ಹೊಂದಿ, ಮಹಾಭಯಂಕರವಾಗಿ ಕಾಣುತ್ತಿರುವುವು ನೋಡು ! ಇದು ನಮ್ಮ ಕಡೆಯ ಸಮಸ್ತ ರಾಕ್ಷಸರಿಗೂ ನಾಶಸೂಚಕವೆಂದೇ ನನಗೆ ತೋರಿರುವುದು. ಭಯಂಕರ ಸ್ವರೂಪವುಳ್ಳ ಮೇಘಗಳು ಆಕಾಶದಲ್ಲಿ ಸೇರಿ ಪರುಷಧ್ವನಿಯಿಂದ ಗರ್ಜಿಸುತ್ತ ನಮ್ಮ ಲಂಕೆಯ ನಾನಾ ಭಾಗಗಳಲ್ಲಿಯೂ ಬಿಸಿಬಿಸಿಯಾದ ರಕ್ತದ ಮಳೆಯನ್ನು ಕರೆಯುತ್ತಿರುವುವು.

ನೋಡು ! ನಮ್ಮಲ್ಲಿರುವ ಆನೆ, ಕುದುರೆ, ಮೊದಲಾದ ವಾಹನಗಳೆಲ್ಲವೂ ಕಣ್ಣೀರು ಬಿಟ್ಟು ಗೋಳಿಡುತ್ತಿರುವುವು. ಧ್ವಜಗಳೆಲ್ಲವೂ ಮೊದಲಿನಂತೆ ಪ್ರಕಾಶವಿಶಿಷ್ಟಗಳಾಗಿಲ್ಲದೆ, ಕೊಳೆ ಮುಚ್ಚಿ ಬಣ್ಣಗೆಟ್ಟಿರುವುವು. ನರಿಗಳು, ಹದ್ದು, ಮೊದಲಾದ ಅನೇಕ ಕ್ರೂರಮೃಗಗಳು ಲಂಕೆಯ ಸುತ್ತಲೂ ಸೇರಿ ಭಯಂಕರವಾಗಿ ಅರಚುತ್ತಿರುವುವಲ್ಲದೆ. ಆಗಾಗ ಗುಂಪುಗುಂಪಾಗಿ ನಮ್ಮ ಲಂಕೆಯೊಳಗೂ ಪ್ರವೇಶಿಸುತ್ತಿರುವುವು. ಆಗಾಗ ನಮಗೆ ಸ್ವಪ್ನದಲ್ಲಿ ಕರೀಮೋರೆಯ ಕೆಲವು ಹೆಂಗಸರು ಮುಂದೆ ನಿಂತು, ಬಿಳುಪಾದ ಹಲ್ಲುಗಳನ್ನು ತೆರೆದು ಪಕಪಕನೆ ನಗುವಂತೆಯೂ, ದುರ್ಭಾಷೆಗಳಿಂದ ನಮ್ಮನ್ನು ಹೀಗಳೆಯುವಂತೆಯೂ, ನಮ್ಮ ಮನೆಯ ಧನಧಾನ್ಯಾದಿಗಳೆಲ್ಲವನ್ನೂ ಕದ್ದೋಡಿದಂತೆಯೂ ಕಾಣಿಸಿಕೊಳ್ಳುವರು. ಇಲ್ಲಿನ ಮನೆಮನೆಗಳಲ್ಲಿ ಬಲಿಕರ್ಮಕ್ಕಾಗಿ ಸಿದ್ಧಪಡಿಸಲ್ಪಟ್ಟ ಹವಿಸ್ಸುಗಳನ್ನು ನಾಯಿಗಳು ತಿಂದು ಹೋಗುತ್ತಿರುವುವು. ಹಸುಗಳ ಗರ್ಭದಿಂದ ಕತ್ತೆಯ ಮರಿಗಳು ಹುಟ್ಟುತ್ತಿರುವುವು. ಹೆಗ್ಗಣಗಳು ಮುಂಗುಸಿಗಳೊಡನೆ ಓಲಾಡುತ್ತಿರುವುವು. ಬೆಕ್ಕುಗಳು ಹುಲಿಗಳೊಡನೆಯೂ, ಹಂದಿಗಳು ನಾಯಿಗಳೊಡನೆಯೂ ಸೇರಿ ಕ್ರೀಡಿಸುತ್ತಿರುವುವು. ಅಲ್ಲಲ್ಲಿ ಕಿನ್ನರರು ರಾಕ್ಷಸರೊಡನೆಯೂ ರಾಕ್ಷಸರು ಉತ್ಪಾತಸೂಚಕವಾಗಿ ಜನಸಿದ ಮನುಷ್ಯರೊಡನೆಯೂ ಕಲೆತಿರುವರು. ಬಿಳುಪು ಮತ್ತು ಕೆಂಪು ಬಣ್ಣಗಳಿಂದ ಕಲೆತ ಪಾದವುಳ್ಳ ಪಾರಿವಾಳಗಳು, ಕಾಲಪ್ರೇರಿತಗಳಾಗಿ ರಾಕ್ಷಸರ ವಿನಾಶವನ್ನು ಸೂಚಿಸುತ್ತ ಅಲ್ಲಲ್ಲಿ ತಿರುಗುತ್ತಿರುವುವು. ಮನೆಗಳಲ್ಲಿ ಮುದ್ದು ಮಾತುಗಳನ್ನು ಕಲಿಸಿ ಸಾಕಿದ ಶುಕಪಿಕಾದಿಪಕ್ಷಿಗಳೆಲ್ಲವೂ ಈಗ “ ವೀಚೀ , ಕೂಚೀ ” ಎಂದು ಕ್ರೂರವಾಗಿ ಕೂಗುತ್ತಿರುವುವು. ಅಲ್ಲಲ್ಲಿ ಮೃಗಗಳು ಪಕ್ಷಿಗಳು ಮೊದಲಾದ ಜಂತುಗಳು ಒಂದಕ್ಕೊಂದು ಜಗಳವಾಡಿ ಸೋತು ಪಲಾಯನಮಾಡಿದರೂ, ತಿರುಗಿ ಗುಂಪುಗೂಡಿ ಬಂದು, ಕಲಹಕ್ಕಾಗಿ ಶತ್ರುಗಳ ಮೇಲೆ ನುಗ್ಗುತ್ತಿರುವುವು. ಮತ್ತು ಆಗಾಗ ಸೂರ್ಯನಿಗಿದಿರಾಗಿ ನಿಂತು ಆರ್ತಸ್ವರದಿಂದ ಗೋಳಿಡುತ್ತಿರುವುವು. ಭಯಂಕರ ಸ್ವರೂಪನಾಗಿಯೂ, ಅಂಗಹೀನನಾಗಿಯೂ, ಬೋಳು ತಲೆಯುಳ್ಳವನಾಗಿಯೂ, ಪರುಷ ವರ್ಣವುಳ್ಳವನಾಗಿಯೂ ಇರುವ ಕೃಷ್ಣಪಿಂಗಳನೆಂಬ ಮೃತ್ಯುವು, ಇಲ್ಲಿನ ಸಮಸ್ತ ರಾಕ್ಷಸರ ಮನೆಗಳಿಗೂ ಆಗಾಗ ನುಗ್ಗಿ ನೋಡಿ ಬರುತ್ತಿರುವನು. ಇವೇ ಮೊದಲಾದ ಇನ್ನೂ ಅನೇಕ ದುರ್ನಿಮಿತ್ತಗಳು ಅಲ್ಲಲ್ಲಿ ಕಾಣಿಸುತ್ತಿರುವುವು. (ರಾವಣಾ ! ಇದರಿಂದ ಈಗ ಬಂದಿರುವ ಆ ರಾಮನು

ಮನುಷ್ಯರೂಪವನ್ನು ಧರಿಸಿದ ವಿಷ್ಣುದೇವನೆಂದೇ ನನಗೆ ತೋರುವುದು. ಅಂತಹ ಮಹಾ ಸಮುದ್ರದಲ್ಲಿಯೇ ಹಾಗೆ ಸೇತುವನ್ನು ಕಟ್ಟಿದ ದೃಢಪರಾಕ್ರಮಿಯಾದ ಆ ರಾಮನು ಎಷ್ಟು ಮಾತ್ರಕ್ಕೂ ಮನುಷ್ಯನಾಗಿರಲಾರನು. ಆದುದರಿಂದ ವತ್ಸ ರಾವಣಾ ! ನರೇಂದ್ರನಾದ ಆ ರಾಮನೊಡನೆ ಸಂಧಿಯನ್ನು ಮಾಡು.) ಇವೆಲ್ಲ ವನ್ನೂ ಯೋಚಿಸಿ, ಮುಂದಿನ ಕಾರ್ಯಗಳನ್ನೂ ಚೆನ್ನಾಗಿ ನಿಶ್ಚಯಿಸಿಕೊಂಡು, ಹೇಗೆ ಯುಕ್ತವೋ ಹಾಗೆ ನಡೆಸು" ಎಂದನು. ಉತ್ತಮೋತ್ತಮವಾದ ಪೌರುಷ ವುಳ್ಳ ಆ ಮಾಲ್ಯವಂತನು, ಸಭೆಯಲ್ಲಿ ಎಲ್ಲರೂ ಕೇಳುವಂತೆ ಈ ಮಾತುಗಳನ್ನಾಡಿ ರಾವಣನ ಇಂಗಿತ ಕಾರ್ಯಗಳನ್ನೂ ಚೆನ್ನಾಗಿ ನೋಡಿ, ಹೇಗೂ ಅವನು ತನ್ನ ದಾರಿಗೆ ಬಾರದುದನ್ನು ತಿಳಿದು ಸುಮ್ಮನಾದನು.

ಇಲ್ಲಿಗೆ ಮೂವತ್ತೈದನೆಯ ಸರ್ಗವು.

{ ರಾವಣನು ಮಾಲ್ಯವಂತನನ್ನು ನಿಂದಿಸಿ, ತನ್ನ ಪಟ್ಟಣದ ರಕ್ಷಣೆಗಾಗಿ ಸೇನೆಗಳನ್ನು ನಿಲ್ಲಿಸಿದುದು. }

ದುಷ್ಟಾತ್ಮನಾದ ರಾವಣನು ಮೃತ್ಯುವಶನಾಗಿದ್ದುದರಿಂದ, ಮಾಲ್ಯವಂತನು ಹೇಳಿದ ಹಿತವಾಕ್ಯಗಳನ್ನು ಕೇಳಿ ಸಹಿಸಲಾರದೆ ಹೋದನು. ಅವನಿಗೆ ಮಿತಿ ಮೀರಿದ ಕೋಪಾವೇಶವೂ ಹುಟ್ಟಿತು. ಹೀಗೆ ಕೋಪಪರಿವಶನಾಗಿ ಆತನು ಹಣೆ ಯಲ್ಲಿ ಹುಬ್ಬನ್ನು ಗಂಟಿಕ್ಕಿ ಕಣ್ಣಾಲೆಗಳನ್ನು ತಿರುಗಿಸುತ್ತಾ ಮಾಲ್ಯವಂತನನ್ನು ಕುರಿತು " ತಾತಾ ! ಸಾಕು ಸುಮ್ಮನಿರು ! ನೀನು ಶತ್ರುಪಕ್ಷದವನೆಂದೇ ತೋರು ವುದು. ಆದುದರಿಂದಲೇ ಅವರಿಗನುಕೂಲನಾಗಿ ಮಾತಾಡುತ್ತಿರುವೆ. ಹಿತವನ್ನು ಹೇಳುವೆನೆಂಬ ನೆವದಿಂದ ನನಗೆ ಅಹಿತವಾದ ಪರುಷವಾಕ್ಯವನ್ನೇ ಹೇಳುತ್ತಿರುವೆ ಯಲ್ಲಾ ! ಈ ನಿನ್ನ ಮಾತೊಂದೂ ನನ್ನ ಕಿವಿಗೇರಲಾರದು. ಆ ರಾಮನೆಂಬ ವನು ಕೇವಲ ಮನುಷ್ಯಮಾತ್ರನಾದುದರಿಂದ ಜಾತಿಯಿಂದಲೂ ದುರ್ಬಲನು. ಇದರ ಮೇಲೆ ಈಗ ಬಹಳವಾದ ಕಷ್ಟಕ್ಕೂ ಸಿಕ್ಕಿಬಿದ್ದು ನರಳುತ್ತಿರುವುದರಿಂದ, ಸ್ವಭಾವದಿಂದಲೂ ಬಲಹೀನನು. ಬೇರೆ ಮನುಷ್ಯರ ಸಹಾಯವೂ ಇಲ್ಲದೆ ಒಂಟಿಯಾ ಗಿರುವನು ಕೇವಲ ಚಪಲ ಸ್ವಭಾವವುಳ್ಳ ಕೆಲವು ಕಪಿಗಳನ್ನು ತನ್ನ ಸಹಾಯಕ್ಕಾಗಿ

ಆಶ್ರಯಿಸಿಕೊಂಡಿರುವನು. ತಂದೆಯಿಂದ ಕಾಡಿಗಟ್ಟಲ್ಪಟ್ಟು, ರಾಜ್ಯ ಭ್ರಷ್ಟನಾಗಿ ಕಾಡುಕಾಡಾಗಿ ಸುತ್ತುತ್ತಿರುವನು. ಯಾವಭಾಗದಲ್ಲಿ ನೋಡಿದರೂ ಅವನು ದುರ್ಬಲನಾಗಿರುವನು. ಇಂತಹ ರಾಮನನ್ನು ಸಮರ್ಥನೆಂದು ಹೇಳುವೆ ಯಲ್ಲಾ! ಇದಕ್ಕೆ ಕಾರಣವೇನು ? ನನ್ನ ಮಹಾ ವೈಭವಗಳನ್ನು ಕಣ್ಣಿದಿರಿಗೆ ನೋಡುತ್ತಿರುವಾಗಲೂ, ನನ್ನ ಸಾಮರ್ಥ್ಯದಲ್ಲಿ ನಿನಗೆ ನಂಬಿಕೆಯಿಲ್ಲದೆ ಹೋಯಿತೆ ? ರಾಕ್ಷಸರಿಗೆಲ್ಲಾ ರಾಜಾಧಿರಾಜನೆನಿಸಿಕೊಂಡಿರುವೆನು. ನನ್ನನ್ನು ನೋಡಿದಮಾತ್ರಕ್ಕೆ ಸಮಸ್ತದೇವತೆಗಳೂ ಭಯಪಟ್ಟು ನಡುಗುವರು ! ಹೇಗೆ ನೋಡಿದರೂ ಸಮಸ್ತಭಾಗಗಳಲ್ಲಿಯೂ ನನ್ನ ಪರಾಕ್ರಮವು ಮೇಲೆನಿಸಿರುವುದು. ಇಂತಹ ನನ್ನನ್ನು ಆ ರಾಮನಿಗಿಂತಲೂ ಹೀನನೆಂದೆಣಿಸುವೆಯಾ ? ನಿನಗೆ ಈ ದುರಭಿಪ್ರಾಯವು ಹುಟ್ಟುವುದಕ್ಕೆ ನಿಜವಾದ ಕಾರಣವೇನಿರಬಹುದು ? ನಿನ್ನ ಸಜಾತೀಯರಲ್ಲಿ ನನ್ನಂತಹ ವೀರನೊಬ್ಬನಿರುವನೆಂದು ನಿನಗೆ ಮನಸ್ಸಿನಲ್ಲಿ ಪೂರ್ಣವಾದ ಅಸೂಯೆಯಿರಬಹುದು. ಇಲ್ಲವೇ ಶತ್ರುಗಳಲ್ಲಿ ನಿನಗೆ ಪಕ್ಷಪಾತವು ಹುಟ್ಟಿರಬೇಕು ! ಅದೂ ಇಲ್ಲದಿದ್ದರೆ, ಆ ನನ್ನ ಶತ್ರುಗಳೇ ಬಂದು ನಿನ್ನನು ಪ್ರೋತ್ಸಾಹಿಸಿ ನಿನ್ನ ಬುದ್ಧಿಯನ್ನು ಕೆಡಿಸಿರಬೇಕು. ಆದುದರಿಂದಲೇ ನೀನು ನನ್ನನ್ನು ಕುರಿತು ಹೀಗೆ ಪರುಷವಾಕ್ಯಗಳನ್ನಾಡಿರಬಹುದೆಂದು ನನಗೆ ಸಂದೇಹವು ತೋರಿರುವುದು. ಶತ್ರುಗಳ ಪ್ರೋತ್ಸಾಹವಿಲ್ಲದಿದ್ದ ಪಕ್ಷದಲ್ಲಿ, ಪಂಡಿತನಾಗಿಯೂ ಶಾಸ್ತ್ರತತ್ವಗಳನ್ನೇ ತಿಳಿದವನಾಗಿಯೂ ಇರುವ ಯಾವನು ತಾನೇ ಹೀಗೆ ಮಹಾ ಪ್ರಭಾವವುಳ್ಳವನಾಗಿ, ಮಹೋನ್ನತ ಪದವಿಯಲ್ಲಿರುವ ನನ್ನಂತಹ ಪ್ರಭುವಿನ ಮುಂದೆ ಈ ಪರುಷವಾಕ್ಯಗಳನ್ನಾಡುವನು ? ನೀನು ಹೇಳಿದುದು ಯಥಾರ್ಥ ವಾಗಿಯೇ ಇರಲಿ! ಹಾಗಿದ್ದರೂ ನಾನು ಕಮಲಪೀಠದಿಂದೆಳೆದುತಂದ ಲಕ್ಷ್ಮಿಯಂತೆ, ಕಾಡಿನಿಂದ ಕದ್ದು ತಂದಿರುವ ಆ ಸೀತೆಯನ್ನು ರಾಮನ ಭಯಕ್ಕಾಗಿ ಈಗ ಹಿಂತಿ ರುಗಿ ಕೊಡುವೆನೆಂದೆಣಿಸುವೆಯಾ ? ದುರ್ಲಭವಾದ ವಸ್ತುವು ಕೈಗೆ ಸಿಕ್ಕಿರುವಾಗ ಅದನ್ನು ಬಿಟ್ಟುಬಿಡುವೆನೆ ? ಇನ್ನು ಹೆಚ್ಚುಮಾತಿನಿಂದೇನು ? ಕೆಲವು ದಿನಗಳ ಲ್ಲಿಯೇ ಆ ರಾಮನು ಲಕ್ಷ್ಮಣ ಸುಗ್ರೀವರೊಡನೆಯೂ ಅನೇಕ ವಾನರ ಸಮೂಹ ಗಳೊಡನೆಯೂ ಇಲ್ಲಿಗೆ ಬಂದು ನನ್ನಿಂದ ಹತನಾಗಿ ಬೀಳುವುದನ್ನು ನಿನ್ನ ಕಣ್ಣಾರೆ ನೀನೇ ನೋಡುವೆ ! ಯಾವನೊಡನೆ ದೇವಜಾತಿಯವರೂ ಕೂಡ ದ್ವಂದ್ವ ಯುದ್ಧಕ್ಕೆ ನಿಲ್ಲಲಾರರೋ, ಅಂತಹ ರಾವಣನು ಈ ಸಾಮಾನ್ಯವಾದ ಮನುಷ್ಯ

ಯುದ್ಧಕ್ಕೆ ಭಯಪಡುವನೆ ? ತಾತಾ, ನಾನು ಹೀಗೆ ಹೇಳುವೆನೆಂದು ಕೋಪಿಸಬೇಡ, ಮನ್ನಿಸು ! ಯಾರ ಪರಾಕ್ರಮವು ಹೇಗಾದರೂ ಇರಲಿ, ನನ್ನ ಸ್ವಭಾವವನ್ನು ತಿಳಿಸುವೆನು ಕೇಳು ! ಇತರರಿಗೆ ನಾನು ಹೆದರುವೆನೆಂಬ ಮಾತು ಸುಳ್ಳು ! ಶತ್ರುಗಳ ಕೈಯಿಂದ ಹತನಾಗಿ ಎರಡು ತುಂಡಾಗಿ ಸೀಳಿಬಿದ್ದರೂ ಹಿಂದಾಗಿ ಬೀಳುವೆನೇ ಹೊರತು ಆಗಲೂ ಮತ್ತೊಬ್ಬರಿಗೆ ನಾನು ಬಗ್ಗುವವನಲ್ಲ. “ ಇದು ನೀತಿ ವಿರುದ್ಧವಲ್ಲವೆ ? ” ಎಂದು ನೀನು ಕೇಳಬಹುದು. ಇದು ನನಗೆ ಸ್ವಭಾವ ಸಿದ್ಧವಾದ ದೋಷವು. ಆ ಸ್ವಭಾವವನ್ನು ಮೀರಿ ಹೋಗುವದಕ್ಕೆ ನನ್ನಿಂದ ಸಾಧ್ಯವಿಲ್ಲ. ತಾತಾ ಅದು ಹಾಗಿರಲಿ, ರಾಮನು ಸಮುದ್ರದಲ್ಲಿ ಸೇತುವನ್ನು ಕಟ್ಟಿದನೆಂಬುದಕ್ಕಾಗಿಯೇ ಅಲ್ಲವೆ ನೀವೆಲ್ಲರೂ ಹೀಗೆ ಭಯಪಡುತ್ತಿರುವಿರಿ ! ಅತ್ಯಲ್ಪವಾದ ಆ ಸಮುದ್ರದಲ್ಲಿ ಅಷ್ಟು ಮಂದಿಯೂ ಸೇರಿ ಮಹಾ ಪ್ರಯತ್ನದಿಂದ ಒಂದು ಸೇತುವನ್ನು ಕಟ್ಟಿದ ಮಾತ್ರಕ್ಕೆ ಅದೊಂದಾಶ್ಚರ್ಯವೇ? ಇದಕ್ಕಾಗಿ ಭಯಪಡಬಾರದು. ತಾತಾ, ಮುಖ್ಯವಾಗಿ ಒಂದೇಮಾತನ್ನು ಹೇಳುವೆನು ಕೇಳು. ಆ ರಾಮನು ವಾನರಸೈನ್ಯಗಳೊಡನೆ ಸಮುದ್ರವನ್ನು ದಾಟಿ ಈ ಕಡೆಗೆ ಬಂದಿರುವನಲ್ಲವೆ ? ಇನ್ನು ಮೇಲೆ ಅವನು ಪ್ರಾಣದೊಡನೆ ಹಿಂತಿರುಗಿ ಬದುಕಿ ಹೋಗಲಾರನು. ಇದು ಸತ್ಯವು. ಬೇಕಾದರೆ ಈ ವಿಷಯದಲ್ಲಿ ಶಪಥಮಾಡಿಕೊಡುವೆನು ” ಎಂದನು. ಹೀಗೆ ಪರುಷವಾಕ್ಯವನ್ನಾಡುತ್ತಿದ್ದ ರಾವಣನನ್ನು ನೋಡಿ, ಆ ಮಾಲ್ಯವಂತನು ರಾವಣನಿಗೆ ಕೋಪವು ಮಿತಿಮೀರಿ ಹೋಯಿತೆಂದು ತಿಳಿದು, ತನ್ನ ಹಿತವಾಕ್ಯವೆಲ್ಲವೂ ವಿಫಲವಾದುದಕ್ಕಾಗಿ ನಾಚಿಕೆಗೊಂಡು, ಪ್ರತಿವಾಕ್ಯವನ್ನಾಡದೆ ಆ ರಾವಣನಿಗೆ ಯಥೋಚಿತವಾಗಿ ತಾನು ಹೇಳಬೇಕಾದ ಜಯಶಬ್ದವನ್ನು ಹೇಳಿ, ಆಶೀರ್ವಾದವನ್ನೂ ಮಾಡಿ ರಾಜಾಜ್ಞೆಯನ್ನು ಪಡೆದು ತನ್ನ ಮನೆಗೆ ಹಿಂತಿರುಗಿಬಿಟ್ಟನು. ಆಮೇಲೆ ರಾವಣನು ಇತ್ತಲಾಗಿ ಇತರ ಮಂತ್ರಿಗಳೊಡನೆ ಕಲೆತು ಮುಂದಿನ ಕಾರ್ಯವನ್ನಾಲೋಚಿಸಿ ನಿಶ್ಚಯಿಸಿಕೊಂಡು, ತನ್ನ ಲಂಕಾನಗರಿಗೆ ಪ್ರಬಲವಾದ ರಕ್ಷಣಕಾರ್ಯಗಳನ್ನು ನಡೆಸಿದನು. ಆ ಲಂಕೆಯ ಪೂರ್ವದಲ್ಲಿ ಕಾವಲಿರುವುದಕ್ಕಾಗಿ ಪ್ರಹಸ್ತನನ್ನು ನಿಯಮಿಸಿದನು. ವೀರ್ಯಶಾಲಿಗಳಾದ ಮಹೋದರ, ಮಹಾಪಾರ್ಶ್ವರೆಂಬ ರಾಕ್ಷಸರಿಬ್ಬರನ್ನೂ ದಕ್ಷಿಣದ್ವಾರದಲ್ಲಿ ಕಾವಲಿರಿಸಿದನು. ಬಾಗಿಲಲ್ಲಿ ಕಾವಲಿರುವುದಕ್ಕಾಗಿ, ಬಹಳ ಮಾಯಾವಿಯಾದ ತನ್ನ ಮಗನಾದ ಇಂದ್ರಜಿತ್ತನ್ನೇ ಕರೆದು ಅನೇಕ ರಾಕ್ಷಸ ಸೈನಿಕರೊಡನೆ ಅಲ್ಲಿರುವಂತೆ ಅವ

ನಿಗೆ ನಿಯಮಿಸಿದನು. ಉತ್ತರ ದ್ವಾರದಲ್ಲಿ ಕಾವಲಿರುವುದಕ್ಕಾಗಿ, ಶುಕಸಾರಣ ರಿಬ್ಬರನ್ನೂ ನಿಯಮಿಸಿ ತಾನೂ ಅಲ್ಲಿಯೇ ಇರುವುದಾಗಿ ಮಂತ್ರಿಗಳಿಗೆ ತಿಳಿಸಿದನು. ಪಟ್ಟಣದ ನಡುವೆ ಗುಲ್ಮಸ್ಥಾನದಲ್ಲಿ ಮಹಾಪರಾಕ್ರಮಶಾಲಿಯಾದ ವಿರೂಪಾಕ್ಷ ನೆಂಬ ರಾಕ್ಷಸನನ್ನು ಅನೇಕ ರಾಕ್ಷಸರೊಡನೆ ಕಾವಲಿರಿಸಿದನು. ಹೀಗೆ ರಾವಣನು ಲಂಕಾಪಟ್ಟಣಕ್ಕೆ ರಕ್ಷಣಕಾರ್ಯಗಳನ್ನು ಮಾಡಿಸಿ ಕಾಲಪ್ರಚೋದಿತನಾದುದರಿಂದ ಇಷ್ಟರಲ್ಲಿಯೇ ತಾನು ಕೃತಾರ್ಥನೆಂದು, ಭಾವಿಸಿ ತನ್ನೊಳಗೆ ತಾನೇ ಸಂತೋಷ ದಿಂದುಬ್ಬುತ್ತಿದ್ದನು. ಆಮೇಲೆ ರಾವಣನು ಲಂಕಾನಗರಿಗೆ ಇನ್ನೂ ಅಲ್ಲಲ್ಲಿ ಸಂಪೂರ್ಣ ವಾದ ರಕ್ಷಣಾ ವಿಧಾನಗಳನ್ನು ನಡೆಸುವುದಕ್ಕಾಗಿ ಮಂತ್ರಿಗಳನ್ನು ನಿಯಮಿಸಿ ಅವರೆಲ್ಲರನ್ನೂ ಕಳಿಸಿಕೊಟ್ಟನು. ಆ ಮಂತ್ರಿಗಳೆಲ್ಲರೂ ಜಯಾಶೀರ್ವಾದಗಳಿಂದ ರಾಜನನ್ನು ಪೂಜಿಸಿ, ತಮ್ಮ ತಮ್ಮ ನಿವಾಸಗಳಿಗೆ ಹೊರಟುಹೋದರು. ಇತ್ತಲಾಗಿ ರಾವಣನೂ ಸರ್ವಸೌಭಾಗ್ಯ ಸಮೃದ್ಧವಾದ ತನ್ನ ಅಂತಃಪುರವನ್ನು ಪ್ರವೇಶಿಸಿದನು.

ಇಲ್ಲಿಗೆ ಮೂವತ್ತಾರನೆಯ ಸರ್ಗವು.

•• — ಇತ್ತಲಾಗಿ ರಾಮನು ವಾನರ ಸೈನ್ಯಕ್ಕೆ ಗುಪ್ತ ವಿಧಾನವನ್ನು ಮಾಡಿದುದು. — ••

ಇಷ್ಟರಲ್ಲಿ ಇತ್ತಲಾಗಿ ರಾಮಲಕ್ಷ್ಮಣರೂ, ವಾನರರಾಜನಾದ ಸುಗ್ರೀವನೂ ವಾಯುಪುತ್ರನಾದ ಹನುಮಂತನೂ, ಭಲ್ಲೂಕರಾಜನಾದ ಜಾಂಬವಂತನೂ, ವಿಭೀಷಣನೂ, ವಾಲಿಪುತ್ರನಾದ ಅಂಗದನೂ, ಶರಭನೂ, ಸುಷೇಣನೂ, ಅವನ ಬಂಧುಜನವೂ, ಮೈಂದದ್ವಿವಿದರೂ, ಗಜ ಗವಾಕ್ಷರೂ, ಕುಮುದನೂ, ನಳನೂ, ಪನಸನೇ ಮೊದಲಾದವರೂ ತಮ್ಮ ತಮ್ಮ ಪರಿವಾರಗಳೊಡನೆ ಶತ್ರುದೇಶವಾದ ಲಂಕಾದ್ವೀಪವನ್ನು ಸಮೀಪಿಸಿದರು: ಅಲ್ಲಿ ಅವರೆಲ್ಲರೂ ಒಂದಾಗಿ ಗುಂಪುಕೂಡಿ, ಒಬ್ಬರಿಗೊಬ್ಬರು "ಮೊದಲು ನಮಗೆ ಹನುಮಂತನು ಹೇಳಿದ ರಾವಣರಕ್ಷಿತ ವಾದ ಲಂಕಾನಗರಿಯು ಆದೋ ಅಲ್ಲಿ ಕಾಣುತ್ತಿರುವುದು. ಈ ಪಟ್ಟಣವು ದೇವಾ ಸುರರಿಗಾಗಲೀ, ಪನ್ನಗರಿಗಾಗಲೀ, ಗಂಧರ್ವರಿಗಾಗಲೀ ಯಾರಿಗೂ ಜಯಿಸು ವುದಕ್ಕೆ ಸಾಧ್ಯವಲ್ಲವೆಂಬುದು ನಿಜವು. ರಾಕ್ಷಸೇಶ್ವರನಾದ ರಾವಣನು ಯಾವಾ ಗಲೂ ಇದರಲ್ಲಿ ಎಡೆಬಿಡದೆ ಸನ್ನಿಹಿತನಾಗಿ ಇದನ್ನು ರಕ್ಷಿಸುತ್ತಿರುವನು. ಹೇಗಾ ದರೂ ನಮಗೆ ತಪ್ಪದೆ ಜಯಸಿದ್ಧಿಯಾಗುವಂತೆ ಈಗಲೇ ಅದಕ್ಕೆ ತಕ್ಕ ಕಾರ್ಯ

ಗಳನ್ನು ನಡೆಸುವುದಕ್ಕಾಗಿ ನಾವೆಲ್ಲರೂ ಚೆನ್ನಾಗಿ ಆಲೋಚಿಸಬೇಕು" ಎಂದು ಮಾತಾಡಿಕೊಳ್ಳುತ್ತಿದ್ದರು. ಇವರು ಹೀಗೆ ಮಾತಾಡುತ್ತಿರುವಾಗಲೇ ವಿಭೀಷಣನು ಅವರನ್ನು ಕುರಿತು ಎಲ್ಲರಿಗೂ ಸ್ಫುಟವಾಗಿ ತಿಳಿಯುವುದಕ್ಕಾಗಿ ಸ್ವದೇಶಭಾಷೆಯ ಪದಗಳಾಗಲೀ, ಗ್ರಾಮ್ಯ ಶಬ್ದಗಳಾಗಲೀ ಇಲ್ಲದೆ, ಶುದ್ಧವಾದ ಸಂಸ್ಕೃತ ಪದ ಗಳಿಂದ ತುಂಬಿದ ಸಾರಯುಕ್ತವಾದ ಮಾತಿನಿಂದ, "ಎಲೆ ವಾನರರೆ! ನನ್ನ ಮಂತ್ರಿ ಗಳಾದ, ಅನಲ, ಶರಭ, ಸಂಪಾತಿ, ಪ್ರಘಸರೆಂಬ ಈ ನಾಲ್ವರು ರಾಕ್ಷಸರು ಈಗಲೇ ಲಂಕಾಪುರಿಗೆ ಹೋಗಿ ಅಲ್ಲಿನ ರಹಸ್ಯಗಳನ್ನು ತಿಳಿದುಬಂದಿರುವರು. ಈ ನಾಲ್ವರೂ ಪಕ್ಷಿರೂಪವನ್ನು ಧರಿಸಿ ಶತ್ರು ಸೈನ್ಯವನ್ನು ಪ್ರವೇಶಿಸಿ, ಅಲ್ಲಿ ರಾಕ್ಷಸರು ನಗರ ರಕ್ಷಣಕ್ಕಾಗಿ ಮಾಡಿರುವ ಏರ್ಪಾಡುಗಳೆಲ್ಲವನ್ನೂ ನೋಡಿಬಂದಿರುವರು. ಲಂಕೆಯಲ್ಲಿ ದುರಾತ್ಮನಾದ ರಾವಣನು ತನ್ನ ಪುರರಕ್ಷಣೆಗಾಗಿ ನಡೆಸಿದ ಸನ್ನಾಹ ಗಳೆಲ್ಲವನ್ನೂ ಇವರು ನನಗೆ ಹೇಳಿರುವರು. ರಾಮಾ! ಅವೆಲ್ಲವನ್ನೂ ಯಥಾಸ್ಥಿತ ವಾಗಿ ನಿನಗೂ ಹೇಳುವೆನು ಕೇಳು. ಪ್ರಹಸ್ತನು ಲಂಕೆಯ ಪೂರ್ವದ್ವಾರದಲ್ಲಿರು ವನು. ಮಹಾವೀರ್ಯಶಾಲಿಗಳಾದ ಮಹೋದರ ಪಾರ್ಶ್ವರಿಬ್ಬರೂ ದಕ್ಷಿಣದ್ವಾರ ವನ್ನು ಕಾಯುತ್ತಿರುವರು. ರಾವಣಪುತ್ರನಾದ ಇಂದ್ರಜಿತ್ತು, ಖಡ್ಗ, ಶೂಲ, ಮುದ್ಗರಾಯುಧಗಳನ್ನು ಧರಿಸಿದ ಅನೇಕ ಪ್ರಧಾನರಾಕ್ಷಸರೊಡನೆಯೂ, ಆಯುಧ ಪಾಣಿಗಳಾದ ಬೇರೆ ಕೆಲವು ಸಾಹಸವೀರರೊಡನೆಯೂ ಸೇರಿ ಪಶ್ಚಿಮದ ಬಾಗಿಲಲ್ಲಿ ಕಾವಲಿರುವನು. ರಾವಣನು ಮನಸ್ಸಿನಲ್ಲಿ ಸ್ವಲ್ಪ ಮಾತ್ರವೂ ತನ್ನ ಧೈರ್ಯವನ್ನು ಬಿಡದೆ, ಆಯುಧಪಾಣಿಗಳಾದ ಅನೇಕ ಸಹಸ್ರ ರಾಕ್ಷಸರನ್ನೂ, ಬಹಳಮಂದಿ ಪ್ರಧಾನ ರಾಕ್ಷಸರನ್ನೂ ತನಗೆ ಸಹಾಯವಾಗಿಟ್ಟುಕೊಂಡು, ತಾನೇ ಆ ಲಂಕೆಯ ಉತ್ತರದ್ವಾರವನ್ನು ರಕ್ಷಿಸುತ್ತಿರುವನು. ವಿರೂಪಾಕ್ಷನೆಂಬವನು ಖಡ್ಗಶೂಲಾ ದ್ಯಾಯುಧಗಳನ್ನೂ, ಮೇಲಾದ ಧನುಸ್ಸನ್ನೂ ಹಿಡಿದಿರುವ ದೊಡ್ಡ ಸೈನ್ಯದೊಡನೆ ಕೆಲವು ಪ್ರಧಾನ ರಾಕ್ಷಸರಿಂದಲೂ ಸೇವಿತನಾಗಿ ಮಧ್ಯಮಗುಲ್ಮದಲ್ಲಿ ಕಾವಲಾಗಿ ಇರುವನು. ಹೀಗೆ ಲಂಕೆಯಲ್ಲಿ ವಿಭಾಗಿಸಿಡಲ್ಪಟ್ಟ ಸೈನ್ಯಗಳೆಲ್ಲವನ್ನೂ ಕೂಡ, ಈ ನನ್ನ ನಾಲ್ವರು ಮಂತ್ರಿಗಳೂ ತಮ್ಮ ಕಣ್ಣಾರೆ ನೋಡಿಬಂದಿರುವರು. ಈಗ ಆ ಲಂಕೆಯಲ್ಲಿ ಸಾವಿರಮಂದಿ ಗಜಯೋಧರು, ಹತ್ತುಸಾವಿರಮಂದಿ ರಥಿಕರು, ಇಪ್ಪತ್ತು ಸಾವಿರ ಮಂದಿ ಅಶ್ವಯೋಧರು ಪೂರ್ಣವಾಗಿ ಒಂದುಕೋಟಿ ರಾಕ್ಷಸ ಪದ್ಧತಿಗಳು, ಹೀಗೆ ಮಹಾಪರಾಕ್ರಮಿಗಳಾಗಿಯೂ, ಬಲಾಢ್ಯರಾಗಿಯೂ, ಯುದ್ಧ

ದಲ್ಲಿ ಕ್ರೂರರಾಗಿಯೂ, ಇರುವ ರಾಕ್ಷಸಯೋಧರು ಎಡೆಬಿಡದೆ ರಾವಣನನ್ನು ಸೇವಿಸುತ್ತ ಅವನಿಗೆ ಅಂತರಂಗಭೂತರಾಗಿರುವರು. ಎಲೆ ರಾಮನೆ! ಈ ರಾಕ್ಷಸರಲ್ಲಿಯೂ ಕೂಡ ಒಬ್ಬೊಬ್ಬನಿಗೆ ಹತ್ತುಲಕ್ಷದಂತೆ ಪರಿಜನರಿರುವರು. ಇವರೆಲ್ಲರೂ ಈಗ ನಮ್ಮೊಡನೆ ಯುದ್ಧಕ್ಕಾಗಿ ಸರ್ವಸನ್ನಾಹಗಳಿಂದ ಬಂದಿರುವರು" ಎಂದನು. ಹೀಗೆ ವಿಭೀಷಣನು ತನಗೆ ತನ್ನ ಮಂತ್ರಿಗಳು ಹೇಳಿದ ಲಂಕಾವೃತ್ತಾಂತವನ್ನೆಲ್ಲವನ್ನೂ ರಾಮನಿಗೆ ತಿಳಿಸಿ, ಆ ಮಂತ್ರಿಗಳನ್ನು ಕರೆದು ರಾಮನಿಗೂ ತೋರಿಸಿ, ಆ ಮಂತ್ರಿಗಳ ಬಾಯಿಂದಲೂ ಮತ್ತೊಮ್ಮೆ ರಾಮನ ಮುಂದೆ ಆ ವೃತ್ತಾಂತಗಳನ್ನು ಕ್ರಮವಾಗಿ ಹೇಳಿಸಿದನು. ಹೀಗೆ ಶ್ರೀಮಂತನಾದ ವಿಭೀಷಣನು ರಾಮನಿಗೆ ಮನಃಪೂರ್ವಕವಾಗಿ ಪ್ರಿಯವನ್ನು ಕೋರುವವನಾಗಿ, ಆತನನ್ನು ಕುರಿತು "ರಾಮಾ, ಪೂರ್ವದಲ್ಲಿ ರಾವಣನು ಕುಬೇರನೊಡನೆ ಯುದ್ಧಕ್ಕಾಗಿ ಹೊರಟಾಗ, ಶತ್ರುಗಳನ್ನಡಗಿಸತಕ್ಕ ಪರಾಕ್ರಮದಿಂದಲೂ, ಯುದ್ಧದಲ್ಲಿ ನಿಶ್ಚಲವಾದ ವೀರ್ಯದಿಂದಲೂ, ಎಣೆಯಿಲ್ಲದ ಪ್ರತಾಪದಿಂದಲೂ, ಧೈರ್ಯದಿಂದಲೂ, ದರ್ಪದಿಂದಲೂ, ತನಗೆ ಸಾಟಿಯೆನಿಸಿಕೊಂಡ, ಇಂತಹ ಅರವತ್ತುಲಕ್ಷ ರಾಕ್ಷಸರನ್ನು ಮಾತ್ರವೇ ತನಗೆ ಬೆಂಬಲವಾಗಿ ಕರೆದುಕೊಂಡು ಹೋಗಿ ಜಯಿಸಿಬಂದನು. ಈಗ ಹೇಳಬೇಕಾದುದೇನು? ಎಲೆ ಮಹಾರಾಜನೆ! ಹೀಗೆ ನಾನು ಶತ್ರುಬಲವನ್ನು ವರ್ಣಿಸುವುದಕ್ಕಾಗಿ ನನ್ನ ಮೇಲೆ ಕೋಪಿಸಬೇಡ! ಆ ಶತ್ರುಗಳನ್ನಡಗಿಸುವುದಕ್ಕಾಗಿ ನಿನಗೆ ರೋಷವನ್ನು ಹುಟ್ಟಿಸಬೇಕೆಂದು ಹೀಗೆ ಹೇಳುತ್ತಿರುವೆನೇ ಹೊರತು ನಿನ್ನನ್ನು ಭಯಪಡಿಸುವುದಕ್ಕಾಗಿ ಹೇಳುವೆನೆಂದೆಣಿಸಬೇಡ! ರಾಮಾ! ನೀನು ನಿನ್ನ ವೀರ್ಯದಿಂದ ದೇವತೆಗಳನ್ನಾದರೂ ನಿಗ್ರಹಿಸುವುದಕ್ಕೆ ಸಮರ್ಥವಾದ ವೀರ್ಯವುಳ್ಳವನು. ನಿನ್ನಲ್ಲಿಯೂ ಅಪರಿಮಿತವಾದ ಸೇನೆಯಿರುವುದು. ಆದುದರಿಂದ ನೀನೂ ಈಗ ಆ ರಾವಣನನ್ನು ಜಯಿಸುವುದಕ್ಕೆ ತಕ್ಕಂತೆ ನಿನ್ನಲ್ಲಿರುವ ಈ ದೊಡ್ಡ ಚತುರಂಗಸೈನ್ಯವನ್ನು (ವಾನರಭಲ್ಲೂಕಾದಿ ಚತುರವಯವಗಳುಳ್ಳ ಈ ನಮ್ಮ ಸೇನೆಯನ್ನು) ನಾಲ್ಕಾಗಿ ಬೇರ್ಪಡಿಸಿ, ವ್ಯೂಹವನ್ನು ಕಟ್ಟಿ, ಆ ರಾವಣನನ್ನು ನಿಗ್ರಹಿಸಬೇಕು" ಎಂದನು. ವಿಭೀಷಣನು ಹೇಳಿದ ಈ ಮಾತನ್ನು ಕೇಳಿ ರಾಮನು ಶತ್ರುನಿಗ್ರಹ ವಿಷಯವಾಗಿ ಆ ವಿಭೀಷಣನನ್ನು ಕುರಿತು "ವಿಭೀಷಣಾ! ಹಾಗೆಯೇ ಸರಿ! ವಾನರ ಶ್ರೇಷ್ಠನಾದ ನೀಲನು ಅನೇಕ ವಾನರ ವೀರರೊಡನೆ ಸೇರಿ ಲಂಕೆಯ ಪೂರ್ವದ್ವಾರಕ್ಕೆ ಹೋಗಿ ಅಲ್ಲಿ ಪ್ರಹಸ್ತನನ್ನಿದಿರಿಸಲಿ. ವಾಲಿಪುತ್ರನಾದ

ಈ ಅಂಗದನು ದೊಡ್ಡ ವಾನರ ಸೈನ್ಯವನ್ನು ಸೇರಿಸಿಕೊಂಡು ದಕ್ಷಿಣದ್ವಾರದಲ್ಲಿರುವ ಮಹೋದರ ಮಹಾಪಾರ್ಶ್ವರೆಂಬ ರಾಕ್ಷಸರಿಬ್ಬರನ್ನೂ ನಿಗ್ರಹಿಸುವುದಕ್ಕೆ ಹೋಗಲಿ. ವಾಯುಪುತ್ರನಾದ ಹನುಮಂತನು ಇನ್ನೂ ಕೆಲವು ಕಪಿಗಳನ್ನು ಸಹಾಯಕ್ಕೆ ಕರೆದುಕೊಂಡು, ಲಂಕೆಯ ಪಶ್ಚಿಮದ ಬಾಗಿಲಿಗೆ ಹೋಗಿ, ಅಲ್ಲಿ ಕಾವಲಿರುವ ಇಂದ್ರಜಿತ್ತಿನೊಡನೆ ಯುದ್ಧಮಾಡಲಿ. ದೈತ್ಯದಾನವರನ್ನೂ ಮಹಾತ್ಮರಾದ ಋಷಿಗಳನ್ನೂ ಗೋಳಾಡಿಸುವುದರಲ್ಲಿಯೇ ನಿತ್ಯಾಸಕ್ತನಾಗಿಯೂ, ಕ್ಷುದ್ರಸ್ವಭಾವವುಳ್ಳವನಾಗಿಯೂ, ಬ್ರಹ್ಮನ ವರದ ಬಲದಿಂದ ಕೊಬ್ಬಿದವನಾಗಿಯೂ, ಪ್ರಜೆಗಳನ್ನು ಗೋಳಾಡಿಸುವುಕ್ಕಾಗಿಯೇ ಸಮಸ್ತ ಲೋಕಗಳನ್ನೂ ತಿರುಗುವವನಾಗಿಯೂ ಇರುವ ಯಾವ ರಾಕ್ಷಸನುಂಟೋ, ಅವನನ್ನು ನಾನೇ ನನ್ನ ಕೈಯಾರೆ ಕೊಲ್ಲಬೇಕೆಂದು ಸಂಕಲ್ಪಿಸಿರುವೆನು. ಆದುದರಿಂದ ನಾನು ನನ್ನ ತಮ್ಮನಾದ ಲಕ್ಷ್ಮಣನೊಡಗೂಡಿ, ರಾವಣನು ಸೇನಾಸಮೇತವಾಗಿ ಕಾವಲಿರುವ ಉತ್ತರದ್ವಾರಕ್ಕೆ ಹೋಗಿ ಅಲ್ಲಿ ಯುದ್ಧಮಾಡುವೆನು. ಬಲಾಢ್ಯನೆನಿಸಿಕೊಂಡ ವಾನರರಾಜನಾದ ಈ ಸುಗ್ರೀವನೂ, ವೀರ್ಯಶಾಲಿಯಾದ ಜಾಂಬವಂತನೂ, ರಾವಣಾನುಜನಾದ ನೀನೂ, ಈ ಮೂವರೂ ಸೇರಿ, ರಾವಣನೂ, ಇಂದ್ರಜಿತ್ತೂ ಕಾವಲಿರುವ ಉತ್ತರ ಪಶ್ಚಿಮದ್ವಾರಗಳಿಗೆ ಮಧ್ಯಮ ಗುಲ್ಮವಾಗಿ ನಿಲ್ಲಿರಿ ! ಈ ವಾನರರು ಈಗಿನಂತೆ ಮುಂದಿನ ಯುದ್ಧಕಾಲದಲ್ಲಿ ಮನುಷ್ಯರೂಪದಿಂದಿರಕೂಡದು. ಯುದ್ಧಕಾಲದಲ್ಲಿ ನಮ್ಮ ವಾನರಸೈನ್ಯವನ್ನು ಗುರುತುಹಿಡಿಯುವುದಕ್ಕಾಗಿ ಕೆಲವು ಪರಸ್ಪರ ಸಂಕೇತಗಳಿರಬೇಕು. ಆ ದೊಡ್ಡ ಗುಂಪಿನಲ್ಲಿ ಇವರು ನಮ್ಮವರೆಂದು ತಿಳಿದುಕೊಳ್ಳುವುದಕ್ಕೆ ತಕ್ಕಂತೆ ಇವರು [1] ವಾನರರಾಗಿಯೇ ಇರಲಿ. ಹಾಗಿದ್ದರೆ ನಾವು ಸುಲಭವಾಗಿ ಕಂಡುಹಿಡಿಯಬಹುದು. ಇದೋ ನಾನೊಬ್ಬನು, ಮಹಾ ತೇಜಸ್ವಿ

1. ವಾನರರು ಕಾಮರೂಪಿಗಳಾದುದರಿಂದ ತಮಗಿಷ್ಟಬಂದ ರೂಪವನ್ನು ತಾಳಿ ಯುದ್ಧಮಾಡುವುದಕ್ಕೆ ತೊಡಗಿದರೆ, ರಾಕ್ಷಸರೂ ಹಾಗೆಯೇ ಕಾಮರೂಪಿಗಳಾಗಿ ಯುದ್ಧಮಾಡುವರು. ಆಗ ಯಾರು ನಮ್ಮವರು, ಯಾರು ಶತ್ರುಗಳೆಂದು ತಿಳಿಯುವುದಕ್ಕೆ ಸಾಧ್ಯವಿಲ್ಲದೆ ಹೋಗುವುದು. ರಾಕ್ಷಸರು ಕಪಿರೂಪವನ್ನು ಕೇವಲ ಹೀನವೆಂದು ತಿಳಿದಿರುವುದರಿಂದ ಅವರು ಕಪಿರೂಪವನ್ನು ತಾಳಲಾರರು. ಇದಕ್ಕಾಗಿ ವಾನರರು ವಾನರರಾಗಿಯೇ ಇರಬೇಕೆಂದು ರಾಮನ ಭಾವವು. ವಿಭೀಷಣಾದಿಗಳು ಜಾತಿಯಲ್ಲಿ ರಾಕ್ಷಸರಾದರೂ ಮನುಷ್ಯರಂತೆಯೇ ಅವಯವವುಳ್ಳವರಾದ್ದರಿಂದ ಅವರು ಮನುಷ್ಯ ವರ್ಗದಲ್ಲಿ ಗಣಿಸಲ್ಪಟ್ಟುದಾಗಿ ಗ್ರಾಹ್ಯವು.

ಯಾದ ಈ ನನ್ನ ತಮ್ಮನಾದ ಲಕ್ಷ್ಮಣನೊಬ್ಬನು, ನನ್ನ ಮಿತ್ರ ವಿಭೀಷಣನಾದ ನೀನೊಬ್ಬನು, ನಿನ್ನ ಕಡೆಯ ನಾಲ್ವರು ಮಂತ್ರಿಗಳು, ಈ ಏಳುಮಂದಿ ಮಾತ್ರವೆ ಮನುಷ್ಯಾಕೃತಿಯಿಂದ ಯುದ್ಧನಡೆಸುವೆವು" ಎಂದನು. ರಾಮನು ಮಹಾ ಧೀಮಂತನಾದುದರಿಂದ, ಕಾರ್ಯಸಿದ್ಧಿಗಾಗಿ ವಿಭೀಷಣನೊಡನೆ ಈ ಮಾತನ್ನು ಹೇಳಿ, ಮುಂದೆ ಸುವೇಲ ಪರ್ವತದ ತಪ್ಪಲು ಬಹಳ ಮನೋಹರವಾಗಿದ್ದುದನ್ನು ಕಂಡನು. ಅದನ್ನೇರಿ ಲಂಕೆಯನ್ನು ನೋಡಬೇಕೆಂದು ಅವನ ಮನಸ್ಸಿಗೆ ನಿಶ್ಚ ಯವು ಹುಟ್ಟಿತು. ರಾಮನು ಅದನ್ನು ನೋಡಿ ಸಂತೋಷಗೊಂಡು. ಆ ಪರ್ವತ ವನ್ನೇ ಮುಚ್ಚುವಂತಿರುವ ದೊಡ್ಡ ವಾನರಸೇನೆಯಿಂದ ಪರಿವೃತನಾಗಿ, ಶತ್ರು ವಧೋದ್ದೇಶದಿಂದ ಲಂಕೆಗೆ ಸೇರಿದ ಆ ಸುವೇಲ ಪ್ರಾಂತಕ್ಕೆ ಬಂದನು.

ಇಲ್ಲಿಗೆ ಮೂವತ್ತೇಳನೆಯ ಸರ್ಗವು

••— ರಾಮನು ಲಂಕೆಯನ್ನು ನೋಡುವುದಕ್ಕಾಗಿ ಸುವೇಲಾದ್ರಿಯನ್ನೇರಿದುದು ••—

ಲಕ್ಷ್ಮಣನಿಂದನುಸೃತನಾದ ರಾಮನು ಹೀಗೆ ಸುವೇಲ ಪರ್ವತವನ್ನೇರುವುದ ಕ್ಕಾಗಿ ನಿಶ್ಚಯಿಸಿ, ಧರ್ಮಜ್ಞರಾಗಿಯೂ, ತನ್ನಲ್ಲಿ ವಿಶೇಷಭಕ್ತಿಯುಳ್ಳವರಾಗಿಯೂ ಮಂತ್ರಾಲೋಚನೆಗಳನ್ನು ಹೇಳುವುದರಲ್ಲಿ ನಿಪುಣರಾಗಿಯೂ, ಕಾಲೋಚಿತ ಕಾರ್ಯ ಗಳನ್ನು ಬಲ್ಲವರಾಗಿಯೂ ಇದ್ದ ವಿಭೀಷಣ ಸುಗ್ರೀವರಿಬ್ಬರನ್ನೂ ನೋಡಿ, ಉತ್ತಮ ವಾದ ಮಧುರವಾಕ್ಯದಿಂದ "ಎಲೆ ಮಿತ್ರರೆ! ನಾವೆಲ್ಲರೂ ಈಗ ಅನೇಕಧಾತು ಗಳಿಂದ ತುಂಬಿರುವ ಈ ಸುವೇಲವೆಂಬ ಪರ್ವತೋತ್ತಮವನ್ನೇರಿ, ಇಲ್ಲಿಯೇ ಈ ರಾತ್ರಿಯನ್ನು ಕಳೆಯುವುದು ಮೇಲು! ಇಲ್ಲಿಂದ ನಾವು ದುರಾತ್ಮನಾದ ಆ ರಾಕ್ಷಸನಿಗೆ ವಾಸಸ್ಥಾನವಾದ ಲಂಕೆಯನ್ನೂ ನೋಡಬಹುದು. ನೀಚನಾದ ಆ ರಾವಣನು ಧರ್ಮದಲ್ಲಿಯೂ ದೃಷ್ಟಿಯಿಡದೆ, ತನ್ನ ಕುಲಶೀಲಾದಿಗಳನ್ನೂ ಭಾವಿ ಸದೆ, ರಾಕ್ಷಸಯೋಗ್ಯವಾದ ಕೇವಲ ನೀಚಬುದ್ಧಿಯನ್ನೇ ಅವಲಂಬಿಸಿ, ತನ್ನ ಸಾವಿ ಗಾಗಿಯೇ ನನ್ನ ಭಾರ್ಯೆಯನ್ನಪಹರಿಸಿ, ಪರಭಾರ್ಯಾಪಹರಣವೆಂಬ ಈ ನಿಂದಿತ ಕಾರ್ಯವನ್ನು ನಡೆಸಿಬಿಟ್ಟಿರುವನು. ರಾಕ್ಷಸಾಧಮನಾದ ಆ ದುರಾತ್ಮನ ಹೆಸರನ್ನು ಹೇಳಿದಮಾತ್ರಕ್ಕೆ ನನಗೆ ಮಹತ್ತಾದ ರೋಷವು ಉಕ್ಕಿಬರುತ್ತಿರುವುದು. ಆ

ನೀಚನೊಬ್ಬನ ಅಪರಾಧಕ್ಕಾಗಿ ಅಲ್ಲಿನ ರಾಕ್ಷಸರೆಲ್ಲರನ್ನೂ ಕೊಲ್ಲಬೇಕಾಗಿ ಬರುವಂತೆ ತೋರುವುದು. ಕಾಲಪಾಶಕ್ಕೆ ಸಿಕ್ಕಿಬಿದ್ದವನು, ತನ್ನ ವಿನಾಶಕಾಲಕ್ಕೆ ತಕ್ಕಂತೆ ವಿಪರೀತ ಬುದ್ಧಿಯನ್ನು ಹೊಂದಿ ತಾನೊಬ್ಬನೇ ಪಾಪಕಾರ್ಯವನ್ನು ನಡೆಸಿದರೂ, ಆ ನೀಚನ ದೋಷದಿಂದ ಅವನಿಗೆ ಸಂಬಂಧಪಟ್ಟವರೆಲ್ಲರೂ ನಾಶಕ್ಕೆ ಗುರಿಯಾಗಬೇಕಾಗುವುದಲ್ಲವೆ" ಎಂದನು. ರಾಮನು ರಾವಣನಮೇಲೆ ಕೋಪದಿಂದ ಈ ಮಾತುಗಳನ್ನಾಡುತ್ತಾ ಆ ರಾತ್ರಿಯನ್ನು ಕಳೆಯುವುದಕ್ಕಾಗಿ ಮನೋಹರವಾದ ತಪ್ಪಲುಗಳುಳ್ಳ ಆ ಸುವೇಲಪರ್ವತನ್ನಾರೋಹಿಸಿದನು. ಲಕ್ಷ್ಮಣನೂ ಕೂಡ ಮುಂದಿನ ಯುದ್ಧದಲ್ಲಿ ತನ್ನ ಪರಾಕ್ರಮವನ್ನು ತೋರಿಸುವುದರಲ್ಲಿ ಅತ್ಯುತ್ಸಾಹವುಳ್ಳವನಾಗಿ, ಉತ್ತಮವಾದ ಧನುರ್ಬಾಣಗಳನ್ನು ಧರಿಸಿ, ಎಚ್ಚರಿಕೆಯಿಂದ ರಾಮನನ್ನು ಹಿಂಬಾಲಿಸಿ ಹೋದನು. ಹಾಗೆಯೇ ಸುಗ್ರೀವನೂ, ವಿಭೀಷಣನೂ, ತಮ್ಮ ತಮ್ಮ ಮಂತ್ರಿಗಳೊಡನೆ ಲಕ್ಷ್ಮಣನನ್ನು ಹಿಂಬಾಲಿಸಿ ಆ ಪರ್ವತವನ್ನೇರಿದರು. ಇವರ ಹಿಂದೆ ಹನುಮಂತನೂ, ಅಂಗದನೂ, ನೀಲನೂ, ಮೈಂದದ್ವಿವಿದರೂ, ಗಜ ಗವಾಕ್ಷ ಗವಯರೂ, ಶರಭನೂ, ಗಂಧಮಾದನೂ, ಪನಸನೂ, ಕುಮುದನೂ, ಹರನೂ, ರಂಭನೆಂಬ ಯೂಥಪತಿಯೂ, ಜಾಂಬವಂತನೂ, ಸುಷೇಣನೂ, ಮಹಾಧೀಮಂತನಾದ ಋಷಭನೂ, ತೇಜಸ್ವಿಯಾದ ದುರ್ಮುಖನೂ, ಶತಬಲಿ ಮೊದಲಾದ ವೀರರೂ, ಇನ್ನೂ ಪರ್ವತಸಂಚಾರದಲ್ಲಿ ಒಳಕೆಯುಳ್ಳ ವೀರರೂ ಇತರ ವಾನರರೂ ಕ್ರಮವಾಗಿ ವಾಯುವೇಗಕ್ಕೆ ಸಮಾನವಾದ ಗತಿಯಿಂದ ರಾಮನ ಹಿಂದೆ ಆ ಪರ್ವತವನ್ನೇರಿದರು. ಹೀಗೆ ರಾಮಾದಿಗಳೆಲ್ಲರೂ ನಾನಾಕಡೆಯಿಂದಲೂ ಸಾವಿರಾರು ಸಂಖ್ಯೆಯಿಂದ ಗುಂಪುಗುಂಪಾಗಿ ಸುವೇಲಪರ್ವತವನ್ನು ಬಹಳವೇಗದಿಂದ ಹತ್ತಿಹೋಗಿ,[1] ಅಲ್ಲಿ ತಮಗಿದಿರಾಗಿ ತ್ರಿಕೂಟ ಪರ್ವತದ ಶಿಖರದ ಮೇಲೆ ಆಕಾಶದಲ್ಲಿ ತೂಗಾಡುವಂತೆ ತೋರುತ್ತಿದ್ದ ಲಂಕಾಪುರವನ್ನು ಕಂಡರು. ಆ ವಾನರವೀರರೆಲ್ಲರೂ ಸ್ವಲ್ಪಕಾಲದವರೆಗೆ ಅಲ್ಲಿ ನಿಂತು, ಮುಂದೆ ರಮಣೀಯಗಳಾದ ಪುರದ್ವಾರಗಳಿಂದಲೂ, ಮಹೋನ್ನತವಾದ ಪ್ರಾಕಾರಗಳಿಂದಲೂ ಶೋಭಿತವಾಗಿ ರಾಕ್ಷಸರಿಂದ ನಿಬಿಡವಾದ ಲಂಕಾನಗರಿಯನ್ನು ಚೆನ್ನಾಗಿ ಕಣ್ಣಿಟ್ಟು ನೋಡುತ್ತಿ

1. ಸುವೇಲ ಪರ್ವತವು ಲಂಕೆಯಷ್ಟೇ ಉನ್ನತವಾಗಿ ಅದಕ್ಕಿದಿರಾದ ಒಂದು ಬೆಟ್ಟವು. ಲಂಕೆಯನ್ನು ನೋಡುವುದಕ್ಕೆ ರಾಮನು ಇದನ್ನೇರಿ ಪುನಃ ಕೆಳಕ್ಕಿಳಿದುದಾಗಿ ಗ್ರಾಹ್ಯವು.

ದ್ದರು. ಆ ಲಂಕೆಯ ಕೋಟೆಯ ಸುತ್ತಲೂ ಕರೀವರ್ಣವುಳ್ಳ ರಾಕ್ಷಸ ಸೈನಿಕರು ಕರೀಕಲ್ಲುಗಳಿಂದ ಕಟ್ಟಿದ ಬೇರೊಂದು ಪ್ರಾಕಾರವೋ ಎಂಬಂತೆ ಕಾಣುತ್ತಿದ್ದರು. ಈ ರಾಕ್ಷಸರನ್ನು ಕಂಡೊಡನೆ ವಾನರರೆಲ್ಲರೂ ಯುದ್ಧದಲ್ಲಿ ಮಹೋತ್ಸಾಹಗೊಂಡ ವರಾಗಿ, ರಾಮನು ನೋಡುತ್ತಿರುವಹಾಗೆಯೇ ನಾನಾವಿಧವಾದ ಸಿಂಹನಾದ ಗಳನ್ನು ಮಾಡಿದರು. ಇಷ್ಟರಲ್ಲಿ ಸೂರ್ಯನು ಸಂಧ್ಯಾರಾಗದಿಂದ ಕೆಂಪಾದ ಕಿರಣ ಗಳುಳ್ಳವನಾಗಿ ಅಸ್ತಮಿಸಿದನು. [1] ಪೂರ್ಣಚಂದ್ರ ಪ್ರಕಾಶದೊಡನೆ ರಾತ್ರಿಯು ಪ್ರಾರಂಭಿಸಿತು. ಸಮಸ್ತ ವಾನರಸೈನ್ಯಕ್ಕೂ ಮುಖ್ಯನಿಯಾಮಕನಾದ ರಾಮನು ವಿಭೀಷಣನು ತನ್ನನ್ನು ನಾನಾವಿಧದಿಂದ ಅಭಿನಂದಿಸಿ ಪೂಜಿಸುತ್ತಿರಲು, ಲಕ್ಷ್ಮಣ ಸಹಿತನಾಗಿ, ಅನೇಕ ವಾನರಯೂಥಪತಿಗಳಿಂದಲೂ ಪರಿವೃತನಾಗಿ, ಆ ರಾತ್ರಿ ಯಲ್ಲಿ ಆ ಸುವೇಲಪರ್ವತಾಗ್ರದಲ್ಲಿಯೇ ಸುಖವಾಗಿ ವಾಸಿಸುತ್ತಿದ್ದನು.

ಇಲ್ಲಿಗೆ ಮೂವತ್ತೆಂಟನೆಯ ಸರ್ಗವು.

ರಾಮನು ಲಂಕಾನಗರವನ್ನು ನೋಡಿದುದು.

ಹೀಗೆ ವಾನರಶ್ರೇಷ್ಠರೆಲ್ಲರೂ ಆ ರಾತ್ರಿಯೆಲ್ಲವೂ ಸುವೇಲ ಪರ್ವತದಲ್ಲಿದ್ದು ಅಲ್ಲಿಂದಲೇ ಲಂಕೆಯಲ್ಲಿರುವ ಕಾಡುಗಳನ್ನೂ ಉದ್ಯಾನವನಗಳನ್ನೂ ನೋಡಿದರು. ಹಳ್ಳತಿಟ್ಟಿಲ್ಲದೆ ಸಮವಾಗಿಯೂ, ಶಾಂತವಾಗಿಯೂ, ರಮ್ಯವಾಗಿಯೂ, ವಿಸ್ತಾರ ವಾಗಿಯೂ, ಉದ್ದವಾಗಿಯೂ ನೋಡುವುದಕ್ಕೆ ಅಂದವಾಗಿಯೂ ಇದ್ದ ಅಲ್ಲಿನ ತೋಟಗಳ ಸಾಲನ್ನು ನೋಡಿ ಇವರೆಲ್ಲರಿಗೂ ಅತ್ಯಾಶ್ಚರ್ಯವುಂಟಾಯಿತು. ಆ ಲಂಕೆಯ ಯಾವಯಾವ ಕಡೆಗಳನ್ನು ನೋಡಿದರೂ, ಸಂಪಿಗೆ, ಚಿನ್ನ ಸುಗೆ, ಗಂಡುಸುರಗಿ, ಹೊನ್ನ, ಸಾಲೆ, ತಾಳೆ ಮುಂತಾದ ಗಿಡಗಳು ಕಿಕ್ಕಿರಿದು ಬೆಳೆದಿರು ವುವು. ಎಲ್ಲಿ ನೋಡಿದರೂ ಹೊಂಗೆಯ ಕಾಡುಗಳು, ಎಲ್ಲಿ ನೋಡಿದರೂ ನಾಗ ಕೇಸರಿ ಗಿಡಗಳ ಸಾಲುಗಳು. ಇವಲ್ಲದೆ, ಹಿಂತಾಳೆ, ಅರ್ಜುನ, ಕಡವು, ಎಲೆಬಾಳೆ,

---

1. ಇಲ್ಲಿ ಪೂರ್ಣಚಂದ್ರಪ್ರಕಾಶವನ್ನು ವರ್ಣಿಸಿರುವುದರಿಂದ ಹುಣ್ಣಿಮೆಯಲ್ಲಿ ಸುವೇಲಾರೋಹಣವೂ ಮರುದಿನ ಪ್ರಥಮದಲ್ಲಿ ಯುದ್ಧಾರಂಭವೆಂದೂ ಹೇಳುವರು. ಗೋವಿಂದರಾಜೀಯದಲ್ಲಿ “ ಪೂರ್ಣಚಂದ್ರಪ್ರದೀಪಾ ” ಎಂಬ ಪಾಠಾಂತರವನ್ನು ಗ್ರಹಿಸಿ ಪೂರ್ಣಚಂದ್ರನಂತಿರುವ ದೀಪಗಳುಳ್ಳದ್ದೆಂದು ಅರ್ಥಾಂತರವು ಹೇಳಲ್ಪಟ್ಟಿದೆ.

ತಿಲಕ ಕರ್ಣಿಕಾರ, ಪಾದರಿ ಮುಂತಾದ ಹೂಗಿಡಗಳೆಲ್ಲವೂ ಪುಷ್ಪಭರಿತಗಳಾಗಿ, ಪುಷ್ಪಿತಗಳಾದ ಬಗೆಬಗೆಯ ಹೂಬಳ್ಳಿಗಳಿಂದಲೂ ಸುತ್ತಲ್ಪಟ್ಟಿರುವುವು. ಹೀಗೆ ದೇವಯೋಗ್ಯಗಳಾದ ನಾನಾಜಾತಿಯ ಮರಗಳಿಂದ ಆ ಲಂಕೆಯು ಇಂದ್ರನ ಅಮರಾವತಿಯೋ ಎಂಬಂತೆ ಕಾಣುತ್ತಿರುವುದು. ಅಲ್ಲಲ್ಲಿ ಚಿತ್ರವಿಚಿತ್ರಗಳಾದ ಪುಷ್ಪಗಳಿಂದಲೂ, ಕೆಂಪಗೆ ಕೋಮಲಗಳಾದ ಚಿಗುರುಗಳಿಂದಲೂ, ಅಲ್ಲಲ್ಲಿ ಹಸುರಾದ ಹುಲ್ಲುನೆಲಗಳಿಂದಲೂ, ಅಲ್ಲಲ್ಲಿ ಪುಷ್ಪಿಸಿದ ಕದಂಬವೃಕ್ಷಗಳಿಂದಲೂ, ಅಲ್ಲಿನ ತೋಪುಗಳೆಲ್ಲವೂ ವಿಚಿತ್ರಗಳಾಗಿ ಶೋಭಿಸುತ್ತಿರುವುವು. ಆ ವನದಲ್ಲಿರುವ ವೃಕ್ಷಗಳೆಲ್ಲವೂ ಗಂಧಮಾಲ್ಯಾಭರಣಗಳನ್ನು ಧರಿಸಿದ ಮನುಷ್ಯರಂತೆ, ಸುಗಂಧವಿಶಿಷ್ಟಗಳಾಗಿ, ನಾನಾಬಣ್ಣದ ಫಲಪುಷ್ಪಗಳಿಂದ ಶೋಭಿಸುವುವು. ಅಲ್ಲದೆ ಸಮಸ್ತ ಋತುಧರ್ಮಗಳನ್ನೂ ಸರ್ವಕಾಲಗಳಲ್ಲಿಯೂ ಹೊಂದಿ, ಅನೇಕ ಭ್ರಮರಗಳ ಜೀಂಕಾರದಿಂದ ಮನೋಹರವಾದ ಅಲ್ಲಿನ ವನರಾಜಿಯು ಕುಬೇರನ ಚೈತ್ರರಥವೆಂಬ ಉದ್ಯಾನದಂತೆಯೂ, ಇಂದ್ರನ ನಂದನವನದಂತೆಯೂ ಶೋಭಿಸುವುದು. ಆ ವನಗಳ ನಡುವೆ ಪ್ರವಹಿಸಿ ಬರುವ ಗಿರಿನದಿಗಳ ತೀರದಲ್ಲಿ ಸಂತೋಷದಿಂದ ನರ್ತಿಸುವ ನವಿಲುಗಳೂ, ನೀರುಕೋಳಿಗಳೂ, ಕೊಕ್ಕರೆಗಳೂ, ಕೋಗಿಲೆಗಳೂ ವಾನರರ ಕಿವಿಗಿಂಪಾಗುವಂತೆ ಕೂಗುತ್ತಿರುವುವು. ಅಲ್ಲಿನ ವನೋಪವನಗಳಲ್ಲಿ ಯಾವಾಗಲೂ ಬಗೆಬಗೆಯ ಹಕ್ಕಿಗಳು ಮದವೇರಿ ಶಬ್ದಿಸುತ್ತಿರುವುವು. ಯಾವ ಮರಗಳನ್ನು ನೋಡಿದರೂ ಕೋಗಿಲೆಗಳ ಕಿವಿಗಿಂಪಾದ ಕೂಗುಗಳೂ, ಇತರ ಪಕ್ಷಿಗಳ ಕಿಲಕಿಲಧ್ವನಿಗಳೂ, ಭ್ರಮರಗಳ ಮಧುರಗೀತೆಗಳೂ, ಅಲ್ಲಿ ಎಡೆಬಿಡದೆ ಕೇಳಿಬರುತ್ತಿರುವುವು. ಅಲ್ಲಿನ ತೋಟಗಳು ಭ್ರಮರಗಳಿಗೆ ನಿತ್ಯನಿವಾಸವಾಗಿರುವುವು. ಖಂಜನಪಕ್ಷಿಗಳೂ, ಸಾರಸ ಪಕ್ಷಿಗಳೂ, ಅಲ್ಲಿನ ಸರೋವರ ತೀರಗಳಲ್ಲಿ ಸಂತೋಷದಿಂದ ಕೂಗುತ್ತಿರುವುವು. ವಾನರರು ಆ ತೋಟಗಳ ಸೊಬಗನ್ನು ನೋಡಿ, ಪರಮ ಸಂತೋಷದಿಂದ ಪುಳಕಿತಗಾತ್ರರಾಗಿದ್ದರು. ಇವರೆಲ್ಲರೂ ಬಹಳ ಧೈರ್ಯಶಾಲಿಗಳಾಗಿಯೂ, ಕಾಮರೂಪಿಗಳಾಗಿಯೂ ಇದ್ದುದರಿಂದ, ಆ ತೋಟಗಳನ್ನು ಪ್ರವೇಶಿಸುವುದಕ್ಕೆ ತಕ್ಕಂತೆ ಸ್ಥೂಲ ಸೂಕ್ಷ್ಮದೇಹಗಳನ್ನು ಧರಿಸಿ, ನಿರ್ಭಯವಾಗಿ, ಆ ವನಗಳನ್ನೂ ಉಪವನಗಳನ್ನೂ ಪ್ರವೇಶಿಸಿದರು. ಮಹಾತೇಜಸ್ವಿಗಳಾದ ಈ ಕಪಿಗಳು ಅಲ್ಲಿ ಪ್ರವೇಶಿಸುವಾಗಲೇ, ಪುಷ್ಪಸಂಬಂಧದಿಂದ ಸುವಾಸನೆಯುಳ್ಳುದಾಗಿಯೂ, ಘ್ರಾಣೇಂದ್ರಿಯಕ್ಕೆ ಸುಖಕರವಾಗಿಯೂ ಇರುವ ತಂಗಾಳಿಯೂ ಬೀಸ

ಲಾರಂಭಿಸಿತು. ಕೆಲವು ವಾನರ ಯೂಥಪತಿಗಳು ಸುಗ್ರೀವಾಜ್ಞೆಯನ್ನು ಪಡೆದು ತಮ್ಮ ಗುಂಪಿನಿಂದ ಹೊರಟು, ಉತ್ಸಾಹದಿಂದ ಸಿಂಹನಾದ ಮಾಡುತ್ತ, ತಮ್ಮ ಸಿಂಹನಾದ ಧ್ವನಿಗಳಿಂದಲೇ ಅಲ್ಲಲ್ಲಿ ಪಕ್ಷಿಗಳನ್ನೂ, ಮೃಗಗಳನ್ನೂ, ಆನೆಗಳನ್ನೂ ಹೆದರಿಸಿ ಓಡಿಸುತ್ತ, ಲಂಕೆಯನ್ನೇ ನಡುಗಿಸುವಂತೆ ಮಹಾವೇಗದಿಂದ ಆ ಪಟ್ಟಣವನ್ನು ಪ್ರವೇಶಿಸಿದರು. ಅವರ ಕಾಲಿನ ತುಳಿತಕ್ಕೆ ಭೂಮಿಯು ನಡುಗುವಂತಾಯಿತು. ಅವರ ಪದಾಘಾತದಿಂದ ಮೇಲೆ ಹೊರಟ ದೊಡ್ಡ ಧೂಳಿಯು ನಿಮಿಷಮಾತ್ರದಲ್ಲಿ ಆಕಾಶವೆಲ್ಲವನ್ನೂ ತುಂಬಿತು. ಇವರು ನಡೆಯುವಾಗ ಅಲ್ಲಲ್ಲಿದ್ದ ಕರಡಿ, ಸಿಂಹ, ಹಂದಿ, ಎಮ್ಮೆ, ಆನೆ, ಜಿಂಕೆ ಮೊದಲಾದ ಮೃಗಗಳೆಲ್ಲವೂ ಇವರ ಸಿಂಹನಾದಕ್ಕೆ ಬೆದರಿ ದಿಕ್ಕುದಿಕ್ಕಿಗೆ ಓಡುತ್ತಿದ್ದುವು. ಇವರು ಮುಂದೆಮುಂದೆ ಸಾಗಿಬರುತ್ತ, ತ್ರಿಕೂಟ ಪರ್ವತದಲ್ಲಿ ಪ್ರಸಿದ್ಧವಾಗಿದ್ದ ಮಧ್ಯಮ ಶಿಖರವನ್ನು ನೋಡಿದರು. ಆ ಶಿಖರವು ಪಕ್ಕಗಳಲ್ಲಿರುವ ಎರಡು ಶಿಖರಗಳಿಗಿಂತಲೂ ಅತ್ಯುನ್ನತವಾಗಿ, ಎಣೆಯಿಲ್ಲದುದಾಗಿ, ಆಕಾಶಕ್ಕೆ ನಾಟಿದಂತೆ ಕಾಣುತ್ತಿತ್ತು. ಸುತ್ತಲೂ ಹೂಗಳಿಂದ ತುಂಬಿ ಬಂಗಾರದ ಬಣ್ಣವನ್ನು ಹೊಂದಿ, ನೂರು ಯೋಜನದಷ್ಟು ವಿಶಾಲವಾಗಿಯೂ, ನಿರ್ಮಲವಾಗಿಯೂ, ನೇತ್ರಾನಂದಕರವಾಗಿಯೂ ಶೋಭಿಸುತ್ತಿತ್ತು. ಮತ್ತು ಅದು ಅತಿ ರಮಣೀಯವಾಗಿಯೂ, ಕಾಂತಿ ವಿಶಿಷ್ಟವಾಗಿಯೂ, ಇದ್ದುದಲ್ಲದೆ, ಪಕ್ಷಿಗಳಿಗೂ ಮೇಲೆ ಹಾರಿಹೋಗುವುದಕ್ಕೆ ಸಾಧ್ಯವಿಲ್ಲದಷ್ಟು ಮಹೋನ್ನತವಾಗಿ ಕಾಣಿಸುತ್ತಿತ್ತು. ಕೊನೆಗೆ ಅದನ್ನು ಮನಸ್ಸಿನಿಂದಲೂ ಏರುವುದಕ್ಕೆ ಸಾಧ್ಯವಿಲ್ಲದಿರುವಾಗ ಕಾಲುನಡೆಯಿಂದ ನಡೆದು ಹೋಗುವುದೆಂಪರೇನು? ಆ ಶಿಖರದಲ್ಲಿಯೇ ರಾವಣರಕ್ಷಿತವಾದ ಲಂಕೆಯು ನಿರ್ಮಿಸಲ್ಪಟ್ಟಿರುವುದು. ಆ ಲಂಕೆಯಾದರೋ, ನೂರು ಯೋಜನಗಳ ವಿಸ್ತಾರದಿಂದಲೂ, ಮೂವತ್ತು ಯೋಜನಗಳ ಅಗಲದಿಂದಲೂ ಕೂಡಿ, ಬಿಳೀ ಮೇಘಗಳಂತಿರುವ ಉನ್ನತಗಳಾದ ಗೋಪುರಗಳಿಂದ ಕಂಗೊಳಿಸುತ್ತಿರುವುದು. ಅದರ ಸುತ್ತಲೂ ಒಂದು ಸುವರ್ಣಪ್ರಾಕಾರವೂ, ಒಂದು ಬೆಳ್ಳಿಯ ಪ್ರಾಕಾರವೂ ಶೋಭಿಸುತ್ತಿರುವುದು. ಅಲ್ಲಿನ ಉಪ್ಪರಿಗೆಗಳೂ, ರಾಜಗೃಹಗಳೂ, ವರ್ಷಾರಂಭ ಸಮಯದಲ್ಲಿ ತ್ರಿವಿಕ್ರಮ ಮೂರ್ತಿಗೆ ಮಧ್ಯಮಪದವಾದ ಆಕಾಶವನ್ನು ಮೇಘಗಳು ಹೇಗೋ ಹಾಗೆ ಆ ಲಂಕಾನಗರಿಯನ್ನು ತಮ್ಮ ಕಾಂತಿಯಿಂದ ವಿಶೇಷವಾಗಿ ಅಲಂಕರಿಸುತ್ತಿರುವುವು. ಆ ಪಟ್ಟಣದ ನಟ್ಟನಡುವೆ ಚೌಕದಲ್ಲಿ ಸರ್ವೋತ್ತಮವಾದ ಒಂದು ಪ್ರಾಸಾದವುಂಟು. ಆ ಪ್ರಾಸಾದ

ವಾದರೋ, ಸಾವಿರ ಕಂಬಗಳಿಂದಲಂಕೃತವಾಗಿ, ಕೈಲಾಸಶಿಖರದಂತೆ, ಮಹೋನ್ನತ ವಾಗಿ, ಆಕಾಶವನ್ನು ಭೇದಿಸಿಕೊಂಡು ಹೋಗುವಂತೆ ಕಾಣುತ್ತಿರುವುದು. ಆ ಪ್ರಾಸಾದವೇ ರಾಕ್ಷಸೇಂದ್ರನಾದ ರಾವಣನಿಗೆ ಮುಖ್ಯನಿವಾಸವಾಗಿಯೂ, ಆ ಲಂಕಾನಗರಿಗೆಲ್ಲಾ ಒಂದು ಭೂಷಣವಾಗಿಯೂ ಪ್ರಕಾಶಿಸುತ್ತಿರುವುದು. ಪೂರ್ಣ ವಾಗಿ ಒಂದು ಸಹಸ್ರ ರಾಕ್ಷಸಸೈನ್ಯವು ಅದರಲ್ಲಿ ಯಾವಾಗಲೂ ಕಾವಲು ಕಾಯು ತ್ತಿರುವುದು. ಅದರ ಸುತ್ತಲೂ ಅಂದವಾದ ಉದ್ಯಾನಗಳೂ, ಬಗೆಬಗೆಯ ಧಾತು ಗಳಿಂದ ಚಿತ್ರಿತಗಳಾದ ಕ್ರೀಡಾಪರ್ವತಗಳೂ ಶೋಭಿಸುತ್ತಿರುವುವು. ಅಲ್ಲಲ್ಲಿ ಕೃತ್ರಿಮವಾದ ವನಗಳೂ ಆ ವನಗಳಲ್ಲಿ ಕಿವಿಗಿಂಪಾಗಿ ಕೂಗುವ ಪಕ್ಷಿಗಳೂ ತುಂಬಿ ರುವುವು. ಅಲ್ಲಲ್ಲಿ ಬಗೆಬಗೆಯ ಮೃಗಗಳು ಸಂತೋಷದಿಂದ ವಿಹರಿಸುತ್ತಿರುವುವು. ಹೀಗೆ ನಾನಾವಿಧ ವನ ಸಮೂಹಗಳಿಂದ ಶೋಭಿತವಾಗಿ, ಅನೇಕ ರಾಕ್ಷಸರಿಗೆ ನೆಲೆ ಯಾಗಿ, ಸಮಸ್ತ ಪದಾರ್ಥ ಸಮೃದ್ಧಿಯುಳ್ಳದಾಗಿ, ಮಹೋನ್ನತವಾಗಿದ್ದ ಆ ರಾವಣನಗರಿಯನ್ನು, ಇತ್ತಲಾಗಿ ಲಕ್ಷ್ಮಣಾಗ್ರಜನಾದ ರಾಮನೂ, ಅವನ ಕಡೆಯ ವಾನರರೂ ಕಣ್ಣಿಟ್ಟು ನೋಡಿದರು. ವೀರ್ಯವಂತನಾಗಿಯೂ, ದೇವ ಸಮಾನನಾಗಿಯೂ ಇರುವ ರಾಮನಿಗೂ ಕೂಡ, ಅನೇಕ ಗೃಹಸಮೂಹಗಳಿಂದ ನಿಬಿಡವಾದ ಆ ಲಂಕೆಯನ್ನು ನೋಡಿ, ಅತ್ಯಾಶ್ಚರ್ಯವುಂಟಾಯಿತು. ಶ್ರೀರಾಮನು ತನ್ನ ದೊಡ್ಡ ಸೇನೆಯೊಡನೆ ಸುವೇಲ ಪರ್ವತದಮೇಲೆ ನಿಂತು ಉತ್ತಮ ವಸ್ತು ಗಳಿಂದ ಪೂರ್ಣವಾಗಿಯೂ, ನಾನಾವಿಧವಾದ ರಕ್ಷಣಾಕಾರ್ಯಗಳಿಂದ ಕೂಡಿದು ದಾಗಿಯೂ, ಉಪ್ಪರಿಗೆಗಳ ಸಾಲಿನಿಂದ ಶೋಭಿತವಾಗಿಯೂ, ದೊಡ್ಡ ದೊಡ್ಡ ಯಂತ್ರಗಳಿಂದಲೂ, ದೃಢವಾದ ಕವಾಟಗಳಿಂದಲೂ ಸುರಕ್ಷಿತವಾಗಿಯೂ ಇದ್ದ ಆ ಲಂಕೆಯನ್ನು ನೋಡುತ್ತಿದ್ದರು.

ಇಲ್ಲಿಗೆ ಮೂವತ್ತೊಂಭತ್ತನೆಯ ಸರ್ಗವು.

ಸುಗ್ರೀವ ರಾವಣ ದ್ವಂದ್ವ ಯುದ್ಧವು

ಹೀಗೆ ರಾಮನು ಸುಗ್ರೀವನೊಡಗೂಡಿ, ಇತರ ವಾನರಯೂಥಪರಿಂದಲೂ ಪರಿವೇಷ್ಟಿತನಾಗಿ, ಎರಡುಯೋಜನಗಳ ಸುತ್ತಳತೆಯುಳ್ಳ ಆ ಸುವೇಲ ಪರ್ವತದ ಶಿಖರವನ್ನೇರಿ, ಆ ಶಿಖರದ ತುದಿಯಲ್ಲಿಯೇ ಸ್ವಲ್ಪ ಹೊತ್ತಿನವರೆಗೆ ನಿಂತು ಹತ್ತು ದಿಕ್ಕುಗಳನ್ನೂ ತಿರುಗಿನೋಡುತ್ತಿದ್ದನು. ಕೊನೆಗೆ ಅತ್ತಲಾಗಿ ರಮಣೀಯವಾದ

*

ತ್ರಿಕೂಟಪರ್ವತಶಿಖರದಲ್ಲಿ, ವಿಶ್ವಕರ್ಮನಿಂದ ನಿರ್ಮಿಸಿಡಲ್ಪಟ್ಟ, ಅಂದವಾದ ಕೋಟೆಗಳಿಂದ ಕೂಡಿದ ಲಂಕಾಪುರವನ್ನು ನೋಡಿದನು. ಹೀಗೆ ನೋಡುತ್ತಿರುವಾಗ ಆ ಲಂಕೆಯ ಒಂದಾನೊಂದು ಗೋಪುರದ ಶಿಖರದಲ್ಲಿ ರಾಕ್ಷಸೇಶ್ವರನಾದ ರಾವಣನು ದೊಡ್ಡ ರಾಜವೈಭವದೊಡನೆ ಕುಳಿತಿದ್ದುದನ್ನೂ ಕಂಡನು. ಆಗ ರಾವಣನ ಮಹಾ ಅಟ್ಟಹಾಸವನ್ನು ಕೇಳಬೇಕೆ ? ಅವನ ಉಭಯಪಾರ್ಶ್ವಗಳಲ್ಲಿಯೂ ಆಡುತ್ತಿರುವ ಎರಡು ಬಿಳೀ ಚಾಮರಗಳು. ಅವನ ನೆತ್ತಿಯಮೇಲೆ ವಿಜಯಸೂಚಕವಾದ ಶ್ವೇತ ಛತ್ರವು. ಕಾಳಮೇಘದಂತೆ ಕಪ್ಪಾದ ಆತನ ದೇಹದಲ್ಲಿ ರಕ್ತಚಂದನ ಮತ್ತು ರತ್ನಾಭರಣಗಳ ಹೊಳಪು! ಅವನ ನಡುವಿನಲ್ಲಿ ಚಿನ್ನದ ಸರಿಗೆಯ ಪಟ್ಟೆಯ ಮಡಿ! ಅವನ ಎದೆಯಲ್ಲಿ ಐರಾವತದ ಕೊಂಬಿನ ತಿವಿತದಿಂದುಟಾದ ಗಾಯದ ಗುರುತುಗಳು. ಮತ್ತು ಅವನು ಮೊಲದರಕ್ತದಂತೆ ಕೆಂಪಾದ ರಕ್ತವಸ್ತ್ರವನ್ನುಟ್ಟು ಸಂಜೆಗೆಂಪಿನಿಂದ ಕೂಡಿದ ಮೇಘ ಸಮೂಹದಂತೆ ಕಾಣುತ್ತಿದ್ದನು. ಹೀಗೆ ರಾಕ್ಷಸೇಂದ್ರನಾದ ರಾವಣನು ಅತ್ತಲಾಗಿ ಪ್ರಾಸಾದದಮೇಲೆ ರಾಜವೈಭವದಿಂದ ಕುಳಿತಿದ್ದುದನ್ನು ಕಂಡಮಾತ್ರದಲ್ಲಿಯೇ, ಇತ್ತಲಾಗಿ ಸುಗ್ರೀವನಿಗೆ ತಡೆಯಲಾರದಷ್ಟು ಕೋಪವು ಹುಟ್ಟಿತು. ಹೀಗೆ ಕೋಪಗೊಂಡ ಸುಗ್ರೀವನು “ಎಲೆಲಾ! ನನ್ನ ಸ್ವಾಮಿಯಾದ ರಾಮನ ಮುಂದೆ ಈ ದುರಾತ್ಮನಿಗೆ ಇಷ್ಟೊಂದು ದಾಜೋಪಚಾರವೆ ? ಇರಲಿ! ಇವನ ಕೆಚ್ಚನ್ನು ಮುರಿಯುವೆನು” ಎಂದು ನಿಶ್ಚಯಿಸಿ, ತನ್ನ ಮನೋಬಲವನ್ನೂ ಮೀರುವ ವೇಗದಿಂದ, ಸಮಸ್ತರೂ ನೋಡುತ್ತಿರುವ ಹಾಗೆಯೇ, ತಟ್ಟನೆ ಮೇಲೆದ್ದು, ತಾನಿದ್ದ ಪರ್ವತಶಿಖರದಿಂದ ರಾವಣನಿದ್ದ ಗೋಪುರಕ್ಕೆ ಒಂದೇ ನೆಗೆತಕ್ಕೆ ಹಾರಿಬಿಟ್ಟನು. ಅಲ್ಲಿ ಸುಗ್ರೀವನು ಮನಸ್ಸಿನಲ್ಲಿ ಸ್ವಲ್ಪಮಾತ್ರವೂ ಭಯವಿಲ್ಲದೆ, ಆ ರಾವಣನ ಮುಂದೆ ನಿಂತು ಒಂದು ಮುಹೂರ್ತಕಾಲದವರೆಗೆ ರಾವಣನನ್ನೇ ನೋಡುತ್ತಿದ್ದು ಆ ರಾಕ್ಷಸನನ್ನು ಹುಲ್ಲಿಗಿಂತಲೂ ಕಡೆಯಾಗಿ ಭಾವಿಸಿ, ಕ್ರೂರವಾಕ್ಯದಿಂದ ಅವನನ್ನು ಕುರಿತು “ಎಲೆ ರಾಕ್ಷಸಾ! ನಾನು ಯಾರೆಂದು ಬಲ್ಲೆಯಾ? ರಾಮನಿಗೆ ಸ್ನೇಹಿತನು ಮತ್ತು ಆ ಲೋಕನಾಥನಿಗೆ ದಾಸನು! ಆ ರಾಜೇಂದ್ರನ ತೇಜೋಬಲದಿಂದಲೇ ಈಗ ನಾನು ನಿನ್ನನ್ನು ನಿಗ್ರಹಿಸುವೆನು! ಇನ್ನು ನೀನು ನನ್ನ ಕೈಯಿಂದ ತಪ್ಪಿಸಿಕೊಂಡು ಹೋಗಲಾರೆ” ಎಂದನು ಹೀಗೆ ಮಾತಾಡಿ ಮುಗಿಸುವಷ್ಟರಲ್ಲಿಯೇ ಆತನು ತಟ್ಟನೆ ಮೇಲೆ ಹಾರಿ, ಆ ರಾವಣನ ತಲೆಯ ಮೇಲಿದ್ದ ವಿಚಿತ್ರವಾದ ಕಿರೀಟವನ್ನು ಕಿತ್ತೆಸೆದು

ತಾನು ಕೆಳಗಿಳಿದು ನಿಂತನು. ತಿರುಗಿ ಮತ್ತೊಮ್ಮೆ ಮಹಾವೇಗದಿಂದ ಮೇಲೆ ಬೀಳುವುದಕ್ಕಾಗಿ ಬರುತ್ತಿದ್ದ ಆ ಸುಗ್ರೀವನನ್ನು ನೋಡಿ ರಾವಣನು, ಅವನನ್ನು ಕುರಿತು, “ ಓಹೋ ! ಸುಗ್ರೀವಾ! ಇದುವರೆಗೂ ನೀನು ನನಗೆ ಕಣ್ಮರೆಯಾಗಿದ್ದು ದರಿಂದ ನೀನು ಸುಗ್ರೀವನೆನಿಸಿ (ಅಂದವಾದ ಕಂಠವುಳ್ಳವನೆನಿಸಿ) ಕೊಂಡಿರ ಬಹುದು. ಇನ್ನು ನನ್ನ ಕಣ್ಣಿಗೆ ಗೋಚರಿಸಿದೆಯಲ್ಲವೆ! ಈಗಲೇ ನಿನ್ನ ಕೊರ ಳನ್ನು ಮುರಿದು, ನಿನ್ನ ಹೆಸರನ್ನೇ ಅಳಿಸಿಬಿಡುವೆನು ನೋಡು” ಎಂದು ಹೇಳಿ, ಆ ಕ್ಷಣವೇ ತಟ್ಟನೆ ಮೇಲೆದ್ದು ಬಂದು ಎರಡು ಕೈಗಳಿಂದ ಸುಗ್ರೀವನನ್ನು ಹಿಡಿದೆತ್ತಿ ನೆಲಕ್ಕೆ ಬಡಿದನು. ಸುಗ್ರೀವನಾದರೋ ಚೆಂಡಿನಂತೆ ಪುಟಹಾರಿ ಮೇಲಕ್ಕೆ ನೆಗೆದು ತನ್ನ ಕೈಗಳಿಂದ ರಾವಣನನ್ನು ಹಿಡಿದು ನೆಲಕ್ಕೆ ತಳ್ಳಿದನು. ಹೀಗೆ ಅವ ರಿಬ್ಬರೂ ಒಬ್ಬರಿಗೊಬ್ಬರು ಬಲವಾಗಿ ಹಿಡಿದು ತಳ್ಳುತಿದ್ದುದರಿಂದ ಇಬ್ಬರ ದೇಹ ದಲ್ಲಿಯೂ ಬೆವರು ಕಿತ್ತುಕೊಂಡಿತು. ಇಬ್ಬರ ದೇಹವೂ ರಕ್ತಮಯವಾಯಿತು. ಪುಷ್ಪಿತಗಳಾದ ಬೂರುಗದ ಮತ್ತು ಮುಳ್ಳುಮುತ್ತುಗದ ಮರಗಳು ಒಂದಕ್ಕೊಂದು ಸೇರಿ ಬೆಳೆದಂತೆ ಒಬ್ಬರಿಗೊಬ್ಬರು ತಬ್ಬಿಹಿಡಿದು ನಿಶ್ಚೇಷ್ಟರಾಗಿ ನಿಂತಿದ್ದರು. ಮಹಾ ಬಲಾಢ್ಯರಾದ ಆ ವಾನರ ರಾಕ್ಷಸರಾಜರಿಬ್ಬರೂ, ಹೀಗೆ ಮುಹೂರ್ತ ಕಾಲದವರೆಗೆ ನಿಶ್ಚೇಷ್ಟಿತರಾಗಿದ್ದು ಕೊನೆಗೆ ಒಬ್ಬರಿಗೊಬ್ಬರು ಪಟ್ಟು ಬಿಡಿಸಿ ಕೊಂಡು, ಮುಷ್ಟಿಗಳಿಂದಲೂ, ಅಂಗೈಗಳಿಂದಲೂ, ಮೊಳಕೈಗಳಿಂದಲೂ, ಉಗು ರುಗಳಿಂದಲೂ, ಹೊಡೆದಾಡುವುದಕ್ಕೆ ತೊಡಗಿ, ನೋಡುವವರಿಗೆ ಭಯಂಕರವಾಗು ವಂತೆ ದೊಡ್ಡ ಯುದ್ಧವನ್ನಾರಂಭಿಸಿಬಿಟ್ಟರು. ಅವರಿಬ್ಬರು ಮಹೋಗ್ರವೇಗ ದಿಂದ ಬಹು ಹೊತ್ತಿನವರೆಗೆ ಆ ಗೋಪುರದ ವೇದಿಕೆಯ ನಡುವೆ ಮಲ್ಲಯುದ್ಧ ವನ್ನು ನಡೆಸುತ್ತಿದ್ದರು. ಅವರಿಬ್ಬರೂ ಆಗಾಗ ಒಬ್ಬರನ್ನೊಬ್ಬರು ಹಿಡಿದು ಮೇಲ ಕ್ಕೆಸೆಯುವರು. ಒಬ್ಬರಮೇಲೊಬ್ಬರು ಹಾರಿ ಬೀಳುವರು. ಒಬ್ಬರನ್ನೊಬ್ಬರು ಹಿಡಿದೆಳೆಯುವರು. ಒಬ್ಬರನೊಬ್ಬರು ತಲೆಹಿಡಿದು ಬಗ್ಗಿಸುವರು. ಆಗಾಗ ದೂರನಿಂತು, ಮೈಯನ್ನು ಬಗ್ಗಿಸಿ ಮೆಲ್ಲಮೆಲ್ಲಗೆ ಹಿಂದುಮುಂದಾಗಿ ಕಾಲಿಡುತ್ತ, ಸಂಚುನೋಡಿ ಮುಂದೆ ನುಗ್ಗಿ, ಕೈಕಲೆಸುವರು. ಆಗಾಗ ಸಮಯ ನಿರೀಕ್ಷಣೆ ಗಾಗಿ ಗೋಪುರವೇದಿಕೆಯಲ್ಲಿ ಅಲ್ಲಾಡದೆ ನಿಂತು ನೋಡುತ್ತಿರುವರು. ಒಬ್ಬರ ಮೇಲೊಬ್ಬರು ಕೈಹಾಕಿ ಮುಷ್ಟಿಗಳಿಂದ ಬಿಗಿಹಿಡಿದು ತಬ್ಬುವರು. ಹೀಗೆ ಒಬ್ಬರಿ ಗೊಬ್ಬರು ಜಟ್ಟಿಕಾಳಗದಿಂದ ಹೋರಾಡುತ್ತಿದ್ದು, ಕೊನೆಗೆ ಒಬ್ಬರಿಗೊಬ್ಬರು ತಬ್ಬಿ

ಹಿಡಿದಂತೆಯೇ ಕೋಟೆಗೂ, ಕಂದಕಕ್ಕೂ ನಡುವೆ ನೆಲಕ್ಕೆಬಿದ್ದರು. ಹೀಗೆ ಇಬ್ಬರೂ ಕೆಳಗೆ ಬಿದ್ದರೂ ತಮ್ಮ ಲಾಘವಾತಿಶಯದಿಂದ ನೆಲವನ್ನು ಮುಟ್ಟಿದಂತೆಯೇ ಮೇಲೆ ಹಾರಿ, ಮುಹೂರ್ತ ಕಾಲದವರೆಗೆ ಶ್ರಮದಿಂದ ನಿಟ್ಟುಸಿರನ್ನು ಬಿಡುತ್ತಾ ಸುಮ್ಮನಿದ್ದು, ಆಮೇಲೆ ಕೈಕಟ್ಟಿಕೊಂಡು ಮೇಲೆಹಾರಿ, ತಿರುಗಿ ಕೈಕಲೆತು ಮಲ್ಲ ಯುದ್ಧಕ್ಕೆ ತೊಡಗಿದರು. ಆ ಸುಗ್ರೀವರಾವಣರಿಬ್ಬರೂ ಸಮವಾದ ಯುದ್ಧೋ ತ್ಸಾಹವುಳ್ಳವರು. ಸರಿಸಮವಾದ ಯುದ್ಧಾಭ್ಯಾಸವುಳ್ಳವರು. ಸರಿಸಮವಾದ ದೇಹ ಬಲವುಳ್ಳವರು. ಹೀಗಿದ್ದುದರಿಂದ ಅವರಿಬ್ಬರೂ ಕೊಬ್ಬಿದ ಹೆಬ್ಬುಲಿಗಳಂತೆಯೂ, ಆನೆಯ ಮರಿಗಳಂತೆಯೂ ಕಾಣುತ್ತ, ಚಾತುರ್ಯದಿಂದ ಒಬ್ಬರನ್ನೊಬ್ಬರು ಹಿಡಿದು ಮೆಟ್ಟುವುದಕ್ಕೆ ತಕ್ಕಸಂಚನ್ನು ಹುಡುಕಿ ಸುತ್ತಿಸುತ್ತಿ ತಿರುಗುತ್ತಿದ್ದರು. ಅವರಿಬ್ಬರೂ ಒಂದಾಗಿ ಕಲೆತು, ಒಬ್ಬರನ್ನೊಬ್ಬರು ಎದೆಯಿಂದ ತಬ್ಬಿಹಿಡಿದು ಹೆಣಗಾಡುತ್ತಾ ಇಬ್ಬರೂ ಏಕಕಾಲದಲ್ಲಿ ನೆಲಕ್ಕುರುಳಿದರು. ತಿರುಗಿ ಒಬ್ಬರನ್ನೊ ಬ್ಬರು ಹಿಡಿದೆತ್ತಿ ನೆಲಕ್ಕೆ ಬಡಿಯುತ್ತ, ಬಗೆಬಗೆಯ ಯುದ್ಧಪ್ರಕಾರಗಳಿಂದ ಹೋರಾ ಡಿದರು. ಮದದಾನೆಗಳಂತಿದ್ದ ಆ ವೀರರಿಬ್ಬರೂ, ಗರುಡಿಗಳಲ್ಲಿ ಚೆನ್ನಾಗಿ ಶಿಕ್ಷಿತ ರಾದುದರಿಂದ, ಆ ಅಂಗಸಾಧನೆಯ ಬಲದಿಂದ ಆನೆಯ ಸೊಂಡಿಲುಗಳಂತಿರುವ ತಮ್ಮ ತೋಳುಗಳಿಂದ ಒಬ್ಬರನ್ನೊಬ್ಬರು ಉಸಿರಾಡುವುದಕ್ಕೂ ಅವಕಾಶವಿಲ್ಲದಂತೆ ತಬ್ಬಿಹಿಡಿದರು. ಹೀಗಿದ್ದರೂ ಅವರಿಗೆ ಸ್ವಲ್ಪವಾದರೂ ಬಳಲಿಕೆಯು ತೋರಲಿಲ್ಲ. ಅವರಿಬ್ಬರೂ ಹೀಗೆ ಬಹಳ ಹೊತ್ತು ಹೋರಾಡುತ್ತ ತಮ್ಮತಮ್ಮ ವೇಗಾತಿಶಯ ವನ್ನು ತೋರಿಸಿ, ಮಂಡಲಾದಿ ನಾನಾಗತಿಗಳಿಂದ ಸುತ್ತಿಸುತ್ತಿ ಮಲ್ಲಯುದ್ಧವನ್ನು ನಡೆಸಿದರು. ಅವರಿಬ್ಬರೂ ಆಹಾರಕ್ಕಾಗಿ ಎಚ್ಚರಿಕೆಯಿಂದ ಹೊಂಚುಹಾಕುತ್ತಿ ರುವ ಬೆಕ್ಕುಗಳಂತೆ ಒಬ್ಬರನ್ನೊಬ್ಬರು ಹಿಡಿದು ನೆಲಕ್ಕೆ ತಿಕ್ಕಿಬಿಡಬೇಕೆಂಬ ನಿರೀ ಕ್ಷಣೆಯಿಂದ ಬಾರಿಬಾರಿಗೂ ಸ್ತಬ್ಧರಾಗಿ ನಿಂತು ಸಂಚುನೋಡುತ್ತಿರುವರು. ನಡು ನಡುವೆ ಮಂಡಲಾದಿಗತಿಗಳಿಂದ ಸಂಚರಿಸುವರು. ಅವರಿಬ್ಬರೂ ಯುದ್ಧಮಾರ್ಗ ದಲ್ಲಿ ನಿಪುಣರಾದುದರಿಂದ, ಸವ್ಯಾಪಸವ್ಯಗಳೇ ಮೊದಲಾದ ಬಗೆಬಗೆಯ ಮಂಡಲ ಗಳಿಂದಲೂ, ವ್ಯಾಘ್ರ ಸಿಂಹಾದಿಗಳಂತೆ ನಿಲ್ಲುವ ವೈಷ್ಣವ ಸಮಪಾದಾದಿ ಸ್ಥಾನ ಗಳಿಂದಲೂ, ಗೋಮೂತ್ರಿಕಾದಿ ನಾನಾವಿಧ ಗತಿಯಿಂದಲೂ, ಮುಂದೆ ಹೋಗು ವುದು, ಹಿಂದೆ ಸರಿಯುವುದು, ಅಡ್ಡಲಾಗಿ ತಿರುಗುವುದು, ಇವೇ ಮೊದಲಾದ ಗಮನ ಕ್ರಮಗಳಿಂದಲೂ, ಸವ್ಯಾಪಸವ್ಯಕ್ರಮಗಳೆಂಬ ನಡೆಗಳಿಂದಲೂ, ಪೆಟ್ಟನ್ನು ತಪ್ಪಿಸಿ

ಕೊಳ್ಳುವುದಕ್ಕೆ ಬೇಕಾದ ಪರಿಮೋಕ್ಷ, ವರ್ಜನ, ಪರಿಧಾವನ, ಅಭಿದ್ರವಣ, ಅಪ್ಲಾವ, ವಿಗ್ರಹಸಹಿತವಾದ ಆಸ್ಥಾನ, ಪರಾವೃತ್ತಿ, ಅಪಾವೃತ್ತಿ, ಅವಧೃತಿ, ಅವಪ್ಲುತಿ, ಉಪನ್ಯಾಸ, ಅಪನ್ಯಾಸ ಮುಂತಾದ ಮಲ್ಲಯುದ್ಧ ಕ್ರಮಗಳಿಂದಲೂ ಸಮಬಲವಾಗಿ ಹೋರಾಡಿದರು. ಹೀಗೆ ಸುಗ್ರೀವರಾವಣರು ಸಮಚಾತುರ್ಯದಿಂದ ಹೋರಾಡುತ್ತಿದ್ದಾಗ, ರಾವಣನು ಮೋಸದಿಂದಲ್ಲದೆ ಸುಗ್ರೀವನನ್ನು ಗೆಲ್ಲುವುದು ಸಾಧ್ಯವಲ್ಲವೆಂದೆಣಿಸಿ ತನ್ನಂತೆ ಅನೇಕ ರಾವಣರು ಸುಗ್ರೀವನನ್ನು ಸುತ್ತಿದಂತೆ ತನ್ನ ಮಾಯೆಯನ್ನು ತೋರಿಸುವುದಕ್ಕಾರಂಭಿಸಿದನು. ಇಷ್ಟರಲ್ಲಿ ಸುಗ್ರೀವನಿಗೆ ಈ ಸಂಗತಿಯು ತಿಳಿದುಹೋಯಿತು. ಆತನು ಜಯಶೀಲನಾಗಿಯೂ ಎಷ್ಟೇ ಶ್ರಮ ವನ್ನಾದರೂ ಸಹಿಸಬಲ್ಲವನಾಗಿಯೂ ಇದ್ದುದರಿಂದ, ಈ ಮೋಸದ ಸಂಚನ್ನು ತಿಳಿದೊಡನೆ ಮೇಲೆ ನೆಗೆದು, ರಾವಣನ ತಲೆಯನ್ನು ಮೆಟ್ಟಿ ಆಕಾಶಕ್ಕೆ ಹಾರಿದನು. ರಾವಣನಾದರೋ ಈ ತಂತ್ರವನ್ನು ತಿಳಿಯದೆ ಮೋಸಹೋಗಿ, ಸುಗ್ರೀವನು ಹಿಂತಿರುಗಿ ಬರಬಹುದೆಂಬ ಆಶೋತ್ತರದಿಂದ ಅಲ್ಲಿಯೇ ನಿರೀಕ್ಷಿಸುತ್ತ ನಿಂತಿದ್ದನು. ಇಷ್ಟರಲ್ಲಿ ವಾನರನಾಥನಾದ ಸುಗ್ರೀವನು ರಾವಣನೊಡನೆ ತಾನೊಬ್ಬನೇ ನಿಂತು, ಸಮಬಲದಿಂದ ಯುದ್ಧಮಾಡಿದವನೆಂಬ ಕೀರ್ತಿಗೆ ಭಾಗಿಯಾಗಿ, ತಾನೇ ಧರ್ಮಯುದ್ಧದಿಂದ ರಾವಣನನ್ನು ನಿಗ್ರಹಿಸಬಲ್ಲವನಾಗಿದ್ದರೂ, ರಾಮನು ಕೈಗೊಂಡಿರುವ ಕಾರ್ಯದಲ್ಲಿ ಸ್ವತಂತ್ರಿಸಬಾರದೆಂದೆಣಿಸಿ, ಅವನನ್ನು ಕೇವಲ ವ್ಯರ್ಥವಾದ ಶ್ರಮದಲ್ಲಿ ಮಾತ್ರ ನಿಯೋಗಿಸಿ, ತಾನು ಸೂರ್ಯಪುತ್ರನೆನಿಸಿದುದಕ್ಕೆ ತಕ್ಕಂತೆ ಅಷ್ಟು ವಿಶಾಲವಾದ ಆಕಾಶವನ್ನೂ ಕೂಡ ಸೂರ್ಯನಂತೆ ಲೀಲಾಮಾತ್ರದಲ್ಲಿಯೇ ದಾಟಿ ಬಂದು, ವಾನರರ ಗುಂಪಿನಲ್ಲಿ ಸೇರಿಬಿಟ್ಟನು. ಸುಗ್ರೀವನು ಇಷ್ಟು ಸಾಹಸವನ್ನು ನಡೆಸಿ ಬಂದರೂ ಸ್ವಲ್ಪಮಾತ್ರವೂ ಹೆಮ್ಮೆಯನ್ನು ತೋರಿಸಿಕೊಳ್ಳದೆ, ಏನೂ ತಿಳಿಯದ ಯಾವುದೋ ಒಂದು ಸಾಮಾನ್ಯ ಕಪಿಯಂತೆ ಆ ವಾನರರ ಗುಂಪಿನ ನಡುವೆ ಕಲೆತು ಮೆಲ್ಲನೆ ರಾಮನ ಬಳಿಯೂ ಬಂದು ನಿಂತನು. ರಘುಕುಲನಂದನನಾದ ರಾಮನಿಗೆ ಯುದ್ಧೋತ್ಸಾಹವನ್ನು ಹೆಚ್ಚಿಸತಕ್ಕವನಾಗಿಯೂ ವಾನರಯೋಧರಿಂದ ಪೂಜಿತನಾಗಿಯೂ ಇರುವ ಸೂರ್ಯಪುತ್ರನಾದ ಸುಗ್ರೀವನು ಹೀಗೆ ಮಹಾಸಾಹಸವನ್ನು ತೋರಿಸಿ ಸಂತುಷ್ಟಚಿತ್ತನಾಗಿ, ವಾಯುವೇಗದಿಂದ ಹಿಂತಿರುಗಿ ಬಂದು ವಾನರ ಸೇನೆಯ ನಡುವೆ ನಿಂತಿದ್ದನು.

ಇಲ್ಲಿಗೆ ನಲುವತ್ತನೆಯ ಸರ್ಗವು.

ರಾಮನು ಭಯಂಕರ ನಿಮಿತ್ತಗಳನ್ನು ಕಂಡುದು. ಅಂಗದನು ರಾವಣನ ಬಳಿಗೆ ರಾಯಭಾರಿಯಾಗಿ ಹೋದುದು. ರಾಮನು ವಾನರ ಸೈನ್ಯಗಳೊಡನೆ ಲಂಕೆಯನ್ನು ಮುತ್ತಿದುದು.

ಆಮೇಲೆ ಲಕ್ಷ್ಮಣಾಗ್ರಜನಾದ ರಾಮನು ಪಕ್ಕದಲ್ಲಿ ಬಂದು ನಿಂತ ಸುಗ್ರೀವನನ್ನು ನೋಡಿ ಅವನಲ್ಲಿ ಯುದ್ಧದ ಗುರುತುಗಳನ್ನೂ ಕಂಡು ಸಂಭ್ರಮದಿಂದ ಅವನನ್ನು ಬಿಗಿಯಾಗಿ ಆಲಿಂಗಿಸಿಕೊಂಡು, ಎಲೈ ಮಿತ್ರನೆ! ಆಹಾ! ಏನು ಕೆಲಸವನ್ನು ಮಾಡಿದೆ? ನನ್ನೊಡನೆ ಆಲೋಚಿಸದೆಯೇ ಇಷ್ಟು ದೊಡ್ಡ ಕೆಲಸವನ್ನು ನಡೆಸಿದೆಯಲ್ಲಾ! ನನ್ನ ಹಾಗೆ ಸಹಾಯಕರು ಸಮೀಪದಲ್ಲಿರುವಾಗಲೂ ನಿನ್ನಂತಹ ರಾಜರು ಹೀಗೆ ಸ್ವತಂತ್ರಿಸಿ ಸಾಹಸಕಾರ್ಯಗಳನ್ನು ನಡೆಸುವುದೆಂದರೇನು? ಎಲೆ ವೀರನೆ! ನೀನು ಸಾಹಸಪ್ರಿಯನೆಂಬುದು ನಿಜವು. ಆದ್ದರಿಂದಲೇ ಈಗ ನನ್ನನ್ನಾಗಲೀ, ಈ ವಿಭೀಷಣನನ್ನಾಗಲೀ, ವಾನರಸೈನ್ಯವನ್ನಾಗಲಿ, ಯಾರನ್ನೂ ಕೇಳದೆ, ಯಾರಿಗೂ ತಿಳಿಸದೆ ನಮ್ಮೆಲ್ಲರನ್ನೂ ದೊಡ್ಡ ಸಂದೇಹಕ್ಕೆ ಗುರಿಮಾಡಿ ಬಹಳ ಅಪಾಯಕರವಾದ ಈ ಸಾಹಸಕಾರ್ಯವನ್ನು ನಡೆಸಿಬಿಟ್ಟೆ! ಸುಗ್ರೀವ, ಇನ್ನು ಮೇಲೆ ನೀನು ಹೀಗೆ ಹಿಂದುಮುಂದನ್ನು ವಿಚಾರಿಸದೆ ಸ್ವತಂತ್ರಿಸಿ ಇಂತಹ ಸಾಹಸಕ್ಕೆ ಪ್ರಯತ್ನಿಸಬೇಡ. ಒಂದು ವೇಳೆ ಏನಾದರೂ ಅಪಾಯವುಂಟಾಗಿದ್ದರೆ ಗತಿಯೇನು? ನೀನು ಎಣೆಯಿಲ್ಲದ ನಿನ್ನ ಬಾಹುಬಲದಿಂದ ಎಂತಹ ಶತ್ರುಗಳನ್ನಾದರೂ ನಿಗ್ರಹಿಸಬಲ್ಲವನಾದರೂ, ನಿನಗೆ ದೈವಿಕವಾಗಿ ಯಾವುದಾದರೂ ಹಾನಿ ಉಂಟಾದ ಪಕ್ಷದಲ್ಲಿ ನನ್ನ ಗತಿಯೇನು? [1] ನಿನ್ನನ್ನು ಬಿಟ್ಟಮೇಲೆ ನನಗೆ ಸೀತೆ

---

1. ಇಲ್ಲಿ "ತ್ವಯಿ ಕಿಂಚಿತ್ಸಮಾಪನ್ನೇ ಕಿಂ ಕಾರ್ಯಂ ಸೀತಯಾ ಮಯಾ। ಭರತೇನ ಮಹಾಬಾಹೋ ಲಕ್ಷ್ಮಣೇನ ಯವೀಯಸಾ॥ ಶತ್ರುಘ್ನೇನ ಚ ಶತ್ರುಘ್ನ ಸ್ವಶರೀರೇಣ ವಾ ಪುನಃ।" ಎಂದು ಮೂಲವು. ಇದರಿಂದ ರಾಮನಿಗೆ ಆಶ್ರಿತರಲ್ಲಿರುವ ವಾತ್ಸಲ್ಯಾತಿಶಯವು ಸೂಚಿತವಾಗುವುದು. ಹಸುಗಳಿಗೆ ಹೊಸದಾಗಿ ಪ್ರಸವಿಸಿದ ಕರುಗಳಲ್ಲಿರುವ ವಾತ್ಸಲ್ಯವು ಹಿಂದಿನ ಕರುಗಳಲ್ಲಿ ಹೇಗಿರುವುದಿಲ್ಲವೋ ಹಾಗೆಯೇ ಇಲ್ಲಿ ರಾಮನಿಗೂ ಸೀತಾಲಕ್ಷ್ಮಣಾದಿಗಳಲ್ಲಿರುವ ಪ್ರೇಮಕ್ಕಿಂತಲೂ ಹೊಸದಾಗಿ ತನ್ನಲ್ಲಿ ಶರಣಾಗತನಾದ ಕಪಿಯಲ್ಲಿರುವ ಪ್ರೇಮವು ಹೆಚ್ಚೆಂದು ಸೂಚಿತವಾಗುವುದು. ಇದರಿಂದ ರಾಮನಿಗೆ "ಅರ್ಧೋ ವಾ ಏಷ ಆತ್ಮನೋ ಯತ್ಪತ್ನೀ" ಎಂಬಂತೆ ಅರ್ಧಶರೀರಭೂತೆಯಾದ ಸೀತೆಗಿಂತಲೂ "ಭ್ರಾತಾಸ್ವಾಮೂರ್ತಿರಾತ್ಮನಃ" ಎಂಬಂತೆ ತನ್ನ ಮೂರ್ತಿಭೂತರಂತೆಯೇ ಇರುವ ಲಕ್ಷ್ಮಣ ಭರತ ಶತ್ರುಘ್ನಾದಿಗಳಿಗಿಂತಲೂ "ಆತ್ಮಾನಂ ಸರ್ವದಾ ರಕ್ಷೇದ್ದಾರೈರಪಿ ಧನೈರಪಿ" ಎಂಬಂತೆ ಎಲ್ಲಕ್ಕಿಂತಲೂ ಹೆಚ್ಚು ಪ್ರಿಯದಿಂದ ಪೋಷಿಸಬೇಕಾದ ತನ್ನ ಶರೀರಕ್ಕಿಂತಲೂ, ಆಶ್ರಿತನಾದ ವಾನರನೇ ಪ್ರಿಯತಮನೆಂದು ತಿಳಿಯಬೇಕು.

ಯಿಂದಾಗಲಿ, ಭರತನಿಂದಾಗಲಿ, ಪ್ರಿಯಸಹೋದರನಾದ ಲಕ್ಷ್ಮಣನಿಂದಾಗಲಿ ಶತ್ರುಘ್ನನಿಂದಾಗಲಿ, ಕೊನೆಗೆ ಈ ನನ್ನ ದೇಹದಿಂದಲೇ ಆಗಲಿ, ಆಗಬೇಕಾದು ದೇನು ? ನೀನೋ ದೇವೇಂದ್ರ ವರುಣರಿಗೆ ಸಮಾನನಾದವನು. ಎಲೆ ಬಲಾಢ್ಯನೆ, ನನಗೆ ನಿನ್ನ ಪರಾಕ್ರಮವು ಚೆನ್ನಾಗಿ ತಿಳಿದಿದ್ದರೂ, ಇದಕ್ಕೆ ಮೊದಲು ಕ್ಷಣಕಾಲದ ವರೆಗೆ ನೀನು ಬಾರದಿದ್ದುದನ್ನು ನೋಡಿ, ನಿನ್ನಲ್ಲಿರುವ ಎಣೆಯಿಲ್ಲದ ವಾತ್ಸಲ್ಯದಿಂದ ನಿನಗೆ ಯಾವ ಅಪಾಯ ಉಂಟಾಯಿತೋ ಎಂದು ಶಂಕಿಸಿದೆನು. ಆಗ ನನಗೆ ದೊಡ್ಡ ಚಿಂತೆಯೂ ಹುಟ್ಟಿತು. ನನ್ನ ಪ್ರಾಣದಮೇಲೆಯೇ ನಿರಾಶೆಯುಂಟಾ ಯಿತು. ಹಾಗಿದ್ದರೂ ಮಾಡಿದ ಪ್ರತಿಜ್ಞೆಯನ್ನು ತೀರಿಸದೆ ಹೋಗಬಾರದಾದುದ ರಿಂದ, ಆ ರಾವಣನನ್ನು ಅವನ ಮನೆಮಂದಿಮಕ್ಕಳೊಡನೆ ಕೊಂದು, ಶರಣಾಗತ ನಾದ ವಿಭೀಷಣನಿಗೆ ಕೊಟ್ಟ ಭಾಷೆಯಂತೆ ಅವನಿಗೆ ಲಂಕೆಯಲ್ಲಿ ಪಟ್ಟವನ್ನೂ ಕಟ್ಟಿ ಕುಲಧರ್ಮವು ತಪ್ಪಿ ಹೋಗದಂತೆ ಅಯೋಧ್ಯೆಗೆ ಹೋಗಿ ಭರತನನ್ನೂ ರಾಜ್ಯದಲ್ಲಿ ಸ್ಥಿರವಾಗಿ ನಿಲ್ಲಿಸಿ, ಉತ್ತರಕ್ಷಣದಲ್ಲಿಯೇ ಈ ದೇಹವನ್ನು ಬಿಟ್ಟುಬಿಡಬೇಕೆಂದೂ ಮನಸ್ಸಿನಲ್ಲಿ ನಿಶ್ಚಯಿಸಿಬಿಟ್ಟಿದ್ದೆನು" ಎಂದನು. ಈ ಮಾತುಗಳನ್ನು ಕೇಳಿ ಸುಗ್ರೀ ವನು, ಕಣ್ಣುಗಳಲ್ಲಿ ಆನಂದಬಾಷ್ಪವನ್ನು ಬಿಡುತ್ತ ರಾಮನನ್ನು ಕುರಿತು "ಎಲೈ ರಘುಕುಲೋತ್ತಮನೆ, ನಿನ್ನಡಿಗಳಲ್ಲಿ ದಾಸ್ಯವನ್ನು ಮಾಡಬೇಕಾದುದೇ ನನಗೆ ಪುರುಷಧರ್ಮವೆಂದು ಚೆನ್ನಾಗಿ ತಿಳಿದಿರುವಾಗ, ನಿನ್ನ ಭಾರ್ಯೆಯನ್ನಪಹರಿಸಿದ ದುರಾತ್ಮನಾದ ರಾವಣನನ್ನು ನೋಡಿ ನಾನು ಹೇಗೆ ಸಹಿಸಬಲ್ಲೆನು ? ನಾನು ಈಗ ನಡೆಸಿದುದು ದಾಸ್ಯಕರ್ಮವೇ ಹೊರತು ಸಾಹಸವಲ್ಲ" ಎಂದನು. ಸುಗ್ರೀವನು ಹೇಳಿದ ಈ ಮಾತನ್ನು ಕೇಳಿ ರಾಮನು ಅವನ ಭಕ್ತಿಯನ್ನಭಿನಂದಿಸಿ, ಆಮೇಲೆ ಶ್ರೀಮಂತನಾದ ಲಕ್ಷ್ಮಣನ ಕಡೆಗೆ ತಿರುಗಿ, "ಲಕ್ಷ್ಮಣಾ, ನಾವು ಶೀತಲ ಜಲದಿಂ ದಲೂ ಫಲಸಮೃದ್ಧಿಯುಳ್ಳ ತೋಟಗಳಿಂದಲೂ ಕೂಡಿದ ಪ್ರದೇಶದಲ್ಲಿ ಈ ನಮ್ಮ ಸೈನ್ಯವನ್ನು ನಿಲ್ಲಿಸಿ, ಆಯಾ ಯೂಥಪತಿಗಳಿಗೆ ಬೇರೆಬೇರೆಯಾಗಿ ಸೈನ್ಯವನ್ನೂ ವಿಭಾಗಿಸಿಕೊಟ್ಟು, ಗರುಡಾದಿರೂಪಗಳಿಂದ ವ್ಯೂಹವನ್ನು ಕಟ್ಟಿಡಬೇಕು. ಇದೋ ಭಯಂಕರವಾದ ಯಾವುದೋ ಒಂದು ಭಯನಿಮಿತ್ತವು ಇನ್ನು ಕೆಲವು ಕಾಲ ದಲ್ಲಿಯೇ ಸಂಭವಿಸಬಹುದೆಂದು ನನಗೆ ತೋರಿರುವುದು. ಅದು ಲೋಕಕ್ಷಯವನ್ನೇ ಸೂಚಿಸುತ್ತಿರುವುದು. ನಮ್ಮ ವಾನರ ಸೈನ್ಯದಲ್ಲಿಯೂ, ಅತ್ತಲಾಗಿ ರಾಕ್ಷಸರ ಸೈನ್ಯದಲ್ಲಿಯೂ, ಅನೇಕ ವೀರರಿಗೆ ನಷ್ಟವುಂಟಾಗುವ ಸೂಚನೆಗಳೂ ಕಾಣುವುವು.

ಇದೋ ! ಗಾಳಿಯು ಬಿರುಸಾಗಿ ಬೀಸುತ್ತಿರುವುದು. ಭೂಮಿಯು ನಡುಗುತ್ತಿರುವುದು. ಪರ್ವತ ಶಿಖರಗಳು ಅದುರುತ್ತಿರುವುವು. ಇದ್ದಕ್ಕಿದ್ದಹಾಗೆ ಮರಗಳು ಮುರಿದು ಬೀಳುತ್ತಿರುವುವು. ಅದೋ ! ಆಕಾಶದಲ್ಲಿ ಮೇಘಗಳು, ರಣಹದ್ದು ಮೊದಲಾದ ಮಾಂಸಾಹಾರಿಪಕ್ಷಿಗಳ ಆಕಾರದಿಂದ ತೋರಿ, ಕ್ರೂರಸ್ವರೂಪವುಳ್ಳವುಗಳಾಗಿ, ಕ್ರೂರಧ್ವನಿಯಿಂದ ಮೊಳಗುತ್ತಿರುವುವಲ್ಲದೆ, ಲೋಕಕ್ಷಯಸೂಚಕವಾಗಿ ರಕ್ತಬಿಂದುಗಳೊಡಗೂಡಿದ ಜಲವನ್ನೂ ವರ್ಷಿಸುವುವು. ಅದೋ ! ಸಂಧ್ಯಾಕಾಲವು ರಕ್ತಚಂದನದಂತೆ ಬಹಳ ಕೆಂಪಾಗಿ ಭಯಂಕರವಾಗಿ ಕಾಣುವುದು. ಸೂರ್ಯಬಿಂಬದಿಂದ ಉರಿಯುವ ಅಗ್ನಿಪಿಂಡಗಳು ಬೀಳುತ್ತಿರುವುವು. ತುಚ್ಛಮೃಗಗಳಾದ ನರಿ ಮೊದಲಾದುವೆಲ್ಲವೂ ಬಹಳ ದುಃಖಗೊಂಡಂತೆ ಭಯಂಕರವಾದ ದೀನ ಧ್ವನಿಯಿಂದ ಸಮಸ್ತ ಲೋಕಗಳಿಗೂ ಹಾನಿಯನ್ನು ಸೂಚಿಸುತ್ತ ಸೂರ್ಯನಿಗಿದಿರಾಗಿ ಊಳಿಡುತ್ತಿರುವುವು. ಈ ರಾತ್ರಿಯಲ್ಲಿಯೂ ಕೂಡ ಚಂದ್ರನು ಪ್ರಕಾಶರಹಿತನಾಗಿ ತನ್ನ ಕಿರಣಗಳಿಂದ ಲೋಕವನ್ನು ಸಂತಾಪಪಡಿಸುತ್ತಿರುವನು. ಮತ್ತು ಪ್ರಳಯಕಾಲದಲ್ಲಿ ಹೇಗೋ ಹಾಗೆ ಆ ಚಂದ್ರನಿಂದ ಸುತ್ತಲೂ ಕಪ್ಪು ಮತ್ತು ಕೆಂಪು ಬಣ್ಣಗಳಿಂದ ಕೂಡಿದ ಪರಿವೇಷವು ಕಾಣುತ್ತಿರುವುದು ನೋಡು ! ಈ ಚಂದ್ರನ ಪರಿವೇಷವು ಎಷ್ಟು ಭಯಂಕರವಾಗಿಯೂ ಹ್ರಸ್ವವಾಗಿಯೂ ಅಮಂಗಳ ಸೂಚಕವಾಗಿಯೂ, ನಡುವೆ ಬಹಳ ರಕ್ತವರ್ಣವಾಗಿಯೂ ಕಾಣುವುದು ನೋಡಿದೆಯಾ ? ಅದೋ ಸೂರ್ಯಬಿಂಬದಲ್ಲಿಯೂ ಕೂಡ, ಚಂದ್ರಬಿಂಬದಲ್ಲಿರುವಂತೆ ಕಪ್ಪಾದ ಕಳಂಕವೊಂದು ಕಾಣುವುದು ನೋಡು. ಲಕ್ಷ್ಮಣಾ ! ನಕ್ಷತ್ರಗಳೆಲ್ಲವೂ ಎಂದಿನಂತಿಲ್ಲದೆ ಬಹಳ ಮಲಿನವಾಗಿ ಕಾಂತಿಗುಂದಿರುವುದನ್ನು ನೋಡಿದೆಯಾ ? ನಿಜವಾಗಿಯೂ ಈಗ ಈ ದುರ್ನಿಮಿತ್ತಗಳೆಲ್ಲವೂ ಪ್ರಳಯಕಾಲವೇ ಸನ್ನಿಹಿತವಾದಂತೆ ಸೂಚಿಸುತ್ತಿರುವುವು. ಅದೋ ! ಅಲ್ಲಲ್ಲಿ ಕಾಗೆ, ಡೇಗೆ, ಹದ್ದು, ರಣಹದ್ದು ಮೊದಲಾದ ಪ್ರಬಲ ಪಕ್ಷಿಗಳೆಲ್ಲವೂ ಕೂಡ, ಸಣ್ಣ ಸಣ್ಣ ಹಕ್ಕಿಗಳಿಂದ ಪ್ರತಿಹತಗಳಾಗಿ ಕೆಳಕ್ಕೆ ಬೀಳುತ್ತಿರುವುವು. ಅಲ್ಲಲ್ಲಿ ನರಿಗಳು ಮಹಾಧ್ವನಿಯಿಂದ ಅಮಂಗಳವಾಗಿ ಊಳಿಡುತ್ತಿರುವುವು. ವತ್ಸ ಲಕ್ಷ್ಮಣಾ, ಇನ್ನು ನಾವು ತಡಮಾಡಬಾರದು. ಈಗಲೇ ನಾವು ನಮ್ಮ ವಾನರಸೈನ್ಯಗಳೆಲ್ಲವನ್ನೂ ಸೇರಿಸಿಕೊಂಡು ಇಲ್ಲಿಂದ ಹೊರಟು, ರಾವಣನಿಂದ ರಕ್ಷಿತವಾಗಿ ದುರ್ಗಮವೆನಿಸಿಕೊಂಡ ಆ ಲಂಕೆಗೆ ಶೀಘ್ರದಲ್ಲಿಯೇ ಹೋಗಿ ಸೇರಬೇಕು " ಎಂದನು. ಹೀಗೆ ವೀರನಾಗಿಯೂ

ಮಹಾಬಲಾಢ್ಯನಾಗಿಯೂ ಇರುವ ಆ ರಾಮನು ಲಕ್ಷ್ಮಣನೊಡನೆ ಹೇಳಿ, ಆಗಲೇ ಸುವೇಲ ಪರ್ವತದ ಶಿಖರದಿಂದ ಕೆಳಕ್ಕಿಳಿದನು. ಧರ್ಮಾತ್ಮನಾದ ಆ ರಾಮನು ಆ ಪರ್ವತಶಿಖರದಿಂದಿಳಿದು ಅಲ್ಲಿದ್ದ ಶತ್ರುದುರ್ಜಯವಾದ ತನ್ನ ಸಮಸ್ತ ಸೈನ್ಯವನ್ನೂ ಒಮ್ಮೆ ಕಣ್ಣಿಟ್ಟು ನೋಡಿದನು. ರಾಮನು ಕಾಲೋಚಿತವಾದ ಕಾರ್ಯವನ್ನು ಚೆನ್ನಾಗಿ ಬಲ್ಲವನಾದುದರಿಂದ, ಸುಗ್ರೀವನೊಡನೆ ಸೇರಿ, ಆ ಸಮಸ್ತ ವಾನರಸೈನ್ಯವನ್ನೂ ಪ್ರೋತ್ಸಾಹಿಸಿ ಅವರಿಗೆ ಇದೇ ಯುದ್ಧಕಾಲವೆಂಬುದನ್ನೂ ತಿಳಿಸಿ, ಯುದ್ಧಕ್ಕೆ ಸಿದ್ಧರಾಗಿರುವಂತೆ ಆಜ್ಞೆಮಾಡಿದನು. ಬೆಳಗಾದಮೇಲೆ ಮಹಾಬಾಹುವಾದ ರಾಮನು, ಕೈಯಲ್ಲಿ ಬಿಲ್ಲನ್ನು ಸಿದ್ಧವಾಗಿ ಹಿಡಿದು, ದೊಡ್ಡ ಸೇನೆಯಿಂದ ಪರಿವೃತನಾಗಿ, ಲಂಕಾಪುರವನ್ನು ಕುರಿತು ಮುಂದೆ ಹೊರಟನು. ವಿಭೀಷಣನೂ, ಸುಗ್ರೀವನೂ, ಹನುಮಂತನೂ, ಜಾಂಬವಂತನೂ, ನಲನೂ, ಸುಷೇಣನೂ, (ಧೂಮ್ರನೂ) ನೀಲನೂ, ಲಕ್ಷ್ಮಣನೂ ಅವನನ್ನು ಹಿಂಬಾಲಿಸಿ ಹೊರಟರು. ಹೀಗೆ ಮಹತ್ತಾದ ವಾನರ ಭಲ್ಲೂಕ ಸೈನ್ಯಗಳೆಲ್ಲವೂ ಗುಂಪಾಗಿ ಅತಿ ವಿಸ್ತಾರವಾದ ಅಲ್ಲಿನ ಭೂಮಿಯೆಲ್ಲವನ್ನೂ ವ್ಯಾಪಿಸುವಂತೆ ರಾಮನನ್ನು ಹಿಂಬಾಲಿಸಿ ಹೋಯಿತು. ಆನೆಯಂತೆ ದೊಡ್ಡ ದೇಹವುಳ್ಳವರಾಗಿಯೂ, ಶತ್ರುಗಳನ್ನಿದಿರಿಸುವುದರಲ್ಲಿ ಸಮರ್ಥರಾಗಿಯೂ ಇದ್ದ ಸಾವಿರಾರುಮಂದಿ ವಾನರವೀರರು, ದೊಡ್ಡ ದೊಡ್ಡ ಬೆಟ್ಟದ ಶಿಖರಗಳನ್ನೂ, ದೊಡ್ಡ ದೊಡ್ಡ ಮರಗಳನ್ನೂ ಹಿಡಿದು ಹೊರಟರು. ಪರಂತಪರಾದ ರಾಮಲಕ್ಷ್ಮಣರಿಬ್ಬರೂ ಹೀಗೆ ದೊಡ್ಡ ಸೇನೆಯೊಡನೆ ಪ್ರಯಾಣಮಾಡಿ ಬಹಳ ಹೊತ್ತಿನಮೇಲೆ ಲಂಕಾನಗರಿಯನ್ನು ಸೇರಿದರು. ಅನೇಕ ಧ್ವಜಪಟಗಳ ಸಾಲಿನಿಂದ ಮನೋಹರವಾಗಿಯೂ, ವನೋಪವನಗಳಿಂದ ಶೋಭಿತವಾಗಿಯೂ, ವಿಚಿತ್ರವಾದ ಕೋಟೆಯುಳ್ಳದಾಗಿಯೂ, ಇತರರಿಗೆ ದುರ್ಗಮವಾಗಿಯೂ ಎತ್ತರವಾದ ತೋರಣಪ್ರಾಕಾರಗಳಿಂದ ಕೂಡಿದುದಾಗಿಯೂ ದೇವತೆಗಳಿಗೂ ದುರ್ಧರ್ಷವಾಗಿಯೂ ಇದ್ದ ಆ ಲಂಕಾಪುರದ ಬಳಿಯ ತ್ರಿಕೂಟ ಪರ್ವತವನ್ನು ಸಮೀಪಿಸಿ ವಾನರರೆಲ್ಲರೂ ರಾಮಾಜ್ಞೆಯನ್ನನುಸರಿಸಿ ಸೇನೆಯಲ್ಲಿ ತಮಗೆ ನಿಯಮಿತವಾದ ಸ್ಥಾನವನ್ನು ಬಿಡದೆ ಸಿದ್ಧರಾಗಿದ್ದರು. ರಾಮನು ಲಕ್ಷ್ಮಣಸಹಿತನಾಗಿ ಹೊರಟು ಪರ್ವತ ಶಿಖರದಂತೆ ಮಹೋನ್ನತವಾದ ಲಂಕೆಯ ಉತ್ತರದ್ವಾರವನ್ನು ಸೇರಿ ಅಲ್ಲಿ ಧನುರ್ಧಾರಿಯಾಗಿ ತನ್ನ ಸೇನೆಯನ್ನು ರಕ್ಷಿಸುತ್ತ ಆ ಬಾಗಿಲನ್ನು ಮುತ್ತಿದನು. ಹೀಗೆ ದಶರಥಪುತ್ರನಾದ ರಾಮನು ಲಕ್ಷ್ಮಣನಿಂದನುಸೃತ

ನಾಗಿ ಹೊರಡಲು, ಲಂಕೆಯಲ್ಲಿ ರಾವಣನು ತಾನಾಗಿಯೇ ನಿಂತು ಎಚ್ಚರಿಕೆಯಿಂದ ರಕ್ಷಿಸುತ್ತಿದ್ದ ಉತ್ತರದ ಬಾಗಿಲನ್ನು ತಡೆದನು. ಆ ದ್ವಾರಪ್ರದೇಶವಾದರೋ ವರುಣನಿಂದ ರಕ್ಷಿತವಾದ ಸಮುದ್ರದಂತೆ, ಸಾಕ್ಷಾತ್ತಾಗಿ ರಾವಣನಿಂದಲೇ ರಕ್ಷಿತ ವಾಗಿರುವುದು. ನೋಡುವಾಗಲೇ ಭಯವನ್ನು ಹುಟ್ಟಿಸುವುದು. ಸುತ್ತಲೂ ಅನೇಕ ಘೋರರಾಕ್ಷಸರು ಆಯುಧಧಾರಿಗಳಾಗಿ ಎಚ್ಚರಿಕೆಯಿಂದ ಕಾವಲಿರುವುದರಿಂದ ದಾನವರಿಂದ ರಕ್ಷಿತವಾದ ಪಾತಾಳವೋ ಎಂಬಂತೆ ನೋಡುವವರಿಗೆ ಮಹಾಭಯ ಹುಟ್ಟಿಸುತ್ತಿರುವುದು. ಹೀಗಿರುವಾಗಲೂ, ಧೈರ್ಯದಿಂದ ಮುಂದೆ ನುಗ್ಗಿ, ಅದನ್ನು ತಡೆಯಬೇಕೆಂದರೆ ಲೋಕೈಕವೀರನಾದ ರಾಮನಿಗೆ ಹೊರತು ಬೇರೆ ಯಾವನಿಗೆ ಸಾಧ್ಯವು ? ರಾಮನು ಆ ದ್ವಾರವನ್ನು ಸಮೀಪಿಸಿದಾಗಲೇ ಆ ಬಾಗಿಲಿನ ಜಗುಲಿಯಮೇಲೆ ರಾಕ್ಷಸಯೋಧರು ನಿಲ್ಲಿಸಿಟ್ಟಿದ್ದ ವಿವಿಧಾಯುಧ ಸಮೂಹಗಳನ್ನೂ ಅನೇಕ ಯುದ್ಧಕವಚಗಳನ್ನೂ ನೋಡಿದನು. ವೀರ್ಯವಂತನಾಗಿಯೂ, ವಾನರ ಸೇನಾಪತಿಯಾಗಿಯೂ ಇದ್ದ ನೀಲನು ಮೈಂದದ್ವಿವಿದರೊಡಗೂಡಿ ಉತ್ತರದ್ವಾರ ದಲ್ಲಿ ನಿಂತನು. ಬಹಳ ಬಲಾಢ್ಯನಾದ ಅಂಗದನು ಋಷಭ ಗವಾಕ್ಷ ಗಜ ಗವಯ ರೆಂಬ ನಾಲ್ವರೊಡಗೂಡಿ ದಕ್ಷಿಣದ್ವಾರವನ್ನು ತಡೆದು ನಿಂತನು. ಬಲವಂತನಾದ ಹನುಮಂತನು ಪ್ರಮಾಥಿ ಪ್ರಘಸರೆಂಬವರನ್ನೂ, ವೀರರಾದ ಮತ್ತೆ ಕೆಲವು ವಾನರ ರನ್ನೂ, ಸಂಗಡ ಕರೆದುಕೊಂಡು ಪಶ್ಚಿಮದ್ವಾರದಲ್ಲಿ ನಿಂತನು. ಸುಗ್ರೀವನು ಗರುಡನಂತೆಯೂ, ವಾಯುವಿನಂತೆಯೂ ಮಹಾವೇಗವುಳ್ಳ ಅನೇಕ ವಾನರಶ್ರೇಷ್ಠ ರೊಡಗೂಡಿ ಹೊರಟು ಅತ್ತಲಾಗಿ ಬಲಾಢ್ಯರಾದ ರಾವಣೇಂದ್ರಜಿತ್ತುಗಳೊಡನೆ ಹೋರಾಡುವುದಕ್ಕೆ ಸಿದ್ಧರಾಗಿ ಹೋಗಿರುವ ರಾಮ ಹನುಮಂತರಿಬ್ಬರಲ್ಲಿ ಯಾರಿಗೆ ಸಮಯಬಂದಾಗಲೂ ತಟ್ಟನೆಹೋಗಿ ಸಹಾಯಮಾಡುವುದಕ್ಕೆ ತಕ್ಕಂತೆ, ಉತ್ತರ ಪಶ್ಚಿಮದ್ವಾರಗಳನಡುವೆ ಗುಲ್ಮಸ್ಥಾನದಲ್ಲಿ ನಿಂತನು. ಬಹಳ ಪ್ರಖ್ಯಾತಿಹೊಂದಿದ ಯೂಥಪತಿಗಳ ಕೆಳಗೆ ಮೂವತ್ತಾರು ಕೋಟಿ ವಾನರರು ಹೀಗೆ ಲಂಕಾಪುರಿಯನ್ನು ಮುತ್ತಿನಿಂತು, ಸುಗ್ರೀವನಿಗೆ ಬೆಂಬಲವಾಗಿದ್ದರು. ರಾಮಾಜ್ಞೆಯಿಂದ ಲಕ್ಷ್ಮಣ ವಿಭೀಷಣರಿಬ್ಬರೂ ಒಂದೊಂದು ದ್ವಾರದಲ್ಲಿ ಒಂದೊಂದು ಕೋಟಿವಾನರರನ್ನಿರಿಸಿ ದರು. ರಾಮನಿದ್ದ ಕಡೆಗೆ ಪಶ್ಚಿಮದಿಕ್ಕಿನಲ್ಲಿ ಅವನಿಗೆ ಸಮೀಪವಾಗಿ ಸುಗ್ರೀವನು ಜಾಂಬವಂತನನ್ನೂ ತನ್ನ ಸಹಾಯಕ್ಕಿಟ್ಟುಕೊಂಡು, ಬಹುಸೈನ್ಯಪರಿವೃತನಾಗಿ ಮಧ್ಯಗುಲ್ಮದಲ್ಲಿದ್ದನು. ಅಲ್ಲಿದ್ದ ವಾನರರೆಲ್ಲರೂ ಕ್ರೂರವಾದ ಕೋರೆಯುಳ್ಳ ಹುಲಿ

ಗಳಂತೆ, ಗಿಡಗಳನ್ನೂ, ಪರ್ವತ ಶಿಖರಗಳನ್ನೂ ಹಿಡಿದು ಕೋಪದಿಂದ ಯುದ್ಧಕ್ಕೆ ಕಾದಿದ್ದರು. ಅವರಲ್ಲಿ ಪ್ರತಿಯೊಬ್ಬರೂ ಬಾಲಗಳನ್ನೆತ್ತಿಯೇ ನಿಂತಿರುವರು. ಅವರು ತಮ್ಮ ಕೋರೆಗಳನ್ನೂ, ಉಗುರುಗಳನ್ನೂ ಶಸ್ತ್ರಾಸ್ತ್ರಗಳಂತೆಯೇ ಯುದ್ಧ ಸಾಧನ ಗಳನ್ನಾಗಿ ಮಾಡಿಟ್ಟಿರುವರು. ಎಲ್ಲರ ಮುಖದಲ್ಲಿಯೂ ಕೋಪವಿಕಾರಗಳು ತೋರು ತ್ತಿರುವುವು. ಒಬ್ಬೊಬ್ಬರ ಅವಯುವಗಳೂ ವಿಚಿತ್ರವರ್ಣದಿಂದ ಘೋರರೂಪ ವಾಗಿ ಕಾಣುವುದು. ಅವರು ಕೋಪದಿಂದ ಮುಖವನ್ನು ವಕ್ರವಾಗಿ ತಿರುಗಿಸಿ, ರಾಕ್ಷಸರನ್ನು ಹೆದರಿಸುತ್ತಿರುವರು. ಮತ್ತು ಆವರಲ್ಲಿ ಕೆಲವರು ಹತ್ತಾನೆಯ ಬಲ ಉಳ್ಳವರು. ಕೆಲವರು ನೂರು ಆನೆಯ ಬಲವುಳ್ಳವರು. ಕೆಲವರು ಸಾವಿರ ಆನೆಗಳ ಬಲವುಳ್ಳವರು. ಇನ್ನು ಕೆಲವರು ಓಘ ಸಂಖ್ಯಾಕಗಳಾದ ಆನೆಗಳ ಬಲವುಳ್ಳ ವರು. ಅವಕ್ಕಿಂತಲೂ ನೂರು ಪಾಲು ಹೆಚ್ಚುಬಲವುಳ್ಳವರು ಕೆಲವರು. ಇಷ್ಟೆಂದು ನಿರ್ಣಯಿಸುವುದಕ್ಕೇ ಅಸಾಧ್ಯವಾದ ಬಲವುಳ್ಳವರು ಕೆಲವರು. ಹೀಗೆ ಅನೇಕಾನೇಕ ವಾನರ ವೀರರು ಲಂಕೆಯನ್ನಾಕ್ರಮಿಸಿ ನಿಂತಿದ್ದರು. ಆ ದೊಡ್ಡ ವಾನರ ಸೈನ್ಯವು ಲಂಕೆಯಲ್ಲಿ ಗುಂಪುಕೂಡಿರುವಾಗ, ಭಯಂಕರವಾದ ಮಿಡಿತೆಗಳ ಗುಂಪಿನಂತೆ ಮೇಲೆ ಮೇಲೆ ಹೆಚ್ಚಿಬರುತ್ತ, ಆಶ್ಚರ್ಯಕರವಾಗಿ ಕಾಣಿಸಿತಲ್ಲದೆ, ಕಪಿಗಳು, ಕರಡಿ ಗಳು, ಸಿಂಗಳೀಕಗಳೆಂಬ ಜಾತಿಭೇದದಿಂದ ವಿಚಿತ್ರವರ್ಣವುಳ್ಳದಾಗಿತ್ತು. ಮತ್ತು ಆಗ ಆಕಾಶವೆಲ್ಲವೂ ಕೇವಲ ಕಪಿಗಳಿಂದಲೇ ತುಂಬಿದಂತೆಯೂ, ಭೂಮಿಯು ಮುಚ್ಚಿಹೋದಂತೆಯೂ ಕಾಣಿಸಿತು. ಮೊದಲಿದ್ದ ಸೈನ್ಯವಲ್ಲದೆ ಪ್ರತಿ ಲಂಕಾದ್ವಾರ ದಲ್ಲಿಯೂ ಒಂದೊಂದು ಕೋಟಿ ಭಲ್ಲೂಕ ಸೈನ್ಯವೂ, ಕಪಿಸೈನ್ಯವೂ ಪ್ರತ್ಯೇಕವಾಗಿ ನಿಲ್ಲಿಸಲ್ಪಟ್ಟವು. ಇನ್ನೂ ಬೇರೆ ಅನೇಕ ವಾನರರು ಅಲ್ಲಲ್ಲಿ ಕಾದಿದ್ದು ಬೇಕಾದಾಗ ಮುಂದೆ ಸಹಾಯಕ್ಕೆ ಬರುವುದಕ್ಕಾಗಿ ಸಿದ್ಧವಾಗಿ ನಿಂತಿದ್ದರು. ತ್ರಿಕೂಟ ಪರ್ವತದ ಸಮಸ್ತ ಪ್ರದೇಶಗಳೂ ವಾನರರಿಂದಲೇ ವ್ಯಾಪ್ತವಾಯಿತು. ಹೀಗೆ ಲಂಕೆಯ ನಾಲ್ಕು ಬಾಗಿಲುಗಳನ್ನೂ ಆವರಿಸಿದಮೇಲೆ, ಬೇರೆ ಇನ್ನೊಂದು ಕೋಟಿ ವಾನರರು ಆ ಪಟ್ಟಣದ ಸುತ್ತಲೂ ಮುತ್ತಿನಿಂತರು. ಹೀಗೆ ಬಲಾಢ್ಯರಾದ ಅನೇಕ ವಾನರರು ಕೈಯಲ್ಲಿ ಕಲ್ಲು, ಮರಗಳನ್ನು ಹಿಡಿದು ಲಂಕೆಯ ಸುತ್ತಲೂ ಆವರಿಸಿ ನಿಂತಿದ್ದು ದರಿಂದ, ಆ ಪಟ್ಟಣವು ಗಾಳಿಯ ಪ್ರವೇಶಕ್ಕೂ ಅವಕಾಶವಿಲ್ಲದಂತಾಯಿತು. ಹೀಗೆ ಮೇಘದಂತೆ ದೇಹವುಳ್ಳವರಾಗಿಯೂ, ದೇವೇಂದ್ರನಂತೆ ಪರಾಕ್ರಮವುಳ್ಳವ ರಾಗಿಯೂ ಇದ್ದ ಅನೇಕ ವಾನರರು ಅಕಸ್ಮಾತ್ತಾಗಿ ಬಂದು ಲಂಕೆಯನ್ನು ಎಡೆ

ಬಿಡದೆ ಮುತ್ತಿರುವುದನ್ನು ನೋಡಿ, ಅಲ್ಲಿನ ರಾಕ್ಷಸರಿಗೆ ಅತ್ಯಾಶ್ಚರ್ಯವುಂಟಾಯಿತು. ಈ ವಾನರಸೈನ್ಯವು ನಾನಾ ಕಡೆಗಳಿಂದ ಬಂದು ಅಲ್ಲಲ್ಲಿ ಸೇರುತ್ತಿರುವಾಗ, ಅದರಿಂದುಂಟಾದ ಗದ್ದಲವು, ಮಹಾಸಮುದ್ರವು ತನ್ನ ದಡವನ್ನು ಮುರಿದು ಕೊಚ್ಚಿ ಬರುವಾಗ ಅದರಿಂದ ಹೊರಟು ಬರುವ ಜಲಪ್ರವಾಹದ ಮೊರೆತದಂತೆ ಭಯಂಕರವಾಗಿ ಕೇಳಿಸುತ್ತಿತ್ತು. ಈ ಮಹಾಧ್ವನಿಗೆ ಲಂಕಾನಗರಿಯೆಲ್ಲವೂ ತನ್ನ ತೋರಣ ಪ್ರಾಕಾರಗಳೊಡನೆಯೂ, ಪುರೋಪವನಗಳೊಡನೆಯೂ, ಬಹಳವಾಗಿ ನಡುಗಿ ಹೋದಂತಾಯಿತು. ರಾಮಲಕ್ಷ್ಮಣರಿಂದಲೂ, ಸುಗ್ರೀವನಿಂದಲೂ ರಕ್ಷಿತವಾಗಿ ಬಂದ ಆ ದೊಡ್ಡ ವಾನರಸೇನೆಯು, ದೇವಾಸುರರಿಗಾದರೂ ಇದಿರಿಸಲಸಾಧ್ಯವಾಗಿರುವಂತೆ ತೋರುತ್ತಿತ್ತು. ಹೀಗೆ ರಾಮನು ತನ್ನ ಕಡೆಯ ಸಮಸ್ತ ಸೈನ್ಯವನ್ನೂ ಲಂಕೆಯಲ್ಲಿ ತಂದಿಳಿಸಿ, ಮುಂದೆ ರಾಕ್ಷಸರನ್ನು ಕೊಲ್ಲುವ ವಿಷಯದಲ್ಲಿ ಮಾಡಬೇಕಾದ ಕಾರ್ಯಗಳೇನೆಂದು ಮಂತ್ರಿಗಳನ್ನು ಕರೆದು ಅವರೊಡನೆ ಆಲೋಚಿಸಿದನು. ಸಾಮಾದ್ಯುಪಾಯಗಳಿಂದುಂಟಾಗುವ ಫಲವನ್ನು ಚೆನ್ನಾಗಿ ಬಲ್ಲ ಆ ರಾಮನು, ಯುದ್ಧಕ್ಕೆ ಮುಂಚೆ ರಾಜರು ನಡೆಸಬೇಕಾದ ಕಾರ್ಯವೇನೆಂಬುದನ್ನು ಯೋಚಿಸಿ, ಆ ರಾಜಧರ್ಮವನ್ನು ಮನಸ್ಸಿನಲ್ಲಿ ಸ್ಮರಿಸಿ, ಮುಂದೆ ರಾವಣನ ಬಳಿಗೆ ದೂತನೊಬ್ಬನನ್ನು ಕಳುಹಿಸಬೇಕಾದುದೇ ಪ್ರಕೃತಕಾರ್ಯವೆಂದೂ, ಅಂಗದನೇ ಆ ದೂತ ಕಾರ್ಯಕ್ಕೆ ತಕ್ಕವನೆಂದೂ ನಿಶ್ಚಯಿಸಿಕೊಂಡನು. ಈ ವಿಷಯದಲ್ಲಿ ವಿಭೀಷಣನ ಅನುಮತಿಯನ್ನೂ ಕೇಳಿ, ಅಂಗದನನ್ನು ಕರೆದು ಹೇಳುವನು. "ಎಲೆ ಸೌಮ್ಯನೆ, ನೀನು ಈಗಲೇ ಲಂಕಾಪುರಿಯನ್ನು ಹಾರಿ, ರಾವಣನ ಬಳಿಗೆ ಹೋಗಿ ಅವನ ಮುಂದೆ ಈಗ ನಾನು ಹೇಳುವ ಮಾತನ್ನು ಹೀಗೆಯೇ ನಿರ್ಭಯವಾಗಿ ಹೇಳು 'ಎಲೆ ರಾಕ್ಷಸಾ, ಈಗಲೇ ಹೆಚ್ಚು ಕಡಿಮೆಯಾಗಿ ನಿನ್ನ ಸಂಪತ್ತೆಲ್ಲವೂ ನಾಶಹೊಂದಿದಂತೆಯೇ ಆಗಿರುವುದು. ನಿನ್ನ ಪ್ರಭುತ್ವದ ಬಲವೂ ತಗ್ಗಿಹೋದಂತೆಯೇ ಎಣಿಸಬೇಕು. ಇನ್ನುಮೇಲೆ ನಿನಗೆ ಬದುಕುವ ಆಶೆಯೂ ತಪ್ಪಿಹೋಯಿತು. ನಿನಗೆ ಸಾವು ಸಿದ್ಧವಾಗಿರುವುದು. ವಿನಾಶಕಾಲಕ್ಕೆ ತಕ್ಕಂತೆ ನಿನ್ನ ಬುದ್ಧಿಯೂ ಕೆಟ್ಟುಹೋಯಿತು. ಎಲೆ ಮೂಢನೆ ! ಇದುವರೆಗೂ ನೀನು ಭಾಗ್ಯಮದದಿಂದ ದೇವ ಗಂಧರ್ವ ಮಹರ್ಷಿಗಳಿಗೂ, ಅಪ್ಸರಸ್ಸುಗಳಿಗೂ, ಯಕ್ಷ ಪನ್ನಗಾದಿಗಳಿಗೂ, ಇತರ ಕ್ಷತ್ರಿಯರಿಗೂ, ಎಷ್ಟೋ ದ್ರೋಹಗಳನ್ನು ಮಾಡಿ ಅವರನ್ನು ಗೋಳಾಡಿಸಿರುವೆ. ನೀನು ಯಾವ ಬ್ರಹ್ಮನ ವರದ ಬಲದಿಂದ ಬುದ್ಧಿಗೆಟ್ಟು ಘೋರಕೃತ್ಯಗಳನ್ನು ನಡೆಸಿದೆಯೋ, ಇವಕ್ಕೆಲ್ಲಾ ಮೂಲ

ವಾದ ಆ ವರದ ಬಲದಿಂದುಂಟಾದ ನಿನ್ನ ಕೆಚ್ಚೂಕೂಡ ಇನ್ನು ಮೇಲೆ ಅಡಗಿದಂತೆಯೇ ಹೊರತು ಬೇರೆಯಲ್ಲ, ಇದು ನಿಜವು. ಇದೋ! ನಾನು ನನ್ನ ಭಾರ್ಯಾಪಹರಣವನ್ನೇ ವ್ಯಾಜವಾಗಿಟ್ಟುಕೊಂಡು, ಆ ನೆಪದಿಂದಲೇ ನಿನ್ನನ್ನು ದಂಡಿಸುವುದಕ್ಕಾಗಿ ಲಂಕಾದ್ವಾರಕ್ಕೆ ಬಂದು ನಿಂತಿರುವೆನು. ನಿನಗೆ ನಾನೇ ಈಗ ಕಾಲಯಮುವನೆಂದು ತಿಳಿ. ಹೀಗೆ ನನ್ನನ್ನು ದಂಡಿಸುವುದರಿಂದ ನಿನಗೆ ಬಂದ ಫಲವೇನು ? ಎಂದು ಕೇಳುವೆಯಾ? ಇದರಿಂದ ನಮ್ಮಿಬ್ಬರಿಗೂ ದೊಡ್ಡ ಲಾಭವುಂಟು ನೀನು ನನ್ನಿಂದ ಹತನಾದರೆ, ಅದರಿಂದ ನಿನ್ನ ಪಾಪವೆಲ್ಲವೂ ನಿವೃತ್ತವಾಗಿ, (ರಾಜದಂಡದಿಂದ ಅಪರಾಧಿಯೂ, ರಾ ಜ ನೂ ಪಾಪನಿವೃತ್ತಿಯನ್ನು ಹೊಂದುವುದಾಗಿ ಶಾಸ್ತ್ರವಿಧಿಯು) ದೇವತೆಗಳೂ, ಮಹರ್ಷಿಗಳು, ರಾಜರ್ಷಿಗಳೂ ಹೊಂದತಕ್ಕ ಲೋಕವನ್ನೆ ನೀನೂ ಹೊಂದಬಹುದು. ದುಷ್ಟರನ್ನು ಶಿಕ್ಷಿಸುವುದೇ (ರಾಜಧರ್ಮವಾದುದರಿಂದ, ನಾನು ನಿನ್ನ ಅಕೃತ್ಯಕ್ಕೆ ತಕ್ಕಂತೆ ದಂಡವನ್ನು ಮಾಡಿ ಪಾಪನಿವೃತ್ತಿಯನ್ನು ಹೊಂದಬಹುದು. ಆದುದರಿಂದ ಇದು ನಮ್ಮಿಬ್ಬರಿಗೂ ಶ್ರೇಯಸ್ಸಿಗೆ ಕಾರಣವು. ಶೀಘ್ರದಲ್ಲಿ ಹೊರಗೆ ಬಂದು ನಿಲ್ಲು. ಎಲೆ ರಾಕ್ಷಸಾಧಮಾ ! ಮಾರೀಚನ ಮಾಯೆಯಿಂದ ನನ್ನನ್ನು ಹೊರಕ್ಕೆ ಹೊರಡಿಸಿ, ಯಾವ ಭು ಜ ಬ ಲ ವ ನ್ನು ನಂಬಿ ಆಗ ನೀನು ಸೀತೆಯನ್ನು ಕದ್ದೊಯ್ದಿಯೋ, ಆ ನಿನ್ನ ಭುಜಬಲವೆಲ್ಲವನ್ನೂ ಈಗ ನೀನು ತೋರಿಸಬಹುದು. ರಾವಣಾ, ಈಗಲೂ ನೀನು ನನ್ನ ಪತ್ನಿಯಾದ ಸೀತೆಯನ್ನು ತಂದೊಪ್ಪಿಸಿ ಶರಣಾಗತನಾದರೆ ಸರಿ, (ಚಿನ್ನವನ್ನು ಕದ್ದವನಿಗೆ ಅದನ್ನು ಹಿಂತಿರುಗಿ ಕೊಟ್ಟ ಹೊರತು ಪ್ರಾಯಶ್ಚಿತ್ತಕ್ಕೆ ಅಧಿಕಾರವಿಲ್ಲವು. ಹಾಗೆಯೇ ಸೀತೆಯನ್ನು ಕದ್ದ ರಾವಣನಿಗೂ ಆ ಸೀತೆಯನ್ನು ಹಿಂತಿರುಗಿ ಸಮರ್ಪಿಸಿದ ಹೊರತು ತನ್ನಲ್ಲಿ ಶರಣಾಗತಿಗೆ ಅಧಿಕಾರವಿಲ್ಲವೆಂದು ರಾಮನ ಭಾವವು. ಮತ್ತು ಈಗಲೂ ರಾವಣನು ಶರಣಾಗತನಾದಪಕ್ಷದಲ್ಲಿ ವಿಭೀಷಣನಿಗೆ ಕೊಟ್ಟ ಮಾತನ್ನು ತಪ್ಪದಂತೆ ತನ್ನ ಕೋಸಲ ರಾಜ್ಯವನ್ನಾದರೂ ಅವನಿಗೆ ಕೊಟ್ಟುಬಿಡುವುದಕ್ಕೆ ತಾನು ಸಿದ್ಧನಾಗಿರುವೆನೆಂದೂ ಭಾವವು. ಅಥವಾ ರಾವಣನು ಶರಣಾಗತನಾದ ಪಕ್ಷದಲ್ಲಿ ಅವನಿಗೆ ಪ್ರಾಣದಾನವನ್ನು ಮಾತ್ರ ಮಾಡಬಹುದೇ ಹೊರತು ವಿಭೀಷಣನಿಗೆ ಲಂಕಾರಾಜ್ಯವು ಸ್ಥಿರವೆಂದೂ ಗ್ರಹಿಸಬಹುದು) ಹಾಗಿಲ್ಲದಿದ್ದರೆ ಇದೋ ! ಈ ನನ್ನ ತೀಕ್ಷ್ಣ ಬಾಣಗಳಿಂದ ಲೋಕದಲ್ಲಿ ರಾಕ್ಷಸರ ಹುಟ್ಟೇ ಇಲ್ಲದಂತೆ ಮಾಡಿಬಿಡುವುದೇ ನಿಜವು. ಧರ್ಮಾತ್ಮನಾಗಿಯೂ, ರಾಕ್ಷಸೋತ್ತಮನಾಗಿಯೂ ಇರುವ

ವಿಭೀಷಣನು ಆಗಲೇ ಬಂದು ನನ್ನಲ್ಲಿ ಶರಣಾಗತನಾಗಿರುವನು. ಅನುಕೂಲ್ಯ ಸಂಪತ್ತಿಯುಳ್ಳ ಈತನಿಗೆ ಲಂಕಾರಾಜ್ಯವನ್ನು ನಿಷ್ಕಂಟಕವಾಗಿಮಾಡಿ ಒಪ್ಪಿಸಿ ಬಿಡುವೆನು. ಇದಕ್ಕೆ ಸಂದೇಹವೇ ಇಲ್ಲ. ನೀನೋ ಧರ್ಮಶೂನ್ಯನು. ನಿನ್ನಂತೆ ಕೆಲವು ಮೂರ್ಖರನ್ನೇ ಸಹಾಯಕ್ಕಾಗಿ ಇಟ್ಟುಕೊಂಡಿರುವೆ. ನೀನು ಪಾಪಾತ್ಮನು, ಚಪಲಚಿತ್ತನು. ಇಂತಹ ನಿನಗೆ ಇನ್ನುಮುಂದೆ ಕ್ಷಣಮಾತ್ರವಾದರೂ ಈ ಲಂಕಾರಾಜ್ಯವನ್ನನುಭವಿಸುವುದು ಶಕ್ಯವಲ್ಲ. ಎಲೇ ರಾಕ್ಷಸಾ! ಈಗಲೂ ನೀನು ಸೀತೆಯನ್ನು ತಂದೊಪ್ಪಿಸಿ ಶರಣಾಗತನಾಗುವ ಪಕ್ಷದಲ್ಲಿ ನಿನ್ನ ಪ್ರಾಣಗಳನ್ನಾದರೂ ಉಳಿಸಿಕೊಳ್ಳಬಹುದು. ಈ ಲಂಕಾರಾಜ್ಯವೇನೋ ವಿಭೀಷಣನ ಕೈಗೆ ಆಗಲೇ ಸೇರಿಹೋಯಿತು. ರಾವಣಾ, ಈಗ ನೀನು ಧೈರ್ಯದಿಂದ ಯುದ್ಧವನ್ನೇ ನಡೆಸಿದರೂ ನಡೆಸು. ಆ ಯುದ್ಧದಲ್ಲಿ ನಿನ್ನ ಶೌರ್ಯವೆಲ್ಲವನ್ನೂ ತೋರಿಸು! ಹೇಗಿದ್ದರೂ ಮುಂದಿನ ಯುದ್ಧದಲ್ಲಿ ನೀನು ನನ್ನ ಬಾಣಗಳಿಂದ ಸತ್ತುಬೀಳುವುದೇನೋ ನಿಜವು. ಹಾಗಿದ್ದರೂ ಆದರಿಂದ ನಿನಗೆ ಮೇಲ್ಮೆಯೇ ಹೊರತು ಹಾನಿಯಿಲ್ಲ. ನನ್ನ ಬಾಣಗಳಿಂದ ನೀನು ಹತನಾದ ಪಕ್ಷದಲ್ಲಿ ನಿನ್ನ ಪಾಪಗಳೆಲ್ಲವೂ ನೀಗಿ ಪರಿಶುದ್ಧನಾಗುವೆ. ಹಾಗಿಲ್ಲದೆ ನೀನು ನನಗೆ ಹೆದರಿ, ಪಕ್ಷಿಯಂತೆ ಮನೋವೇಗದಿಂದ ಮೂರು ಲೋಕಗಳನ್ನೂ ಸುತ್ತಿದರೂ, ನನ್ನ ಕಣ್ಣಿಗೆ ಬಿದ್ದಮೇಲೆ ನೀನು ಬದುಕಿಹೋಗುವ ಮಾತು ಸುಳ್ಳು. ಎಲೆ ರಾವಣಾ! ಈಗಲೂ ನಾನು ನಿನಗೆ ಒಂದು ಹಿತವನ್ನು ಹೇಳುವೆನು ಕೇಳು! ಇನ್ನುಮೇಲೆ ಈ ಲೋಕದಲ್ಲಿ ಒಬ್ಬ ರಾಕ್ಷಸನನ್ನಾದರೂ ನಾನು ಉಳಿಸುವವನಲ್ಲ. ಆದುದರಿಂದ ನೀನು ಸತ್ತಮೇಲೆ ನಿನಗೆ ಅಪರಕ್ರಿಯೆಗಳನ್ನು ನಡೆಸುವವರೂ ಇಲ್ಲದಂತಾಗುವುದು. ಆದುದರಿಂದ ಈಗ ನೀನೇ ನಿನಗಾಗಿ ಮುಂದೆ ನಡೆಯಬೇಕಾದ ಅಪರಕ್ರಿಯೆಗಳನ್ನೂ ನಡೆಸಿಕೊಂಡುಬಿಡು. ಈಗಲೇ ಹೋಗಿ ನಿನ್ನ ಲಂಕೆಯನ್ನು ಮನಸ್ತೃಪ್ತಿಯಾಗುವಂತೆ ಒಂದಾವರ್ತಿ ಚೆನ್ನಾಗಿ ನೋಡಿಯೂ ಬಂದುಬಿಡು. ಇನ್ನುಮೇಲೆ ನೀನು ಅದನ್ನು ನೋಡಲಾರೆ. ನಿನ್ನ ಪ್ರಾಣಗಳು ನನ್ನ ಕೈಯಲ್ಲಿ ಸೇರಿಹೋಗಿರುವುವು" ಎಂದು ನಾನು ಹೇಳಿದುದಾಗಿ ರಾವಣನಿಗೆ ತಿಳಿಸು" ಎಂದನು. ರಾಮನ ಬಾಯಿಂದ ಈ ಮಾತು ಬಂದೊಡನೆಯೇ ಅಂಗದನು ಆಕಾಶಕ್ಕೆ ಹಾರಿ, ಮೂರ್ತಿಮಂತನಾದ ಅಗ್ನಿಹೋತ್ರನೋ ಎಂಬಂತೆ ತೇಜಸ್ಸಿನಿಂದ ಜ್ವಲಿಸುತ್ತ, ಲಂಕೆಯ ಕಡೆಗೆ ಹೋದನು. ಸಂತೋಷದಿಂದ ವಿಕಸಿತ ಕಾಂತಿಯುಳ್ಳ ಆ ಅಂಗದನು ಮುಹೂರ್ತಕಾಲದಲ್ಲಿಯೇ

ರಾವಣನ ಅರಮನೆಯನ್ನು ಸೇರಿ, ಅಲ್ಲಿ ಮಂತ್ರಿಗಳೊಡನೆ ಕುಳಿತಿದ್ದ ರಾವಣನನ್ನು ಕಂಡನು. ಬಂಗಾರದ ತೋಳ್ಬಳೆಗಳಿಂದ ಶೋಭಿತನಾದ ಆ ವಾಲಿಪುತ್ರನು, ರಾವಣನ ಸಮೀಪಕ್ಕೆ ಬಂದು, ಉರಿಯುವ ಬೆಂಕಿಯಂತೆ ತೇಜಸ್ಸಿನಿಂದ ಜ್ವಲಿಸುತ್ತ ಮುಂದೆ ಬಂದು ನಿಂತನು. ಆ ವಾನರೋತ್ತಮನು ಮೊದಲು ರಾವಣನಿಗೆ ತಾನು ಯಾರೆಂಬುದನ್ನು ನಾಮನಿರ್ವಚನಪೂರ್ವಕನಾಗಿ ತಿಳಿಸಿ, ಆಮೇಲೆ ಆ ಸಭೆಯಲ್ಲಿದ್ದ ಮಂತ್ರಿಗಳೆಲ್ಲರೂ ಕೇಳುವಂತೆ, ರಾಮನು ಹೇಳಿದ ಹಿತವಾಕ್ಯಗಳೆಲ್ಲವನ್ನೂ ಕ್ರಮವಾಗಿ ಅವನು ಹೇಳಿದಂತೆಯೇ ರಾವಣನಿಗೆ ಹೇಳಲಾರಂಭಿಸಿ, "ಎಲೆ ರಾಕ್ಷಸಾ! ನಾನು ಕೋಸಲಾಧಿಪತಿಯಾದ ರಾಮನಿಗೆ ದೂತನು. ವಾಲಿಯ ಮಗನು. ಅಂಗದನೆಂದು ನನಗೆ ಹೆಸರು. ನೀನೂ ನನ್ನ ಹೆಸರನ್ನು ಕೇಳಿದ್ದರೂ ಇರಬಹುದು. ಕೌಸಲ್ಯೆಗೆ ಆನಂದವರ್ಧಕನಾಗಿ ರಘುಕುಲದಲ್ಲಿ ಹುಟ್ಟಿದ ನಮ್ಮ ಪ್ರಭುವಾದ ರಾಮನು ನಿನಗೆ ನನ್ನ ಮೂಲಕವಾಗಿ ಈ ಮಾತುಗಳನ್ನು ಹೇಳಿಕಳುಹಿಸಿರುವನು. 'ಎಲೆ ಕ್ರೂರರಾಕ್ಷಸನೆ! ಪಟ್ಟಣದಿಂದ ಹೊರಗೆ ಬಂದು ನನಗಿದಿರಾಗಿ ನಿಂತು ಯುದ್ಧಮಾಡು. ಹಾಗೆ ಮಾಡದಿದ್ದರೆ ನೀನು ಗಂಡಸಲ್ಲ! ಎಲೇ ಘಾತುಕಾ! ಇನ್ನು ಸ್ವಲ್ಪ ಕಾಲದಲ್ಲಿಯೇ ನಾನು ನಿನ್ನನ್ನೂ, ನಿನ್ನ ಮಂತ್ರಿಗಳನ್ನೂ, ನಿನ್ನ ಪುತ್ರಮಿತ್ರ ಬಾಂಧವಾದಿಗಳನ್ನೂ ಕೊಲ್ಲುವವನಾಗಿರುವೆನು. ನೀನು ಸತ್ತ ಮೇಲೆಯೇ ಮೂರು ಲೋಕವೂ ನಿರ್ಭಯವಾಗಿ ಸುಖದಿಂದಿರಬೇಕು. ದೇವದಾನವಯಕ್ಷ ಗಂಧರ್ವ ಪನ್ನಗ ರಾಕ್ಷಸರೆಂಬ ಸಮಸ್ತ ದೇವಜಾತಿಗೂ ಶತ್ರುವಾಗಿ ಋಷಿಗಳಿಗೆ ಕಂಟಕಪ್ರಾಯನಾದ ನಿನ್ನನ್ನು ಎಂದಿಗೂ ನಾನು ಕೊಲ್ಲದೇ ಬಿಡುವವನಲ್ಲ. ಈಗಲೂ ನೀನು ನನ್ನನ್ನು ಸತ್ಕರಿಸಿ, ಸೀತೆಯನ್ನು ತಂದೊಪ್ಪಿಸಿ, ನನ್ನ ಕಾಲುಗಳಲ್ಲಿ ಬೀಳದಿದ್ದರೆ, ನಿನ್ನನ್ನು ಕೊಂದು, ವಿಭೀಷಣನಿಗೆ ಲಂಕಾಧಿಪತ್ಯವನ್ನು ಕೊಡುವೆನು' ಎಂದು ನಿನಗೆ ಹೇಳುವಂತೆ ರಾಮನು ಹೇಳಿರುವನು" ಎಂದನು. ವಾನರೋತ್ತಮನಾದ ಅಂಗದನು ಹೀಗೆ ಪರುಷವಾಕ್ಯವನ್ನಾಡುತ್ತಿರುವಾಗಲೇ, ರಾವಣನು ಕೋಪದಿಂದ ಮೈಮರೆತು ಹೋದನು. ಅವನ ಕಣ್ಣುಗಳು ಕೆಂಡದಂತೆ ಕೆಂಪಾದವು. ಹೀಗೆ ಕೋಪವಶನಾದ ಅವನು ತನ್ನ ಮಂತ್ರಿಗಳನ್ನು ನೋಡಿ, "ಎಲೈ ಅಮಾತ್ಯರೆ, ಈ ದುರಾತ್ಮನನ್ನು ಹಿಡಿದು ಕೊಲ್ಲಿರಿ, ಬಿಡಬೇಡಿರಿ, ಚಿತ್ರವಧೆಮಾಡಿ ಕೊಲ್ಲಿಸಿರಿ!" ಎಂದು ಕೂಗಿದನು. ಅವನ ಈ ಆಜ್ಞೆಯನ್ನು ಕೇಳಿದೊಡನೆ, ಉರಿಯುವ ಬೆಂಕಿಯಂತೆ ಮಹಾ ತೇಜಸ್ವಿಗಳಾದ ನಾಲ್ಕುಮಂದಿ ಘೋರ

ರಾಕ್ಷಸರು ಬಂದು ಅಂಗದನನ್ನು ಹಿಡಿದರು. ಅಂಗದನು ಬಹಳ ಧೈರ್ಯಶಾಲಿಯಾದುದರಿಂದ, ಅವರಿಗೆ ತನ್ನ ಶಕ್ತಿಯನ್ನು ಚೆನ್ನಾಗಿ ತೋರಿಸಬೇಕೆಂಬುದಕ್ಕಾಗಿ, ಆಗಲೇ ಅವರನ್ನು ಹಿಡಿಯದೆ, ಅವರ ಕೈಗೆ ಸುಲಭವಾಗಿ ಸಿಕ್ಕಿದಂತೆ ನಟಿಸಿ, ಆ ನಾಲ್ವರೂ ತನ್ನ ತೋಳನ್ನು ಬಿಗಿಯಾಗಿ ಅಪ್ಪಿಹಿಡಿದು ನಿಂತಮೇಲೆ, ಅವರನ್ನು ಹಕ್ಕಿಯಂತೆ ತನ್ನ ಎರಡು ಕೈಗಳಿಂದಲೂ ಬಿಗಿಯಾಗಿ ಹಿಡಿದುಕೊಂಡು ಪರ್ವತದಂತೆ ಮಹೋನ್ನತವಾದ ಒಂದು ಪ್ರಾಸಾದಕ್ಕೆ ಹಾರಿಬಿಟ್ಟನು. ಅಂಗದನು ಆ ಪ್ರಾಸಾದದ ಮೇಲೆ ಕುಳಿತು ಅಲ್ಲಿಂದ ತಾನು ಹಿಡಿದು ತಂದಿದ್ದ ಆ ರಾಕ್ಷಸರನ್ನು ದೂರಕ್ಕೆ ಒಗೆದು ಬಿಟ್ಟನು. ರಾವಣನು ನೋಡುತ್ತಿರುವಾಗಲೇ ಆ ನಾಲ್ಕು ಮಂದಿಯೂ, ಅಂಗದನ ಬಾಹುವೇಗದಿಂದೊದರಲ್ಪಟ್ಟು ಧೊಪ್ಪನೆ ನೆಲಕ್ಕೆ ಬಿದ್ದರು. ಆಮೇಲೆ ಮಹಾವೀರ್ಯವಂತನಾದ ಅಂಗದನು, ತನ್ನ ಮುಂದೆ ಪರ್ವತ ಶಿಖರದಂತೆ ಮಹೋನ್ನತವಾಗಿ ಕಾಣುತ್ತಿದ್ದ ರಾವಣನ ಪ್ರಾಸಾದ ಶಿಖರವನ್ನು ನೋಡಿದನು. ಆ ಶಿಖರವನ್ನು ಕಂಡೊಡನೆ ಥಟ್ಟನೆ ಅದರಮೇಲೆ ಹಾರಿ, ಅದನ್ನು ತನ್ನ ಕಾಲಿನಿಂದ ಮೆಟ್ಟಲು, ಮೊದಲು ಇಂದ್ರನಿಂದ ಭೇದಿಸಲ್ಪಟ್ಟ ಹಿಮವತ್ಪರ್ವತದ ಶಿಖರದಂತೆ ರಾವಣನು ನೋಡುತ್ತಿರುವಾಗಲೇ ಆತನ ಪದಾಘಾತಕ್ಕೆ ಆ ಪ್ರಾಸಾದವು ಪುಡಿಪುಡಿಯಾಗಿ ಒಡೆದು ಬಿತ್ತು. ಹೀಗೆ ಅಂಗದನು ರಾವಣನ ಉಪ್ಪರಿಗೆ ಶಿಖರವನ್ನು ಮುರಿದಮೇಲೆ, ರಾಕ್ಷಸರೆಲ್ಲರೂ ಕೇಳುವಂತೆ ತನ್ನ ಹೆಸರನ್ನು ಮತ್ತೊಂದಾವರ್ತಿ ಕೂಗಿ ಹೇಳಿ, ಮಹಾಧ್ವನಿಯಿಂದ ಸಿಂಹನಾದವನ್ನು ಮಾಡುತ್ತ ಆಕಾಶಕ್ಕೆ ಹಾರಿದನು. ಹೀಗೆ ಸಮಸ್ತ ರಾಕ್ಷಸರಿಗೂ ದುಃಖವನ್ನುಂಟುಮಾಡಿ, ವಾನರರೆಲ್ಲರನ್ನೂ ಸಂತೋಷಪಡಿಸುತ್ತ ಮಹಾವೇಗದಿಂದ ಅಂತರಿಕ್ಷಮಾರ್ಗವಾಗಿ ಬಂದು, ವಾನರಸೇನೆಯ ಮಧ್ಯದಲ್ಲಿಳಿದು, ರಾಮನ ಪಕ್ಕವನ್ನು ಸೇರಿದನು. ಅತ್ತಲಾಗಿ ರಾವಣನು ತನ್ನ ಪ್ರಾಸಾದವು ಭಂಗವಾದುದಕ್ಕಾಗಿ ಬಹಳ ಕೋಪಾವೇಶವನ್ನು ಹೊಂದಿ, ಇನ್ನುಮೇಲೆ ತನಗೆ ಉಳಿಗಾಲವಿಲ್ಲವೆಂದೂ ನಿಶ್ಚಯಿಸಿಕೊಂಡು, ಚಿಂತೆಯಿಂದ ನಿಟ್ಟುಸಿರನ್ನು ಬಿಡುತ್ತಿದ್ದನು. ಇತ್ತಲಾಗಿ ರಾಮನಾದರೋ ಅಂಗದನು ಜಯಶೀಲನಾಗಿ ಬಂದುದನ್ನು ನೋಡಿ, ಸಂತೋಷದಿಂದ ಸಿಂಹನಾದ ಮಾಡುತ್ತಿದ್ದ ಅನೇಕ ವಾನರರಿಂದ ಪರಿವೃತನಾಗಿ, ಶತ್ರುವಧವನ್ನು ಕೋರುತ್ತ, ಮೇಲೆ ಮೇಲೆ ಯುದ್ಧೋತ್ಸಾಹದಿಂದುಬ್ಬುತ್ತಿದ್ದನು. ಆಗ ವಾನರಸೇನೆಯಲ್ಲಿ ಮಹಾವೀರ್ಯಶಾಲಿಯಾಗಿಯೂ, ಪರ್ವತಶಿಖರಾಕಾರನಾಗಿಯೂ ಇದ್ದ ಸುಷೇಣನು, ಕಾಮರೂಪಿ

ಗಳಾದ ಅನೇಕ ವಾನರರಿಂದ ಪರಿವೇಷ್ಟಿತನಾಗಿ, ಸುಗ್ರೀವಾಜ್ಞೆಯನ್ನನುಸರಿಸಿ, ಚಂದ್ರನು ನಕ್ಷತ್ರರಾಶಿಗಳಲ್ಲಿ ಕ್ರಮವಾಗಿ ತಿರುಗುತ್ತಿರುವಂತೆ, ಲಂಕೆಯ ನಾಲ್ಕು ಬಾಗಿಲುಗಳನ್ನೂ ಕಾವಲಾಗಿ ಸುತ್ತಿ ತಿರುಗುತ್ತಿದ್ದನು. ಹೀಗೆ ನೂರಾರು ಅಕ್ಷೋಹಿಣಿ ಯಷ್ಟು ವಾನರಸೈನ್ಯವು ಸಮುದ್ರವನ್ನು ದಾಟಿಬಂದು ನಿಂತಿರುವುದನ್ನು ನೋಡಿ ಲಂಕೆಯಲ್ಲಿದ್ದ ಧೀರ ರಾಕ್ಷಸರಲ್ಲಿ ಕೆಲವರು ವಿಸ್ಮಯಪಡುತ್ತಿದ್ದರು. ಕೆಲವರು ಭಯ ದಿಂದ ನಡುಗುತ್ತಿದ್ದರು. ಸಾಹಸದ ಕೆಚ್ಚುಳ್ಳ ಕೆಲವರು ದೊಡ್ಡ ಯುದ್ಧವು ಬಂದೊದಗಿತೆಂದು ಸಂತೋಷದಿಂದ ಹಿಗ್ಗುತ್ತಿದ್ದರು. ಆ ಲಂಕೆಯ ಕೋಟೆಗೂ ಕಂದ ಕಕ್ಕೂ ನಡುವೆ ಇರುವ ಪ್ರದೇಶವೆಲ್ಲವೂ ವಾನರರಿಂದಲೇ ವ್ಯಾಪ್ತವಾಗಿ, ಕಪಿ ಮಯವಾದ ಬೇರೊಂದು ಪ್ರಾಕಾರವೋ ಎಂಬಂತೆ ಕಾಣುತ್ತಿತ್ತು. ಈ ಕಪಿಗಳ ಗುಂಪನ್ನು ನೋಡಿ ಅನೇಕ ರಾಕ್ಷಸರು ಭಯದಿಂದ ಮೈಮರೆತು ಹಾಹಾಕಾರ ಗಳನ್ನು ಮಾಡುತ್ತಿದ್ದರು. ರಾಕ್ಷಸರಾಜಧಾನಿಯಾದ ಆ ಲಂಕೆಯ ಸುತ್ತಲೂ ಹೀಗೆ ಮಹಾಭಯಂಕರವಾದ ದೊಡ್ಡ ಕೋಲಾಹಲವು ಹೊರಡಲು, ಆ ಲಂಕೆ ಯಲ್ಲಿದ್ದ ಶೂರರೆಲ್ಲರೂ ದೊಡ್ಡದೊಡ್ಡ ಆಯುಧಗಳನ್ನು ಧರಿಸಿ, ಪ್ರಳಯಕಾಲದ ಮಹಾ ವಾತಗಳಂತೆ ನಿಂತಲ್ಲಿ ನಿಲ್ಲದೆ ಸುತ್ತುತ್ತಿದ್ದರು.

ಇಲ್ಲಿಗೆ ನಾಲ್ವತ್ತೊಂದನೆಯ ಸರ್ಗವು

ವಾನರ ರಾಕ್ಷಸರ ಯುದ್ಧಾರಂಭವು.

ಆಮೇಲೆ ಅಲ್ಲಿದ್ದ ರಾಕ್ಷಸರೆಲ್ಲರೂ ರಾವಣನ ಮನೆಗೆ ಹೋಗಿ, ರಾಮನು ಅನೇಕ ವಾನರಸೈನ್ಯದೊಡಗೂಡಿ ಲಂಕಾಪುರಿಯನ್ನು ಮುತ್ತಿರುವುದಾಗಿ ತಿಳಿಸಿ ದರು. ಹೀಗೆ ವಾನರರು ಲಂಕಾನಗರವನ್ನು ಮುತ್ತಿನಿಂತಿರುವರೆಂಬುದನ್ನು ಕೇಳಿ ರಾವಣನು, ಬಹಳ ಕ್ರೋಧಾವಿಷ್ಟನಾಗಿ, ನಗರರಕ್ಷಣಕಾರ್ಯವನ್ನು ಇಮ್ಮಡಿ ಯಾಗಿ ಹೆಚ್ಚಿಸಿ, ತನ್ನ ಅರಮನೆಯ ಉಪ್ಪರಿಗೆಯನ್ನೇರಿದನು. ಅದರಮೇಲೆ ನಿಂತು, ಇತ್ತಲಾಗಿ ತನ್ನ ಪಟ್ಟಣದ ಸುತ್ತಲೂ, ಅಲ್ಲಲ್ಲಿನ ಪರ್ವತ ಪ್ರದೇಶಗಳನ್ನೂ ಕಾಡುಗಳನ್ನೂ, ತೋಟಗಳನ್ನೂ ಎಡೆಬಿಡದೆ ತುಂಬಿ ನಿಂತಿರುವ ಅಸಂಖ್ಯಾತ ನಾದ ಕಪಿಸೇನೆಯನ್ನು ಕಂಡನು. ಸಮಸ್ತ ಭೂಮಿಯನ್ನೂ ಒಂದೇ ತುತ್ತಾಗಿ ಕಬಳಿಸುವಂತೆ ದಟ್ಟವಾಗಿ ನಿಂತಿದ್ದ ಆ ವಾನರಸೇನೆಯನ್ನು ಕಂಡು, ರಾವಣನು

ತನ್ನಲ್ಲಿ ತಾನು, "ಆಹಾ! ಇಷ್ಟು ದೊಡ್ಡ ಸೈನ್ಯವನ್ನು ನಾಶಮಾಡುವ ಬಗೆಯೇನು?" ಎಂದು ಚಿಂತಿಸುತ್ತಿದ್ದನು. ಹೀಗೆ ಬಹಳ ಹೊತ್ತಿನವರೆಗೆ ಚಿಂತಾಕ್ರಾಂತನಾಗಿದ್ದು, ಕೊನೆಗೆ ಧೈರ್ಯವನ್ನವಲಂಬಿಸಿ, ಕೋಪದಿಂದ ವಿಸ್ತಾರವಾಗಿ ಕಣ್ಣುಗಳನ್ನು ಬಿಚ್ಚಿ, ಪಟ್ಟಣದ ಸುತ್ತಲೂ ನಿಂತಿದ್ದ ವಾನರಸೈನ್ಯವನ್ನೂ, ತನಗೆ ಮೃತ್ಯುರೂಪನಾಗಿ ನಿಂತಿದ್ದ ರಾಮನನ್ನೂ ನೋಡಿದನು. ಇತ್ತಲಾಗಿ ಶ್ರೀರಾಮನೂ ಕೂಡ, ರಣೋತ್ಸಾಹದಿಂದ ಸಂತುಷ್ಟನಾಗಿ, ಆ ವಾನರಸೈನ್ಯದೊಡನೆ ಸ್ವಲ್ಪ ಸ್ವಲ್ಪವಾಗಿ ಮುಂದುವರಿದು, ಪ್ರಾಕಾರದ ಸಮೀಪಕ್ಕೆ ಬಂದು ನಿಂತು, ಆ ಲಂಕಾನಗರಿಯೆಲ್ಲವೂ ಅನೇಕ ಘೋರ ರಾಕ್ಷಸರಿಂದ ಪರಿವೃತವಾಗಿ ಸುರಕ್ಷಿತವಾಗಿರುವುದನ್ನು ಕಂಡನು. ಅಲ್ಲಲ್ಲಿ ಚಿತ್ರವಿಚಿತ್ರಗಳಾದ ಧ್ವಜಪತಾಕೆಗಳಿಂದ ಆ ಪಟ್ಟಣವು ಸುತ್ತಲೂ ಅಲಂಕೃತವಾಗಿರುವುದನ್ನೂ ನೋಡಿದನು. ಹೀಗೆ ಮಹಾವೈಭವದಿಂದ ಅತಿ ಮನೋಹರವಾಗಿ ಶೋಭಿಸುತ್ತಿದ್ದ ಆ ಲಂಕೆಯ ಸೊಬಗನ್ನು ನೋಡಿದ ಕೂಡಲೇ ಅವನ ಮನಸ್ಸಿಗೆ ಸೀತೆಯ ಸ್ಮರಣವುಂಟಾಯಿತು. ಅವನಿಗೆ ಅಪಾರವಾದ ದುಃಖವೂ ಹುಟ್ಟಿತು. ಹೀಗೆ ಸೀತೆಯನ್ನು ಸ್ಮರಿಸಿ ದುಃಖಿಸುತ್ತ ರಾಮನು, "ಆಹಾ! ಜನಕರಾಜನಿಗೆ ಪುತ್ರಿಯಾಗಿ, ಜಿಂಕೆಯ ಮರಿಯ ಕಣ್ಣುಗಳಂತೆ ವಿಶಾಲವಾದ ಕಣ್ಣುಳ್ಳವಳಾಗಿರುವ ಆ ನನ್ನ ಪ್ರಿಯಪತ್ನಿಯಾದ ಸೀತೆಯು ನನ್ನ ನಿಮಿತ್ತವಾಗಿ, ಇದೋ! ಇಲ್ಲಿ ಘೋರರಾಕ್ಷಸರಿಂದ ಪೀಡಿತಳಾಗಿ ದುಃಖದಿಂದ ತಪಿಸುವಳಲ್ಲವೆ? ಅನ್ನಪಾನಗಳೂ ಇಲ್ಲದೆ ಕೃಶಳಾಗಿ ಬರೀನೆಲದ ಮೇಲೆ ಮಲಗಿ ಕಷ್ಟಪಡುತ್ತಿರುವಳಲ್ಲಾ!" ಎಂದು ಕೊರಗುತ್ತಿದ್ದನು. ಆದರೆ ರಾಮನು ಕ್ಷತ್ರಿಯ ಧರ್ಮವನ್ನು ಚೆನ್ನಾಗಿ ಬಲ್ಲವನಾದುದರಿಂದ, ಸೀತೆಯನ್ನು ಕುರಿತು ಹೀಗೆ ವ್ಯಸನಪಡುತ್ತಿದ್ದರೂ, ತನ್ನ ರಣೋತ್ಸಾಹವನ್ನು ಬಿಡದೆ ಮಿತಿಮೀರಿದ ಕೋಪದಿಂದ ತನ್ನ ಕಡೆಯ ವಾನರರನ್ನು ಕುರಿತು, "ಎಲೈ ವೀರರೆ! ಇನ್ನು ತಡಮಾಡಬಾರದು, ಶೀಘ್ರದಲ್ಲಿಯೇ ಶತ್ರುವಧಕ್ಕೆ ಪ್ರಯತ್ನಿಸಿರಿ" ಎಂದು ನಿಯಮಿಸಿದನು. ಯಾವ ಕಾರ್ಯವನ್ನಾದರೂ ಅತಿ ಸುಲಭವಾಗಿ ಲೀಲಾಮಾತ್ರದಿಂದಲೇ ನಿರ್ವಹಿಸಬಲ್ಲ ಮಹಾವೀರ್ಯವುಳ್ಳ, ಆ ರಾಮನು ಹೀಗೆ ಆಜ್ಞಾಪಿಸಿದೊಡನೆಯೇ, ಅಲ್ಲಿದ್ದ ಸಮಸ್ತ ವಾನರ ಸೈನಿಕರೂ ಒಬ್ಬರಿಗೊಬ್ಬರು ಹಟದಿಂದ, ನಾನು ತಾನು ಎಂದು ಮುಂದೆ ನುಗ್ಗುತ್ತ, ಯುದ್ಧಾರಂಭ ಸೂಚಕವಾದ ಸಿಂಹನಾದವನ್ನು ಮಾಡಿದರು. ಈ ಸಮಸ್ತ ವಾನರರೂ ಒಬ್ಬರಿಗೊಬ್ಬರು "ಈ ಕ್ಷಣದಲ್ಲಿಯೇ

ನಾವು ಈ ಲಂಕೆಯನ್ನು ಪರ್ವತಶಿಖರಗಳಿಂದ ಬೀಸಬಡಿದಾಗಲೀ, ಮುಷ್ಟಿಗಳಿಂದ ಹೊಡೆದಾಗಲೀ, ಪುಡಿಪುಡಿಯಾಗಿ ಮಾಡಿ ಧೂಳಿಬ್ಬಿಸಿಬಿಡಬೇಕು" ಎಂದು ಹೇಳಿ ಮನಸ್ಸಿನಲ್ಲಿ ನಿರ್ಧರಿಸಿಕೊಂಡರು. ಅದರಂತೆಯೇ ಆ ಕಪಿವೀರರೆಲ್ಲರೂ, ಅಲ್ಲಲ್ಲಿ ಸಿಕ್ಕಿದ ದೊಡ್ಡ ದೊಡ್ಡ ಪರ್ವತಶಿಖರಗಳನ್ನೂ, ಪರ್ವತಖಂಡಗಳನ್ನೂ ಬಗೆ ಬಗೆಯ ವೃಕ್ಷಸಮೂಹಗಳನ್ನು ಕೈಗೆತ್ತಿಕೊಂಡು, ಯುದ್ಧಸನ್ನದ್ಧರಾಗಿ ನಿಂತಿದ್ದರು. ರಾಕ್ಷಸೇಶ್ವರನಾದ ರಾವಣನು ಉಪ್ಪರಿಗೆಯ ಮೇಲೆ ನಿಂತು ನೋಡುತ್ತಿರುವಾಗಲೇ, ಈ ವಾನರ ಸೇನೆಗಳೆಲ್ಲವೂ ಬೇರೆಬೇರೆ ಭಾಗಗಳಾಗಿ ಹೊರಟು, ರಾಮನ ಮನಸ್ಸಿಗೆ ಸಂತೋಷವನ್ನು ಹುಟ್ಟಿಸುತ್ತ, ಆ ಲಂಕೆಯ ಗೋಡೆಯನ್ನೇರಿದವು. ತಾಮ್ರದಂತೆ ಕೆಂಪಾದ ಮುಖವುಳ್ಳವರಾಗಿಯೂ, ಬಂಗಾರದಂತೆ ಮೈಬಣ್ಣವುಳ್ಳವರಾಗಿಯೂ, ಇದ್ದ ಆ ವಾನರರೆಲ್ಲರೂ ರಾಮನಿಗಾಗಿ ತಮ್ಮ ತಮ್ಮ ಪ್ರಾಣಗಳನ್ನೊಪ್ಪಿಸುವುದಕ್ಕೂ ಹಿಂಜರಿಯದೆ ದೃಢನಿಶ್ಚಯವನ್ನು ಮಾಡಿಕೊಂಡು ಸಾಲೆ, ತಾಳೆ, ಮೊದಲಾದ ದೊಡ್ಡಮರಗಳನ್ನೂ ದೊಡ್ಡದೊಡ್ಡ ಶಿಲೆಗಳನ್ನು ಆಯುಧಗಳನ್ನಾಗಿ ಹಿಡಿದು, ಆ ಲಂಕೆಯ ಕೋಟೆಯನ್ನೇರಿದರು. ಆಗಲೇ ಕೆಲವು ವಾನರರು ತಾವು ಕೈಯಲ್ಲಿ ಹಿಡಿದಿದ್ದ ಪರ್ವತ ಶಿಖರಗಳಿಂದಲೂ, ಮುಷ್ಟಿಗಳಿಂದಲೂ ಹೊಡೆದು ಆ ಲಂಕೆಯ ಪ್ರಾಕಾರ ಶಿಖರಗಳನ್ನೂ, ಅದರ ಸುತ್ತಲಿನ ಉದ್ಯಾನವನಗಳನ್ನೂ, ಪುರದ್ವಾರಗಳನ್ನೂ ಮುರಿದು ಕೆಡಹುತ್ತ ಮುಂದೆ ಮುಂದೆ ಸಾಲಾಗಿ ಬರುತ್ತಿದ್ದರು. ಅಲ್ಲಲ್ಲಿ ಕೆಲವು ವಾನರರು ಲಂಕಾಪಟ್ಟಣದ ಸುತ್ತಲೂ ತಿಳಿನೀರಿನಿಂದ ತುಂಬಿ ಮನೋಹರಗಳಾಗಿದ್ದ ಕಂದಕಗಳಿಗೆ ಕಲ್ಲುಮಣ್ಣುಗಳನ್ನೂ, ಹುಲ್ಲುಕಡ್ಡಿಗಳನ್ನೂ ತಂದು ತುಂಬಿಬಿಟ್ಟರು. ಹೀಗೆ ಅಲ್ಲಲ್ಲಿ ವಾನರರು ಸಾವಿರಸಾವಿರವಾಗಿಯೂ, ಕೋಟಿ, ಕೋಟಿಗಳಾಗಿಯೂ, ನೂರು ಕೋಟಿಗಳಾಗಿಯೂ ಗುಂಪುಗೂಡಿ, ಲಂಕೆಯ ಕೋಟೆಯನ್ನು ಲಗ್ಗೆ ಹತ್ತಿದರು. ಕೆಲವರು ಸುವರ್ಣಮಯಗಳಾದ ತೋರಣದ ಬಾಗಿಲುಗಳನ್ನು ಬಡಿದು ಕೆಡಹಿದರು. ಕೆಲವರು ಕೈಲಾಸ ಶಿಖರದಂತೆ ಶೋಭಿಸುತ್ತಿದ್ದ ಗೋಪುರಗಳನ್ನು ಮುರಿದು ಹಾಕಿದರು. ಆಗ ಆ ವಾನರವೀರರಿಗಿದ್ದ ರಣೋತ್ಸಾಹವನ್ನು ಕೇಳಬೇಕೆ? ಒಮ್ಮೊಮ್ಮೆ ಮುಂದೆ ಹಾರುವರು. ಅಲ್ಲಿಂದ ಹಾಗೆಯೇ ಹಿಂದಕ್ಕೆ ನೆಗೆಯುವರು, ಆಗಾಗ ಸಿಂಹನಾದಗಳಿಂದ ಬೊಬ್ಬಿಡುವರು. ಹೀಗೆ ಆನೆಯ ಸಲಗಗಳಂತಿದ್ದ ಆ ಕಪಿವೀರರೆಲ್ಲರೂ ಲಂಕೆಯ ಮೇಲೆ ಹಾರಿ, ಅಲ್ಲಿನ ಗೋಪುರಗಳ ತುದಿಯಲ್ಲಿ ಕುಳಿತು, "ಅತಿ ಬಲಾಢ್ಯನಾದ ರಾಮನಿಗೆ

ಜಯವು. ಮ ಹಾ ಬ ಲ ನಾ ದ ಲಕ್ಷ್ಮಣನಿಗೆ ಜಯವು. ರಾಮನಿಂದ ರಕ್ಷಿತನಾದ ನಮ್ಮ ರಾಜನಾದ ಸುಗ್ರೀವನಿಗೆ ಜಯವು" ಎಂದು ದೊಡ್ಡಧ್ವನಿಯಿಂದ ಘೋಷಿಸಿ ಸಿಂಹನಾದವನ್ನು ಮಾಡುತ್ತಿದ್ದರು. ಕಾಮರೂಪಿಗಳಾದ ಆ ವಾನರರೆಲ್ಲರೂ ಒಬ್ಬೊಬ್ಬರಾಗಿ ಲಂಕೆಯ ಪ್ರಾಕಾರದಮೇಲೆ ಹಾರಿಬಿಟ್ಟರು. ಇಷ್ಟರಲ್ಲಿ ವೀರಬಾಹುವೆಂದೂ, ಸುಬಾಹುವೆಂದೂ, ನಳನೆಂದೂ ಪ್ರಸಿದ್ಧರಾದ ಮೂವರು ವಾನರ ಯೂಥಪತಿಗಳೂ, ಆ ಪ್ರಾಕಾರದ ಮೇಲೆ ಹಾರಿ ನಿಂತು, ಲಂಕೆಯೊಳಗೆ ತಮ್ಮ ಸೈನ್ಯಗಳನ್ನು ನಿಲ್ಲಿಸುವುದಕ್ಕೆ ತಕ್ಕಂತೆ ಅನುಕೂಲವಾದ ಸ್ಥಳವನ್ನು ನೋಡಿ ಆ ಸೇನೆಯನ್ನು ಆಯಾ ವ್ಯೂಹಗಳನ್ನಾಗಿ ನಿಲ್ಲಿಸಿದರು. ಬಲಾಢ್ಯನಾದ ಕುಮುದನು ಜಯಶೀಲರಾದ ಹತ್ತುಕೋಟಿ ವಾನರರಿಂದ ಪರಿವೃತನಾಗಿ, ಈಶಾನ್ಯದ ಮೂಲೆಯಲ್ಲಿದ್ದು ಪೂರ್ವದ್ವಾರವನ್ನಾಕ್ರಮಿಸಿ ನಿಂತನು. ಪ್ರಘಸನೂ ಮಹಾಬಾಹುವಾದ ಪನಸನೂ, ಅನೇಕ ವಾನರರೊಡಗೂಡಿ ಕುಮುದನ ಸಹಾಯಕ್ಕಾಗಿ ಆ ಪೂರ್ವದ್ವಾರದಲ್ಲಿಯೇ ನಿಂತರು. ವೀರನಾಗಿಯೂ, ಬಲಾಢ್ಯನಾಗಿಯೂ ಇದ್ದ ಶತಬಲಿಯು, ಇಪ್ಪತ್ತು ಕೋಟಿ ವಾನರರೊಡಗೂಡಿ ಆಗ್ನೇಯದ ಮೂಲೆಯಲ್ಲಿ ನಿಂತು ದಕ್ಷಿಣದ ಬಾಗಿಲನ್ನಾಕ್ರಮಿಸಿದನು. ಮಹಾಬಲಶಾಲಿಯಾದ, ತಾರೆಯ ತಂದೆಯಾದ ಸುಷೇಣನು, ಅರವತ್ತುಕೋಟಿ ವಾನರರೊಡಗೂಡಿ, ನೈಋತ್ಯದ ಮೂಲೆಯಲ್ಲಿದ್ದು, ಪಶ್ಚಿಮದ ಬಾಗಿಲನ್ನಾಕ್ರಮಿಸಿ ನಿಂತನು. ವೀರಾಗ್ರೇಸರನಾದ ರಾಮನು ಲಕ್ಷ್ಮಣಸಹಿತನಾಗಿ ಉ ತ್ತ ರ ದ ಬಾಗಿಲನ್ನಾಕ್ರಮಿಸಿ ನಿಂ ತ ನು. ವಾನರರಾಜನಾದ ಸುಗ್ರೀವನು ಕೂಡ ವಾಯುವ್ಯದ ಮೂಲೆಯಲ್ಲಿದ್ದು, ರಾಮನಿಗೆ ಸಹಾಯಕನಾಗಿ ಆ ಉತ್ತರದ್ವಾರವನ್ನೇ ಆಕ್ರಮಿಸಿ ನಿಂತನು. ನೋಡಿದ ಮಾತ್ರದಲ್ಲಿಯೇ ಭಯವನ್ನು ಹುಟ್ಟಿರುವಂತೆ ಮಹಾಕಾಯವುಳ್ಳವನಾಗಿಯೂ, ಮಹಾವೀರ್ಯಶಾಲಿಯಾಗಿಯೂ ಇದ್ದ ಗವಾಕ್ಷನೆಂಬ ಗೋಲಾಂಗೂಲ ಯೂಥಪತಿಯು ಕೋಟಿ ಗೋಲಾಂಗೂಲ (ಸಿಂಗಳೀಕ)ಗಳಿಂದ ಪರಿವೃತನಾಗಿ, ರಾಮನ ಪಾರ್ಶ್ವಭಾಗದಲ್ಲಿ ನಿಂತನು. ಧೂಮ್ರನೆಂಬ ಭಲ್ಲೂಕ ವೀರನು, ಕೋಟಿ ಭಲ್ಲೂಕಗಳೊಡಗೂಡಿ ರಾಮನ ಮತ್ತೊಂದು ಪಾರ್ಶ್ವದಲ್ಲಿ ನಿಂತನು. ವೀರನಾದ ವಿಭೀಷಣನು ಯುದ್ಧ ಕವಚವನ್ನು ತೊಟ್ಟು, ಗದೆಯನ್ನು ಕೈಯಲ್ಲಿ ಹಿಡಿದು, ತನ್ನ ಮಂತ್ರಿಗಳೊಡನೆ ತಾನೂ ಯುದ್ಧಸನ್ನದ್ಧನಾಗಿ, ಆ ರಾಮನ ಪಕ್ಕದಲ್ಲೇ ಇದ್ದನು. ಗಜನೂ,

ಗವಾಕ್ಷನೂ, ಗವಯನೂ, ಶರಭನೂ, ಗಂಧಮಾದನನೂ ಈ ಐದುಮಂದಿ ವಾನರ ಯೂಥಪತಿಗಳೂ, ಅಲ್ಲಲ್ಲಿ ಸೈನ್ಯದ ನಾಲ್ಕು ಕಡೆಗಳನ್ನೂ ಸುತ್ತಿ ತಿರುಗುತ್ತ, ಆ ಸೇನೆಯನ್ನು ರಕ್ಷಿಸುತ್ತಿದ್ದರು. ಅತ್ತಲಾಗಿ ರಾಕ್ಷಸರಾಜನಾದ ರಾವಣನು, ಈ ವಾನರಸೇನೆಗಳ ಸನ್ನಿವೇಶಕ್ರಮಗಳೆಲ್ಲವನ್ನೂ ಉಪ್ಪರಿಗೆಯಲ್ಲಿಯೇ ನಿಂತು ನೋಡಿ ಮೇಲೆ ಮೇಲೆ ಕೋಪದಿಂದುಕ್ಕುತ್ತ, ತನ್ನ ಸಮಸ್ತ ಸೈನ್ಯಗಳನ್ನೂ ಶೀಘ್ರದಲ್ಲಿ ಯುದ್ಧಕ್ಕೆ ಹೊರಟುಬರುವಂತೆ ಆಜ್ಞಾಪಿಸಿದನು. ರಾವಣನ ಮುಖದಿಂದ ಈ ಕ್ರೂರಶಾಸನವು ಹೊರಟುದನ್ನು ಕೇಳಿದೊಡನೆಯೇ, ರಾಕ್ಷಸ ಸೈನಿಕರೆಲ್ಲರೂ ಮಹಾ ಭಯಂಕರಗಳಾದ ಸಿಂಹನಾದಗಳನ್ನು ಮಾಡಿ, ತಮ್ಮ ರಣೋತ್ಸಾಹಗಳನ್ನು ತೋರಿಸಿದರು. ಆಗಲೇ ಇಲ್ಲಿನ ರಾಕ್ಷಸರೆಲ್ಲರೂ ಯುದ್ಧಸನ್ನದ್ಧರಾಗಿ, ಚಂದ್ರ ಬಿಂಬದಂತೆ ಮುಖವುಳ್ಳ ರಣಭೇರಿಗಳನ್ನು ನುಡಿಸಲು, ಆ ಧ್ವನಿಯು ಅತಿ ಭಯಂಕರ ವಾಗಿ ಪಟ್ಟಣವೆಲ್ಲವನ್ನೂ ವ್ಯಾಪಿಸಿತು. ಭಯಂಕರಾಕಾರವುಳ್ಳ ಬೇರೆ ಕೆಲವು ರಾಕ್ಷಸರು ಅಲ್ಲಲ್ಲಿ ಲಕ್ಷಲಕ್ಷವಾಗಿ ಸೇರಿ, ಯುದ್ಧಸೂಚಕಗಳಾದ ಶಂಖಗಳನ್ನೂ ದುತ್ತಿದ್ದರು. ಚಿತ್ರವಿಚಿತ್ರವಾದ ಆಭರಣ ಕಾಂತಿಗಳಿಂದ ಹೊಳೆಯುವ ಕಪ್ಪಾದ ಮೈಬಣ್ಣವುಳ್ಳ ಈ ರಾಕ್ಷಸರು ಬಿಳೀ ಶಂಖಗಳನ್ನು ಕೈಯಲ್ಲಿ ಹಿಡಿದುನಿಂತಾಗ, ಆಕಾಶದಲ್ಲಿ ಮಿಂಚಿನಿಂದಲೂ, ಬೆಳ್ಳಕ್ಕಿಗಳಿಂದಲೂ ಆವೃತವಾದ ಕಾಳಮೇಘದಂತೆ ಕಾಣುತ್ತಿದ್ದರು. ಹೀಗೆ ರಾವಣನಿಂದ ಪ್ರೇರಿತವಾದ ಸಮಸ್ತ ರಾಕ್ಷಸಸೈನಿಕರೂ, ಪ್ರಳಯ ಕಾಲದಲ್ಲಿ ಉಕ್ಕಿಬರುತ್ತಿರುವ ಮಹಾಸಮುದ್ರದಂತೆ ಮಹೋತ್ಸಾಹದಿಂದ ಯುದ್ಧಕ್ಕೆ ಹೊರಟುಬಿಟ್ಟರು, ಇತ್ತಲಾಗಿ ವಾನರಸೈನಿಕರೂ ಆ ತ್ರಿಕೂಟ ಪರ್ವತದ ಗುಹೆಗಳು, ತಪ್ಪಲುಗಳು, ಮುಂತಾದುವೆಲ್ಲವನ್ನೂ ವ್ಯಾಪಿಸುವಂತೆ, ಭಯಂಕರ ಸಿಂಹನಾದವನ್ನು ಮಾಡುತ್ತಿದ್ದರು. ಅತ್ತಲಾಗಿ ರಾಕ್ಷಸರು ಮಾಡುವ ಸಿಂಹ ನಾದಗಳು ಇದಕ್ಕಿಂತಲೂ ಮೇಲೆ ಶಂಖದುಂದುಭಿಗಳೊಡನೆಯೂ,ಆನೆಗಳ ಘೀಂಕಾರ ಧ್ವನಿಗಳೊಡನೆಯೂ, ಕುದುರೆಗಳ ಹೇಷಾರವ ಧ್ವನಿಗಳೊಡನೆಯೂ, ಇತರ ರಾಕ್ಷಸರ ಕೂಗಿನೊಡನೆಯೂ, ರಥನೇಮಿಧ್ವನಿಗಳೊಡನೆಯೂ ಸೇರಿ, ಭೂಮ್ಯಾ ಕಾಶಗಳಲ್ಲಿಯೂ, ಸಮುದ್ರದಲ್ಲಿಯೂ ಪ್ರತಿಧ್ವನಿಯನ್ನುಂಟುಮಾಡುವಂತೆ ಮಹಾ ಆರ್ಭಟದಿಂದ ಮೊಳಗಿತು. ಇಷ್ಟರಲ್ಲಿಯೇ ವಾನರ ರಾಕ್ಷಸರ ಸೈನ್ಯಗಳೆರಡೂ ಮುಂದೆ ಮುಂದೆ ಸಾಗಿ, ಒಂದಾಗಿ ಸೇರಿತು, ಪೂರ್ವದಲ್ಲಿ ದೇವಾಸುರರಿಗೆ ನಡೆದ ಯುದ್ಧದಂತೆ ಆ ಎರಡು ಸೈನ್ಯಗಳಿಗೂ ಭಯಂಕರವಾದ ಯುದ್ಧವು ಆರಂಭಿಸಿತು.

ಭಯಂಕರರಾದ ಆ ರಾಕ್ಷಸರೆಲ್ಲರೂ, "ತಮ್ಮ ಬಲಪರಾಕ್ರಮಗಳನ್ನುಗ್ಗಡಿಸುತ್ತ ಜ್ವಲಿಸುವಂತೆ ಥಳಥಳಿಸುವ ಗದೆಗಳನ್ನೂ, ಶಕ್ತಿಗಳನ್ನೂ, ಶೂಲಗಳನ್ನೂ, ಗಂಡು ಗೊಡಲಿಗಳನ್ನೂ ಹಿಡಿದು, ವಾನರರನ್ನು ಪ್ರಹರಿಸುವುದಕ್ಕೆ ತೊಡಗಿದರು. ಹಾಗೆಯೇ ಮಹಾವೀರ್ಯವುಳ್ಳ ವಾನರರೂ ಕೂಡ, ಕಲ್ಲು ಮರಗಳನ್ನು ಕೈಯಿಂದ ಎತ್ತಿಕೊಂಡು, "ಅತಿಬಲನಾದ ರಾಮನಿಗೆ ಜಯವು! ಮಹಾಬಲನಾದ ಲಕ್ಷ್ಮಣ ನಿಗೆ ಜಯವು! ರಾಮನಿಂದ ರಕ್ಷಿತನಾದ ನಮ್ಮ ರಾಜನಾದ ಸುಗ್ರೀವನಿಗೆ ಜಯವು" ಎಂದು ತಮ್ಮ ಪ್ರಭುಗಳ ಪರಾಕ್ರಮವನ್ನೇ ಉದ್ಘೋಷಿಸುತ್ತ, ಮುಂದೆಬಂದು ರಾಕ್ಷಸರನ್ನು ಬಡಿಯುತ್ತಿದ್ದರು. ಇತ್ತಲಾಗಿ ವಾನರ ಸೈನ್ಯದಲ್ಲಿ ಪ್ರತಿಯೊಬ್ಬ ವಾನರನೂ ತಮ್ಮ ರಾಜನಿಗೆ ಜಯಶಬ್ದವನ್ನು ಹೇಳುತ್ತ, ತಮ್ಮ ತಮ್ಮ ವೃತ್ತಾಂತಗಳನ್ನೂ ಘೋಷಿಸುತ್ತ ಮುಂದೆ ಸಾಗಿ ಗಿಡಗಳಿಂದಲೂ, ಪರ್ವತ ಶಿಖರಗಳಿಂದಲೂ, ಅಲ್ಲಲ್ಲಿ ಸಿಕ್ಕಿದ ರಾಕ್ಷಸರನ್ನು ಹಲ್ಲುಗಳಿಂದ ಕಡಿದು, ಉಗುರು ಗಳಿಂದ ಸೀಳುತ್ತಿದ್ದರು. ಭಯಂಕರರಾದ ಕೆಲವು ರಾಕ್ಷಸರು, ಲಂಕೆಯ ಪ್ರಾಕಾರದ ಮೇಲೆ ನಿಂತು, ಕೆಳಗಿದ್ದ ವಾನರರ ಮೇಲೆ ಭಿಂಡಿವಾಳಗಳನ್ನೂ ಕತ್ತಿಗಳನ್ನೂ, ಶೂಲಗಳನ್ನು ಪ್ರಯೋಗಿಸಿ ಅವರನ್ನು ಭೇದಿಸಿ ಕೊಲ್ಲುತ್ತಿದ್ದರು. ಕೆಳಗಿದ್ದ ವಾನರರಲ್ಲಿಯೋ ಮಹಾವೇಗಶಾಲಿಗಳಾದ ಕೆಲವರು, ಕೆಳಗನಿಂದ ಒಂದೇ ನೆಗೆತಕ್ಕೆ ಆ ಪ್ರಾಕಾರದಮೇಲೆ ಹಾರಿ ಅಲ್ಲಿದ್ದ ರಾಕ್ಷಸರನ್ನು ಕೆಳಕ್ಕೆ ನೂಕಿದರು. ಆಗ ರಾಕ್ಷಸರಿಗೂ, ವಾನರರಿಗೂ ನಡೆದ ದೊಡ್ಡ ತುಮುಲ ಯುದ್ಧವು ಕೇವಲ ರಕ್ತ ಮಾಂಸಮಯವಾಗಿ ಮಹಾ ಅದ್ಭುತವಾಗಿ ಕಾಣಿಸಿತು.

ಇಲ್ಲಿಗೆ ನಾಲ್ವತ್ತೆರಡನೆಯ ಸರ್ಗವು.

ವಾನರ ರಾಕ್ಷಸರ ದ್ವಂದ್ವಯುದ್ಧವು.

ಹೀಗೆ ಮಹಾಧೀರರಾದ ಆ ವಾನರರೆಲ್ಲರೂ ಇದಿರಿಲ್ಲದಂತೆ ಯುದ್ಧಮಾಡು ತ್ತಿರಲು, ಇದನ್ನು ನೋಡಿ ರಾಕ್ಷಸ ಸೈನಿಕರು ಸಹಿಸಲಾರದೆ, ಭಯಂಕರವಾದ ಕೋಪಾವೇಶವನ್ನು ಹೊಂದಿದರು. ಭಯಂಕರ ಕರ್ಮಿಗಳಾದ ಆ ರಾಕ್ಷಸ ಯೋಧರೆಲ್ಲರೂ, ತಮ್ಮ ಪ್ರಭುವಾದ ರಾವಣನಿಗೆ ಹೇಗಾದರೂ ಜಯವನ್ನುಂಟು ಮಾಡಬೇಕೆಂದು ದೃಢಸಂಕಲ್ಪಹೊಂದಿ, ಚಿನ್ನದ ಕೇಸರಗಳುಳ್ಳ ಕುದುರೆಗಳೊಡ

ನೆಯೂ, ಅಗ್ನಿ ಜ್ವಾಲೆಗಳಂತೆ ಧಗಧಗಿಸುವ ಧ್ವಜಗಳೊಡನೆಯೂ ಸೂರ್ಯಬಿಂಬ ಗಳಂತೆ ಹೊಳೆಯುವ ರಥಗಳೊಡನೆಯೂ ಅಂದವಾದ ಕವಚಗಳೊಡನೆಯೂ ಕೂಡಿ, ಹತ್ತು ದಿಕ್ಕುಗಳಲ್ಲಿಯೂ ಪ್ರತಿಧ್ವನಿ ಕೊಡುವಂತೆ ಸಿಂಹನಾದಗಳನ್ನು ಮಾಡುತ್ತ, ಯುದ್ಧಕ್ಕಾಗಿ ಮುಂದೆ ನುಗ್ಗಿದರು. ಮಹತ್ತಾದ ವಾನರಸೇನೆಯೂ ಕೂಡ ಜಯಾಕಾಂಕ್ಷೆಯಿಂದ, ಕಾಮರೂಪಿಗಳಾದ ಆ ರಾಕ್ಷಸರ ಸೇನೆಗಿದಿರಾಗಿ ನಡೆಯಿತು. ಹೀಗೆ ಇದಿರಿದಿರಿಗೆ ಬಂದು ಮಹಾಸೈನ್ಯಗಳೆರಡೂ ಕಲೆತು, ಎರಡಕ್ಕೂ ತುಮುಲಯುದ್ಧವು ಪ್ರಾರಂಭವಾಯಿತು. ಮಹಾತೇಜಸ್ವಿಯಾದ ಇಂದ್ರಜಿತುವು ವಾಲಿಪುತ್ರನಾದ ಅಂಗದನೊಡನೆ ಕೈಕಲೆತು, ರುದ್ರನೊಡನೆ ಯಮನು ಹೋರಾಡು ವಂತೆ ಯುದ್ಧಮಾಡುತ್ತಿದ್ದನು. ಯುದ್ಧದಲ್ಲಿ ಶತ್ರುಗಳಿಗೆ ಸಹಿಸಲಸಾಧ್ಯವಾದ ವೀರನಾದ ವಿಭೀಷಣನ ಮಂತ್ರಿ ಸಂಪಾತಿಯು ಪ್ರಜಂಘನೆಂಬುವನೊಡನೆ ಯುದ್ಧಕ್ಕೆ ನಿಂತನು. ವಾನರೋತ್ತಮನಾದ ಹನುಮಂತನು ಜಂಬುಮಾಲಿಯನ್ನಿದಿರಿಸಿ ನಿಂತನು. ವಿಭೀಷಣನು ಅತ್ಯಂತ ಕೋಪಾವೇಶವನ್ನು ಹೊಂದಿ ತೀವ್ರವೇಗ ವುಳ್ಳ ಮಿತ್ರಘ್ನನೆಂಬ ರಾಕ್ಷಸನೊಡನೆ ಯುದ್ಧವನ್ನಾರಂಭಿಸಿದನು. ಬಲಾಢ್ಯ ನಾದ ಗಜನು ತಪನನೆಂಬುವನೊಡನೆಯೂ, ಮಹಾತೇಜಸ್ವಿಯಾದ ನೀಲನು ನಿಕುಂಭನೊಡನೆಯೂ ಯುದ್ಧಕ್ಕೆ ನಿಂತರು. ಕಪಿರಾಜನಾದ ಸುಗ್ರೀವನು ಪ್ರಘ ಸನನನ್ನು ಎದುರಿಸಿದನು. ಶ್ರೀಮಂತನಾದ ಲಕ್ಷ್ಮಣನು ವಿರೂಪಾಕ್ಷನೊಡನೆ ಕೈಕಲೆತನು. ಅಗ್ನಿಕೇತು. ರಶ್ಮಿಕೇತು, ಸಪ್ತಘ್ನ, ಯಜ್ಞಕೋಪರೆಂಬ ನಾಲ್ವರು ರಾಕ್ಷಸರೊಡನೆ ಶ್ರೀರಾಮನು ತಾನಾಗಿಯೇ ಯುದ್ಧಕ್ಕೆ ನಿಂತನು. ವಜ್ರಮುಷ್ಟಿ ಯೆಂಬುವನು ಮೈಂದನೊಡನೆಯೂ, ಅಶನಿಪ್ರಭನೆಂಬುವನು ದ್ವಿವಿದನೊಡನೆಯೂ ಸೇರಿ ಭಯಂಕರ ಯುದ್ಧವನ್ನಾರಂಭಿಸಿದರು. ವೀರನಾಗಿಯೂ, ಶತ್ರುಭಯಂಕರ ನಾಗಿಯೂ, ಯುದ್ಧದಲ್ಲಿ ದುರ್ಜಯನಾಗಿಯೂ ಇದ್ದ ಪ್ರತಪನೆಂಬ ರಾಕ್ಷಸನು, ತೀಕ್ಷ್ಣವೇಗವುಳ್ಳ ನಲನೊಡನೆ ಯುದ್ಧಕ್ಕೆ ಬಂದನು. ಧರ್ಮಪುತ್ರನೂ ವೀರನೂ ಆದ ಸುಷೇಣನು, ವಿದ್ಯುನ್ಮಾಲಿಯೊಡನೆ ಕಲೆತನು. ಹೀಗೆಯೇ ಇನ್ನೂ ಅನೇಕ ವಾನರರು ತಮತಮಗೆ ಸಮಾನಬಲವುಳ್ಳ ಶತ್ರುಗಳೊಡನೆ ನಾನಾವಿಧವಾಗಿ ದ್ವಂದ್ವಯುದ್ಧವನ್ನು ಮಾಡಿದರು. ಹೀಗೆ ಪರಸ್ಪರ ಜಯಾಕಾಂಕ್ಷಿಗಳಾಗಿ ಹೊಡೆ ದಾಡುತ್ತಿರುವ ಆ ವಾನರರಿಗೂ, ರಾಕ್ಷಸರಿಗೂ ನಡೆದ ದೊಡ್ಡ ದ್ವಂದ್ವಯುದ್ಧವು ನೋಡುವವರಿಗೆ ಮೈಯಲ್ಲಿ ರೋಮಾಂಚವನ್ನು ಹುಟ್ಟಿಸುವಂತೆ ಅತಿ ಭಯಂಕರ

ವಾಗಿತ್ತು. ಆ ಯುದ್ಧದಲ್ಲಿ ವಾನರರಾಕ್ಷಸರ ದೇಹಗಳಿಂದ ಹೊರಟ ರಕ್ತಪ್ರವಾಹವು, ಕೂದಲುಗಳೆಂಬ ಗರಿಕೆಗಳನ್ನೂ, ದೇಹಾವಯವಗಳೆಂಬ ಕಾಷ್ಠ ಸಂಚಯಗಳನ್ನೂ ಕೊಚ್ಚಿಸಿಕೊಂಡು ಬರುವ ದೊಡ್ಡನದಿಗಳಂತೆ ಕಾಣುತ್ತಿದ್ದುವು. ಇಷ್ಟರಲ್ಲಿ ಇಂದ್ರಜಿತುವು ಬಹಳ ಕುಪಿತನಾಗಿ, ದೇವೇಂದ್ರನು ವಜ್ರವನ್ನು ಹಿಡಿದಂತೆ, ಭಯಂಕರವಾದ ಗದೆಯನ್ನು ಕೈಗೆತ್ತಿಕೊಂಡು, ಅಲ್ಲಲ್ಲಿ ರಾಕ್ಷಸಸೈನ್ಯವನ್ನು ಧ್ವಂಸಮಾಡುತ್ತಿದ್ದ ಅಂಗದನ ಮೇಲೆ ಆ ಗದೆಯನ್ನು ಬೀಸಿದನು. ಮಹಾ ವೇಗಶಾಲಿಯಾದ ಅಂಗದನಾದರೋ, ಇಂದ್ರಜಿತ್ತಿನ ಕಾರ್ಯವನ್ನು ನೋಡಿ ಕೋಪಗೊಂಡು, ಚಿನ್ನದ ಕುಸುರಿಗಳಿಂದ ಚಿತ್ರಿತವಾದ ಆ ಇಂದ್ರಜಿತ್ತಿನ ರಥವನ್ನು ಅದರ ಸಾರಥಿಗಳೊಡನೆಯೂ, ಕುದುರೆಗಳೊಡನೆಯೂ, ಪುಡಿಪುಡಿಯಾಗಿ ಮಾಡಿಬಿಟ್ಟನು. ಪ್ರಜಂಘನೆಂಬ ರಾಕ್ಷಸನು, ಸಂಪಾತಿಯನ್ನು ಮೂರು ಬಾಣಗಳಿಂದ ಹೊಡೆಯಲು ಆ ಸಂಪಾತಿಯು ಒಂದು ದೊಡ್ಡ ಅಶ್ವಕರ್ಣ ವೃಕ್ಷವನ್ನು ಬೀಸಿ, ಆ ಪ್ರಜಂಘನನ್ನು ಕೊಂದುಹಾಕಿದನು. ಅತ್ತಲಾಗಿ ರಥಸ್ಥನಾದ ಜಂಬುಮಾಲಿಯೆಂಬುವನು ತನ್ನ ರಥದಲ್ಲಿ ಯಾವಾಗಲೂ ಸ್ಥಿರವಾಗಿಟ್ಟಿದ್ದ ಒಂದು ಶಕ್ತ್ಯಾಯುಧವನ್ನು ತೆಗೆದು, ಅದನ್ನು ಹನುಮಂತನ ಎದೆಗೆ ಗುರಿಯಿಟ್ಟು ಹೊಡೆದನು. ಇಷ್ಟರಲ್ಲಿಯೇ ಹನುಮಂತನು ಅವನ ರಥದ ಮೇಲೆ ಹಾರಿ, ತನ್ನ ಅಂಗೈಯಿಂದ ಆ ರಥವನ್ನಪ್ಪಳಿಸಿ, ಆ ರಾಕ್ಷಸನ ದೇಹದೊಡನೆ ಆ ರಥವನ್ನು ಉರುಳಿಸಿ ಬಿಟ್ಟನು. ಅತ್ತಲಾಗಿ ಪ್ರತಪನೆಂಬ ಘೋರರಾಕ್ಷಸನು, ಭಯಂಕರವಾದ ಗರ್ಜನೆಗಳೊಡನೆ ನಳನ ಮೇಲೆ ನುಗ್ಗಿ, ತೀಕ್ಷ್ಣ ಬಾಣಗಳಿಂದ ಅವನನ್ನು ಹೊಡೆಯಲು, ಕ್ಷಣಮಾತ್ರದಲ್ಲಿಯೇ ಆ ನಳನು ಆ ರಾಕ್ಷಸನ ಮೋರೆಯಮೇಲೆ ಹೊಡೆದು, ಅವನ ಕಣ್ಣುಗುಡ್ಡೆಗಳೆರಡನ್ನೂ ಉದಿರಿಸಿಬಿಟ್ಟನು. ಅತ್ತಲಾಗಿ ವಾನರೇಶ್ವರನಾದ ಸುಗ್ರೀವನು, ತನ್ನ ಕಡೆಯ ಸೈನ್ಯಗಳೆಲ್ಲವನ್ನೂ ಒಂದೇ ತುತ್ತಾಗಿ ನುಂಗಿಬಿಡುವಂತೆ ದೊಡ್ಡದಾಗಿ ಬಾಯನ್ನು ತೆರೆದುಕೊಂಡು ತನಗಿದಿರಾಗಿ ಬರುತ್ತಿದ್ದ ಪ್ರಘಸನನ್ನು ನೋಡಿ, ಕೋಪಗೊಂಡು, ತಾನು ಹಿಡಿದಿದ್ದ ಒಂದು ಸಪ್ತಪರ್ಣವೃಕ್ಷದಿಂದ ಆ ರಕ್ಕಸನನ್ನು ಬಡಿದುಕೊಂದನು. ಮತ್ತೊಂದು ಕಡೆಯಲ್ಲಿ ಅಗ್ನಿಕೇತು, ರಶ್ಮಿಕೇತು, ಸುಪ್ತಘ್ನ, ಯಜ್ಞಕೋಪರೆಂಬ ನಾಲ್ವರು ರಕ್ಕಸರೂ ಒಂದಾಗಿ ಸೇರಿ, ರಾಮನ ಮೇಲೆ ಎಡಬಿಡದೆ, ಬಾಣವರ್ಷವನ್ನು ಸುರಿಸುತ್ತಿರಲು, ರಾಮನು ಕೋಪಗೊಂಡವನಾಗಿ, ಅಗ್ನಿಜ್ವಾಲೆಗಳಂತಿದ್ದ ನಾಲ್ಕು ತೀಕ್ಷ್ಣಬಾಣಗಳಿಂದ, ಆ ನಾಲ್ವರು ರಕ್ಕಸರ ತಲೆಗಳನ್ನು ಕಡಿದುಹಾಕಿ

ದನು. ಮೈಂದನು ತನ್ನ ಮುಷ್ಟಿಯಿಂದಲೇ ವಜ್ರಮುಷ್ಟಿಯೆಂಬುವನನ್ನು ಕೊಂದು ಅವನ ರಥವನ್ನೂ ಮುರಿದು, ಅಶ್ವಗಳನ್ನು ಧ್ವಂಸಮಾಡಿದನು. ಹೀಗೆ ಮೈಂದನ ಮುಷ್ಟಿಪ್ರಹಾರದಿಂದ ಹತನಾದ ವಜ್ರಮುಷ್ಟಿಯು, ಪುರಪ್ರಕಾರದ ಅಟ್ಟಣೆಯು ಮುರಿದುಬಿದ್ದಂತೆ, ತನ್ನ ರಥಾಶ್ವಗಳೊಡನೆ ನೆಲಕ್ಕುರುಳಿದನು. ಸೂರ್ಯನು ತನ್ನ ಕಿರಣಗಳಿಂದ ಅಂಧಕಾರವನ್ನು ಭೇದಿಸುವಂತೆ, ನಿಕುಂಭನು, ಕಾಡಿಗೆಯ ರಾಶಿಯಂತೆ ಕಪ್ಪು ಬಣ್ಣವುಳ್ಳ ನೀಲನನ್ನು ತನ್ನ ತೀಕ್ಷ್ಣ ಬಾಣಗಳಿಂದ ಪ್ರಹರಿಸಿದನು. ಮತ್ತು ಆ ನಿಕುಂಭನು ಬಹಳ ಹಸ್ತಲಾಘವುಳ್ಳವನಾದುದರಿಂದ ಇನ್ನೂ ಎಡೆಬಿಡದೆ ಮೇಲೆ ಮೇಲೆ ನೂರು ಬಾಣಗಳಿಂದ ಆ ನೀಲನ ದೇಹವನ್ನು ಮುಚ್ಚಿ ಗಟ್ಟಿಯಾಗಿ ಕೇಕೆಹಾಕಿ ನಕ್ಕನು. ಎಣೆಯಿಲ್ಲದ ಪರಾಕ್ರಮವುಳ್ಳ ನೀಲನಾದರೋ ಅವನ ಬಾಣಹತಿಯನ್ನೂ ಲಕ್ಷ್ಯ ಮಾಡದೆ, ಯುದ್ಧದಲ್ಲಿ ವಿಷ್ಣುವು ಹೇಗೋ ಹಾಗೆ, ಆ ನಿಕುಂಭನ ರಥ ಚಕ್ರವನ್ನೇ ಕೈಗೆ ತೆಗೆದುಕೊಂಡು, ಆ ಚಕ್ರದಿಂದಲೇ ನಿಕುಂಭನನ್ನೂ,ಅವನ ಸಾರಥಿಯನ್ನೂ ಬಡಿದು, ಅವರಿಬ್ಬರ ತಲೆಗಳನ್ನೂ ಏಕಕಾಲದಲ್ಲಿ ಕತ್ತರಿಸಿ ಕೆಡಹಿದನು. ವಜ್ರಾಯುಧಕ್ಕೂ ಸಿಡಿಲಿಗೂ ಸಾಟಿಯಾದ ದೇಹಸ್ಪರ್ಶವುಳ್ಳ ದ್ವಿವಿದನೆಂಬ ಯೂಥಾಪತಿಯು, ಯುದ್ಧದಲ್ಲಿ ರಕ್ಕಸರು ನೋಡುತ್ತಿರುವಾಗಲೇ, ಅಶನಿಪ್ರಭನೆಂಬ ಸೇನಾಪತಿಯ ಮೇಲೆ ಒಂದು ದೊಡ್ಡ ಪರ್ವತ ಶಿಖರವನ್ನು ತಂದು ಬೀಸಿ ಬಡಿದನು. ಹೀಗೆ ಪರ್ವತ ಶಿಖರಗಳಿಂದ ಯುದ್ಧ ಮಾಡುತ್ತಿರುವ ವಾನರವೀರನಾದ ದ್ವಿವಿದನನ್ನು ನೋಡಿ, ಅಶನಿಪ್ರಭನು ಅತ್ಯಾಕ್ರೋಶಗೊಂಡವನಾಗಿ,ಸಿಡಿಲಿಗೆ ಸಮಾನಗಳಾದ ತನ್ನ ತೀಕ್ಷ್ಣ ಬಾಣಗಳನ್ನು ಅವನ ಮೇಲೆ ಪ್ರಯೋಗಿಸಿದನು. ಆಗ ದ್ವಿವಿದನು, ತನ್ನ ದೇಹವೆಲ್ಲವೂ ರಕ್ಕಸರ ಬಾಣಗಳಿಂದ ಭಿನ್ನವಾದುದನ್ನು ನೋಡಿ, ಕೋಪಾವೇಶದಿಂದ ಕೂಡಿದವನಾಗಿ ಒಂದು ಸಾಲವೃಕ್ಷವನ್ನು ಕೈಗೆತ್ತಿಕೊಂಡು, ಅದರಿಂದ ಅವನನ್ನೂ, ಅವನ ರಥವನ್ನೂ ಅವನ ರಥಾಶ್ವಗಳನ್ನೂ ಬಡಿದು ಕೆಡಹಿದನು. ಅತ್ತಲಾಗಿ ವಿದ್ಯುನ್ಮಾಲಿಯು, ರಥದಲ್ಲಿ ಕುಳಿತಹಾಗೆಯೇ ಚಿನ್ನದ ಕಟ್ಟುಳ್ಳ ತನ್ನ ಬಾಣಗಳಿಂದ ಸುಷೇಣನನ್ನು ಪ್ರಹರಿಸಿ, ಬಾರಿಬಾರಿಗೂ ಸಿಂಹನಾದವನ್ನು ಮಾಡುತ್ತಿದ್ದನು. ವಾನರೋತ್ತಮನಾದ ಸುಷೇಣನಾದರೋ ಆ ವಿದ್ಯುನ್ಮಾಲಿಯು ರಥದಲ್ಲಿ ಕುಳಿತಿರುವುದನ್ನು ನೋಡಿ ಒಂದು ದೊಡ್ಡ ಪರ್ವತ ಶಿಖರವನ್ನು ಆ ರಥದ ಮೇಲೆ ಬೀಸಿ ಬಡಿದು ಅದನ್ನು ಪುಡಿ ಮಾಡಿದನು. ಆ ವಿದ್ಯುನ್ಮಾಲಿಯು, ಬಹಳ ದೇಹಲಾಘವವುಳ್ಳವನಾದುದರಿಂದ ತನ್ನ ರಥವು ಮುರಿದುಬೀಳುವಷ್ಟರಲ್ಲಿಯೇ, ಗದೆಯನ್ನು ಕೈಗೆತ್ತಿಕೊಂಡು, ರಥ

ದಿಂದ ಕೆಳಗೆ ಹಾರಿ ನೆಲದಮೇಲೆ ನಿಂತನು. ಇಷ್ಟರಲ್ಲಿ ವಾನರಾಗ್ರಣಿಯಾದ ಸುಷೇಣನು, ಕೋಪೋದ್ರಿಕ್ತನಾಗಿ, ಒಂದು ದೊಡ್ಡ ಶಿಲೆಯನ್ನೆತ್ತಿಕೊಂಡು, ಆ ವಿದ್ಯುನ್ಮಾಲಿಯನ್ನಿದಿರಿಸಿ ಮುಂದೆ ಹೋದನು. ಹೀಗೆ ಸುಷೇಣನು ದೊಡ್ಡ ಕಲ್ಲನ್ನೆತ್ತಿಕೊಂಡು ತನಗಿದಿರಾಗಿ ಬರುವುದನ್ನು ನೋಡಿ ವಿದ್ಯುನ್ಮಾಲಿಯು ತಾನು ಕೈಯಲ್ಲಿ ಹಿಡಿದಿದ್ದ ಗದೆಯಿಂದ, ಆ ಸುಷೇಣನ ಎದೆಯಮೇಲೆ ಪ್ರಹರಿಸಿದನು. ಧೀರನಾದ ಸುಷೇಣನು ಭಯಂಕರವಾದ ಆ ಗದಾ ಪ್ರಹಾರವನ್ನೂ ಲಕ್ಷ್ಯಮಾಡದೆ ಧೈರ್ಯದಿಂದ ಮುಂದೆ ನುಗ್ಗಿ ತಾನು ಹೊತ್ತು ತಂದ ಅತಿ ದೊಡ್ಡ ಶಿಲೆಯನ್ನು ಆ ವಿದ್ಯುನ್ಮಾಲಿಯ ಎದೆಯಮೇಲೆ ಬೀಸಿದನು. ಈ ಶಿಲಾಪ್ರಹಾರವು ತಗುಲಿದೊಡನೆಯೇ ವಿದ್ಯುನ್ಮಾಲಿಯು ಎದೆಯೊಡೆದು ಸತ್ತುಬಿದ್ದನು. ಹೀಗೆ ಶೂರರಾದ ಅನೇಕ ರಕ್ಕಸರನ್ನೆದಿರಿಸಿ ದೇವತೆಗಳು ದೈತ್ಯರನ್ನು ಹೇಗೋ ಹಾಗೆ ಕಂಡಕಂಡ ಕಡೆಯಲ್ಲಿ ಅವರನ್ನು ಕೊಲ್ಲುತ್ತ ಬಂದರು. ಆಗ ವಾನರ ರಕ್ಕಸರಿಬ್ಬರಿಗೂ ನಡೆದ ದ್ವಂದ್ವ ಯುದ್ಧವು ಅತ್ಯಂತ ಭಯಂಕರವಾಗಿ ಕಾಣಿಸಿತು. ಎಲ್ಲಿ ನೋಡಿದರೂ ಮುರಿದು ಬಿದ್ದ ಕತ್ತಿಗಳು ! ಎಲ್ಲಿ ನೋಡಿದರೂ ಪುಡಿಪುಡಿಯಾದ ಗದೆಗಳು ! ಎಲ್ಲಿ ನೋಡಿದ ರಲ್ಲಿ ಕತ್ತರಿಸಿಬಿದ್ದ ಶಕ್ತಿ ತೋಮರಪಟ್ಟ ಸಾದ್ಯಾಯುಧಗಳು ! ಎಲ್ಲಿ ನೋಡಿದರೂ ಕಳಚಿಬಿದ್ದ ರಥಗಳು ! ಎಲ್ಲಿ ನೋಡಿದರೂ ಸತ್ತುಬಿದ್ದ ಯುದ್ಧದ ಕುದುರೆಗಳು ! ಎಲ್ಲಿ ನೋಡಿದರೂ ತುಂಡುತುಂಡಾಗಿ ಬಿದ್ದ ಮದದಾನೆಗಳು ! ಎಲ್ಲಿ ನೋಡಿ ದರೂ ವಾನರ ರಾಕ್ಷಸರ ಮೃತದೇಹಗಳು ! ಇದಲ್ಲದೆ, ಅಲ್ಲಲ್ಲಿ ಕಳಚಿಬಿದ್ದ ರಥದ ಚಕ್ರಗಳು ಮುರಿದುಬಿದ್ದ ನೊಗಗಳು, ಕತ್ತರಿಸಿದ ತೇರಚ್ಚುಗಳು. ಹೀಗೆ ಆ ರಣರಂಗವೆಲ್ಲವೂ ಕೇವಲ ಮೃತದೇಹಗಳಿಂದಲೂ, ಮುರಿದುಬಿದ್ದ ಯುದ್ಧಸಾಮಗ್ರಿ ಗಳಿಂದಲೂ ದಟ್ಟವಾಗಿ ತುಂಬಿ ಭಯಂಕರವಾಗಿ ಕಾಣಿಸುತ್ತಿತ್ತು. ಆಗಲೇ ಅಲ್ಲಲ್ಲಿ ನರಿಗಳು ಬಂದು ಗುಂಪುಕೂಡುತ್ತಿದ್ದುವು. ದೇವಾಸುರಯುದ್ಧಕ್ಕೆ ಸಮಾನವಾದ ಆ ದೊಡ್ಡ ಯುದ್ಧದಲ್ಲಿ, ಯುದ್ಧಭೂಮಿಯು ಯಾವ ಕಡೆಯನ್ನು ನೋಡಿದರೂ, ವಾನರ ರಾಕ್ಷಸರ ಮುಂಡಗಳೇ ಹಾರಾಡುತ್ತಿದ್ದುವು. ಕ್ರಮಕ್ರಮ ವಾಗಿ, ವಾನರರ ಕೈ ಮೇಲಾಗಿ, ರಾಕ್ಷಸರಲ್ಲಿ ಪ್ರಾಣಹಾನಿಯು ಹೆಚ್ಚುತ್ತ ಬಂದಿತು. ರಕ್ಕಸರೆಲ್ಲರೂ, ಅಲ್ಲಲ್ಲಿ ಕಪಿಗಳಿಂದ ಭೇದಿಸಲ್ಪಟ್ಟು ರಕ್ತದಿಂದ ತೊಯ್ದ ಮೈಯುಳ್ಳವರಾಗಿ, ಮುಂದೆ ತಮಗೆ ವೀರ್ಯವರ್ಧಕವಾದ ಸೂರ್ಯಾಸ್ತಮಯ ಸಮಯವನ್ನು ಇದಿರುನೋಡುತ್ತ ಯುದ್ಧವನ್ನು ನಡೆಸುತ್ತಿದ್ದರು.

ಇಲ್ಲಿಗೆ ನಲವತ್ತಮೂರನೆಯ ಸರ್ಗವು.

ರಾತ್ರಿಯುದ್ಧವು

ಹೀಗೆ ವಾನರರೂ ರಕ್ಕಸರೂ ಸೇರಿ ಯುದ್ಧಮಾಡುತ್ತಿರುವಾಗಲೇ ಸೂರ್ಯನು ಅಸ್ತಮಿಸಿದನು. ವಾನರರಿಗೆ ಪ್ರಾಣಭಯವನ್ನುಂಟುಮಾಡತಕ್ಕ ರಾತ್ರಿಯು ಸಮೀಪಿಸಿತು. ಆಗ ಪರಸ್ಪರ ಬದ್ಧ ವೈರವುಳ್ಳವರಾಗಿಯೂ, ಭಯಂಕರಾಕಾರವುಳ್ಳವರಾಗಿಯೂ ಒಬ್ಬರನ್ನೊಬ್ಬರು ಗೆಲ್ಲಬೇಕೆಂಬ ಆತ್ಯಾತುರವುಳ್ಳವರಾಗಿಯೂ ಇದ್ದ ವಾನರರಿಗೂ ರಕ್ಕಸರಿಗೂ ರಾತ್ರಿಯ ಯುದ್ಧವು ನಡೆಯಲಾರಂಭಿಸಿತು. ಭಯಂಕರವಾದ ಆ ಗಾಢಾಂಧಕಾರದಲ್ಲಿ ಕಣ್ಣುಕಾಣದುದರಿಂದ, ಒಬ್ಬರನ್ನೊಬ್ಬರು ಚೆನ್ನಾಗಿ ಗುರುತಿಸಲಾರದೆ. ವಾನರರು ತಮ್ಮ ಕಡೆಯ ವಾನರರನ್ನೇ ರಕ್ಕಸರೆಂದು ತಿಳಿದು ಕೊಲ್ಲುತ್ತಿದ್ದರು. ರಾಕ್ಷಸರು ತಮ್ಮ ಕಡೆಯವರನ್ನೇ ವೈರಿಗಳಾದ ವಾನರರೆಂದು ತಿಳಿದು ಕೊಲ್ಲುತ್ತಿದ್ದರು. ಹೀಗೆ ಆ ರಾತ್ರಿಯುದ್ಧದಲ್ಲಿ, ಕಣ್ಣು ಕಾಣದೆ ಒಬ್ಬರಿಗೊಬ್ಬರು ಹೊಡೆದಾಡುತ್ತಿದ್ದುದರಿಂದ, ಆ ಗಾಢಾಂಧಕಾರದಲ್ಲಿ ರಣರಂಗದ ಯಾವಕಡೆಯನ್ನು ನೋಡಿದರೂ, "ಕೊಲ್ಲಿರಿ ! ಸೀಳಿರಿ ! ಬಡಿಯಿರಿ ! ಇತ್ತಬನ್ನಿ ! ಇದೇಕೆ ಓಡುವಿರಿ ! " ಎಂದು ಒಬ್ಬರಿಗೊಬ್ಬರು ಕೂಗಾಡುವ ದೊಡ್ಡ ಗದ್ದಲವೇ ಕೇಳಿಸುತ್ತಿತ್ತು. ಆ ಕಗ್ಗತ್ತಲೆಯಲ್ಲಿ ಬಂಗಾರದ ಕವಚಗಳನ್ನು ಧರಿಸಿದ ಕರೀಮೈಯುಳ್ಳ ಕೆಲವು ರಕ್ಕಸರು. ಅಲ್ಲಲ್ಲಿ ಉರಿಯುತ್ತಿರುವ ಜ್ಯೋತಿರ್ಲತೆಯ ಕಾಡುಗಳಿಂದ ತುಂಬಿದ ದೊಡ್ಡದೊಡ್ಡ ಬೆಟ್ಟಗಳಂತೆ ಕಾಣುತ್ತಿದ್ದರು. ಮಿತಿಮೀರಿದ ಆ ಮಹಾಂಧಕಾರದಲ್ಲಿ, ರಕ್ಕಸರೆಲ್ಲರೂ ಕೋಪದಿಂದ ಮೈಮರೆತವರಾಗಿ, ವೇಗದಿಂದ ವಾನರಸೈನ್ಯಕ್ಕೆ ನುಗ್ಗಿ ಕೈಗೆ ಸಿಕ್ಕಿದ ವಾನರರನ್ನು ಹಾಗೆಯೇ ನುಂಗಿಬಿಡುತ್ತ ಯುದ್ಧಭೂಮಿಯಲ್ಲಿ ವಿಹರಿಸುತ್ತಿದ್ದರು ಇತ್ತಲಾಗಿ ವಾನರರೂ ಕೂಡ ತಡೆಯಲಾರದ ಕೋಪವನ್ನು ಹೊಂದಿ ಆಗಾಗ ಮೇಲೆ ಹಾರಿ, ಬಂಗಾರದ ಶಿರೋಭೂಷಣಗಳುಳ್ಳ ಕುದುರೆಗಳನ್ನೂ ಅಗ್ನಿ ಜ್ವಾಲೆಗಳಂತೆ ಪ್ರಕಾಶಿಸುತ್ತಿದ್ದ ಧ್ವಜಗಳನ್ನೂ ಅತಿ ತೀಕ್ಷ್ಣಗಳಾದ ತಮ್ಮ ಹಲ್ಲುಗಳಿಂದ ಸಿಗಿದು ಹಾಕುತ್ತಿದ್ದರು. ಬಲಾಢ್ಯರಾದ ಆ ವಾನರರೆಲ್ಲರೂ ಅತಿ ಕೋಪೋದ್ರಿಕ್ತರಾಗಿ ಅಲ್ಲಲ್ಲಿ ಮದದಾನೆಗಳಮೇಲೆ ಹಾರಿ, ಆ ಆನೆಗಳನ್ನೂ, ಅವುಗಳಮೇಲೆ ಕುಳಿತಿದ್ದ ಮಾವುತರನ್ನೂ ಸಾಯಗೊಲ್ಲುತ್ತಿದ್ದರು. ಕೆಲವರು ಧ್ವಜಪತಾಕೆಗಳಿಂದಲಂಕೃತವಾದ ರಥದಮೇಲೆ ಹಾರಿ ಅವುಗಳನ್ನು ಮುರಿದುಹಾಕುತ್ತಿದ್ದರು. ಹೀಗೆ ವಾನರರೆಲ್ಲರೂ ರಾಕ್ಷಸಸೈನ್ಯದಲ್ಲಿ ನುಗ್ಗಿ ತಮ್ಮ ಹಲ್ಲುಗಳಿಂದಲೂ, ಉಗುರುಗಳಿಂದಲೂ, ಅವರನ್ನು

ನಾನಾವಿಧವಾಗಿ ಭೇದಿಸಿ ಕೊಲ್ಲುತ್ತಿದ್ದರು. ಅತ್ತಲಾಗಿ ರಾಮಲಕ್ಷ್ಮಣರೂ ಕೂಡ ಅಲ್ಲಲ್ಲಿ ಹೊಕ್ಕು, ಕತ್ತಲೆಯಲ್ಲಿ ಕಂಡೂ ಕಾಣದಂತೆ ರಾಕ್ಷಸಾಕೃತಿಗಳನ್ನು ಗುರುತು ಹಿಡಿದು, ಕ್ರೂರಸರ್ಪಗಳಂತಿದ್ದ ತಮ್ಮ ತೀಕ್ಷ್ಣ ಬಾಣಗಳನ್ನು ಪ್ರಯೋಗಿಸಿ ಅವ ರನ್ನು ಕೊಲ್ಲುತ್ತಿದ್ದರು. ಆಗ ಅಲ್ಲಿ ಗಾಢಾಂಧಕಾರವು ಮಾತ್ರವೇ ಅಲ್ಲದೆ, ಕುದುರೆ ಗಳ ಖುರಾಗ್ರಹತಿಯಿಂದ ಪುಡಿಪುಡಿಯಾಗಿ, ರಥಚಕ್ರಸಂಚಾರದಿಂದ ಮೇಲಕ್ಕೆದ್ದ ನೆಲದ ಧೂಳಿಯು,ಅಲ್ಲಿ ಯುದ್ಧಮಾಡುತ್ತಿದ್ದವರ ಕಣ್ಣು ಕಿವಿಗಳೆರಡನ್ನೂ ಸಂಪೂರ್ಣ ವಾಗಿ ಮುಚ್ಚಿಬಿಟ್ಟಿತು. ಹೀಗೆ ನೋಡುವವರಿಗೆ ರೋಮಾಂಚವನ್ನು ಹುಟ್ಟಿಸು ವಂತೆ, ಮಹಾಭಯಂಕರವಾದ ಯುದ್ಧವು ನಡೆಯುತ್ತಿರಲು, ಕ್ಷಣಮಾತ್ರದಲ್ಲಿ ಆ ರಣರಂಗವೆಲ್ಲವೂ ರಕ್ತಮಯವಾಗಿ, ಎಲ್ಲೆಲ್ಲಿ ನೋಡಿದರೂ ಭಯಂಕರಗಳಾದ ರಕ್ತನದಿಗಳೇ ಹರಿಯುತ್ತಿದ್ದುವು. ಅಲ್ಲಲ್ಲಿ ಭೇರಿ, ಮದ್ದಳೆ, ಡೋಲು ಮುಂತಾದ ಚರ್ಮವಾದ್ಯ ಧ್ವನಿಗಳೂ, ಶಂಖ ವೇಣು ಮೊದಲಾದ ಮುಖವಾದ್ಯ ಧ್ವನಿಗಳೂ ಒಂದಾಗಿ ಕಲೆತು ಭಯಂಕರವಾಗಿ ಕೇಳಿಸುತ್ತಿದ್ದುವು. ಹಾಗೆಯೇ ಅಲ್ಲಲ್ಲಿ ಕಪಿಗಳ ಕೈಗೆ ಸಿಕ್ಕಿ ಕೂಗಿಡುವ ರಾಕ್ಷಸರ ಧ್ವನಿಯೂ, ರಾಕ್ಷಸರಿಂದ ಹಿಂಸಿತರಾದ ಕಪಿಗಳ ಧ್ವನಿಯೂ ಅತಿಭಯಂಕರವಾಗಿ ವ್ಯಾಪಿಸಿತು. ಮತ್ತು ಆಗ ಯುದ್ಧಭೂಮಿಯಲ್ಲಿ ರಾಕ್ಷಸರ ಶಕ್ತ್ಯಾಯುಧಗಳಿಂದಲೂ, ಶೂಲಗಳಿಂದಲೂ, ಗಂಡುಗೊಡಲಿ ಗಳಿಂದಲೂ ಹತರಾಗಿ ಬಿದ್ದಿದ್ದ ವಾನರರ ದೇಹಗಳೂ, ಅಲ್ಲಲ್ಲಿ ವಾನರರು ಬೀಸಿಬಡಿದು ಮರಗಿಡಗಳಿಂದಲೂ, ಪರ್ವತ ಶಿಖರಗಳಿಂದಲೂ, ಮೈಮುರಿದು ಸತ್ತುಬಿದ್ದಿರುವ ಕಾಮರೂಪಿಗಳಾದ ರಾಕ್ಷಸರ ದೇಹಗಳೂ, ರಾಶಿಯಾಗಿ ತುಂಬಿದ್ದುವು. ಎಲ್ಲಿ ನೋಡಿದರೂ ಆ ರಣಭೂಮಿಯನ್ನು ಪುಷ್ಪೋಪಹಾರಗಳಿಂದ ಅಲಂಕರಿಸಿದಂತೆ, ಮುರಿದು ಬಿದ್ದ ಶಸ್ತ್ರಗಳು ಹೊಳೆಯುತ್ತಿದ್ದವು. ಮತ್ತು ಎಲ್ಲಿ ನೋಡಿದರೂ ರಕ್ತಪ್ರವಾಹವು ಕೆಸರುಗಟ್ಟಿದ್ದುದರಿಂದ, ಅಲ್ಲಲ್ಲಿನ ಸನ್ನಿವೇಶಗಳನ್ನು ನೋಡಿ ತಿಳಿಯುವುದಕ್ಕಾಗಲೀ, ಮುಂದೆ ಕಾಲಿಡುವುದಕ್ಕಾಗಲೀ ಸಾಧ್ಯವಿಲ್ಲದಂತಾಯಿತು. ಹೀಗೆ ಮಹಾಭಯಂಕರವಾಗಿ, ವಾನರ ರಾಕ್ಷಸರಿಬ್ಬರಿಗೂ ಪ್ರಾಣಹಾನಿಕರವಾದ ಆ ರಾತ್ರಿಯು, ಕಾಳರಾತ್ರಿಯಂತೆ (ಇಲ್ಲಿ ಕಾಳರಾತ್ರಿಯೆಂದರೆ, "ರಾತ್ರಿರ್ಭೀಮ ರಥಿರ್ನಾಮ ಸರ್ವಪ್ರಾಣಿ ಭಯಾವಹಾ" ಎಂದು ಹೇಳಲ್ಪಡುವ ಭೀಮರಥಿರಾತ್ರಿ ಎಂದು ಗ್ರಾಹ್ಯವು. ಅಥವಾ "ಸತೀಚ ಕಾಳರಾತ್ರಿಶ್ಚ ಭೈರವೀ ಗಣನಾಯಿಕಾ" ಎಂಬಂತೆ ಒಂದು ವಿಧವಾದ ಶಕ್ತಿಯೆಂದೂ ಗ್ರಹಿಸಬಹುದು.) ಸಮಸ್ತ ಪ್ರಾಣಿ

ಗಳಿಗೂ ಮೈಯ್ಯಲ್ಲಿ ನಡುಕವನ್ನು ಹುಟ್ಟಿಸುತ್ತಿತ್ತು. ಹೀಗೆ ಭಯಂಕರವಾದ ಗಾಢಾಂಧಕಾರವು ಕವಿದಿರುವುದನ್ನು ನೋಡಿ ರಾಕ್ಷಸರು ತಮಗೆ ಇದೇ ಸರಿಯಾದ ಸಮಯವೆಂದು ತಿಳಿದು, ಕೆಲವರು ಗುಂಪುಗೂಡಿ ಬಾಣವರ್ಷಗಳನ್ನು ಕರೆಯುತ್ತ, ರಾಮನನ್ನಿದಿರಿಸುವುದಕ್ಕೆ ಹೋದರು. ಆ ರಾಕ್ಷಸರೆಲ್ಲರೂ ಕೋಪದಿಂದ ಗರ್ಜಿಸುತ್ತ ರಾಮನನ್ನಿದಿರಿಸುವುದಕ್ಕೆ ಬರುವಾಗ, ಅವರ ದೊಡ್ಡ ಗರ್ಜನಧ್ವನಿಯು, ಪ್ರಳಯಕಾಲದಲ್ಲಿ ಉಕ್ಕಿಬರುತ್ತಿರುವ ಸಪ್ತಸಮುದ್ರಗಳ ಪ್ರವಾಹಧ್ವನಿಯಂತೆ ಮಹಾಭಯಂಕರವಾಗಿ ಕೇಳಿಸಿತು. ಇಷ್ಟರಲ್ಲಿಯೇ ರಾಮನು ಅವರನ್ನು ನೋಡಿ, ಎದೆಹಾರುವಷ್ಟರಲ್ಲಿ ಅಗ್ನಿಜ್ವಾಲೆಗಳಂತಿದ್ದ ತೀಕ್ಷ್ಣವಾದ ಆರು ಬಾಣಗಳನ್ನು ಪ್ರಯೋಗಿಸಿ, ಅವುಗಳಿಂದ ಆ ರಕ್ಕಸರಲ್ಲಿ ಪ್ರಧಾನರಾದ ಆರು ಮಂದಿಯನ್ನೂ ರಕ್ಕಸರನ್ನೂ ತಡೆದನು. ಶತ್ರುದುರ್ಜಯನಾದ ಯಮಶತ್ರುವೆಂಬುವನೊಬ್ಬನು, ಮಹೋದರ ಮಹಾಪಾರ್ಶ್ವರೆಂಬವರಿಬ್ಬರು, ದೊಡ್ಡ ದೇಹವುಳ್ಳ ವಜ್ರದಂಷ್ಟ್ರನೆಂಬವನೊಬ್ಬನು, ಲಂಕೆಯ ಉತ್ತರದ್ವಾರದಲ್ಲಿ ಕಾವಲಿರಿಸಲ್ಪಟ್ಟಿದ್ದ ಶುಕಸಾರಣರಿಬ್ಬರು, ಈ ಆರುಮಂದಿಯೂ ರಾಮಬಾಣಗಳಿಂದ ಮರ್ಮಸ್ಥಳಗಳಲ್ಲಿ ಹೊಡೆಯಲ್ಪಟ್ಟವರಾಗಿ, ತಾವು ಬದುಕಿದುದೇ ಸಾಕೆಂದು ಯುದ್ಧರಂಗದಿಂದ ಪಲಾಯನಮಾಡಿದರು. ಇಷ್ಟರಲ್ಲಿ ಮಹಾಬಲಾಢ್ಯನಾದ ರಾಮನು ರಣರಂಗದಲ್ಲಿ ಗಾಢಾಂಧಕಾರವು ಕವಿದುದನ್ನು ನೋಡಿ, ಸುವರ್ಣಗಳಿಂದ ಚಿತ್ರಿತಳಾಗಿ,ಅಗ್ನಿಜ್ವಾಲೆಗಳಂತೆ ಹೊಳೆಯುತ್ತಿದ್ದ ತನ್ನ ಬಾಣಗಳನ್ನು ನಾಲ್ಕುಕಡೆಗಳಿಗೂ ಪ್ರಯೋಗಿಸಿ, ಆ ಬಾಣಗಳ ಕಾಂತಿಯಿಂದಲೇ ದಿಕ್ಕುವಿದಿಕ್ಕುಗಳೆಲ್ಲವನ್ನು ಬೆಳಗಿಸಿದನು. (ಆಗ ಯುದ್ಧರಂಗವೆಲ್ಲವೂ ರಾಮನಾಮಾಂಕಿತವಾದ ಬಾಣಗಳಿಂದಲೇ ವ್ಯಾಪ್ತವಾಯಿತು.) ರಾಮನನ್ನಿರಿಸುವುದಕ್ಕಾಗಿ ಬಂದಿದ್ದ ಭಯಂಕರ ಆಕಾರವುಳ್ಳ ಬೇರೆ ಯಾವ ರಕ್ಕಸರಿದ್ದರೋ ಅವರೆಲ್ಲರೂ, ಬೆಂಕಿಯಲ್ಲಿ ಬಿದ್ದ ಶಲಭಗಳಂತೆ ಮುಹೂರ್ತಮಾತ್ರದಲ್ಲಿಯೇ ರಾಮಬಾಣಗಳಿಗೆ ಸಿಕ್ಕಿ ಬೂದಿಯಾದರು. ರಾಮನ ಧನುಸ್ಸಿನಿಂದ ತಂಡೋಪತಂಡವಾಗಿ ಹೊರಟ ಚಿನ್ನದ ಹಿಡಿಗಳುಳ್ಳ ಸಾವಿರಾರು ಬಾಣಗಳು, ಗಗನ ಪ್ರದೇಶವೆಲ್ಲವನ್ನೂ ವ್ಯಾಪಿಸಿರಲು, ಆ ರಾತ್ರಿಯು ಮಿಂಚುಹುಳುಗಳಿಂದ ತುಂಬಿದ ಶರತ್ಕಾಲದ ರಾತ್ರಿಯಂತೆ ಕಾಣುತಿತ್ತು. ಮೊದಲೇ ಭಯಂಕರವಾದ ಆ ರಾತ್ರಿಯು, ಅಲ್ಲಲ್ಲಿ ರಕ್ಕಸರ ಸಿಂಹನಾದಗಳಿಂದಲೂ, ಕಪಿಗಳ ಕೋಲಾಹಲದಿಂದಲೂ, ಮೇಲೆ ಮೇಲೆ ಅತಿಭಯಂಕರವಾಗಿ ತೋರುತ್ತಿತ್ತು. ಈ ರಣರಂಗ

ದಿಂದ ಮೇಲೆ ಮೇಲೆ ಹೆಚ್ಚಿಬರುತ್ತಿದ್ದ ಮಹಾಧ್ವನಿಯು, ತ್ರಿಕೂಟಪರ್ವತದ ಗುಹೆಗಳೆಲ್ಲವನ್ನೂ ವ್ಯಾಪಿಸಿ, ಅಲ್ಲಿಂದ ಪ್ರತಿಧ್ವನಿಯನ್ನು ಹೊರಡಿಸುತ್ತಿರಲು, ಆ ಪರ್ವತವೇ ಮಾತಾಡುವಂತೆ ಕಾಣಿಸಿತು. ಆ ರಣರಂಗದಲ್ಲಿ ಅಲ್ಲಲ್ಲಿ ಕತ್ತಲೆಯಂತೆ ಕಪ್ಪಾದ ಮೈಯುಳ್ಳ ದೊಡ್ಡದೊಡ್ಡ ಭೂತಾಕಾರದ ಸಿಂಗಳೀಕಗಳು ತಮ್ಮ ದೊಡ್ಡ ತೋಳುಗಳನ್ನು ನೀಡಿ ಮುಂದೆ ಸಿಕ್ಕಿದ ರಕ್ಕಸರನ್ನೆಲ್ಲಾ ಆ ತೋಳುಗಳ ನಡುವೆ ಸೇರಿಸಿಕೊಂಡು, ಅವರನ್ನು ಒಂದೇ ತುತ್ತಾಗಿ ನುಂಗುತ್ತಿದ್ದುವು. ಇಷ್ಟರಲ್ಲಿ ಅಂಗದನು ಆ ಯುದ್ಧದಲ್ಲಿ ತನಗೆ ಪ್ರತಿಭಟನಾದ ಇಂದ್ರಜಿತುವನ್ನು ಕೈಗಳಿಂದಪ್ಪಳಿಸಿ, ಒಂದೇ ಪ್ರಹಾರಕ್ಕೆ ಅವನ ಸಾರಥಿಯನ್ನೂ, ಕುದುರೆಗಳನ್ನೂ, ಕೊಂದು ಕೆಡಹಿದನು. ಹೀಗೆ ಕ್ರೂರವಾಗಿಯೂ, ಭಯಂಕರವಾಗಿಯೂ ಯುದ್ಧ ನಡೆಯು ತ್ತಿರುವಾಗಲೇ, ಮಹಾಕಾಯವುಳ್ಳ ಇಂದ್ರಜಿತುವು ಅಂಗದನಿಂದ ತನ್ನ ಸಾರಥಿಸೂ ರಥಾಶ್ವಗಳೂ ಹತವಾದುದನ್ನು ನೋಡಿ, ಆ ರಥವನ್ನು ಅಲ್ಲಿಯೇ ಬಿಟ್ಟು, ಕ್ಷಣಮಾತ್ರದಲ್ಲಿ ಯಾರಿಗೂ ತಿಳಿಯದಂತೆ ಕಣ್ಮರೆಯಾದನು. ಅಂಗದನು ನಡೆಸಿದ ಮಹಾದ್ಭುತವಾದ ಈ ಕಾರ್ಯವನ್ನು ನೋಡಿ ದೇವತೆಗಳೂ, ಋಷಿಗಳೂ ರಾಮಲಕ್ಷ್ಮಣರೂ, ಅವನನ್ನು ಬಹಳವಾಗಿ ಕೊಂಡಾಡಿದರು. ಲೋಕದಲ್ಲಿ ಸಮಸ್ತಭೂತಗಳೂ, ಇಂದ್ರಜಿತ್ತಿನ ಪರಾಕ್ರಮವನ್ನು ಚೆನ್ನಾಗಿ ಬಲ್ಲವು. (ಅವನು ಯಾವ ಯುದ್ಧದಲ್ಲಿಯೂ, ದುರ್ಜಯನಾಗಿರುವವನು. ಇಂತಹವನು ಈ ಅಂಗದನ ಮುಂದೆ ನಿಲ್ಲಲಾರದೆ ಅದೃಶ್ಯನಾಗಿ ಹೋದುದನ್ನು ನೋಡಿ ಎಲ್ಲರಿಗೂ ಆಶ್ಚರ್ಯವು ಹುಟ್ಟಿತು.) ಅಂತಹ ಧೀರನು ಕೂಡಾ ಅಂಗದನಿಂದ ಪರಾಜಿತನಾದುದನ್ನು ನೋಡಿ, ಎಲ್ಲರ ಮನಸ್ಸಿನಲ್ಲಿಯೂ ಸಂತೋಷವು ಹುಟ್ಟಿತು. ಆಗ ಸಮಸ್ತ ಕಪಿಗಳೂ ಸುಗ್ರೀವ ವಿಭೀಷಣಾದಿಗಳೊಡನೆ ಸೇರಿ, ಇಂದ್ರಜಿತುವಿಗೆ ಉಂಟಾದ ಪರಾಭವಕ್ಕಾಗಿ, “ಭಲೆ! ಭಲೆ! ಶಹಬಾಸ್” ಎಂದು ಅಂಗದನನ್ನು ಕೊಂಡಾಡಿದರು. ಇಷ್ಟರಲ್ಲಿ ಇಂದ್ರಜಿತುವಾದರೋ ತನಗೆ ಅಂಗದನಿಂದುಂಟಾದ ಪರಾಭವವನ್ನು ಸಹಿಸಲಾರದೆ ಅತಿಭಯಂಕರವಾದ ಕೋಪವನ್ನವಲಂಬಿಸಿದನು. ಈ ನಡುವೆ ಇತ್ತಲಾಗಿ ರಾಮನು ವಾನರರನ್ನು ನೋಡಿ, “ಎಲೆ ವಾನರರೇ ! ಈಗ ನೀವೆಲ್ಲರೂ ನಿಮ್ಮ ರಾಜನಾದ ಸುಗ್ರೀವನ ಸಮೀಪದಲ್ಲಿಯೇ ಬಹಳ ಎಚ್ಚರಿಕೆಯಿಂದ ಇರಬೇಕು. ಆ ಇಂದ್ರಜಿತುವು ಬ್ರಹ್ಮನಿಂದ ವರವನ್ನು ಹೊಂದಿದವನು. ಮೂರು ಲೋಕವನ್ನೂ ಬಹಳವಾಗಿ ಬಾಧಿಸುತ್ತಿದ್ದವನು, ಆದರೆ ಈಗ ಅವನಿಗೆ

ಮೃತ್ಯುವು ಸಮೀಪಿಸಿರುವುದು. ಅವನನ್ನು ಕೊಲ್ಲಬೇಕೆಂದಿರುವ ನಿಮ್ಮ ಕೋರಿಕೆಯನ್ನು ಈಡೇರಿಸುವುದಕ್ಕಾಗಿಯೇ ಅವನು ಈಗ ಕಾಲ ಪ್ರಚೋದಿತನಾಗಿ ಬಂದಿರುವನು. (ಅವನು ಕಾಲವನ್ನು ನೋಡಿಕೊಂಡು ನಿಮ್ಮನ್ನು ಜಯಿಸಬೇಕೆಂದು ಬಂದಿರುವನು.) ಆದುದರಿಂದ ಈಗ ಮಾತ್ರ ನೀವೇನೂ ಆತುರಪಡದೆ, ನನಗಾಗಿ ಸ್ವಲ್ಪಹೊತ್ತಿನವರೆಗೆ ಸಹಿಸಿಕೊಂಡಿರಬೇಕು. (ಬ್ರಹ್ಮನ ವರವನ್ನು ಗೌರವಿಸುವುದಕ್ಕಾಗಿ ನಾನೂ ಈಗ ಸ್ವಲ್ಪಕಾಲದವರೆಗೆ ಸಹಿಸಿಕೊಂಡು ಸುಮ್ಮನಿರಬೇಕಾಗಿದೆ) ಎಂದನು. ಇಷ್ಟರಲ್ಲಿಯೇ ಪಾಪಾತ್ಮನಾದ ಆ ಇಂದ್ರಜಿತುವು ಕಪಟ ಯುದ್ಧದಲ್ಲಿ ನಿಪುಣನಾದುದರಿಂದ, ಅಂತರ್ಧಾನ ವಿದ್ಯೆಯಿಂದ ಅದೃಶ್ಯನಾಗಿಯೇ ಇದ್ದು, ಸಿಡಿಲಿನಂತೆ ಜ್ವಲಿಸುವ ತೀಕ್ಷ್ಣ ಬಾಣಗಳನ್ನು ಪ್ರಯೋಗಿಸಲಾರಂಭಿಸಿದನು. ರಾಕ್ಷಸ ವೀರನಾದ ಆ ಇಂದ್ರಜಿತುವು ಪರಮ ಕುಪಿತನಾಗಿ, ರಾಮಲಕ್ಷ್ಮಣರಿಬ್ಬರನ್ನೂ ಗುರಿಹಿಡಿದು, ಸರ್ಪರೂಪಗಳಾದ ಕ್ರೂರಬಾಣಗಳನ್ನು ಅವರ ಸಮಸ್ತಾವಯವಗಳಿಗೂ ವ್ಯಾಪಿಸುವಂತೆ ಪ್ರಯೋಗಿಸಿದನು. ಹೀಗೆ ಇಂದ್ರಜಿತು ಕಪಟ ಯುದ್ಧವನ್ನಾರಂಭಿಸಿ, ಮಾಯೆಯಿಂದ ಸಮಸ್ತ ಭೂತಗಳಿಗೂ ಅದೃಶ್ಯನಾಗಿ, ಆ ಯುದ್ಧದಲ್ಲಿ ರಘುಕುಲೋದ್ಭವರಾದ ರಾಮಲಕ್ಷ್ಮಣರಿಬ್ಬರನ್ನೂ ತನ್ನ ಸರ್ಪಾಸ್ತ್ರಗಳಿಂದ ಬಂಧಿಸಿ ಕ್ಷಣಮಾತ್ರದಲ್ಲಿ ಅವರಿಬ್ಬರನ್ನೂ ಮೋಹಗೊಳಿಸಿದನು. ಯಾರಿಗೂ ತಿಳಿಯದಂತೆ ಆ ಇಂದ್ರಜಿತು ಸರ್ಪಾಸ್ತ್ರಗಳಿಂದ ಬಂಧಿಸಿದೊಡನೆ, ಪುರುಷಸಿಂಹರಾದ ಆ ರಾಮಲಕ್ಷ್ಮಣರಿಬ್ಬರೂ ಪರವಶರಾಗಿ ಬಿದ್ದುದನ್ನು, ಸಮಸ್ತ ವಾನರ ಸೈನಿಕರೂ ನೋಡಿದರು. ಇಂದ್ರಜಿತುವು ಮಹಾ ವೀರಾಗ್ರಣಿಯೆನಿಸಿಕೊಂಡರೂ ರಾಮಲಕ್ಷ್ಮಣರಿಗಿದಿರಾಗಿ ನಿಂತು ಯುದ್ಧಮಾಡಲಾರದೆ, ಮಾಯೆಯನ್ನವಲಂಬಿಸಿ ಅವರಿಬ್ಬರನ್ನೂ ತನ್ನ ಬಾಣಗಳಿಂದ ಬಂಧಿಸಿಬಿಟ್ಟನು.

ಇಲ್ಲಿಗೆ ನಲವತ್ತನಾಲ್ಕನೆಯ ಸರ್ಗವು.

—•• ಇಂದ್ರಜಿತ್ತಿನ ನಾಗಪಾಶದಿಂದ ರಾಮಲಕ್ಷ್ಮಣರು ಬದ್ಧರಾಗಿದ್ದುದು. ••—

ಬಲಾಢ್ಯನಾಗಿಯೂ, ವೀರ್ಯಶಾಲಿಯಾಗಿಯೂ ಇರುವ ರಾಜಪುತ್ರನಾದ ರಾಮನು, ಇಂದ್ರಜಿತು ಇರುವ ಸ್ಥಳವನ್ನು ತಿಳಿದುಕೊಳ್ಳಬೇಕೆಂದಪೇಕ್ಷಿಸಿ, ಹತ್ತು ಮಂದಿ ವಾನರಯೂಥಪತಿಗಳನ್ನು ಆ ಕಾರ್ಯಕ್ಕಾಗಿ ನೇಮಿಸಿದನು. ಇದಕ್ಕಾಗಿ

ಪರಂತಪನಾದ ಆ ರಾಮನು, ಸುಷೇಣನ ಮಕ್ಕಳಿಬ್ಬರು, ವಾನರಶ್ರೇಷ್ಠನಾದ ನೀಲನೊಬ್ಬನು, ವಾಲಿಪುತ್ರನಾದ ಅಂಗದನೊಬ್ಬನು, ಬಲಾಢ್ಯರಾದ ಶರಭ, ವಿನತ ಜಾಂಬವಂತರೆಂಬ ಮೂವರು, ಮಹಾ ವೀರ್ಯವಂತನಾದ ಸಾನುಪ್ರಸ್ಥ, ಋಷಭ, ಋಷಭಸ್ಕಂಧರೆಂಬ ಮೂವರು, ಈ ಹತ್ತುಮಂದಿಯನ್ನೂ ಕರೆದು ಇಂದ್ರಜಿತು ಇರುವ ಸ್ಥಳವನ್ನು ತಿಳಿದುಬರುವಂತೆ ಆಜ್ಞಾಪಿಸಿದನು. ಈ ರಾಮಾಜ್ಞೆಯನ್ನು ಕೇಳಿದ ಆ ವಾನರರೆಲ್ಲರೂ ಪರಮ ಸಂತುಷ್ಟರಾಗಿ, ದೊಡ್ಡದೊಡ್ಡ ಮರಗಳನ್ನು ಕೈಗೆತ್ತಿಕೊಂಡು, ಇಂದ್ರಜಿತುವನ್ನು ಹುಡುಕುವುದಕ್ಕಾಗಿ ಆಕಾಶಕ್ಕೆ ಹಾರಿ ನಾನಾ ದಿಕ್ಕುಗಳಿಗೂ ಹೊರಟರು. ಈ ವಾನರರು ತಡೆಯಿಲ್ಲದ ಮಹಾವೇಗವುಳ್ಳವರಾಗಿದ್ದರೂ, ಸರ್ವಾಸ್ತ್ರ ವಿಶಾರದನಾದ ಇಂದ್ರಜಿತುವು ಪರಮಾಸ್ತ್ರ ರೂಪಗಳಾದ ತನ್ನ ಬಾಣಗಳಿಂದ ಅವರ ವೇಗವನ್ನು ತಡೆದು ಅವರನ್ನು ನಿವಾರಿಸಿದನು. ಭಯಂಕರ ವೇಗವುಳ್ಳ ಈ ವಾನರರೆಲ್ಲರೂ ಇಂದ್ರಜಿತ್ತಿನ ಬಾಣಗಳಿಂದ ಭೇದಿಸಲ್ಪಟ್ಟ ದೇಹವುಳ್ಳವರಾಗಿ, ಮೇಘದಲ್ಲಿ ಮರೆಗೊಂಡಿರುವ ಸೂರ್ಯನಂತೆ ಗಾಢಾಂಧಕಾರದಲ್ಲಿ ಮರೆಸಿಕೊಂಡಿದ್ದ ಆ ಇಂದ್ರಜಿತ್ತನ್ನು ಕಾಣಲಾರದೆ ಹೋದರು. ಯುದ್ಧದಲ್ಲಿ ಜಯಶೀಲನಾದ ಆ ಇಂದ್ರಜಿತುವಾದರೋ ಸರ್ವಾಯವಗಳನ್ನೂ ಭೇದಿಸುವಂತಿರುವ ತೀಕ್ಷ್ಣ ಬಾಣಗಳನ್ನು ತೆಗೆದು, ರಾಮಲಕ್ಷ್ಮಣರಮೇಲೆ ಗುರಿಯಿಟ್ಟು ಹೊಡೆಯುತ್ತಿದ್ದನು. ಹೀಗೆ ಆ ಇಂದ್ರಜಿತುವು ಅತ್ಯಾಕ್ರೋಶಗೊಂಡು, ತನ್ನ ಹಗೆ ತೀರುವಂತೆ ವೀರರಾದ ಆ ರಾಮಲಕ್ಷ್ಮಣರೆಂಬ ಸಹೋದರರಿಬ್ಬರಮೇಲೂ, ಸರ್ಪ ಬಾಣಗಳನ್ನು ಎಡೆಬಿಡದೆ ಪ್ರಯೋಗಿಸುತ್ತಿರಲು, ಅವರ ದೇಹದಲ್ಲಿ ಸೂಜಿಯ ಮೊನೆಯಷ್ಟೂ ಅವಕಾಶವಿಲ್ಲದಂತೆ ಸರ್ವಾಯವಗಳೂ ಆ ಬಾಣಗಳಿಂದಲೇ ತುಂಬಿ ಹೋದವು. ಅವರ ಸರ್ವಾಂಗಗಳಲ್ಲಿಯೂ ರಕ್ತವು ಸುರಿಯಲಾರಂಭಿಸಿತು. (ನಭೂತ-ಸಂಘಸಂಸ್ಥಾನೋ ದೇಹೋಽಸ್ಯ ಪರಮಾತ್ಮನಃ । ನ ತಸ್ಯ ಪ್ರಾಕೃತಾಮೂರ್ತಿ-ರ್ಮಾಂಸಮೇದೋಽಸ್ಥಿಸಂಭವಾ ॥ ಎಂಬಂತೆ ರಾಮಲಕ್ಷ್ಮಣರ ದಿವ್ಯ ವಿಗ್ರಹಗಳೆರಡೂ ಅಪ್ರಾಕೃತಗಳಾಗಿರುವ ಆ ದೇಹಗಳಿಂದ ರಕ್ತಮಾಂಸಗಳು ಹೊರಡುವುದು ಹೇಗೆ? ಎಂದರೆ, ವಾಸ್ತವದಿಂದ ರಕ್ತವಿಲ್ಲದಿದ್ದರೂ, ಮನುಷ್ಯತ್ವವನ್ನು ತೋರಿಸುವುದಕ್ಕಾಗಿಯೇ ಅವರು ರಕ್ತವನ್ನು ತೋರಿಸಿದುದಾಗಿ ಗ್ರಾಹ್ಯವು. ಆದರೆ, ಇಷ್ಟು ನಿರ್ಬಂಧದಿಂದಾದರೂ ಮನುಷ್ಯಭಾವವನ್ನಭಿಯಿಸುವುದರಿಂದ ಫಲವೇನು? ಎಂದರೆ, ಸರ್ವವಿಧದಲ್ಲಿಯೂ ಇವರು ಮನುಷ್ಯರಂತೆ ನಟಿಸದೇ ಹೋದರೆ ಇತರ

ಜನಗಳಿಗೆ ಇವರು ದೇವಾಂಶಪುರುಷರೆಂಬ ಭಾವನೇ ಸಂಪೂರ್ಣವಾಗಿ ಹುಟ್ಟಿ, ಆ ತ ನಂ ತೆ ತಮ್ಮಿಂದ ಧರ್ಮಗಳೆಲ್ಲವನ್ನೂ ನಡೆಸುವುದು ಸಾಧ್ಯವಲ್ಲವೆಂದೂ ತೋರಬಹುದು. ಈ ಶಂ ಕೆ ಯ ನ್ನು ನಿವಾರಿಸುವುದಕ್ಕಾಗಿಯೇ ಇ ವ ರು ಅವಕಾಶವಿದ್ದಾಗಲೆಲ್ಲಾ ಮನುಷ್ಯತ್ವವನ್ನು ನಟಿಸುತ್ತಿದ್ದರೆಂಡೇ ರ ಹ ಸ್ಯ ವು. ಮತ್ತು ರಾವಣನು ಮನುಷ್ಯನೊಬ್ಬನಿಂದಲೇ ವಧ್ಯನಾದುದರಿಂದ ತನ್ನಲ್ಲಿರುವ ಮನುಷ್ಯ ಸ್ವರೂಪವನ್ನೆಲ್ಲಾ ಅವರಿಗೆ ತೋರಿಸಬೇಕೆಂಬ ಉದ್ದೇಶದಿಂದಲೇ ಹೀಗೆ ನಟಿಸಿದುದಾಗಿಯೂ ಹೇಳುವರು. ಇವರಿಬ್ಬರೂ ನಾಗಪಾಶಬದ್ಧರಾಗಿ ಮಲಗಿದ್ದು ದೇಕೆ ಎಂದರೆ ಧರ್ಮನಿರತರಾದವರಿಗೆ ಒಮ್ಮೆ ಆಕಸ್ಮಾತ್ತಾಗಿ ಮಹಾ ವಿಪತ್ತುಗಳು ಬಂದರೂ, ಕ್ಷಣಕಾಲದಲ್ಲಿಯೇ ಅವು ನಿವರ್ತಿಸುವುವೆಂದು ಲೋಕಕ್ಕೆ ತಿಳಿಸುವುದ ಕ್ಕಾಗಿಯೇ ಹೊರತು ಬೇರೆಯಲ್ಲ. ಹೀಗೆಯೇ ರಾಮನ ವಿರಹ ದುಃಖಾದಿಗಳಿಗೂ ಕಾರಣಗಳನ್ನು ತಿಳಿಯಬೇಕು.) ಇದರಿಂದ ಅವರಿಬ್ಬರ ದೇಹವೂ ಪುಷ್ಪಿತವಾದ ಮುತ್ತುಗದ ಮರದಂತೆ ಕಾಣುತ್ತಿತ್ತು. ಆಗ ಕೆದರಿದ ಕಾಡಿಗೆಯ ರಾಶಿಯಂತೆ ಕಪ್ಪಾದ ಮೈಯುಳ್ಳ ಇಂದ್ರಜಿತುವು ಕೋಪದಿಂದ ಸ್ವಲ್ಪವಾಗಿ ಕೆಂಪೇರಿದ ಕಡೆ ಗಣ್ಣುಳ್ಳವನಾಗಿ, ತಾನು ಕಣ್ಮರೆಯಾಗಿದ್ದಂತೆಯೇ ಆ ರಾಮಲಕ್ಷ್ಮಣರಿಬ್ಬರನ್ನೂ ಕೂಗಿ ಹೇಳುವನು. "ಎಲೈ ಕ್ಷತ್ರಿಯ ಕುಮಾರರೆ! ನಾನು ಅದೃಶ್ಯನಾಗಿ ಯುದ್ಧ ಮಾಡುವುದಕ್ಕೆ ತೊಡಗಿದರೆ, ಸುರನಾಥನಾದ ಇಂದ್ರನೂ ನನ್ನನ್ನು ನೋಡುವುದ ಕ್ಕಾಗಲೀ, ನನ್ನನ್ನು ಸಮೀಪಿಸುವುಕ್ಕಾಗಲೀ ಶಕ್ತನಲ್ಲ. ಇನ್ನು ಕೇವಲ ಮನುಷ್ಯ ಮಾತ್ರರಾದ ನಿಮ್ಮಿಂದೇನಾಗುವುದು? ಎಲೈ ರಾಮಲಕ್ಷ್ಮಣರೆ! ನನಗೆ ಕೋಪ ವುಂಟಾದಮೇಲೆ ನಾನು ಸುಮ್ಮನೆ ಬಿಡುವೆನೆ? ಹದ್ದಿನ ಗರಿಗಳುಳ್ಳ ಈ ನನ್ನ ಬಾಣ ಗಳಿಂದ ನಿಮ್ಮಿಬ್ಬರ ದೇಹವನ್ನೂ ಎಡೆಬಿಡದೆ ಮುಚ್ಚಿ ಇದೋ! ಈಗಲೇ ಯಮಪುರಿಗೆ ಸಾಗಿಸಿಬಿಡುವೆನು ನೋಡಿರಿ" ಎಂದನು. ರಾಮಲಕ್ಷ್ಮಣರಿಬ್ಬರೂ ಶಬ್ದವೇಧಿಯೆಂಬ ಶಸ್ತ್ರವಿದ್ಯೆಯನ್ನು ಬಲ್ಲವರಾಗಿ, ಶಬ್ದವನ್ನೇ ಗುರಿ ಹಿಡಿದು ತಮ್ಮ ಬಾಣಗಳನ್ನು ಪ್ರಯೋಗಿಸಿ ಇಂದ್ರಜಿತುವನ್ನು ತಡೆಯಬಲ್ಲವರಾಗಿದ್ದರೂ, ಧರ್ಮಜ್ಞರಾದುದರಿಂದ, ಧರ್ಮಯುದ್ಧದಲ್ಲಿಯೇ ದೃಷ್ಟಿಯಿಟ್ಟು ತಾಳ್ಮೆಯಿಂದಿರು ತ್ತಿದ್ದರು. ಇಂದ್ರಜಿತುವು ಹೆಮ್ಮೆಯಿಂದ ಆ ರಾಮಲಕ್ಷ್ಮಣರಿಬ್ಬರನ್ನೂ ಮೂದಲಿ ಸುತ್ತಾ ಮೇಲೆ ಮೇಲೆ ತೀಕ್ಷ್ಣ ಬಾಣಗಳನ್ನು ಪ್ರಯೋಗಿಸಿ, ತನಗೆ ಜಯ ವುಂಟಾಯಿತೆಂಬ ಸಂತೋಷದಿಂದ ಅಟ್ಟಹಾಸದೊಡನೆ ನಕ್ಕು ಸಿಂಹನಾದವನ್ನು

ಮಾಡಿದನು. ಮತ್ತು ಕೆದರಿದ ಕಾಡಿಗೆಯಂತೆ ಕಪ್ಪು ಮೈಯುಳ್ಳ ಆ ಇಂದ್ರಜಿತುವು ಕಣ್ಮರೆಯಾಗಿದ್ದಂತೆಯೇ ದೊಡ್ಡ ಧನಸ್ಸನ್ನು ಹಿಡಿದು ಟೇಂಕಾರಮಾಡುತ್ತಾ, ಆ ರಾಮಲಕ್ಷ್ಮಣರ ಮೇಲೆ ಬಾಣಗಳನ್ನು ಎಡೆಬಿಡದೆ ಸುರಿಯುತ್ತಿದ್ದನು. ಅಸ್ತ್ರವಿದ್ಯೆಯ ಮರ್ಮವನ್ನು ಚೆನ್ನಾಗಿ ಬಲ್ಲ ಆ ರಾವಣಪುತ್ರನು ಹೀಗೆ ರಾಮಲಕ್ಷ್ಮಣರ ಮರ್ಮಸ್ಥಾನಗಳಲ್ಲಿ ಮೇಲೆ ಮೇಲೆ ಬಾಣಗಳನ್ನು ಪ್ರಯೋಗಿಸುತ್ತ ಆಗಾಗ ಸಿಂಹನಾದವನ್ನೂ ಮಾಡುತ್ತಿದ್ದನು. ರಾಮಲಕ್ಷ್ಮಣರಿಬ್ಬರೂ ಸರ್ಪರೂಪಗಳಾದ ಅವನ ಬಾಣಗಳಲ್ಲಿ ಕಟ್ಟುಬಿದ್ದು, ಕ್ಷಣಮಾತ್ರದಲ್ಲಿಯೇ ಕಣ್ಣುಕಾಣದೆ ಪ್ರಜ್ಞೆತಪ್ಪಿದರು. ಅವರ ಸಮಸ್ತಾವಯವಗಳೂ ಶಸ್ತ್ರಗಳಿಂದ ಭೇದಿಸಲ್ಪಟ್ಟವು. ಅಂಗಾಂಗಗಳಲ್ಲಿಯೂ ಬಾಣಗಳು ನಾಟಿಕೊಂಡು ಆ ಸಹೋದರರಿಬ್ಬರೂ ಪ್ರಜ್ಞೆ ತಪ್ಪಿದವರಾಗಿ, ಹಗ್ಗವನ್ನು ಸಡಿಲಿಸಿದ ಇಂದ್ರಧ್ವಜಗಳಂತೆ ಶಕ್ತಿಗುಂದಿ ಕೆಳಗೆ ಬಿದ್ದರು. ಈ ರಾಮಲಕ್ಷ್ಮಣರಿಬ್ಬರೂ ಮಹಾಧನುಷ್ಮಂತರಾಗಿದ್ದರೂ, ಇಂದ್ರಜಿತ್ತಿನ ಬಾಣಗಳು ಮರ್ಮಸ್ಥಾನದಲ್ಲಿ ನಾಟಿದುದರಿಂದ, ಬಹಳವಾಗಿ ನೊಂದು ನಿಶ್ಚಲರಾದರು. ಅವರ ಸರ್ವಾವಯವಗಳೂ, ಸರ್ಪರೂಪಗಳಾದ ಬಾಣಗಳಿಂದ ಕಟ್ಟುಬಿದ್ದುವು. ಅವರ ಸರ್ವಾಂಗಗಳೂ ರಕ್ತಮಯವಾದುವು. ಅವರಿಬ್ಬರೂ ವೀರಶಯನವೆನಿಸಕೊಂಡ ರಣರಂಗದಲ್ಲಿ ಶಯನಿಸಿದರು. ಇಬ್ಬರೂ ಬಾಣಹತಿಯಿಂದ ಬಹಳವಾಗಿ ನೊಂದು ಸಂಕಟಪಡುತ್ತಿದ್ದರು. ಅವರಿಬ್ಬರ ದೇಹದಲ್ಲಿಯೂ ಶಿರಸ್ಸಿನಿಂದ ಕುಶಾಗ್ರದವರೆಗೆ, ಒಂದು ಕಿರುಬೆರಳಿನಷ್ಟು ಸ್ಥಳವಾದರೂ ಉಳಿಯದಂತೆ, ಸರ್ವಾವಯವಗಳೂ ಸರ್ಪರೂಪಗಳಾದ ಬಾಣಗಳಿಂದ ಭಿನ್ನವಾದುವು. ಸರ್ವಾಂಗವೂ ನಿಶ್ಚಲವಾಯಿತು. ಹೀಗೆ ಸಹೋದರರಿಬ್ಬರೂ ಕಾಮರೂಪಿಯಾದ ಆ ಕ್ರೂರರಕ್ಕಸನ ಬಾಣಗಳಿಂದ ಭೇದಿಸಲ್ಪಟ್ಟ ದೇಹವುಳ್ಳವರಾಗಲು ಪ್ರಸ್ರವಣ ಪರ್ವತಗಳಿಂದ ಹೊರಡುವ ಗಿರಿನದಿಗಳಂತೆ ಅವರಿಬ್ಬರ ದೇಹದಿಂದಲೂ ರಕ್ತಪ್ರವಾಹವೂ ಹೊರಡುತ್ತಿತ್ತು. ಮೊದಲೇ ತನ್ನ ಶೌರ್ಯದಿಂದ ಇಂದ್ರನನ್ನು ಜಯಿಸಿ ಇಂದ್ರಜಿತ್ತೆಂದು ಪ್ರಸಿದ್ಧಿಹೊಂದಿದ ಆ ಕ್ರೂರ ರಕ್ಕಸನು, ಕೋಪಾವಿಷ್ಟನಾಗಿ, ಮರ್ಮಸ್ಥಾನಗಳನ್ನು ಗುರಿಹಿಡಿದು ಬಾಣವನ್ನು ಪ್ರಯೋಗಿಸುತ್ತಿರಲು ಮೊದಲು ರಾಮನು ಕೆಳಗೆ ಬಿದ್ದನು. ಆ ರಕ್ಕಸನು ನಾಗಾಸ್ತ್ರದಿಂದ ಬಂಧಿಸಿದಮೇಲೆಯೂ ಬಿಡದೆ, ಇನ್ನೂ ಇತರ ವಿಧಗಳಾದ ಅನೇಕ ಸಾಮಾನ್ಯ ಬಾಣಗಳನ್ನೂ ಬಿಡವುದಕ್ಕೆ ತೊಡಗಿದನು. ಚಿನ್ನದ ಹಿಡಿಗಳಿಂದಲೂ ಸಾಣೆಯಿಕ್ಕಿ ಹೊಳೆಯುವ ಅಲಗು

ಗಳಿಂದಲೂ ಕೂಡಿದ ವಿವಿಧ ಬಾಣಗಳನ್ನು ತೆಗೆದು ಆ ಬಾಣಗಳನ್ನು ಕೆಳಮುಖವಾಗಿ ರಾಮಲಕ್ಷ್ಮಣರ ಕಡೆಗೆ ಪ್ರಯೋಗಿಸುತ್ತಿದ್ದನು. ಅವುಗಳಲ್ಲಿಯೇ ಚಕ್ರದಂತೆವರ್ತುಲಾಕಾರವಾದ ಮೊನೆಯುಳ್ಳವು ಕೆಲವು. ಅರ್ಧಚಂದ್ರಾಕಾರದ ಮೊನೆಯುಳ್ಳವು ಕೆಲವು. ಈಟಿಯಂತೆ ಮೊನೆಯುಳ್ಳವು ಕೆಲವು. ಅಂಜಲಿಯಂತೆ ಮೊನೆಯುಳ್ಳವು ಕೆಲವು. ಕರುವಿನ ಕೊಂಬಿನಂತೆ ಕವಲುಮೊನೆಯುಳ್ಳವು ಕೆಲವು. ಸಿಂಹದ ಕೋರೆಗಳಂತೆ ಮೊನೆಯುಳ್ಳವು ಕೆಲವು. ಸಣ್ಣಕತ್ತಿಯಂತೆ ಮೊನೆಯುಳ್ಳವು ಕೆಲವು. ಇಂತಹ ಚಿತ್ರವಿಚಿತ್ರಗಳಾದ ಅನೇಕ ಬಾಣಗಳಿಂದ ರಾಮನ ದೇಹವನ್ನು ಪ್ರಹರಿಸುತ್ತಿದ್ದನು. ಈ ಬಾಣಹತಿಯಿಂದ ರಾಮನು ಬಹಳ ನೊಂದವನಾಗಿ ವೀರಶಯನ ರೂಪವಾದ ರಣರಂಗದಲ್ಲಿ ಮಲಗಿಬಿಟ್ಟನು ಉಭಯ ಪಾರ್ಶ್ವಗಳಲ್ಲಿಯೂ, ಮಧ್ಯದಲ್ಲಿಯೂ ಬಾಗಿದ ರತ್ನಭೂಷಿತವಾದ ಧನುಸ್ಸನ್ನು ಬಲವಾಗಿ ಹಿಡಿದಿದ್ದ ಅವನ ಮುಷ್ಟಿಯು, ಕ್ರಮವಾಗಿ ಸಡಿಲುತ್ತ ಬಂದಿತು. ಬಿಚ್ಚಿದ ಹೆದೆಯುಳ್ಳ ತನ್ನ ಧನುರ್ದಂಡವನ್ನು ನೆಲದ ಮೇಲೆ ಊರಿ ನಿಂತಂತೆಯೇ ಆತನು ನೆಲಕ್ಕೆ ಬಿದ್ದನು. ಹೀಗೆ ರಾಮನು ಶರತಲ್ಪದಲ್ಲಿ ಮಲಗಿದುದನ್ನು ಕಂಡೊಡನೆ ಲಕ್ಷ್ಮಣನಿಗೆ ತನ್ನ ಪ್ರಾಣದಲ್ಲಿಯೇ ನಿರಾಶೆಯು ಹುಟ್ಟಿತು. ನಾಗಾಸ್ತ್ರಬದ್ಧನಾಗಿ ಬಿದ್ದಿರುವ ತನ್ನಣ್ಣನನ್ನು ಕಂಡು ಲಕ್ಷ್ಮಣನಿಗೆ ಮಿತಿಮೀರಿದ ದುಃಖಾವೇಶವುಂಟಾಯಿತು. ಅಲ್ಲಿದ್ದ ಸಮಸ್ತ ವಾನರರಿಗೂ ತಡೆಯಲಾರದ ಸಂಕಟವು ಹುಟ್ಟಿತು. ಹನುಮಂತನೇ ಮೊದಲಾದ ಸಮಸ್ತ ವಾನರರೂ ಸೇರಿ ನಾಗಪಾಶಬದ್ಧರಾಗಿದ್ದ ರಾಮಲಕ್ಷ್ಮಣರಿಬ್ಬರನ್ನೂ ಸುತ್ತಿನಿಂತು, ಮಹಾವ್ಯಸನದಿಂದ ಸಂಕಟಪಟ್ಟು ಕೊರಗಿ ತತ್ತಳಿಸುತ್ತಿದ್ದರು.

ಇಲ್ಲಿಗೆ ನಲವತ್ತೈದನೆಯ ಸರ್ಗವು.

ಸುಗ್ರೀವ ವಿಭೀಷಣಾದಿಗಳು ನಾಗಪಾಶಬದ್ಧರಾದ ರಾಮಲಕ್ಷ್ಮಣರ ಅವಸ್ಥೆಯನ್ನು ನೋಡಿ ದುಃಖಿಸಿದ್ದು. ಇಂದ್ರಜಿತು ಸುಗ್ರೀವಾದಿಗಳ ಮೇಲೆ ಬಾಣವನ್ನು ಹೊಡೆದುದು. ವಿಭೀಷಣನು ಸುಗ್ರೀವನನ್ನು ಸಮಾಧಾನಪಡಿಸಿದುದು. ಇಂದ್ರಜಿತು ರಾವಣನಿಗೆ ತನ್ನ ವಿಜಯುವನ್ನು ತಿಳಿಸಿದುದು.

ಆಮೇಲೆ ವಾನರರೆಲ್ಲರೂ ಇಂದ್ರಜಿತ್ತನ್ನು ಹುಡುಕುವುದಕ್ಕಾಗಿ ಭೂಮಿ ಆಕಾಶಗಳನ್ನೆಲ್ಲಾ ಸುತ್ತಿಸುತ್ತಿ ನೋಡುತ್ತ, ಇತ್ತಲಾಗಿ ಸರ್ವಾಂಗಗಳಲ್ಲಿಯೂ

ಬಾಣಗಳು ನಾಟಿ ನೆಲದಮೇಲೆ ಮಲಗಿದ್ದ ಸಹೋದರರಾದ ರಾಮಲಕ್ಷ್ಮಣರಿಬ್ಬರನ್ನೂ ಕಂಡರು. ಮಳೆಸುರಿದು ಶಾಂತವಾದ ಮೇಘದಂತೆ, ಇಂದ್ರಜಿತು ಈ ರಾಮಲಕ್ಷ್ಮಣರ ಮೇಲೆ ಬಾಣವರ್ಷಗಳನ್ನು ಕರೆದು ಸುಮ್ಮನಾದಮೇಲೆ, ಸುಗ್ರೀವ ವಿಭೀಷಣರಿಬ್ಬರೂ ರಾಮನಿದ್ದ ಕಡೆಗೆ ಬಂದರು. ಅದಕ್ಕೆ ಮೊದಲೇ ಹನುಮಂತನೂ ನೀಲನೂ, ಮೈಂದದ್ವಿವಿದರೂ, ಸುಷೇಣನೂ ಅಲ್ಲಿಗೆ ಬಂದು ರಾಮ ಲಕ್ಷ್ಮಣರನ್ನು ನೋಡಿ ಬಹಳ ದುಃಖಾಕ್ರಾಂತರಾಗಿ, ನಿಂತಿದ್ದರು. ಅಲ್ಲಿ ರಾಮ ಲಕ್ಷ್ಮಣರಿಬ್ಬರೂ ಅತ್ತಿತ್ತ ಕದಲಲಾರದೆ ನಿಶ್ಚೇಷ್ಟರಾಗಿ ನಡುನಡುವೆ ಮೆಲ್ಲಗೆ ಶ್ವಾಸವನ್ನು ಬಿಡುತ್ತಲೂ, ನಡುನಡುವೆ ಮೆಲ್ಲಗೆ ಕೈಕಾಲುಗಳನ್ನಾಡಿಸುತ್ತಲೂ, ರಕ್ತದಿಂದ ತೊಯ್ದ ಸರ್ವಾವಯವಗಳುಳ್ಳವರಾಗಿದ್ದರು. ಅವರ ಸರ್ವಾಂಗಗಳಲ್ಲಿಯೂ ಬಾಣಸಮೂಹವು ನಾಟಿದ್ದುವು. ಒಮ್ಮೊಮ್ಮೆ ಸರ್ಪದಂತೆ ಉದ್ದವಾಗಿ ನಿಟ್ಟುಸಿರನ್ನು ಬಿಡುತ್ತಿದ್ದರು ಅವರ ವೀರ್ಯವು ಕ್ರಮಕ್ರಮವಾಗಿ ಕಮ್ಮಿಯಾಗುತ್ತಿದ್ದಿತು. ಸರ್ವಾಂಗಗಳೂ ರಕ್ತದಿಂದ ತೊಯ್ದು ಕೆಂಪಾಗಿದ್ದುದರಿಂದ, ನೆಲದ ಮೇಲೆ ಮಲಗಿಸಿಡಲ್ಪಟ್ಟ ಸುವರ್ಣ ಧ್ವಜಗಳಂತೆ ಶರತಲ್ಪದಲ್ಲಿ ಮಲಗಿದ್ದರು. ಆ ಅಣ್ಣತಮ್ಮಂದಿರಿಬ್ಬರ ಸುತ್ತಲೂ, ವಾನರಯೂಥಪತಿಗಳೆಲ್ಲರೂ ಗುಂಪಾಗಿ ನಿಂತು ಕಣ್ಣೀರುಬಿಟ್ಟು ದುಃಖಿಸುತ್ತಿದ್ದರು. ಬಾಣಸಮೂಹಗಳಿಂದ ಮುಚ್ಚಿದ ಮೈ ಉಳ್ಳವರಾಗಿ ಮಲಗಿದ್ದ ಆ ರಘುಪುಂಗವರಿಬ್ಬರನ್ನೂ ನೋಡಿ, ವಿಭೀಷಣಸಹಿತವಾಗಿ ಸಮಸ್ತ ವಾನರ ಸೈನ್ಯವೂ ಸಂಕಟದಿಂದ ತತ್ತಳಿಸುತ್ತಿತ್ತು. ಅಲ್ಲಿದ್ದ ವಾನರರು ಒಮ್ಮೆ ಮುಖವೆನ್ನೆತ್ತಿ ಅಂತರಿಕ್ಷವನ್ನು ನೋಡುವರು.ಎಷ್ಟು ನೋಡಿದರೇನು? ಆ ಯುದ್ಧರಂಗದಲ್ಲಿ ಮಾಯೆಯಿಂದ ಕಣ್ಮರೆಯಾಗಿದ್ದ ಇಂದ್ರಜಿತ್ತನ್ನು ಮಾತ್ರ ಕಾಣಲಿಲ್ಲ. ವಿಭೀಷಣನೊಬ್ಬನು ಮಾತ್ರ ಇಂದ್ರಜಿತ್ತಿನಂತೆಯೇ ಮಾಯೆಯಲ್ಲಿ ನಿಪುಣನಾದುದರಿಂದ, ತಾನೂ ಮಾಯೆಯನ್ನವಲಂಬಿಸಿ ನಾಲ್ಕು ಕಡೆಗಳಲ್ಲಿಯೂ ನೋಡುತ್ತ ಕೊನೆಗೆ ಮಾಯೆಯಿಂದ ಬೇರೆಯವರ ಕಣ್ಣಿಗೆ ಕಾಣದೆ ನಿಂತ ಇಂದ್ರಜಿತುವನ್ನು ಕಂಡನು. ವೀರ್ಯಕರ್ಮಗಳಲ್ಲಿ ಎಣೆಯಿಲ್ಲದವನಾಗಿಯೂ ಯುದ್ಧದಲ್ಲಿ ಇದಿರಿಲ್ಲದವನಾಗಿಯೂ, ವರದಾನ ಬಲದಿಂದ ಬೇರೆಯವರಿಗೆ ಅದೃಶ್ಯನಾಗಿಯೂ, ತೇಜಸ್ಸಿನಿಂದಲೂ, ಯಶಸ್ಸಿನಿಂದಲೂ, ಪರಾಕ್ರಮದಿಂದಲೂ ಕೊಬ್ಬಿದವನಾಗಿಯೂ ಇದ್ದ ಆ ಇಂದ್ರಜಿತುವು ವಾನರರ ಕಣ್ಣಿಗೆ ಗೋಚರಿಸದಿದ್ದರೂ ವಿಭೀಷಣನಿಗೆ ಸ್ಪಷ್ಟವಾಗಿ ಗೋಚರಿಸಿದನು. ಇಷ್ಟರಲ್ಲಿ ಇಂದ್ರಜಿತುವು ತನ್ನ ನಾಗಾಸ್ತ್ರದ ಮಹಿಮೆಯನ್ನೂ, ಅತ್ತಲಾಗಿ

ರಾಮಲಕ್ಷ್ಮಣರು ಗಾಯಗಳಿಂದ ನೊಂದು ಮಲಗಿರುವುದನ್ನೂ ನೋಡಿ, ಮಿತಿ ಮೀರಿದ ಸಂತೋಷದಿಂದುಬ್ಬುತ್ತ, ತನ್ನ ಕಡೆಯವರನ್ನು ಪ್ರೋತ್ಸಾಹಪಡಿಸುವುದಕ್ಕಾಗಿ ಅವರನ್ನು ಕುರಿತು "ಎಲೈ ವೀರರೆ, ಅದೋ! ನೋಡಿರಿ, ಯಾರು ಖರ ದೂಷಣಾದಿಗಳನ್ನು ಕೊಂದ ಮಹಾ ಬಲಾಢ್ಯರೆಂದು ಪ್ರಸಿದ್ಧಿ ಹೊಂದಿದ್ದರೋ, ಆ ರಾಮಲಕ್ಷ್ಮಣರೆಂಬ ಸಹೋದರರು ನನ್ನ ಅಸ್ತ್ರಗಳಿಂದ ನೊಂದು ನಿಶ್ಚೇಷ್ಟರಾಗಿ ಮಲಗಿರುವುದನ್ನು ನೋಡಿರಿ! ದೇವತೆಗಳಾಗಲಿ, ಅಸುರರಾಗಲಿ, ಋಷಿಸಮೂಹಗಳಾಗಲಿ ಎಲ್ಲರೂ ಒಂದಾಗಿ ಸೇರಿ ಬಂದರೂ ಇವರನ್ನು ಈ ನನ್ನ ಪಾಶಗಳ ಕಟ್ಟಿನಿಂದ ಬಿಡಿಸುವುದು ಸಾಧ್ಯವಲ್ಲ. ಯಾರ ಪೌರುಷಕ್ಕಾಗಿ ಭಯಪಟ್ಟು ನಮ್ಮ ತಂದೆಯು ಯಾವಾಗಲೂ ಚಿಂತೆಯಿಂದ ಕೊರಗುತ್ತ, ರಾತ್ರಿಕಾಲದ ಮೂರು ಜಾವಗಳಲ್ಲಿ ಒಂದು ಜಾವದ ಕಾಲವಾದರೂ, ತನ್ನ ದೇಹವನ್ನು ಹಾಸಿಗೆಯ ಮೇಲಿಡದೆ, ಆ ರಾತ್ರಿಕಾಲವನ್ನೆಲ್ಲಾ ಕೇವಲ ಜಾಗರಣೆಯಿಂದಲೇ ಕಳೆಯುತ್ತಿರುವನೋ, ಮತ್ತು ಯಾವನ ನಿಮಿತ್ತವಾಗಿ ಲಂಕೆಯ ಜನವೆಲ್ಲವೂ ವರ್ಷಾಕಾಲದಲ್ಲಿ ನದೀಜಲವು ಕರಗುವಂತೆ ವ್ಯಗ್ರಮನಸ್ಸುಳ್ಳವರಾಗಿದ್ದರೋ, ಯಾವನು ನಮ್ಮೆಲ್ಲರನ್ನೂ ನಿರ್ಮೂಲವಾಗಿ ನಾಶಮಾಡಬೇಕೆಂಬ ದುರುದ್ದೇಶದಿಂದ ಪ್ರಯತ್ನಮಾಡಿ ಇಲ್ಲಿಗೆ ಬಂದನೋ, ಅಂತಹ ರಾಮನನ್ನು, ಇದೋ ನಾನು ಇಲ್ಲಿ ಕೊಂದು ಕೆಡಹಿರುವೆನು. ಈ ರಾಮನೂ, ಈ ಲಕ್ಷ್ಮಣನೂ, ಈ ಸಕಲ ವಾನರರೂ ಸೇತುಬಂಧಾದಿ ಕಾರ್ಯಗಳಿಂದ ತೋರಿಸಿದ ಪರಾಕ್ರಮಗಳೆಲ್ಲವೂ ಶರತ್ಕಾಲದ ಮೇಘಗಳಂತೆ ನಿಷ್ಫಲಗಳಾಗಿ ಹೋದವು"ಎಂದನು. ಹೀಗೆ ರಾವಣ ಪುತ್ರನಾದ ಇಂದ್ರಜಿತು ತನ್ನನ್ನು ಸುತ್ತಿನಿಂತಿದ್ದ ಸಮಸ್ತ ರಾಕ್ಷಸರಿಗೂ ಈ ಮಾತುಗಳನ್ನಾಡಿ, ತಿರುಗಿ ತನ್ನ ಬಾಣಪ್ರಯೋಗಕ್ಕೆ ತೊಡಗಿ, ಈ ರಾಮಲಕ್ಷ್ಮಣರನ್ನು ಸುತ್ತಿನಿಂತಿದ್ದ ಸುಗ್ರೀವಾದಿ ವಾನರಯೂಥಪತಿಗಳ ಮೇಲೆ ಎಡೆಬಿಡದೆ ಬಾಣಗಳನ್ನು ಬಿಡುತ್ತಿದ್ದನು. ನೀಲನನ್ನು ಒಂಭತ್ತು ಬಾಣಗಳಿಂದ ಹೊಡೆದನು. ಮೈಂದದ್ವಿವಿದರಿಬ್ಬರಮೇಲೂ ಮೂರು ಮೂರು ಬಾಣಗಳನ್ನು ಪ್ರಯೋಗಿಸಿದನು. ಜಾಂಬವಂತನ ಎದೆಗೆ ಗುರಿಯಿಟ್ಟು ಒಂದು ಬಾಣವನ್ನು ಬಿಟ್ಟನು. ಹನುಮಂತನ ಮೇಲೆ ಹತ್ತು ಬಾಣಗಳನ್ನು ಪ್ರಯೋಗಿಸಿದನು. ಎಣೆಯಿಲ್ಲದ ತೇಜಸ್ಸುಳ್ಳ ಗವಾಕ್ಷ ಶರಭರೆಂಬ ವಾನರರಿಬ್ಬರನ್ನೂ ಎರಡೆರಡು ಬಾಣಗಳಿಂದ ಹೊಡೆದನು. ಗೋಲಾಂಗೂಲಾಧಿಪತಿಯಾದ ಗವಾಕ್ಷನ ಮೇಲೆ ಮತ್ತೊಮ್ಮೆ ಅನೇಕ ಬಾಣಗಳನ್ನು ಪ್ರಯೋಗಿಸಿದನು. ಹಾಗೆಯೇ

ಅಂಗದನ ಮೇಲೂ ಅಸಂಖ್ಯಾತಗಳಾದ ಬಾಣಗಳನ್ನು ಬಿಟ್ಟನು. ಬಲಾಢ್ಯನಾಗಿಯೂ ಮಹಾಧೈರ್ಯಶಾಲಿಯಾಗಿಯೂ ಇದ್ದ ಆ ಇಂದ್ರಜಿತುವು, ಹೀಗೆ ಆ ರಾತ್ರಿಯಲ್ಲಿ ಅಲ್ಲಿದ್ದ ಸಮಸ್ತ ವಾನರರನ್ನೂ, ಅಗ್ನಿಜ್ವಾಲೆಗೆ ಸಮಾನಗಳಾದ ತನ್ನ ಬಾಣಗಳಿಂದ ತಡೆದು, ಸಂತೋಷದಿಂದ ಸಿಂಹನಾದವನ್ನು ಮಾಡಿದನು. ಹೀಗೆ ಮಹಾಬಾಹುವಾದ ಇಂದ್ರಜಿತುವು ಸಮಸ್ತ ವಾನರರನ್ನೂ ತನ್ನ ಬಾಣ ಸಮೂಹಗಳಿಂದ ಪ್ರಹರಿಸಿ ಬಾಯಿಮಾತಿನಿಂದಲೂ ಅವರನ್ನು ಹೆದರಿಸುತ್ತ, ಅಟ್ಟಹಾಸದಿಂದ ಪಕಪಕನೆ ನಕ್ಕು ತಿರುಗಿ ತನ್ನ ಕಡೆಯ ರಾಕ್ಷಸರನ್ನು ನೋಡಿ, "ಎಲೆ ರಾಕ್ಷಸರೆ, ಇಲ್ಲಿನ ಸೇನಾಮುಖದಲ್ಲಿ ಸಮಸ್ತ ವಾನರ ಸೈನ್ಯವೂ ನೋಡುತ್ತಿರುವಾಗಲೇ, ಆ ಅಣ್ಣತಮ್ಮಂದಿರಾದ ರಾಮಲಕ್ಷ್ಮಣರಿಬ್ಬರನ್ನೂ ಭಯಂಕರಗಳಾದ ನನ್ನ ಬಾಣಪಾಶಗಳಿಂದ ಕಟ್ಟಿ ಹಾಕಿರುವೆನು. ನನ್ನ ಸರ್ಪಾಸ್ತ್ರಗಳಿಂದ ಬದ್ಧರಾಗಿ ಆ ಸಹೋದರರಿಬ್ಬರೂ ಒಂದಾಗಿ ಮಲಗಿರುವುದನ್ನು ಚೆನ್ನಾಗಿ ನೋಡಿರಿ" ಎಂದನು. ಈ ಮಾತನ್ನು ಕೇಳಿದೊಡನೆ ಕಪಟಯುದ್ಧದಲ್ಲಿ ನಿಪುಣರಾದ ಆ ರಕ್ಕಸರೆಲ್ಲರೂ ಇಂದ್ರಜಿತು ನಡೆಸಿದ ವೀರಕಾರ್ಯಕ್ಕಾಗಿ ಬಹಳ ಸಂತೋಷಗೊಂಡು, ಆಶ್ಚರ್ಯದಿಂದ ಸ್ತಬ್ಧರಾದರು. ಮೇಘದಂತೆ ಮಹಾಕಾಯವುಳ್ಳ ಆ ರಕ್ಕಸರೆಲ್ಲರಿಗೂ ರಾಮನು ಹತನಾದನೆಂದೇ ನಿಶ್ಚಯವು ಹುಟ್ಟಿತು. ಮಹಾ ಧ್ವನಿಯುಂಟಾಗುವಂತೆ ಎಲ್ಲರೂ ಸಿಂಹನಾದವನ್ನು ಮಾಡುತ್ತಿದ್ದರು. ಒಬ್ಬೊಬ್ಬರೂ ಇಂದ್ರಜಿತ್ತನ್ನು ಕೊಂಡಾಡುತ್ತಿದ್ದರು. ಆಗ ಇಂದ್ರಜಿತ್ತೂ ಕೂಡ, ರಾಮಲಕ್ಷ್ಮಣರಿಬ್ಬರೂ ಉಸಿರಾಡದೆ ನಿಶ್ಚೇಷ್ಟರಾಗಿ ನೆಲದಮೇಲೆ ಬಿದ್ದಿರುವುದನ್ನು ನೋಡಿ, ಅವರಿಬ್ಬರೂ ಸತ್ತರೆಂದೇ ನಿಶ್ಚಯಿಸಿಕೊಂಡನು. ಅವನ ಮನಸ್ಸಿಗೆ ಮಿತಿಮೀರಿದ ಸಂತೋಷವೂ ಹುಟ್ಟಿತು. ತನ್ನ ಕಡೆಯವರನ್ನು ಮೇಲೆ ಮೇಲೆ ಪ್ರೋತ್ಸಾಹಿಸುತ್ತಾ, ಆ ಯುದ್ಧಭೂಮಿಯನ್ನು ಬಿಟ್ಟು, ಆಗಲೇ ಹಿಂತಿರುಗಿ ಲಂಕಾಪುರಿಯನ್ನು ಪ್ರವೇಶಿಸಿದನು. ಇತ್ತಲಾಗಿ ರಾಮಲಕ್ಷ್ಮಣರ ಸರ್ವಾವಯವಗಳೂ ಬಾಣಮಯಗಳಾಗಿ ಕೈಕಾಲು ಮೊದಲಾದ ಅಂಗಗಳಾಗಲಿ, ಬೆರಳು ಮೊದಲಾದ ಉಪಾಂಗಗಳಾಗಲೀ ಯಾವುದೊಂದೂ ಹೊರಗೆ ಕಾಣದೆ ಶಸ್ತ್ರಸಮೂಹಗಳಿಂದ ಮುಚ್ಚಿಹೋದುದನ್ನು ನೋಡಿ, ಸುಗ್ರೀವನ ಮನಸ್ಸಿನಲ್ಲಿ ಮಹತ್ತಾದ ಭಯವು ಹುಟ್ಟಿತು. ದುಃಖದಿಂದ ಆತನ ಕಣ್ಣುಗಳಲ್ಲಿ ನೀರು ತುಳುಕುತ್ತಿತ್ತು. ಅವನ ಮುಖವು ಕುಂದಿತು. ಹೀಗೆ ಅತಿ ದೈನ್ಯದಿಂದ ನಿಂತಿರುವ ಸುಗ್ರೀವನನ್ನು ನೋಡಿ ವಿಭೀಷಣನು ಮುಂದೆ ಬಂದು ಅವನನ್ನು ಸಮಾಧಾನಪಡಿಸುತ್ತಾ, "ಸುಗ್ರೀವಾ

ಭಯಪಡಬೇಡ! ನಿನ್ನ ದುಃಖವನ್ನು ಬಿಡು. ಧೈರ್ಯದಿಂದಿರು. ಕಣ್ಣೀರನ್ನು ತಡೆದಿಡು. ಯುದ್ಧದ ಕ್ರಮಗಳೇ ಹೀಗಲ್ಲವೆ? ಯುದ್ಧದಲ್ಲಿ ಯಾವಾಗಲೂ ಜಯವೇ ಉಂಟಾಗುವುದೆಂಬ ನಿಶ್ಚಯವಿಲ್ಲವಷ್ಟೆ? ಎಲೈ ಕಪಿವೀರನೆ! ನಮಗೆ ಭಾಗ್ಯಶೇಷವಿದ್ದಪಕ್ಷದಲ್ಲಿ ಮಹಾತ್ಮರಾಗಿಯೂ, ಮಹಾಬಲಾಢ್ಯರಾಗಿಯೂ ಇರುವ ಈ ಸಹೋದರರಿಬ್ಬರೂ ಶೀಘ್ರದಲ್ಲಿಯೇ ಚೇತರಿಸಿಕೊಳ್ಳಬಹುದಲ್ಲವೆ? ನೀನು ಧೈರ್ಯವನ್ನು ಬಿಡಬೇಡ. ನಾನೂ ನನ್ನಣ್ಣನನ್ನು ಬಿಟ್ಟು ಈ ರಾಮನನ್ನೇ ನಂಬಿ ಬಂದವನಲ್ಲವೇ? ಈಗ ಬೇರೆ ದಿಕ್ಕಿಲ್ಲದೆ ಅನಾಥನಾಗಿರುವ ನನಗೂ ನೀನೇ ಧೈರ್ಯವನ್ನು ಹೇಳಬೇಕು. ಸುಗ್ರೀವಾ! ಸತ್ಯವನ್ನೂ ಧರ್ಮವನ್ನೂ ದೃಢವಾಗಿ ಅವಲಂಬಿಸಿರುವವರಿಗೆ ಎಂದಿಗೂ ಅಪಮೃತ್ಯುಭಯವುಂಟಾಗದು" ಎಂದನು. ವಿಭೀಷಣನು ಹೀಗೆಂದು ಹೇಳಿ, ಅದುವರೆಗೆ ಸುಗ್ರೀವನು ಕಣ್ಣೀರನ್ನು ಸುರಿಸಿದ ಅಶ್ಲೀಲವನ್ನು ನಿವಾರಿಸುವುದಕ್ಕಾಗಿ ಕೈಯಿಂದ ನೀರನ್ನು ತೆಗೆದುಕೊಂಡು, ಸುಗ್ರೀವನ ಕಣ್ಣುಗಳನ್ನೊರಸಿದನು. ಆಮೇಲೆ ಧರ್ಮಾತ್ಮನಾದ ಆ ವಿಭೀಷಣನು, ಸುಗ್ರೀವನಿಗೆ ರಾಕ್ಷಸರ ಮಾಯೆಯನ್ನು ಚೆನ್ನಾಗಿ ತೋರಿಸಿ, ಧೈರ್ಯವನ್ನುಂಟುಮಾಡುವುದಕ್ಕಾಗಿ ತಿರುಗಿ ಮತ್ತಷ್ಟು ನೀರನ್ನು ಕೈಗೆ ತೆಗೆದುಕೊಂಡು, ಮಾಯೆಯಿಂದ ಉಂಟಾದ ಮೋಹವನ್ನು ನಿವಾರಿಸತಕ್ಕ ವಿದ್ಯೆಯಿಂದ ಆ ನೀರನ್ನಭಿಮಂತ್ರಿಸಿ, ಆಮೇಲೆ ಆ ನೀರಿನಿಂದ ಸುಗ್ರೀವನ ಕಣ್ಣುಗಳನ್ನೊರಸಿದನು. ಹೀಗೆ ಅಮಂತ್ರಿಸಿದ ನೀರಿನಿಂದ ಸುಗ್ರೀವನ ಕಣ್ಣುಗಳನ್ನು ತೊಳೆದು, ಕಾಲೋಚಿತವಾದ ಮಾತಿನಿಂದ ಆತನನ್ನು ಕುರಿತು, "ಎಲೈ ವಾನರರಾಜೇಂದ್ರನೆ, ಅಧೈರ್ಯಪಡುವುದಕ್ಕೆ ಇದು ಕಾಲವಲ್ಲ. ಒಂದುವೇಳೆ ನಿನಗೆ ರಾಮಲಕ್ಷ್ಮಣರಲ್ಲಿರುವ ಮಿತಿಮೀರಿದ ಸ್ನೇಹವು ಹೀಗೆ ಮಾಡಿರಬಹುದು. ಅಂತಹ ಅತಿ ಸ್ನೇಹಕ್ಕೂ ಇದು ಕಾಲವಿಲ್ಲ. ಇಂತಹ ಕಾಲದಲ್ಲಿ ಅದೂಕೂಡ ಮರಣಕ್ಕೆ ಕಾರಣವಾಗುವುದು. ಆದುದರಿಂದ ಸಮಸ್ತ ಕಾರ್ಯಗಳನ್ನೂ ಕೆಡಿಸತಕ್ಕ ಈ ಅಧೈರ್ಯವನ್ನು ಬಿಟ್ಟು, ರಾಮನನ್ನು ಮುಂದಿಟ್ಟುಕೊಂಡು ಬಂದಿರುವ ಈ ಸಮಸ್ತ ವಾನರಸೈನ್ಯಗಳಿಗೂ ಮುಂದೆ ಹಿತವಾವುದೋ ಅದನ್ನಾಲೋಚಿಸು. ಹಾಗಿಲ್ಲವೇ ರಾಮನು ಮೂರ್ಛೆತಿಳಿದು ಮೇಲಕ್ಕೆ ಏಳುವವರೆಗೆ ಅವನನ್ನು ರಕ್ಷಿಸುತ್ತಿದ್ದು, ಕಕುತ್ಸ್ಥ ಕುಲತಿಲಕರಾದ ಈ ರಾಮಲಕ್ಷ್ಮಣರಿಬ್ಬರೂ ಮೂರ್ಛೆತಿಳಿದೆದ್ದೊಡನೆಯೇ ನಮ್ಮ ಭಯವನ್ನೆಲ್ಲಾ ನೀಗಿಸುವರು. ಹೀಗೆ ನಿಶ್ಚೇಷ್ಟರಾಗಿ ಮಲಗಿರುವವರು ತಿರುಗಿ ಹೇಗೆ ಚೇತರಿಸಿಕೊಳ್ಳಬಲ್ಲರೆಂದು ಕೇಳು

ವೆಯ ? ಸುಗ್ರೀವಾ ! ಈ ಬಂಧನದಿಂದ ರಾಮನಿಗೇನೂ ಆಗಲಾರದು. ಅವನು ಇದರಿಂದ ಮೃತಿಹೊಂದುವನೆಂಬ ಶಂಕೆಯನ್ನು ಬಿಟ್ಟುಬಿಡು. ಆ ರಾಮನ ಮುಖ ವನ್ನು ನೋಡಿದೆಯಾ ? ಅವನ ಮುಖದ ಕಳೆಯು ಇನ್ನೂ ಸ್ವಲ್ಪವಾದರೂ ಕುಂದಿಲ್ಲವು. ಸಾಯುವವರ ಮುಖದಲ್ಲಿ ಎಂದಿಗೂ ಈ ವಿಧವಾದ ಕಳೆಯಿರದು. ಆದುದರಿಂದ, ಎಲೈ ವಾನರೇಂದ್ರನೆ! ನಿನ್ನ ಮನಸ್ಸನ್ನು ಸಮಾಧಾನದಿಂದಿರಿಸು. ನಿನ್ನ ಕಡೆಯ ಸೈನ್ಯಕ್ಕೂ ಸಮಾಧಾನವನ್ನು ಹೇಳು ನಾನು ಮುಂದೆ ನಡೆಸಬೇಕಾದ ಕೆಲವು ಕಾರ್ಯಗಳನ್ನು ಕ್ರಮಪಡಿಸಿ ಬರುವವರೆಗೂ ನೀನು ನಿನ್ನ ಮನಸ್ಸನ್ನು ತಡೆದಿಡು. ಕಾರ್ಯಗಳನ್ನು ಕ್ರಮಪಡಿಸುವುದೇನೆಂದು ಕೇಳುವೆಯಾ? ಎಲೆ ವಾನರೇಂದ್ರನೆ! ಇದೋ ನೋಡು ! ಇತ್ತಲಾಗಿ ನಿನ್ನ ಕಡೆಯ ಕೆಲವು ವಾನರರು ನಟ್ಟ ಕಣ್ಣುಗಳಿಂದ ನನ್ನನ್ನು ನೋಡುತ್ತ, ನಾನೇ ಇಂದ್ರಜಿತ್ತೆಂದು ಭ್ರಮಿಸಿ, ಭಯದಿಂದ ಪುಳಕಿತ ವಾದ ಮೈಯುಳ್ಳವರಾಗಿ ಇನ್ನೂ ನಾನಾವಿಧ ಭಯವಿಕಾರಗಳನ್ನು ತೋರಿಸುತ್ತ ಒಬ್ಬರಕಿವಿಯಲ್ಲೊಬ್ಬರು ಪಲಾಯನ ಮಂತ್ರವನ್ನುಪದೇಶಿಸುತ್ತಿರುವರು. ಆದುದರಿಂದ ಮೊದಲು ಅವರ ಭಯವನ್ನು ನೀಗಿಬರಬೇಕು. ಹಾಗಿಲ್ಲದಿದ್ದರೆ ಅವರು ನನ್ನನ್ನೇ ನೋಡಿ ಭಯಪಟ್ಟು ಓಡಿಹೋಗುವರು. ಮೊದಲು ಈ ವಾನರರಿಗೆ ಭಯವನ್ನು ನೀಗಿಸಿ ಪ್ರೋತ್ಸಾಹವನ್ನು ಹುಟ್ಟಿಸಿಬರಬೇಕು. ಮುಡಿದು ಬಾಡಿದ ಹೂಮಾಲೆಯನ್ನು ಕಿತ್ತೆಸೆಯುವಂತೆ, ಈ ವಾನರರೆಲ್ಲರೂ ತಮ್ಮ ಮನಸ್ಸಿನಲ್ಲಿ ಹುಟ್ಟಿರುವ ಭಯವನ್ನು ಬಿಟ್ಟೊಗೆಯುವಂತೆ ಪ್ರಯತ್ನಿಸುವೆನು" ಎಂದನು. ಹೀಗೇ ವಿಭೀಷಣನು ಸುಗ್ರೀವನನ್ನು ಸಮಾಧಾನಪಡಿಸಿ, ಅತ್ತಲಾಗಿ ಭಯದಿಂದ ಓಡಿ ಹೋಗುತ್ತಿದ್ದ ಆ ವಾನರಸೈನ್ಯಗಳನ್ನು ಮೃದುವಾಕ್ಯದಿಂದ ಕೂಗಿ ಕರೆಯುತ್ತ, "ಎಲೈ ಕಪಿವೀರರೆ, ನಾನು ಇಂದ್ರಜಿತ್ತುವಲ್ಲ, ವಿಭೀಷಣ" ಎಂದು ಅವರಿಗೆ ನಂಬಿಕೆಯನ್ನು ಹುಟ್ಟಿಸಿ ಪ್ರೋತ್ಸಾಹಿಸಿದನು. ಇಷ್ಟರಲ್ಲಿ ಅತ್ತಲಾಗಿ ಮಹಾ ಮಾಯಾವಿಯಾದ ಇಂದ್ರಜಿತ್ತು ತನ್ನ ಸಮಸ್ತ ಸೈನ್ಯಗಳಿಂದ ಪರಿವೃತನಾಗಿ ಲಂಕೆ ಯನ್ನು ಪ್ರವೇಶಿಸಿ ತಂದೆಯ ಬಳಿಗೆ ಹೋದನು. ಅಲ್ಲಿ ಸಭೆಯಲ್ಲಿದ್ದ ರಾವಣನಿಗೆ ಕೈಮುಗಿದು ನಮಸ್ಕರಿಸಿ, "ಜನಕಾ, ನಾನು ರಾಮಲಕ್ಷ್ಮಣರಿಬ್ಬರನ್ನೂ ವಧಿಸಿ ಬಂದೆನು" ಎಂಬೀ ಪ್ರಿಯವಾರ್ತೆಯನ್ನು ತಿಳಿಸಿದನು ರಾವಣನು ಆ ಸಮಸ್ತ ರಾಕ್ಷಸರ ಮಧ್ಯದಲ್ಲಿ ತನ್ನ ಶತ್ರುಗಳಾದ ರಾಮಲಕ್ಷ್ಮಣರು ಹತರಾದರೆಂದು ಕೇಳಿ ದೊಡನೆಯೇ ಸಂತೋಷವನ್ನು ತಡೆಯಲಾರದೆ, ಜಗ್ಗನೆ ಆಸನದಿಂದ ಮೇಲೆದ್ದು

ಮುಂದೆಬಂದು, ತನ್ನ ಮಗನಾದ ಇಂದ್ರಜಿತ್ತನ್ನು ತನ್ನ ಎರಡು ಕೈಗಳಿಂದಲೂ ಆಲಂಗಿಸಿಕೊಂಡು, ಉಕ್ಕಿಬರುವ ಸಂತೋಷದಿಂದ ಆತನ ತಲೆಯನ್ನಾಘ್ರಾಣಿಸಿ, ಎಲೈ ವತ್ಸನೆ! ನೀನು ಆ ರಾಮಲಕ್ಷ್ಮಣರನ್ನು ಕೊಂದ ಬಗೆಯೇನು? ಎಂದು ಕೇಳಿದನು. ಆಗ ಇಂದ್ರಜಿತು ತನ್ನ ತಂದೆಯಾದ ರಾವಣನ ಮುಂದೆ, ತಾನು ರಾತ್ರಿ ಯುದ್ಧದಲ್ಲಿ ರಾಮಲಕ್ಷ್ಮಣರನ್ನು ನಾಗಪಾಶದಿಂದ ಕಟ್ಟಿಕೆಡಹಿದ ಕ್ರಮಗಳೆಲ್ಲ ವನ್ನೂ ಇದ್ದುದಿದ್ದಂತೆ ಯಥಾಸ್ಥಿತವಾಗಿ ತಿಳಿಸಿದನು. ಆಗ ರಾವಣನು ಮಹಾರಥ ನಾದ ಇಂದ್ರಜಿತ್ತಿನ ಮಾತನ್ನು ಕೇಳಿ ಮಿತಿಮೀರಿದ ಸಂತೋಷದಿಂದ ಅದುವರೆಗೂ ತನಗೆ ರಾಮನ ವಿಷಯವಾಗಿ ಮನಸ್ಸಿನಲ್ಲಿದ್ದ ಭಯವನ್ನು ನಿಶ್ಶೇಷವಾಗಿ ಬಿಟ್ಟು ತನ್ನನ್ನು ಕೃತಾರ್ಥನನ್ನಾಗಿ ಭಾವಿಸಿಕೊಂಡು, ಬಾರಿಬಾರಿಗೂ ತನ್ನ ಮಗನ ಪರಾಕ್ರಮವನ್ನೆತ್ತಿ ಕೊಂಡಾಡುತ್ತಿದ್ದನು.

ಇಲ್ಲಿಗೆ ನಲವತ್ತಾರನೆಯ ಸರ್ಗವು.

ರಾವಣಾಜ್ಞೆಯಿಂದ ರಾಕ್ಷಸಸ್ತ್ರೀಯರು ಸೀತೆಯನ್ನು ಪುಷ್ಪಕವಿಮಾನದಲ್ಲಿ ಯುದ್ಧಭೂಮಿಗೆ ಕರೆತಂದು, ನಾಗಪಾಶಬದ್ಧರಾಗಿ ಬಿದ್ದಿದ್ದ ರಾಮಲಕ್ಷ್ಮಣರನ್ನು ತೋರಿಸಿದುದು.

ಹೀಗೆ ರಾವಣಪುತ್ರನಾದ ಇಂದ್ರಜಿತು ರಾಮಲಕ್ಷ್ಮಣರನ್ನು ಜಯಿಸಿದುದ ರಿಂದ ತಾನು ಕೃತಾರ್ಥನೆಂದು ಭಾವಿಸಿ,ಹಿಂತಿರುಗಿ ಲಂಕೆಗೆ ಹೋದಮೇಲೆ, ಇತ್ತಲಾಗಿ ಹನುಮಂತನೂ, ಅಂಗದನೂ, ನೀಲನೂ, ಸುಷೇಣನೂ, ಕುಮುದನೂ ನಲನೂ, ಗವಾಕ್ಷನೂ, ಗವಯನೂ, ಶರಭನೂ, ಜಾಂಬವಂತನೂ, ಗಂಧಮಾದನನೂ, ಋಷಭಸ್ಕಂಧನೂ, ರಂಭನೂ, ಶತಬಲಿ, ಪೃಥು ಮೊದಲಾದ ಅನೇಕ ವಾನರಸಿಂಹರು ದುಃಖಿತರಾಗಿ ರಾಮನ ಸುತ್ತಲೂ ಸೇರಿನಿಂತು ಅವರಿಬ್ಬರನ್ನೂ ರಕ್ಷಿಸುತ್ತಿದ್ದರು. ಇತರ ವಾನರರ ಯೂಥಪತಿಗಳು ತಮ್ಮ ತಮ್ಮ ಸೇನೆಗಳನ್ನು ವ್ಯೂಹಗಳಾಗಿ ಕಟ್ಟಿ, ನಾನಾ ಕಡೆಗಳಲ್ಲಿಯೂ ಎಚ್ಚರಿಕೆಯಿಂದ ನೋಡುತ್ತ, ದೊಡ್ಡ ದೊಡ್ಡ ಮರಗಳನ್ನು ಕೈಯಲ್ಲಿ ಹಿಡಿದು, ಸಮಸ್ತ ದಿಕ್ಕುಗಳನ್ನೂ ತಿರ್ಯಗೂರ್ಧ್ವ ಪ್ರದೇಶಗಳನ್ನೂ,ಕಣ್ಣಿಟ್ಟು ಕಾಯುತ್ತ ಒಂದು ಹುಲ್ಲು ಕದಲಿದರೂ ರಕ್ಕಸರು ಬಂದರೆಂದೇ ಶಂಕಿಸುತ್ತ ಬಹಳ ಜಾಗರೂಕತೆ ಯಿಂದಿದ್ದರು. ಇಷ್ಟರಲ್ಲಿ ಅತ್ತಲಾಗಿ ರಾವಣನು ಜಯಶೀಲನಾಗಿ ತನ್ನ ಬಳಿಗೆ ಬಂದ

ತನ್ನಮಗನಾದ ಇಂದ್ರಜಿತ್ತನ್ನು ಮನ್ನಿಸಿ ಕಳಿಸಿದಮೇಲೆ ಸೀತೆಗೆ ಕಾವಲಾಗಿದ್ದ ರಕ್ಕಸ ಸ್ತ್ರೀಯರನ್ನು ಕರೆತರುವಂತೆ ಆಜ್ಞೆಮಾಡಿದನು. ಈ ರಾಜಾಜ್ಞೆಯಂತೆ ಕೆಲವು ರಕ್ಕಸಿಯರು ತ್ರಿಜಟೆಯೊಡನೆ ಸೇರಿ ರಾವಣನ ಬಳಿಗೆ ಬಂದರು. ಆಗ ರಾವಣನು ಸಂತೋಷದಿಂದ ಆ ರಕ್ಕಸಿಯರನ್ನು ನೋಡಿ, "ಎಲೆ ರಾಕ್ಷಸಿಯರೇ, ನನ್ನ ಕುಮಾರನಾದ ಇಂದ್ರಜಿತುವಿನಿಂದ ಆ ರಾಮಲಕ್ಷ್ಮಣರಿಬ್ಬರೂ ಹತರಾದರೆಂಬ ವೃತ್ತಾಂತವನ್ನು ಈಗಲೇ ನೀವು ಸೀತೆಗೆ ತಿಳಿಸಬೇಕು. ಈ ಸಂಗತಿಯನ್ನು ತಿಳಿಸುವುದಲ್ಲದೆ, ಆಕೆಯನ್ನು ಪುಷ್ಪಕವಿಮಾನದಮೇಲೇರಿಸಿ ಕರೆತಂದು ರಣರಂಗದಲ್ಲಿ ಹತರಾಗಿ ಬಿದ್ದಿರುವ ರಾಮಲಕ್ಷ್ಮಣರನ್ನು ಆಕೆಗೆ ತೋರಿಸಿರಿ ! ಆ ಸೀತೆಯು ಇದುವರೆಗೂ ಯಾವನನ್ನು ನಂಬಿ ನನಗೆ ವಶಳಾಗದೆ ನನ್ನನ್ನು ತಿರಸ್ಕರಿಸುತ್ತಿದ್ದಳೋ, ಆ ರಾಮನು ತಮ್ಮನ ಸಹಿತನಾಗಿ ಯುದ್ಧಾಗ್ರದಲ್ಲಿಯೇ ಹತನಾಗಿ ಬಿದ್ದಿರುವನು. ಇನ್ನಾದರೂ ಆ ಸೀತೆಯು ತನ್ನ ಮನಸ್ಸಿನ ಶೋಕವನ್ನೂ,ವಿಚಾರವನ್ನೂ ಬಿಟ್ಟು ರಾಮನು ಬರುತ್ತಾನೆಂಬ ಆಶೋತ್ತರವನ್ನೂ ತೊರೆದು, ಸರ್ವಾಭರಣಾಲಂಕೃತೆಯಾಗಿ ನನ್ನನ್ನು ಸೇರಬಹುದು. ಯುದ್ಧದಲ್ಲಿ ರಾಮನು ಲಕ್ಷ್ಮಣನೊಡನೆ ಹತನಾಗಿ ಬಿದ್ದಿರುವುದನ್ನು ವಿಶಾಲಾಕ್ಷಿಯಾದ ಆ ಸೀತೆಯು ತನ್ನ ಕಣ್ಣಾರೆ ತಾನೇ ನೋಡಿದ ಪಕ್ಷದಲ್ಲಿ, ಆಕೆಗೆ ಇನ್ನುಮೇಲೆ ನನ್ನನ್ನು ಬಿಟ್ಟರೆ ಬೇರೆ ಗತಿಯಿಲ್ಲವೆಂದು ತಾನಾಗಿಯೇ ವ್ಯಕ್ತವಾಗುವುದು. ಇನ್ನುಮೇಲೆ ನಾನಾಗಿ ಪ್ರಾರ್ಥಿಸದಿದ್ದರೂ ಅವಳು ರಾಮನಲ್ಲಿ ನಟ್ಟಿರುವ ತನ್ನ ಮನಸ್ಸನ್ನು ತಾನೇ ಬದಲಿಸಿ ನನ್ನನ್ನು ಸೇರುವಳು" ಎಂದನು. ಆ ರಕ್ಕಸಿಯರೆಲ್ಲರೂ ದುರಾತ್ಮನಾದ ರಾವಣನ ಆಜ್ಞೆಯನ್ನು ಕೇಳಿ, 'ಅಪ್ಪಣೆ' ಎಂದು ಹೇಳಿ, ಪುಷ್ಪಕವಿಮಾನವಿದ್ದಸ್ಥಳಕ್ಕೆ ಹೋದರು. ರಾಜಾಜ್ಞೆಯಂತೆ ಅವರು ಆ ಪುಷ್ಪಕವಿಮಾನವನ್ನು ತೆಗೆದುಕೊಂಡು ಅಶೋಕವನದಲ್ಲಿ ಸೀತೆಯಿದ್ದ ಸ್ಥಳಕ್ಕೆ ಬಂದು, ಮೊದಲೇ ಪತಿಶೋಕದಿಂದ ಕೊರಗುತ್ತಿರುವ ಆ ಸೀತೆಯನ್ನು ಬಲಾತ್ಕಾರದಿಂದ ಆ ಪುಷ್ಪಕವಿಮಾನದಲ್ಲಿ ಕುಳ್ಳಿರಿಸಿಕೊಂಡರು. ತ್ರಿಜಟೆಯನ್ನೂ ಪುಷ್ಪಕದ ಮೇಲೇರಿಸಿಕೊಂಡು, ಸೀತೆಗೆ ರಾಮಲಕ್ಷ್ಮಣರನ್ನು ತೋರಿಸುವುದಕ್ಕಾಗಿ ರಣರಂಗಕ್ಕೆ ಕರೆತಂದರು. ಅತ್ತಲಾಗಿ ಲಂಕೆಯಲ್ಲಿ ರಾಕ್ಷಸೇಶ್ವರನಾದ ರಾವಣನು ಪರಮಸಂತೋಷದಿಂದ ತನ್ನ ಪಟ್ಟಣವೆಲ್ಲವನ್ನೂ ಅಲಂಕರಿಸುವಂತೆ ಆಜ್ಞೆಮಾಡಿದನು. ಬೀದಿಬೀದಿಗಳಲ್ಲಿಯೂ ಸಾಲಾಗಿ ಧ್ವಜಪತಾಕೆಗಳನ್ನೆತ್ತಿಸಿದನು. ಅಲ್ಲಿನ ಬೀದಿಬೀದಿಗಳಲ್ಲಿಯೂ, " ರಾಮಲಕ್ಷಣರಿಬ್ಬರೂ ಇಂದ್ರಜಿತ್ತಿನಿಂದ ಹತರಾದರು " ಎಂದು ಸಾರಿಸಿ ಡಂಗುರವನ್ನು ಹೊಡೆಸಿದನು. ಇತ್ತಲಾಗಿ ಸೀತೆಯು

ತ್ರಿಜಟೆಯೊಡನೆ ಪುಷ್ಪಕವಿಮಾನವನ್ನೇರಿ ಹೋಗಿ, ರಣರಂಗದಲ್ಲಿ ಅಲ್ಲಲ್ಲಿ ಸತ್ತುಬಿದ್ದಿದ್ದ ವಾನರ ಸೈನ್ಯಗಳೆಲ್ಲವನ್ನೂ ನೋಡುತ್ತ ಬಂದಳು. ಅಲ್ಲಲ್ಲಿ ರಕ್ಕಸರು ಮನಸ್ಸಿನಲ್ಲಿ ಮಹಾ ಸಂತೋಷದಿಂದುಬ್ಬಿ ಸಿಂಹನಾದ ಮಾಡುವುದನ್ನೂ ವಾನರರೆಲ್ಲರೂ ರಾಮ ಲಕ್ಷ್ಮಣರನ್ನು ಸುತ್ತಿನಿಂತು ದುಃಖಾರ್ತರಾಗಿರುವುದನ್ನೂ ನೋಡಿದಳು. ಕೊನೆಗೆ ಅಲ್ಲಿ ವೀರರಾದ ರಾಮಲಕ್ಷ್ಮಣರಿಬ್ಬರೂ ಬಾಣಪೀಡಿತರಾಗಿ ಪ್ರಜ್ಞೆಯಿಲ್ಲದೆ ಶರತಲ್ಪ ಗಳಲ್ಲಿ ಮಲಗಿರುವುದನ್ನೂ ಕಂಡಳು. ಅವರು ಧರಿಸಿದ್ದ ಕವಚಗಳು ಭಿನ್ನ ಭಿನ್ನವಾಗಿ ಹರಿದು, ಅವರು ಕೈಯಲ್ಲಿ ಹಿಡಿದಿದ್ದ ಬಿಲ್ಲು ಜಾರಿಬಿದ್ದು, ಅವರ ಸರ್ವಾವಯವ ಗಳೂ ಬಾಣಗಳಿಂದ ಭಿನ್ನವಾಗಿದ್ದವು. ಹೀಗೆ ಆ ಸಹೋದರರಿಬ್ಬರೂ ಬಾಣದ ಪೊದೆಗಳಂತೆ ನೆಲದಲ್ಲಿ ಬಿದ್ದಿರುವುದನ್ನು ನೋಡಿದಳು. ಕಮಲದಳದಂತೆ ಕಣ್ಣುಳ್ಳವ ರಾಗಿಯೂ, ಪರಸ್ಪರ ಪ್ರಿಯಸಹೋದರರಾಗಿಯೂ, ಪುರುಷಸಿಂಹರಾಗಿಯೂ ಇದ್ದ ಆ ರಾಮಲಕ್ಷ್ಮಣರಿಬ್ಬರೂ, ಅಗ್ನಿಪುತ್ರರಾದ ಸ್ಕಂಧವಿಶಾಖರಂತೆ ತೇಜಸ್ಸಿ ನಿಂದ ಜ್ವಲಿಸುತ್ತ ಬಾಣದ ಹಾಸಿಗೆಯಮೇಲೆ ಅಷ್ಟು ದುರವಸ್ಥೆಯನ್ನು ಹೊಂದಿ ಮಲಗಿರುವುದನ್ನು ಕಂಡೊಡನೆ ಸೀತೆಯ ಮನಸ್ಸು ಭೇದಿಸಿತು. ಸಂಕಟದಿಂದ ತತ್ತಳಿಸುತ್ತ ಬಹಳ ಹೊತ್ತಿನವರೆಗೆ ವಿಲಪಿಸಿದಳು. ನಿರ್ದೋಷವಾದ ಶುಭಲಕ್ಷಣ ಗಳಿಂದೊಪ್ಪುವ ಆ ಜನಕಪುತ್ರಿಯು, ತನ್ನ ಪತಿಯಾದ ರಾಮನೂ, ತನ್ನ ಮೈದ ನಾದ ಲಕ್ಷ್ಮಣನೂ ನೆಲದ ಮಣ್ಣಿನಲ್ಲಿ ಬಿದ್ದಿರುವುದನ್ನು ನೋಡಿ ರೋದಿಸುವುದಕ್ಕೆ ತೊಡಗಿದಳು. ಅವಳ ಕಣ್ಣುಗಳಲ್ಲಿ ಪಳಪಳನೆ ನೀರು ಸುರಿಯುತ್ತಿತ್ತು. ದೇವತೆ ಗಳಂತೆ ಮಹಾಪ್ರಭಾವ ಸಂಪನ್ನರಾದ ಆ ಸಹೋದರರನ್ನು ನೋಡಿ ಸೀತೆಯು ಅವರಿಬ್ಬರೂ ಹತರಾದರೆಂದೇ ಊಹಿಸಿಕೊಂಡು, ಪರಮದುಃಖಿತೆಯಾಗಿ, ವಿಲ ಪಿಸುವುದಕ್ಕೆ ತೊಡಗಿದಳು.

ಇಲ್ಲಿಗೆ ನಲವತ್ತೇಳನೆಯ ಸರ್ಗವು.

—ಸೀತೆಯು ರಾಮಲಕ್ಷ್ಮಣರ ದುರವಸ್ಥೆಯನ್ನು ನೋಡಿ ನಾನಾವಿಧವಾಗಿ ವಿಲಪಿಸಿದ್ದು—

ತನ್ನ ಪತಿಯಾದ ರಾಮನೂ, ಬಲಾಢ್ಯನಾದ ಲಕ್ಷ್ಮಣನೂ ಶಸ್ತ್ರಹತರಾಗಿ ಬಿದ್ದಿರುವುದನ್ನು ನೋಡಿ ಸೀತೆಯು ವ್ಯಸನದಿಂದ ಮೈಮರೆತು ಕೇಳುವವರಿಗೆ ಕರುಣೆ ಹುಟ್ಟುವಂತೆ ವಿಲಪಿಸುವಳು. ಆಹಾ ! ನನ್ನ ದೌರ್ಭಾಗ್ಯವೇ ! ಪೂರ್ವದಲ್ಲಿ

ಸಾಮುದ್ರಿಕ ಲಕ್ಷಣವನ್ನು ತಿಳಿದ ಯಾವ ಶಾಸ್ತ್ರಜ್ಞರು ನನ್ನನ್ನು ನೋಡಿ, "ಈಕೆಯು ಪುತ್ರವತಿಯಾಗುವಳೆಂದೂ ಇವಳಿಗೆ ವೈಧವ್ಯವಿಲ್ಲ" ವೆಂದೂ ಹೇಳಿದ್ದರೋ ಆ ಜ್ಞಾನಿಗಳೆಲ್ಲರೂ ಈಗ ರಾಮನು ಹತನಾದುದರಿಂದ ಸುಳ್ಳಾಡಿದಂತಾಯಿತು. ಮೊದಲು ಯಾರು ನನ್ನ ಪತಿಯಾದ ರಾಮನು ಅಶ್ವಮೇಧಾದಿಗಳನ್ನು ನಡೆಸ ತಕ್ಕವನೆಂದೂ, ಸತ್ರಗಳನ್ನು ನಡೆಸತಕ್ಕವನೆಂದೂ ನಿರ್ಧರಿಸಿ ಹೇಳಿದ್ದರೋ, ಆ ಜ್ಞಾನಿ ಗಳೆಲ್ಲರೂ ಈಗ ಅಸತ್ಯವಾದಿಗಳೆನಿಸಿಕೊಂಡರು. ಮೊದಲು ಜ್ಯೋತಿಷ್ಯಶಾಸ್ತ್ರ ವಿಶಾ ರದರಾದ ಯಾವ ಬ್ರಾಹ್ಮಣರು ನಾನು ಕಿವಿಯಾರೆ ಕೇಳುವಂತೆ, ನನ್ನಿದಿರಿಗೆ "ನೀನು ಮಾಂಗಲ್ಯವತಿ "ಯೆಂದು ಹೇಳಿದ್ದರೋ,ಆ ಜ್ಞಾನಿಗಳ ಮಾತೆಲ್ಲವೂ ಸುಳ್ಳೆನಿಸಿದುವು. ಯಾವ ಮಹಾತ್ಮರು ನನ್ನನ್ನು ನೋಡಿ. " ನೀನು ಮಹಾ ವೀರನಾದ ರಾಜನಿಗೆ ಪತ್ನಿಯೆಂದೂ, ಪರಮ ಭಾಗ್ಯವತಿಯೆಂದೂ ಹೇಳಿದ್ದರೋ, ಆ ಮಹಾನುಭಾವರ ವಚನವೆಲ್ಲವೂ ಈಗ ಅಸತ್ಯವೆನಿಸಿಕೊಂಡಿತು. ಇ ರ್ಹೋ! ಈಗಲೂ ಈ ನನ್ನ ಕಾಲು ಗಳಲ್ಲಿ ಪದ್ಮರೇಖೆಯು ಸ್ಪಷ್ಟವಾಗಿ ಕಾಣುತ್ತಿರುವುದು. ಇಂತಹ ಶುಭಲಕ್ಷಣ ಗಳುಳ್ಳ ಸ್ತ್ರೀಯರೆಲ್ಲರೂ ಚಕ್ರವರ್ತಿಯ ಮಹಿಷಿಯಾಗಿ ಪತಿಯೊಡನೆ ಸಾಮ್ರಾಜ್ಯ ದಲ್ಲಿ ಅಭಿಷಿಕ್ತೆಯಾಗುವರೆಂದು ನಾನು ಚೆನ್ನಾಗಿ ಕೇಳಿಬಲ್ಲೆ. ಇವೆಲ್ಲವೂ ನನ್ನಲ್ಲಿ ಮಾತ್ರ ನಿಷ್ಫಲಗಳಾದುದೇಕೆ ? ಯಾವ ದುರ್ಲಕ್ಷಣಗಳೂ ನನ್ನ ದೇಹದಲ್ಲಿ ಎಲ್ಲಿ ಹುಡುಕಿದರೂ ಕಾಣುವುದಿಲ್ಲ. ಆದುದರಿಂದ ನನ್ನಲ್ಲಿರುವ ಈ ಶುಭಲಕ್ಷಣಗಳೂ ಪ್ರಯೋಜನವಿಲ್ಲದವುಗಳೆಂದೇ ಎಣಿಸಬೇಕಾಯಿತಲ್ಲವೆ ? ಧ್ವಜ ಕುಲಿಶಾದಿ ಶುಭ ಲಕ್ಷಣಗಳೊಡನೆ ಸ್ತ್ರೀಯರ ದೇಹದಲ್ಲಿ ಕಾಣುವ ಪದ್ಮರೇಖೆಗಳು ತಮ್ಮ ಹೆಸರಿಗೆ ತಕ್ಕಂತೆ ಅವರ ದೇಹದಲ್ಲಿ ಪದ್ಮೆಯನ್ನೇ (ಭಾಗ್ಯಲಕ್ಷ್ಮಿಯನ್ನೇ) ನೆಲೆಗೊಳಿಸುವು ವೆಂದು ಲಕ್ಷಣಶಾಸ್ತ್ರಗಳೆಲ್ಲವೂ ಹೇಳುವುವು. ಈಗ ನನ್ನ ಪತಿಯು ಹತನಾದುದ ರಿಂದ ನನ್ನಲ್ಲಿ ಮಾತ್ರ ಆ ಶಾಸ್ತ್ರವಚನಗಳೂ ಅಸತ್ಯವೆನಿಸಿಕೊಂಡುವು. ನನ್ನಲ್ಲಿ ಯಾದರೂ ಸಾಮುದ್ರಿಕ ಶಾಸ್ತ್ರೋಕ್ತಗಳಾದ ಯಾವ ಲಕ್ಷಣಗಳಿಗೂ ಸ್ವಲ್ಪ ವಾದರೂ ನ್ಯೂನತೆಯಿಲ್ಲ. ನನ್ನ ತಲೆಕೂದಲುಗಳೆಲ್ಲವೂ ಸೂಕ್ಷ್ಮಗಳಾಗಿಯೂ, ಸಮವಾಗಿ ಒಂದೇ ಅಳತೆಯುಳ್ಳವುಗಳಾಗಿಯೂ ಕಪ್ಪಾಗಿಯೂ, ಇರುವುವು. ನನ್ನ ಹುಬ್ಬುಗಳೆರಡೂ ಒಂದಕ್ಕೊಂದು ಕೂಡಿರದೆ ಪ್ರತ್ಯೇಕವಾಗಿರುವುವು. ನನ್ನ ಮೊಳಕಾಲುಗಳೆರಡೂ ಸ್ವಲ್ಪವಾದರೂ ಕೂದಲಿಲ್ಲದೇ ದುಂಡಾಗಿರುವುವು. ನನ್ನ ಹಲ್ಲುಗಳೆಲ್ಲವೂ ದಟ್ಟವಾಗಿ ಒಂದಕ್ಕೊಂದು ಸೇರಿರುವುವೇ ಹೊರತು, ನಡುನಡುವೆ

ಸಂದುಬಿಟ್ಟು ವಿರಳವಾಗಿಲ್ಲ. ಕಣ್ಣುಗಳಿಗೆ ಸಮೀಪವಾದ ನನ್ನ ಹಣೆಯ ಪಾರ್ಶ್ವವೂ, ನನ್ನ ಕಣ್ಣುಗಳೂ, ನನ್ನ ಕೈಕಾಲುಗಳೂ, ನನ್ನ ಹಿಮ್ಮಡಿಗಳೂ ನನ್ನ ತೊಡೆಗಳೂ ಲಕ್ಷಣಾನುಸಾರವಾಗಿ ಉಬ್ಬಿರುವುವು, ನನ್ನ ಬೆರಳುಗಳೆಲ್ಲವೂ ದುಂಡಗಿರುವ ಉಗುರುಗಳಿಂದ ಕೂಡಿ, ನುಣುಪಾಗಿ, ಅವಯವಸನ್ನಿವೇಶಕ್ಕೆ ತಕ್ಕ ಸಮಪ್ರಮಾಣವುಳ್ಳವುಗಳಾಗಿರವುವು. ನನ್ನ ಸ್ತನಗಳೆರಡೂ ಒತ್ತಾಗಿ ಉಬ್ಬಿ ಬೆಳೆದು ತೊಟ್ಟುಗಳ ಕಡೆಗಳಲ್ಲಿ ಹಳ್ಳವಾಗಿರುವುವು. ನನ್ನ ನಾಭಿಯು ಸುತ್ತಲೂ ಉಬ್ಬಿ ನಡುವೆ ಹಳ್ಳವಾಗಿರುವುದು. ನನ್ನ ಪಕ್ಕೆಗಳೂ, ನನ್ನ ಎದೆಯೂ ಮಾಂಸ ತುಂಬಿ ಉಬ್ಬಿರುವುವು. ನನ್ನ ಮೈಬಣ್ಣವೂ ಚಿನ್ನದಂತೆ ಹೊಳೆಯುವುದು. ನನ್ನ ಮೈಕೂದಲುಗಳೆಲ್ಲವೂ ಬಹಳ ಮೃದುವಾಗಿರುವುವು. ನನ್ನ ಪಾದತಲಗಳೂ ನನ್ನ ಕಾಲ್ಬೆರಳೂ, ನೆಲದಲ್ಲಿ ಸಂದುಬಿಡದಂತೆ ಚೆನ್ನಾಗಿ ಊರಿನಿಲ್ಲುವುದರಿಂದ ಸಾಮುದ್ರಿಕ ಶಾಸ್ತ್ರಜ್ಞರೆಲ್ಲರೂ ನನ್ನನ್ನು ಶುಭಲಕ್ಷಣವುಳ್ಳವಳೆಂದೇ ಹೇಳುವರು. ನನ್ನ ಕೈಗಳೂ, ಕಾಲುಗಳೂ, ಪೂರ್ಣವಾದ ಯವರೇಖೆಯಿಂದ ಕೂಡಿ, ನಡುವೆ ಸಂದುಬಿಡದೆ ದಟ್ಟವಾಗಿ ಸೇರಿದ ಬೆರಳುಗಳಿಂದ ಶೋಭಿಸುತ್ತಿರುವುವು. ಕನ್ಯಾ ಲಕ್ಷಣವನ್ನು ತಿಳಿದ ಬ್ರಾಹ್ಮಣರು ನನ್ನನ್ನು ಯಾವಾಗಲೂ ಕಿರುನಗೆಯುಳ್ಳವ ಳೆಂದು ಹೇಳುವರು. ಜ್ಯೋತಿಷಸಿದ್ಧಾಂತದಲ್ಲಿ ನಿಪುಣರಾದ ವಿಪ್ರರೆಲ್ಲರೂ, ನನಗೆ ಪತಿಯೊಡನೆ ಸಾಮ್ರಾಜ್ಯ ಪಟ್ಟಾಭಿಷೇಕವಾಗುವುದೆಂದೂ ಸೂಚಿಸಿರುವರು. ಇವೆಲ್ಲವೂ ಈಗ ನನ್ನ ಭಾಗಕ್ಕೆ ಮಾತ್ರ ವ್ಯರ್ಥವಾಗಬೇಕೆ! ಸಹೋದರರಾದ ರಾಮ ಲಕ್ಷ್ಮಣರಿಬ್ಬರೂ, ಆ ಜನಸ್ಥಾನದಲ್ಲೆಲ್ಲಾ ನನ್ನನ್ನು ಹುಡುಕಿ, ಕೊನೆಗೆ ವೃತ್ತಾಂತ ವನ್ನು ತಿಳಿದುಕೊಂಡು, ನನ್ನನ್ನು ಬಿಡಿಸುವುದಕ್ಕಾಗಿ ಅಕ್ಷೋಭ್ಯವಾದ ಮಹಾ ಸಮುದ್ರವನ್ನೂ ದಾಟಿಬಂದು, ಗೋಷ್ಪದ ಮಾತ್ರದಂತಿರುವ ಇಂದ್ರಜಿತ್ತಿನ ಮಾಯೆ ಯಿಂದ ಹತರಾದರಲ್ಲಾ! ಅವರಿಬ್ಬರೂ, ವಾರುಣಾಸ್ತ್ರವನ್ನೂ, ಆಗ್ನೇಯಾಸ್ತ್ರ ವನ್ನೂ, ಐಂದ್ರಾಸ್ತ್ರವನ್ನೂ, ವಾಯುವ್ಯಾಸ್ತ್ರವನ್ನೂ, ಬ್ರಹ್ಮಶಿರೋನಾಮಕಾಸ್ತ್ರ ವನ್ನೂ ಪಡೆದವರಲ್ಲವೆ? ಆ ಅಸ್ತ್ರಗಳೆಲ್ಲವೂ ಈಗ ಏನಾದುವು? ಇಂದ್ರಜಿತು ಯುದ್ಧದಲ್ಲಿ ಮಾಯೆಯಿಂದ ಅದೃಶ್ಯನಾಗಿ ದೇವೇಂದ್ರಸಮಾನರಾಗಿಯೂ, ನನಗೆ ದಿಕ್ಕಾಗಿಯೂ ಇದ್ದ ಆ ಸಹೋದರರಿಬ್ಬರನ್ನೂ ಕಪಟಯುದ್ಧದಿಂದ ಕೊಂದನಲ್ಲವೆ? ಇನ್ನು ನನಗೆ ದಿಕ್ಕಾರು? ಯುದ್ಧದಲ್ಲಿ ರಾಮನ ಕಣ್ಣಿಗೆ ಬಿದ್ದ ವೈರಿಯು ಜೀವ ಸಹಿತ ಹಿಂತಿರುಗಿ ಹೋಗಲಾರನು. ಅಂತಹ ಮಹಾವೀರನಾದ ರಾಮನೂ ಕೂಡ

ತನ್ನ ತಮ್ಮನೊಡನೆ ಯುದ್ಧದಲ್ಲಿ ಹತನಾಗುವುದೆಂದರೇನು ? ಲೋಕದಲ್ಲಿ ಕಾಲಕ್ಕಿಂತಲೂ ಪ್ರಬಲವಾದುದು ಯಾವುದೊಂದೂ ಇಲ್ಲವು. ದೈವವನ್ನು ಗೆಲ್ಲ ಬೇಕೆಂದರೆ ಯಾರಿಗೂ ಎಷ್ಟು ಮಾತ್ರವೂ ಸಾಧ್ಯವಿಲ್ಲ. ಹಾ ! ಕಷ್ಟವೆ ! ಶೋಚ ನೀಯಾವಸ್ಥೆಯನ್ನು ಹೊಂದಿದ ಆ ನನ್ನ ಅತ್ತೆಯನ್ನು ನೆನೆಸಿಕೊಂಡಾಗ ನನಗುಂಟಾಗುವ ದುಃಖವು ರಾಮನನ್ನಾಗಲಿ, ಮಹಾಬಲಾಢ್ಯನಾದ ಲಕ್ಷ್ಮಣ ನನ್ನಾಗಲಿ, ನನ್ನ ಸ್ಥಿತಿಯನ್ನೇ ಆಗಲಿ, ನನ್ನ ತಾಯಿಯನ್ನೇ ಆಗಲೀ ನೆನಸಿ ಕೊಂಡರೂ ಅಷ್ಟು ವ್ಯಥೆಯನ್ನುಂಟುಮಾಡದು. ಆ ನನ್ನ ಅತ್ತೆಯಾದ ಕೌಸಲ್ಯೆಯು ಈಗಲೂ ಅಹೋರಾತ್ರವೂ ಮನಸ್ಸಿಗೆ ನೆಮ್ಮದಿಯಿಲ್ಲದೆ, ಈ ಹದಿನಾಲ್ಕು ವರ್ಷಗಳ ವನವಾಸ ವ್ರತವನ್ನು ಮುಗಿಸಿ, ತನ್ನ ಮುದ್ದು ಮಗನು ಸೀತಾಲಕ್ಷ್ಮಣರೊಡನೆ ಬಂದು ಯಾವಾಗ ತನ್ನ ಕಣ್ಣುಗಳಿಗೆ ಅತ್ಯಾನಂದವನ್ನು ಬೀರುವನೋ ಎಂದು ಎಡಬಿಡದೆ ಚಿಂತಿಸುತ್ತಿರುವಳಲ್ಲವೇ ? ಇನ್ನು ಆಕೆಯ ಗತಿಯೇನು ?" ಎಂದು ವಿಲಪಿಸಿದಳು. ಹೀಗೆ ಗೋಳಿಡುತ್ತಿದ್ದ ಸೀತೆಯನ್ನು ನೋಡಿ, ತ್ರಿಜಟೆಯೆಂಬ ರಾಕ್ಷಸಿಯು ಆಕೆಯನ್ನು ಸಮಾಧಾನಪಡಿಸುತ್ತ, "ಅಮ್ಮ ಸೀತೆ! ನೀನು ದುಃಖಿಸ ಬೇಡ. ಧೈರ್ಯದಿಂದಿರು. ಈ ಸಹೋದರರಿಬ್ಬರೂ ಬದುಕಿರುವರೆಂಬುದನ್ನು ಸೂಚಿಸು ವಂತೆ ನನಗೆ ಅನುಭವಸಿದ್ಧಗಳಾದ ಕೆಲವು ಕಾರಣಗಳು ಸ್ಪಷ್ಟವಾಗಿ ಗೋಚರಿಸು ತ್ತಿರುವುವು. ಅವುಗಳನ್ನು ಹೇಳುವೆನು ಕೇಳು. ನಿನ್ನ ಪತಿಯು ಹತನಾಗಿದ್ದ ಪಕ್ಷದಲ್ಲಿ ಈ ಯುದ್ಧರಂಗದಲ್ಲಿ ಅವನಕಡೆಯ ಯೋಧರ ಮುಖಗಳು ಹೀಗೆ ಕೋಪಾವೇಶ ದಿಂದ ಕೂಡಿದವುಗಳಾಗಿಯೂ, ಸಂತೋಷದಿಂದ ಪ್ರಸನ್ನಗಳಾಗಿಯೂ ಇರಲಾರವು ಮತ್ತು ಎಲೆ ಸೀತೆ ! ಈಗ ನಾವು ಏರಿಬಂದ ಈ ಪುಷ್ಪಕ ವಿಮಾನವು ದಿವ್ಯವಾದುದರಿಂದ ಈ ರಾಮಲಕ್ಷ್ಮಣರು ಈಗ ಪ್ರಾಣವನ್ನು ಬಿಟ್ಟಿದ್ದ ಪಕ್ಷದಲ್ಲಿ ಇದು ಪತಿಹೀನೆಯಾದ ನಿನ್ನನ್ನು ವಹಿಸಿಕೊಂಡಿರಲಾರದು. ಯುದ್ಧದಲ್ಲಿ ಪ್ರಧಾನ ವೀರರು ಹತರಾದ ಪಕ್ಷದಲ್ಲಿ, ಅವನ ಕಡೆಯ ಸೈನ್ಯಗಳೆಲ್ಲವೂ ಉತ್ಸಾಹ ಭಂಗವನ್ನು ಹೊಂದಿ, ಮುಂದಿನ ಪ್ರಯತ್ನವನ್ನೂ ಬಿಟ್ಟು ಜಲಮಧ್ಯದಲ್ಲಿ ನಾವಿಕ ನಿಲ್ಲದ ದೋಣಿಯಂತೆ, ಯುದ್ಧದಲ್ಲಿ ತಮ್ಮನ್ನು ನಡೆಸುವುದಕ್ಕೆ ತಕ್ಕ ನಿಯಾಮಕ ರಿಲ್ಲದುದಕ್ಕಾಗಿ ಹಿಂದುಮುಂದು ತೋರದೆ ತತ್ತಳಿಸುತ್ತಿದ್ದುವು. ಈಗ ಈ ವಾನರ ಸೇನೆಯ ಸ್ಥಿತಿಯು ಹಾಗಿಲ್ಲ. ಈ ಸೈನಿಕರು ಮನಸ್ಸಿನಲ್ಲಿ ಭಯ ಸಂಭ್ರಮ ಗಳೊಂದೂ ಇಲ್ಲದೆ, ತಮ್ಮ ಮಹೋತ್ಸಾಹವನ್ನೂ ಬಿಡದೆ, ಈಗ ನಾನು ಯಾರನ್ನು

ಬದುಕಿರುವರೆಂದು ಧೃಢವಾಗಿ ತಿಳಿಸುತ್ತಿರುವೆನೋ ಆ ರಾಮಲಕ್ಷ್ಮಣರಿಬ್ಬರನ್ನೂ ಸಂತೋಷದಿಂದಲೂ, ಎಚ್ಚರಿಕೆಯಿಂದಲೂ ರಕ್ಷಿಸುತ್ತಿರುವದು. ಹೀಗೆ ಸ್ಪಷ್ಟವಾಗಿ ತಿಳಿದುಬರುವ ಈ ಚಿಹ್ನೆಗಳಿಂದ, ಆ ಸಹೋದರರಿಬ್ಬರೂ ಬದುಕಿರುವರೆಂದು ನೀನು ದೃಢವಾಗಿ ನಂಬಬಹುದು. ನೀನು ಅವರನ್ನು ಪ್ರಾಣದೊಡನೆ ಮಲಗಿರುವಂತೆಯೇ ಚೆನ್ನಾಗಿ ಭಾವಿಸಿ ನೋಡು. ಎಲೆ ಸೀತೆ, ನಿನ್ನಲ್ಲಿರುವ ಸ್ನೇಹದಿಂದಲೇ ನಾನು ಇಷ್ಟು ದೂರದವರೆಗೆ ಹೇಳುತ್ತಿರುವೆನು. ಇದುವರೆಗೂ ಸುಳ್ಳೆಂಬುದು ನನ್ನ ಬಾಯಿಯಿಂದ ಹೊರಟುದಿಲ್ಲ. ಮುಂದೆಯೂ ಯಾವಾಗಲೂ ಹೊರಡುವ ಸಂಭವವಿಲ್ಲ. ನೀನು ನಿನ್ನ ದೃಢವಾದ ಪಾತಿವ್ರತ್ಯದಿಂದ ಸಮಸ್ತ ಜನಗಳ ಮನಸ್ಸಿಗೂ ಉಲ್ಲಾಸವನ್ನುಂಟುಮಾಡುವ ಸುಸ್ವಭಾವವುಳ್ಳವಳಾದುದರಿಂದಲೇ ನನಗೂ ನಿನ್ನಲ್ಲಿ ಮನಸ್ಸು ನಟ್ಟುಹೋಗಿರುವುದು.ಯುದ್ಧದಲ್ಲಿ ದೇವೇಂದ್ರನೊಡಗೂಡಿ, ದೇವಾಸುರರೇ ಬಂದರೂ ಈ ರಾಮಲಕ್ಷ್ಮಣರನ್ನು ಗೆಲ್ಲುವುದು ಸಾಧ್ಯವಿಲ್ಲ. ಈಗ ಇವರಿಬ್ಬರೂ ಬದುಕಿರುವುದಕ್ಕೆ ಸೂಚಕಗಳಾದ ಚಿಹ್ನೆಗಳು ಚೆನ್ನಾಗಿ ಕಾಣಬರುತ್ತಿರುವುವು. ಇವುಗಳನ್ನು ನೋಡಿಯೇ ನಾನು ನಿರ್ಧರವಾಗಿ ನಿನಗೆ ಹೇಳುತ್ತಿರುವೆನು. ಎಲೆ ಸೀತೆ! ಮತ್ತೊಂದು ಮುಖ್ಯಸೂಚನೆಯುಂಟು. ಅದನ್ನೂ ನೀನು ಚೆನ್ನಾಗಿ ಗಮನಿಸಿ ನೋಡು. ಇವರಿಬ್ಬರೂ ಮೂರ್ಛಿತರಾಗಿದ್ದರೂ, ಇವರ ಮುಖದ ಕಳೆಯು ಸ್ವಲ್ಪವಾದರೂ ಕುಂದದಿರುವುದು ನೋಡು. ಆಯುಸ್ಸು ತೀರಿ ಪ್ರಾಣವನ್ನು ಬಿಟ್ಟವರ ಮುಖವು, ಆ ಕ್ಷಣವೇ ಬಹಳ ವಿಕಾರವನ್ನು ಹೊಂದುವುದು. ಇವರ ಮುಖದಲ್ಲಿ ಅಂತಹ ವಿಕಾರವೇನೂ ಕಾಣುವುದಿಲ್ಲ. ಆದುದರಿಂದ ಎಲೆ ಸೀತೆ, ನೀನು ಈ ರಾಮಲಕ್ಷ್ಮಣರ ವಿಷಯವಾದ ನಿನ್ನ ದುಃಖವನ್ನು ಬಿಡು. ಅವರು ಹತರಾದರೆಂಬ ಭ್ರಾಂತಿಯನ್ನೂ ಬಿಡು. ಮನಸ್ಸಿನಲ್ಲಿ ಧೈರ್ಯವನ್ನು ಹೊಂದು! ಈ ಮಹಾತ್ಮರು ಬದುಕಿರುವುದೇನೂ ಅಶಕ್ಯವಲ್ಲ" ಎಂದಳು. ದೇವಕನ್ಯೆಯಂತಿದ್ದ ಆ ಸೀತೆಯು ತ್ರಿಜಟೆಯು ಹೇಳಿದ ಈ ಸಮಾಧಾನ ವಾಕ್ಯವನ್ನು ಕೇಳಿ, ಅವಳಿಗೆ ಕೈಮುಗಿಯುತ್ತ "ಅಮ್ಮ ತ್ರಿಜಟೆ! ನೀನು ಹೇಳಿದಂತೆಯೇ ಅವರು ಕ್ಷೇಮದಿಂದ ಬದುಕಿರಲಿ" ಎಂದಳು. ಆಗಲೇ ತ್ರಿಜಟೆಯು ಮನೋವೇಗವುಳ್ಳ ಆ ಪುಷ್ಪಕ ವಿಮಾನವನ್ನು ಹಿಂತಿರುಗಿಸಿ ದುಃಖಿತಳಾದ ಸೀತೆಯನ್ನು ಸಮಾಧಾನಪಡಿಸುತ್ತ, ಲಂಕಾಪುರಿಗೆ ಕರೆತಂದಳು. ಅಲ್ಲಿ ರಾಕ್ಷಸಸ್ತ್ರೀಯರು ಸೀತೆಯನ್ನೂ, ತ್ರಿಜಟೆಯನ್ನೂ ಪುಷ್ಪಕದಿಂದಿಳಿಸಿ ಅಶೋಕವನಕ್ಕೆ ಸೇರಿಸಿದರು. ಅನೇಕ ವೃಕ್ಷಸಮೂಹ

ಗಳಿಂದ ಕೂಡಿದುದಾಗಿಯೂ, ರಾವಣನಿಗೆ ಮುಖ್ಯವಿಹಾರೋದ್ಯಾನವಾಗಿಯೂ ಇದ್ದ ಅಶೋಕವನವನ್ನು ಪ್ರವೇಶಿಸಿದ ಮೇಲೆಯೂ ಸೀತೆಯು, ತಾನು ಆ ರಾಜಪುತ್ರರನ್ನು ನೋಡಿಬಂದ ರೀತಿಯನ್ನೇ ಮನಸ್ಸಿನಲ್ಲಿ ಚಿಂತಿಸುತ್ತ ಬಹಳವಾಗಿ ದುಃಖವನ್ನು ಅನುಭವಿಸುತ್ತಿದ್ದಳು.

ಇಲ್ಲಿಗೆ ನಲವತ್ತೆಂಟನೆಯ ಸರ್ಗವು.

ರಾಮನು ಸ್ವಲ್ಪವಾಗಿ ಮೂರ್ಛೆತಿಳಿದೆದ್ದು, ಲಕ್ಷ್ಮಣನನ್ನು ಕುರಿತು ದುಃಖಿಸಿದುದು ಮತ್ತು ಸುಗ್ರೀವನನ್ನು ಕಿಷ್ಕಿಂಧೆಗೆ ಹಿಂತಿರುಗಿ ಹೋಗುವಂತೆ ಹೇಳಿದುದು. ವಿಭೀಷಣನು ವಾನರ ಸೈನ್ಯಕ್ಕೆ ಧೈರ್ಯವನ್ನು ಹೇಳಿ ನಿಲ್ಲಿಸಿ ತಿರುಗಿ ರಾಮನ ಬಳಿಗೆ ಬಂದುದು.

ಭಯಂಕರಗಳಾದ ನಾಗಪಾಶಗಳಲ್ಲಿ ಕಟ್ಟುಬಿದ್ದು, ಹಾವುಗಳಂತೆ ನಿಟ್ಟುಸಿರು ಬಿಡುತ್ತ ರಕ್ತದಿಂದ ತೊಯ್ದು, ನೆಲದಲ್ಲಿ ಮಲಗಿದ್ದ ಮಹಾತ್ಮರಾದ ಆ ದಶರಥಕುಮಾರರನ್ನು, ಸುಗ್ರೀವನೇ ಮೊದಲಾಗಿ ಮಹಾಬಲಶಾಲಿಗಳಾದ ವಾನರೋತ್ತಮರೆಲ್ಲರೂ ಸುತ್ತಿನಿಂತು ವ್ಯಸನಪಡುತ್ತಿದ್ದರು. ಇಷ್ಟರಲ್ಲಿ ವೀರ್ಯವಂತನಾದ ರಾಮನು ನಾಗಪಾಶದಿಂದ ಬದ್ಧನಾಗಿದ್ದರೂ, ಧೀರನಾದುದರಿಂದ ಸ್ವಲ್ಪಕಾಲದಲ್ಲಿಯೇ ಮೂರ್ಛೆತಿಳಿದು ಚೇತರಿಸಿಕೊಂಡನು. ಹೀಗೆ ಎಚ್ಚೆತ್ತ ರಾಮನು ತನ್ನ ಪಕ್ಕದಲ್ಲಿ ಬಾಣಗಳಿಂದ ನಾಟಲ್ಪಟ್ಟವನಾಗಿ ರಕ್ತದಿಂದ ತೊಯ್ದು, ಸಂಕಟದಿಂದ ಕುಂದಿದ ಮುಖವುಳ್ಳ ತನ್ನ ತಮ್ಮನಾದ ಲಕ್ಷ್ಮಣನನ್ನು ನೋಡಿ, ಸಂಕಟವನ್ನು ತಡೆಯುಲಾರದೆ ವಿಲಪಿಸುವನು. "ಹಾ ಕಷ್ಟವೆ ! ನನ್ನ ಪ್ರಿಯಸಹೋದರನಾದ ಲಕ್ಷ್ಮಣನು ಹೀಗೆ ಯುದ್ಧದಲ್ಲಿ ಶತ್ರುಗಳಿಂದ ನಿರ್ಜಿತನಾಗಿ, ನೆಲದಲ್ಲಿ ಮಲಗಿರುವುದನ್ನು ನಾನು ಕಣ್ಣಾರೆ ನೋಡುತ್ತಿರುವೆನಲ್ಲಾ ! ಇನ್ನು ನನಗೆ ಸೀತೆಯಿಂದಾಗಬೇಕಾದುದೇನು ? ನನಗೆ ಪ್ರಾಣಗಳಿದ್ದೂ ಫಲವೇನು ? ಈ ಭೂಲೋಕದಲ್ಲಿ ಹುಡುಕಿದ ಪಕ್ಷದಲ್ಲಿ ಸೀತೆಗೆ ಸಾಟಿಯಾದ ಪತ್ನಿಯನ್ನು ಹೇಗಾದರೂ ಸಂಪಾದಿಸಿಕೊಳ್ಳಬಹುದು. ಆದರೆ ನನಗೆ ಪ್ರಾಣಸಹಾಯಕನಾಗಿಯೂ, ಯುದ್ಧದಲ್ಲಿ ಸಮರ್ಥನೂ ಆದ ಇವನಂತಹ ಪ್ರಿಯಸಹೋದರನನ್ನು ಪಡೆಯುವುದು ಸಾಧ್ಯವೆ ? ಎಂದಿಗೂ ಸಾಧ್ಯವಲ್ಲ ! ಸುಮಿತ್ರಾನಂದವರ್ಧನನಾದ ಈತನು ಸತ್ತಿರುವುದೇ ನಿಜವಾದಲ್ಲಿ,

ನಾನೂ ಈಗ ವಾನರರ ಕಣ್ಣೆದಿರಾಗಿಯೇ ಪ್ರಾಣವನ್ನು ಬಿಟ್ಟುಬಿಡುವೆನು. ಹಾ ! ಮುಂದೆ ಗತಿಯೇನು ? ನಾನು ಅಯೋಧ್ಯೆಗೆ ಹೋದಾಗ ನನ್ನ ತಾಯಿಯಾದ ಕೌಸಲ್ಯೆಗೆ ಏನೆಂದು ಪ್ರತ್ಯುತ್ತರ ಕೊಡಲಿ? ಕೈಕೇಯಿಗಾದರೂ ಏನೆಂದು ಸಮಾಧಾನ ಹೇಳಲಿ ? ಅವನಿಲ್ಲದೇ ನಾನು ಮಾತ್ರವೇ ಅಲ್ಲಿಗೆ ಹೋದರೆ, ಅಲ್ಲಿ ತನ್ನ ಪ್ರಿಯ ಪುತ್ರನನ್ನು ಕಣ್ಣಾರೆ ನೋಡಬೇಕೆಂದು ತತ್ತಳಿಸಿ ತವಕಿಸುತ್ತಿರುವ ಆ ಸುಮಿತ್ರಾ ದೇವಿಯು, ತನ್ಮನನ್ನಗಲಿ ಬಂದ ನನ್ನನ್ನು ನೋಡಿ, ನನ್ನಿಂದ ಆ ಅಪ್ರಿಯವಾರ್ತೆ ಯನ್ನು ಕೇಳಿದಮೇಲೆ, ಕರುವನ್ನು ಕಳೆದುಕೊಂಡ ಹಸುವಿನಂತೆ ದುಃಖದಿಂದ ತತ್ತಳಿಸುತ್ತ, ಕುರಿಮರಿಯಂತೆ ಕೂಗತೊಡಗಿದರೆ, ಅವಳನ್ನು ನಾನು ಯಾವ ವಿಧ ದಿಂದ ಸಮಾಧಾನಪಡಿಸಲಿ ? ಶತ್ರುಘ್ನಸಹಿತನಾದ ಭರತನಿಗೆ ನಾನೇನೆಂದು ಹೇಳಲಿ ? ನನ್ನೊಡನೆ ಕಾಡಿಗೆ ಬಂದ ಅವನನ್ನು ಬಿಟ್ಟು, ಈಗ ನಾನೊಬ್ಬನೇ ಹಿಂತಿ ರುಗಿ ಅಯೋಧ್ಯೆಗೆ ಹೋದರೆ, ಸುಮಿತ್ರೆಯು ನನ್ನನ್ನು ನೋಡಿ, ರಾಮಾ ! ನೀನು ನಿನ್ನೊಡನೆ ಲಕ್ಷ್ಮಣನನ್ನೂ ಕಾಡಿಗೆ ಕರೆದುಕೊಂಡು ಹೋದವನಲ್ಲವೆ ? ಹಿಂತಿ ರುಗಿ ಬರುವಾಗ ಅವನನ್ನು ಬಿಟ್ಟು ನೀನುಮಾತ್ರವೇ ಬಂದೆಯಾ ? ಎಂದು ನನ್ನನ್ನು ನಿಂದಿಸದೆ ಬಿಡುವಳೆ ? ಅಯ್ಯೋ ! ಅದನ್ನು ಕೇಳಿ ನಾನು ಹೇಗೆ ಸಹಿಸಲಿ ? ಆ ಮಾತನ್ನು ನಾನು ಕೇಳಲಾರೆನು. ಇನ್ನು ಮೇಲೆ ನನಗೆ ಬದುಕಿನಲ್ಲಿಯೇ ಆಸೆ ಇಲ್ಲ. ಇಲ್ಲಿಯೇ ನಾನೂ ಜೀವವನ್ನು ಕಳೆದುಕೊಳ್ಳುವೆನು. ಹಾ ! ಅವನನ್ನು ಕಾಡಿಗೆ ಕರೆದುಕೊಂಡು ಬರುವ ದುಷ್ಕಾರ್ಯಕ್ಕೆ ನಾನೇಕೆ ಕೈಯಿಕ್ಕಿದೆನು ? ಛೀ ನಾನೆಂತಹ ಅಪೂಜ್ಯನು ! ನನ್ನ ಬದುಕನ್ನು ಸುಡಬೇಕು ! ನನಗಾಗಿಯೇ ಅಲ್ಲವೆ ನನ್ನ ಸಹೋದರನು ಹೀಗೆ ನೆಲದಲ್ಲಿ ಬಿದ್ದು, ಜೀವವಿಲ್ಲದಂತೆ ಶರತಲ್ಪದಲ್ಲಿ ಮಲಗಿರುವನು" ಎಂದು ವಿಲಪಿಸುತ್ತ, ಆಮೇಲೆ ಅವನ ಕಡೆಗೆ ತಿರುಗಿ, " ಪ್ರಿಯ ಸಹೋದರ ನಾನು ಆಗಾಗ ದುಃಖಿತನಾದ ಕಾಲದಲ್ಲಿ ನೀನು ನನ್ನನ್ನು ಸಮಾಧಾನಪಡಿಸುತ್ತಿದ್ದೆ ಯಲ್ಲವೆ ? ಈಗ ನೀನು ಈ ಅವಸ್ಥೆಯನ್ನು ಹೊಂದಿದಮೇಲೆ, ನಾನು ಎಷ್ಟೆಷ್ಟು ದುಃಖಿಸಿದರೂ, ನನ್ನೊಡನೆ ಮಾತನಾಡುವುದಕ್ಕೂ ಶಕ್ತಿಯಿಲ್ಲದೇ ಬಿದ್ದಿರುವೆಯಲ್ಲ! ಯಾವ ನೀನು ಈಗಿನ ಯುದ್ಧದಲ್ಲಿ ಅನೇಕ ರಾಕ್ಷಸರನ್ನು ಕೊಂದು ಕೆಡಹಿದೆಯೋ ಅಂತಹ ವೀರನಾದ ನೀನು ಆ ರಾಕ್ಷಸರನ್ನು ಕೆಡಹಿದ ಭೂಮಿಯಲ್ಲಿ, ಅದೇ ಶತ್ರು ಗಳಿಂದ ಹತನಾಗಿ ಬಿದ್ದಿರುವೆಯಲ್ಲಾ ! ನಾನಿನ್ನೇನು ಹೇಳಲಿ! ಈ ನಿನ್ನ ಅಂಗಾಂಗ ಗಳಲ್ಲಿಯೂ ರಕ್ತವು ಸುರಿಯುತ್ತಿರುವುದು. ಸರ್ವಾಂಗಗಳಲ್ಲಿಯೂ, ಬಾಣಗಳು

ನಾಟಿರುವುವು. ಶರತಲ್ಪದಲ್ಲಿ ಮಲಗಿ, ಅಸ್ತಂಗತನಾಗುವ ಸೂರ್ಯನಂತೆ ಕಾಣು ತ್ತಿರುವೆಯಲ್ಲಾ ! ” ಎಂದು ರೋದಿಸುತ್ತಿದ್ದು, ಮನಸ್ಸಂಕಟವನ್ನು ತಡೆಯಲಾರದೆ ತಿರುಗಿ ತನ್ನಲ್ಲಿ ತಾನು, ಹಾ ! ನಾನಿನ್ನೇನು ಮಾಡಲಿ ? ಮರ್ಮಗಳಲ್ಲಿ ಬಾಣ ಗಳು ನಾಟಿರುವುದರಿಂದ, ಮಾತನ್ನಾಡುವುದಕ್ಕೂ ಇವನಿಗೆ ಶಕ್ತಿಯಿಲ್ಲ. ಇವನ ದೃಷ್ಟಿಯಿಂದಲೆ ಇವನ ಬಾಧೆಯು ಸೂಚಿಸಲ್ಪಡುವುದು. ದಿವ್ಯಕಾಂತಿ ವಿಶಿಷ್ಟ ನಾದ ಈತನು ನಾನು ಕಾಡಿಗೆ ಬಂದಾಗಲೂ ನನ್ನನ್ನು ಬಿಟ್ಟಿರಲಾರದೆ, ಹೇಗೆ ಹಿಂಬಾಲಿಸಿ ಬಂದನೋ, ಹಾಗೆಯೇ ನಾನೂ ಈಗ ಇವನು ಯಮನ ಬಳಿಗೆ ಹೋಗು ವಾಗ, ಅವನನ್ನೇ ಹಿಂಬಾಲಿಸಿ ಹೋಗುವೆನು. ಈತನು ಯಾವಾಗಲೂ ಬಂಧು ಜನಗಳಲ್ಲಿ ಪ್ರೀತಿಯನ್ನು ತೋರಿಸತಕ್ಕವನು. ಯಾವಾಗಲೂ ನನ್ನನ್ನು ನಿಯಮ ದಿಂದ ಅನುಸರಿಸುತ್ತಿದ್ದವನು. ಇಂತಹ ಸಾಧುಗುಣವುಳ್ಳ ಈತನು ನನ್ನ ಅಕ್ರಮ ದಿಂದಲ್ಲವೇ ಇಷ್ಟು ದುರವಸ್ಥೆಯನ್ನು ಹೊಂದಿರುವನು. ವೀರನಾದ ಈತನು ತನಗೆ ಎಷ್ಟೇ ಕೋಪವುಂಟಾದಾಗಲೂ ನನ್ನೊಡನೆ ಪರುಷವಾಗಿಯಾಗಲಿ, ಅಪ್ರಿಯ ವಾಗಿಯಾಗಲಿ ಮಾತನಾಡಿದುದನ್ನು ನಾನು ಯಾವಾಗಲೂ ಕೇಳಿದುದಿಲ್ಲ. ಅಯ್ಯೋ! ಇವನ ಗುಣಗಳೆಲ್ಲವೂ ಈಗ ನನ್ನ ನೆನಪಿಗೆ ಬರುತ್ತಿರುವುವಲ್ಲಾ! ಒಂದೇ ಸಲಕ್ಕೆ ಐನೂರು ಬಿಲ್ಲುಗಳನ್ನು ಹಿಡಿದು ಬಾಣವನ್ನು ಪ್ರಯೋಗಿಸುವುದಕ್ಕೆ ತಕ್ಕ ಸಹಸ್ರಭುಜಬಲಗಳುಳ್ಳ ಕಾರ್ತವೀರ್ಯಾರ್ಜುನನಿಗಿಂತಲೂ, ಬಾಣಪ್ರಯೋಗದಲ್ಲಿ ಈತನೇ ಹೆಚ್ಚೆಂದು ಹೇಳಬಹುದು. ಈತನಿಗೆ ಎರಡೇ ಕೈಗಳಿದ್ದರೂ ಸಹಸ್ರಭುಜ ವುಳ್ಳ ಕಾರ್ತವೀರ್ಯನು ತನ್ನ ಸಾವಿರ ತೋಳುಗಳನ್ನೂ ಉಪಯೋಗಿಸಿ, ಐನೂರು ಬಾಣಗಳನ್ನು ಪ್ರಯೋಗಿಸುವಷ್ಟು ಕಾಲದಲ್ಲಿ, ಇವನೂ ಅಷ್ಟು ಬಾಣಗಳನ್ನು ಬಿಡಬಲ್ಲವನಾದುದರಿಂದ ಶಸ್ತ್ರಾಸ್ತ್ರ ಪ್ರಯೋಗದಲ್ಲಿ ಕಾರ್ತವೀರ್ಯನಿಗಿಂತಲೂ ಈ ಲಕ್ಷ್ಮಣನೇ ಮೇಲೆನಿಸಿರುವನು. ಅಯ್ಯೋ! ಯಾವನು ತನ್ನ ಬಾಣಗಳಿಂದ ಮಹಾತ್ಮನಾದ ಇಂದ್ರನ ಬಾಣಗಳನ್ನೂ ತಡೆಯಬಲ್ಲನೋ, ಅಂತಹ ವೀರಾಗ್ರಣಿ ಯಾದ ಈತನು, ಸರ್ವೋತ್ತಮವಾದ ಸುಖಶಯ್ಯೆಯಲ್ಲಿ ಮಲಗತಕ್ಕವನಾಗಿರು ವಾಗಲೂ, ಈಗ ಬರೀ ನೆಲದಮೇಲೆ ಮಲಗಿರುವನಲ್ಲಾ ! ನಾನು ವಿಭೀಷಣನಿಗೆ ರಾಕ್ಷಸರಾಜ್ಯದಲ್ಲಿ ಪಟ್ಟವನ್ನು ಕಟ್ಟುವುದಾಗಿ ಬಾಯಿಬಿಟ್ಟು ಹೇಳಿದೆನು. ಆ ಕಾರ್ಯವನ್ನು ನಡೆಸದೇ ಹೋದೆನು. ಈ ನನ್ನ ಮಿಥ್ಯಾ ಪ್ರತಿಜ್ಞೆಯೂ ಕೂಡ ನನ್ನನ್ನು ಮುಂದೆ ದಹಿಸದೆ ಬಿಡದು. ಎಲೆ ಸುಗ್ರೀವಾ ! ನೀನಾದರೂ ಈ ಕ್ಷಣವೇ

ಇಲ್ಲಿಂದ ಹೊರಟು ಕಿಷ್ಕಿಂಧೆಗೆ ಹೋಗಿ ಸೇರಿಬಿಡು. ನಾವಿಬ್ಬರೂ ಇಲ್ಲದಿರುವುದನ್ನು ನೋಡಿ, ಬಲಾಢ್ಯನಾದ ರಾವಣನು ನಿನ್ನನ್ನು ಬೆನ್ನಟ್ಟಿಕೊಂಡು ಬರುವನು. ನಿನ ಗಿಂತಲೂ ಅವನು ಬಲಿಷ್ಠನು. ಆದುದರಿಂದ ನೀನು ಈ ಅಂಗದನನ್ನೂ ಸಂಗಡ ಕರೆದುಕೊಂಡು, ಈ ಸಮಸ್ತ ವಾನರಸೈನ್ಯಗಳೊಡನೆಯೂ, ಸುಹೃಜ್ಜನಗಳೊಡ ನೆಯೂ, ನಲ ನೀಲಾದಿವಾನರಯೂಥಪತಿಗಳೊಡನೆಯೂ ಕೂಡಿ, ಈಗ ನಾವು ಬಂದ ದಾರಿಯಿಂದಲೇ ಸಮುದ್ರನನ್ನು ದಾಟಿಹೋಗು. ಈ ಹನುಮಂತನು ಯುದ್ಧ ದಲ್ಲಿ ನನಗಾಗಿ ಬೇರೊಬ್ಬರಿಂದ ಸಾಧ್ಯವಾಗದ ಅನೇಕ ಕಾರ್ಯಗಳನ್ನು ನಡೆಸಿರು ವನು. ಈ ಜಾಂಬವಂತನೂ, ಗೋಲಾಂಗೂಲಾಧಿಪತಿಯಾದ ಈ ಗವಾಕ್ಷನೂ, ನನ ಗಾಗಿ ಈ ಯುದ್ಧದಲ್ಲಿ ಎಷ್ಟೋ ಸಾಹಸಗಳನ್ನು ನಡೆಸಿರುವರು. ಇವರ ಪ್ರೀತಿಗಾಗಿ ನಾನು ಬಹಳ ಸಂತೋಷಪಟ್ಟೆನು. ಯುವರಾಜನಾದ ಈ ಅಂಗದನೂ ಮೈಂದನೂ ದ್ವಿವಿದನೂ, ಈ ಕೇಸರಿಯೂ, ಈ ಸಂಪಾತಿಯೂ, ನನಗಾಗಿ ಬಹಳ ಭಯಂಕರ ಯುದ್ಧಗಳನ್ನು ನಡೆಸಿದರು. ಹಾಗೆಯೇ ಈ ಗವಯನೂ, ಗವಾಕ್ಷನೂ, ಶರಭನೂ, ಗಜನೂ, ಇನ್ನೂ ಇತರ ವಾನರವೀರರೂ, ನನಗಾಗಿ ತಮ್ಮ ಪ್ರಾಣ ಗಳನ್ನೂ ಲಕ್ಷ್ಯಮಾಡದೆ ಯುದ್ಧಮಾಡಿದರು. ಸುಗ್ರೀವಾ! ಯಾರು ಎಷ್ಟು ಪ್ರಯತ್ನ ಮಾಡಿದರೇನು ? ದೈವವನ್ನತಿಕ್ರಮಿಸಬೇಕೆಂದರೆ ಮನುಷ್ಯರಿಗೆ ಸಾಧ್ಯವೆ? ಎಂದಿಗೂ ಸಾಧ್ಯವಲ್ಲ! ಎಲೆ ಪರಂತಪನೆ, ಮನಃಪೂರ್ವಕವಾಗಿ ಶ್ರೇಯಸ್ಸನ್ನು ಕೋರುವ ಆಪ್ತಮಿತ್ರನಿಂದ ಎಷ್ಟು ದೂರದವರೆಗೆ ಸಹಾಯವನ್ನು ಮಾಡಲು ಸಾಧ್ಯವೋ, ಅಷ್ಟರವರೆಗೂ, ನೀವೂ ನನ್ನ ವಿಷಯದಲ್ಲಿ ನಿರ್ವಂಚನೆಯಾಗಿ ಸಹಾಯ ವನ್ನು ಮಾಡಿಬಿಟ್ಟಿರುವಿರಿ. ನೀನು ಧರ್ಮಜ್ಞನಾಗಿಯೂ,ಅಧರ್ಮ ಭೀರುವಾಗಿಯೂ ಇದ್ದು, ನನಗೆ ಮಾಡಿದ ಸಹಾಯಕ್ಕಾಗಿ ನಾನು ಎಷ್ಟು ಕೃತಜ್ಞತೆಯನ್ನು ತೋರಿಸಿದರೂ ಸಾಲದು," ಎಂದು ಹೇಳಿ ಆಮೇಲೆ ಅಲ್ಲಿದ್ದ ಸಮಸ್ತ ವಾನರ ವೀರ ರನ್ನೂ ನೋಡಿ, "ಎಲೈ ವಾನರೋತ್ತಮರೆ! ನೀವು ನನ್ನ ವಿಷಯದಲ್ಲಿ ನಡೆಸ ಬೇಕಾದ ಮಿತ್ರಕಾರ್ಯವನ್ನು ನಿರ್ವಂಚನೆಯಿಂದ ನಡೆಸಿಬಿಟ್ಟಿರುವಿರಿ. ಇನ್ನು ನೀವು ಯಥೇಷ್ಟವಾಗಿ ನಿಮ್ಮ ನಿಮ್ಮ ನಿವಾಸಗಳಿಗೆ ಹಿಂತಿರುಗಬಹುದು. ನಿಮಗೆ ನಾನು ಅನುಜ್ಞೆಯನ್ನು ಕೊಟ್ಟಿರುವೆನು" ಎಂದನು. ಹೀಗೆ ರಾಮನು ದುಃಖದಿಂದ ಹೇಳಿದ ಮಾತನ್ನು ಕೇಳಿ, ಅಲ್ಲಿದ್ದ ಸಮಸ್ತ ವಾನರರೂ, ವ್ಯಸನದಿಂದ ಕೆಂಪೇರಿದ ಕಣ್ಣುಳ್ಳವ ರಾಗಿ ಕಣ್ಣೀರು ಬಿಡುತ್ತಿದ್ದರು. ಇಷ್ಟರಲ್ಲಿ ವಿಭೀಷಣನು ಗದಾಪಾಣಿಯಾಗಿ ಅಲ್ಲಲ್ಲಿ

ಓಡಿಹೋಗುತ್ತಿದ್ದ ವಾನರಸೈನ್ಯಗಳೆಲ್ಲವನ್ನೂ ತಡೆದು ನಿಲ್ಲಿಸಿ, ವೇಗದಿಂದ ಹಿಂತಿರುಗಿ ರಾಮನಿದ್ದ ಸ್ಥಳಕ್ಕೆ ಬಂದನು. ಕಾಡಿಗೆಯ ರಾಶಿಯಂತೆ ಕಪ್ಪಾದ ಮೈಯುಳ್ಳ ವಿಭೀಷಣನು ಗದೆಯನ್ನು ಕೈಯಲ್ಲಿ ಹಿಡಿದು ವೇಗದಿಂದ ಬರುವುದನ್ನು ನೋಡಿ, ರಾಮಲಕ್ಷ್ಮಣರನ್ನು ಸುತ್ತಿನಿಂತಿದ್ದ ವಾನರರೆಲ್ಲರೂ ಅವನೇ ಇಂದ್ರಜಿತ್ತೆಂದು ಭ್ರಮಿಸಿ, ಭಯದಿಂದ ಪಲಾಯನ ಮಾಡುವುದಕ್ಕೆ ತೊಡಗಿದರು. ವಿಭೀಷಣ ನಾದರೋ ಇತ್ತಲಾಗಿ ಪ್ರಜ್ಞೆಯಿಲ್ಲದೆ ಕೊಳೆಮುಚ್ಚಿದ ಮೈಯುಳ್ಳವರಾಗಿ, ನಿಶ್ಚೇಷ್ಟ ರಾಗಿ, ಶರತಲ್ಪಗಳಲ್ಲಿ ಮಲಗಿದ್ದ ರಾಮಲಕ್ಷ್ಮಣರನ್ನು ನೋಡಬೇಕೆಂಬ ಅತ್ಯಾತುರ ದಿಂದ ಬರುತ್ತಿದ್ದನು. ಆ ವಾನರರೆಲ್ಲರೂ, ಅಲ್ಲಿ ರಾಮಲಕ್ಷ್ಮಣರು ಅನುಭವಿಸುತ್ತಿದ್ದ ದುರವಸ್ಥೆಯನ್ನೂ, ತಮ್ಮ ಕಡೆಗೆ ಬರುತ್ತಿದ್ದ ವಿಭೀಷಣನ ಆತುರವನ್ನೂ ನೋಡಿ ಅವನನ್ನೇ ಇಂದ್ರಜಿತ್ತೆಂದು ತಿಳಿದು, ಮಹಾ ವ್ಯಥೆಯಿಂದ ಕೂಡಿ, ಬಿರುಗಾಳಿಗೆ ಸಿಕ್ಕಿದ ಮೇಘಗಳಂತೆ, ನಾನಾ ಕಡೆಗಳಿಗೆ ಚದುರಿ ಹೋಗುತ್ತಿದ್ದರು.

ಇಲ್ಲಿಗೆ ನಲವತ್ತೊಂಭತ್ತನೆಯ ಸರ್ಗವು.

ವಿಭೀಷಣನು ರಾಮಲಕ್ಷ್ಮಣರ ಅವಸ್ಥೆಯನ್ನು ನೋಡಿ ದುಃಖಿಸು ತ್ತಿರಲು, ಸುಗ್ರೀವನು ಅವನನ್ನು ಸಮಾಧಾನಗೊಳಿಸಿದುದು. ಇಷ್ಟರಲ್ಲಿ ಗರುತ್ಮಂತನು ಬಂದು ರಾಮಲಕ್ಷ್ಮಣರನ್ನು ನಾಗಪಾಶದಿಂದ ಬಿಡಿಸಿದುದು. ಇದನ್ನು ನೋಡಿ, ಸಮಸ್ತವಾನರರೂ ಸಂತೋಷದಿಂದ ಸಿಂಹನಾದ ಮಾಡಿದುದು.

ಆಗ ಮಹಾತೇಜಸ್ವಿಯಾಗಿಯೂ, ಬಲಾಢ್ಯನಾಗಿಯೂ ಇರುವ ವಾನರ ರಾಜನಾದ ಸುಗ್ರೀವನು, ತನ್ನೊಡನಿದ್ದ ವಾನರರೆಲ್ಲರೂ ಹಾಗೆ ಅಕಸ್ಮಾತ್ತಾಗಿ ಪಲಾಯಿತರಾದುದನ್ನು ನೋಡಿ, ಅದಕ್ಕೆ ಕಾರಣವೇನೆಂದು ತಿಳಿಯದೆ, “ಆಹಾ ! ಇದೇನು ? ಪ್ರವಾಹದಲ್ಲಿ ಇದಿರುಗಾಳಿಗೆ ಸಿಕ್ಕಿದ ದೋಣಿಯಂತೆ, ನಮ್ಮ ವಾನರ ಸೇನೆಯೆಲ್ಲವೂ ಹೀಗೆ ವ್ಯಾಕುಲವಾಗಿರುವುದಕ್ಕೆ ಕಾರಣವೇನು ? ಎಂದು ಕೇಳಿದನು. ಆಗ ವಾಲಿಪುತ್ರನಾದ ಅಂಗದನು ಅವನನ್ನು ಕುರಿತು, “ಎಲೆ ಆರ್ಯನೆ ! ಇದೋ ಇಲ್ಲಿ ದಶರಥ ಪುತ್ರರಾದ, ಮಹಾತ್ಮರಾದ ರಾಮಲಕ್ಷ್ಮಣರಿಬ್ಬರೂ, ಸರ್ವಾವಯ ವಗಳಲ್ಲಿಯೂ ಬಾಣವು ನಾಟಿರುವುದರಿಂದ, ರಕ್ತದಿಂದ ತೊಯ್ದು ಮೈಯುಳ್ಳವ

ರಾಗಿ ಶರತಲ್ಪದಲ್ಲಿ ಮಲಗಿರುವುದನ್ನು ನೀನು ನೋಡಲಿಲ್ಲವೆ ? ನಮ್ಮ ವಾನರ ಸೇನೆಗೆ ಭಯವುಂಟಾಗುವುದಕ್ಕೆ ಇದಲ್ಲದೆ ಬೇರೆ ಕಾರಣವಿಲ್ಲ" ಎಂದನು. ಆಗ ವಾನರರಾಜನಾದ ಸುಗ್ರೀವನು ತನ್ನ ಪ್ರಿಯಪುತ್ರನಾದ ಅಂಗದನನ್ನು ನೋಡಿ, "ವತ್ಸನೆ ಹಾಗಲ್ಲ. ರಾಮಲಕ್ಷ್ಮಣರು ಮಲಗಿರುವುದು ಮಾತ್ರವೇ ಇದಕ್ಕೆ ಕಾರಣ ವಲ್ಲ ! ಇದಕ್ಕೆ ಬೇರೆಯಾವುದೋ ಒಂದು ಪ್ರಧಾನ ಕಾರಣವಿರಬೇಕು ! ಏಕೆಂದರೆ, ಈ ವಾನರರ ಮುಖದಲ್ಲಿ ದುಃಖಚಿಹ್ನೆಗಳೊಡನೆ ಬಹಳವಾದ ಭಯದ ಚಿಹ್ನೆಗಳೂ ಕಂಡುಬರುತ್ತಿರುವುವು. ಇವರೆಲ್ಲರೂ ಮಿತಿಮೀರಿದ ಭಯದಿಂದ ಕಂಗೆಟ್ಟು ತಾವು ಗಳು ಹಿಡಿದಿದ್ದ ಕಲ್ಲುಮರಗಳೇ ಮೊದಲಾದ ಯುದ್ಧ ಸಾಧನಗಳನ್ನೂ ಕೆಳಕ್ಕೆ ಬಿಸುಟು, ದಿಕ್ಕುದಿಕ್ಕಿಗೆ ಪಲಾಯನ ಮಾಡುತ್ತಿರುವರು. ಇವರಲ್ಲಿ ಒಬ್ಬರ ನ್ನೊಬ್ಬರು ನೋಡಿಯೂ ನಾಚಿಕೆಯಿಲ್ಲದೆ, ಹಿಂತಿರುಗಿಯೂ ನೋಡದೆ, ಆತ್ಮ ಸಂರಕ್ಷ ಣೆಯ ಆತುರದಲ್ಲಿರುವ ಅವರು ಒಬ್ಬರನ್ನೊಬ್ಬರು ತಳ್ಳಿಕೊಂಡು ವೇಗದಿಂದ ಓಡು ತ್ತಿರುವುದನ್ನು ನೋಡು ! ಅಲ್ಲಲ್ಲಿ ನೆಲದಮೇಲೆ ಮಲಗಿರುವವರನ್ನೂ ಲಕ್ಷ್ಯ ಮಾಡದೇ, ಅವರ ಮೇಲೆಯೇ ಕಾಲಿಟ್ಟು ದಾಟಿಹೋಗುತ್ತಿರುವರು" ಎಂದನು. ಇಷ್ಟರಲ್ಲಿ ವೀರನಾದ ವಿಭೀಷಣನು ಗದಾಪಾಣಿಯಾಗಿ ಬಂದು ಸುಗ್ರೀವನನ್ನಾಶೀ ರ್ವದಿಸಿ ರಾಮನನ್ನು ನೋಡಿದನು. ಆಗ ಸುಗ್ರೀವನು ವಾನರರೆಲ್ಲರೂ ವಿಭೀಷಣ ನನ್ನೇ ನೋಡಿ ಭಯಪಟ್ಟು ಪಲಾಯನಮಾಡುವರೆಂದು ತಿಳಿದು, ತನ್ನ ಸಮೀಪ ದಲ್ಲಿದ್ದ ಭಲ್ಲೂಕರಾಜನಾದ ಜಾಂಬವಂತನನ್ನು ನೋಡಿ "ಎಲೆ ಆರ್ಯನೆ, ಅದೋ ! ನಮ್ಮ ವಾನರಸೈನ್ಯಗಳೆಲ್ಲವೂ ಈ ವಿಭೀಷಣನು ಬಂದುದನ್ನು ನೋಡಿ, ಇಂದ್ರ ಜಿತ್ತೆಂಬ ಭ್ರಾಂತಿಯಿಂದ ಭಯಪಟ್ಟು ಓಡುತ್ತಿರುವರು. ನೀನು ಅವರಿಗೆ ಆ ಭಯ ವನ್ನು ತಪ್ಪಿಸಿ, "ಈಗ ಬಂದವನು ವಿಭೀಷಣನೇ ಹೊರತು, ಇಂದ್ರಜಿತ್ತಲ್ಲವೆಂದು ಧೈರ್ಯವನ್ನು ಹೇಳಿ ತಡೆದು ನಿಲ್ಲಿಸು" ಎಂದನು. ಸುಗ್ರೀವಾಜ್ಞೆಯನ್ನು ಕೇಳಿ ದೊಡನೆಯೇ ಜಾಂಬವಂತನು ವೇಗದಿಂದೋಡಿ, ಪಲಾಯನ ಮಾಡುತ್ತಿದ್ದ ಆ ವಾನರ ರನ್ನು ಅಡ್ಡಗಟ್ಟಿ ನಿಲ್ಲಿಸಿ, ಸಮಾಧಾನವನ್ನು ಹೇಳಿ ಹಿಂತಿರುಗಿಸಿದನು. ಆ ವಾನರ ರೆಲ್ಲರೂ ಜಾಂಬವಂತನ ಮಾತನ್ನು ಕೇಳಿ, ವಿಭೀಷಣ ದರ್ಶನದಿಂದ ತಮಗುಂಟಾದ ಭಯವನ್ನು ಬಿಟ್ಟು, ಹಿಂದಿರುಗಿ ಬಂದು ತಮ್ಮ ಸ್ಥಳದಲ್ಲಿ ನಿಂತರು. ಇತ್ತಲಾಗಿ, ಧರ್ಮಾತ್ಮನಾದ ವಿಭೀಷಣನು, ರಾಮಲಕ್ಷ್ಮಣರ ಅಂಗಾಂಗಗಳಲ್ಲಿಯೂ, ಬಾಣ ಗಳು ನಾಟಿರುವುದನ್ನು ನೋಡಿ, ವ್ಯಸನದಿಂದ ಕದಲಿದ ಇಂದ್ರಿಯಗಳುಳ್ಳವನಾ

ದನು. ಹಾಗಿದ್ದರೂ ಅವನು ಸಮಯೋಚಿತ ಬುದ್ಧಿಯುಳ್ಳವನಾದುದರಿಂದ, ಧೈರ್ಯ ಗೆಡದೆ, ಬೊಗಸೆಯಲ್ಲಿ ನೀರನ್ನು ತಂದು, ಆ ರಾಮಲಕ್ಷ್ಮಣರ ಕಣ್ಣುಗಳನ್ನು ತೊಳೆದು ದುಃಖದಿಂದ ಕುಗ್ಗಿದ ಮನಸ್ಸುಳ್ಳವನಾಗಿ ನಿಂತು ವಿಲಪಿಸುವನು. ಆಹಾ ಇದೇನರ್ಥವು ? ಇವರಿಬ್ಬರೂ ಎಣೆಯಿಲ್ಲದ ಬಲಪರಾಕ್ರಮವುಳ್ಳವರು ! ಯುದ್ಧ ಪ್ರಿಯರು. ಹೀಗಿದ್ದರೂ ರಾಕ್ಷಸರ ಕಪಟಯುದ್ಧಕ್ಕೆ ಸಿಕ್ಕಿ ಈ ದುರವಸ್ಥೆಯನ್ನು ಹೊಂದಿರುವರಲ್ಲಾ ! ಇವರಿಬ್ಬರೂ ಧರ್ಮಯುದ್ಧವನ್ನು ನಡೆಸತಕ್ಕವರೇ ಹೊರತು ಕಪಟಯುದ್ಧಕ್ಕೆ ಎಂದಿಗೂ ಪ್ರವೇಶಿಸುವವರಲ್ಲವೆಂಬುದನ್ನು ತಿಳಿದೇ ನನ್ನಣ್ಣನ ಮಗನಾದ ಇಂದ್ರಜಿತ್ತು, ರಾಕ್ಷಸರಿಗೆ ಸಹಜವಾದ ಕುಟಿಲಬುದ್ಧಿಯನ್ನೇ ಅವಲಂಬಿಸಿ, ಕಪಟಯುದ್ಧವನ್ನು ಮಾಡಿ ಇವರನ್ನು ವಂಚಿಸಿಬಿಟ್ಟನು. ದುಷ್ಪುತ್ರ ನಾಗಿಯೂ, ದುರಾತ್ಮನಾಗಿಯೂ ಇರುವ ಆ ಇಂದ್ರಜಿತು ಇವರ ವಿಷಯದಲ್ಲಿ ಬಹಳ ಮೋಸವನ್ನು ಮಾಡಿದನು. ಆಹಾ ! ಇವರ ಸರ್ವಾವಯವಗಳಲ್ಲಿಯೂ ರಕ್ತವು ಸುರಿಯುತ್ತಿರುವುದು. ಸರ್ವಾಂಗಗಳಲ್ಲಿಯೂ ಬಾಣಗಳು ನಾಟಿರುವುದ ರಿಂದ ನೆಲದಮೇಲೆ ಮಲಗಿರುವ ಶಲ್ಯಮೃಗಗಳಂತೆ ಕಾಣುತ್ತಿರುವರು. ನಾನು ಯಾರ ಪರಾಕ್ರಮದ ಬಲದಿಂದಲೇ ಪ್ರತಿಷ್ಠೆಯನ್ನು ಹೊಂದಿ ವೃದ್ಧಿಗೆ ಬರಬೇಕೆಂದು ನಂಬಿದ್ದೆನೋ, ಅಂತಹ ಈ ಪುರುಷಸಿಂಹರು ತಮ್ಮ ದೇಹವನ್ನು ಬಿಡುವು ದಕ್ಕಾಗಿ ಈ ದೀರ್ಘನಿದ್ರೆಯನ್ನು ಅವಲಂಬಿಸಿರುವರಲ್ಲಾ ! ಇನ್ನು ನನಗೆ ರಾಜ್ಯ ದಾಸೆಯೂ ಹೋಯಿತು. ಇನ್ನು ನನ್ನ ಕೋರಿಕೆಗಳೆಲ್ಲವೂ ವಿಫಲವಾದವು. ಇನ್ನು ನಾನು ಬದುಕಿದ್ದರೂ ಅನೇಕ ವಿಪತ್ತುಗಳಿಗೆ ಗುರಿಯಾಗಬೇಕಾಗಬಹುದು. ನನ್ನ ಹಗೆಯಾದ ರಾವಣನೂ ತನ್ನ ಪ್ರತಿಜ್ಞೆಯನ್ನು ಮುಗಿಸಿಕೊಂಡುಬಿಟ್ಟನು. ಅವನ ಕೋರಿಕೆಯೂ ನೆರವೇರಿತು" ಎಂದು ವಿಲಪಿಸುತ್ತಿದ್ದನು. ಆಗ ವಾನರ ರಾಜನಾದ ಸುಗ್ರೀವನು ಎಂತಹ ವ್ಯಸನಗಳಲ್ಲಿಯೂ ಎದೆಗುಂದದ ಧೀರಸ್ವಭಾವ ವುಳ್ಳವನಾದುದರಿಂದ, ವಿಲಪಿಸುತ್ತಿದ್ದ ವಿಭೀಷಣನನ್ನು ಆಲಂಗಿಸಿಕೊಂಡು, ಎಲೆ ! ಧರ್ಮಜ್ಞನೆ, ದುಃಖಿಸಬೇಡ. ರಾಮಲಕ್ಷ್ಮಣರಿಗೆ ಅಪಾಯವೇನೂ ಇರಲಾರದು. ನಿನಗೆ ಲಂಕಾರಾಜ್ಯವು ಕೈಸೇರುವುದರಲ್ಲಿ ಸಂದೇಹವಿಲ್ಲ. ಇಷ್ಟು ಮಾತ್ರಕ್ಕೆ ರಾವಣನೂ, ಅವನ ಮಗನಾದ ಇಂದ್ರಜಿತುವೂ ಕೃತಕೃತ್ಯರಾದರೆಂದೆಣಿಸಬೇಡ. ಇಂದ್ರಜಿತ್ತಿನ ಸರ್ಪಾಸ್ತ್ರಗಳು ಇವರಿಗೆ ಮರಣಾಂತವಾದ ಬಾಧೆಯನ್ನುಂಟುಮಾಡು ವುವೆಂಬ ಶಂಕೆಯನ್ನು ಬಿಡು. ಇವರಿಬ್ಬರೂ ಕೇವಲ ಮೂರ್ಛಿತರಾಗಿರುವುದು

ಮಾತ್ರವೇ ಹೊರತು ಬೇರೆಯಲ್ಲ. ಇನ್ನು ಸ್ವಲ್ಪ ಕಾಲದಲ್ಲಿಯೇ ಇವರು ಮೂರ್ಛೆ ತಿಳಿದೆದ್ದು, ಯುದ್ಧದಲ್ಲಿ ರಾವಣನನ್ನು ಅವನ ಪರಿವಾರಗಳೊಡನೆ ಕೊಲ್ಲುವುದರಲ್ಲಿ ಸಂದೇಹವಿಲ್ಲ" ಎಂದನು. ಹೀಗೆ ಸುಗ್ರೀವನು, ವಿಭೀಷಣನಿಗೆ ಸಮಾಧಾನವಾಕ್ಯ ವನ್ನು ಹೇಳಿದಮೇಲೆ ತನ್ನ ಪಕ್ಕದಲ್ಲಿದ್ದ ತನ್ನ ಮಾವನಾದ ಸುಷೇಣನನ್ನು ನೋಡಿ "ಎಲೈ ಪೂಜ್ಯನೆ, ನೀನು ಇಲ್ಲಿಯೇ ನಿರೀಕ್ಷಿಸುತ್ತಿದ್ದು, ಪರಂತಪರಾದ ಈ ಸಹೋ ದರರು ಮೂರ್ಛೆತಿಳಿದೆದ್ದಮೇಲೆ, ಶೂರರಾದ ಕೆಲವು ವಾನರರೊಡಗೂಡಿ ಇವರನ್ನು ಕಿಷ್ಕಿಂಧೆಗೆ ಕರೆದುಕೊಂಡು ಹೋಗು. ನಾನು ಇಲ್ಲಿ ರಾವಣನನ್ನು ಪುತ್ರ, ಮಿತ್ರ ಬಂಧುಗಳೊಡನೆ ಕೊಂದು, ದೇವೇಂದ್ರನು ತನ್ನ ಕೈತಪ್ಪಿಹೋದ ರಾಜ್ಯಲಕ್ಷ್ಮಿ ಯನ್ನು ತಿರುಗಿ ಕೈಸೇರಿಕೊಂಡಂತೆ ಸೀತಾಮಾತೆಯನ್ನು ಕರೆತರುವೆನು" ಎಂದನು. ಆಗ ಸುಗ್ರೀವನ ಮಾತನ್ನು ಕೇಳಿ ಸುಷೇಣನು "ಎಲೈ ರಾಜನೇ ! ಪೂರ್ವ ದಲ್ಲಿ ದೇವಾಸುರರಿಗೆ ಬಹಳ ಭಯಂಕರವಾಗಿ ನಡೆದ ಯುದ್ಧವನ್ನು ನಾನು ಬಲ್ಲೆನು. ಆಗ ಬಾಣಪ್ರಯೋಗದಲ್ಲಿ ಕುಶಲರಾಗಿಯೂ, ಆಯುಧ ವಿದ್ಯೆಯನ್ನು ಚೆನ್ನಾಗಿ ಬಲ್ಲವರೂ ಆದ ಅಸುರರು. ಆಗಾಗ ದೇವತೆಗಳನ್ನು ತಮ್ಮ ಮಾಯೆಯಿಂದ ಮರುಳು ಮಾಡಿ ಪ್ರಹರಿಸಿದರು. ಆಗ ದೇವತೆಗಳಲ್ಲಿ ಕೆಲವರು ಬಾಣಪೀಡಿತರಾಗಿಯೂ, ಕೆಲವರು ಮೂರ್ಛಿತರಾಗಿಯೂ, ಕೆಲವರು ಮೃತರಾಗಿಯೂ, ಬಿದ್ದಿರುವುದನ್ನು ನೋಡಿ, ಅವರ ಗುರುವಾದ ಬೃಹಸ್ಪತ್ಯಾಚಾರ್ಯನು, ಮಂತ್ರಭೂಯಿಷ್ಠಗಳಾದ ಮೃತಸಂಜೀವಿನಿ ಮೊದಲಾದ ವಿದ್ಯೆಗಳಿಂದ ಅವರಿಗೆ ಚಿಕಿತ್ಸೆಗಳನ್ನು ಮಾಡಿ ಬದು ಕಿಸಿದನು. ಆದುದರಿಂದ ಈಗಲೂ ಆ ಮೂಲಿಕೆಗಳನ್ನು ತರುವುದಕ್ಕಾಗಿ ನಮ್ಮಲ್ಲಿ ಸಮರ್ಥರಾದ ಪನಸ ಸಂಪಾತಿಗಳೇ ಮೊದಲಾದ ಕೆಲವು ವಾನರರು ಶೀಘ್ರದಲ್ಲಿಯೆ ಕ್ಷೀರಸಮುದ್ರಕ್ಕೆ ಹೋಗಲಿ. ಈ ವಾನರರು ಮಾತ್ರವೇ ಪರ್ವತಗಳಲ್ಲಿರುವ ಮಹೌ ಷಧಿಗಳೆಲ್ಲವನ್ನೂ ಚೆನ್ನಾಗಿ ಬಲ್ಲರು. ದೇವತೆಗಳಿಂದ ನಿರ್ಮಿತವಾದ ಸಂಜೀವ ಕರಣಿ ಮತ್ತು ವಿಶಲ್ಯಕರಣಿಗಳೆಂಬ ಆ ದಿವ್ಯ ಮೂಲಿಕೆಗಳನ್ನು ತರಿಸುವುದಕ್ಕೆ ಇವರನ್ನು ಕಳುಹಿಸು. ಸಮುದ್ರಗಳಲ್ಲಿ ಮೇಲೆನಿಸಿಕೊಂಡ ಕ್ಷೀರಸಮುದ್ರದಲ್ಲಿ, ಮೊದಲು ದೇವತೆಗಳು ಅಮೃತಮಥನಮಾಡಿದ ಸ್ಥಳದಲ್ಲಿ ಚಂದ್ರವೆಂದೂ ದ್ರೋಣ ವೆಂದೂ ಎರಡು ಪರ್ವತಗಳುಂಟು. ಆ ಪರ್ವತಗಳಲ್ಲಿಯೇ ನಾನು ಹೇಳಿದ ದಿವ್ಯೌಷಧ ಗಳೆರಡೂ ಸಿಕ್ಕುವುವು. ಸರ್ವೋತ್ತಮಗಳಾದ ಈ ಎರಡು ಮೂಲಿಕೆಗಳನ್ನೂ ದೇವತೆಗಳೇ ಬಿತ್ತಿಬೆಳೆಸಿರುವರು. ಎಲೆ ಮಹಾರಾಜನೆ, ವಾಯುಪುತ್ರನಾದ

ಹನುಮಂತನನ್ನು ಅಲ್ಲಿಗೆ ಕಳುಹಿಸು,” ಎಂದನು. ಸುಷೇಣನು ಈ ಮಾತುಗಳನ್ನಾಡು ತ್ತಿರುವಷ್ಟರಲ್ಲಿಯೇ ಆಕಾಶದಲ್ಲಿ ಮಿಂಚುತ್ತಿರುವ ಮೇಘಗಳನ್ನು ದಿಕ್ಕು ದಿಕ್ಕಿಗೆ ಚದುರಿಸುವಂತೆಯೂ, ಸಮುದ್ರ ಜಲವನ್ನು ಅಲ್ಲೋಲ ಕಲ್ಲೋಲವಾಗಿ ಮಾಡು ವಂತೆಯೂ, ಸಮಸ್ತ ಭೂಮಿಯನ್ನೂ ನಡುಗಿಸುವಂತೆಯೂ, ಒಂದು ದೊಡ್ಡ ಬಿರು ಗಾಳಿಯು ಬೀಸಿತು. ಅದೇ ಗರುತ್ಮಂತನ ರೆಕ್ಕೆಯ ಗಾಳಿಯು. ಈ ದೊಡ್ಡ ಗಾಳಿ ಯಿಂದ ಲಂಕೆಯಲ್ಲಿದ್ದ ಮಹಾವೃಕ್ಷಗಳೆಲ್ಲವೂ ನಿರ್ಮೂಲವಾಗಿ ಕಿತ್ತು ಸಮುದ್ರದಲ್ಲಿ ಬೀಳುತ್ತಿದ್ದುವು. ಲಂಕೆಯಲ್ಲಿದ್ದ ಸರ್ಪಗಳೂ, ಸಮುದ್ರದ ಇತರ ಜಲ ಜಂತು ಗಳೂ ಭಯದಿಂದ ನಡುಗುತ್ತ ಸಮುದ್ರಜಲದಲ್ಲಿ ಪ್ರವೇಶಿಸುತ್ತಿದ್ದುವು. ಇಷ್ಟ ರಲ್ಲಿಯೇ ವಾನರರೆಲ್ಲರೂ ಅಗ್ನಿಯಂತೆ ಜ್ವಲಿಸುವ ದಿವ್ಯತೇಜಸ್ಸುಳ್ಳ ಬಲಾಢ್ಯನಾದ ಗರುತ್ಮಂತನನ್ನು ನೋಡಿದರು. ಆ ಗರುತ್ಮಂತನು ಬಂದೊಡನೆಯೇ ರಾಮಲಕ್ಷ್ಮಣರ ದೇಹಕ್ಕೆಸುತ್ತಿದ್ದ ಬಾಣರೂಪವಾದ ಸರ್ಪಗಳೆಲ್ಲವೂ ಭಯದಿಂದ ಚದುರಿ ಪಲಾಯನ ಮಾಡಿದುವು. ಆಮೇಲೆ ಗರುಡನು ನೆಟ್ಟಗೆ ರಾಮಲಕ್ಷ್ಮಣರು ಮಲಗಿದ್ದ ಸ್ಥಳಕ್ಕೆ ಬಂದು ಅವರಿಬ್ಬರನ್ನೂ ನೋಡಿ, ಅವರಿಂದ ಮನ್ನಿಸಲ್ಪಟ್ಟವನಾಗಿ, ತನ್ನ ಎರಡು ಕೈಗಳಿಂದಲೂ, ಚಂದ್ರಬಿಂಬಗಳಂತಿದ್ದ ಆ ರಾಜಕುಮಾರರ ಮುಖ ವನ್ನು ಸವರಿದನು. ಗರುತ್ಮಂತನು ಕೈಗಳಿಂದ ಅವರ ದೇಹವನ್ನು ಸವರಿದ ಕೂಡಲೇ ಅವರ ದೇಹದಲ್ಲಿದ್ದ ಗಾಯಗಳೆಲ್ಲವೂ ಆರಿ, ಅವರಿಬ್ಬರ ದೇಹವೂ ಶೀಘ್ರ ದಲ್ಲಿಯೇ ದಿವ್ಯ ವರ್ಣವನ್ನು ಹೊಂದಿ, ನುಣುಪಾಗಿ ಹೊಳಪೇರಿದುವು. ಹಾಗೆಯೇ ಅವರಿಬ್ಬರಿಗೂ ಕ್ರಮವಾಗಿ ಪರರನ್ನು ನಿಗ್ರಹಿಸತಕ್ಕ ದಿವ್ಯತೇಜಸ್ಸೂ, ಪರಾಕ್ರಮವೂ ಶರೀರ ಬಲವೂ, ದೇಹಕಾಂತಿಯೂ, ಮಹೋತ್ಸಾಹವೂ, ಸೂಕ್ಷ್ಮಾರ್ಥ ಪರಿ ಜ್ಞಾನವೂ, ವಿವೇಕವೂ, ಸ್ಮರಣಶಕ್ತಿಯೂ, ಮೊದಲಿಗಿಂತಲೂ ಇಮ್ಮಡಿಯಾದವು. ಆಗ ಗುರುತ್ಮಂತನು ಮಹಾಪರಾಕ್ರಮಿಗಳಾಗಿಯೂ, ದೇವೇಂದ್ರಸಮಾನರಾಗಿಯೂ ಇದ್ದ ಆ ರಾಜಕುಮಾರರನ್ನು ಮೇಲಕ್ಕೆತ್ತಿ, ಸಂತುಷ್ಟಾಂಗರಾದ ಅವರನ್ನು ಆಲಿಂಗಿಸಿಕೊಂಡನು. ಆಗ ರಾಮನು ಗರುತ್ಮಂತನನ್ನು ನೋಡಿ “ಅಯ್ಯಾ! ಈಗ ನಾವಿಬ್ಬರೂ ನಿನ್ನ ಅನುಗ್ರಹಬಲದಿಂದ ಇಂದ್ರಜಿತ್ತಿನಿಂದುಂಟಾದ ಮಹಾ ವಿಪತ್ತನ್ನು ತಪ್ಪಿಸಿಕೊಂಡೆವು. ಮೊದಲಿನಂತೆಯೇ ಬಲಾಢ್ಯರಾದೆವು. ಎಲೆ ಪಕ್ಷಿ ರಾಜನೆ ಈಗ ನಿನ್ನನ್ನು ನೋಡಿದುದರಿಂದ, ನಮ್ಮ ತಂದೆಯಾದ ದಶರಥ ಮಹಾ ರಾಜನನ್ನೂ, ತಾತನಾದ ಅಜಮಹಾರಾಜನನ್ನೂ ಕಣ್ಣೆದಿರಿಗೆ ನೋಡಿದಂತೆ,

ನಮ್ಮೀರ್ವರ ಮನಸ್ಸೂ ಅತ್ಯಂತ ಪ್ರಸನ್ನವಾಗುತ್ತಿರುವುದು. ಸರ್ವೋತ್ತಮವಾದ ರೂಪಸಂಪತ್ತಿಯುಳ್ಳವನೂ, ದಿವ್ಯಗಂಧಮಾಲ್ಯಗಳನ್ನು ಧರಿಸಿದವನೂ, ನಿರ್ಮಲವಾದ ವಸ್ತ್ರಗಳನ್ನು ಧರಿಸಿದವನೂ, ದಿವ್ಯವಾದ ಆಭರಣಗಳಿಂದಲಂಕೃತನೂ ಆಗಿರುವ ನಿನ್ನನ್ನು ನೋಡಿ ನನಗೆ ಆಶ್ಚರ್ಯವುಂಟಾಗಿರುವುದು. ನೀನು ಯಾರು ? ಎಂದು ಕೇಳಿದನು. ತೇಜಸ್ವಿಯೂ, ಮಹಾ ಬಲಾಢ್ಯನೂ ಆದ ಪಕ್ಷಿರಾಜನು ಸಂತೋಷದಿಂದ ಕಣ್ಣುಗಳಲ್ಲಿ ಆನಂದಬಾಷ್ಪವನ್ನು ಸುರಿಸುತ್ತ, ರಾಮನನ್ನು ನೋಡಿ, "ರಾಮಾ, ನನ್ನನ್ನು ಯಾರೆಂದು ಕೇಳುವೆಯಾ ? ನಾನು ನಿನ್ನ ಪ್ರಿಯ ಸಖನು. ನಿನಗೆ ಹೊರಗಿನ ಪ್ರಾಣದಂತಿರುವವನು. ನನಗೆ ಗರುತ್ಮಂತನೆಂದು ಹೆಸರು. ನಿಮ್ಮಿಬ್ಬರಿಗೂ ಸಹಾಯವನ್ನು ಮಾಡುವುದಕ್ಕಾಗಿಯೇ ಇಲ್ಲಿಗೆ ಬಂದೆನು. ಕ್ರೂರಕರ್ಮಿಯಾದ ಆ ಇಂದ್ರಜಿತ್ತು ಅದ್ಭುತಶಕ್ತಿರೂಪವಾದ ತನ್ನ ಮಾಯಾಬಲದಿಂದ ನಿರ್ಮಿಸಿದ ಬಹಳ ಭಯಂಕರಗಳಾದ ಈ ಸರ್ಪಾಸ್ತ್ರದ ಕಟ್ಟನ್ನು ಬಿಡಿಸುವುದಕ್ಕೆ ಮಹಾವೀರ್ಯವುಳ್ಳ ಅಸುರರಿಂದಾಗಲಿ, ಬಲಾಢ್ಯರಾದ ದಾನವರಿಂದಾಗಲಿ, ದೇವೇಂದ್ರನೊಡಗೂಡಿದ ದೇವಗಂಧರ್ವಾದಿಗಳಿಂದಾಗಲಿ ಸಾಧ್ಯವಿಲ್ಲ. ಆ ಬಾಣರೂಪಗಳಾದ ಸರ್ಪಗಳು ತೀಕ್ಷ್ಣ ದಂಷ್ಟ್ರಗಳಾಗಿದ್ದು ಕ್ರೂರ ವಿಷಗಳಿಂದ ಕೂಡಿರುವುವು. ಇಂದ್ರಜಿತ್ತಿನ ಮಾಯಾಪ್ರಭಾವದಿಂದ, ಆ ಸರ್ಪಗಳೇ ಬಾಣರೂಪಗಳಾಗಿ ನಿನ್ನನ್ನು ಬಾಧಿಸುತ್ತಿದ್ದುವು. ರಾಮಾ, ನೀನು ಧರ್ಮಜ್ಞನು, ಸತ್ಯಪರಾಕ್ರಮಿಯು, ನಿನ್ನ ತಮ್ಮನಾದ ಈ ಲಕ್ಷ್ಮಣನೂ ಕೂಡ ಯುದ್ಧದಲ್ಲಿ ಎಂತಹ ಶತ್ರುಗಳನ್ನೂ ಧ್ವಂಸಮಾಡಬಲ್ಲವನು. ಆದುದರಿಂದ ನೀವುಗಳು ಮಹಾ ಭಾಗ್ಯಶಾಲಿಗಳು. ನಿಮಗೆ ಯಾರಿಂದಲೂ ಎಂದಿಗೂ ಭಯವಿಲ್ಲವು. ನೀವು ಹೀಗೆ ನಾಗಪಾಶದಲ್ಲಿ ಕಟ್ಟುಬಿದ್ದಿರುವಿರೆಂಬ ವೃತ್ತಾಂತವನ್ನು ಕೇಳಿದೊಡನೆ ನಾನು ನಿಮ್ಮಲ್ಲಿರುವ ಸ್ನೇಹದಿಂದ, ಮಿತ್ರಧರ್ಮವನ್ನನುಸರಿಸಿ, ವೇಗದಿಂದ ಇಲ್ಲಿಗೆ ಬಂದು, ಮಹಾ ಭಯಂಕರವಾದ ಆ ನಾಗಬಂಧನವನ್ನೂ ಬಿಡಿಸಿದೆನು. ಇನ್ನು ಮೇಲೆ ನೀವು ಬಹಳ ಎಚ್ಚರಿಕೆಯಿಂದ ಆಯಾ ಅಸ್ತ್ರಗಳಿಗೆ ತಕ್ಕ ಪ್ರತ್ಯಸ್ತ್ರಗಳನ್ನು ಬಿಡುವುದರಲ್ಲಿ ಬಹಳ ಜಾಗರೂಕರಾಗಿರಬೇಕು. ಇಲ್ಲಿನ ರಾಕ್ಷಸರೆಲ್ಲರೂ ಬಹಳವಾಗಿ ಕಪಟಯುದ್ಧವನ್ನು ಮಾಡುವವರು. ಅದೇ ಅವರ ಸ್ವಭಾವವು. ಶೂರರೂ, ಶುದ್ಧಸ್ವಭಾವದವರೂ ಆದ ನೀವುಗಳು ಎಷ್ಟುಮಾತ್ರವೂ ಕಪಟಯುದ್ಧಕ್ಕೆ ಪ್ರವರ್ತಿಸುವವರಲ್ಲ. ಆದರೇನು ? ನಿಮ್ಮ ಋಜುಸ್ವಭಾವವೇ ನಿಮಗೆ ಯಾವಾಗಲೂ ಬೆಂಬಲವಾಗಿರುವುದು. ಆದರೆ ನೀವು

ಈ ರಾಕ್ಷಸರನ್ನು ಮಾತ್ರ ಯುದ್ಧದಲ್ಲಿ ಎಷ್ಟು ಮಾತ್ರವೂ ನಂಬಬಾರದು. ಅವರು
ಕಪಟಯುದ್ಧ ಮಾಡುವವರೆಂಬುವುದಕ್ಕೆ ಈಗಲೇ ನಿಮಗೆ ಚೆನ್ನಾದ ನಿದರ್ಶನವು
ಕಾಣಿಸಿತಲ್ಲವೆ? ಎಂದನು. ಗರುತ್ಮಂತನು ಹೀಗೆಂದು ಹೇಳಿ ತನ್ನ ಮಿತ್ರಭಾವ
ವನ್ನು ತೋರಿಸುವುದಕ್ಕೆ ತಕ್ಕಂತೆ, ರಾಮನನ್ನಾಲಿಂಗಿಸಿಕೊಂಡನು. ತಾನು ಹಿಂತಿರುಗಿ
ಹೋಗುವುದಕ್ಕೆ ಅವನ ಅನುಮತಿಯನ್ನು ಪಡೆಯುವುದಕ್ಕಾಗಿ ಪುನಃ ರಾಮನನ್ನು
ಕುರಿತು, "ಎಲೈ ಪ್ರಿಯಮಿತ್ರನೆ, ನೀನು ಸಮಸ್ತ ಧರ್ಮವನ್ನೂ ಬಲ್ಲವನು.
ಶತ್ರುಗಳಲ್ಲಿಯೂ ದೋಷವನ್ನೆಣಿಸದೆ ಅವರನ್ನು ಪ್ರೇಮಿಸತಕ್ಕವನು.
ಇನ್ನು ನಾನು ಹೋಗುತ್ತೇನೆ. ನನಗೆ ಅನುಮತಿಯನ್ನು ಕೊಡು. ಎಲೆ ವೀರನೆ,
ನಮ್ಮಿಬ್ಬರಿಗೂ ಹಿಂದೆ ಯಾವ ಕಾಲದಲ್ಲಿ ಹೇಗೆ ಸ್ನೇಹವುಂಟಾಯಿತೆಂಬ ವಿಷಯ
ವನ್ನು ತಿಳಿಯುವುದಕ್ಕಾಗಿ ಈಗ ನೀನು ಆತುರಪಡಬೇಕಾದುದಿಲ್ಲ. ನೀನು ಮುಂದಿನ
ಯುದ್ಧದಲ್ಲಿ ನಡೆಸಬೇಕಾದ ಕಾರ್ಯವನ್ನು ನಡೆಸಿ, ಕೃತಕೃತ್ಯನಾದಮೇಲೆ ನಮ್ಮೀರ್ವ
ರಿಗೆ ಹೇಗೆ ಸ್ನೇಹವುಂಟಾಯಿತೆಂಬುದು ತಾನಾಗಿಯೇ ತಿಳಿಯುವುದು. ರಾಮಾ,
ಇನ್ನು ಮುಂದೆ ನೀನು ಯಾವುದಕ್ಕೂ ಚಿಂತಿಸಬೇಕಾಗಿಲ್ಲ. ಮುಂದೆ ನಿನ್ನ ಬಾಣ
ಪರಂಪರೆಯಿಂದ ಈ ಲಂಕೆಯಲ್ಲಿ ಮುದುಕರು, ಮಕ್ಕಳು ಹೊರತು ಉಳಿದ ರಾಕ್ಷಸ
ರೆಲ್ಲರೂ ನಿನ್ನಿಂದ ನಿರ್ನಾಮವಾಗುವರು. ನೀನು, ನಿನಗೆ ಮುಖ್ಯಶತ್ರುವಾದ ರಾವಣ
ನನ್ನೂ ಕೊಂದು, ಸೀತೆಯನ್ನೂ ಪಡೆಯುವೆ" ಎಂದನು. ಮಹಾವೀರ್ಯಶಾಲಿಯಾದ
ಗರುತ್ಮಂತನು ಈ ಮಾತನ್ನು ಹೇಳಿ, ರಾಮಲಕ್ಷ್ಮಣರಿಬ್ಬರನ್ನೂ ವಿಪತ್ತಿನಿಂದ
ತಪ್ಪಿಸಿ ಸಮಸ್ತ ವಾನರರೂ ಆಶ್ಚರ್ಯದಿಂದ ನೋಡುತ್ತಿರುವಾಗಲೇ ಅವರನ್ನು
ಪ್ರದಕ್ಷಿಣೆಮಾಡಿ, ಬಾರಿಬಾರಿಗೂ ಅವರನ್ನು ಪ್ರೀತಿಯಿಂದಾಲಿಂಗಿಸಿ ವಾಯುವಿ
ನಂತೆ ಆಕಾಶಕ್ಕೆ ಹಾರಿಬಿಟ್ಟನು. ಆಗ ಅಲ್ಲಿದ್ದ ವಾನರ ಯೂಥಪತಿಗಳೆಲ್ಲರೂ, ರಾಮ
ಲಕ್ಷ್ಮಣರಿಗೆ ಸಂಭವಿಸಿದ್ದ ವಿಪತ್ತುನೀಗಿ, ಅವರಿಗೆ ಸೌಖ್ಯವುಂಟಾದುದನ್ನು ನೋಡಿ,
ಸಂತೋಷದಿಂದ ಸಿಂಹನಾದವನ್ನು ಮಾಡಲಾರಂಭಿಸಿದರು. ಕೆಲವು ವಾನರಸೈನಿಕರು
ಸಂತೋಷದಿಂದ ಭೇರಿಗಳನ್ನು ನುಡಿಸಿದರು. ಕೆಲವರು ಮೃದಂಗಗಳನ್ನು ಬಾರಿಸಿ
ದರು. ಕೆಲವರು ಶಂಖಗಳನ್ನೂದಿದರು. ಕೆಲವರು ಸಿಂಹನಾದಗಳನ್ನು ಮಾಡಿ
ದರು. ಮರಗಳನ್ನು ಹಿಡಿದು ಯುದ್ಧಮಾಡತಕ್ಕ ವಾನರರು, ತಮ್ಮ ವೀರ್ಯದ
ಕೊಬ್ಬಿನಿಂದ ಆಗಾಗ ಭುಜಗಳನ್ನು ಅಪ್ಪಳಿಸಿ, ಅಲ್ಲಲ್ಲಿ ಕೈಗೆ ಸಿಕ್ಕಿದ ಮರಗಳನ್ನು
ಕಿತ್ತುಕೊಂಡು, ತಿರುಗಿ ಯುದ್ಧಸನ್ನದ್ಧರಾಗಿ ನಿಂತರು. ಹೀಗೆ ವಾನರರೆಲ್ಲರೂ

ಲಕ್ಷೋಪಲಕ್ಷಸಂಖ್ಯೆಯಿಂದ ಗುಂಪುಕೂಡಿ,ತಮ್ಮ ಸಿಂಹನಾದಗಳಿಂದಲೇ ರಾಕ್ಷಸರನ್ನು ನಡುಗಿಸುತ್ತ, ಯುದ್ಧಸನ್ನದ್ಧರಾಗಿ, ಲಂಕೆಯ ಬಾಗಿಲುಗಳಿಗೆ ಬಂದರು. ಅರ್ಧರಾತ್ರಿಯಲ್ಲಿ ಹೀಗೆ ವಾನರರೆಲ್ಲರೂ ಸೇರಿ ಮಾಡುತ್ತಿದ್ದ ದೊಡ್ಡ ಸಿಂಹನಾದ ಧ್ವನಿಯು, ವರ್ಷಾರಂಭದಲ್ಲಿ ಗುಡುಗುತ್ತಿರುವ ಮೇಘಗಳ ಧ್ವನಿಯಂತೆ ಬಹಳ ಭಯಂಕರವಾಗಿ ಕೇಳಿಸಿತು.

ಇಲ್ಲಿಗೆ ಐವತ್ತನೆಯ ಸರ್ಗವು.

{ ರಾವಣಾಜ್ಞೆಯಿಂದ ಧೂಮ್ರಾಕ್ಷನು ಸೇನಾಸಮೇತನಾಗಿ ಬಂದು ವಾನರಸೇನೆಯನ್ನು ನೋಡಿದುದು. }

ಹೀಗೆ ಬಲಾಢ್ಯರಾದ ವಾನರರೆಲ್ಲರೂ ಸೇರಿ ಸಂತೋಷದಿಂದ ಸಿಂಹನಾದವನ್ನು ಮಾಡುತ್ತಿರಲು ಈ ದೊಡ್ಡ ತುಮುಲಧ್ವನಿಯು, ಅತ್ತಲಾಗಿ ಲಂಕೆಯಲ್ಲಿದ್ದ ರಾವಣನಿಗೂ, ಇತರ ರಾಕ್ಷಸರಿಗೂ ಕೇಳಿಸಿತು. ಹರ್ಷಸೂಚಕವಾದ ಈ ಗಂಭೀರ ಧ್ವನಿಯು ಕಿವಿಗೆ ಬಿದ್ದೊಡನೆ, ರಾವಣನು ಬೆಜ್ಜರಗೊಂಡು, ತನ್ನನ್ನು ಸುತ್ತಿದ್ದ ಮಂತ್ರಿಗಳನ್ನು ನೋಡಿ, “ ಆಹಾ ! ಇದೇನು ? ವಾನರರೆಲ್ಲರೂ ಹೀಗೆ ಒಟ್ಟಾಗಿ ಸಂಭ್ರಮದಿಂದ ಗರ್ಜಿಸುವುದಕ್ಕೆ ಕಾರಣವೇನು ? ಮೇಘಗಳು ಗುಡುಗುವಂತೆ ಮಹಾಧ್ವನಿಯಿಂದ ಸಿಂಹನಾದವನ್ನು ಮಾಡುತ್ತಿರುವರಲ್ಲಾ ! ಓಹೋ ಇವರಿಗೆ ಏನೋ ಬಹಳವಾಗಿ ಸಂತೋಷವು ಹುಟ್ಟಿದಂತಿದೆ ! ಇದು ನಿಜವು. ಇದರಲ್ಲಿ ಸಂದೇಹವಿಲ್ಲ. ಅವರ ಅಟ್ಟಹಾಸಕ್ಕೆ ಸಮುದ್ರವೇ ಕ್ಷೋಭೆ ಹೊಂದಿದಂತಾಗಿರುವುದು. ಇದೇನಾಶ್ಚರ್ಯವು ? ಅಲ್ಲಿ ಸಹೋದರರಾದ ರಾಮಲಕ್ಷ್ಮಣರು ತೀಕ್ಷ್ಣ ಬಾಣಗಳಿಂದ ಬದ್ಧರಾಗಿ ಶರತಲ್ಪದಲ್ಲಿ ಮಲಗಿರುವುದೆಂದರೇನು ? ವಾನರರು ಸಂತೋಷದಿಂದ ಹೀಗೆ ಸಿಂಹನಾದ ಮಾಡುವುದೆಂದರೇನು ? ಒಂದಕ್ಕೊಂದು ವಿರುದ್ಧವಾಗಿ ತೋರುವುದು. ಒಂದುವೇಳೆ ಅವರಿಬ್ಬರಿಗೂ ಅಕಸ್ಮಾತ್ತಾಗಿ ಆ ಶರಬಂಧವೇನಾದರೂ ಬಿಟ್ಟುಹೋಗಿರಬಹುದೆ ? ಈ ವಾ ನ ರ ರ ಅಟ್ಟಹಾಸ ಧ್ವನಿಯನ್ನು ಕೇಳಿದರೆ ಹಾಗೆಯೇ ಊಹಿಸಬೇಕಾಗುತ್ತದೆ” ಎಂದನು. ರಾವಣನು ಮಂತ್ರಿಗಳೊಡನೆ ಈ ಮಾತನ್ನು ಹೇಳಿ, ಸಮೀಪದಲ್ಲಿದ್ದ ಯೋಧರನ್ನು ಕುರಿತು, “ಎಲೆ ವೀರರೆ, ಈಗ ಆ ವಾನರರೆಲ್ಲರಿಗೂ ಮಹಾವ್ಯಸನಕಾಲವು ಬಂದೊದಗಿರುವಾಗಲೂ, ಅವರು ಹೀಗೆ

ಸಂತೋಷದಿಂದಿರುವುದಕ್ಕೆ ಕಾರಣವೇನೆಂಬುದನ್ನು ನೀವು ಶೀಘ್ರದಲ್ಲಿಯೇ ತಿಳಿದು ಬಂದು ನನಗೆ ಹೇಳಬೇಕು" ಎಂದು ಆಜ್ಞೆಮಾಡಿದನು. ಈ ಆಜ್ಞೆಯನ್ನು ಕೇಳಿ ದೊಡನೆಯೇ ಆ ಚಾರರು ಸಂಭ್ರಮದಿಂದೆದ್ದು, ಪ್ರಾಕಾರದ ಮೇಲೇರಿ ನಿಂತು, ಮಹಾತ್ಮನಾದ ಸುಗ್ರೀವನಿಂದ ರಕ್ಷಿತವಾಗಿ ನಿಂತಿದ್ದ ದೊಡ್ಡ ವಾನರಸೇನೆಯನ್ನು ಕಂಡರು. ಮತ್ತು ಅಲ್ಲಿ ಮಹಾನುಭಾವರಾದ ರಾಮಲಕ್ಷ್ಮಣರಿಬ್ಬರೂ ಭಯಂಕರ ವಾದ ನಾಗಪಾಶದಿಂದ ಮುಕ್ತರಾಗಿ ಸುಖದಿಂದ ನಿಂತಿರುವುದನ್ನೂ ನೋಡಿದರು. ಈ ಸನ್ನಿವೇಶಗಳನ್ನು ನೋಡಿದೊಡನೆ ಅವರೆಲ್ಲರಿಗೂ ಮನಸ್ಸಿನಲ್ಲಿ ಬಹಳ ವಿಷಾದ ಹುಟ್ಟಿತು. ಅವರುಗಳು ಭಯದಿಂದ ಎದೆಗುಂದಿದವರಾಗಿ, ಪ್ರಾಕಾರದಿಂದ ಕೆಳಗೆ ಇಳಿದು, ಕಂದಿದ ಮುಖದಿಂದ ರಾವಣನ ಬಳಿಗೆ ಬಂದರು. ಅವರೆಲ್ಲರೂ ಮುಖದಲ್ಲಿ ದೈನ್ಯವನ್ನು ತೋರಿಸುತ್ತ, ರಾವಣನ ಮುಂದೆ ನಿಂತು, ರಾಮಲಕ್ಷ್ಮಣರೀರ್ವರೂ ನಾಗಪಾಶದಿಂದ ಮುಕ್ತರಾಗಿ ಸುಖದಿಂದ ನಿಂತಿರುವರೆಂಬ ಅಪ್ರಿಯವಾರ್ತೆಯೆಲ್ಲ ವನ್ನೂ ಇದ್ದುದಿದ್ದಂತೆ ತಿಳಿಸುವುದಕ್ಕೆ ತೊಡಗಿ "ಎಲೈ ಮಹಾರಾಜನೆ! ನಿನ್ನ ಪುತ್ರನಾದ ಇಂದ್ರಜಿತ್ತು, ಭಯಂಕರವಾದ ತನ್ನ ನಾಗಪಾಶದಿಂದ ಶತ್ರುಗಳನ್ನು ಕೈಕಾಲುಗಳನ್ನಾಡಿಸುವುದಕ್ಕೆ ಸಾಧ್ಯವಿಲ್ಲದಂತೆ ಕಟ್ಟಿಹಾಕಿಬಂದನಷ್ಟೆ ? ಮಹಾಗಜ ದಂತೆ ಗಂಭೀರ ಗಮನವುಳ್ಳ ಆ ಸಹೋದರರೀರ್ವರೂ, ಆ ಕಟ್ಟುಗಳನ್ನು ಹೇಗೋ ತಪ್ಪಿಸಿಕೊಂಡು, ಕಟ್ಟಿದ ಹಗ್ಗವನ್ನು ಕಿತ್ತು ನಿಂತಿರುವ ಮದದಾನೆಗಳಂತೆ ಯುದ್ಧ ರಂಗದ ನಡುವೆ ನಿಂತಿರುವರು" ಎಂದರು. ಈ ಮಾತನ್ನು ಕೇಳಿದ ರಾವಣನು ಮನಸ್ಸಿನಲ್ಲಿ ಮಿತಿಮೀರಿದ ದುಃಖವನ್ನೂ, ವಿಷಾದವನ್ನೂ ಹೊಂದಿ, ಕಂದಿದ ಮುಖ ವುಳ್ಳವನಾಗಿ, ತನ್ನಲ್ಲಿ ತಾನು, ಆಹಾ! ಇದೇನಿದು? ತನ್ನ ವೀರ್ಯದಿಂದ ದೇವೇಂದ್ರನನ್ನೇ ಜಯಿಸಿಬಂದ ನನ್ನ ಮಗನು, ತಾನು ವರಬಲದಿಂದ ಸಂಪಾದಿಸಿದ ತೀಕ್ಷ್ಣಬಾಣಗಳಿಂದಲೇ ಆ ಸಹೋದರರನ್ನು ಅಲ್ಲಾಡದ ಹಾಗೆ ಕಟ್ಟಿಬಂದನು. ಅವುಗಳಾದರೂ ಸಾಮಾನ್ಯವಾದುವುಗಳೆ ? ವಿಷಸರ್ಪಗಳಂತೆ ಕ್ರೂರವಾದುವು ಯಾರಲ್ಲಿಯೂ ವ್ಯರ್ಥವಾಗತಕ್ಕವುಗಳಲ್ಲ. ಸೂರ್ಯನಿಗೆಣೆಯಾದ ತೇಜಸ್ಸುಳ್ಳವು ಗಳು! ಇಂತಹ ದಿವ್ಯಾಸ್ತ್ರದಿಂದ ಕಟ್ಟಿಬಂದಿರುವಾಗಲೂ ಆ ನನ್ನ ವೈರಿಗಳು, ಆ ಕಟ್ಟನ್ನೇ ಬಿಡಿಸಿಕೊಂಡಮೇಲೆ, ಇನ್ನು ನನ್ನ ಸೈನ್ಯಗಳಿಗೆಲ್ಲಾ ಪ್ರಾಣ ಸಂದೇಹವು ಸಂಭವಿಸಿತೆಂದೇ ನನಗೆ ತೋರುವುದು. ಮೊದಲು ಅನೇಕಾವರ್ತಿ, ಎಷ್ಟೋ ಯುದ್ಧ ಗಳಲ್ಲಿ ಶತ್ರುಗಳ ಪ್ರಾಣಗಳನ್ನು ಹೀರಿದುವುಗಳಾಗಿಯೂ, ವಾಸುಕಿಯಂತೆ

ತೇಜಸ್ಸಿನಿಂದ ದೇದೀಪ್ಯಮಾನಗಳಾಗಿಯೂ ಇದ್ದ ಆ ಅಸ್ತ್ರಗಳೇ ಹೀಗೆ ವಿಫಲವಾದ ಮೇಲೆ ಇನ್ನು ಹೇಳುವುದೇನು? ಎಂದು ಚಿಂತೆಗೊಂಡನು. ಆಮೇಲೆ ಅವನು ಕ್ರಮ ಕ್ರಮವಾಗಿ ಕೋಪವನ್ನು ತಂದುಕೊಂಡು, ವಿಷಸರ್ಪದಂತೆ ನಿಟ್ಟುಸಿರನ್ನು ಬಿಡುತ್ತ, ರಾಕ್ಷಸರ ನಡುವೆ ನಿಂತಿದ್ದ ಧೂಮ್ರಾಕ್ಷನೆಂಬ ಸೇನಾಪತಿಯನ್ನು ನೋಡಿ "ಧೂಮ್ರಾಕ್ಷಾ ! ನಡೆದ ಸಂಗತಿಯನ್ನು ಕೇಳಿದೆಯಷ್ಟೆ? ಆದರೇನು ! ಇದೊಂದೂ ನಿನ್ನ ಪರಾಕ್ರಮಕ್ಕೆ ಇದಿರಲ್ಲ. ನಿನ್ನ ವೀರ್ಯವೋ ಬಹಳ ಭಯಂಕರವಾದುದು. ಆದುದರಿಂದ ಈಗಲೇ ನೀನು ದೊಡ್ಡ ಸೈನ್ಯವನ್ನು ಸೇರಿಸಿಕೊಂಡು ಹೊರಡು" ಎಂದನು. ತನ್ನಯೋಧರ ಬಲಾಬಲವನ್ನು ಚೆನ್ನಾಗಿ ಬಲ್ಲ ರಾವಣನು ಹೀಗೆ ಆಜ್ಞೆ ಮಾಡಿದೊಡನೆ, ಧೂಮ್ರಾಕ್ಷನು ಬಹಳ ಸಂತೋಷಗೊಂಡವನಾಗಿ ಆತನಿಗೆ ನಮಸ್ಕರಿಸಿ, ಆ ಭವನದಿಂದ ಹೊರಟನು. ಹೀಗೆ ಧೂಮ್ರಾಕ್ಷನು ಆ ಭವನದಿಂದ ಹೊರಟು, ಬಲಾಧ್ಯಕ್ಷನನ್ನು ಕುರಿತು, "ಎಲೈ ಸೇನಾಪತಿ ! ನಾನು ಯುದ್ಧಕ್ಕೆ ಹೊರಡುತ್ತಿರುವೆನು. ನನ್ನ ಸಮಸ್ತ ಸೈನ್ಯವನ್ನೂ ಕರೆತರಿಸು ! ಆಲಸ್ಯವಿಲ್ಲದೆ ತ್ವರೆಮಾಡು" ಎಂದನು. ರಾಜಾಜ್ಞೆಯನ್ನನುಸರಿಸಿ, ಧೂಮ್ರಾಕ್ಷನು ಈ ಮಾತನ್ನು ಹೇಳಿದೊಡನೆ ಆ ಬಲಾಧ್ಯಕ್ಷನು ತನ್ನ ಕೈಕೆಳಗಿನ ಸಮಸ್ತ ಸೇನೆಯನ್ನೂ ಸಿದ್ಧಪಡಿಸಿದನು. ಬಲವಂತರಾದ ಅನೇಕ ಯೋಧರು ತಮ್ಮ ತಮ್ಮ ಶೌರ್ಯ ಸೂಚಕ ಗಳಾದ ವೀರಗಂಟೆಗಳನ್ನು ನಡುವಿಗೆ ಕಟ್ಟಿಕೊಂಡು, ಶೂಲಮುದ್ಗರಗಳೇ ಮೊದಲಾದ ವಿವಿಧಾಯುಧಗಳನ್ನು ಕೈಯಲ್ಲಿ ಹಿಡಿದವರಾಗಿ, ಉತ್ಸಾಹದಿಂದ ಸಿಂಹನಾದ ಮಾಡುತ್ತ, ಧೂಮ್ರಾಕ್ಷನನ್ನು ಪರಿವೇಷ್ಟಿಸಿ, ಸಿದ್ಧರಾಗಿ ನಿಂತರು. ಆ ಯೋಧ ರೆಲ್ಲರೂ, ಅವರವರ ಯುದ್ಧಾಭ್ಯಾಸಕ್ಕೆ ತಕ್ಕಂತೆ, ಕೆಲವರು ಗದೆಗಳನ್ನೂ ಕೆಲವರು ಪಟ್ಟಿಸಗಳನ್ನೂ, ಕೆಲವರು ಕಬ್ಬಿಣದ ಗುದಿಗೆಗಳನ್ನೂ, ಕೆಲವರು ಮುಸಲಗಳನ್ನೂ, ಕೆಲವರು ಪರಿಘಗಳನ್ನೂ, ಕೆಲವರು ಭಿಂಡಿವಾಲಗಳನ್ನೂ, ಕೆಲವರು ಭಲ್ಯಗಳನ್ನೂ, ಕೆಲವರು ಪ್ರಾಸಗಳನ್ನೂ, ಕೆಲವರು ಗಂಡುಗೊಡಲಿಗಳನ್ನೂ ಹಿಡಿದು ಮೇಘಗಳಂತೆ ಗರ್ಜಿಸುತ್ತ ನಾಲ್ಕು ಕಡೆಗಳಿಂದಲೂ ಹೊರಟರು. ಬೇರೆ ಕೆಲವು ರಾಕ್ಷಸವೀರರು ಯುದ್ಧ ಕವಚಗಳನ್ನು ಧರಿಸಿ, ಧ್ವಜಾಲಂಕೃತಗಳಾಗಿಯೂ ಸುವರ್ಣಗವಾಕ್ಷಗಳಿಂದ ಶೋಭಿತವಾಗಿಯೂ, ವಿಚಿತ್ರಮುಖಗಳುಳ್ಳ ಕತ್ತೆಗಳ ಮೇಲೆ ಹೂಡಿದವುಗಳಾಗಿಯೂ ಇರುವ ಉತ್ತಮ ರಥಗಳನ್ನೇರಿ ಹೊರಟರು. ತೀವ್ರ ಧ್ವನಿಯುಳ್ಳ ಧೂಮ್ರಾಕ್ಷನು ತೋಳಗಳಂತೆಯೂ, ಸಿಂಹಗಳಂತೆಯೂ ಮುಖವುಳ್ಳ ಕತ್ತೆಗಳಿಂದ ಹೂಡಿದ ಒಂದು

ಸುವರ್ಣರಥವನ್ನೇರಿದನು. ಹೀಗೆ ಮಹಾ ವೀರ್ಯಶಾಲಿಯಾದ ಆ ಧೂಮ್ರಾಕ್ಷನು ದೊಡ್ಡ ಸಿಂಹನಾದ ಧ್ವನಿಯೊಡನೆ ತನ್ನ ರಥವನ್ನೇರಿ, ಅನೇಕ ಯೋಧರಿಂದ ಪರಿವೃತ ನಾಗಿ ಮಹೋತ್ಸಾಹದಿಂದ ನಗುತ್ತ, ನರಯೂಥಪತಿಯಾದ ಹನುಮಂತನು ತಡೆದು ನಿಂತಿದ್ದ ಪಶ್ಚಿಮದ್ವಾರದ ಕಡೆಗೆ ಬಂದನು. ಭಯಂಕರ ಪರಾಕ್ರಮವುಳ್ಳ ಆ ಘೋರ ರಕ್ಕಸನು ಹೀಗೆ ಯುದ್ಧೋದ್ಯುಕ್ತನಾಗಿ ಬರುತ್ತಿರುವಾಗಲೇ, ಅವನಿಗೆ ಅಡ್ಡಲಾಗಿ ಅನೇಕ ದುರ್ನಿಮಿತ್ತಗಳು ಕಾಣಿಸಿಕೊಂಡುವು. ಅಪಶಕುನ ಸೂಚಕಗಳಾದ ಪಕ್ಷಿಗಳು ಅಡ್ಡ ಬರುತ್ತಿದ್ದುವು. ಅವನ ರಥದ ಶಿಖರದಮೇಲೆ ಒಂದು ದೊಡ್ಡ ರಣಹದ್ದು ಬಂದು ಬಿದ್ದಿತು. ಅವನ ಧ್ವಜಾಗ್ರದಲ್ಲಿ ಶವಭಕ್ಷಕಗಳಾದ ಹಕ್ಕಿಗಳು ಸಾಲಾಗಿ ಬಂದು ಸೇರಿ ದುವು. ರಕ್ತ ದಿಗ್ಧವಾದ ಮತ್ತು ಬಿಳುಪಾದ ಒಂದು ದೊಡ್ಡ ಮುಂಡವು ವಿಕೃತಧ್ವನಿ ಯಿಂದ ರೋದನಮಾಡುತ್ತ ಧೂಮ್ರಾಕ್ಷನ ಮುಂಭಾಗದಲ್ಲಿ, ಅಂತರಿಕ್ಷದಿಂದ ಕೆಳಗೆ ಬಿದ್ದಿತು. ಮೇಘದಿಂದ ರಕ್ತವರ್ಷವು ಸುರಿಯಿತು. ಭೂಮಿಯು ಗಡಗಡನೆ ನಡುಗು ತ್ತಿತ್ತು. ಸಿಡಿಲು ಹೊಡೆದಂತೆ ಮಹಾಧ್ವನಿಯಿಂದ ಇದಿರುಗಾಳಿಯು ಬೀಸುತ್ತಿದ್ದಿತು. ಸಕಲ ದಿಕ್ಕುಗಳಲ್ಲಿಯೂ, ಕತ್ತಲೆ ಕವಿದು ಸ್ವಲ್ಪ ಮಾತ್ರವೂ ಪ್ರಕಾಶವಿಲ್ಲದಂತಾ ಯಿತು. ರಾಕ್ಷಸರಿಗೆ ಪ್ರಾಣನಾಶಸೂಚಕಗಳಾಗಿಯೂ, ಮಹಾಘೋರಗಳಾಗಿಯೂ ಇರುವ ಈ ಉತ್ಪಾತಗಳನ್ನು ನೋಡಿ, ಧೂಮ್ರಾಕ್ಷನ ಮನಸ್ಸಿನಲ್ಲಿ ಮಹತ್ತಾದ ಭಯವೂ ಚಿಂತೆಯೂ ಹುಟ್ಟಿತು. ಧೂಮ್ರಾಕ್ಷನಿಗೆ ಮುಂದಾಗಿ ಬರುತ್ತಿದ್ದ ರಾಕ್ಷಸ ರೆಲ್ಲರೂ ಭಯದಿಂದ ಹಿಂದುಮುಂದು ತೋರದೆ ಸ್ತಬ್ಧರಾದರು. ಇಷ್ಟಾದರೂ ಬಲಾಢ್ಯ ನಾದ ಧೂಮ್ರಾಕ್ಷನು, ಆ ಉತ್ಪಾತಗಳನ್ನು ಲಕ್ಷ್ಯಮಾಡದೆ, ಧೈರ್ಯದಿಂದ ಮನಸ್ಸನ್ನು ಸ್ಥಿರಪಡಿಸಿಕೊಂಡು ಅನೇಕ ವೀರಯೋಧರಿಂದ ಪರಿವೃತನಾಗಿ, ಯುದ್ಧೋತ್ಸಾಹದಿಂದ ಪಟ್ಟಣವನ್ನು ಬಿಟ್ಟುಹೊರಟು ಶ್ರೀರಾಮನ ಭುಜಬಲದಿಂದ ರಕ್ಷಿತವಾಗಿಯೂ ಮಹಾ ಸಮುದ್ರದಂತೆ ಅಪಾರವಾಗಿಯೂ ಇದ್ದ ರಾಮನ ಸೈನ್ಯವನ್ನು ಕಂಡನು.

ಇಲ್ಲಿಗೆ ಐವತ್ತೊಂದನೆಯ ಸರ್ಗವು.

ಧೂಮ್ರಾಕ್ಷನು ಹನುಮಂತನಿಂದ ಹತನಾದುದು.

ಇತ್ತಲಾಗಿ ವಾನರರೂ ಯುದ್ಧಾಕಾಂಕ್ಷೆಯಿಂದಲೇ ಕಾದಿದ್ದುದರಿಂದ ತಮಗೆ ಎದುರಾಗಿ ಧೂಮ್ರಾಕ್ಷನು ಯುದ್ಧಕ್ಕೆ ಬರುತ್ತಿರುವುದನ್ನು ಕಂಡೊಡನೆ, ಪರಮ

ಸಂತೋಷದಿಂದ ಸಿಂಹನಾದಗಳನ್ನು ಮಾಡಿದರು. ಎಲ್ಲರೂ ಒಂದೊಂದು ವೃಕ್ಷಗಳನ್ನೆತ್ತಿಕೊಂಡು ಹೊರಟರು. ರಾಕ್ಷಸರೂ ಶೂಲ ಮುದ್ಗರಾದ್ಯಾಯುಧಗಳ ಸಮೇತ ಮುಂದೆ ಬಂದರು. ಈ ಎರಡು ಪಕ್ಷದವರೂ ಪ್ರಬಲವಾಗಿ ಹೊಡೆದಾಡುವುದಕ್ಕೆ ತೊಡಗಿದರು. ಬಹಳ ಭಯಂಕರವಾದ ತುಮುಲಯುದ್ಧವು ನಡೆಯಿತು. ಘೋರರಾಕ್ಷಸರೆಲ್ಲರೂ ಒಂದಾಗಿ ಸೇರಿಬಂದು ಮಹಾಭಯಂಕರಗಳಾದ ಪರಿಘಗಳಿಂದಲೂ, ತ್ರಿಶೂಲಗಳಿಂದಲೂ ಇನ್ನೂ ಬಗೆಬಗೆಯ ಆಯುಧಗಳಿಂದಲೂ, ನಾನಾಕಡೆಗಳಲ್ಲಿಯೂ ವಾನರರನ್ನು ಕತ್ತರಿಸುತ್ತ ಬಂದರು. ಇತ್ತಲಾಗಿ ವಾನರರೂ ರಾಕ್ಷಸರನ್ನು ವೃಕ್ಷಗಳಿಂದ ಬಡಿದು ಕೊಲ್ಲುತ್ತಿದ್ದರು. ಈ ಕಪಿಗಳ ಹಾವಳಿಯನ್ನು ನೋಡಿ ಶತ್ರುಗಳಿಗೆ ಕೋಪವು ಹೆಚ್ಚಿತು. ಅವರೆಲ್ಲರೂ, ಅತಿ ಭಯಂಕರಗಳಾಗಿಯೂ, ಕಾಲಾಗ್ನಿಯಂತೆ ದೇದೀಪ್ಯಮಾನವೂ, ಕಂಕಪತ್ರವುಳ್ಳವುಗಳೂ ಆದ ತೀಕ್ಷ್ಣಗಳಾದ ಬಾಣಗಳಿಂದ ವಾನರರನ್ನು ಪ್ರಹರಿಸುತ್ತಿದ್ದರು. ಹೀಗೆ ರಾಕ್ಷಸರು ದೊಡ್ಡಗದೆಗಳನ್ನೂ, ಪಟ್ಟಸಗಳನ್ನೂ, ಕೂಟಮುದ್ಗರಾದ್ಯಾಯುಧಗಳನ್ನೂ ಹಿಡಿದು ಕಂಡಕಂಡಕಡೆ ವಾನರರನ್ನು ಧ್ವಂಸಮಾಡುತ್ತಿರಲು, ಬಲಾಢ್ಯರಾದ ವಾನರರೆಲ್ಲರೂ ರೋಷೋತ್ಸಾಹದಿಂದ ಸ್ವಲ್ಪಮಾತ್ರವೂ ಹಿಂಜರಿಯದೆ ಹೊಡೆದಾಡಿದರು. ಶೂಲಮುದ್ಗರಾದ್ಯಾಯುಧಗಳಿಂದ ತಾವು ಗಾಯಹೊಂದಿದ ರೋಷದಿಂದ, ಮರಗಳನ್ನೂ, ಶಿಲೆಗಳನ್ನೂ ಕೈಗೆತ್ತಿಕೊಂಡರು. ಆ ವಾನರವೀರರೆಲ್ಲರೂ, ಸಿಂಹನಾದ ಮಾಡುತ್ತಾ, ತಮ್ಮ ತಮ್ಮ ಹೆಸರುಗಳನ್ನು ವೀರವಾದದಿಂದುಗ್ಗಡಿಸುತ್ತ, ಕಂಡಕಂಡ ಶತ್ರುಗಳನ್ನು ಎಲ್ಲಕಡೆಗಳಲ್ಲೂ ಪ್ರಹರಿಸುತ್ತಿದ್ದರು. ಹೀಗೆ ವಾನರರು ಶಿಲೆಗಳನ್ನೂ ವೃಕ್ಷಗಳನ್ನೂ ಹಿಡಿದು ರಾಕ್ಷಸರನ್ನೂ, ರಾಕ್ಷಸರು ವಿವಿಧಾಯುಧಗಳನ್ನು ಹಿಡಿದು ವಾನರರನ್ನೂ, ಪ್ರಹರಿಸುತ್ತಿರಲು, ಈ ವಾನರರಾಕ್ಷಸರ ಯುದ್ಧವು ಮಹಾಭಯಂಕರವಾಗಿಯೂ, ಅತ್ಯಾಶ್ಚರ್ಯವಾಗಿಯೂ ಕಾಣಿಸಿತು. ಹೀಗಿರುವಾಗ ವಾನರರ ಕೈಮೇಲಾಯಿತು. ಜಯಶಾಲಿಗಳಾದ ವಾನರರ ಕೈಯಿಂದ ಹತರಾದ ಕೆಲವು ರಾಕ್ಷಸರು ಕೈಕಾಲು ಮುಂತಾದ ಅವಯವಗಳೇ ಕಾಣದಂತೆ ನಜ್ಜುಗುಜ್ಜಾಗಿ ಕೆಳಗೆ ಬಿದ್ದರು. ಕೆಲವು ವಾನರರು, ಅಲ್ಲಲ್ಲಿ ತಮ್ಮ ಕೈಗೆ ಸಿಕ್ಕಿದ ರಾಕ್ಷಸರನ್ನು ಹಿಡಿದು, ಎರಡು ತುಂಡಾಗಿ ಸೀಳಿ ಹಾಕುತ್ತಿದ್ದರು. ಕೆಲವರನ್ನು ಮರದ ಕೊಂಬೆಗಳಿಂದ ಬಡಿದು ಕೊಂದು ಹೆಣಗಳನ್ನು ರಾಶಿ ಹಾಕುತ್ತಿದ್ದರು. ಕೆಲವರನ್ನು ಶಿಲೆಗಳಿಂದ ಚೂರು ಮಾಡಿದರು. ಕೆಲವರನ್ನು

ಹಲ್ಲುಗಳಿಂದ ಸಿಗಿದುಹಾಕಿದರು. ಅಲ್ಲಲ್ಲಿ ವಾನರರು ಬೀಸಿಬಡಿದ ಪರ್ವತಶಿಖರ ಗಳಿಂದ ಮುರಿದುಬಿದ್ದ ಧ್ವಜಗಳೂ, ಸತ್ತುಬಿದ್ದಿದ್ದ ಕತ್ತೆಗಳೂ, ಚೂರ್ಣಮಾಡಲ್ಪಟ್ಟ ರಥಗಳೂ, ಉರುಳಾಡುತ್ತಿದ್ದ ರಾಕ್ಷಸರ ದೇಹಗಳೂ, ನೆಲಕ್ಕುರುಳಿದ ಪರ್ವತಾ ಕಾರಗಳಾದ ಆನೆಗಳೂ, ಕತ್ತರಿಸಿಬಿದ್ದ ಕುದುರೆಗಳೂ,ಮೂರ್ಛಿತರಾದ ಮಾವುತರೂ, ಆ ಯುದ್ಧಭೂಮಿಯ ಸಮಸ್ತ ಭಾಗಗಳಲ್ಲಿಯೂ ಎಡಬಿಡದೆ ತುಂಬಿದ್ದುವು. ಅಲ್ಲಲ್ಲಿ ಭಯಂಕರ ಪರಾಕ್ರಮಿಗಳಾದ ಕೆಲವು ವಾನರರು, ಮಹಾವೇಗದಿಂದ ಆಗಾಗ ಮೇಲೆ ಹಾರಿ ತಮ್ಮ ಕೂರುಗುರುಗಳಿಂದ ಶತ್ರುಗಳ ಮುಖಗಳನ್ನು ಪರಚು ತ್ತಿರಲು, ಅದರಿಂದ ಅನೇಕ ರಾಕ್ಷಸರು ಅಂದಗೆಟ್ಟ ಮುಖಗಳಿಂದಲೂ, ಕೆದರಿದ ಕೂದಲುಗಳಿಂದಲೂ ವಿಕಾರರೂಪವುಳ್ಳವರಾಗಿ, ರಕ್ತಗಂಧದೊಡನೆ ಮೂರ್ಛಿತ ರಾಗಿ ನೆಲಕ್ಕೆ ಬಿದ್ದರು. ಈ ವಾನರರ ಚೇಷ್ಟೆಯನ್ನು ನೋಡಿ ಕೆಲವು ರಾಕ್ಷಸರು ಮಿತಿಮೀರಿ ಕೋಪಗೊಂಡು, ಭಯಂಕರ ಧ್ವನಿಯಿಂದ ಗರ್ಜಿಸುತ್ತ, ವಜ್ರಾ ಯುಧಗಳಂತೆ ಕಠಿಣಸ್ಪರ್ಶವುಳ್ಳ ತಮ್ಮ ಅಂಗೈಗಳನ್ನು ಮೇಲೆತ್ತಿಕೊಂಡು ಆ ವಾನರ ರನ್ನು ಇದಿರಿಸಿಹೋದರು. ಹೀಗೆ ರಾಕ್ಷಸರು ತಮ್ಮಮೇಲೆ ನುಗ್ಗಿ ಬರುವುದನ್ನು ಕಂಡು, ಅವರಿಗಿಂತಲೂ ಮಹಾವೇಗವುಳ್ಳ ಕೆಲವು ವಾನರರು ಮುಂದೆ ನುಗ್ಗಿ, ಅವರನ್ನು ತಮ್ಮ ಮುಷ್ಟಿಗಳಿಂದ ಹೊಡೆದು, ಕಾಲುಗಳಿಂದೊದೆದು, ಹಲ್ಲುಗಳಿಂದ ಸಿಗಿದು, ವೃಕ್ಷಗಳಿಂದ ಬಡಿದು ಕೊಲ್ಲುತ್ತಿದ್ದರು. ಈ ವಾನರರ ಪ್ರಹಾರವನ್ನು ತಡೆಯಲಾರದೆ ಅಲ್ಲಿದ್ದ ರಾಕ್ಷಸರೆಲ್ಲರೂ ಭಯದಿಂದ ಓಡಿಹೋಗುವುದಕ್ಕೆ ತೊಡಗಿದರು. ಇಷ್ಟರಲ್ಲಿ ಸೇನಾಪತಿಯಾದ ಧೂಮ್ರಾಕ್ಷನು ತನ್ನ ಕಡೆಯ ಸೈನಿಕರು ಪಲಾಯನ ಮಾಡುವುದನ್ನು ನೋಡಿ, ಈ ವಾನರರ ಕಾರ್ಯಕ್ಕಾಗಿ ಕೋಪಗೊಂಡು, ಯುದ್ಧೋತ್ಸಾಹದಿಂದ ಕೊಬ್ಬಿದ ಆ ವಾನರರನ್ನು ತಾನೇ ಇದಿರಿಸಿ ಯುದ್ಧ ಮಾಡುವುದಕ್ಕೆ ತೊಡಗಿದನು. ಇವನ ಕಡೆಯ ಕೆಲವು ರಾಕ್ಷಸರು ಅಲ್ಲಲ್ಲಿ ಕೆಲವು ವಾನರರನ್ನು ಪ್ರಾಸಗಳಿಂದ ಪ್ರಹರಿಸಿ, ಅವರ ಸರ್ವಾಂಗಗಳಲ್ಲಿಯೂ ರಕ್ತವು ಸೋರುವ ಹಾಗೆ ಗಾಯಪಡಿಸಿದರು. ಕೆಲವರನ್ನು ಮುದ್ಗರಗಳಿಂದ ಹೊಡೆದು ನೆಲಕ್ಕೆ ಕೆಡಹಿದರು. ಕೆಲವರನ್ನು ಪರಿಘಗಳಿಂದಲೂ, ಕೆಲವರನ್ನು ಭಿಂಡಿವಾಲಗಳಿಂದಲೂ ಭೇದಿಸಿ ತುಂಡುಮಾಡಿದರು. ಕೆಲವರನ್ನು ಪಟ್ಟಿಸಗಳಿಂದ ತಿವಿದುಕೊಂದರು. ಕೆಲವ ರನ್ನು ಶೂಲಗಳಿಂದ ಇರಿದು ರಕ್ತಸ್ರಾವವನ್ನುಂಟುಮಾಡಿದರು. ಈ ರಾಕ್ಷಸರ ಪ್ರಹಾರವನ್ನು ತಡೆಯಲಾರದೆ, ಕೆಲವು ವಾನರರು ಭಯದಿಂದ ರಣರಂಗವನ್ನು

ಬಿಟ್ಟು ಪಲಾಯನ ಮಾಡಿದರು. ಹೀಗೆ ರಾಕ್ಷಸರ ಪ್ರಹಾರಕ್ಕೆ ಸಿಕ್ಕಿದ ವಾನರರಲ್ಲಿ, ಎದೆ ಸೀಳಿ ಸತ್ತವರು ಕೆಲವರು, ಪಕ್ಕದ ಕರುಳು ಕಿತ್ತು ಸತ್ತವರು ಕೆಲವರು, ತ್ರಿಶೂಲಗಳಿಂದ ತಿವಿಯಲ್ಪಟ್ಟು, ಕಿತ್ತ ನರಗಳೊಡನೆ ಸತ್ತುಬಿದ್ದವರು ಕೆಲವರು. ಹೀಗೆ ವಾನರ ರಾಕ್ಷಸರಿಗೆ ನಡೆದ ಆ ದೊಡ್ಡ ತುಮುಲ ಯುದ್ಧವು ಅತ್ಯಂತ ಭಯಂಕರ ವಾಯಿತು. ರಣರಂಗದ ಸಮಸ್ತ ಭಾಗವೂ ಶಬ್ದಪ್ರಹಾರಗಳಿಂದಲೇ ತುಂಬಿ ಹೋಯಿತು. ಯಾವಕಡೆಯನ್ನು ನೋಡಿದರೂ, ಶಿಲೆಗಳೂ, ವೃಕ್ಷಗಳೂ ದಟ್ಟವಾಗಿ ತುಂಬಿದ್ದವು. ಧನುಷ್ಟಂಕಾರಗಳೆಂಬ ತಂತಿಯ ವಾದ್ಯಗಳಿಂದಲೂ, ಗದ್ಗದಸ್ವರ ಗಳೆಂಬ ತಾಳಗಳಿಂದಲೂ, ಕುಗ್ಗಿದ ದೀನ ಧ್ವನಿಯೆಂಬ ಸಂಗೀತದಿಂದಲೂ, ಆ ರಣರಂಗವು, ಸಂಗೀತಶಾಲೆಯಂತೆ ಕಾಣಿಸುತ್ತಿತ್ತು. ಇಷ್ಟರಲ್ಲಿ ಧೂಮ್ರಾಕ್ಷನು, ವೀರ್ಯದ ಕೊಬ್ಬಿನಿಂದ ನಗುತ್ತ, ರಣಾಗ್ರದಲ್ಲಿ ಧನುರ್ಧಾರಿಯಾಗಿ ಮುಂದೆ ಬಂದು, ಬಾಣವರ್ಷವನ್ನು ಕರೆದು, ವಾನರರನ್ನು ಚದರಿಸಿ ದಿಕ್ಕುದಿಕ್ಕಿಗೆ ಓಡಿಸುತ್ತಿದ್ದನು. ಇತ್ತಲಾಗಿ ಹನುಮಂತನು, ತನ್ನ ಕಡೆಯ ವಾನರಸೈನ್ಯವೆಲ್ಲವೂ, ಧೂಮ್ರಾಕ್ಷನ ಬಾಣಪ್ರಹಾರದಿಂದ ನೊಂದುದನ್ನು ಕಂಡು, ಅತಿ ಕೋಪಾವಿಷ್ಟನಾಗಿ, ಒಂದು ದೊಡ್ಡ ಶಿಲೆಯನ್ನೆತ್ತಿಕೊಂಡು ಆ ಧೂಮ್ರಾಕ್ಷನಿಗಿದಿರಾಗಿ ಹೊರಟನು. ಸಹಜ ವಾಗಿಯೇ ಪಿಂಗಳ ನೇತ್ರವುಳ್ಳವನಾಗಿಯೂ, ತನ್ನ ತಂದೆಯಾದ ವಾಯುದೇವನಿ ಗೆಣೆಯಾದ ಪರಾಕ್ರಮಿಯೂ ಆದ ಆ ಹನುಮಂತನು, ಕೋಪದಿಂದ ಮತ್ತಷ್ಟು ಕೆಂಪೇರಿದ ಕಣ್ಣುಳ್ಳವನಾಗಿ ತಾನು ಹೊತ್ತು ತಂದಿದ್ದ ದೊಡ್ಡ ಶಿಲೆಯನ್ನು ಧೂಮ್ರಾಕ್ಷನ ರಥದಮೇಲೆ ಬೀಸಿದನು. ಇದನ್ನು ನೋಡಿದೊಡನೆ ಧೂಮ್ರಾಕ್ಷನು ಧನುಸ್ಸು ತೆಗೆದುಕೊಂಡು, ವೇಗದಿಂದ ರಥವನ್ನು ಬಿಟ್ಟು ಕೆಳಕ್ಕೆ ಹಾರಿ ನೆಲದಮೇಲೆ ನಿಂತುಕೊಂಡನು. ಹನುಮಂತನು ಎಸೆದ ಆ ದೊಡ್ಡ ಶಿಲೆಯು ಧೂಮ್ರಾಕ್ಷನ ರಥ ವನ್ನೂ ಅದರಲ್ಲಿದ್ದ ಬಿಲ್ಲನ್ನೂ ಪುಡಿ ಪುಡಿ ಮಾಡಿತು. ಹನುಮಂತನು ಹೀಗೆ ಶತ್ರುವಿನ ರಥವನ್ನು ಮುರಿದಮೇಲೆ, ಸ್ಕಂಧಗಳಿಂದಲೂ, ಶಾಖೆಗಳಿಂದಲೂ ಕೂಡಿದ ದೊಡ ಮರಗಳನ್ನು ಕಿತ್ತು ತಂದು, ಇತರ ರಾಕ್ಷಸರೊಡನೆ ಯುದ್ಧಕ್ಕೆ ನಿಂತನು. ಅಲ್ಲಲ್ಲಿ ಕೆಲವರು ಈ ಆಂಜನೇಯನ ವೃಕ್ಷಪ್ರಹಾರದಿಂದ ತಲೆಯೊಡೆದು ರಕ್ತದಿಂದ ತೊಯ್ದು ಕೆಳಗುರುಳಿದರು. ಅನಂತರ ಹನುಮಂತನು ಒಂದು ದೊಡ್ಡ ಪರ್ವತಶಿಖರ ವನ್ನು ತೆಗೆದುಕೊಂಡು, ಧೂಮ್ರಾಕ್ಷನಿಗೆ ಇದಿರಾದನು. ಹೀಗೆ ತನ್ನ ಕಡೆಗೆ ಬರು ತ್ತಿರುವ ಹನುಮಂತನನ್ನು ನೋಡಿ, ಧೂಮ್ರಾಕ್ಷನು ತನ್ನ ಗದೆಯನ್ನು ತಿರುಗಿಸಿ,

ಸಿಂಹನಾದ ಮಾಡುತ್ತಾ ಹನುಮಂತನನ್ನಿದಿರಿಸಿ, ಅತ್ಯಾಕ್ರೋಶದಿಂದ ಕೂಡಿದವನಾಗಿ, ಸುತ್ತಲೂ ಮುಳ್ಳುಗಳಿದ್ದ ಆ ಗದೆಯನ್ನು ಹನುಮಂತನ ಮೇಲೆ ಪ್ರಯೋಗಿಸಿದನು. ಭಯಂಕರಾಕಾರವುಳ್ಳ ಆ ದೊಡ್ಡ ಗದೆಯಿಂದ ಪ್ರಹರಿಸಲ್ಪಟ್ಟರೂ, ವಾಯುವಿನಂತೆ ಮಹಾವೇಗವುಳ್ಳ ಹನುಮಂತನು, ಸ್ವಲ್ಪಮಾತ್ರವೂ ಅದನ್ನು ಗಮನಿಸದೆ, ತಾನು ಹೊತ್ತು ತಂದಿದ್ದ ಆ ಪರ್ವತ ಶಿಖರವನ್ನು ಧೂಮ್ರಾಕ್ಷನ ನಡುನೆತ್ತಿಗೆ ಸರಿಯಾಗಿ ಗುರಿಯಿಟ್ಟು ಬೀಸಿದನು. ಆ ಪರ್ವತಶಿಖರವು ಮೇಲೆ ಬಿದ್ದೊಡನೆ ಧೂಮ್ರಾಕ್ಷನ ಸಮಸ್ತ ಅವಯವಗಳೂ ಛಿದ್ರಛಿದ್ರವಾಗಲು, ಅವನು ವಜ್ರಾಯುಧದಿಂದ ಚೂರ್ಣವಾದ ಪರ್ವತದಂತೆ ಕೆಳಗೆ ಬಿದ್ದನು. ಹೀಗೆ ಧೂಮ್ರಾಕ್ಷನು ಹತನಾದುದನ್ನು ನೋಡಿ, ಅಲ್ಲಲ್ಲಿ ಸತ್ತು ಉಳಿದಿದ್ದ ಕೆಲವು ಮಂದಿ ರಾಕ್ಷಸರು ತಮ್ಮನ್ನು ಬೆನ್ನಟ್ಟಿಬಂದು ಹೊಡೆಯುತ್ತಿರುವ ವಾನರರ ಪ್ರಹಾರವನ್ನು ತಾಳಲಾರದೆ ಭಯದಿಂದ ಲಂಕೆಗೆ ತಿರುಗಿ ಓಡಿ ಹೋದರು. ಇತ್ತಲಾಗಿ ವಾಯುಕುಮಾರನಾದ ಧೀರ ಹನುಮಂತನಾದರೋ ತಮ್ಮ ಕಡೆಯವರಿಗೆ ಪ್ರಬಲವೈರಿಯೂ ಪ್ರಚಂಡ ಪರಾಕ್ರಮಿಯೂ, ರಾವಣನ ಬಲಭುಜದಂತಿದ್ದವನೂ ಆದ ಆ ಧೂಮ್ರಾಕ್ಷನನ್ನು ಅವನ ಸೇನಾಪರಿವಾರ ಸಮೇತನಾಗಿ ಕೊಂದು, ರಣರಂಗವು ರಕ್ತಪ್ರವಾಹದಿಂದಲೂ, ಭಯಂಕರರಾದ ರಾಕ್ಷಸರ ಶವಗಳಿಂದಲೂ ತುಂಬಿರಲು ಯುದ್ಧಶ್ರಮದಿಂದ ಸ್ವಲ್ಪಮಟ್ಟಿಗೆ ಬಳಲಿದವನಾಗಿ, ತನ್ನ ಕಡೆಯ ಸಮಸ್ತ ವಾನರರಿಂದಲೂ ಉಪಚರಿಸಲ್ಪಡುತ್ತ ಸಂತೋಷದಿಂದಿದ್ದನು.

ಇಲ್ಲಿಗೆ ಐವತ್ತೆರಡನೆಯ ಸರ್ಗವು.

{ ಧೂಮ್ರಾಕ್ಷನ ವಧವನ್ನು ಕೇಳಿ ರಾವಣನು ವಜ್ರದಂಷ್ಟ್ರನನ್ನು
ಕಳುಹಿಸಿದುದು. ಅಂಗದನು ವಜ್ರದಂಷ್ಟ್ರನ
ಸೇನೆಯನ್ನು ನಾಶಮಾಡಿದುದು. }

ಅತ್ತಲಾಗಿ ರಾಕ್ಷಸೇಶ್ವರನಾದ ರಾವಣನು, ಧೂಮ್ರಾಕ್ಷನು ಹತನಾದನು ಎಂಬ ಸುದ್ದಿಯನ್ನು ಕೇಳಿ ದುಃಖಗೊಂಡು, ಹಾವಿನಂತೆ ನಿಟ್ಟುಸಿರು ಬಿಡುತ್ತ, ಅತ್ಯಾಕ್ರೋಶಗೊಂಡನು. ಈ ಕೋಪಾವೇಶದಿಂದ ಬಹಳವಾಗಿ ಕಲಗಿದ ಮನಸ್ಸುಳ್ಳವನಾಗಿ, ಬಿಸಿಯಾದ ನಿಟ್ಟುಸಿರನ್ನು ಬಿಡುತ್ತ, ಶೂರನೂ, ಬಲಾಢ್ಯನೂ,

ಆದ ವಜ್ರದಂಷ್ಟ್ರನೆಂಬ ರಾಕ್ಷಸನನ್ನು ಕರೆದು, "ಎಲೈ ವೀರನೆ, ಈಗಲೇ ನೀನು ಇಲ್ಲಿಂದ ಹೊರಡು. ನಿನ್ನ ಸಹಾಯಕ್ಕೆ ದೊಡ್ಡ ಸೇನೆಯನ್ನೂ ಕರೆದು ಕೊಂಡು ಹೋಗು! ಇಲ್ಲಿಂದ ಹೋಗಿ ದಶರಥಕುಮಾರನಾದ ಆ ರಾಮನನ್ನೂ, ಸುಗ್ರೀವನನ್ನೂ, ಅಲ್ಲಿರುವ ಇತರ ವಾನರರೆಲ್ಲರನ್ನೂ ಕೊಂದುಬಿಡು" ಎಂದನು. ಮಾಯೆಯಲ್ಲಿ ನಿಪುಣನಾದ ಆ ವಜ್ರದಂಷ್ಟ್ರನು ರಾವಣಾಜ್ಞೆಯನ್ನು ಕೇಳಿ, ಆತನಿಗೆ ಕೈಮುಗಿದು, "ಮಹಾರಾಜನೆ! ಅಪ್ಪಣೆ! ಹಾಗೆಯೇ ಸರಿ! ಎಂದು ಹೇಳಿ ದೊಡ್ಡ ರಾಕ್ಷಸ ಸೈನ್ಯವನ್ನೂ, ಹಲವು ಬಲಾಧ್ಯಕ್ಷರನ್ನೂ ಕರೆದುಕೊಂಡು ಹೊರಟನು. ಇವನ ಹಿಂದೆ ಅನೇಕ ಗಜತುರಗಾದಿ ಸೈನ್ಯಗಳೂ, ಒಂಟೆಗಳೂ, ಕತ್ತೆಗಳೂ, ಪತಾಕಾಧ್ವಜ ಚಿತ್ರಿತಗಳಾದ ರಥಗಳೂ, ಅಸಂಖ್ಯಾತಗಳಾಗಿ ಹೊರಟವು. ಈ ಸಮಸ್ತ ಸೈನ್ಯಗಳೂ ಗಂಧಪುಷ್ಪಾದ್ಯಲಂಕಾರಗಳಿಂದಲೂ, ಯುದ್ಧ ಕವಚಗಳಿಂದಲೂ, ವಿಚಿತ್ರವಾದ ಕಿರೀಟ ಕೇಯೂರಾದಿ ರತ್ನಾಭರಣಗಳಿಂದಲೂ, ಭೂಷಿತಗಳಾಗಿ ವಜ್ರದಂಷ್ಟ್ರನನ್ನು ಹಿಂಬಾಲಿಸಿ ಹೊರಟುವು. ವಜ್ರದಂಷ್ಟ್ರನೂ ಕೂಡ ಉತ್ತಮ ಪತಾಕೆಗಳಿಂದಲಂಕೃತವಾಗಿಯೂ, ಸುವರ್ಣಕಾಂತಿಯಿಂದ ದೇದೀಪ್ಯ ಮಾನವಾಗಿಯೂ ಇದ್ದ ತನ್ನ ರಥಕ್ಕೆ ಪ್ರದಕ್ಷಿಣವನ್ನುಮಾಡಿ ಆ ರಥವನ್ನೇರಿ ಕುಳಿತನು. ರಥದ ಸುತ್ತಲೂ ಅನೇಕ ಪದಾತಿಗಳು ನಾನಾವಿಧವಾದ ದಂಡಗಳನ್ನೂ ತೋಮರಗಳನ್ನೂ, ಶೂಲಗಳನ್ನೂ, ಮುಸಲಗಳನ್ನೂ, ಭಿಂಡಿವಾಲಗಳನ್ನೂ, ಪಾಶಗಳನ್ನೂ, ಶಕ್ತ್ಯಾಯುಧಗಳನ್ನೂ ಪಟ್ಟಿಸಗಳನ್ನೂ, ಖಡ್ಗಗಳನ್ನೂ, ಚಕ್ರಗಳನ್ನೂ, ಗದೆಗಳನ್ನೂ, ತೀಕ್ಷ್ಣಗಳಾದ ಗಂಡುಗೊಡಲಿಗಳನ್ನೂ, ಇನ್ನೂ ವಿವಿಧಾಯುಧಗಳನ್ನೂ ಹಿಡಿದು ಯುದ್ಧಸನ್ನದ್ಧರಾಗಿ ಹೊರಟರು. ಈ ಸೈನ್ಯದಲ್ಲಿದ್ದ ಒಬ್ಬೊಬ್ಬ ರಾಕ್ಷಸರೂ ಉತ್ತಮ ವಸ್ತ್ರವನ್ನುಟ್ಟು ಸರ್ವಾಭರಣಭೂಷಿತರಾಗಿ ಜ್ವಲಿಸುತ್ತಿದ್ದರು. ಯುದ್ಧ ಸಮರ್ಥರಾದ ಕೆಲವು ರಾಕ್ಷಸರು, ತೋಮರಗಳನ್ನೂ, ಅಂಕುಶಗಳನ್ನೂ ಹಿಡಿದು ಜಂಗಮ ಪರ್ವತದಂತೆ ಮಹೋನ್ನತಗಳಾದ ಮದದಾನೆಗಳನ್ನೇರಿ ಬಂದರು. ಬೇರೆ ಕೆಲವು ರಾಕ್ಷಸರು ಶುಭಲಕ್ಷಣವುಳ್ಳವುಗಳಾ ಗಿಯೂ, ಮಹಾಬಲವುಳ್ಳವುಗಳಾಗಿಯೂ ಇದ್ದ ಬೇರೆ ಬೇರೆ ಕೆಲವು ಯುದ್ಧಗಜಗಳ ನ್ನೇರಿ ಬಂದರು. ಹೀಗೆ ಕಪ್ಪು ಮೈಯುಳ್ಳ ಆ ರಾಕ್ಷಸರು ಸುವರ್ಣಾಭರಣಗಳಿಂದ ಅಲಂಕೃತರಾಗಿ, ಸಿಂಹನಾದಗಳನ್ನು ಮಾಡುತ್ತ, ಮುಂದೆ ಮುಂದೆ ಸಾಗಿಬರುತ್ತಿ ರಲು, ವರ್ಷಾಕಾಲದಲ್ಲಿ ಮಿಂಚಿನೊಡಗೂಡಿ ಗರ್ಜಿಸುತ್ತಿರುವ ಮೇಘಪರಂಪರೆ

ಯಂತೆ ಕಾಣಿಸುತ್ತಿದ್ದರು. ಹೀಗೆ ಸಮಸ್ತ ರಾಕ್ಷಸ ಸೈನ್ಯವೂ ವಜ್ರದಂಷ್ಟ್ರನೊಡನೆ ಪುರಮಧ್ಯದಿಂದ ಹೊರಟು, ವಾನರಯೂಥಪತಿಯಾದ ಅಂಗದನು ಕಾಯುತ್ತಿದ್ದ ದಕ್ಷಿಣದ್ವಾರದ ಕಡೆಗೆ ಬಂದು ಸೇರಿತು. ಈ ದೊಡ್ಡ ರಾಕ್ಷಸಸೈನ್ಯವು ಪಟ್ಟಣ ದಿಂದ ಹೊರಟಾಗಲೇ ಅಲ್ಲಲ್ಲಿ ಕೆಲವು ದುರ್ನಿಮಿತ್ತಗಳು ತಲೆದೋರುತ್ತಿದ್ದುವು. ಮೇಘಶೂನ್ಯವಾದ ಆಕಾಶದಿಂದ ಭಯಂಕರಸ್ವರೂಪವುಳ್ಳ ಉಲ್ಕೆಗಳು ಬೀಳುತ್ತಿ ದ್ದುವು. ಅಲ್ಲಲ್ಲಿ ನರಿಗಳು ಬಾಯಿಂದ ಅಗ್ನಿಜ್ವಾಲೆಗಳನ್ನು ಕಕ್ಕುತ್ತ, ಭಯಂಕರಧ್ವನಿ ಯಿಂದ ಅರಚುತ್ತಿದ್ದವು. ಅಲ್ಲಲ್ಲಿ ಕ್ರೂರಮೃಗಗಳು ರಾಕ್ಷಸರಿಗೆ ಮರಣವನ್ನು ಸೂಚಿಸುವಂತೆ ಅಮಂಗಳವಾಗಿ ಕೂಗುತ್ತಿದ್ದುವು. ಯುದ್ಧಕ್ಕಾಗಿ ಮುಂದೆ ಮುಂದೆ ಸಾಗಿ ಬರುತ್ತಿದ್ದ ರಾಕ್ಷಸಯೋಧರೂ ಕೂಡ, ದಾರಿಯಲ್ಲಿ ನಿಷ್ಕಾರಣವಾಗಿ ಭಯ ಪಟ್ಟು ತಡವರಿಸಿ ನಿಲ್ಲುತ್ತಿದ್ದರು. ಮಹಾ ತೇಜಸ್ವಿಯಾಗಿಯೂ, ಬಲಾಢ್ಯನಾಗಿಯೂ ಇರುವ ವಜ್ರದಂಷ್ಟ್ರನು, ಈ ಮಹೋತ್ಪಾತಗಳೆಲ್ಲವನ್ನೂ ತಾನು ಕಣ್ಣಾರೆ ನೋಡುತ್ತಿದ್ದರೂ, ತನ್ನ ಮನಸ್ಸಿನಲ್ಲಿ ಧೈರ್ಯವನ್ನು ಬಿಡದೆ ಯುದ್ಧಾತುರದಿಂದ ಬಂದನು. ಈ ದೊಡ್ಡ ಸೈನ್ಯವು ಬರುವುದನ್ನು ಕಂಡೊಡನೆ, ಇತ್ತಲಾಗಿ ವಾನರರೂ ಉತ್ಸಾಹದಿಂದ, ಹತ್ತು ದಿಕ್ಕುಗಳನ್ನೂ ತುಂಬುವಂತೆ ಸಿಂಹನಾದ ಮಾಡಿದರು. ಕೊನೆಗೆ ಭಯಂಕರಾಕಾರವುಳ್ಳ ವಾನರರೆಲ್ಲರೂ ರಾಕ್ಷಸರಮೇಲೆ ನುಗ್ಗಿದರು. ಹೀಗೆ ಇಬ್ಬರೂ ಒಬ್ಬರನ್ನೊಬ್ಬರು ಕೊಲ್ಲಬೇಕೆಂಬ ಹಟದಿಂದ ತುಮುಲ ಯುದ್ಧ ವನ್ನಾರಂಭಿಸಿದರು. ಈ ಎರಡು ಪಕ್ಷದವರೂ ಮಹೋತ್ಸಾಹದಿಂದ ಒಬ್ಬರ ಮೇಲೊಬ್ಬರು ಬಿದ್ದು ಯುದ್ಧಮಾಡುವಾಗ, ಅಲ್ಲಲ್ಲಿ ಕೆಲವರು ಮೈಮುರಿದು, ತಲೆ ಯೊಡೆದು, ಸರ್ವಾಂಗಗಳಿಂದಲೂ ರಕ್ತವನ್ನು ಸುರಿಸುತ್ತ ಕೆಳಗೆ ಬಿದ್ದರು. ಎಂತಹ ಮಹಾಯುದ್ಧಗಳಲ್ಲಿಯೂ ಹಿಂಜರಿಯದ ಮಹಾಪರಾಕ್ರಮವುಳ್ಳ ಕೆಲವು ರಾಕ್ಷಸರು ಪರಿಘಗಳನ್ನು ಹಿಡಿದು ಅಲ್ಲಲ್ಲಿ ಸಿಕ್ಕಿದ ವಾನರರನ್ನು ಹೊಡೆಯುತ್ತ, ಅವರ ಮೇಲೆ ವಿವಿಧಾಯುಧಗಳನ್ನು ಪ್ರಯೋಗಿಸುತ್ತಿದ್ದರು. ಆ ಯುದ್ಧದಲ್ಲಿ ವಾನರರು ವೃಕ್ಷ ಗಳನ್ನೂ, ಶಿಲೆಗಳನ್ನೂ, ಪ್ರಯೋಗಿಸಿದುದರಿಂದ ಉಂಟಾದ ಮಹಾಧ್ವನಿಯು ಅತಿ ಭಯಂಕರವಾಗಿ ಯುದ್ಧರಂಗವನ್ನು ವ್ಯಾಪಿಸಿ, ಜನರ ಹೃದಯವನ್ನು ಭೇದಿಸು ವಂತೆ ಕೇಳಿಸುತ್ತಿತ್ತು. ಧನುಸ್ಸಿನ ಠೇಂಕಾರವೂ, ಶಂಖ, ಭೇರಿ, ಮೃದಂಗಾದಿ ವಾದ್ಯಗಳ ಧ್ವನಿಯೂ ತುಮುಲವಾಗಿ ವ್ಯಾಪಿಸಿತು. ಅಲ್ಲಲ್ಲಿ ಕೆಲವರು ತಮ್ಮಲ್ಲಿದ್ದ ಶಸ್ತ್ರಗಳೆಲ್ಲವನ್ನೂ ಪ್ರಯೋಗಿಸಿ, ಅವು ಮುಗಿದಮೇಲೆ ಬಾಹುಯುದ್ಧವನ್ನಾರಂಭಿ

ಸಿದರು. ಕೆಲವು ವಾನರರು ತಮ್ಮ ಕೈಗೆ ಸಿಕ್ಕಿದ ರಾಕ್ಷಸರನ್ನು ಅಂಗೈಗಳಿಂದಪ್ಪಳಿಸಿಯೂ, ಕಾಲುಗಳಿಂದ ತುಳಿದೂ, ಮುಷ್ಟಿಗಳಿಂದ ಹೊಡೆದೂ, ವೃಕ್ಷಗಳಿಂದ ಬಡಿದೂ ಕೊಲ್ಲುತ್ತಿದ್ದರು. ಸೇನಾಪತಿಯಾದ ವಜ್ರದಂಷ್ಟ್ರನಾದರೋ, ಪ್ರಳಯಕಾಲದಲ್ಲಿ ಪಾಶಹಸ್ತನಾದ ಯಮನಂತೆ ಭಯಂಕರಾಕಾರವುಳ್ಳವನಾಗಿ, ಅಲ್ಲಲ್ಲಿ ಸಂಚರಿಸುತ್ತ, ಸಿಕ್ಕಿದ ವಾನರರನ್ನು ಹೊಡೆದು ಬೆದರಿಸಿ ಓಡಿಸುತ್ತಿದ್ದನು. ಬಲಾಢ್ಯರಾಗಿಯೂ, ಆಯುಧ ವಿದ್ಯೆಯಲ್ಲಿ ನಿಪುಣರೂ ಆದ ಅನೇಕ ರಾಕ್ಷಸರು, ಕೋಪದಿಂದ ಮೈತಿಳಿಯದೆ ವಿವಿಧಾಯುಧಗಳನ್ನು ಹಿಡಿದು, ವಾನರರನ್ನು ಕೊಲ್ಲುತ್ತಿದ್ದರು. ಹೀಗೆ ರಕ್ಕಸರೆಲ್ಲರೂ ತನ್ನ ಸೇನೆಯನ್ನು ಕೊಲ್ಲುತ್ತಿರುವುದನ್ನು ಕಂಡು, ವಾಲಿಯ ಪುತ್ರನಾದ ಅಂಗದನು, ಪ್ರಳಯಕಾಲದ ಅಗ್ನಿಯಂತೆ ಕೋಪದಿಂದ ಕೆಂಪೇರಿದ ಕಣ್ಣುಳ್ಳವನಾಗಿ, ಒಂದು ದೊಡ್ಡ ಮರವನ್ನು ಕಿತ್ತುಕೊಂಡು, ಮೃಗಗಳನ್ನು ಬೆನ್ನಟ್ಟಿ ಹೋಗುವ ಸಿಂಹದಂತೆ ಶತ್ರುಗಳ ಗುಂಪಿನಲ್ಲಿ ಹೊಕ್ಕು ಅವರನ್ನು ಕೊಲ್ಲುತ್ತ ಬಂದನು. ಇಂದ್ರನಿಗೆಣೆಯಾದ ಪರಾಕ್ರಮವುಳ್ಳ ಅಂಗದನು ಮಹಾ ಭಯಂಕರವಾದ ಯುದ್ಧವನ್ನು ನಡೆಸಿದಾಗ, ಅಂಗದನಿಗಿದಿರಾದ ರಕ್ಕಸರೆಲ್ಲರೂ ಮಹಾ ಬಲಶಾಲಿಗಳಾದರೂ, ಅವನ ಪ್ರಹಾರದಿಂದ ನೊಂದು, ಬುಡವನ್ನು ಕಡಿದ ಮರಗಳಂತೆ ತಲೆಯೊಡೆದು ನೆಲಕ್ಕುರುಳುತ್ತಿದ್ದರು. ಆಗ ಯುದ್ಧರಂಗವೆಲ್ಲವೂ ಮುರಿದ ರಥಗಳಿಂದಲೂ, ಸತ್ತುಬಿದ್ದ ಕುದುರೆಗಳಿಂದಲೂ, ಕತ್ತರಿಸಿದ ವಿಚಿತ್ರ ಧ್ವಜಗಳಿಂದಲೂ, ರಕ್ಕಸರ ದೇಹಗಳಿಂದಲೂ, ರಕ್ತಪ್ರವಾಹದಿಂದಲೂ ತುಂಬಿ, ಮಹಾಭಯಂಕರವಾಯಿತು. ಆ ಯುದ್ಧದಲ್ಲಿ ಆ ಭೂಪ್ರದೇಶವೆಲ್ಲವೂ ಅಲ್ಲಲ್ಲಿ ಕೆದರಿ ಬಿದ್ದ ಕೇಯೂರಹಾರಗಳಿಂದಲೂ, ವಿಚಿತ್ರ ವಸ್ತ್ರಗಳಿಂದಲೂ, ವಿವಿಧ ಶಸ್ತ್ರಗಳಿಂದಲೂ, ಅಲಂಕೃತವಾಗಿ, ನಕ್ಷತ್ರಗಳಿಂದಲೂ, ಚಂದ್ರಬಿಂಬದಿಂದಲೂ ಅಲಂಕೃತವಾದ ಶರತ್ಕಾಲದ ರಾತ್ರಿಯಂತೆ ಪ್ರಕಾಶಿಸುತ್ತಿತ್ತು. ಆಗ ಅಲ್ಲಿ ನೆರೆದಿದ್ದ ರಾಕ್ಷಸ ಸೇನೆಯು ಅಂಗದನ ವೇಗವನ್ನಿದಿರಿಸಿ ನಿಲ್ಲಲಾರದೆ, ಬಿರುಗಾಳಿಗೆ ಸಿಕ್ಕಿದ ಮೇಘಗಳಂತೆ ನಾನಾ ದಿಕ್ಕುಗಳಿಗೂ ಪಲಾಯನ ಮಾಡಿದುವು.

ಇಲ್ಲಿಗೆ ಐವತ್ತಮೂರನೆಯ ಸರ್ಗವು.

ವಜ್ರದಂಷ್ಟ್ರನು ಅಂಗದನಿಂದ ಹತನಾದುದು.

ಇಷ್ಟರಲ್ಲಿ ಮಹಾಬಲಾಢ್ಯನಾದ ವಜ್ರದಂಷ್ಟ್ರನು, ತನ್ನ ಸೇನೆಯು ಪರಾಜಿತವಾಗಿ ಭಯದಿಂದ ಪಲಾಯನ ಮಾಡುವುದನ್ನೂ, ಅಂಗದನು ಜಯಗೊಂಡಿರು

ವುದನ್ನೂ ನೋಡಿ ಕೋಪಾವಿಶಿಷ್ಟನಾಗಿ, ತನ್ನ ಮಹಾಧನುಸ್ಸನ್ನು ಹಿಡಿದು, ವಜ್ರಾಯುಧದ ಮೊರೆತದಂತೆ ಭಯಂಕರ ಧ್ವನಿಯನ್ನುಂಟುಮಾಡುತ್ತ, ವಾನರ ಸೇನೆಯ ಮೇಲೆ ಬಾಣವರ್ಷವನ್ನು ಕರೆದನು. ರಾಕ್ಷಸಸೇನೆಯಲ್ಲಿನ ಅನೇಕ ಶೂರರು ರಥಾರೂಢರಾಗಿ ನಾನಾ ಆಯುಧಗಳನ್ನು ಹಿಡಿದು ವಾನರರನ್ನು ತಡೆಯುತ್ತಿದ್ದರು. ಇತ್ತಲಾಗಿ ಪ್ರಮುಖರಾದ ವಾನರರೂ ಕೂಡ ಎಲ್ಲಕಡೆಯೂ ಗುಂಪಾಗಿ ಸೇರಿ, ಶಿಲೆಗಳನ್ನು ಹಿಡಿದು ಶತ್ರುಗಳನ್ನು ಪ್ರಹರಿಸುತ್ತಿದ್ದರು. ಆ ಮಹಾಯುದ್ಧದಲ್ಲಿ ರಕ್ಕಸರು ಕಪಿವೀರರ ಮೇಲೆ ಸಾವಿರಸಂಖ್ಯೆಯಿಂದ ಆಯುಧಗಳನ್ನು ಪ್ರಯೋಗಿಸಿ ದರು. ಮದದಾನೆಗಳಂತೆ ಮಹಾವೀರ್ಯವುಳ್ಳ ವಾನರರೂ, ಶಿಲೆಗಳಿಂದಲೂ, ಮರ ಗಳಿಂದಲೂ, ಪರ್ವತಗಳಿಂದಲೂ ರಕ್ಕಸರನ್ನು ಪ್ರಹರಿಸಿದರು. ಶೂರರೂ, ಯುದ್ಧ ದಲ್ಲಿ ಹಿಂಜರಿಯದವರೂ ಆದ ಆ ವಾನರ ರಕ್ಕಸರಿಬ್ಬರಿಗೂ ಮೇಲೆ ಮೇಲೆ ಯುದ್ಧವು ಪ್ರಬಲವಾಯಿತು. ಅದರಲ್ಲಿ ತಲೆಯೊಡೆದು ಬಿದ್ದವರು ಕೆಲವರು. ಕೈಕಾಲುಗಳು ಕತ್ತರಿಸಲ್ಪಟ್ಟವರು ಕೆಲವರು. ರಕ್ತದಿಂದ ತೊಯ್ದ ದೇಹದವರು ಕೆಲವರು. ಹೀಗೆ ಆ ಯುದ್ಧರಂಗದಲ್ಲಿ ಕಪಿಗಳೂ, ರಕ್ಕಸರೂ, ಸತ್ತು ನೆಲದಮೇಲೆ ಬಿದ್ದಿರು ವರು. ಹದ್ದು, ಗಿಡುಗ, ಮುಂತಾದ ಮಾಂಸಾಹಾರಿಪಕ್ಷಿಗಳು ಸುತ್ತಲೂ ಆವರಿಸಿ ನಿಂತವು. ಅಲ್ಲಲ್ಲಿ ನರಿಗಳು ಗುಂಪು ಸೇರಿದವು. ಅಲ್ಲಲ್ಲಿ ಭಯವನ್ನು ಹೆಚ್ಚಿಸು ವಂತೆ ತಲೆಯಿಲ್ಲದ ಮುಂಡಗಳು ಕುಣಿಯುತ್ತಿದ್ದುವು. ಆಗಿನ ಯುದ್ಧದಲ್ಲಿ ವಾನರ ರಕ್ಕಸರಿಬ್ಬರಲ್ಲಿಯೂ ಕತ್ತರಿಸಲ್ಪಟ್ಟ ದೇಹವುಳ್ಳವರು ಅಸಂಖ್ಯಾತರಾಗಿ ಬಿದ್ದಿದ್ದರು. ವಜ್ರದಂಷ್ಟ್ರನು ನೋಡುತ್ತಿರುವಾಗಲೇ ವಾನರಸೇನೆಯು ರಕ್ಕಸ ಸೇನೆಯನ್ನು ಮುತ್ತಿ ಕೊಲ್ಲುತ್ತಿದ್ದುವು. ವಜ್ರದಂಷ್ಟ್ರನು ಕೋಪದಿಂದ ಕೆಂಪೇರಿದ ಕಣ್ಣುಳ್ಳವನಾಗಿ, ಹದ್ದಿನ ಗರಿಗಳುಳ್ಳ ತೀವ್ರವಾದ ಬಾಣಗಳಿಂದ ವಾನರರನ್ನು ಹೊಡೆಯುತ್ತಿದ್ದನು. ಒಂದೊಂದೇ ಪ್ರಹಾರದಿಂದ, ಆ ವಾನರಸೇನೆಯಲ್ಲಿ ಏಳು ಮಂದಿಯಂತೆಯೂ, ಎಂಟುಮಂದಿಯೂ ಸಾಯುತ್ತ ಬಂದರು. ಈ ಬಾಣಹತಿ ಯಿಂದ ವಾನರರು ಕತ್ತರಿಸಿದ ತಲೆಯುಳ್ಳವರಾಗಿ ಕೆಳಗೆ ಬೀಳುತ್ತಿದ್ದರು. ಉಳಿದ ಕೆಲವು ವಾನರರು ಗುಂಪುಗುಂಪಾಗಿ ಅಂಗದನ ಸಮೀಪಕ್ಕೆ ಬಂದು, ಅವನನ್ನಾ ಶ್ರಯಿಸಿದರು. ಆಗ ವಾಲಿಪುತ್ರನಾದ ಅಂಗದನು ತನ್ನ ಸೇನೆಗಾದ ಭಂಗವನ್ನು ನೋಡಿ ಕೋಪಗೊಂಡು, ತನ್ನನ್ನೇ ಇದಿರು ನೋಡುತ್ತಿದ್ದ ವಜ್ರದಂಷ್ಟ್ರನನ್ನು ತಾನೂ ದುರದುರನೆ ನೋಡಿದನು. ಕೊನೆಗೆ ವಾನರ ರಕ್ಕಸರ ಸೇನಾಪತಿಗಳಾದ

ಅಂಗದನಿಗೂ, ವಜ್ರದಂಷ್ಟ್ರನಿಗೂ ಘೋರ ಯುದ್ಧಕ್ಕೆ ಮೊದಲಾಯಿತು. ಇಬ್ಬರಿಗೂ ಮೇಲೆಮೇಲೆ ಕೋಪವು ಹೆಚ್ಚುತ್ತಿತ್ತು. ಸಿಂಹವೂ ಆನೆಯೂ ಹೋರಾಡುವಂತೆ ಇಬ್ಬರೂ ಕಲಹಕ್ರೀಡೆಯಲ್ಲಿ ತೊಡಗಿದರು. ಇಷ್ಟರಲ್ಲಿ ವಜ್ರದಂಷ್ಟ್ರನು ಆನೆಯನ್ನು ಅಂಕುಶದಿಂದ ತಿವಿಯುವಂತೆ ಸಾವಿರ ಬಾಣಗಳನ್ನು ಅಂಗದನ ಮರ್ಮಸ್ಥಾನಗಳಿಗೆ ಹೊಡೆದನು. ಇದರಿಂದ ಅಂಗದನ ಸರ್ವಾಂಗಗಳಲ್ಲಿಯೂ, ರಕ್ತವು ಕಿತ್ತುಕೊಂಡಿತು. ಆಗ ಬಲಾಢ್ಯನಾಗಿಯೂ, ಭಯಂಕರ ಪರಾಕ್ರಮಿಯೂ ಆದ ಅಂಗದನು ಅದನ್ನು ಗಮನಿಸದೆ, ಒಂದು ದೊಡ್ಡ ಮರವನ್ನು ಕಿತ್ತು ವಜ್ರದಂಷ್ಟ್ರನ ಮೇಲೆ ಬೀಸಿದನು. ವಜ್ರದಂಷ್ಟ್ರನು ತನಗಿದಿರಾಗಿ ಬರುತ್ತಿದ್ದ ಆ ದೊಡ್ಡ ಮರವನ್ನು ತನ್ನ ಬಾಣದಿಂದ ಸಹಸ್ರ ಭಾಗಗಳಾಗಿ ಖಂಡಿಸಿದನು. ಅಂಗದನು ವಜ್ರದಂಷ್ಟ್ರನ ಈ ಅದ್ಭುತ ಪರಾಕ್ರಮವನ್ನು ನೋಡಿ ವಿಸ್ಮಯಪಟ್ಟು, ಬೇರೆ ಒಂದು ದೊಡ್ಡ ಪರ್ವತವನ್ನು ಅವನೆಡೆಗೆ ಬಿಸುಟು, ಸಿಂಹನಾದವನ್ನು ಮಾಡಿದನು. ಈ ಪರ್ವತವು ತನಗೆದುರಾಗಿ ಬರುವುದನ್ನು ನೋಡಿ ವಜ್ರದಂಷ್ಟ್ರನು, ಅದು ತನ್ನ ಮೇಲೆ ಬೀಳುವಷ್ಟರಲ್ಲಿ ಗದೆಯನ್ನೆತ್ತಿಕೊಂಡು ನೆಲಕ್ಕೆ ಹಾರಿದನು. ಇಷ್ಟರಲ್ಲಿ ಅಂಗದನು ಮುಂದೆ ಬಂದು, ಅವನ ಕೈಯಲ್ಲಿದ್ದ ಗದೆಯನ್ನು ಕಿತ್ತುಕೊಂಡು, ಅದರಿಂದಲೇ ಅವನ ರಥವನ್ನು ಅದರ ಚಕ್ರ, ಮೂಕಿ, ಕುದುರೆಗಳೊಡನೆ ತುಂಡುತುಂಡಾಗಿ ಬೀಳುವಂತೆ ಹೊಡೆದು ಕೆಡವಿದನು. ಆಮೇಲೆ ವೀರನಾದ ಅಂಗದನು ವೃಕ್ಷಗಳಿಂದ ತುಂಬಿದ ಮತ್ತೊಂದು ದೊಡ್ಡ ಪರ್ವತವನ್ನು ತಂದು, ವಜ್ರದಂಷ್ಟ್ರನ ತಲೆಯ ಮೇಲೆ ಬೀಸಿದನು. ಈ ಪ್ರಹಾರದಿಂದ ಅವನು ರಕ್ತವನ್ನು ಕಾರುತ್ತ ಮೂರ್ಛಿತನಾದನು. ಕ್ಷಣಕಾಲದಲ್ಲಿಯೇ ಅವನು ಎಚ್ಚೆತ್ತು, ತನ್ನ ಗದೆಯನ್ನೆತ್ತಿಕೊಂಡು ಕೋಪದಿಂದ ಅಂಗದನ ಎದೆಗೆ ಹೊಡೆದನು. ಕೊನೆಗೆ ವಜ್ರದಂಷ್ಟ್ರನು ಆ ಗದೆಯನ್ನೂ ಬಿಸುಟು, ಮುಷ್ಟಿಯುದ್ಧವನ್ನಾರಂಭಿಸಿದನು. ಅವರಿಬ್ಬರೂ ಒಬ್ಬರನ್ನೊಬ್ಬರು ಬಹಳ ಕ್ರೂರವಾಗಿ ಪ್ರಹರಿಸುತ್ತಿದ್ದರು. ಇಬ್ಬರ ದೇಹದಲ್ಲಿಯೂ ರಕ್ತವು ಕಿತ್ತುಕೊಂಡು, ಇಬ್ಬರಿಗೂ ಬಳಲಿಕೆಯುಂಟಾಯಿತು. ಇಬ್ಬರೂ ರಕ್ತದಿಗ್ಧರಾದರು. ತೇಜಸ್ವಿಯೂ ಕಪಿಶ್ರೇಷ್ಠನೂ ಆದ ಅಂಗದನು ಅನೇಕ ಫಲಪುಷ್ಪಗಳಿಂದ ತುಂಬಿದ ಒಂದು ಮಹಾವೃಕ್ಷವನ್ನು ಎತ್ತಿಕೊಂಡು ಯುದ್ಧಕ್ಕೆ ನಿಂತನು. ಆ ರೀತಿ ಇಬ್ಬರೂ ಸ್ವಲ್ಪ ಹೊತ್ತಿನವರೆಗೆ ಕಾದಾಡಿದಮೇಲೆ ಅಂಗದನು ವೃಷಭಚರ್ಮದಿಂದ ಮಾಡಿದ ಒಂದು ಗುರಾಣಿಯನ್ನೂ, ಕಿರುಗಂಟೆ

ಗಳಿಂದ ಕೂಡಿ ಉತ್ತಮವಾದ ಚರ್ಮದ ಚೀಲದಲ್ಲಿಡಲ್ಪಟ್ಟ ಒಂದು ದೊಡ್ಡ ಕತ್ತಿಯನ್ನು ಹಿಡಿದು ನಿಲ್ಲಲು, ವಜ್ರದಂಷ್ಟ್ರನೂ ಹಾಗೆಯೇ ಕತ್ತಿಯನ್ನೂ, ಗುರಾಣಿಯನ್ನೂ ಕೈಗೆತ್ತಿಕೊಂಡನು. ಹೀಗೆ ಅವರಿಬ್ಬರೂ ಒಬ್ಬರನ್ನೊಬ್ಬರು ಜಯಿಸಬೇಕೆಂಬ ಹಟದಿಂದ ನಾನಾರೀತಿಯಲ್ಲಿ ಯುದ್ಧಮಾಡುತ್ತ, ಸ್ವಲ್ಪವೂ ಕರುಣೆಯಿಲ್ಲದೆ ಒಬ್ಬರನ್ನೊಬ್ಬರು ಹೊಡೆಯುತ್ತಿದ್ದರು. ಅವರಿಬ್ಬರೂ ರಕ್ತವನ್ನು ಕಾರುವ ಗಾಯಗಳಿಂದ ತುಂಬಿದ ಮೈಯುಳ್ಳವರಾಗಿ, ಪುಷ್ಪಿತಗಳಾದ ಮುತ್ತುಗದ ಮರಗಳಂತೆ ಕಾಣಿಸುತ್ತಿದ್ದರು. ಇಬ್ಬರೂ ಬಹಳ ಹೊತ್ತಿನವರೆಗೆ ಯುದ್ಧಮಾಡಿ, ಕೊನೆಗೆ ಬಳಲಿ, ನೆಲದಮೇಲೆ ಮಂಡಿಯೂರಿ ಕುಳಿತರು. ನಿಮಿಷಮಾತ್ರದಲ್ಲಿಯೇ ಕಪಿಶ್ರೇಷ್ಠನಾದ ಅಂಗದನು ಕೋಪದಿಂದ ಕೆಂಪೇರಿದ ಮೈಯುಳ್ಳವನಾಗಿ, ಕೋಲಿನಿಂದ ಕೆಣಕಿದ ಸರ್ಪದಂತೆ ಮೇಲೆದ್ದು ನಿಂತು, ಚೆನ್ನಾಗಿ ಸಾಣೆಯಿಕ್ಕಿ ಕೊಳೆಯಿಲ್ಲದೇ ಹೊಳೆಯುತ್ತಿರುವ ಒಂದು ಖಡ್ಗದಿಂದ ವಜ್ರದಂಷ್ಟ್ರನ ತಲೆಯನ್ನು ಕತ್ತರಿಸಿ ಕೆಡಹಿದನು. ಸರ್ವಾಂಗಗಳಲ್ಲಿಯೂ ರಕ್ತವು ಸುರಿಯುತ್ತಿರಲು, ಆ ವಜ್ರದಂಷ್ಟ್ರನ ತಲೆಯು ಅವನ ದೇಹದಿಂದ ಬೇರೆಯಾಗಿ ರೋಷದಿಂದ ತಿರುಗುವ ಕಣ್ಣಾಲಿಗಳೊಡನೆ ಕೆಳಗೆ ಬಿದ್ದಿತು. ವಜ್ರದಂಷ್ಟ್ರನು ಹತನಾದುದನ್ನು ನೋಡಿ ಅಲ್ಲಿದ್ದ ಸಮಸ್ತ ರಾಕ್ಷಸರಿಗೂ ಮನಸ್ಸಿನಲ್ಲಿ ಭಯವು ಹುಟ್ಟಿತು. ಅವರೆಲ್ಲರೂ ಭಯದಿಂದ ಮೈತಿಳಿಯದೇ ನಾನಾ ಕಡೆಗಳಲ್ಲಿಯೂ ವಾನರರಿಂದ ಪ್ರಹರಿಸಲ್ಪಡುತ್ತ, ದೈನ್ಯದಿಂದ ಬಾಡಿದ ಮುಖವುಳ್ಳವರಾಗಿ ನಾಚಿಕೆಯಿಂದ ತಲೆಯೆತ್ತಲಾರದೆ ಹಿಂತಿರುಗಿ ಲಂಕೆಗೆ ಪಲಾಯನ ಮಾಡಿದರು. ಇತ್ತಲಾಗಿ ಮಹೇಂದ್ರ ಪರಾಕ್ರಮವುಳ್ಳ, ಬಲಾಢ್ಯನಾದ ಅಂಗದನು ವಜ್ರದಂಷ್ಟ್ರನನ್ನು ಕೊಂದುದಕ್ಕಾಗಿ, ಸಮಸ್ತ ವಾನರಸೈನ್ಯದಿಂದಲೂ ಪೂಜಿಸಲ್ಪಡುತ್ತ, ದೇವತೆಗಳ ನಡುವೆ ನಿಂತ ದೇವೇಂದ್ರನಂತೆ, ಆ ದೊಡ್ಡ ವಾನರ ಸೈನ್ಯದ ಮಧ್ಯದಲ್ಲಿ ಪರಮ ಸಂತೋಷದಿಂದಿದ್ದನು.

ಇಲ್ಲಿಗೆ ಐವತ್ತನಾಲ್ಕನೆಯ ಸರ್ಗವು.

{ ರಾವಣಾಜ್ಞೆಯಿಂದ ಅಕಂಪನನು ಲಂಕೆಯ ಪಶ್ಚಿಮದ್ವಾರಕ್ಕೆ ಬಂದು ಅಲ್ಲಿದ್ದ ಹನುಮಂತನೊಡನೆ ಯುದ್ಧ ಮಾಡಿದುದು. }

ವಜ್ರದಂಷ್ಟ್ರನು ಅಂಗದನಿಂದ ಹತನಾದುದನ್ನು ಕೇಳಿ ರಾವಣನು ತನ್ನ ಮುಂದೆ ಕೈಮುಗಿದು ನಿಂತಿದ್ದ ಪ್ರಹಸ್ತನನ್ನು ನೋಡಿ, “ ಎಲೈ ಸೇನಾಪತಿಯೇ

ಈಗಲೇ ನೀನು ಭಯಂಕರ ಪರಾಕ್ರಮದಿಂದ ದುರ್ಜಯರಾದ ಕೆಲವು ಯೋಧರನ್ನು ಕರೆಸಿ, ಸರ್ವಶಸ್ತ್ರ ನಿಪುಣನಾದ ಅಕಂಪನನನ್ನು ಮುಂದಿಟ್ಟುಕೊಂಡು ಯುದ್ಧಕ್ಕೆ ಹೊರಡುವಂತೆ ನಿಯಮಿಸು ! ಆ ಅಕಂಪನನಲ್ಲಿ ನನಗೆ ಸಂಪೂರ್ಣ ಭರವಸೆ ಉಂಟು. ಅವನು ಯುದ್ಧದಲ್ಲಿ ಶತ್ರುಗಳನ್ನು ಅಡಗಿಸಬಲ್ಲನು. ತನ್ನ ಸೇನೆಗೂ ಅಪಾಯವಿಲ್ಲದಂತೆ ರಕ್ಷಿಸಿಕೊಳ್ಳಬಲ್ಲನು. ಸೇನೆಯನ್ನು ನಡೆಸುವುದರಲ್ಲಿಯೂ, ಸಮರ್ಥನು. ಅನೇಕ ಯುದ್ಧಗಳಲ್ಲಿ ಪ್ರಸಿದ್ಧಿ ಹೊಂದಿದವನು. ಯಾವಾಗಲೂ ನನಗೆ ಮನಃಪೂರ್ವಕವಾಗಿ ಹಿತವನ್ನು ಕೋರತಕ್ಕವನು. ಯುದ್ಧದಲ್ಲಿಯೂ ಮಹೋತ್ಸಾಹವುಳ್ಳವನು. ಎಂತಹ ಶತ್ರುವನ್ನಾದರೂ ನಿಗ್ರಹಿಸದೆ ಬಿಡುವವನಲ್ಲ. ಅವನು ಸಂದೇಹವಿಲ್ಲದೆ, ಆ ರಾಮಲಕ್ಷ್ಮಣರನ್ನೂ, ಬಲಾಢ್ಯನಾದ ಸುಗ್ರೀವನನ್ನೂ ಜಯಿಸಿ, ಭಯಂಕರರಾದ ಇತರ ವಾನರರನ್ನೂ ಕೊಂದು ಬರುವನು " ಎಂದನು. ಈ ರಾವಣಾಜ್ಞೆಯನ್ನು ಕೇಳಿದೊಡನೆ ಪ್ರಹಸ್ತನು ಶೀಘ್ರದಲ್ಲಿ ಸೇನೆಗಳನ್ನು ಸಿದ್ಧಪಡಿಸಿದನು. ಬಲಾಧ್ಯಕ್ಷನಾದ ಪ್ರಹಸ್ತನ ಆಜ್ಞೆಯಂತೆ ಅನೇಕ ವೀರ ಯೋಧರು ವಿವಿಧಾಯುಧಗಳನ್ನು ಹಿಡಿದು, ಭಯಂಕರ ಆಕಾರದಿಂದಲೂ, ಘೋರ ಸ್ವರೂಪವುಳ್ಳ ಕಣ್ಣುಗಳಿಂದಲೂ ಕೂಡಿ, ಪಟ್ಟಣದಿಂದ ಯುದ್ಧಕ್ಕಾಗಿ ಹೊರಟರು. ಆಗ ಮೇಘದಂತೆ ದೊಡ್ಡದೇಹವುಳ್ಳವನೂ, ಕಾಳಮೇಘದಂತೆ ಕಪ್ಪಾದ ಮೈಯುಳ್ಳವನೂ, ಮೇಘಧ್ವನಿಯಂತೆ ಮಹಾಧ್ವನಿಯುಳ್ಳವನೂ ಆದ ಅಕಂಪನನು ಉತ್ತಮವಾದ ಸುವರ್ಣ ಕುಂಡಲಗಳನ್ನು ಧರಿಸಿ, ದೊಡ್ಡ ರಥವನ್ನೇರಿ, ಅನೇಕ ಯೋಧರಿಂದ ಪರಿವೃತನಾಗಿ ಸೇನಾಗ್ರದಲ್ಲಿ ಹೊರಟನು. ಆ ಅಕಂಪನನ ಅಸಾಧಾರಣವಾದ ವೀರ್ಯವನ್ನು ಹೇಳಬೇಕಾದುದೇನು ? ಯುದ್ಧದಲ್ಲಿ ದೇವತೆಗಳೂ ಅವನನ್ನು ಕದಲಿಸಲಾರರು ! ಇದರಿಂದಲೇ ಅವನಿಗೆ ಅಕಂಪನನೆಂಬ ಹೆಸರು ಬಂದಿದೆ. ಆ ಸೇನೆಯಲ್ಲಿ ಸೂರ್ಯನಂತೆ ಜ್ವಲಿಸುತ್ತಿರುವನು. ಹೀಗೆ ಎಣೆಯಿಲ್ಲದ ವೀರ್ಯದಿಂದಲೂ, ಪರಾಕ್ರಮದಿಂದಲೂ ಪ್ರಸಿದ್ಧನಾದ ಆ ಅಕಂಪನನು, ಯುದ್ಧಾತುರದಿಂದ ರಥವನ್ನೇರಿ ಬರುವಾಗ ದಾರಿಯಲ್ಲಿ ಅವನಿಗೂ ಅಪಶಕುನಗಳು ಕಾಣಿಸಲಾರಂಭಿಸಿದುವು. ಅವನ ರಥದ ಕುದುರೆಗಳ ಮುಖದಲ್ಲಿ ದೈನ್ಯವು ಮೂಡಿತು. ಅಕಂಪನನ ಎಡದ ಕಣ್ಣು ಅದಿರಿತು. ಮುಖವರ್ಣವು ಕಂದಿತು. ಕಂಠಸ್ವರವು ಕುಗ್ಗಿತು. ಮೊದಲು ಅತ್ಯಂತ ಪ್ರಕಾಶವಾಗಿದ್ದ ಹಗಲು, ಭಯಂಕರ ಬಿರುಗಾಳಿಯಿಂದ ಮೋಡಮುಚ್ಚಿ ಕತ್ತಲೆಯಂತಾಯಿತು. ಹೆಬ್ಬುಲಿಯಂತೆ ಪರಾಕ್ರಮವುಳ್ಳ ಅಕಂಪನನು ಈ ಶಕುನ

ಗಳನ್ನು ಲಕ್ಷ್ಯಮಾಡದೆ, ಯುದ್ಧರಂಗಕ್ಕೆ ಹೋದನು. ಇವನ ಕಡೆಯ ಸೇನೆಗಳು ಮಾಡಿದ ಸಿಂಹನಾದವು ಸಮುದ್ರವನ್ನೇ ಕದಲಿಸುವಂತೆ ಕೇಳಿಸುತ್ತಿತ್ತು. ಈ ಕೋಲಾಹಲವನ್ನು ಕೇಳಿಯೇ ವಾನರರಲ್ಲಿ ಭಯಹುಟ್ಟಿತು. ಸಮಸ್ತ ವಾನರರೂ ಗಿಡಗಳನ್ನೂ, ಬೆಟ್ಟಗಳನ್ನೂ ಎತ್ತಿಕೊಂಡು ಯುದ್ಧಕ್ಕೆ ಸಿದ್ಧರಾಗಿ ನಿಂತಿದ್ದರು. ವಾನರರಿಗೂ ರಕ್ಕಸರಿಗೂ ಭಯಂಕರ ಯುದ್ಧವು ಪ್ರಾರಂಭಿಸಿತು. ಇಬ್ಬರೂ ಸಮಬಲವುಳ್ಳವರಾದ್ದರಿಂದ ಒಬ್ಬರನ್ನೊಬ್ಬರು ಕೊಲ್ಲಬೇಕೆಂಬ ಹಟದಿಂದ ಘೋರ ಯುದ್ಧವನ್ನು ನಡೆಸಿದರು. ಈ ಎರಡು ಪಕ್ಷಗಳವರೂ ಆಗಾಗ ಮಾಡುತ್ತಿದ್ದ ಸಿಂಹನಾದಗಳೂ, ಒಬ್ಬರನ್ನೊಬ್ಬರು ನೋಡಿದಾಗ ಕೋಪದಿಂದ ಬೊಬ್ಬಿಡುವ ಧ್ವನಿಗಳೂ ಪ್ರಬಲವಾಗಿ ಕೇಳಿಸಿತು. ಈ ಸೇನೆಗಳ ಸಂಚಾರದಿಂದ ಎದ್ದ ಕೆಂಧೂಳಿಯು ಹತ್ತುದಿಕ್ಕುಗಳನ್ನೂ ಮರೆಸುವಂತೆ ವ್ಯಾಪಿಸಿತು. ಯುದ್ಧ ಭೂಮಿಯೆಲ್ಲವೂ ಹೀಗೆ ಧೂಳಿನಿಂದ ಮುಚ್ಚಿದಾಗ, ಧ್ವಜಪತಾಕೆಗಳಾಗಲೀ, ರಥಾಶ್ವಗಳಾಗಲೀ, ರಥಗಳಾಗಲೀ, ಆಯುಧಗಳಾಗಲೀ, ಸ್ವಲ್ಪವೂ ಕಾಣಿಸುತ್ತಿರಲಿಲ್ಲ. ಆ ತುಮುಲ ಯುದ್ಧದಲ್ಲಿ ವಾನರ ರಕ್ಕಸರಿಬ್ಬರೂ ಮಾಡುತ್ತಿದ್ದ ಸಿಂಹನಾದವೊಂದೇ ಪ್ರಬಲವಾಗಿ ಕೇಳಿಸುತ್ತಿತ್ತು. ಅಲ್ಲಲ್ಲಿ ಕೆಲವು ವಾನರರು ಕೋಪಾವೇಶ ಪರವಶರಾಗಿ ತಮ್ಮವರೆಂಬುದನ್ನೂ ತಿಳಿಯದೇ, ತಮ್ಮ ಕಡೆಯವರನ್ನೇ ಬಡಿದು ಕೊಲ್ಲುತ್ತಿದ್ದರು. ಹೀಗೆಯೇ ರಕ್ಕಸರೂ ತಮ್ಮ ಕಡೆಯವರನ್ನೇ ಶತ್ರುಗಳೆಂದು ತಿಳಿದು ಕೊಲ್ಲುತ್ತಿದ್ದರು. ಆ ಯುದ್ಧ ಭೂಮಿಯೆಲ್ಲವೂ ಕ್ಷಣಮಾತ್ರದಲ್ಲಿ ರಕ್ತಮಯವಾಯಿತು. ಈ ಸೇನೆಗಳ ಕಾಲಿನ ತುಳಿತದಿಂದ ಅಲ್ಲಲ್ಲಿ ಕೆಸರುಗಟ್ಟಿತು. ಈ ರಕ್ತಪ್ರವಾಹದಿಂದ, ನೆಲದಿಂದೆದ್ದ ಧೂಳಿಯು ಕ್ರಮವಾಗಿ ಕಡಿಮೆಯಾಯಿತು. ಅಲ್ಲಿನ ಸಮಸ್ತ ಭೂಪ್ರದೇಶವೂ ಶವಗಳಿಂದಲೇ ತುಂಬಿಹೋಯಿತು. ವಾನರ ರಕ್ಕಸರೀರ್ವರೂ ಮರಗಳಿಂದಲೂ, ಶಿಲೆಗಳಿಂದಲೂ, ಆಯುಧಗಳಿಂದಲೂ, ಪ್ರಾಸಗಳಿಂದಲೂ, ಒಬ್ಬರಿಗೊಬ್ಬರು ಹೊಡೆದಾಡುತ್ತಿದ್ದರು. ಭಯಂಕರಕರ್ಮಿಗಳಾದ ಕೆಲವು ವಾನರರು, ದೊಡ್ಡ ಬಾಗಿಲ ಅಗುಳಿಗಳಂತಿದ್ದ ತಮ್ಮ ಭುಜಗಳಿಂದ ಶತ್ರುಗಳನ್ನು ಬಡಿದು ಕೊಂದರು. ಅದೇ ಪ್ರಕಾರ ರಾಕ್ಷಸರೂ ಮಹಾಕೋಪದಿಂದ ಪ್ರಾಸತೋಮರಾದಿ ಮಹಾಯುಧಗಳಿಂದ ವಾನರರನ್ನು ವಧಿಸುತ್ತಿದ್ದರು. ರಕ್ಕಸರು ತೋರುತ್ತಿದ್ದ ಸಾಹಸಕ್ಕೆ ಸೇನಾಪತಿಯಾದ ಅಕಂಪನನು ಮೆಚ್ಚಿಗೆ ತೋರಿ, ಅವರನ್ನು ಉದ್ರೇಕಿಸಿ, ತಾನೂ ಮಹತ್ತಾದ ಕೋಪದಿಂದ ಉಕ್ಕುತ್ತಿದ್ದನು. ಇತ್ತಲಾಗಿ ವಾನರರೂ ಕೂಡ ಶತ್ರುಗಳನ್ನಿದಿರಿಸಿ, ಅವರ

ಕೈಲಿದ್ದ ಆಯುಧಗಳನ್ನು ಕಿತ್ತುಕೊಂಡು ದೊಡ್ಡ ಮರಗಳಿಂದಲೂ, ಕಲ್ಲುಗಳಿಂದಲೂ ಅವರನ್ನು ಬಡಿಯುತ್ತಿದ್ದರು. ಇಷ್ಟರಲ್ಲಿ ಕುಮುದ, ನಳ, ಮೈಂದದ್ವಿವಿದರೆಂಬ ನಾಲ್ಕು ಮಂದಿ ವಾನರವೀರರು ಶತ್ರುಗಳ ಹಾವಳಿಯನ್ನು ನೋಡಿ, ಕೋಪಗೊಂಡವರಾಗಿ, ಮಹಾ ವೇಗದಿಂದ ಮುಂದೆ ಬಂದರು. ಮಹಾವೀರ್ಯವುಳ್ಳವರಾದ ಈ ನಾಲ್ಕುಮಂದಿ ವಾನರ ಯೂಧಪತಿಗಳೂ, ರಾಕ್ಷಸರ ಸೇನಾ ಮುಖವನ್ನು ಸೇರಿ ದೊಡ್ಡ ದೊಡ್ಡ ಮರಗಳನ್ನು ಹಿಡಿದು ಲೀಲಾಮಾತ್ರದಿಂದ ದೊಡ್ಡ ಯುದ್ಧವನ್ನು ನಡೆಸಿದರು. ಈ ನಾಲ್ವರೂ ಶತ್ರುಸೇನೆಯನ್ನು ಹೊಕ್ಕು ಗುಂಪುಗುಂಪಾಗಿ ರಾಕ್ಷಸರನ್ನು ಹಿಡಿದು ಕೊಲ್ಲುತ್ತಿದ್ದರು.

ಇಲ್ಲಿಗೆ ಐವತ್ತೈದನೆಯ ಸರ್ಗವು.

ಅಕಂಪನನು ಹನುಮಂತನಿಂದ ಹತನಾದುದು.

ಈ ವಾನರೋತ್ತಮರು ಹೀಗೆ ಶತ್ರುಸೇನೆಯಲ್ಲಿ ದೊಡ್ಡ ಸಾಹಸವನ್ನು ನಡೆಸುತ್ತಿರುವುದನ್ನು ನೋಡಿ, ಅಕಂಪನನು ಅತ್ಯಾಕ್ರೋಶಹೊಂದಿ, ತನ್ನ ಮಹಾ ಧನುಸ್ಸನ್ನು ಮಿಡಿಯುತ್ತ ತನ್ನ ಸಾರಥಿಯನ್ನು ಕುರಿತು, "ಎಲೆ ಸೂತನೆ! ಅದೋ ಅಲ್ಲಿ ವಾನರರು ನಮ್ಮವರನ್ನು ತಂಡತಂಡವಾಗಿ ಕೊಲ್ಲುತ್ತಿರುವರು. ಶೀಘ್ರವಾಗಿ ರಥವನ್ನು ಅಲ್ಲಿಗೆ ನಡೆಸು! ಆ ವಾನರರೆಲ್ಲರೂ ಬಹಳ ಭಯಂಕರ ಸ್ವರೂಪವುಳ್ಳವರು! ಬಹಳ ಬಲಾಢ್ಯರು! ಗಿಡಗಳನ್ನೂ, ಬೆಟ್ಟಗಳನ್ನೂ ಆಯುಧಗಳಾಗಿ ಹಿಡಿದು ನಮಗಿದಿರಾಗಿ ನಿಂತಿರುವರು. ಯುದ್ಧವಿಶಾರದರೆಂದು ಪ್ರಸಿದ್ಧಿಪಡೆದಿರುವ ಆ ಸಮಸ್ತ ವಾನರರನ್ನೂ ನಾನು ಈಗಲೇ ಕೊಲ್ಲಬೇಕೆಂದಿರುವೆನು. ಇವರಿಂದ ನಮ್ಮ ಸಮಸ್ತ ಸೇನೆಯೂ ಹತವಾಗಿರುವಂತೆ ಕಾಣುತ್ತಿದೆ. ರಥವನ್ನು ಬೇಗನೆ ನಡೆಸು" ಎಂದನು. ರಥಿಕೋತ್ತಮನಾದ ಅಕಂಪನನು ತನ್ನ ರಥವನ್ನು ನಡೆಸಿಕೊಂಡು ಬಂದು, ಕೋಪದಿಂದ ಬಾಣಪರಂಪರೆಗಳನ್ನು ಕರೆಯುತ್ತ, ಅನೇಕ ವಾನರರನ್ನು ಕೊಂದನು. ಆಗ ವಾನರರಿಗೆ ಅವನ ಮುಂದೆ ನಿಲ್ಲುವುದೇ ಸಾಧ್ಯವಿಲ್ಲವಾಯಿತು. ಇನ್ನು ಅವನೊಡನೆ ಯುದ್ಧ ಮಾಡುವುದೆಂದರೇನು ? ಸಮಸ್ತ ವಾನರರೂ ಅಕಂಪನನ ಬಾಣಗಳಿಂದ ನೊಂದು ಓಡುವುದಕ್ಕಾರಂಭಿಸಿದರು. ಹೀಗೆ ತನ್ನ ಕಡೆಯ ವಾನರರು ಅಕಂಪನನಿಂದ ಮೃತ್ಯುವಶರಾಗುತ್ತಿದ್ದುದನ್ನು ನೋಡಿ

ಮಹಾಬಲಾಢ್ಯನಾದ ಹನುಮಂತನು, ಆ ಶತ್ರುಗಳನ್ನು ತಡೆಯುವುದಕ್ಕೆ ಮುಂದೆ ಬಂದನು. ಈ ಹನುಮಂತನು, ತಮ್ಮ ಸಹಾಯಕ್ಕಾಗಿ ಮುಂದೆ ಬಂದುದನ್ನು ನೋಡಿ, ಆ ವಾನರವೀರರೂ ಕೂಡ ಸಂತೋಷಗೊಂಡವರಾಗಿ, ಎಲ್ಲರೂ ಹಿಂದಿರುಗಿ ಬಂದು ಗುಂಪುಕೂಡಿ, ಹನುಮಂತನನ್ನು ಸುತ್ತಿ ನಿಂತರು. ಆ ಹನುಮಂತನು ಮುಂದೆ ಬಂದು ನಿಂತುದುದನ್ನು ನೋಡಿದ ಅಲ್ಲಿನ ಎಲ್ಲ ವಾನರಯೂಥಪತಿಗಳಿಗೂ ಮೊದಲಿದ್ದ ಬಲವು ಇಮ್ಮಡಿಯಾದಂತೆ ತೋರಿತು. ಇಷ್ಟರಲ್ಲಿ ಅಕಂಪನನು ತನ್ನಮುಂದೆ ಬೆಟ್ಟದಂತೆ ನಿಂತಿದ್ದ ಹನುಮಂತನನ್ನು ನೋಡಿ, ಇಂದ್ರನು ಪರ್ವತಗಳ ಮೇಲೆ ಮಳೆಗರೆಯುವಂತೆ, ಅವನ ಮೇಲೆ ಬಾಣವರ್ಷಗಳನ್ನು ಕರೆದನು. ಬಲಾಢ್ಯನಾದ ಹನುಮಂತನಾದರೋ, ತನ್ನ ಮೇಲೆ ಬೀಳುತ್ತಿದ್ದ ತೀಕ್ಷ್ಣ ಬಾಣಗಳನ್ನೂ ಲಕ್ಷ್ಯಮಾಡದೆ ಅಕಂಪನನ್ನು ಕೊಲ್ಲಬೇಕೆಂದು ನಿರ್ಧರಿಸಿಕೊಂಡನು. ಆ ಕ್ಷಣವೇ, ತೇಜಸ್ವಿಯೂ, ವಾಯುಪುತ್ರನೂ ಆದ ಹನುಮಂತನು ಭೂಮಿಯು ನಡುಗುವಂತೆ ಕಾಲಿಡುತ್ತ, ಆ ಅಕಂಪನನ ಎದುರಿಗೆ ಬಂದನು. ತೇಜಸ್ಸಿನಿಂದ ದೇದೀಪ್ಯಮಾನವಾಗಿ, ಆಗಾಗ ಸಿಂಹನಾದ ಮಾಡುತ್ತಿದ್ದ ಈ ಹನುಮಂತನ ರೂಪವು, ಮಧ್ಯಾಹ್ನದ ಸೂರ್ಯನ ತೇಜಸ್ಸಿನಂತೆ ನೋಡಲು ಅಸಾಧ್ಯವಾಗಿತ್ತು! ಅತಿ ಕೋಪಾವಿಷ್ಟನಾದ ಹನುಮಂತನು, ಆಗ ತನ್ನಲ್ಲಿ ಯಾವ ಆಯುಧವೂ ಇಲ್ಲದುದನ್ನು ನೋಡಿ, ಸಮೀಪದಲ್ಲಿದ್ದ ಒಂದು ಬೆಟ್ಟವನ್ನು ಕೈಗೆತ್ತಿಕೊಂಡನು. ಹೀಗೆ ಆ ವಾಯುಪುತ್ರನು ಒಂದೇ ಕೈಯಿಂದ ಬೆಟ್ಟವನ್ನು ಹಿಡಿದು, ಸಿಂಹನಾದ ಮಾಡುತ್ತ, ಅದನ್ನು ಗಿರಗಿರನೆ ತಿರುಗಿಸಿದನು. ಹಾಗೆಯೇ ಆ ಆಂಜನೇಯನು ನಮುಚಿಯನ್ನಿದಿರಿಸುವುದಕ್ಕಾಗಿ ವಜ್ರಾಯುಧವನ್ನೆತ್ತಿಕೊಂಡು ಬಂದ ಮಹೇಂದ್ರನಂತೆ, ಆ ಪರ್ವತವನ್ನು ತಿರುಗಿಸುತ್ತ, ರಾಕ್ಷಸಸೇನಾಪತಿಯಾದ ಅಕಂಪನನ ಮೇಲೆ ನುಗ್ಗಿದನು. ಅಕಂಪನನಾದರೋ, ಹೀಗೆ ದೊಡ್ಡ ಬೆಟ್ಟವನ್ನು ಹಿಡಿದು ತನ್ನೆಡೆಗೆ ಬರುತ್ತಿದ್ದ ಹನುಮಂತನನ್ನು ದೂರದಿಂದಲೇ ಕಂಡು, ಆ ಕ್ಷಣವೇ ಅರ್ಧಚಂದ್ರ ಬಾಣವನ್ನು ಪ್ರಯೋಗಿಸಿ, ಆ ಹನುಮಂತನು ಹಿಡಿದಿದ್ದ ಬೆಟ್ಟವನ್ನು ತುಂಡಾಗಿ ಮಾಡಿದನು. ಆಗ ಹನುಮಂತನು ತಾನು ತಂದಿದ್ದ ಪರ್ವತವು ಅಂತರಿಕ್ಷದಲ್ಲಿ ಈ ರೀತಿ ಬಾಣದಿಂದ ಭಿನ್ನವಾಗಿ ಬಿದ್ದುದನ್ನು ನೋಡಿ ಅತ್ಯಾಕ್ರೋಶವನ್ನು ಹೊಂದಿ, ವೇಗದಿಂದ ಹೋಗಿ ಸಮೀಪದಲ್ಲಿ ಬೆಟ್ಟದಂತೆ ಬೆಳೆದಿದ್ದ ಒಂದು ಆಲದ ಮರವನ್ನು ಕಿತ್ತುಕೊಂಡು, ದೊಡ್ಡದೊಡ್ಡ ಶಾಖೆಗಳಿಂದೊಡಗೂಡಿದ ಆ ಮರ

ವನ್ನು ಗಿರಗಿರನೆ ತಿರುಗಿಸುತ್ತ ತನ್ನ ತೊಡೆಯವೇಗದಿಂದಲೇ ಸಮೀಪದಲ್ಲಿರುವ ವೃಕ್ಷಗಳು ಮುರಿಯುವಂತೆಯೂ, ತನ್ನ ಕಾಲಿನ ತುಳಿತಕ್ಕೆ ಭೂಮಿಯು ಭೇದಿಸು ವಂತೆಯೂ, ಮಹಾವೇಗದಿಂದ ಅಕಂಪನನನ್ನಿದಿರಿಸಿ ಮುಂದೆ ಹೋದನು. ಹೀಗೆ ಹನುಮಂತನು ಕೋಪದಿಂದ ಮುಂದೆ ಹೋಗುವಾಗಲೇ, ಅಲ್ಲಲ್ಲಿ ಸಿಕ್ಕಿದ ಆನೆಗಳನ್ನೂ, ಮಾವುತರನ್ನೂ, ಅಲ್ಲಲ್ಲಿ ಸಿಕ್ಕಿದ ರಥಗಳನ್ನೂ, ತನಗಿದಿರಾಗಿ ರಥಾರೂಢರಾಗಿದ್ದ ರಥಿಕರನ್ನೂ, ಎದುರಾದ ಪದಾತಿಗಳನ್ನೂ ಕ್ರಮಕ್ರಮವಾಗಿ ಕೊಲ್ಲುತ್ತ ಬಂದನು. ಕೋಪಗೊಂಡ ಕಾಲಾಂತಕನಂತೆ ಆ ಯುದ್ಧಭೂಮಿಯಲ್ಲಿ ರಕ್ಕಸರ ಸೇನೆಯನ್ನು ಕೊಲ್ಲುವ ಆ ಹನುಮಂತನನ್ನು ನೋಡಿ, ರಾಕ್ಷಸರೆಲ್ಲರಿಗೂ, ಭಯ ಹುಟ್ಟಿತು. ಅನೇಕರು ಇವನ ಮುಂದೆ ನಿಲ್ಲಲಾರದೆ ಪಲಾಯನ ಮಾಡುತ್ತಿದ್ದರು. ಇಷ್ಟರಲ್ಲಿ ರಾಕ್ಷಸವೀರನಾದ ಅಕಂಪನನು, ತನ್ನ ಕಡೆಯವರು ಈ ರೀತಿ ಪಲಾಯನ ಮಾಡುವುದನ್ನೂ, ಹನುಮಂತನು ಕೋಪದಿಂದ ಮುಂದೆ ಬರುವುದನ್ನೂ ನೋಡಿ ಅತ್ಯಾಕ್ರೋಶವನ್ನು ಹೊಂದಿದವನಾಗಿ, ಸಿಂಹನಾದ ಮಾಡುತ್ತಾ ಮರ್ಮಭೇದಕ ಗಳಾದ ಹದಿನಾಲ್ಕು ತೀಕ್ಷ್ಣಬಾಣಗಳಿಂದ ಹನುಮಂತನನ್ನು ಪ್ರಹರಿಸಿದನು. ಹನುಮಂತನ ದೇಹದಲ್ಲಿ ಪರಂಪರೆಯಾಗಿ ಬಾಣಗಳು ಬಂದು ನಾಟಲು, ಅನೇಕ ವೃಕ್ಷಗಳಿಂದ ತುಂಬಿದ ದೊಡ್ಡ ಪರ್ವತದಂತೆ ಕಾಣುತ್ತಿದ್ದನು. ಮಹಾಕಾಯವುಳ್ಳವ ನಾಗಿಯೂ, ಮಹಾವೀರ್ಯವುಳ್ಳವನಾಗಿಯೂ, ಮಹಾಧೈರ್ಯಶಾಲಿಯಾಗಿಯೂ ಇದ್ದ ಆ ಹನುಮಂತನು, ಅಕಂಪನನ ಬಾಣಗಳಿಂದ ನಾಟಿದ ದೇಹವುಳ್ಳವ ನಾಗಿ ಪುಷ್ಪಿತವಾದ ಮುತ್ತುಗದ ಮರದಂತೆಯೂ, ಹೊಗೆಯಿಲ್ಲದೆ ಉರಿಯು ತ್ತಿರುವ ಅಗ್ನಿಹೋತ್ರನಂತೆಯೂ ಕಾಣಿಸಿದನು. ಆಮೇಲೆ ವೀರನಾದ ಹನುಮಂತನು ಮಿತಿಮೀರಿದ ತನ್ನ ವೇಗವನ್ನವಲಂಬಿಸಿ, ಮತ್ತೊಂದು ದೊಡ್ಡ ಮರವನ್ನು ಕಿತ್ತುತಂದು, ಅದರಿಂದ ರಾಕ್ಷಸಸೇನಾಪತಿಯಾದ ಆ ಅಕಂಪನನ ತಲೆಯಮೇಲೆ ಪ್ರಹರಿಸಿದನು. ಮಹಾತ್ಮನಾಗಿಯೂ, ವಾನರೋತ್ತಮನಾಗಿಯೂ ಇದ್ದ ಆ ಹನುಮಂತನು ವೃಕ್ಷದಿಂದ ಪ್ರಹರಿಸಿದೊಡನೆಯೇ ಅಕಂಪನನು ಹತನಾಗಿ ಬಿದ್ದನು. ಅಕಂಪನನು ಹನುಮಂತನಿಂದ ಹತನಾದುದನ್ನು ನೋಡಿ, ಅಲ್ಲಿದ್ದ ಸಮಸ್ತ ರಾಕ್ಷಸ ರಿಗೂ ಮಹಾಭಯವು ಹುಟ್ಟಿತು. ಎಲ್ಲರೂ ಭಯದಿಂದ ಗಡಗಡನೆ ನಡುಗು ತ್ತಿದ್ದರು. ಎಲ್ಲರ ಮನಸ್ಸಿಗೂ ಮಹಾವ್ಯಥೆಯುಂಟಾಯಿತು. ಆ ರಾಕ್ಷಸರೆಲ್ಲರೂ ಹೀಗೆ ಪರಾಜಯವನ್ನು ಹೊಂದಿ, ತಾವು ಹಿಡಿದಿದ್ದ ಆಯುಧಗಳನ್ನು ಅಲ್ಲಲ್ಲಿಯೇ

ಬಿಸುಟು, ತಮ್ಮನ್ನು ಬೆನ್ನಟ್ಟಿ ಬರುತ್ತಿದ್ದ ವಾನರರ ಹಾವಳಿಯನ್ನು ತಡೆಯಲಾರದೆ ಲಂಕೆಗೆ ಓಡಿಹೋದರು. ಹೀಗೆ ಪರಾಜಿತರಾಗಿ ಓಡುತ್ತಿದ್ದ ಆ ರಾಕ್ಷಸರ ದುರವಸ್ಥೆಯನ್ನು ಕೇಳಬೇಕೆ ? ಆ ರಾಕ್ಷಸರೆಲ್ಲರೂ ತಾವು ಬದುಕಿದರೆ ಸಾಕೆಂದು ದಿಕ್ಕುದಿಕ್ಕಿಗೆ ಪಲಾಯನ ಮಾಡುವಾಗ, ಪ್ರತಿಯೊಬ್ಬರೂ ಬಿಚ್ಚಿದ ತಲೆಕೂದಲುಳ್ಳವರಾಗಿಯೂ ಭಯದಿಂದ ತಡಬಡಿಸುತ್ತಲೂ ಇದ್ದರು. ಒಬ್ಬೊಬ್ಬರ ಮೈಯಲ್ಲಿಯೂ ಬೆವರು ಕಿತ್ತುಕೊಂಡಿತು. ಅವರು ನಿಟ್ಟುಸಿರು ಬಿಡುತ್ತ, ಮಾನದ ಮೇಲೆಯೂ ದೃಷ್ಟಿಯಿಲ್ಲದೆ, ಒಬ್ಬರನ್ನೊಬ್ಬರು ನೂಕಿಕೊಂಡು ಪಲಾಯನ ಮಾಡುತ್ತಿದ್ದರು. ಅವರು ಆಗಾಗ ಹಿಂತಿರುಗಿ ನೋಡುತ್ತ, ತಮ್ಮ ಮೈಮೇಲೆ ಪ್ರಜ್ಞೆಯಿಲ್ಲದೆ ಓಡಿದರು. ಹೀಗೆ ರಾಕ್ಷಸರೆಲ್ಲರೂ ಭಯದಿಂದ ಪಲಾಯನ ಮಾಡಿ ಲಂಕೆಯನ್ನು ಸೇರಿದ ಮೇಲೆ ಇತ್ತಲಾಗಿ ಬಲಾಢ್ಯರಾದ ಸಮಸ್ತವಾನರರೂ ಸೇರಿ ಹನುಮಂತನನ್ನು ಪೂಜಿಸಿದರು. ಬಲಾಢ್ಯನಾದ ಹನುಮಂತನೂ ಕೂಡ ಅವರ ಸತ್ಕಾರಕ್ಕೆ ಸಂತೋಷಪಟ್ಟವನಾಗಿ ಅವರನ್ನು ಕುರಿತು, “ ಎಲೆ ಮಿತ್ರರೆ, ನಿಮ್ಮ ಸಹಾಯದ ಬಲದಿಂದಲೇ ನನಗೆ ಈ ಜಯವುಂಟಾಯಿತೇ ಹೊರತು ಬೇರೆಯಲ್ಲ ” ಎಂದು ಹೇಳಿ, ಅವರೆಲ್ಲರನ್ನೂ ಅವರವರ ಗೌರವಕ್ಕೆ ತಕ್ಕಂತೆ ಮನ್ನಿಸಿದನು. ಜಯಶೀಲರಾದ ಎಲ್ಲ ವಾನರರೂ, ಹನುಮಂತನಿಗುಂಟಾದ ಜಯವನ್ನು ತಮ್ಮ ಸಕಲ ಸೈನ್ಯಕ್ಕೂ ತಿಳಿಸುವಂತೆ, ತಮ್ಮ ಶಕ್ತಿಯನ್ನು ಮೀರಿ ಸಿಂಹನಾದಗಳನ್ನು ಮಾಡಿದರು. ಆ ಸಿಂಹನಾದ ಧ್ವನಿಯಿಂದಲೇ ಬಲಾಢ್ಯರಾದ ಅನೇಕ ರಾಕ್ಷಸರನ್ನು ನಡುಗಿಸುತ್ತಿದ್ದರು. ಹೀಗೆ ವಾಯುಪುತ್ರನಾದ ಆ ಮಹಾಕಪಿಯು ಅಕಂಪನನೊಡನೆ ಅನೇಕ ರಾಕ್ಷಸರನ್ನೂ ಸಂಹರಿಸಿ, ಪೂರ್ವದಲ್ಲಿ ಭಯಂಕರನಾಗಿಯೂ, ಶತ್ರುನಾಶಕನಾಗಿಯೂ ಇದ್ದ ಕೈಟಭಾಸುರನನ್ನು ಕೊಂದ ಮಹಾವಿಷ್ಣುವಿನಂತೆ ವೀರಲಕ್ಷ್ಮಿವಿರಾಜಿತನಾಗಿ, ಆ ರಣರಂಗದಲ್ಲಿ ಶೋಭಿಸುತ್ತಿದ್ದನು. ಸಮಸ್ತ ದೇವತೆಗಳೂ ಆ ಹನುಮಂತನನ್ನು ಕೊಂಡಾಡಿ ಪೂಜಿಸುತ್ತಿದ್ದರು. ರಾಮಲಕ್ಷ್ಮಣರೂ, ಸುಗ್ರೀವಾದಿ ವಾನರರೂ ಮಹಾಬಲಾಢ್ಯನಾದ ವಿಭೀಷಣನೂ, ಆ ಹನುಮಂತನ ವೀರ್ಯಕ್ಕೆ ಮೆಚ್ಚಿ ಅವನನ್ನು ಬಹಳವಾಗಿ ಪೂಜಿಸಿ ಮನ್ನಿಸಿದರು.

ಇಲ್ಲಿಗೆ ಐವತ್ತಾರನೆಯ ಸರ್ಗವು.

ಪ್ರಹಸ್ತನು ಯುದ್ಧಕ್ಕೆ ಹೊರಟುದುದು.

ರಾಕ್ಷಸೇಶ್ವರನಾದ ರಾವಣನು ಅಕಂಪನನ ವಧವನ್ನು ಕೇಳಿದೊಡನೆ ತಡೆಯಲಾರದ ಕೋಪವನ್ನು ಹೊಂದಿದನು. ಭಯದಿಂದ ಅವನ ಮುಖದಲ್ಲಿ ಸ್ವಲ್ಪವಾಗಿ ದೈನ್ಯವೂ ತೋರಿತು. ಮುಂದಿದ್ದ ತನ್ನ ಸಮಸ್ತ ಮಂತ್ರಿಗಳನ್ನೂ ಕಣ್ಣಿಟ್ಟು ನೋಡಿದನು. ತನ್ನಲ್ಲಿ ತಾನೇ ಮುಹೂರ್ತಕಾಲದವರೆಗೆ ಚಿಂತಿಸಿದನು. ಕೊನೆಗೆ ಮಂತ್ರಿಗಳೊಡನೆ ಆಲೋಚಿಸಿ, ಮರುದಿನ ಪ್ರಾತಃಕಾಲದಲ್ಲಿ ಹಾಸಿಗೆಯಿಂದೆದ್ದೊಡನೆಯೇ ತನ್ನ ಸೇನಾವ್ಯೂಹಗಳೆಲ್ಲವನ್ನೂ ನೋಡಿಬರುವುದಕ್ಕಾಗಿ ಪಟ್ಟಣವನ್ನು ಸುತ್ತುವುದಕ್ಕೆ ಹೋದನು. ಹೀಗೆ ರಾವಣನು ಅರಮನೆಯಿಂದ ಹೊರಟು ಅನೇಕ ರಾಕ್ಷಸ ಸಮೂಹಗಳಿಂದ ಸುರಕ್ಷಿತವಾಗಿಯೂ, ಅನೇಕ ಸೇನಾ ವ್ಯೂಹಗಳಿಂದ ನಿಬಿಡವಾಗಿಯೂ, ಧ್ವಜಪತಾಕೆಗಳಿಂದ ಶೋಭಿತವಾಗಿಯೂ ಇದ್ದ ತನ್ನ ಪಟ್ಟಣವೆಲ್ಲವನ್ನೂ ನೋಡಿದನು. ರಾಕ್ಷಸೇಶ್ವರನಾದ ರಾವಣನು ತನ್ನ ಪುರದ ಸುತ್ತಲೂ ವಾನರ ಸೇನೆಯು ಮುತ್ತಿರುವುದನ್ನು ನೋಡಿ ಸಹಿಸಲಾರದೆ, ಉಚಿತಕಾಲದಲ್ಲಿ ತನಗೆ ಪರಮಾಪ್ತನಾಗಿಯೂ, ಯುದ್ಧವಿಶಾರದನಾಗಿಯೂ ಇರುವ ಪ್ರಹಸ್ತನನ್ನು ಕರೆದು ಹೇಳುವನು. “ ಪ್ರಹಸ್ತಾ ನೀನಾದರೋ ಯುದ್ಧವಿಶಾರದನು. ನಿನಗೆ ತಿಳಿಯದ ವಿಷಯವಿಲ್ಲ ! ಈಗ ಶತ್ರುಸೇನೆಯು ಅಕಸ್ಮಾತ್ತಾಗಿ ನಮ್ಮ ಪಟ್ಟಣವನ್ನು ಮುತ್ತಿ ಪೀಡಿಸುತ್ತಿರುವುದು. ಇದನ್ನು ತಪ್ಪಿಸುವುದಕ್ಕೆ, ಯುದ್ಧವಲ್ಲದೆ, ಬೇರೆ ಯಾವ ಉಪಾಯವೂ ನನಗೆ ತೋರಲಿಲ್ಲ. ಈ ಕಾರ್ಯಭಾರವನ್ನು ಸರಿಯಾಗಿ ನಡೆಸಬೇಕಾದರೆ, ನಾನಾಗಲೀ, ನೀನಾಗಲೀ, ನನ್ನ ಕುಮಾರನಾದ ಇಂದ್ರಜಿತ್ತಾಗಲೀ, ನಿಕುಂಭನಾಗಲೀ, ಇಷ್ಟು ಮಂದಿಯಲ್ಲಿ ಯಾರಾದರೂ ಒಬ್ಬರು ಮುಂದೆ ನಿಲ್ಲಬೇಕೇ ಹೊರತು, ಇದನ್ನು ತಪ್ಪಿಸುವುದಕ್ಕೆ ಬೇರೊಬ್ಬರಿಂದ ಸಾಧ್ಯವಿಲ್ಲ. ಆದುದರಿಂದ ಅಂತಹ ಮಹಾಬಲ ಸಂಪನ್ನನಾದ ನೀನೇ ಈಗ ತಕ್ಕಷ್ಟು ಸೇನೆಯನ್ನು ಸೇರಿಸಿಕೊಂಡು ಶೀಘ್ರದಲ್ಲಿಯೇ ಆ ವಾನರರಿರುವ ಸ್ಥಳಕ್ಕೆ ಹೋಗಿ ಜಯವನ್ನು ಹೊಂದಿಬರಬೇಕು. ಪ್ರಹಸ್ತಾ ! ನೀನು ಅಲ್ಲಿಗೆ ಹೋಗಿ ಯುದ್ಧಮಾಡಬೇಕಾದ ಅವಶ್ಯವೇ ಇಲ್ಲ. ಇಲ್ಲಿಂದ ನೀನು ಯುದ್ಧಸನ್ನದ್ಧನಾಗಿ ಹೊರಟಾಗ, ನಿನ್ನ ಸೈನಿಕರ ಸಿಂಹನಾದ ಧ್ವನಿಗಳನ್ನು ಕೇಳಿದ ಮಾತ್ರದಲ್ಲಿಯೇ ಸ್ವಭಾವ ಚಪಲವಾದ ಆ ವಾನರಸೇನೆಯೆಲ್ಲವೂ ಭಯದಿಂದ ಪಲಾಯನ ಮಾಡಬಹುದು. ಆ ವಾನರರು ಸಹಜವಾಗಿಯೇ ಧೈರ್ಯವಿಲ್ಲದವರು. ಯುದ್ಧ

ಕಾರ್ಯದಲ್ಲಿ ಚೆನ್ನಾಗಿ ಶಿಕ್ಷೆ ಹೊಂದದವರು. ಬಹಳ ಚಪಲಸ್ವಭಾವವುಳ್ಳವರು. ಆದುದರಿಂದ ಸಿಂಹಗರ್ಜನೆಯನ್ನು ಕೇಳಿದ ಆನೆಗಳಂತೆ ನಿನ್ನ ಸಿಂಹನಾದವನ್ನು ಕೇಳಿದೊಡನೆಯೇ ಪಲಾಯನ ಮಾಡುವರು. ಎಲೈ ಮಂತ್ರಿಶ್ರೇಷ್ಠನೆ! ಹಾಗೆ ವಾನರರೆಲ್ಲರೂ ಪಲಾಯನ ಮಾಡಿದ ಮೇಲೆ, ರಾಮಲಕ್ಷ್ಮಣರಿಬ್ಬರೂ ತಮಗೆ ಬೇರೆ ಸಹಾಯವಿಲ್ಲದ್ದರಿಂದ ನಿನ್ನ ಕೈಗೆ ಸಿಕ್ಕಿಬೀಳುವರು. ಪ್ರಹಸ್ತಾ ! ಒಂದುವೇಳೆ ಈ ಯುದ್ಧದಲ್ಲಿಯೂ ನಮಗೇ ಹಾನಿಯುಂಟಾಗಬಾರದೇಕೆ ? ಜಯಾಪಜಯಗಳನ್ನು ಮೊದಲೇ ಹೇಗೆ ನಿರ್ಣಯಿಸುವುದು ? ಆದ್ದರಿಂದ ಯುದ್ಧ ಮಾಡದೆ ತಟಸ್ಥರಾಗಿರು ವುದರಲ್ಲಿ ದೋಷವೇನು ? ಎಂದು ಕೇಳುವೆಯಾ ! ಹಾಗಲ್ಲ ! ಒಂದುವೇಳೆ ನಾವು ಯುದ್ಧಮಾಡದೇ ತಟಸ್ಥರಾದರೂ ಶತ್ರುಗಳು ನಮ್ಮನ್ನು ಸುಮ್ಮನೆ ಬಿಡಲಾರರು. ಅವರಿಂದ ನಮಗೆ ಮರಣವುಂಟಾಗುವುದೇ ನಿಶ್ಚಯವು. ಹಾಗಿಲ್ಲದೆ ಈಗ ನಾವು ನಮ್ಮಿಂದ ಸಾಧ್ಯವಾದಷ್ಟು ಪ್ರಯತ್ನಮಾಡಿ, ಯುದ್ಧವನ್ನು ನಡೆಸಿದ ಪಕ್ಷದಲ್ಲಿ, ನಮಗೆ ಮರಣವೇ ಉಂಟಾಗುವುದೋ, ಜಯವೇ ಉಂಟಾಗುವುದೋ ನಿಶ್ಚಯಿಸಿ ತಿಳಿಯುವುದಕ್ಕಿಲ್ಲ. ಆದುದರಿಂದ ಜಯಶೀಲರಾಗಿ ಬರಬಹುದೆಂಬ ಸಂದೇಹವಾದರೂ ಉಂಟು. ಈಗ ನಾವು ಯುದ್ಧವನ್ನು ನಿಲ್ಲಿಸಿದ ಪಕ್ಷದಲ್ಲಿ ನಿಸ್ಸಂದೇಹವಾಗಿ ನಮಗೆ ಮರಣವೇ ಸಂಭವಿಸುವುದು. ಆದುದರಿಂದ ನಿಸ್ಸಂದೇಹವಾಗಿ ಸಂಭವಿಸುವ ಮರಣಕ್ಕಿಂತ, ಸಂದೇಹಾಸ್ಪದವಾದ ಮರಣಕ್ಕೆ ತಲೆಯೊಡ್ಡುವುದೇ ಮೇಲಲ್ಲವೆ ? ಆದ್ದರಿಂದ ಈಗ ನಾವು ಸುಮ್ಮನಿರುವುದಕ್ಕಿಂತಲೂ ಯುದ್ಧಕ್ಕೆ ಹೊರಡುವುದೇ ಉಚಿತವು. ಇದೇ ನನ್ನ ಅಭಿಪ್ರಾಯವು. ಇದರ ಮೇಲೆ ಈ ನನ್ನ ಅಭಿಪ್ರಾಯಕ್ಕೆ ಅನುಕೂಲವಾಗಿಯೋ, ಪ್ರತಿಕೂಲವಾಗಿಯೋ ನಿನ್ನ ಮನಸ್ಸಿಗೆ ಉಚಿತ ವೆಂದು ತೋರಿದುದನ್ನು ನನಗೆ ತಿಳಿಸು. ಹೇಗಿದ್ದರೂ ನೀನು ನನಗೆ ಹಿತವನ್ನು ಕೋರತಕ್ಕವನಾದ್ದರಿಂದ ನಿನ್ನ ಮನೋಭಿಪ್ರಾಯವೇ ನನಗೂ ಹಿತವಾಗುವುದು" ಎಂದನು. ರಾವಣನು ಹೇಳಿದ ಈ ಮಾತನ್ನು ಕೇಳಿ ಪ್ರಹಸ್ತನು, ಶುಕ್ರಾಚಾರ್ಯರು ದೈತ್ಯೇಂದ್ರನಿಗೆ ಮಂತ್ರಾಲೋಚನೆಯನ್ನು ಹೇಳುವಂತೆ, ಅವನನ್ನು ಕುರಿತು, "ಎಲೆ ರಾಜೇಂದ್ರನೇ! ಇದು ಮೊದಲೇ ನಾವು ಕಾರ್ಯನಿಪುಣರಾದ ವಿಭೀಷಣಾದಿ ಮಂತ್ರಿಗ ಳೊಡನೆ ಆಲೋಚಿಸಿದ ವಿಷಯವೇ ಹೊರತು ಹೊಸದಲ್ಲ. ಆ ಕಾಲದಲ್ಲಿ ನಮ್ಮಲ್ಲಿಯೇ ಒಬ್ಬರೊಬ್ಬರು ಒಂದೊಂದು ಮತವನ್ನು ಹಿಡಿದು ಭಿನ್ನಾಭಿಪ್ರಾಯವುಳ್ಳವರಾಗಿ, ಐಕಮತ್ಯವಿಲ್ಲದಿದ್ದರು. ಕೊನೆಗೆ ಒಬ್ಬೊಬ್ಬರಿಗೆ ಮನಸ್ತಾಪವೂ ಹುಟ್ಟುವಂತಾಯಿತು.

ಇದರಿಂದಲೇ ವಿಭೀಷಣನೂ ನಮ್ಮನ್ನು ಬಿಟ್ಟು ಶತ್ರುಪಕ್ಷವನ್ನು ಸೇರಿದನು. ನನಗೂ ಆಗ ಸೀತೆಯನ್ನು ರಾಮನಿಗೆ ಹಿಂತಿರುಗಿ ಕೊಡುವುದೇ ಮೇಲೆಂದೂ ಹಾಗಿಲ್ಲದಿದ್ದರೆ ಕಲಹಕ್ಕೆ ಕಾರಣವೆಂದೂ ಚೆನ್ನಾಗಿ ತಿಳಿದಿದ್ದಿತು. ನನ್ನ ನಿಶ್ಚಯದಂತೆಯೇ ಈಗ ಯುದ್ಧವು ಪ್ರಾಪ್ತವಾಗಿರುವುದನ್ನೂ ಕಣ್ಣಾರೆ ನೋಡುತ್ತಿರುವೆವು. ಎಲೆ ಮಹಾರಾಜನೆ ! ನನ್ನ ಮತವು ಹೇಗಿದ್ದರೇನು ? ಮುಖ್ಯವಾಗಿ ಇದುವರೆಗೆ ನೀನು ನನ್ನನ್ನು ಭೂಷಣಾದಿ ದಾನಗಳಿಂದಲೂ ಸಮ್ಮಾನದಿಂದಲೂ, ಪ್ರಿಯಭಾಷಣದಿಂದಲೂ, ಸಾಂತ್ವವಚನಗಳಿಂದಲೂ, ಎಷ್ಟೋವಿಧದಲ್ಲಿ ಸತ್ಕರಿಸಿರತಕ್ಕವನು. ಹೀಗೆ ನಿನ್ನಿಂದ ಅನೇಕ ವಿಧದಲ್ಲಿ ಸತ್ಕರಿಸಲ್ಪಟ್ಟ ನಾನು, ಈಗ ನಿನಗೆ ಕಷ್ಟಕಾಲವು ಬಂದೊದಗಿದಾಗ, ನಿನ್ನ ಮನಃಪ್ರೀತಿಗಾಗಿ ಯಾವ ಕಾರ್ಯವನ್ನು ತಾನೆ ಮಾಡಲೊಲ್ಲೆನು ! ಯಾವುದನ್ನಾಜ್ಞಾಪಿಸಿದರೂ ಸಿದ್ಧನಾಗಿರುವೆನು. ಎಲೆ ರಾಜೇಂದ್ರನೇ ! ನನಗೆ ನನ್ನ ಪ್ರಾಣಗಳಾಗಲಿ, ನನ್ನ ಮಕ್ಕಳಾಗಲಿ, ನನ್ನ ಪತ್ನಿಯಾಗಲಿ, ನನ್ನ ಧನಧಾನ್ಯಾದಿಸಮೃದ್ಧಿಗಳಾಗಲಿ, ನಿನಗಿಂತಲೂ ಹೆಚ್ಚು ಪ್ರೇಮಪಾತ್ರಗಳಲ್ಲ. ನಿನ್ನನ್ನು ಬಿಟ್ಟು ಅವುಗಳನ್ನು ರಕ್ಷಿಸಬೇಕಾದ ಅವಶ್ಯಕವೂ ನನಗಿಲ್ಲ. ಎಲೆ ಮಹಾರಾಜನೆ ! ಇದೋ ಈಗಲೇ ನಾನು ನಿನಗಾಗಿ ಯುದ್ಧವೆಂಬ ಅಗ್ನಿ ಕುಂಡದಲ್ಲಿ ನನ್ನ ಪ್ರಾಣಗಳನ್ನು ಆಹುತಿಮಾಡುವೆನು ನೋಡು " ಎಂದನು. ಸೇನಾಪತಿಯಾದ ಪ್ರಹಸ್ತನು ತನ್ನ ಪ್ರಭುವಾದ ರಾವಣನಿಗೆ ಈ ಮಾತನ್ನು ಹೇಳಿ ಸಮೀಪದಲ್ಲಿದ್ದ ಕೆಲವು ಬಲಾಧ್ಯಕ್ಷರನ್ನು ನೋಡಿ, " ಎಲೆ ಸೇನಾಧಿಕಾರಿಗಳೆ ! ಈ ಕೂಡಲೇ ನೀವು ದೊಡ್ಡ ರಾಕ್ಷಸ ಸೇನೆಯನ್ನು ಸಿದ್ಧಪಡಿಸಿಕೊಂಡು ಬನ್ನಿರಿ ! ಈಗ ನಾನು ರಣರಂಗಕ್ಕೆ ಹೋಗಿ, ಅಲ್ಲಿ ಸಿಡಿಲಿನಂತಿರುವ ನನ್ನ ಬಾಣಗಳ ವೇಗದಿಂದ ಸಕಲ ವಾನರಸೇನೆಯನ್ನೂ ಕೊಂದು, ಅವರ ರಕ್ತಮಾಂಸಗಳಿಂದ ಕಾಗೆ, ಹದ್ದು ಮೊದಲಾದ ಮಾಂಸಭಕ್ಷಕಗಳಾದ ಪಕ್ಷಿಗಳೆಲ್ಲಕ್ಕೂ ಔತಣವನ್ನು ಮಾಡುವೆನು. ಈಗಲೇ ಆ ರಣಾಂಗಣದಲ್ಲಿರುವ ಮಾಂಸಭಕ್ಷಕಭೂತಗಳೆಲ್ಲವೂ ವಾನರರ ರಕ್ತಮಾಂಸಗಳನ್ನು ತಿಂದು ತೇಗಿ ತೃಪ್ತಿಹೊಂದಲಿ " ಎಂದನು. ಹೀಗೆ ಪ್ರಧಾನ ಸೇನಾಪತಿಯಾದ ಪ್ರಹಸ್ತನು ಹೇಳಿದೊಡನೆ, ಆ ಸೇನಾಧಿಕಾರಿಗಳೆಲ್ಲರೂ ಅತಿ ತ್ವರೆಯಿಂದ ಹೋಗಿ ಅನೇಕ ರಾಕ್ಷಸಸೇನೆಯನ್ನು ಸೇರಿಸಿ, ಅವನ ಆ ಅರಮನೆಯ ಮುಂದೆ ನಿಲ್ಲಿಸಿದನು. ಕ್ಷಣಮಾತ್ರದಲ್ಲಿ ಆ ಲಂಕೆಯೆಲ್ಲವೂ ಮದದಾನೆಗಳಿಂದ ತುಂಬಿದಂತೆ ತೀಕ್ಷ್ಣಗಳಾದ ನಾನಾವಿಧ ಶಸ್ತ್ರಗಳನ್ನು ಧರಿಸಿದ ಸೇನೆಯಿಂದ ತುಂಬಿ

*

ಹೋಯಿತು. ಯುದ್ಧಸನ್ನದ್ಧರಾದ ರಾಕ್ಷಸವೀರರೆಲ್ಲರೂ,ಅಗ್ನಿಹೋತ್ರಗಳಲ್ಲಿ ಹೋಮ ಗಳನ್ನು ಮಾಡುತ್ತಿದ್ದುದರಿಂದಲೂ, ಅಲ್ಲಲ್ಲಿ ಬ್ರಾಹ್ಮಣರನ್ನು ಗಂಧಪುಷ್ಪಾದಿಗಳಿಂದ ಸತ್ಕರಿಸುತ್ತಿದ್ದುದರಿಂದಲೂ, ಆ ಲಂಕೆಯೊಳಗಿನ ವಾಯುವು ಸುವಾಸನೆಯಿಂದ ಕೂಡಿ ಮನೋಹರವಾಗಿತ್ತು. ಆಗ ಯುದ್ಧಾತುರರಾದ ರಾಕ್ಷಸರು, ಮಹೋತ್ಸಾಹ ಗೊಂಡು, ವಿಜಯಮಂತ್ರಗಳಿಂದ ಮಂತ್ರಿತವಾದ ಪುಷ್ಪಮಾಲಿಕೆಗಳನ್ನು ಧರಿಸಿ, ಯುದ್ಧಕವಚಗಳನ್ನು ತೊಟ್ಟು, ಎಲ್ಲರೂ ಒಟ್ಟಾಗಿ ಸೇರಿಬಂದು, ತಮಗೆ ರಾಜನಾದ ರಾವಣನಿಗೆ ನಮಸ್ಕರಿಸಿ ಪ್ರಹಸ್ತನನ್ನು ಸುತ್ತಿನಿಂತರು. ಆಮೇಲೆ ಸೇನಾಪತಿಯಾದ ಪ್ರಹಸ್ತನು ಪ್ರಭುವಾದ ರಾವಣನಿಗೆ ನಮಸ್ಕರಿಸಿ, ಅವನ ಅನುಜ್ಞೆಯನ್ನು ಪಡೆದು, ಆಕಡೆ ಭಯಂಕರವಾಗಿ ರಣಭೇರಿಯು ನುಡಿಸಲ್ಪಡುತ್ತಿರಲು, ಸರ್ವಾಯುಧಗಳಿಂದ ಸಿದ್ಧವಾದ ತನ್ನ ದಿವ್ಯರಥವನ್ನೇರಿ ಕುಳಿತನು. ಅತ್ಯಂತ ವೇಗವುಳ್ಳ ಕುದುರೆಗಳ ಮೇಲೆ ಹೂಡಲ್ಪಟ್ಟು ಉತ್ತಮ ಸಾರಥಿಯಿಂದ ಕೂಡಿ, ಮೇಘಗರ್ಜನೆಯಂತೆ ಗಂಭೀರ ಧ್ವನಿಯುಳ್ಳುದಾಗಿದ್ದ ಆ ಪ್ರಹಸ್ತನ ರಥವು, ಚಂದ್ರನಂತೆ ಆಹ್ಲಾದಕರವಾಗಿಯೂ, ಸೂರ್ಯನಂತೆ ತೇಜೋವಿಶಿಷ್ಟವಾಗಿಯೂ, ಶೋಭಿಸುತ್ತಿತ್ತು. ಮತ್ತು ಮೇಲೆ ಕಟ್ಟಿದ, ಅತಿಧೃಢವಾದ ಸರ್ಪಧ್ವಜದಿಂದಲೂ ಮೇಲಾದ ಮುಚ್ಚಳದಿಂದಲೂ, ಉತ್ತಮವಾದ ಚಕ್ರದಿಂದಲೂ, ಚಿನ್ನದ ಕಿಟಕಿ ಗಳಿಂದಲೂ ಕೂಡಿದ ಆ ರಥವು, ಲೋಕದಲ್ಲಿ ಕಾಂತಿವಿಶಿಷ್ಟಗಳಾದ ಬೇರೆ ಎಲ್ಲಾ ವಸ್ತುಗಳನ್ನೂ ತನ್ನ ಕಾಂತಿಯಿಂದ ಹಾಸ್ಯಮಾಡಿ ನಗುವಂತೆ ಕಾಣುತ್ತಿದ್ದಿತು. ಪ್ರಹಸ್ತನು ರಾವಣನಾಜ್ಞೆಯನ್ನು ಪಡೆದು, ರಥವನ್ನೇರಿ ಅನೇಕ ರಾಕ್ಷಸರ ಮಹಾ ಸೇನೆಯಿಂದಾವೃತನಾಗಿ ಲಂಕೆಯನ್ನು ಬಿಟ್ಟು ಹೊರಟನು. ಸೇನಾಪತಿಯಾದ ಆ ಪ್ರಹಸ್ತನು ರಥವನ್ನು ಮುಂದೆ ಬಿಟ್ಟೊಡನೆಯೇ ಮೇಘಧ್ವನಿಗಳಂತಿರುವ ಭೇರೀ ಧ್ವನಿಗಳೂ, ಇತರ ವಾದ್ಯಧ್ವನಿಗಳೂ, ಶಂಖಧ್ವನಿಗಳೂ, ಸಮುದ್ರ ಜಲವನ್ನು ಉಲ್ಲೋಲಕಲ್ಲೋಲವನ್ನಾಗಿ ಮಾಡುವಂತೆ ಕೇಳಿಸಿತು. ಪ್ರಹಸ್ತನ ರಥದ ಮುಂದೆ ಅನೇಕ ರಾಕ್ಷಸರು ಸಿಂಹಧ್ವನಿ ಮಾಡುತ್ತ ನಡೆದರು. ನರಾಂತಕ, ಕುಂಭಹನು, ಮಹಾನಾದ, ಸಮುನ್ನತ ಎಂಬ ಪ್ರಹಸ್ತನ ನಾಲ್ವರು ಮಂತ್ರಿಗಳೂ, ಅವನ ರಥ ವನ್ನು ಸುತ್ತಿಬಂದರು. ಪ್ರಹಸ್ತನು ತನ್ನ ಸೇನೆಯನ್ನು ಬೇರೆಬೇರೆ ವ್ಯೂಹವಾಗಿ ವಿಭಾಗಿಸಿ ನಡೆಸಿಕೊಂಡು ಬಂದನು. ಎಲ್ಲರೂ ಲಂಕೆಯ ಪೂರ್ವದ್ವಾರಕ್ಕೆ ಹೊರಟು ಬಂದರು ಈ. ಮಹಾಸೇನೆಯಿಂದ ಪರಿವೃತನಾಗಿ ಪ್ರಹಸ್ತನು, ಪ್ರಳಯಕಾಲದಲ್ಲಿ

ಲೋಕನಾಶಕ್ಕಾಗಿ ಬರುವ ಯಮನಂತೆಯೇ ತೋರುತಿದ್ದನು. ಅವನನ್ನು ಸುತ್ತಿ ಬರುತಿದ್ದ ರಾಕ್ಷಸರು ಆಗಾಗ ಮಾಡುವ ಸಿಂಹಧ್ವನಿಗೆ ಲಂಕೆಯಲ್ಲಿರುವ ಸಕಲ ಜಂತುಗಳೂ ಭಯಗೊಂಡು, ವಿಕೃತಸ್ವರದಿಂದ ಕೂಗುತಿದ್ದುವು. ಮಾಂಸಾಹಾರಿ ಪಕ್ಷಿಗಳೆಲ್ಲವೂ, ಮೇಘಶೂನ್ಯವಾದ ಆಕಾಶದಲ್ಲಿ ಗುಂಪುಗೂಡಿ, ಈ ಪ್ರಹಸ್ತನ ರಥವನ್ನು ಅಪಸವ್ಯವಾಗಿ (ಅಪ್ರದಕ್ಷಿಣವಾಗಿ) ಸುತ್ತಿದುವು. ನೋಡುವವರಿಗೆ ಭಯವನ್ನು ಹುಟ್ಟಿಸುವಂತೆ ನರಿಗಳು ಬಾಯಲ್ಲಿ ಉರಿಯನ್ನು ಕಕ್ಕುತ್ತ ಊಳಿಡು ತ್ತಿದ್ದುವು. ಆಕಾಶದಿಂದ ಉಲ್ಕೆಗಳು ಬಿದ್ದುವು. ಗಾಳಿಯು ಬಿರುಸಾಗಿ ಬೀಸಿತು. ಚಂದ್ರಸೂರ್ಯಾದಿಗ್ರಹಗಳೆಲ್ಲರೂ, ಪರಸ್ಪರ ನಿರೋಧಕಗಳಾಗಿ ಕಾಂತಿಗುಂದಿದ್ದುವು. ಮೇಘಗಳು ಅವನ ರಥದ ಮೇಲೆ ರಕ್ತದ ಮಳೆ ಕರೆಯಿತು. ಅವನ ಧ್ವಜಾಗ್ರದ ಮೇಲೆ, ಒಂದು ಗೂಬೆಯು ದಕ್ಷಿಣಮುಖವಾಗಿ ಕುಳಿತುಕೊಂಡಿತು. ಈ ಸ್ಥಿತಿ ಯೆಲ್ಲವನ್ನೂ ನೋಡಿದೊಡನೆ, ಪ್ರಹಸ್ತನ ಮುಖವು ಕಂದಿ ದೈನ್ಯವು ಕಂಡಿತು. ಅಲ್ಲದೆ, ರಥವನ್ನು ನಡೆಸುವ ಸಾರಥಿಯ ಕೈಯಿಂದ ಚಾವಟಿಯು ಅನೇಕಸಲ ಕೆಳಗೆ ಬಿತ್ತು. ಈ ಪ್ರಹಸ್ತನು ಆಗಾಗ ಜೈತ್ರಯಾತ್ರೆಗೆ ಹೊರಟಾಗ ಅಷ್ಟವಸುಗಳಿಗೂ ದುರ್ಲಭವಾದ ಮುಖಕಾಂತಿಯು ಸಹಜವಾಗಿರುತಿತ್ತು. ಈಗ ಅದು ಮುಹೂರ್ತ ಮಾತ್ರದಲ್ಲಿಯೇ ಕಂದಿ, ಮನಸ್ಸಿನ ಉತ್ಸಾಹವೂ ಅಡಗಿತು. ಅವನ ರಥಾಶ್ವಗಳು ಸಮಸ್ಥಳದಲ್ಲೂ ಎಡವಿತು. ಬಲಪೌರುಷಗಳಿಗೆ ಪ್ರಖ್ಯಾತನಾದ ಪ್ರಹಸ್ತನು ಹೀಗೆ ಸೇನೆಯೊಡಗೂಡಿ ಬರುವುದನ್ನು ನೋಡಿ ಈ ಕಡೆ ಸಕಲ ವಾನರರೂ, ತಮ್ಮ ಯುದ್ಧಸಾಧನಗಳಿಗಾಗಿ ಅತ್ಯಾತುರದಿಂದ ಮರಗಳನ್ನೂ, ಶಿಲೆಗಳನ್ನೂ ಕೀಳುವಾಗ ಆದರಿಂದ ಒಂದು ದೊಡ್ಡ ತುಮುಲಧ್ವನಿಯು ಹೊರಟಿತು. ವಾನರರೂ, ರಾಕ್ಷಸರೂ ಪರಸ್ಪರ ಸ್ಪರ್ಧೆಯಿಂದ ಸಿಂಹನಾದವನ್ನು ಮಾಡುತ್ತಿರುವಾಗ, ರಣೋತ್ಸಾಹವೂ, ಸಂತೋಷವೂ ಹೆಚ್ಚಿತು. ವೇಗಶಾಲಿಗಳಾಗಿಯೂ ಸಮರ್ಥರಾಗಿಯೂ, ಇದ್ದ ವಾನರರಾಕ್ಷಸರಿಬ್ಬರೂ, ಯುದ್ಧದಲ್ಲಿ ಪರಸ್ಪರ ಜಯಾಕಾಂಕ್ಷಿಗಳಾಗಿದ್ದರು. ಹೀಗೆ ಪ್ರಹಸ್ತನು ವಾನರರನ್ನು ಗೆಲ್ಲಬೇಕೆಂಬಾಸೆಯಿಂದ ಸುಗ್ರೀವನ ಸೇನೆಗಿದಿರಾಗಿ ಹೊರಟು, ಅಗ್ನಿಜ್ವಾಲೆಯಲ್ಲಿ ಬೀಳುವ ಶಲಭದಂತೆ ಆ ದೊಡ್ಡ ವಾನರ ಸೇನೆಯನ್ನು ಪ್ರವೇಶಿಸಿದನು.

ಇಲ್ಲಿಗೆ ಐವತ್ತೇಳನೆಯ ಸರ್ಗವು.

ಪ್ರಹಸ್ತನು ನೀಲನಿಂದ ಹತನಾದುದು.

ಹೀಗೆ ಭಯಂಕರ ಪರಾಕ್ರಮವುಳ್ಳ ಪ್ರಹಸ್ತನು ದಂಡೆತ್ತಿ ಬರುವುದನ್ನು ನೋಡಿ, ಪರಂತಪನಾದ ರಾಮನು, ಅಂತಹ ಬಲಾಢ್ಯನಾದ ಶತ್ರುವನ್ನು ನೋಡು ವುದರಿಂದುಂಟಾದ ರಣೋತ್ಸಾಹದಿಂದ ಮುಗುಳ್ನಗೆಗೂಡಿ, ಸಮೀಪದಲ್ಲಿದ್ದ ವಿಭೀಷಣನನ್ನು ಕುರಿತು, "ಎಲೆ ಮಹಾಬಾಹೂ ! ಬಹಳ ದೊಡ್ಡ ದೇಹವುಳ್ಳ ಆ ರಾಕ್ಷಸನಾರು! ಅಪರಿಮಿತವಾದ ಸೇನೆಯನ್ನು ಕಟ್ಟಿಕೊಂಡು ಬರುವನಲ್ಲಾ! ಅವನು ಬಹಳ ವೀರ್ಯವುಳ್ಳವನೆಂದು ತೋರುವುದು ! ಅವನ ಹೆಸರೇನು ಹೇಳು ? ಎಂದನು. ಅದಕ್ಕಾವಿಭೀಷಣನು ರಾಮನನ್ನು ಕುರಿತು, "ರಾಮಾ ! ಆ ರಾಕ್ಷಸನೇ ರಾವಣನಿಗೆ ಪ್ರಧಾನ ಸೇನಾಪತಿಯು. ಅವನಿಗೆ ಪ್ರಹಸ್ತನೆಂದು ಹೆಸರು. ಲಂಕೆಯಲ್ಲಿರುವ ಮೂರರಲ್ಲೊಂದು ಪಾಲನ್ನು ಈಗ ಅವನು ತನ್ನೊಡನೆ ಕರೆತಂದಿರುವನು. ಇಷ್ಟು ಸೇನೆಯೂ ಈಗ ಅವನ ಆಜ್ಞಾಧೀನವಾಗಿದೆ. ಅವನು ಸಕಲ ಅಸ್ತ್ರಗಳನ್ನು ತಿಳಿದವನೂ, ಶೂರನೂ, ಪ್ರಸಿದ್ಧನೂ ಆಗಿರುವನು" ಎಂದನು. ಇಷ್ಟರಲ್ಲಿ ವಾನರ ಸೇನೆಯು ಪ್ರಹಸ್ತನನ್ನು ನೋಡಿ, ರೋಷದಿಂದುಕ್ಕುತ್ತ, ಮಹಾಧ್ವನಿಯಿಂದ ಘರ್ಜಿಸಿದುವು. ಭಯಂಕರ ಪರಾಕ್ರಮಿಯಾದ ಪ್ರಹಸ್ತನು ದೊಡ್ಡ ಸೇನೆಯಿಂದ ಪರಿವೃತನಾಗಿ, ಯುದ್ಧೋತ್ಸಾಹದಿಂದ ಘರ್ಜಿಸುತ್ತ ಬರುವುದನ್ನು ವಾನರರೆಲ್ಲರೂ ನೋಡಿದರು. ಆ ರಾಕ್ಷಸರೂ ವಾನರರನ್ನು ಜಯಿಸಬೇಕೆಂಬ ಆತುರದಿಂದ ಕೈಯಲ್ಲಿ ಹಿಡಿದಿದ್ದ ಅನೇಕ ಆಯುಧಗಳ ಕಾಂತಿಯು ಮಿಂಚುತ್ತಿದ್ದಿತು. ಇದನ್ನು ನೋಡಿದ ವಾನರರೂ ಕೂಡ, ಗಿಡಗಳನ್ನೂ, ಶಿಲೆಗಳನ್ನೂ ಕಿತ್ತುಕೊಂಡು ಯುದ್ಧಕ್ಕೆ ಸಿದ್ಧರಾದರು. ಹೀಗೆ, ವಾನರರೂ, ರಾಕ್ಷಸರೂ, ಯುದ್ಧಸನ್ನದ್ಧರಾಗಿ, ಒಬ್ಬರನ್ನೊಬ್ಬರು ಸಮೀಪಿಸಿ, ಆಯುಧಗಳಿಂದಲೂ, ಶಿಲೆಗಳಿಂದಲೂ ಹೊಡೆದಾಡು ವುದಕ್ಕೆ ತೊಡಗಿದರು. ಕ್ರಮಕ್ರಮವಾಗಿ ಯುದ್ಧವು ಭಯಂಕರವಾಯಿತು. ಹೀಗೆ ರಾಕ್ಷಸರು ಶೂಲಾದ್ಯಾಯುಧಗಳಿಂದ ವಾನರರನ್ನು ಸಿಕ್ಕಿದ ಕಡೆ ಕೊಲ್ಲುತ್ತಿದ್ದರು. ಅನೇಕ ವಾನರರು ಬಾಣದಿಂದ ನಾಟಿದ ಮೈಯುಳ್ಳವರಾಗಿಯೂ, ಕತ್ತಿಯಿಂದ ತುಂಡರಿಸಲ್ಪಟ್ಟವರಾಗಿಯೂ ಮಿಲಿಮಿಲಿಯಾಡಿ ಸತ್ತರು. ಹಾಗೆಯೇ ರಾಕ್ಷಸರೂ ಕೂಡ, ವಾನರರಿಂದ ಗಿಡಗಳಿಂದಲೂ, ಪರ್ವತಶಿಖರಗಳಿಂದಲೂ ಹೊಡೆಯಲ್ಪಟ್ಟು ಮುರಿದ ಮೈಯುಳ್ಳವರಾಗಿ ಅಲ್ಲಲ್ಲಿ ತಂಡತಂಡವಾಗಿ ಸತ್ತುಬಿದ್ದಿದ್ದರು. ವಾನರರು ಶತ್ರುಗಳನ್ನು ಅಂಗೈಗಳಿಂದಲೂ, ಮುಷ್ಟಿಗಳಿಂದಲೂ ಅಪ್ಪಳಿಸಿದರು. ರಾಕ್ಷಸರು ಈ ಪ್ರಹಾರದಿಂದ, ರಕ್ತವನ್ನು ಕಾರುತ್ತ, ಹಲ್ಲುಗಳು ಉದುರಿ ಬೀಳುತ್ತಿರಲು, ಸತ್ತು

ಬಿದ್ದರು. ವಾನರ ರಾಕ್ಷಸರಿಬ್ಬರೂ, ಪರಸ್ಪರ ಕೋಪಾವೇಶವನ್ನು ತೋರಿಸುತ್ತ, ತಮ್ಮ ತಮ್ಮ ಚಾತುರ್ಯಕ್ಕೆ ತಕ್ಕಂತೆ ಯುದ್ಧಮಾಡುತ್ತಿದ್ದರು. ಈ ನಡುವೆ ಪ್ರಹಸ್ತನ ನಾಲ್ವರು ಮಂತ್ರಿಗಳೂ ಅತ್ಯಾಕ್ರೋಶಗೊಂಡು, ಅಲ್ಲಲ್ಲಿ ಸಿಕ್ಕಿದ ವಾನರರನ್ನು ಸಂಹರಿಸುತ್ತಿದ್ದರು. ಇವರನ್ನು ನೋಡಿ ವಾನರ ವೀರನಾದ ದ್ವಿವಿದನು ಕೋಪದಿಂದ ಒಂದು ಪರ್ವತವನ್ನು ತಂದು, ನರಾಂತಕನನ್ನೂ, ದುರ್ಮುಖನು ಒಂದು ದೊಡ್ಡ ಮರದಿಂದ ಸಮುನ್ನತನನ್ನೂ ಕೊಂದರು. ತೇಜಸ್ವಿಯಾದ ಜಾಂಬವಂತನು ಒಂದು ದೊಡ್ಡ ಶಿಲೆಯನ್ನು ತಂದು ಮಹಾನಾದನ ಎದೆಗೆ ಗುರಿಯಿಟ್ಟು ಬೀಸಿ, ಅವನನ್ನು ಚೂರ್ಣಮಾಡಿದನು. ತಾರನೆಂಬ ಕಪಿವೀರನು, ಒಂದು ದೊಡ್ಡ ಮರದಿಂದ ಕುಂಭಹನುವಿನ ತಲೆಯನ್ನು ಕತ್ತರಿಸಿದನು. ಇವೆಲ್ಲವನ್ನೂ ನೋಡಿ, ರಥದ ಮೇಲಿದ್ದ ಪ್ರಹಸ್ತನು, ವಾನರರ ಈ ಕಾರ್ಯಕ್ಕಾಗಿ ಕೋಪಗೊಂಡು, ತನ್ನ ಮಹಾಧನುಸ್ಸನ್ನು ಕೈಗೆತ್ತಿಕೊಂಡು, ಭಯಂಕರ ಯುದ್ಧವನ್ನಾರಂಭಿಸಿದನು. ಆ ಮಹಾಯುದ್ಧದಲ್ಲಿ ಎರಡು ಸೇನೆಗಳಿಂದಲೂ ಹೊರಟ ದೊಡ್ಡ ಧ್ವನಿಯು ಪ್ರಳಯಕಾಲದ ಮಹಾಸಾಗರದ ಮೊರೆತದಂತೆ ಭಯಂಕರವಾಗಿ ವ್ಯಾಪಿಸಿತು. ರಣಪಂಡಿತನಾದ ಆ ಪ್ರಹಸ್ತನು ಅತ್ಯಾಕ್ರೋಶದಿಂದ ಎಡಬಿಡದೆ ಬಾಣವರ್ಷಗಳನ್ನು ಕರೆದು ಕಪಿಗಳನ್ನು ಕೊಲ್ಲುತ್ತಿದ್ದನು. ಆ ರಣರಂಗದಲ್ಲಿ ಸತ್ತುಬಿದ್ದ ಅನೇಕ ವಾನರ ರಾಕ್ಷಸರ ದೇಹಗಳೇ ದೊಡ್ಡ ಪರ್ವತದಂತೆ ಸಮಸ್ತ ಭೂಮಿಯನ್ನೂ ವ್ಯಾಪಿಸಿತು. ಆ ಯುದ್ಧಭೂಮಿಯು ರಕ್ತದ ಒಂದು ಮಹಾನದಿಯಂತೆ ಕಾಣಿಸಿತು. ಅಲ್ಲಲ್ಲಿ ಹತರಾಗಿ ಬಿದ್ದ ವೀರರ ಶವಗಳೇ ದಡಗಳಂತಾದುವು. ಕೆದರಿದ ನಸಗಳೆಂಬ ಪಾಚಿಗಳಿಂದಲೂ, ತಲೆ, ಕೈ ಮೊದಲಾದ ಅವಯವಗಳೆಂಬ ಮೀನುಗಳಿಂದಲೂ ಕೂಡಿ, ಯಮಸಾಗರವನ್ನು ಕುರಿತು ಪ್ರವಹಿಸುವ ನದಿಯಂತೆ ತೋರುತ್ತಿತ್ತು. ಭೀರುಗಳಿಗೆ ದಾಟಲಸಾಧ್ಯವಾದ ಈ ರಣಭೂಮಿಯೆಂಬ ಮಹಾನದಿಯನ್ನು, ವಾನರ ರಾಕ್ಷಸರಿಬ್ಬರೂ ಸೇರಿ ನಿರ್ಮಿಸಿದುದಲ್ಲದೆ ಮಳೆಗಾಲವು ಮುಗಿದ ಮೇಲೆ ಜನರು ಹಂಸಸಾರಸಾದಿ ಪಕ್ಷಿಗಳಿಂದ ತುಂಬಿದ ನದಿಯನ್ನು ದಾಟಿಹೋಗುವಂತೆ ಪ್ರಯತ್ನಪಟ್ಟು ದಾಟುತ್ತಿದ್ದರು. ಮದದಾನೆಗಳು ಕಮಲಧೂಳಿಯಿಂದ ತುಂಬಿದ ತಾವರೆ ಕೊಳದಲ್ಲಿ ಮುಳುಗೆದ್ದು ಬಂದಾಗ, ಅವುಗಳ ದೇಹವು ಪುಷ್ಪರೇಣುಗಳಿಂದ ಕೆಂಪೇರುವಂತೆ, ಈ ವಾನರ ರಾಕ್ಷಸರಿಬ್ಬರೂ ಆ ಯುದ್ಧ ನದಿಯನ್ನು ದಾಟಿ ಬರುವಾಗ, ಒಬ್ಬೊಬ್ಬರೂ ರಕ್ತದೇಹವುಳ್ಳವರಾಗಿದ್ದರು. ಹೀಗೆ ಮಹಾಯುದ್ಧವು ನಡೆಯುತ್ತಿರುವಾಗ ಪ್ರಹಸ್ತನು,

ರಥದಲ್ಲಿದ್ದು, ತನ್ನ ಬಾಣಪರಂಪರೆಗಳಿಂದ ವಾನರಸೇನೆಯನ್ನು ಕೊಲ್ಲುತ್ತಿರಲು, ವಾನರಸೇನಾಪತಿಯಾದ ನೀಲನು ಅದನ್ನು ನೋಡಿ ಕೋಪದಿಂದುಬ್ಬಿದವನಾಗಿ, ಅವನನ್ನಿದಿರಿಸಿದನು. ಹೀಗೆ ನೀಲನು ಅಂತರಿಕ್ಷದಲ್ಲಿರುವ ಮೇಘಸಮೂಹಗಳ ಮೇಲೆ ಬಂದು ಬೀಳುವ ಬಿರುಗಾಳಿಯಂತೆ ತನ್ನ ಮೇಲೆ ಬರುವುದನ್ನು ನೋಡಿ ಪ್ರಹಸ್ತನು, ಸೂರ್ಯನಂತೆ ಹೊಳೆಯುವ ತನ್ನ ರಥವನ್ನು ಧೈರ್ಯದಿಂದ ಮುಂದೆ ಬಿಟ್ಟುಕೊಂಡು ನೀಲನಿಗಿದಿರಾಗಿ ಬಂದನು. ಧನುರ್ಧಾರಿಗಳಲ್ಲಿ ಮೇಲೆನಿಸಿಕೊಂಡ ಆ ಪ್ರಹಸ್ತನು ತನ್ನ ಬಿಲ್ಲನ್ನು ಆಕರ್ಣಾಂತವಾಗಿ ಎಳೆದು ನೀಲನಮೇಲೆ ಅನೇಕ ಬಾಣಗಳನ್ನು ಪ್ರಯೋಗಿಸಿದನು. ಆ ಬಾಣಗಳೆಲ್ಲವೂ ಕೋಪಗೊಂಡ ಕಾಲಸರ್ಪ ದಂತೆ ವೇಗದಿಂದ ಹೊರಟು, ನೀಲನ ದೇಹವನ್ನು ಭೇದಿಸಿಕೊಂಡು ಭೂಮಿಗೂ ನಾಟಿಕೊಂಡಿತು. ಅಗ್ನಿಯಂತೆ ಜ್ವಲಿಸುವ ಈ ಬಾಣಗಳನ್ನೂ ನೀಲನು ಲಕ್ಷ್ಯ ಮಾಡದೆ ಕುಪಿತನಾಗಿ ಒಂದು ದೊಡ್ಡ ಮರವನ್ನು ಕಿತ್ತು ಪ್ರಹಸ್ತನಮೇಲೆ ಪ್ರಯೋ ಗಿಸಿದನು. ರಾಕ್ಷಸಪುಂಗವನಾದ ಪ್ರಹಸ್ತನು ಈ ವೃಕ್ಷಪ್ರಹಾರದಿಂದ ನೊಂದು, ಕೋಪದಿಂದ ಸಿಂಹನಾದಮಾಡುತ್ತ, ನೀಲನ ಮೇಲೆ ಬಾಣವರ್ಷವನ್ನು ಕರೆಯುತ್ತಿ ದ್ದನು. ನೀಲನು ಬಹಳ ಧೈರ್ಯಶಾಲಿಯಾದುದರಿಂದ ಆ ಬಾಣಗಳ ನೋವನ್ನೂ ಲಕ್ಷ್ಯ ಮಾಡದೆ ಒಂದು ಮಹಾವೃಕ್ಷವನ್ನು ಕಿತ್ತುಕೊಂಡು ಪ್ರಹಸ್ತನ ರಥಾಶ್ವಗಳನ್ನು ಕೊಂದು ಧೈರ್ಯದಿಂದ ಮುಂದೆ ಹೋಗಿ, ಪ್ರಹಸ್ತನು ಹಿಡಿದಿದ್ದ ಮಹಾಧನುಸ್ಸನ್ನು ಕಿತ್ತುಕೊಂಡು, ಅದನ್ನು ಮುರಿದುಬಿಸುಟು, ಬಾರಿಬಾರಿಗೂ ಸಿಂಹನಾದವನ್ನು ಮಾಡುತ್ತಿದ್ದನು. ಪ್ರಹಸ್ತನಿಗೆ ಕೈಲಿದ್ದ ಬಿಲ್ಲೂ, ರಥಾಶ್ವಗಳೂ ಪ್ರತಿಹತಗಳಾಗಲು ಅವನು ತನ್ನ ರಥದಲ್ಲಿದ್ದ ಭಯಂಕರವಾದ ಮುಸಲಾಯುಧವನ್ನು ಕೈಗೆತ್ತಿಕೊಂಡು ರಥದಿಂದ ಕೆಳಗಿಳಿದನು. ವೇಗಶಾಲಿಗಳಾಗಿಯೂ, ಸಿಂಹಶಾರ್ದೂಲಗಳಂತೆ ಶಕ್ತಿ ಯುಳ್ಳವರಾಗಿಯೂ ಸಿಂಹಶಾರ್ದೂಲಗಳಂತೆ ವೀರಕಾರ್ಯವುಳ್ಳವರಾಗಿಯೂ, ವೃತ್ರಾ ಸುರ ದೇವೇಂದ್ರರಿಗೆ ಸಮಾನರಾಗಿಯೂ ಇದ್ದ ಆ ಸೇನಾಪತಿಗಳಿಬ್ಬರೂ ಪರಸ್ಪರ ಬದ್ಧವೈರವುಳ್ಳವರಾಗಿಯೂ, ಸರ್ವಾಂಗಗಳಲ್ಲೂ ರಕ್ತವನ್ನು ಸುರಿಸುತ್ತ, ಮದದಾನೆ ಗಳಂತೆ ಒಬ್ಬರನ್ನೊಬ್ಬರು ತಡೆದು, ಒಬ್ಬರನ್ನೊಬ್ಬರು ತೀಕ್ಷ್ಣದಂಷ್ಟ್ರಗಳಿಂದ ಭೇದಿಸುತ್ತ ಯಶಃಕಾಮರಾಗಿ ಯುದ್ಧವನ್ನು ನಡೆಸಿದರು. ಇಷ್ಟರಲ್ಲಿ ಪ್ರಹಸ್ತನು ತಾನು ಹಿಡಿದಿದ್ದ ಮುಸಲಾಯುಧದಿಂದ ನೀಲನ ನಡುನೆತ್ತಿಯ ಮೇಲೆ ಹೊಡೆಯಲು ಅವನ ನೆತ್ತಿಯಿಂದ ರಕ್ತವು ಸುರಿಯಲಾರಂಭಿಸಿತು. ನೀಲನು ಆ ಪ್ರಹಾರವನ್ನೂ

ಲಕ್ಷ್ಯಮಾಡದೆ ರಕ್ತದಿಂದ ತೊಯ್ದು ಮೈಯುಳ್ಳವನಾಗಿಯೇ ಒಂದು ದೊಡ್ಡವೃಕ್ಷವನ್ನು ಕಿತ್ತು ತಂದು ಎದೆಯಮೇಲೆ ಬೀಸಿದನು. ಪ್ರಹಸ್ತನೂ ಆ ಪೆಟ್ಟನ್ನು ಲಕ್ಷ್ಯಮಾಡದೆ ತಾನು ಹಿಡಿದಿದ್ದ ಮುಸಲಾಯುಧದೊಡನೆ ನೀಲನ ಮೇಲೆ ನುಗ್ಗಿದನು. ಇಷ್ಟರಲ್ಲಿ ನೀಲನು, ಪ್ರಹಸ್ತನು ತನ್ನ ಮೇಲೆ ಅತ್ಯಾತುರದಿಂದ ನುಗ್ಗಿ ಬರುವುದನ್ನು ನೋಡಿ, ಒಂದು ದೊಡ್ಡಶಿಲೆಯನ್ನು ಕೈಗೆತ್ತಿಕೊಂಡು ಪ್ರಹಸ್ತನ ತಲೆಯಮೇಲೆ ಬಿಸುಟನು. ಆಗ ಈ ದೊಡ್ಡ ಶಿಲೆಯ ಪ್ರಹಾರಕ್ಕೆ ಪ್ರಹಸ್ತನ ತಲೆಯು ಸಹಸ್ರಭಾಗವಾಗಿ ಸೀಳಿತು. ಆ ಪ್ರಹಸ್ತನ ಕಾಂತಿಯೂ, ಇಂದ್ರಿಯಗಳೂ ಕೆಟ್ಟು, ಅವನು ಗತಪ್ರಾಣನಾಗಿ, ಬುಡವನ್ನು ಕಡಿದ ಮರದಂತೆ ಕೆಳಗೆ ಬಿದ್ದನು. ಅದುವರೆಗೂ ರಣೋತ್ಸಾಹದಿಂದುಬ್ಬಿ ಹೆಮ್ಮೆಗೊಂಡಿದ್ದ ರಾಕ್ಷಸ ಸೇನೆಯೆಲ್ಲವೂ, ನೀಲನಿಂದ ಪ್ರಹಸ್ತನು ಸಂಹೃತನಾದುದನ್ನು ನೋಡಿದೊಡನೆ, ಭಯದಿಂದ ಲಂಕೆಯಕಡೆಗೆ ಓಡಿದುವು. ತಮಗೆ ಮುಖ್ಯಾಶ್ರಯನಾಗಿದ್ದ ಪ್ರಹಸ್ತನು ಸತ್ತುಬಿದ್ದುದನ್ನು ಕಂಡಮೇಲೆ ಅಲ್ಲಿದ್ದ ಸಮಸ್ತ ರಾಕ್ಷಸಸೇನೆಯೂ, ವೇಗದಿಂದ ಬರುವ ಜಲಪ್ರವಾಹವು ಅಡ್ಡಲಾಗಿರುವ ಅಣೆಕಟ್ಟೆಗೆ ತಗುಲಿ ಪ್ರತಿಹತವಾಗಿ ಚದರಿ ಹಿಂತಿರುಗುವಂತೆ, ಯುದ್ಧದಲ್ಲಿ ನಿಲ್ಲಲಾರದೆ ಥಟ್ಟನೆ ಹಿಂದೆಗೆದು,ಪಲಾಯನಮಾಡಿತು.ಪ್ರಧಾನ ಸೇನಾಧಿಪತಿಯು ಹತನಾದುದರಿಂದ, ರಾಕ್ಷಸರೆಲ್ಲರೂ ಅನಾಥರಾಗಿ, ಏನೊಂದೂ ತೋರದೆ, ಹಿಂತಿರುಗಿ ರಾವಣನ ಬಳಿಗೆ ಹೋಗಿ ಚಿಂತಾಪಾರವಶ್ಯದಿಂದ ಮೂಗರಂತೆ ಯಾವ ಮಾತನ್ನೂ ಆಡಲಾರದೆ ಮೌನವನ್ನವಲಂಬಿಸಿ, ತೀವ್ರವಾದ ದುಃಖಸಮುದ್ರದಲ್ಲಿ ಮುಳುಗಿ ಮೂರ್ಛೆಗೊಂಡವರಂತಿದ್ದರು.ಇತ್ತಲಾಗಿ ಜಯಶೀಲನಾದ ನೀಲನಾದರೋ ತನ್ನ ಸಾಹಸಕಾರ್ಯಕ್ಕಾಗಿ ಸಮಸ್ತ ವಾನರರಿಂದಲೂ ಗೌರವಿಸಲ್ಪಡುತ್ತ ರಾಮಲಕ್ಷ್ಮಣರ ಬಳಿಗೆ ಬಂದುಸೇರಿ ಪರಮ ಸಂತೋಷದಿಂದಿದ್ದನು.

ಇಲ್ಲಿಗೆ ಐವತ್ತೆಂಟನೆಯ ಸರ್ಗವು.

ಪ್ರಹಸ್ತನ ವಧವನ್ನು ಕೇಳಿ ರಾವಣನು ತಾನಾಗಿಯೇ ಯುದ್ಧಕ್ಕೆ
ಹೊರಟುದುದು. ಸುಗ್ರೀವಾದಿಗಳು ರಾವಣನಿಂದ ಭಂಗಹೊಂದಿದುದು.
ರಾವಣನ ಅಮೋಘವಾದ ಶಕ್ತಿಯಿಂದ ಲಕ್ಷ್ಮಣನಿಗೆ ಮೂರ್ಛೆ
ಉಂಟಾಗಿದ್ದುದು. ರಾಮ ರಾವಣರ ಯುದ್ಧವು.
ರಾವಣನ ಕಿರೀಟಭಂಗವು.

ರಾಕ್ಷಸರಿಗೆ ಪ್ರಧಾನ ಸೇನಾಪತಿಯಾದ ಪ್ರಹಸ್ತನು, ವಾನರಯೂಥಪನಾದ ನೀಲನಿಂದ ಯುದ್ಧದಲ್ಲಿ ಹತನಾಗಿ ಬಿದ್ದುದನ್ನು ಕಂಡೊಡನೆ, ಭಯಂಕರ ಆಯುಧ

ಗಳನ್ನು ಧರಿಸಿದುದಾಗಿಯೂ ಇದ್ದ ರಾವಣ ಸೇನೆಯೆಲ್ಲವೂ ಭಯದಿಂದ ಲಂಕೆಗೆ ಪ್ರಯಾಣಮಾಡಿದುವು. ಈ ರಕ್ಕಸ ಸೇನೆಯೆಲ್ಲವೂ ರಾವಣನ ಮುಂದೆ ನಿಂತು, ಸೇನಾಪತಿಯಾದ ಪ್ರಹಸ್ತನು ನೀಲನಿಂದ ಹತನಾದ ಸಂಗತಿಯನ್ನು ತಿಳಿಸಿದುವು. ಇದನ್ನು ಕೇಳಿದೊಡನೆ ರಾವಣನಿಗೆ ತನ್ನ ಜಯದಲ್ಲಿ ನಂಬಿಕೆಯು ತಪ್ಪಿ ಶತ್ರುಗಳೇ ಹೆಚ್ಚು ಬಲವುಳ್ಳವರೆಂದು ತೋರಿತು. ಹೀಗಿದ್ದರೂ ಅವನು ತನ್ನ ಹೆಮ್ಮೆಯನ್ನು ಬಿಡದೆ, ಇಂತಹ ಸಂದರ್ಭದಲ್ಲಿ ತಾನು ಶತ್ರುಗಳನ್ನು ಆಶ್ರಯಿಸ ಬೇಕಾಗಿದ್ದರೂ ಕೋಪವನ್ನೇ ಹೊಂದಿದವನಾದನು. ಪ್ರಹಸ್ತನು ಹತನಾದುದನ್ನು ಕೇಳಿ ರಾವಣನು ದುಃಖದಿಂದಲೂ, ಕೋಪದಿಂದಲೂ, ತನ್ನ ಮುಂದಿದ್ದ ಯೋಧ ರನ್ನು ಕುರಿತು “ಎಲೈ ವೀರಭಟರೆ ! ಶತ್ರುಗಳ ವಿಷಯದಲ್ಲಿ ಇನ್ನು ನಾವು ಔದಾ ಸೀನ್ಯದಿಂದಿರಬಾರದು. ಅವರು ನಮ್ಮ ಸೇನಾಪತಿಯಾದ ಪ್ರಹಸ್ತನನ್ನು ಅವನ ಕಡೆಯ ಸೈನಿಕರೊಡನೆಯೂ, ಗಜಾದಿ ಚತುರಂಗಬಲಗಳೊಡನೆಯೂ ಕೊಂದಿರು ವರು. ಆದ್ದರಿಂದ ಇನ್ನು ಮೇಲೆ ಶತ್ರುಗಳನ್ನುಪೇಕ್ಷಿಸುವುದು ಯುಕ್ತವಲ್ಲ. ನಾನು ಇನ್ನು ಮೇಲೆ ಹಿಂದುಮುಂದು ನೋಡತಕ್ಕವನಲ್ಲ. ಆ ಶತ್ರುಗಳನ್ನು ನಾಶಮಾಡಿ ಜಯವನ್ನು ಕೈಗೊಳ್ಳುವುದಕ್ಕಾಗಿ ನಾನೇ ರಣರಂಗಕ್ಕೆ ಹೊರಡುವೆನು. ಆಹಾ ! ಏನಾಶ್ಚರ್ಯವು ! ನಮ್ಮಂತಹ ಬಲಶಾಲಿಗಳನ್ನು ಆ ವಾನರರು ಕೊಲ್ಲುವುದೆಂದ ರೇನು ! ಇರಲಿ, ಈಗಲೇ ನಾನು ಹೊರಟು, ಕಾಡುಗಿಚ್ಚು ಬೆಂಗಾಡನ್ನು ಸುಡು ವಂತೆ ಆ ಸಮಸ್ತವಾನರಸೇನೆಯನ್ನೂ, ಲಕ್ಷ್ಮಣಸಹಿತನಾದ ರಾಮನನ್ನೂ, ನನ್ನ ಬಾಣಸಮೂಹಗಳಿಂದ ಸುಟ್ಟುರಿಸುವೆನು” ಎಂದು ಹೇಳಿ ಉತ್ತರಕ್ಷಣದಲ್ಲಿಯೇ ಇಂದ್ರಶತ್ರುವಾದ ಆ ರಾವಣನು ಅಗ್ನಿಯಂತೆ ಜಾಜ್ವಲ್ಯಮಾನವಾಗಿಯೂ, ಉತ್ತ ಮಾಶ್ವಗಳಲ್ಲಿ ಹೂಡಿದುದಾಗಿಯೂ, ಸರ್ವಾಲಂಕಾರಗಳಿಂದ ಶೋಭಿತವಾಗಿಯೂ ಇದ್ದ ತನ್ನ ರಥವನ್ನೇರಿದನು. ಅವನು ರಥವನ್ನೇರಿ ಕುಳಿತೊಡನೆಯೇ ಮುಂದು ಗಡೆಯಲ್ಲಿ ಶಂಖ ಭೇರಿ ಪಣವಾದಿವಾದ್ಯಗಳೂ, ರಕ್ಕಸಯೋಧರ ಭುಜಾಸ್ಫಾಲನ ಧ್ವನಿಗಳೂ, ಸಿಂಹನಾದಗಳೂ ಆರಂಭಿಸಲ್ಪಟ್ಟವು. ಆ ರಥದ ಸುತ್ತಲೂ ಸ್ತುತಿಪಾಠ ಕರು ಮನೋಜ್ಞಗಳಾದ ಜಯಸ್ತುತಿಗಳನ್ನು ಮಾಡುತ್ತ ಬಂದರು. ಹೀಗೆ ರಾವಣನು ಸಮಸ್ತ ಪರಿವಾರಗಳಿಂದಲೂ ಪೂಜಿತನಾಗಿ, ಯುದ್ಧಭೂಮಿಗೆ ಹೊರಟು ಬರುವಾಗ, ಅವನ ಸುತ್ತಲೂ ಶಸ್ತ್ರಧಾರಿಗಳಾದ ಯೋಧರು ಬರುತ್ತಿದ್ದರು. ಅವರಲ್ಲಿ ಒಬ್ಬೊಬ್ಬರೂ ಪರ್ವತದಂತೆ ಮಹೋನ್ನತವಾದ ದೇಹವುಳ್ಳವರೂ, ನರಮಾಂಸ

ವನ್ನು ತಿಂದು ಕೊಬ್ಬಿದವರೂ, ಕಾಲಮೇಘದಂತೆ ಕಪ್ಪಾದ ಮೈಯುಳ್ಳವರೂ, ಕೆಂಡದಂತೆ ಕಣ್ಣುಳ್ಳವರೂ ಆಗಿದ್ದರು. ಇಂತಹರಿಂದ ಪರಿವೃತನಾದ ಆ ರಾವಣನು, ಭೂತಗಣಗಳಿಂದ ಪರಿವೃತನಾದ ರುದ್ರನಂತೆಯೇ ಕಾಣುತ್ತಿದ್ದನು. ಈ ರೀತಿ ಮಹಾತೇಜಸ್ವಿಯಾದ ರಾವಣನು ವೇಗದಿಂದ ತನ್ನ ಪಟ್ಟಣವನ್ನು ಬಿಟ್ಟು ಹೊರಟುಬಂದು, ಇತ್ತಲಾಗಿ ಮಹೋಗ್ರವಾಗಿಯೂ, ಮಹಾಸಮುದ್ರದಂತೆಯೂ ಮೇಘದಂತೆಯೂ ಗಂಭೀರಧ್ವನಿಯುಳ್ಳುದಾಗಿಯೂ ಶಿಲೆಗಳನ್ನೂ ಮರಗಳನ್ನೂ ಬೆಟ್ಟಗಳನ್ನೂ ಯುದ್ಧಸಾಧನಗಳನ್ನಾಗಿ ಹಿಡಿದು ಸಿದ್ಧರಾಗಿದ್ದ ವಾನರ ಸೇನೆಯನ್ನು ಕಂಡನು. ಇತ್ತಲಾಗಿ ಸರ್ಪರಾಜನಾದ ವಾಸುಕಿಯಂತೆ ನೀಡಿದ ತೋಳುಗಳುಳ್ಳವನಾಗಿ, ವಾನರಸೇನೆಯ ಮಧ್ಯದಲ್ಲಿದ್ದ ಶ್ರೀರಾಮನೂ ಕೂಡ, ಲಂಕೆಯ ಕಡೆಯಿಂದ ಅತಿಪ್ರಚಂಡವಾಗಿ ಬರುತ್ತಿದ್ದ ಆ ದೊಡ್ಡ ರಕ್ಕಸಸೇನೆಯನ್ನು ನೋಡಿದನು. ಸಪರಿವಾರನಾಗಿ ಬರುತಿದ್ದ ಆ ರಾವಣನನ್ನು ಕಂಡೊಡನೆ ಶ್ರೀರಾಮನ ಮುಖವು ಯುದ್ಧೋತ್ಸಾಹದಿಂದ ಕಳೆಯೇರಿತು. ಆಗ ರಾಮನು ಶಸ್ತ್ರಧಾರಿಗಳಲ್ಲಿ ಮೇಲೆನಿಸಿದ ವಿಭೀಷಣನನ್ನು ಕುರಿತು, "ವಿಭೀಷಣಾ ! ಯಾರವನು ? ಅವನ ಅಟ್ಟಹಾಸವೇನು? ಚಿತ್ರಗಳಾದ ಧ್ವಜಪತಾಕೆಗಳಿಂದಲೂ, ವಿವಿಧಾಯುಧಗಳಿಂದಲೂ ಶೋಭಿಸುತ್ತಿರುವ ಆ ಸೇನೆಯೆಲ್ಲಿಯದು ? ಐರಾವತಕ್ಕೆಣೆಯಾದ ಮದದಾನೆಗಳಿಂದ ಕೂಡಿ ಶೂರರಕ್ಕಸರಿಂದ ತುಂಬಿದ ಆ ಸೇನೆಯು ಯಾರಿಗೆ ಸೇರಿದ್ದು ?" ಎಂಬುದಾಗಿ ಕೇಳಿದನು. ಇದನ್ನು ಕೇಳಿ ವಿಭೀಷಣನು, ರಾಮನಿಗೆ ಆ ಸೇನೆಯ ಮಹಾ ಮಹಿಮೆಯನ್ನು ವರ್ಣಿಸಿ ಹೇಳತೊಡಗಿ, "ಎಲೆ ಮಹಾರಾಜನೆ ! ಅದೋ! ನೋಡು ! ಇಂದ್ರಧನುಸ್ಸಿನಂತಿರುವ ದೊಡ್ಡ ಧನುಸ್ಸನ್ನು ಹಿಡಿದು, ಸಿಂಹಧ್ವಜವುಳ್ಳ ರಥವನ್ನೇರಿ, ದೊಡ್ಡ ಕೊಂಬುಳ್ಳ ಮದದಾನೆಯಂತೆ ಭಯಂಕರವಾಗಿ ಬಿಚ್ಚಿದ ಕೋರೆಯುಳ್ಳವನಾಗಿ ಬರುತ್ತಿರುವವನೇ ಇಂದ್ರಜಿತ್ತೆಂಬುವನು. ಇವನು ಶತ್ರುಗಳ ಕಣ್ಣಿಗೆ ಕಾಣದೆ ಯುದ್ಧಮಾಡುವ ಅಸಾಧಾರಣ ವರವನ್ನು ಪಡೆದಿರುವನು. ರಾಮಾ ಅದೋ ನೋಡು ! ವಿಂಧ್ಯಪರ್ವತದಂತೆ ಮಹೋನ್ನತನಾಗಿಯೂ, ಅಸ್ತಮಯ ಪರ್ವತದಂತೆ ಇತರರ ತೇಜಸ್ಸನ್ನು ತಗ್ಗಿಸತಕ್ಕವನಾಗಿಯೂ, ಮಹೇಂದ್ರ ಪರ್ವತದಂತೆ ನಿಶ್ಚಲನಾಗಿಯೂ ಕುಳಿತು ಧನುರ್ಧಾರಿಯಾಗಿ ಬರುತ್ತಿರುವವನೇ ಅತಿಕಾಯನೆಂಬುವನು. ರಕ್ಕಸರಲ್ಲಿ ಈತನು ಅತಿರಥನೆನಿಸಿರುವನು. ಮಹಾವೀರನು. ಇವನ ದೊಡ್ಡ ದೇಹದಿಂದಲೇ ಇವನಿಗೆ ಮಹಾಕಾಯನೆಂದು ಹೆಸರು ಬಂದಿರುವುದು.

ಅದೋ ಅಲ್ಲಿ ! ಆಗಲೇ ಉದಿಸಿದ ಸೂರ್ಯನಂತೆ ಕೆಂಪೇರಿದ ಕಣ್ಣುಳ್ಳವನಾಗಿ, ಘಂಟಾಧ್ವನಿಯಿಂದೊಪ್ಪುವ ಮದದಾನೆಯ ಮೇಲೆ ಕುಳಿತು ಘರ್ಜಿಸುತ್ತ ಬರುತ್ತಿರುವವನಿಗೆ ಮಹೋದರನೆಂದು ಹೆಸರು. ಅದೋ ಅಲ್ಲಿ! ಬೆಟ್ಟದಂತೆ ಮಹೋನ್ನತವಾದ ಕುದುರೆಯನ್ನೇರಿ, ಥಳಥಳಿಸುವ ಪ್ರಾಸವನ್ನು ಕೈಯಲ್ಲಿ ಹಿಡಿದು ಸಿಡಿಲಿನಂತೆ ಮಹಾವೇಗದಿಂದ ರಾಕ್ಷಸನೊರ್ವನು ಬರುವವನಲ್ಲವೆ? ಅವನಿಗೆ ಪಿಶಾಚನೆಂದು ಹೆಸರು. ಅದೋ ! ಅಲ್ಲಿ, ಇಂದ್ರನ ವಜ್ರಾಯುಧವನ್ನೂ ಕೂಡ ತನ್ನ ಕೈಕೆಳಗಿಟ್ಟುಕೊಳ್ಳುವಂತೆ ಮಹಾವೇಗವುಳ್ಳುದಾಗಿ, ಮಿಂಚಿನಂತೆ ಥಳಥಳಿಸುವ ತೀಕ್ಷ್ಣಶೂಲವನ್ನು ಕೈಯಲ್ಲಿ ಹಿಡಿದು ದೊಡ್ಡ ವೃಷಭವನ್ನೇರಿ ಬರುತ್ತಿರುವವನು ತ್ರಿಶಿರನೆಂಬ ರಾಕ್ಷಸನು. ಈತನು ಬಹಳ ವೀರ್ಯವಂತನು. ಅದೋ ! ಅಲ್ಲಿ ಕಾಲ ಮೇಘದಂತೆ ಕಪ್ಪುಮೈಯುಳ್ಳವನಾಗಿಯೂ, ಅಗಲವಾಗಿ ಉಬ್ಬಿದ ಎದೆಯುಳ್ಳವ ನಾಗಿಯೂ, ಸರ್ಪಚಿಹ್ನಧ್ವಜದಿಂದ ಶೋಭಿತನಾಗಿಯೂ, ಸರ್ವಾಯುಧ ಸಂಪನ್ನ ನಾಗಿಯೂ, ಆಗಾಗ ತನ್ನ ಬಿಲ್ಲಿನ ಹೆದೆಯನ್ನು ಆಕರ್ಣಾಂತವಾಗಿ ಎಳೆದು ಲೀಲೆ ಯಿಂದ ಧನುಷ್ಟಂಕಾರ ಮಾಡುವವನಾಗಿಯೂ ಎಚ್ಚರಿಕೆಯಿಂದ ಬರುತ್ತಿರುವ ಆ ರಾಕ್ಷಸನು ಕುಂಭನೆಂದು ಹೆಸರುಗೊಂಡವನು. ಅದೋ ಅಲ್ಲಿ ಚಿನ್ನದಿಂದಲೂ ವಜ್ರ ಮಣಿಗಳಿಂದಲೂ ಅಲಂಕೃತವಾಗಿ,ಹೊಗೆಯಾಡುವಂತೆ ಕಾಣುತ್ತಿರುವ ದೊಡ್ಡ ಪರಿಘ ವನ್ನು ಹಿಡಿದು ಬರುತ್ತಿರುವವನಿಗೆ ನಿಕುಂಭನೆಂದು ಹೆಸರು. ರಾಕ್ಷಸ ಸೇನೆಗೆ ಇವನೇ ಧ್ವಜದಂತೆ ಪ್ರಧಾನಭೂತನಾಗಿರುವನು. ಅದೋ ಅಲ್ಲಿ! ಧನುರ್ಬಾಣಗಳಿಂದಲೂ, ಕತ್ತಿಗಳಿಂದಲೂ ತುಂಬಿದುದಾಗಿ, ಧ್ವಜಾಲಂಕೃತವಾಗಿ ಅಗ್ನಿಯಂತೆ ಧಗಧಗಿ ಸುತ್ತಿರುವ ರಥವನ್ನೇರಿ ಬರುತ್ತಿರುವವನೇ ನರಾಂತಕನು. ಈತನು ಶತ್ರುಗಳು ಸಿಕ್ಕದಿರುವಾಗ ತನ್ನ ಮೈನವೆಯನ್ನಾರಿಸಿಕೊಳ್ಳುವುದಕ್ಕಾಗಿ, ಆಗಾಗ ಪರ್ವತ ಶಿಖರ ಗಳನ್ನು ಗುದ್ದಿ ಹೋರಾಡುವ ಸ್ವಭಾವವುಳ್ಳವನು. ನಾನಾವಿಧ ಭಯಂಕರ ಸ್ವರೂಪ ವುಳ್ಳವುಗಳಾಗಿಯೂ, ಹೆಬ್ಬುಲಿಗಳಂತೆಯೂ, ಒಂಟೆಗಳಂತೆಯೂ ಮುಖವುಳ್ಳವುಗ ಳಾಗಿಯೂ, ಯಾವಾಗಲೂ ಕೋಪದಿಂದ ತಿರುಗುತ್ತಿರುವ ಕಣ್ಣಾಲೆಗಳುಳ್ಳು ವಾಗಿಯೂ ಇರುವ ಅನೇಕ ಭೂತಗಳಿಂದ ಪರಿವೇಷ್ಟಿತನಾಗಿ ಆ ಸೇನೆಯ ಮಧ್ಯದಲ್ಲಿ ಬರುತ್ತಿರುವ ಪ್ರಧಾನ ರಾಕ್ಷಸನನ್ನು ನೋಡಿದೆಯಾ ? ಅವನೇ ನಿನಗೆ ಪರಮ ವೈರಿಯಾದ ರಾವಣನು. ಅವನೇ ಸಮಸ್ತ ದೇವತೆಗಳ ಕೆಚ್ಚನ್ನೂ ಮುರಿದವನು. ಅದೋ ! ಪೂರ್ಣಚಂದ್ರನಂತೆ ಪ್ರಕಾಶಿಸುತ್ತ ಸಣ್ಣಸಣ್ಣ ಸಲಾಕೆಗಳಿಂದ ಕೂಡಿದ

ಸರ್ವೋತ್ತಮವಾದ ಶ್ವೇತಚ್ಛತ್ರವು ಕಾಣುವುದು ನೋಡು. ಆ ರಥದಲ್ಲಿ ಕುಳಿತಿರುವ ವನೇ ರಾಕ್ಷಸ ಚಕ್ರವರ್ತಿಯು. ಅವನೇ ಅಷ್ಟೊಂದು ಮಹಾ ಪ್ರಭಾವದಿಂದ ಪ್ರಸಿದ್ಧನಾಗಿ, ಭೂತಗಳಿಂದ ಪರಿವೃತನಾದ ರುದ್ರನಂತೆ ಅನೇಕ ವೀರ ರಾಕ್ಷಸ ರಿಂದ ಪರಿವೃತನಾಗಿರುವನು. ಅದೋ ಅವನ ತಲೆಯಲ್ಲಿರುವ ಅನರ್ಘ್ಯವಾದ ಕಿರೀಟದ ಸೊಬಗನ್ನು ನೋಡು ! ಹಿಮವತ್ಪರ್ವತದಂತೆಯೂ, ವಿಂಧ್ಯಪರ್ವತದಂ ತೆಯೂ, ಕಾಣುತ್ತಿರುವ ಅವನ ಭಯಂಕರವಾದ ಆಕಾರವನ್ನು ನೋಡು. ರಾಮಾ! ಆತನು ಸಾಮಾನ್ಯನಲ್ಲ ! ಆಗಾಗ ಮಹೇಂದ್ರ ಯಮಾದಿಗಳ ಸೊಕ್ಕನ್ನು ಮುರಿದು ಬಂದವನು. ಸೂರ್ಯನಂತೆ ಮಹಾ ತೇಜಸ್ಸಿನಿಂದ ಕೂಡಿದ ಆ ನಿನ್ನ ವೈರಿಯನ್ನು ಚೆನ್ನಾಗಿ ನೋಡು " ಎಂದನು. ಆಗ ರಾಮನು ರಾವಣನ ಮಹಾದ್ಭುತ ತೇಜಸ್ಸನ್ನೂ, ಅಟ್ಟಹಾಸವನ್ನೂ ನೋಡಿ ಆಶ್ಚರ್ಯಗೊಂಡವನಾಗಿ, ವಿಭೀಷಣನನ್ನು ಕುರಿತು, " ವಿಭೀಷಣಾ ! ನಿಜವಾಗಿಯೂ ಈ ರಾಕ್ಷಸ ಚಕ್ರವರ್ತಿಯಾದ ರಾವಣನ ತೇಜಸ್ಸು ಅತ್ಯದ್ಭುತವಾಗಿರುವುದು. ಅವನ ಪ್ರತಾಪವೇನು ? ಸೂರ್ಯನು ತನ್ನ ಕಿರಣಗಳಿಂದ ನೋಡುವವರ ಕಣ್ಣನ್ನು ಕೋರೈಸುವಂತೆ ಇವನ ಕಾಂತಿಯೂ ಕೂಡ ನೋಡಲಸಾಧ್ಯವಾಗಿರುವುದು. ಇವನ ರೂಪವು ಸುತ್ತಲೂ ಮಹಾದ್ಭುತ ತೇಜಸ್ಸಿನಿಂದ ಮರೆಗೊಂಡಂತಿದ್ದರೂ ವ್ಯಕ್ತವಾಗಿ ಕಾಣುತ್ತಿರುವುದು. ಈತನ ದೇಹ ಕಾಂತಿಯನ್ನು ನೋಡಿದರೆ, ದೇವದಾನವರಲ್ಲಿ ಬೇರೆ ಯಾರಿಗೂ ಇಷ್ಟೊಂದು ಮಹಾದ್ಭುತವಾದ ತೇಜಸ್ಸಿರುವಂತೆ ತೋರಲಿಲ್ಲ. ಇಂತಹ ಅದ್ಭುತ ದೇಹವು ಬೇರೆ ಯಾರಿಗೂ ಇರದು. ಇವನನ್ನು ಸುತ್ತಿಬರುತ್ತಿರುವ ಯೋಧರ ರೂಪವಾದರೂ, ಸಾಮಾನ್ಯವಲ್ಲ. ಪ್ರತಿಯೊಬ್ಬರೂ ಪರ್ವತದಂತೆ ಮಹಾಕಾಯವುಳ್ಳವರು. ಒಬ್ಬೊಬ್ಬರೂ ಪರ್ವತಗಳನ್ನೆತ್ತಿ ಹೋರಾಡುವಷ್ಟು ದೇಹಬಲವುಳ್ಳವರು. ಪ್ರತಿ ಯೊಬ್ಬರೂ ಥಳಥಳಿಸುವ ಆಯುಧಗಳನ್ನು ಹಿಡಿದು ಬಂದಿರುವರು ! ಇಂತಹ ಮಹಾದ್ಭುತ ತೇಜಸುಳ್ಳವರಾಗಿಯೂ, ಭಯಂಕರ ಪರಾಕ್ರಮವುಳ್ಳವರಾಗಿಯೂ ಇರುವ ಅನೇಕ ರಕ್ಕಸರು ಅವನ ಆಜ್ಞಾಧೀನರಾಗಿ ಅವನನ್ನು ಸುತ್ತಿಬರುತ್ತಿರುವರು. ಈ ರಾವಣನಿಗೆ ರಾಕ್ಷಸರಾಜಪದವಿಯು ಯುಕ್ತವಾಗಿಯೇ ಇರುವುದು. ಹೀಗೆ ಘೋರ ರಕ್ಕಸರಿಂದ ಪರಿವೇಷ್ಟಿತನಾದ ಆ ರಾವಣನು, ಕ್ರೂರಭೂತಗಳಿಂದ ಪರಿ ವೃತನಾದ ಕಾಲಾಂತಕನಂತೆಯೇ ಕಾಣುತ್ತಿರುವನು ! ವಿಭೀಷಣಾ ! ಆದರೇನು ! ಇರಲಿ ! ಪರಮ ಪಾಪಾತ್ಮನಾದ ಈ ರಾವಣನು ಈಗ ದೈವಿಕವಾಗಿ ನನ್ನ ಕಣ್ಣಿಗೆ

ಬಿದ್ದನು, ನನ್ನ ಪ್ರಿಯಪತ್ನಿಯಾದ ಸೀತೆಯನ್ನು ಕದ್ದೊಯ್ದುದರಿಂದ ನನಗೆ ಉಂಟಾಗಿರುವ ಕೋಪವನ್ನು ಈಗಲೇ ಇವನ ಮೇಲೆ ತೀರಿಸಿಕೊಳ್ಳುವೆನು" ಎಂದು ಹೇಳಿ, ವೀರನಾದ ಆ ರಾಮನು ತನ್ನ ದಿವ್ಯಧನುಸ್ಸನ್ನು ಎತ್ತಿಕೊಂಡು, ಉತ್ತಮ ಬಾಣಗಳನ್ನು ಬತ್ತಳಿಕೆಯಿಂದ ಹೊರಕ್ಕೆ ತೆಗೆದು, ತಮ್ಮನಾದ ಲಕ್ಷ್ಮಣನೊಡನೆ ಸೇರಿ ಯುದ್ಧಸನ್ನದ್ಧನಾಗಿ ನಿಂತನು. ಅತ್ತಲಾಗಿ ರಾವಣನು, ಬಲಾಢ್ಯರಾದ ತನ್ನ ಯೋಧರನ್ನು ನೋಡಿ "ಎಲೈಭಟರೆ, ನಿಮ್ಮಲ್ಲಿ ಕೆಲವರು ನಮ್ಮ ಪಟ್ಟಣದ ಒಳಬಾಗಿಲುಗಳಲ್ಲಿಯೂ, ಕೆಲವರು ಹೊರಬಾಗಿಲುಗಳಲ್ಲಯೂ ಕಾವಲಿರಬೇಕು. ಕೆಲವರು ಅವುಗಳ ಪಾರ್ಶ್ವದಲ್ಲಿ ಕಾವಲಿರಬೇಕು. ಭಯಪಡಕೂಡದು. ನಿಮ್ಮೆಲ್ಲ ರೊಡನೆ ನಾನು ಇತ್ತಲಾಗಿ ಹೊರಟುಬಂದಿರುವೆನೆಂಬ ಸಂಚನ್ನು ತಿಳಿದರೆ, ಈ ಕಪಿಗಳು ಒಳಗೆ ಹೊಕ್ಕು ಕೊಳ್ಳೆ ಹೊಡೆಯಬಹುದು. ಆದ್ದರಿಂದ ನೀವೆಲ್ಲರೂ ಬಹಳ ಎಚ್ಚರಿಕೆಯಿಂದಿರಬೇಕು " ಎಂದು ಅವರಿಗೆ ಅಜ್ಞೆ ಮಾಡಿದನು. ಅವರೆಲ್ಲರೂ ರಾವಣಾಜ್ಞೆಯಂತೆ ಆಯಾಸ್ಥಾನಗಳಿಗೆ ಹೊರಟುಹೋದರು. ಆಮೇಲೆ ರಾವಣನು, ಮಹಾಮತ್ಸ್ಯವು ತುಂಬಿದ ಸಮುದ್ರವನ್ನು ಕಲಕುವಂತೆ ವಾನರಸೇನೆಯನ್ನಿದಿರಿಸಿ ಅದನ್ನು ಚದರಿಸಿದನು. ಹೀಗೆ ರಾಕ್ಷಸಾಧಿಪತಿಯಾದ ರಾವಣನು ಧನುರ್ಬಾಣ ಗಳನ್ನು ಹಿಡಿದು ಯುದ್ಧಕ್ಕಾಗಿ ವೇಗದಿಂದ ಮೇಲೆಬಿದ್ದು ಬರುವುದನ್ನು ನೋಡಿ ವಾನ ರೇಶ್ವರನಾದ ಸುಗ್ರೀವನು ದೊಡ್ಡಪರ್ವತ ಶಿಖರವೊಂದನ್ನು ಕಿತ್ತುಕೊಂಡು, ರಾವಣನನ್ನಿದಿರಿಸಿ, ಅನೇಕ ವೃಕ್ಷಗಳಿಂದ ತುಂಬಿದ ಆ ಪರ್ವತವನ್ನು ಗುರಿಯಿಟ್ಟು ಬೀಸಿಬಡಿದನು.ಅದು ಮೇಲೆ ಬೀಳುವಷ್ಟರಲ್ಲಿಯೇ ರಾವಣನು, ಸುವರ್ಣಪುಂಖಗಳುಳ್ಳ ಬಾಣಗಳನ್ನು ಪ್ರಯೋಗಿಸಿ ಅದನ್ನು ತುಂಡುಮಾಡಿ ಕೆಡವಿದನು. ಅದು ಕೆಳಗೆ ಬಿದ್ದಮೇಲೆ ರಾವಣನು ಮೃತ್ಯುಸಮಾನವಾಗಿಯೂ, ಸರ್ಪದಂತೆ ವೇಗ ವುಳ್ಳದಾಗಿಯೂ ಇದ್ದ ಮತ್ತೊಂದು ಬಾಣವನ್ನು ಬಿಲ್ಲಿನಲ್ಲಿ ಸಂಧಾನಮಾಡಿ, ವಾಯುವಿನಂತೆ ವೇಗವುಳ್ಳದಾಗಿಯೂ, ಬೆಂಕಿಯಂತೆ ದೇದೀಪ್ಯಮಾನವಾಗಿಯೂ, ಸಿಡಿಲಿಗೆ ಸಮಾನವಾದ ಮಹಾರ್ಭಟವುಳ್ಳದಾಗಿಯೂ ಇದ್ದ ಆ ಬಾಣವನ್ನು ಆಕರ್ಣಾಂತವಾಗಿ ಸೆಳೆದು, ಸುಗ್ರೀವನನ್ನು ಕೊಲ್ಲಬೇಕೆಂಬ ಅತ್ಯಾಕ್ರೋಶದಿಂದ ಅದನ್ನು ಪ್ರಯೋಗಿಸಿದನು. ಮಹೇಂದ್ರನ ವಜ್ರಾಯುಧದಂತಿದ್ದ ಆ ಬಾಣವು ಅತಿ ವೇಗದಿಂದ ಬಂದು, ಷಣ್ಮುಖನು ಪ್ರಯೋಗಿಸಿದ ಮಹೋಗ್ರಶಕ್ತಿಯು ಕ್ರೌಂಚ ವನ್ನು ಭೇದಿಸುವಂತೆ, ಸುಗ್ರೀವನನ್ನು ಭೇದಿಸಿಕೊಂಡು ಹೋಯಿತು. ಆ ಕ್ಷಣವೇ

ಸುಗ್ರೀವನು ಪ್ರಜ್ಞೆತಪ್ಪಿ ಕೂಗಿಡುತ್ತ ಬಿದ್ದನು. ಸುಗ್ರೀವನು ಮೂರ್ಛಿತನಾದು ದನ್ನು ನೋಡಿ ರಣರಂಗದಲ್ಲಿದ್ದ ರಕ್ಕಸರೆಲ್ಲರೂ ಸಂತೋಷದಿಂದ ಸಿಂಹನಾದಮಾಡಿ ದರು. ಗವಯನೂ, ಗವಾಕ್ಷನೂ, ಋಷಭನೂ, ಜ್ಯೋತಿರ್ಮುಖನೂ, ನಭನೂ ಬಹಳ ಕೋಪಗೊಂಡವರಾಗಿ, ಬೆಟ್ಟಗಳನ್ನು ತೆಗೆದುಕೊಂಡು ರಾವಣನ ಮೇಲೆ ಬೀಸಿದರು. ಅವನು ಈ ವಾನರರ ಪ್ರಹಾರಗಳನ್ನು ತಪ್ಪಿಸಿಕೊಂಡು, ಚಿನ್ನದ ಹಿಡಿಗಳುಳ್ಳ ಬಾಣಗಳನ್ನು ತೆಗೆದು ಆ ವಾನರರನ್ನು ಪೀಡಿಸಿದನು. ರಾವಣನ ಬಾಣಗಳಿಂದ ಭೇದಿಸಲ್ಪಟ್ಟ ಮೈಯುಳ್ಳವರಾಗಿ ಅವರುಗಳು ಕೆಳಗೆ ಬಿದ್ದರು. ರಾವಣನು ಹೀಗೆ ಸಕಲ ವಾನರಸೇನೆಯನ್ನೂ ನಾಶಪಡಿಸುತ್ತಿರಲು, ಮಹಾವೀರರೆನಿಸಿಕೊಂಡ ಪ್ರಸಿದ್ಧವಾನರರೆಲ್ಲರೂ ಈ ಬಾಣಪ್ರಹಾರದಿಂದ ನೊಂದು ಕೆಳಗೆ ಬಿದ್ದು ಕೂಗಿಡುತ್ತ, ಲೋಕಶರಣ್ಯನಾದ ರಾಮನ ಕಾಲುಗಳಲ್ಲಿ ಬಿದ್ದು ಮರೆಹೊಕ್ಕರು. ಆಗ ಮಹಾತ್ಮ ನಾಗಿಯೂ ಮಹಾಧನುರ್ಧಾರಿಯಾಗಿಯೂ ಇರುವ ರಾಮನು, ಆ ವಾನರರನ್ನು ರಕ್ಷಿಸುವುದಕ್ಕಾಗಿ ತನ್ನ ಬಿಲ್ಲನ್ನು ತೆಗೆದುಕೊಂಡು ಮುಂದೆ ಹೊರಟನು. ಇಷ್ಟರಲ್ಲಿ ಲಕ್ಷ್ಮಣನು ರಾಮನ ಬಳಿಗೆ ಬಂದು ಕೈಮುಗಿದು, ಸಾರಯುಕ್ತವಾದ ಮಾತಿನಿಂದ ಆತನನ್ನು ಕುರಿತು, "ಅಣ್ಣಾ! ದುರಾತ್ಮನಾದ ಈ ರಾವಣನನ್ನು ವಧಿಸುವು ದೇನೂ ನಿನಗೊಂದು ದೊಡ್ಡದಲ್ಲ! ಪೂಜ್ಯನಾದ ನಿನ್ನ ಪರಾಕ್ರಮಕ್ಕೆ ಇದು ಅತ್ಯಲ್ಪಕಾರ್ಯವು. ಈ ನೀಚನಿಗಿದಿರು ನಿಂತು ಯುದ್ಧಮಾಡುವುದೇ ನಿನಗೆ ಯೋಗ್ಯ ವಲ್ಲ. ಆದುದರಿಂದ ಆ ಕಾರ್ಯಕ್ಕೆ ನನ್ನನ್ನು ನಿಯಮಿಸು! ನಾನೇ ಅವನನ್ನು ಕೊಂದು ಬರುವೆನು ಅದಕ್ಕೆ ತಕ್ಕ ಶಕ್ತಿಯು ನನಗುಂಟು. ಆದರೆ ನಿನ್ನಾಜ್ಞೆಯಿಲ್ಲದೆ ನಾನೇ ಸ್ವತಂತ್ರಿಸಲಾರೆನು" ಎಂದನು. ಆಗ ರಾಮನು ಲಕ್ಷ್ಮಣನ ವಿನಯ ವಾಕ್ಯಕ್ಕೆ ಸಂತೋಷಗೊಂಡವನಾಗಿ, "ವತ್ಸ ಲಕ್ಷ್ಮಣಾ! ಒಳ್ಳೆಯದು! ನೀನೇ ಹೋಗಿ ಯುದ್ಧಮಾಡು ಅಲ್ಪಪರಾಕ್ರಮವುಳ್ಳವನೆಂದು ಅವನಲ್ಲಿ ಅಲಕ್ಷ್ಯವನ್ನು ಮಾತ್ರ ತೋರಿಸದೆ, ಯುದ್ಧದಲ್ಲಿ ಎಚ್ಚರಿಕೆಯಿಂದಿರು. ಅವನು ಸಾಮಾನ್ಯನೆಂದು ತಿಳಿಯ ಬೇಡ! ಮಹಾ ವೀರ್ಯವುಳ್ಳವನು. ಆಶ್ಚರ್ಯಕರವಾದ ಪರಾಕ್ರಮವುಳ್ಳವನು. ಅವನು ಕ್ರುದ್ಧನಾದ ಪಕ್ಷದಲ್ಲಿ ಮೂರುಲೋಕವೂ ಒಂದಾಗಿ ದಂಡೆತ್ತಿಬಂದರೂ ಅವನನ್ನು ಇದಿರಿಸಿ ನಿಲ್ಲಲಾರದು. ಆ ರಾವಣನು ಒಂದಸ್ತ್ರವನ್ನು ಸಂವಿಧಾನಮಾಡು ವಂತೆ ತೋರಿಸಿ ಬೇರೊಂದಸ್ತ್ರವನ್ನು ಸಂಧಾನಮಾಡುವನು. ಆದುದರಿಂದ ನೀನು ಆಗಾಗ ಅವನ ಸಂಚುಗಳನ್ನು ತಿಳಿದು ಯುದ್ಧಮಾಡಬೇಕು. ನೀನೂ ಅವನಿಗೆ

ಸಂಚನ್ನು ಕೊಡದಂತೆ ಎಚ್ಚರಿಕೆಯಿಂದಿರಬೇಕು. ವತ್ಸ ಲಕ್ಷ್ಮಣಾ ! ಹೀಗೆ ನೀನು ಎಚ್ಚರಿಕೆಯಿಂದ ಕಣ್ಣಿಟ್ಟು ಕಾಯುತ್ತ ನಿನ್ನ ಧನುರ್ವಿದ್ಯೆಯ ಚಾತುರ್ಯ ದಿಂದಲೇ ನಿನ್ನನ್ನು ರಕ್ಷಿಸಿಕೊಳ್ಳಬೇಕು." ಎಂದನು. ರಾಮನು ಹೇಳಿದ ಬುದ್ಧಿ ವಾದವನ್ನು ಕೇಳಿ ಲಕ್ಷ್ಮಣನು ಸಂತೋಷದಿಂದ ಆತನನ್ನಪ್ಪಿಕೊಂಡು, ಅವನಿಗೆ ಪ್ರದಕ್ಷಿಣವನ್ನು ಮಾಡಿ ನಮಸ್ಕರಿಸಿ ಯುದ್ಧಕ್ಕೆ ಹೊರಟನು. ಆನೆಯ ಸೊಂಡಲಿ ನಂತೆ ಭುಜವುಳ್ಳ ಆ ಲಕ್ಷ್ಮಣನು ಮುಂದೆ ಹೋಗಿ, ಅಲ್ಲಿ ದೇದೀಪ್ಯಮಾನವಾದ ಭಯಂಕರ ಧನುಸ್ಸನ್ನು ಹಿಡಿದು ವಾನರರಮೇಲೆ ಬಾಣವರ್ಷವನ್ನು ಕರೆಯುತ್ತಿದ್ದ ರಾವಣನನ್ನೂ, ಅದರಿಂದ ಗಾಯಪಟ್ಟು ಚದರುತ್ತಿರುವ ವಾನರರನ್ನೂ ನೋಡಿ ದನು. ಇಷ್ಟರಲ್ಲಿ ಮಹಾತೇಜಸ್ವಿಯಾಗಿಯೂ, ವಾಯುಪುತ್ರನಾಗಿಯೂ ಇರುವ ಹನುಮಂತನು, ವಾನರರಮೇಲೆ ಬಾಣವರ್ಷವನ್ನು ಕರೆಯುತ್ತಿರುವ ರಾವಣನನ್ನಿ ದಿರಿಸುವುದಕ್ಕಾಗಿ, ಲಕ್ಷ್ಮಣನು ಬರುತ್ತಿರುವುದನ್ನು ನೋಡಿ, ತಾನೇ ಮೊದಲು ಮುಂದುಬಿದ್ದು ರಾವಣನ ಬಾಣಸಮೂಹಗಳನ್ನು ತಡೆದು, ಅವನಿಗಿದಿರಾಗಿ ಓಡಿ ದನು. ಧೀಮಂತನಾದ ಆ ಹನುಮಂತನು ರಾವಣನ ರಥವನ್ನು ಸಮೀಪಿಸಿದೊಡ ನೆಯೇ ತನ್ನ ಬಲತೋಳನ್ನು ಮೇಲಕ್ಕೆತ್ತಿ ರಾವಣನನ್ನು ಹೆದರಿಸುತ್ತ ಅವನನ್ನು ಕುರಿತು "ಎಲೆ ರಾವಣಾ ! ಸಾಕು ನಿಲ್ಲಿಸು ! ನೀನು ದೇವದಾನವ ಯಕ್ಷಗಂಧರ್ವ ರಾಕ್ಷಸರಲ್ಲಿ ಯಾರೊಬ್ಬರಿಂದಲೂ ಮರಣವಿಲ್ಲದಂತೆ ವರವನ್ನು ಪಡೆದು ಬಂದಿರ ಬಹುದು. ಆದರೇನು ? ವಾನರರಿಂದ ಮಾತ್ರ ನಿನಗೆ ಎಂದಿಗೂ ಭಯವು ತಪ್ಪದು. ಅದೋ ಐದು ಕವಲುಗಳುಳ್ಳ ನನ್ನ ಬಲದೋಳನ್ನೆತ್ತಿರುವೆನು ನೋಡು ! ಈ ನನ್ನ ಭುಜವೇ ನಿನ್ನನ್ನು ಕೊಂದು, ನಿನ್ನ ದೇಹದಲ್ಲಿ ಬಹುಕಾಲದಿಂದಲೂ ಸೇರಿಕೊಂಡಿ ರುವ ಜೀವಾತ್ಮನನ್ನು ಹೊರಕ್ಕೆ ಕಿತ್ತೆಸೆಯುವುದು" ಎಂದನು. ಹನುಮಂತನ ಈ ವಾಕ್ಯವನ್ನು ಕೇಳಿ ಭಯಂಕರ ಪರಾಕ್ರಮವುಳ್ಳ ರಾವಣನು ಕೋಪದಿಂದ ಕೆಂಪೇ ರಿದ ಕಣ್ಣುಳ್ಳವನಾಗಿ, "ಎಲೆ ವಾನರಾ ! ಹಾಗೆಯೇ ಆಗಲಿ ! ನಿರ್ಭಯವಾಗಿ ನಿಂತು ನಿನ್ನಿಂದಾದಮಟ್ಟಿಗೆ ಪ್ರಹರಿಸು ! ಯಾವುದೋ ಒಂದು ಕಾಡು ಕಪಿಯು ರಾಕ್ಷಸಚಕ್ರವರ್ತಿಯಾದ ನನ್ನನ್ನು ಕೈಯೆತ್ತಿ ಹೊಡೆಯಿತೆಂಬ ಅಪಕೀರ್ತಿ ಯಾದರೂ ನಿನಗೆ ಸ್ಥಿರವಾಗಿ ನಿಲ್ಲಲಿ ! ನಿನ್ನ ಶಕ್ತಿಯೆಷ್ಟೆಂದು ತಿಳಿಯುವುದು. ಆಮೇಲೆ ನಾನು ನಿನ್ನನ್ನು ನೋಡಿಕೊಳ್ಳುವೆನು" ಎಂದನು. ರಾವಣನ ಮಾತನ್ನು ಕೇಳಿ ತಿರುಗಿ ಆಂಜನೇಯನು ರಾವಣನನ್ನು ನೋಡಿ, ನೀನು ನನ್ನ ಶಕ್ತಿಯನ್ನು

ಹೊಸದಾಗಿ ತಿಳಿಯಬೇಕೆ? ನಿನ್ನ ಮಗನಾದ ಅಕ್ಷಯಕುಮಾರನನ್ನು ಇದೇ ಮುಷ್ಟಿಯಿಂದ ಕೊಂದು ಕೆಡಹಿದೆನಲ್ಲವೆ? ಅದನ್ನು ಸ್ಮರಿಸಿಕೊಂಡು ನೋಡು'' ಎಂದನು. ಈ ಮಾತನ್ನು ಕೇಳಿದ ಕ್ಷಣವೇ ರಾವಣನು ಭುಜವನ್ನೆತ್ತಿ ಆಂಜನೇಯನ ಎದೆಯ ಮೇಲೆ ಅಂಗೈಯಿಂದ ಹೊಡೆದನು. ರಾವಣನ ಅಂಗೈಪೆಟ್ಟಿಗೆ ಹನುಮಂತನ ದೇಹವು ಅದಿರಿಹೋಯಿತು. ಹಾಗಿದ್ದರೂ ಆಂಜನೇಯನು ಮಹಾವೀರ್ಯವುಳ್ಳವನಾಗಿಯೂ, ಧೀರನಾಗಿಯೂ ಇದ್ದುದರಿಂದ, ಕ್ಷಣಮಾತ್ರದವರೆಗೆ ಹಾಗೆಯೇ ನಿಂತಿದ್ದು ಮನಸ್ಸಿಗೆ ಸ್ಥೈರ್ಯವನ್ನು ತಂದುಕೊಂಡು ಕೋಪದಿಂದ ರಾವಣನನ್ನಪ್ಪಳಿಸಿದನು. ಭೂಕಂಪವುಂಟಾದಾಗ ಪರ್ವತವು ನಡುಗುವಂತೆ, ಬಲಾಢ್ಯನಾದ ಹನುಮಂತನ ಪ್ರಹಾರಕ್ಕೆ ರಾವಣನ ದೇಹವು ನಡುಗಿಹೋಯಿತು. ಅವನಿಗುಂಟಾದ ಈ ಭಂಗವನ್ನು ನೋಡಿ, ಅಲ್ಲಿದ್ದ ವಾನರರೂ, ಋಷಿಗಳೂ, ಸಿದ್ಧರೂ, ದೇವತೆಗಳೂ, ಅಸುರರೂ, ಸಂತೋಷದಿಂದ ಕೋಲಾಹಲವನ್ನು ಮಾಡಿದರು. ಇಷ್ಟರಲ್ಲಿ ಮಹಾತೇಜಸ್ವಿಯಾದ ರಾವಣನೂ ಚೇತರಿಸಿಕೊಂಡು, ಹನುಮಂತನನ್ನು ನೋಡಿ, "ವಾನರಾ! ಭಲೆ! ಶಹಭಾಸ್! ನೀನು ಶತ್ರುವಾಗಿದ್ದರೂ ನಿನ್ನ ಶಕ್ತಿಗೆ ಮೆಚ್ಚಿದೆನು" ಎಂದನು. ಇದನ್ನು ಕೇಳಿ ವಾಯುಪುತ್ರನು ರಾವಣನನ್ನು ನೋಡಿ, "ಛೀ! ಬಿಡು! ಈ ನನ್ನ ಶಕ್ತಿಯನ್ನು ಸುಡಬೇಕು! ನನ್ನ ಪರಾಕ್ರಮವು ಹಾಳಾಯಿತು! ಈ ನನ್ನ ಮುಷ್ಟಿಪ್ರಹಾರದಿಂದಲೂ ನೀನು ಸಾಯದೆ ಬದುಕಿದ್ದ ಮೇಲೆ ಈ ನನ್ನ ವೀರ್ಯವೊಂದು ವೀರ್ಯವೆ? ಎಲೆ ದುರಾತ್ಮಾ! ಇನ್ನೊಮ್ಮೆಯಾದರೂ ಈಗ ನೀನು ನನ್ನನ್ನು ಪ್ರಹರಿಸಿ ನೋಡು! ಸುಮ್ಮನೆ ನಿನಗೆ ನೀನೇ ಹೊಗಳಿಕೊಳ್ಳುವುದರಿಂದೇನು? ಒಂದೇ ಮುಷ್ಟಿಪ್ರಹಾರದಿಂದ ನಿನ್ನನ್ನು ಯಮಪುರಿಗೆ ಕಳುಹಿಸಿಬಿಡುವೆನು" ಎಂದನು. ಈ ಮಾತುಗಳನ್ನು ಕೇಳಿ ರಾವಣನಿಗೆ ಮಿತಿಮೀರಿದ ಕೋಪವು ಹುಟ್ಟಿತು. ಅವನ ಕಣ್ಣುಗಳೆಲ್ಲವೂ ಕೆಂಡದಂತೆ ಕೆಂಪಾದುವು. ಆಗ ರಾವಣನು ತನ್ನ ಬಲಗೈಯನ್ನು ಮೇಲಕ್ಕೆತ್ತಿ, ದೃಢವಾದ ಮುಷ್ಟಿಯನ್ನು ಹಿಡಿದು ಹನುಮಂತನ ಎದೆಯ ಮೇಲೆ ಗುದ್ದಿದನು. ಆ ಪ್ರಹಾರಕ್ಕೆ ಹನುಮಂತನ ದೇಹವು ನಡುಗಿ ನಿಶ್ಚೇಷ್ಟಿತವಾಯಿತು. ಇಷ್ಟರಲ್ಲಿ ಅತಿರಥನಾದ ರಾವಣನು, ಹನುಮಂತನು ಮೂರ್ಛಿತನಾದನೆಂದು ತಿಳಿದು, ಶೀಘ್ರದಲ್ಲಿ ತನ್ನ ರಥವನ್ನು ನಡೆಸಿಕೊಂಡು ನೀಲನೆಂಬ ವಾನರ ಸೇನಾಪತಿಯಮೇಲೆ ನುಗ್ಗಿದನು. ಬಹಳ ಪರಾಕ್ರಮಿಯಾದ ಆ ದಶಕಂಠನು, ಮರ್ಮಭೇದಕಗಳಾಗಿಯೂ, ಸರ್ಪಗಳಂತೆ ಕ್ರೂರಗಳಾಗಿಯೂ, ಭಯಂಕರಗಳಾಗಿಯೂ ಇರುವ ಬಾಣಗಳಿಂದ ವಾನರ ಬಲಾಧ್ಯಕ್ಷನಾದ ನೀಲನನ್ನು ಪ್ರಹರಿಸಿದನು. ಇವುಗಳಿಂದ ಪೀಡಿತನಾದ ನೀಲನು, ಒಂದೇ ಕೈಯಿಂದ ಒಂದು

ದೊಡ್ಡ ಪರ್ವತ ಶಿಖರವನ್ನು ಕಿತ್ತುತಂದು, ರಾವಣನ ಮೇಲೆ ಬೀಸಿದನು. ಇಷ್ಟರಲ್ಲಿ ಧೀರನಾದ ಆಂಜನೇಯನು ಮೆಲ್ಲಗೆ ಚೇತರಿಸಿಕೊಂಡು, ಯುದ್ಧಾತುರದಿಂದ ನಾಲ್ಕುಕಡೆಗಳನ್ನೂ ತಿರುಗಿನೋಡುತ್ತ, ನೀಲನಿಗಿದಿರಾಗಿ ಯುದ್ಧಮಾಡುತ್ತಿದ್ದ ರಾವಣನನ್ನು ಕಂಡು ಕೋಪದಿಂದ, "ಎಲೆ ರಾವಣಾ! ಇಷ್ಟರಲ್ಲಿಯೇ ನನ್ನನ್ನು ಜಯಿಸಿದೆನೆಂದು ತಿಳಿದು ಬೇರೊಬ್ಬನೊಡನೆ ಯುದ್ಧಕ್ಕೆ ಹೊರಟೆಯಾ? ಹಾಗಾದರೆ ನಿನ್ನಿಷ್ಟದಂತೆ ಯುದ್ಧಮಾಡು. ಮತ್ತೊಬ್ಬರೊಡನೆ ಯುದ್ಧಮಾಡುವಾಗ ನಾನೂ ಬಂದು ನಿನ್ನನ್ನಿದಿರಿಸುವುದು ಧರ್ಮವಲ್ಲ! ಆದುದರಿಂದ ಪ್ರಕೃತದಲ್ಲಿ ನಿನ್ನನ್ನು ಬಿಟ್ಟಿರುವೆನು" ಎಂದನು. ಇಷ್ಟರಲ್ಲಿ ರಾವಣನು, ನೀಲನು ಎಸೆದ ಆ ಪರ್ವತಶಿಖರವನ್ನು ತೀಕ್ಷ್ಣವಾದ ಅಲಗುಳ್ಳ ಏಳು ಬಾಣಗಳಿಂದ ಕತ್ತರಿಸಿ ಕೆಡಹಿದನು. ಹೀಗೆ ತಾನು ಪ್ರಯೋಗಿಸಿದ ಪರ್ವತವು ರಾವಣ ಬಾಣದಿಂದ ಪ್ರತಿಹತವಾಗಿ ಬಿದ್ದುದನ್ನು ನೋಡಿ, ವಾನರಸೇನಾಪತಿಯಾದ ನೀಲನಿಗೆ ಅತ್ಯಾಕ್ರೋಶ ಹುಟ್ಟಿತು. ಕೋಪದಿಂದ ಕಾಲಾಗ್ನಿಯಂತೆ ಜ್ವಲಿಸುತ್ತಿದ್ದನು. ಈ ಕೋಪಕ್ಕಾಗಿ ಅವನು ಅಲ್ಲಲ್ಲಿ ಸಿಕ್ಕಿದ ಅಶ್ವಕರ್ಣ, ಆಲ, ಸಾಲೆ, ಪುಷ್ಪಿತವಾದ ಮಾವು, ಮೊದಲಾದ ನಾನಾಜಾತಿಯ ಮರಗಳನ್ನು ಸಾಲಾಗಿ ಕಿತ್ತುತಂದು, ಆ ವೃಕ್ಷಗಳನ್ನೆಲ್ಲಾ ರಾವಣನ ಮೇಲೆ ಎಡಬಿಡದೆ ಪ್ರಯೋಗಿಸುತ್ತಿದ್ದನು. ರಾವಣನಾದರೋ ಇವುಗಳೆಲ್ಲವನ್ನೂ ನಡುದಾರಿಯಲ್ಲಿಯೇ ತನ್ನ ಬಾಣಗಳಿಂದ ತುಂಡುತುಂಡಾಗಿ ಕತ್ತರಿಸಿದುದಲ್ಲದೆ, ಅಗ್ನಿಪುತ್ರನಾದ ಆ ನೀಲನಮೇಲೆ ಭಯಂಕರವಾದ ಬಾಣವರ್ಷವನ್ನು ಕರೆಯುತ್ತಿದ್ದನು. ಮೇಘವು ಪರ್ವತದಮೇಲೆ ಮಳೆಯನ್ನು ಕರೆಯುವಂತೆ ರಾವಣನು ತನ್ನಮೇಲೆ ಎಡಬಿಡದೆ ಬಾಣಗಳನ್ನು ಕರೆಯುತ್ತಿರಲು ನೀಲನು ಕ್ಷಣಮಾತ್ರದಲ್ಲಿ ತನ್ನ ದೇಹವನ್ನು ಬಹಳ ಸೂಕ್ಷ್ಮವಾಗಿ ಮಾಡಿಕೊಂಡು, ತಟ್ಟನೆ ಮೇಲಕ್ಕೆಹಾರಿ ರಾವಣನ ಧ್ವಜಾಗ್ರದಲ್ಲಿ ಬಂದು ಕುಳಿತನು. ಇದನ್ನು ನೋಡಿ ರಾವಣನಿಗೆ ಮೇಲೆ ಮೇಲೆ ಆಕ್ರೋಶವು ಹೆಚ್ಚಿ, ಕೋಪಾಗ್ನಿಯಿಂದುರಿಯುತಿದ್ದನು. ರಾವಣನು ಕೋಪಾಗ್ನಿಯಿಂದುರಿಯುತ್ತಿದ್ದಷ್ಟೂ ನೀಲನು ಸಿಂಹನಾದಮಾಡಿ ನಗುತ್ತಿದ್ದನು. ಹೀಗೆ ನೀಲನು ರಾವಣನ ಬಾಣಪ್ರಹಾರಕ್ಕೆ ಸಿಕ್ಕದಂತೆ ಧ್ವಜಾಗ್ರದಿಂದ ರಾವಣನ ತಲೆಯಮೇಲೆ ಹಾರುವನು. ತಲೆಯಿಂದ ಅವನ ಕೈಯಲ್ಲಿದ್ದ ಧನುಸ್ಸಿನ ತುದಿಗೆ ಹಾರುವನು. ಅಲ್ಲಿಂದ ಪುನಃ ಕಿರೀಟವನ್ನು ಮೆಟ್ಟಿಕೊಂಡು ಧ್ವಜಾಗ್ರಕ್ಕೆ ಹಾರುವನು. ಹೀಗೆ ನಿಂತಲ್ಲಿ ನಿಲ್ಲದೆ, ಅಲ್ಲಿಂದಿಲ್ಲಿಗೆ ಹಾರಾಡುತ್ತಿರುವ ನೀಲನ ಸಂಚಾರ ಚಾತುರ್ಯವನ್ನು ನೋಡಿ, ಲಕ್ಷ್ಮಣನೂ, ಹನುಮಂತನೂ, ರಾಮನೂ ಅತ್ಯಾಶ್ಚರ್ಯಗೊಂಡರು. ಮಹಾತೇಜಸ್ವಿಯಾದ ರಾವಣನೂ ಕೂಡ,

ನೀಲನ ಲಾಘವಕ್ಕಾಗಿ ವಿಸ್ಮಯಗೊಂಡಿದ್ದು, ಕೊನೆಗೆ ಅವನನ್ನು ನಿಗ್ರಹಿಸಿಬಿಡಬೇಕೆಂದು, ಅದ್ಭುತಕಾಂತಿಯುಳ್ಳ ಆಗ್ನೇಯಾಸ್ತ್ರವನ್ನು ಹೂಡಿದನು. ಇತ್ತಲಾಗಿ ವಾನರರೆಲ್ಲರೂ ನೀಲನ ದೇಹಲಾಘವದಿಂದ ಸಂಭ್ರಾಂತನಾದ ರಾವಣನನ್ನು ನೋಡಿ ಸಂತೋಷದಿಂದುಬ್ಬುತ್ತ ಸಿಂಹನಾದ ಮಾಡತೊಡಗಿದರು. ಈ ವಾನರರ ಸಿಂಹನಾದ ಧ್ವನಿಯು ರಾವಣನಿಗೆ ಮತ್ತಷ್ಟು ಕೋಪವನ್ನು ಹೆಚ್ಚಿಸಿತು. ಮುಹೂರ್ತಕಾಲದವರೆಗೆ ಏನೊಂದೂ ತೋರದೆ ಭ್ರುಮೆಹಿಡಿದಂತಿದ್ದನು. ಕೊನೆಗೆ ಆಗ್ನೇಯಾಸ್ತ್ರದಿಂದ ಮಂತ್ರಿತವಾದ ಬಾಣವನ್ನೆತ್ತಿ ಧ್ವಜಾಗ್ರದಲ್ಲಿದ್ದ ನೀಲನನ್ನು ಸಟ್ಟ ಕಣ್ಣಿನಿಂದ ದುರದುರನೆ ನೋಡಿದನು. ಮತ್ತು ಮಹಾತೇಜಸ್ವಿಯಾದ ಆ ದಶಕಂಠನು ನೀಲನನ್ನು ನೋಡಿ, “ ಎಲೈ ಚಪಲ ಸ್ವಭಾವವುಳ್ಳ ವಾನರನೆ ! ನೀನು ದೊಡ್ಡ ಮಾಯೆಯನ್ನು ಹಿಡಿದು ಇಷ್ಟೊಂದು ಚಾತುರ್ಯವನ್ನು ತೋರಿಸುವಂತಿದೆ ! ಇದರೇನು ? ಈಗಲೂ ನಿನಗೆ ಶಕ್ತಿಯಿದ್ದ ಪಕ್ಷದಲ್ಲಿ ನಿನ್ನ ಪ್ರಾಣವನ್ನು ನೀನು ರಕ್ಷಿಸಿಕೊಳ್ಳುವವನಾಗು ! ಎಲೆ ವಾನರಾ ! ನೀನು ನಿನ್ನ ರೂಪಗಳನ್ನು ಬೇರೆ ವಿಧದಿಂದ ಕ್ಷಣಕ್ಷಣಕ್ಕೂ ಮಾರ್ಪಡಿಸಿಕೊಂಡು ಅನೇಕ ವಿಧವಾದ ಮಾಯೆಯನ್ನು ತೋರಿಸುವೆಯಷ್ಟೆ ? ಹಾಗಿದ್ದರೂ ಈಗ ನಾನು ಅಗ್ನಿಮಂತ್ರದಿಂದಭಿಮಂತ್ರಿಸಿ ಪ್ರಯೋಗಿಸಿರುವ ಈ ನನ್ನ ಬಾಣವು ನಿನ್ನನ್ನು ಬಿಡಲಾರದು. ನೀನು ಎಷ್ಟೇ ತಂತ್ರಗಳನ್ನು ನಡೆಸಿದರೂ ನಿನ್ನ ಪ್ರಾಣಗಳನ್ನು ರಕ್ಷಿಸಿಕೊಳ್ಳಲಾರೆ. ಇದು ನಿನ್ನ ಜೀವವನ್ನು ನೀಗಿಸುವುದರಲ್ಲಿ ಸಂದೇಹವಿಲ್ಲ ” ಎಂದನು. ಮಹಾಬಾಹುವಾದ ಆ ರಾಕ್ಷಸೇಶ್ವರನು ಹೀಗೆಂದು ಹೇಳಿ, ಅಗ್ನಿಮಂತ್ರದಿಂದ ಬಾಣವನ್ನಭಿಮಂತ್ರಿಸಿ ಬಿಲ್ಲಿನಲ್ಲಿ ಸಂಧಾನಮಾಡಿ ನೀಲನಮೇಲೆ ಪ್ರಯೋಗಿಸಿದನು. ಅಗ್ನಿಮಂತ್ರದಿಂದ ಮಂತ್ರಿಸಲ್ಪಟ್ಟ ಆ ಬಾಣವು ನೀಲನ ಎದೆಯಲ್ಲಿ ನಾಟಿದೊಡನೆಯೇ, ಆತನು ಅದರ ಜ್ವಾಲೆಯಿಂದ ಬೆಂದು, ತಟ್ಟನೆ ಧ್ವಜಾಗ್ರದಿಂದ ಕೆಳಗೆ ಬಿದ್ದನು. ಆದರೆ ಆ ನೀಲನು ಅಗ್ನಿದೇವನ ಮಗನಾದುದರಿಂದ, ತಂದೆಯಾದ ಆ ಅಗ್ನಿಯ ಅನುಗ್ರಹದಿಂದಲೂ, ತನ್ನ ತೇಜಃಪ್ರಭಾವದಿಂದಲೂ ನೆಲದಮೇಲೆ ಬಿದ್ದಾಗಲೂ ಮೊಳಕಾಲುಗಳನ್ನೂರಿ ಪ್ರಾಣಸಹಿತವಾಗಿಯೇ ಬಿದ್ದನು. ಆದರೆ ಅವನಿಗೆ ಮೈಮೇಲೆ ಪ್ರಜ್ಞೆ ತಪ್ಪಿತು. ಹೀಗೆ ನೀಲನು ಮೂರ್ಛಿತನಾಗಿರುವುದನ್ನು ನೋಡಿ, ರಾವಣನು ಮುಂದಿನ ಶತ್ರುವನ್ನಿದಿರಿಸುವುದರಲ್ಲಿ ಆತುರವುಳ್ಳವನಾಗಿ, ಮೇಘದ ಧ್ವನಿಯಂತೆ ಶಬ್ದಿಸುತ್ತಿರುವ ತನ್ನ ರಥವನ್ನು ಲಕ್ಷ್ಮಣನಿದ್ದ ಕಡೆಗೆ ಬಿಟ್ಟನು. ಹೀಗೆ ರಾವಣನು ಲಕ್ಷ್ಮಣನನ್ನಿದಿರಿಸಿ ಹೋಗುತ್ತಿರುವಾಗ, ಅಡ್ಡಲಾಗಿ ಬಂದ ಸುಗ್ರೀವಾದಿಗಳನ್ನು ನಿಗ್ರಹಿಸಿ, ಕೋಪದಿಂದ ಜ್ವಲಿಸುತ್ತ, ಸಮಸ್ತ ಭೂಮಿಯನ್ನೂ ನಡುಗಿಸುವಂತೆ ಧನುಷ್ಟಂ

ಕಾರವನ್ನು ಮಾಡಿದನು. ಇಷ್ಟರಲ್ಲಿ ಮಹಾಬಲಾಢ್ಯನಾದ ಲಕ್ಷ್ಮಣನು, ರಥಸ್ಥನಾಗಿ ಧನುಷ್ಟಂಕಾರದೊಡನೆ ಬರುತ್ತಿದ್ದ ರಾವಣನನ್ನು ನೋಡಿ, " ರಾಕ್ಷಸೇಂದ್ರ, ಭಲೆ! ಇದೀಗ ಸರಿ! ನಿನಗೆ ವಾನರರೊಡನೆ ಯುದ್ಧವೇಕೆ? ನನ್ನೊಡನೆ ಯುದ್ಧ ಮಾಡು " ಎಂದನು. ಹೀಗೆ ಲಕ್ಷ್ಮಣನು ಯುದ್ಧಕ್ಕೆ ಕರೆಯುವುದನ್ನು ನೋಡಿ ರಾವಣನು ಆ ಲಕ್ಷ್ಮಣನ ಗಂಭೀರವಾದ ಕಂಠಸ್ವರವನ್ನೂ, ಭಯಂಕರವಾದ ಅವನ ಜ್ಯಾಶಬ್ದವನ್ನೂ ಕೇಳಿ, ಯುದ್ಧಸನ್ನದ್ಧನಾಗಿ ನಿಂತಿದ್ದ ಆ ಲಕ್ಷ್ಮಣನ ಸಮೀಪಕ್ಕೆ ಬಂದು. ಕೋಪದಿಂದ ಅವನನ್ನು ಕುರಿತು, ' ಲಕ್ಷ್ಮಣಾ! ನಿನಗೆ ವಿನಾಶಕಾಲಕ್ಕಾಗಿಯೋ ಈ ವಿಪರೀತ ಬುದ್ಧಿಯು ಹುಟ್ಟಿದಂತಿದೆ. ಭಾಗ್ಯವಶದಿಂದ ನೀನು ನನ್ನ ಕಣ್ಣಿಗೆ ಗೋಚರಿಸಿದೆ. ಈಗಲೇ ನನ್ನ ಬಾಣಗಳಿಂದ ಪೀಡಿತನಾಗಿ ನೀನು ಯಮಪುರಿಗೆ ಹೋಗಬೇಕಾಗುವುದು " ಎಂದನು. ಹೀಗೆ ರಾವಣನು ಬಿಳಿಕೋರೆ ಹಲ್ಲುಗಳಿಂದ ಭಯಂಕರವಾಗಿ ಆರ್ಭಟಿಸಿ ಗರ್ಜಿಸುತ್ತ ಬಂದು ನಿಂತುದನ್ನು ನೋಡಿ ಲಕ್ಷ್ಮಣನು ಅವನನ್ನು ಹುಲ್ಲಿಗಿಂತಲೂ ಕಡೆಯಾಗಿ ಭಾವಿಸಿ, "ಎಲೆ ರಾಕ್ಷಸ ರಾಜಾ! ನಿಜವಾಗಿಯೂ ದೊಡ್ಡ ಪ್ರಭಾವವುಳ್ಳವರು ನಿನ್ನ ಹಾಗೆ ಆತ್ಮಸ್ತುತಿಯನ್ನು ಮಾಡಿ ಗರ್ಜಿಸಲಾರರು. ನೀನು ಮಹಾ ಪಾಪಿಷ್ಠನಾದುದರಿಂದಲೇ ಹೀಗೆ ಆತ್ಮಸ್ತುತಿಯಲ್ಲಿ ಪ್ರವರ್ತಿಸಿರುವೆ. ಎಲೆ ರಾಕ್ಷಸಾ! ನಿನ್ನ ಬಲಪರಾಕ್ರಮಗಳನ್ನು ನಾನು ಕಾಣೆನೆ? ಹಿಂದೆ ನೀನು ನಿರ್ಜನ ಪ್ರದೇಶದಲ್ಲಿಯೂ ನಮ್ಮ ಭಯಕ್ಕಾಗಿ ಯತಿ ವೇಷದಿಂದ ಬಂದು ಸೀತೆಯನ್ನು ಕದ್ದುತಂದವನಲ್ಲವೆ? ಆಗಲೇ ನಿನ್ನ ಪ್ರತಾಪವು ನನಗೆ ಚೆನ್ನಾಗಿ ಅರ್ಥವಾಯಿತು. ರಾವಣಾ! ಹೆಚ್ಚು ಮಾತಿನಿಂದೇನು? ಇದೋ! ಧನುರ್ಬಾಣಗಳನ್ನು ಹಿಡಿದು ಸಿದ್ಧನಾಗಿ ನಿಂತಿರುವೆನು! ಮುಂದೆ ಬಂದು ಯುದ್ಧಕ್ಕೆ ನಿಲ್ಲು! ವ್ಯರ್ಥವಾದ ನಿನ್ನ ಆತ್ಮಸ್ತುತಿಯಿಂದ ಫಲವೇನು? ಎಂದನು. ಲಕ್ಷ್ಮಣನು ಹೇಳಿದ ಈ ದರ್ಪದ ಮಾತನ್ನು ಕೇಳಿ ರಾವಣನು ಕೋಪದಿಂದ ಜ್ವಲಿಸುತ್ತ, ಚಿನ್ನದ ಹಿಡಿಗಳುಳ್ಳ ಏಳು ಬಾಣಗಳನ್ನು ಅವನ ಮೇಲೆ ಪ್ರಯೋಗಿಸಿದನು. ಲಕ್ಷ್ಮಣನೂ ಕೂಡ ಸುವರ್ಣಪುಂಖಗಳುಳ್ಳ ತೀವ್ರಬಾಣಗಳನ್ನು ಪ್ರಯೋಗಿಸಿ ರಾವಣನ ಬಾಣಗಳನ್ನು ಕತ್ತರಿಸಿದನು. ಮೈಮುರಿದು ಬೀಳುವ ಮಹಾ ಸರ್ಪಗಳಂತೆ ತನ್ನ ಬಾಣಗಳು ತುಂಡಾಗಿ ಬಿದ್ದುದನ್ನು ನೋಡಿ ರಾವಣನಿಗೆ ಇನ್ನೂ ಕೋಪವು ಹೆಚ್ಚಿತು. ಈ ಕೋಪದಿಂದ ಮೈಮರೆತು ತಿರುಗಿ ಪರಂಪರೆಯಾಗಿ ಬಾಣಗಳನ್ನು ಬಿಡುವುದಕ್ಕೆ ತೊಡಗಿದನು. ಇತ್ತಲಾಗಿ ಲಕ್ಷ್ಮಣನೂ ತನ್ನ ಬಾಣಗಳಿಂದ ಅವುಗಳನ್ನು ಕತ್ತರಿಸುತ್ತ ರಾವಣನನ್ನೂ ಪ್ರಹರಿಸುತ್ತಿದ್ದನು. ಲಕ್ಷ್ಮಣನು ಹೀಗೆ ಮೇಲೆ ಮೇಲೆ ಕ್ಷುರಾಕಾರದ (ಕ್ಷೌರದ ಕತ್ತಿಯ ಆಕಾರದ)

ಕೆಲವು ಬಾಣಗಳನ್ನೂ, ಅರ್ಧಚಂದ್ರಾಕಾರದ ಮೊನೆಯುಳ್ಳ ಕೆಲವು ಬಾಣಗಳನ್ನೂ, ಕಿವಿಗಟ್ಟಿನಂತಿರುವ ಕವಲು ಬಾಣಗಳನ್ನೂ, ಭಲ್ಲದಂತಿರುವ ಬಾಣವನ್ನೂ ತನ್ನ ಬಿಲ್ಲಿನಿಂದ ಪ್ರಯೋಗಿಸಿ, ಆ ರಾವಣನ ಬಾಣಗಳನ್ನು ತುಂಡುಮಾಡಿ ಕೆಡಹುತ್ತಿದ್ದನು. ಇವನ ಧೈರ್ಯವು ಮೇಲೆ ಮೇಲೆ ಹೆಚ್ಚುತ್ತಿತ್ತೇ ಹೊರತು ಸ್ವಲ್ಪವಾದರೂ ಕದಲಲಿಲ್ಲ. ಆಗ ರಾವಣನು ತಾನು ಪ್ರಯೋಗಿಸಿದ ಬಾಣಸಮೂಹಗಳೆಲ್ಲವನ್ನೂ ಲಕ್ಷ್ಮಣನು ವಿಫಲಮಾಡುವುದನ್ನು ನೋಡಿ, ಆತನ ಬಾಣಪ್ರಯೋಗಚಾತುರ್ಯಕ್ಕಾಗಿ ತನ್ನಲ್ಲಿ ತಾನೇ ವಿಸ್ಮಯಪಡುತ್ತ, ತಿರುಗಿ ಅದಕ್ಕಿಂತಲೂ ತೀವ್ರವಾದ ಬಾಣಗಳನ್ನು ಪ್ರಯೋಗಿಸಿದನು. ಅದನ್ನು ನೋಡಿ ಇತ್ತಲಾಗಿ ಲಕ್ಷ್ಮಣನೂ ಕೂಡ ಈಗಲೇ ರಾವಣನನ್ನು ಕೊಂದುಬಿಡಬೇಕೆಂದೆಣಿಸಿ, ಇಂದ್ರನ ವಜ್ರಾಯುಧಕ್ಕೂ ಸಿಡಿಲಿಗೂ ಸಮಾನವಾದ ವೇಗವುಳ್ಳುದಾಗಿ, ಅಗ್ನಿಜ್ವಾಲೆಯಂತಿದ್ದ ಕೆಲವು ತೀಕ್ಷ್ಣಬಾಣಗಳನ್ನು ತೆಗೆದು, ಧನುಸ್ಸಿನಲ್ಲಿ ಸಂಧಾನಮಾಡಿ ಪ್ರಯೋಗಿಸಿದನು. ಈ ಬಾಣಗಳನ್ನೂ ರಾವಣನು ತನ್ನ ಬಾಣಗಳಿಂದ ಖಂಡಿಸಿದನು. ಹೀಗೆ ಲಕ್ಷ್ಮಣನ ಬಾಣಗಳನ್ನು ಖಂಡಿಸಿದಮೇಲೆ ರಾವಣನು ಅವನನ್ನು ಕೊಂದೇಬಿಡಬೇಕೆಂದು ನಿಶ್ಚಯಿಸಿ, ತನಗೆ ಬ್ರಹ್ಮದೇವನ ಅನುಗ್ರಹಬಲದಿಂದ ಬಂದುದಾಗಿಯೂ, ಪ್ರಳಯಕಾಲಾಗ್ನಿಯಂತೆ ದೇದೀಪ್ಯಮಾನವಾಗಿಯೂ ಇದ್ದ ಒಂದು ಬಾಣವನ್ನು ತೆಗೆದು ಲಕ್ಷ್ಮಣನ ಲಲಾಟದಲ್ಲಿ ನಾಟಿದನು. ಲಕ್ಷ್ಮಣನು ಈ ಬಾಣಹತಿಯಿಂದ ಬಹಳ ನೊಂದವನಾಗಿ, ಪ್ರಜ್ಞೆತಪ್ಪಿದಂತಾದರೂ, ಕೈಯಿಂದ ಸಡಲಿ ಬೀಳುತಿದ್ದ ಧನುಸ್ಸನ್ನು ಪ್ರಯತ್ನದಿಂದ ಹಿಡಿದು ನಿಂತು ತಿರುಗಿ ಕ್ಷಣಕಾಲದಮೇಲೆ ಚೇತರಿಸಿಕೊಂಡು, ಅತಿ ತೀಕ್ಷ್ಣವೇಗವುಳ್ಳ ಒಂದು ಬಾಣವನ್ನು ಪ್ರಯೋಗಿಸಿ, ರಾವಣನ ಕೈಲಿದ್ದ ಧನುಸ್ಸನ್ನು ಕತ್ತರಿಸಿ ಕೆಡಹಿದನು. ಆ ರಾವಣನ ಕೈಲಿದ್ದ ಬಿಲ್ಲು ಮುರಿದಮೇಲೆ ತಿರುಗಿ ಅವನ ಮೈಗೆ ಮೂರು ಬಾಣಗಳನ್ನು ಪ್ರಯೋಗಿಸಿದನು. ರಾವಣನು ಈ ಬಾಣಗಳಿಂದ ಬಹಳವಾಗಿ ನೊಂದು, ಮುಹೂರ್ತಕಾಲದವರೆಗೆ ಮೂರ್ಛಿತನಾಗಿದ್ದು, ತಿರುಗಿ ಪ್ರಯತ್ನದಿಂದ ಚೇತರಿಸಿಕೊಂಡನು. ರಾವಣನು ಬಹಳ ಸಮರ್ಥನಾಗಿಯೂ, ದೇವಶತ್ರುವಾಗಿಯೂ ಇದ್ದರೂ ಲಕ್ಷ್ಮಣನ ಬಾಣಗಳಿಂದ ಅವನ ಕೈಯಲ್ಲಿದ್ದ ಬಿಲ್ಲು ಮುರಿದು ಬಿತ್ತು. ಅವನ ದೇಹವು ಜರ್ಝರಿತವಾಯಿತು. ಸರ್ವಾಂಗಗಳಲ್ಲಿಯೂ ರಕ್ತವು ಕಿತ್ತುಕೊಂಡಿತು. ಅವನ ಮೈಯೆಲ್ಲ ಮೇದಸ್ಸಿನಿಂದ ತೊಯ್ದಂತಾಯಿತು. ಈ ತನ್ನ ದುರವಸ್ಥೆಯನ್ನು ನೋಡಿ, ರಾವಣನು, ಮಿತಿಮೀರಿದ ಕೋಪಾವೇಶವನ್ನು ಹೊಂದಿ, ಹೇಗಾದರೂ ಲಕ್ಷ್ಮಣನನ್ನು ಕೊಲ್ಲಬೇಕೆಂದು ನಿರ್ಧರಿಸಿ, ಪೂರ್ವದಲ್ಲಿ ತನಗೆ ಬ್ರಹ್ಮಾನುಗ್ರಹದಿಂದ ಲಭಿಸಿದ

ಒಂದು ಶಕ್ತ್ಯಾಯುಧವನ್ನು ಕೈಗೆತ್ತಿಕೊಂಡನು. ಹೊಗೆಯಿಲ್ಲದ ಅಗ್ನಿಜ್ವಾಲೆಯಂತೆ ದೇದೀಪ್ಯಮಾನವಾಗಿಯೂ, ನೋಡುವಾಗಲೇ ಸಮಸ್ತವಾನರರಿಗೂ ಭಯವನ್ನು ಹುಟ್ಟಿಸತಕ್ಕುದಾಗಿಯೂ ಇದ್ದ ಆ ಶಕ್ತಿಯನ್ನು ಮಹಾವೇಗದಿಂದ ಲಕ್ಷ್ಮಣನ ಕಡೆಗೆ ಪ್ರಯೋಗಿಸಿದನು. ಈ ಮಹಾದ್ಭುತಶಕ್ತಿಯು ತನ್ನ ಮೇಲೆ ಬರುವುದನ್ನು ನೋಡಿದೊಡನೆ, ಲಕ್ಷ್ಮಣನು ಅದನ್ನು ತಡಮಾಡದೆ ಖಂಡಿಸಬೇಕೆಂದೆಣಿಸಿ, ಹುತಮಾಡಿದ ಅಗ್ನಿಗೆ ಸಮಾನಗಳಾದ ಅನೇಕ ತೀಕ್ಷ್ಣಬಾಣಗಳನ್ನು ಪ್ರಯೋಗಿಸಿದನು. ಏನಾದರೇನು? ಲಕ್ಷ್ಮಣನು ಎಷ್ಟೇ ಬಾಣಗಳಿಂದ ತಡೆಯುತ್ತಿದ್ದರೂ, ಆ ಶಕ್ತಿಯು ತನ್ನ ವೇಗವನ್ನು ಬಿಡದೆ ಲಕ್ಷ್ಮಣನ ವಿಶಾಲವಾದ ಎದೆಯಲ್ಲಿ ನಾಟಿತು. ರಘುಕುಲವೀರನಾದ ಲಕ್ಷ್ಮಣನು ಬಹಳ ಶಕ್ತಿವಂತನಾಗಿದ್ದರೂ, ರಾವಣ ಪ್ರಯುಕ್ತವಾದ ಶಕ್ತಿಯ ವೇಗವನ್ನು ತಡೆಯಲಾರದೆ, ಅದರಿಂದ ಪ್ರಹೃತನಾಗಿ ಅದರ ಮಹಾಜ್ವಾಲೆಗೆ ಸಿಕ್ಕಿ ಮೂರ್ಛಿತನಾದನು. ಹೀಗೆ ಲಕ್ಷ್ಮಣನು ಮೂರ್ಛಿತನಾಗಿ ಬಿದ್ದುದನ್ನು ನೋಡಿದೊಡನೆ ರಾವಣನು ಸಂತೋಷದಿಂದ ತಟ್ಟನೆ ಮುಂದೆಬಂದು, ತನ್ನ ಎರಡು ತೋಳುಗಳಿಂದಲೂ ಆ ಲಕ್ಷ್ಮಣನನ್ನು ಹಿಡಿದೆತ್ತಿಕೊಂಡು ಹೋಗುವುದಕ್ಕೆ ಯತ್ನಿಸಿದನು. ಆದರೇನು? ಒಂದುವೇಳೆ ಹಿಮವತ್ಪರ್ವತವನ್ನಾಗಲೀ, ಮಂದರ ಪರ್ವತವನ್ನಾಗಲೀ, ಮೇರುಪರ್ವತವನ್ನಾಗಲೀ, ಸಮಸ್ತ ದೇವಸಮೂಹದಿಂದ ಕೂಡಿದ ಮೂರುಲೋಕವನ್ನಾಗಲೀ, ಕೈಗಳಿಂದೆತ್ತಿ ಹಿಡಿಯಬಹುದೇ ಹೊರತು, ಆಗ ರಣರಂಗದಲ್ಲಿ ಮಲಗಿದ್ದ ಲಕ್ಷ್ಮಣನನ್ನು ಮಾತ್ರ ಮೇಲಕ್ಕೆತ್ತುವುದು ಯಾರೊಬ್ಬರಿಗೂ ಸಾಧ್ಯವಿಲ್ಲವು. ಬ್ರಹ್ಮಸಂಬಂಧಿಯಾದ ಆ ಶಕ್ತಿಯು ವಕ್ಷಸ್ಥಲದಲ್ಲಿ ನಾಟಿದಕ್ಷಣವೇ ಲಕ್ಷ್ಮಣನು ಅಪ್ರಮೇಯನಾಗಿಯೂ, ವಿಷ್ಣುದೇವನಿಗೆ ಅಂಶಭೂತವಾಗಿಯೂ ಇರುವ ತನ್ನ ನಿಜಸ್ವರೂಪವನ್ನು ಸ್ಮರಿಸಿಕೊಂಡನು. ಹೀಗೆ ಲಕ್ಷ್ಮಣನು ತನ್ನ ದಿವ್ಯಸ್ವರೂಪವನ್ನು ಸ್ಮರಿಸಿಕೊಂಡುದರಿಂದಲೇ ರಾವಣನು ಅವನನ್ನೆತ್ತುವುದಕ್ಕಾಗಿ ತನ್ನ ಸಮಸ್ತ ಭುಜಗಳನ್ನೂ ಉಪಯೋಗಿಸಿ, ಎಷ್ಟೇ ಪ್ರಯತ್ನಪಟ್ಟರೂ, ದಾನವರ ಕೆಚ್ಚನ್ನಡಗಿಸುವುದಕ್ಕಾಗಿಯೇ ಮನುಷ್ಯರೂಪದಿಂದವತರಿಸಿದ ಆ ಲಕ್ಷ್ಮಣನನ್ನು ಸಾಗಿಸಿಕೊಂಡು ಹೋಗುವುದಕ್ಕೆ ಅವನಿಗೆ ಸಾಧ್ಯವಿಲ್ಲದೆ ಹೋಯಿತು. ಇಷ್ಟರಲ್ಲಿ ವಾಯುಪುತ್ರನಾದ ಹನುಮಂತನು ರಾವಣನ ಈ ಕ್ರೂರ ಕಾರ್ಯವನ್ನು ನೋಡಿ ಕೋಪಗೊಂಡವನಾಗಿ, ನೈತಿಳಿಯದೆ, ಮುಂದೆ ನುಗ್ಗಿ, ವಜ್ರದಂತಿರುವ ತನ್ನ ಮುಷ್ಟಿಯಿಂದ ರಾವಣನ ಎದೆಯ ಮೇಲೆ ಹೊಡೆದನು. ಆ ಮುಷ್ಟಿಪ್ರಹಾರದಿಂದ ರಾವಣನ ಮೈಕಟ್ಟು ಸಡಿಲಿತು. ಅವನ ದೇಹವು ನಡುಗಿತು. ನಿಲ್ಲಲಾರದೆ, ಮೊಳಕಾಲೂರಿ ಕೆಳಗೆ ಬಿದ್ದನು. ಅವನ

ಕಣ್ಣೆವೆಗಳಲ್ಲಿ ರಕ್ತ ಕಿತ್ತುಕೊಂಡಿತು. ನೋವಿನಿಂದ ತತ್ತಳಿಸುತ್ತ ತನ್ನ ರಥದ ಮೇಲೆಯೇ ನಿಶ್ಚೇಷ್ಟನಾಗಿ ಬಿದ್ದನು. ಅವನಿಗೆ ಪ್ರಜ್ಞೆಯೂ ತಪ್ಪಿತು. ಹೀಗೆ ಭಯಂಕರ ಪರಾಕ್ರಮವುಳ್ಳ ಆ ರಾವಣನು ಮೂರ್ಛಿತನಾದುದನ್ನು ನೋಡಿ, ಆಕಾಶ ದಲ್ಲಿದ್ದ ಮಹರ್ಷಿಗಳೂ, ಸಿದ್ಧಚಾರಣಾದಿಗಳೂ, ಇಂದ್ರಾದಿ ದೇವತೆಗಳೂ, ವಾನ ರರೂ, ಸಂತೋಷದಿಂದ ಸಿಂಹನಾದಗಳನ್ನು ಮಾಡಿದರು. ಈ ನಡುವೆ ಇತ್ತಲಾಗಿ ತೇಜಸ್ವಿಯಾದ ಹನುಮಂತನು ರಾವಣನ ಶಕ್ತ್ಯಾಯುಧದಿಂದ ನೊಂದು ಮಲ ಗಿದ್ದ ಲಕ್ಷ್ಮಣನನ್ನು ತನ್ನ ಎರಡು ತೋಳುಗಳಿಂದಲೂ ಎತ್ತಿತಂದು ರಾಮನ ಸಮೀಪದಲ್ಲಿ ಬಿಟ್ಟನು. ಆ ಲಕ್ಷ್ಮಣನ ದೇಹವನ್ನೆತ್ತಿ ಹಿಡಿಯುವುದಕ್ಕೆ ಅಂತಹ ಮಹಾಬಲವುಳ್ಳ ರಾವಣನಿಗೆ ಸಾಧ್ಯವಿಲ್ಲದೆ ಹೋದರೂ, ಹನುಮಂತನು ಆತನಿಗೆ ಅನುಕೂಲ ಮನಸ್ಸುಳ್ಳವನಾಗಿಯೂ, ಪರಮಭಕ್ತನಾಗಿಯೂ, ಇದ್ದುದರಿಂದ, ಅವನ ಕೈಗೆ ಅದು ಬಹಳ ಹಗುರವಾಗಿ ತೋರಿತು. ಇಷ್ಟರಲ್ಲಿ ರಾವಣನಿಂದ ಪ್ರಯುಕ್ತವಾದ ಆ ಶಕ್ತಿಯು, ಸಮರ ದುರ್ಜಯನಾದ ಆ ಲಕ್ಷ್ಮಣನನ್ನು ಮೂರ್ಛೆ ಹೊಂದಿಸಿದಮೇಲೆ, ಅವನ ದೇಹವನ್ನು ಬಿಟ್ಟು ಹಿಂದಿರುಗಿ, ರಾವಣನ ರಥದಲ್ಲಿ ಮೊದಲು ತಾನಿದ್ದ ಸ್ಥಾನವನ್ನೇ ಸೇರಿಕೊಂಡಿತು. ಪರಂತಪನಾದ ಲಕ್ಷ್ಮಣನು ವಿರೋಧಿಪ್ರತ್ಯನೀಕಸ್ವಭಾವನಾದ ವಿಷ್ಣುವಿನ ಅಂಶಭೂತವಾಗಿಯೂ, ಅಚಿಂತ್ಯ ವಾಗಿಯೂ ಇರುವ ತನ್ನ ಸ್ವರೂಪವನ್ನು ನೆನೆಸಿಕೊಂಡುದರಿಂದಲೇ ಕ್ಷಣಮಾತ್ರದಲ್ಲಿ ಗಾಯವಾರಿ, ಮೂರ್ಛೆತಿಳಿದೆದ್ದು ಚೇತರಿಸಿಕೊಂಡನು. ಅತ್ತಲಾಗಿ ಹನುಮಂತನ ಮುಷ್ಟಿಪ್ರಹಾರದಿಂದ ನೊಂದ ರಾವಣನೂಕೂಡ, ತಿರುಗಿ ತನ್ನ ತೀಕ್ಷ್ಣ ಬಾಣ ಗಳನ್ನೂ ಧನುಸ್ಸನ್ನೂ ಕೈಗೆತ್ತಿಕೊಂಡನು. ಇಷ್ಟರಲ್ಲಿ ಶ್ರೀರಾಮನು ತನ್ನ ಕಡೆಯ ವಾನರ ಸೈನ್ಯದಲ್ಲಿ ಅನೇಕ ಮಹಾವೀರರು ಹತರಾಗಿ ಬಿದ್ದಿರುವುದನ್ನೂ, ಇದರಿಂದ ವಾನರ ಸೈನ್ಯವು ಭಯಪಟ್ಟು ಚದರಿ ಪಲಾಯನ ಮಾಡುವುದನ್ನೂ ಕಂಡು, ತಾನೇ ರಾವಣನನ್ನಿದಿರಿಸಿ ಹೋದನು. ಇಷ್ಟರಲ್ಲಿ ಹನುಮಂತನು ತಟ್ಟನೆ ರಾಮನ ಬಳಿಗೆ ಬಂದು, “ ಮಹಾಪ್ರಭೂ, ತಾವು ಪಾದಚಾರಿಯಾಗಿ ಯುದ್ಧಮಾಡುವುದೇಕೆ ? ಇದೋ ! ಈ ನನ್ನ ಭುಜವನ್ನೇರಿ ಕುಳಿತು, ಆ ರಾವಣನೊಡನೆ ಯುದ್ಧವನ್ನು ನಡೆಸಬಹುದು ” ಎಂದು ಪ್ರಾರ್ಥಿಸಿದನು. ಹನುಮಂತನು ಹೇಳಿದ ಈ ವಿನಯ ವಾಕ್ಯವನ್ನು ಕೇಳಿ, ಅವನ ಪ್ರಾರ್ಥನೆಯಂತೆಯೇ ರಾಮನು, ಮಹಾವಿಷ್ಣುವು ಗರುಡನ ಬೆನ್ನೇರುವಂತೆ ಆ ಮಹಾಕಪಿಯ ಭುಜವನ್ನೇರಿ ಕುಳಿತನು. ಹೀಗೆ ಮಹಾತೇಜಸ್ವಿಯಾದ ರಾಮನು ಹನುಮಂತನ ಭುಜವನ್ನೇರಿ ಕುಳಿತು ರಥಸ್ಥ ನಾದ ಆ ರಾಕ್ಷಸನನ್ನು ಕಂಡೊಡನೆ ಕುಪಿತನಾಗಿ, ತನ್ನ ಧನುಸ್ಸನ್ನೆತ್ತಿ ಹಿಡಿದು

ಮಹಾವಿಷ್ಣುವು ಬಲಿಯನ್ನಿದಿರಿಸುವಂತೆ, ರಾವಣನನ್ನಿದಿರಿಸಿ ಹೋದನು. ಆಗ ರಾಮನು ವಜ್ರಧ್ವನಿಯಂತೆ ಮಹಾಧ್ವನಿಯುಂಟಾಗುವಹಾಗೆ, ಧನುಷ್ಟಂಕಾರ ವನ್ನು ಮಾಡಿ, ಗಂಭೀರ ಸ್ವರದಿಂದ ರಾಕ್ಷಸೇಶ್ವರನಾದ ರಾವಣನನ್ನು ಕುರಿತು, “ ಎಲೆಲಾ ! ನಿಲ್ಲು ! ನಿಲ್ಲು ! ಎಲೆ ರಾಕ್ಷಸಾ ! ನೀನು ನನ್ನ ವಿಷಯದಲ್ಲಿ ಬಹಳ ಮಹಾಪರಾಧಗಳನ್ನು ನಡೆಸಿದಮೇಲೆ ಇನ್ನೆಲ್ಲಿಗೆ ಹೋದರೆ ತಾನೆ ನನ್ನಿಂದ ತಪ್ಪಿಸಿ ಕೊಂಡು ಬದುಕಬಲ್ಲೆ ? ಎಲೆ ದುರಾತ್ಮಾ ! ಇನ್ನು ಮೇಲೆ ನೀನು ದೇವೇಂದ್ರನ ಬಳಿಗೆ ಹೋದರೂ, ಯಮನ ಸಮೀಪವನ್ನು ಸೇರಿದರೂ, ಸೂರ್ಯನನ್ನು ಮೊರೆ ಹೊಕ್ಕರೂ, ಬ್ರಹ್ಮದೇವರನ್ನಾಶ್ರಯಿಸಿದರೂ, ಅಗ್ನಿ ಹೋತ್ರನನ್ನು ಸೇರಿದರೂ, ರುದ್ರನಲ್ಲಿ ಶರಣಾಗತನಾದರೂ, ದಶದಿಕ್ಕುಗಳನ್ನೂ ಸುತ್ತಿ ಸುತ್ತಿ ಬಂದರೂ ಪ್ರಾಣದಿಂದ ತಪ್ಪಿಸಿಕೊಳ್ಳಲಾರೆ. ಎಲೆ ರಾಕ್ಷಸಾ ! ಈಗ ನೀನು ಯಾರನ್ನು ನಿನ್ನ ಶಕ್ತಿಯಿಂದ ಪ್ರಹರಿಸಿದೆಯೋ, ಆ ಲಕ್ಷ್ಮಣನೇ ಈಗ ನಿನ್ನ ಮೇಲೆ ಹಗೆ ತೀರಿಸಿ ಕೊಳ್ಳುವುದಕ್ಕಾಗಿ, ನಿನಗೂ, ನಿನ್ನ ಪುತ್ರಮಿತ್ರ ಕಳತ್ರಾದಿಗಳಿಗೂ ಮೃತ್ಯು ಭೂತನಾಗಿ, ಇದೋ ಇಲ್ಲಿ ಬಂದು ನಿಂತಿರುವೆನೆಂದು ತಿಳಿ. ಎಲೆ ರಾಕ್ಷಸಾಧಮಾ ! (ಅವನೇ ನಾನಾಗಿ ಬಂದಿರುವೆನೆಂದು ತಿಳಿ). ಲಕ್ಷ್ಮಣನನ್ನು ಪ್ರಹರಿಸಿದ ಮಾತ್ರಕ್ಕೆ ನೀನು ಗರ್ವಪಡಬೇಡ. ಅವನ ಪ್ರಹಾರದಿಂದ ತಲೆತಪ್ಪಿಸಿಕೊಂಡು ಬಂದಮಾತ್ರಕ್ಕೆ ನಿನ್ನನ್ನು ಕೊಲ್ಲುವವರು ಬೇರೊಬ್ಬರೂ ಇಲ್ಲವೆಂದೆಣಿಸುವೆಯಾ ? ಈಗ ನಿನ್ನ ಎದುರಿಗೆ ಬಂದು ನಿಂತಿರುವನು ಯಾರೆಂದು ಬಲ್ಲೆಯಾ ? ಹಿಂದೆ ಜನಸ್ಥಾನದಲ್ಲಿ ಅದ್ಭುತಾಕಾರವುಳ್ಳವರಾಗಿಯೂ, ಉತ್ತಮಾಯುಧಗಳನ್ನು ಧರಿಸಿದವರಾಗಿಯೂ ಇದ್ದ ಹದಿನಾಲ್ಕುಸಾವಿರಮಂದಿ ರಾಕ್ಷಸರನ್ನೂ ತಾನೊಬ್ಬನೇ ನಿಂತು, ತನ್ನ ಬಾಣ ಸಮೂಹಗಳಿಂದ ಯಾವನು ಧ್ವಂಸಮಾಡಿದನೋ, ಅವನೇ ಈಗ ನಿನಗೂ ಮೃತ್ಯು ವಾಗಿ ಬಂದಿರುವನು ” ಎಂದನು. ರಾಮನು ಹೇಳಿದ ಈ ವೀರವಾದವನ್ನು ಕೇಳಿ ದಾಗಲೇ ರಾವಣನಿಗೆ ಅತ್ಯಾಕ್ರೋಶವುಂಟಾಯಿತು. ಇದಲ್ಲದೆ ಮೊದಲು ಹನು ಮಂತನು ತನ್ನನ್ನು ದೃಢವಾದ ಮುಷ್ಟಿಯಿಂದ ಹೊಡೆದುದಲ್ಲದೆ, ಈಗ ರಾಮನಿಗೆ ವಾಹನವಾಗಿಯೂ ಬಂದಿರುವುದನ್ನು ನೋಡಿದಮೇಲೆ, ಆ ಕೋಪವು ಮತ್ತಷ್ಟು ಹೆಚ್ಚಿತು. ಇದರಿಂದ ರಾವಣನು ಮೊದಲು ಆ ಹನುಮಂತನ ಮೇಲೆಯೇ ತನ್ನ ಕೋಪವನ್ನು ತೋರಿಸುತ್ತ, ಪ್ರಳಯಕಾಲಾಗ್ನಿಯಂತಿರುವ ಕ್ರೂರ ಬಾಣಗಳನ್ನು ತೆಗೆದು ಅವನ ಮೇಲೆ ಪ್ರಯೋಗಿಸಿದನು. ಹೀಗೆ ರಾವಣನು ಬಾಣಗಳಿಂದ

ಹೊಡೆಯುತ್ತಿದ್ದರೂ, ತೇಜಸ್ವಿಯಾದ ಹನುಮಂತನಿಗೆ, ಮನಸ್ಸಿನ ಧೈರ್ಯವೂ, ವೀರ್ಯವೂ, ಮೇಲೆ ಮೇಲೆ ಹೆಚ್ಚುತ್ತಿತ್ತೇ ಹೊರತು, ಸ್ವಲ್ಪಮಾತ್ರವೂ ಕುಂದಲಿಲ್ಲ. ಇಷ್ಟರಲ್ಲಿ ಮಹಾತೇಜಸ್ವಿಯಾದ ರಾಮನಿಗೆ ಹನುಮಂತನನ್ನು ರಾವಣನು ಬಾಣಗಳಿಂದ ಎಡಬಿಡದೆ ಪ್ರಹರಿಸುವುದನ್ನು ಕಂಡು ಬಹಳ ಕೋಪಾವೇಶವುಂಟಾಯಿತು. ಆ ಕ್ಷಣವೇ ರಾಮನು ಮುಂದೆ ಬಂದು, ತನ್ನ ತೀಕ್ಷ್ಣಬಾಣಗಳಿಂದ ರಾವಣನ ರಥವನ್ನೂ, ರಥಚಕ್ರಗಳನ್ನೂ, ರಥಾಶ್ವಗಳನ್ನೂ, ಧ್ವಜವನ್ನೂ, ಶ್ವೇತಚ್ಛತ್ರವನ್ನೂ ಪತಾಕೆಗಳನ್ನೂ, ಸಾರಥಿಯನ್ನೂ, ರಥದಲ್ಲಿದ್ದ ವಜ್ರ ಶೂಲ ಖಡ್ಗಾದ್ಯಾಯುಧಗಳನ್ನೂ ಕ್ರಮವಾಗಿ ಕತ್ತರಿಸಿ ಕೆಡಹುತ್ತ ಬಂದನು. ಮತ್ತು ಆಗ ರಾಮನು ವಜ್ರಾಯುಧಕ್ಕೂ ಸಿಡಿಲಿಗೂ ಸಮಾನವಾದ ಬೇರೊಂದು ಬಾಣವನ್ನು ತೆಗೆದು, ದೇವೇಂದ್ರನು ವಜ್ರಾಯುಧದಿಂದ ಮಹಾ ಮೇರುಪರ್ವತವನ್ನು ಪ್ರಹರಿಸುವಂತೆ, ಆ ಬಾಣದಿಂದ, ಉಬ್ಬಿ ಅಗಲವಾದ ರಾವಣನ ಎದೆಯನ್ನು ವೇಗದಿಂದ ಪ್ರಹರಿಸಿದನು. ಆಹಾ ! ಆ ರಾಮಬಾಣದ ವೇಗವನ್ನು ಕೇಳಬೇಕೆ ? ಮೊದಲು ಯಾವನು ದೇವೇಂದ್ರನ ವಜ್ರಾಯುಧದಿಂದ ಪ್ರಹರಿಸಲ್ಪಟ್ಟರೂ, ಅತ್ಯುಗ್ರವಾದ ಸಿಡಿಲು ಬಂದು ಮೇಲೆ ಬಿದ್ದರೂ, ಸ್ವಲ್ಪಮಾತ್ರವೂ ಕದಲದೆ, ಸ್ವಲ್ಪಮಾತ್ರವೂ ಧೈರ್ಯಗುಂದದೆ, ಸ್ವಲ್ಪವೂ ಲಕ್ಷ್ಯವಿಡದೆ ತಡೆಯುತ್ತಿದ್ದನೋ, ಅಂತಹ ರಾಕ್ಷಸರಾಜನಾದ ರಾವಣನೂ ಕೂಡ, ಆ ರಾಮಬಾಣದ ಪ್ರಹಾರವನ್ನು ತಡೆದುಕೊಳ್ಳಲಾರದೆ ಬಹಳ ನೊಂದು ನಡುಗಿದನು. ಕೈಯಲ್ಲಿದ್ದ ಧನುಸ್ಸನ್ನೂ ಕೆಳಗೆ ಬಿಟ್ಟನು. ಹೀಗೆ ಶಕ್ತಿಗುಂದಿ ಪರವಶನಾಗಿ, ನಿರಾಯುಧನಾಗಿದ್ದ ರಾವಣನನ್ನು, ರಾಮನು ಆಗಲೇ ಕೊಂದುಬಿಡಬಹುದಾಗಿದ್ದರೂ, ಆತನು ಬಹಳ ದಯಾಳುವಾಗಿಯೂ, ಧರ್ಮಬುದ್ಧಿಯುಳ್ಳವನಾಗಿಯೂ ಇದ್ದುದರಿಂದ, ಆ ಸ್ಥಿತಿಯಲ್ಲಿ ಅವನನ್ನು ಕೊಲ್ಲಲಾರದೆ, ಅವನಲ್ಲಿ ಮರುಕಗೊಂಡು, ಸೂರ್ಯವರ್ಣದಿಂದ ಜ್ವಲಿಸುತ್ತಿದ್ದ ಒಂದು ಅರ್ಧಚಂದ್ರ ಬಾಣವನ್ನು ತೆಗೆದು ಅದರಿಂದ ರಾವಣನ ಕಿರೀಟವನ್ನು ಭೇದಿಸಿ, ಮಾನಭಂಗವನ್ನು ಮಾತ್ರ ಮಾಡಿದನು. ಆ ರಾವಣನಿಗೆ ಕೈಯ್ಯಲ್ಲಿದ್ದ ಧನುಸ್ಸೂ ಜಾರಿ, ತಲೆಯ ಕಿರೀಟವೂ ಕೆಳಗೆ ಬಿದ್ದಮೇಲೆ, ವಿಷದ ಹಲ್ಲನ್ನು ಕಿತ್ತ ಸರ್ಪದಂತೆಯೂ, ಉರಿಯಿಲ್ಲದ ಬೆಂಕಿಯಂತೆಯೂ, ಕಾಂತಿಗುಂದಿದ ಸೂರ್ಯನಂತೆಯೂ, ಅವನು ಕೇವಲ ತೇಜೋಹೀನನಾಗಿದ್ದನು. ಹೀಗೆ ದುರವಸ್ಥೆಯಿಂದಿದ್ದ ರಾವಣನನ್ನು ನೋಡಿ ಪರಮ ದಯಾಳುವಾದ ಶ್ರೀರಾಮನು ಅವನನ್ನು ಕುರಿತು, “ ಎಲೈ

ರಾಕ್ಷಸರಾಜನೆ! ನೀನು ಇದುವರೆಗೂ ಯುದ್ಧದಲ್ಲಿ ಬಹಳ ಭಯಂಕರ ಕಾರ್ಯಗಳನ್ನು ಮಾಡಿ, ನನ್ನ ಕಡೆಯಲ್ಲಿದ್ದ ಬಹಳ ಮಂದಿ ಪ್ರಬಲಯೋಧರನ್ನೂ ಕೊಂದಿರುವೆ. ಇದರಿಂದ ನೀನು ಈ ಯುದ್ಧದಲ್ಲಿ ಬಹಳವಾಗಿ ಬಳಲಿರುವೆಯೆಂದು ನನಗೆ ತೋರುವುದು. ಈ ಸ್ಥಿತಿಯಲ್ಲಿ ನಾನು ನಿನ್ನನ್ನು ಬಾಣಗಳಿಂದ ಕೊಲ್ಲಬಾರದೆಂದು ಬಿಟ್ಟಿರುವೆನು. ಹೋಗು! ನಾನು ಆಜ್ಞೆಯನ್ನು ಕೊಟ್ಟಿರುವೆನು. ಲಂಕೆಗೆ ಹೋಗಿ ಸ್ವಲ್ಪಕಾಲ ವಿಶ್ರಮಿಸಿಕೊಂಡು, ಬಳಲಿಕೆಯನ್ನು ತೀರಿಸಿಕೊಂಡು, ತಿರುಗಿ ರಥವನ್ನೇರಿ ಧನುರ್ಧಾರಿಯಾಗಿ ಹೊರಟುಬಾ. ನೀನು ಪೂರ್ಣವಾಗಿ ಯುದ್ಧಸನ್ನಾಹದೊಡನೆ ಬಂದಮೇಲೆಯೇ ನಾನು ನನ್ನ ಬಲವನ್ನು ತೋರಿಸುವೆನು. ಆಗ ನೀನು ನನ್ನ ವೀರ್ಯವನ್ನು ಚೆನ್ನಾಗಿ ನೋಡಬಹುದು" ಎಂದನು. ಈ ಮಾತನ್ನು ಕೇಳಿ ರಾವಣನಿಗೆ ಮನಸ್ಸಿನಲ್ಲಿ ಸಹಿಸಲಾರದ ನಾಚಿಕೆಯುಂಟಾಯಿತು. ಅವನ ಕೊಬ್ಬು ಮುರಿಯಿತು. ಅವನ ರಣೋತ್ಸಾಹವೆಲ್ಲವೂ ಅಡಗಿಹೋಯಿತು. ಮೊದಲೇ ಅವನ ಕೈಯಲ್ಲಿದ್ದ ಮಹಾಧನುಸ್ಸು ಮುರಿದು ಬಿದ್ದಿತು. ಅವನ ರಥಾಶ್ವಗಳೂ ಸತ್ತುಬಿದ್ದುವು. ಸಾರಥಿಯೂ ಸಂಹೃತನಾದನು. ಅವನ ಸರ್ವಾವಯವಗಳೂ ಬಾಣಪೀಡಿತಗಳಾದುವು. ತಲೆಯಲ್ಲಿದ್ದ ಕಿರೀಟವೂ ಕಳಚಿಬಿದ್ದಿತು. ತನಗುಂಟಾದ ಇಷ್ಟೊಂದು ದುರವಸ್ಥೆಗಳಿಗಾಗಿ ರಾವಣನು ಬಹಳ ನಾಚಿದವನಾಗಿ, ಹಿಂತಿರುಗಿ ಲಂಕಾಪುರಿಯನ್ನು ಪ್ರವೇಶಿಸಿದನು. ಬಲಾಢ್ಯನಾಗಿಯೂ, ದೇವದಾನವಶತ್ರುವಾಗಿಯೂ ಇದ್ದ ರಾಕ್ಷಸೇಂದ್ರನು ಅತ್ತಲಾಗಿ ಲಂಕೆಗೆ ಹಿಂತಿರುಗಿದಮೇಲೆ, ಇತ್ತಲಾಗಿ ರಾಮನು ಲಕ್ಷ್ಮಣನೊಡನೆ ಸೇರಿ, ಆ ರಣರಂಗದಲ್ಲಿ ಬಾಣಪ್ರಹಾರದಿಂದ ನೊಂದು ಮಲಗಿದ್ದ ವಾನರರ ಬಳಿಗೆ ಬಂದು, ಅವರ ಮೈಯ್ಯಲ್ಲಿ ನಾಟಿದ್ದ ಬಾಣದಲಗುಗಳನ್ನು ಕಿತ್ತು, ಅವರ ಬಾಧೆಯನ್ನು ನಿವಾರಿಸುತ್ತ ಬಂದನು. ದೇವೇಂದ್ರ ಶತ್ರುವಾದ ಆ ರಾವಣನಿಗೆ ಈ ಪರಾಭವ ಉಂಟಾದುದನ್ನು ನೋಡಿ, ಸಮಸ್ತ ದೇವಾಸುರರೂ, ಸಮಸ್ತ ಭೂತಗಳೂ, ದಶದಿಗ್ದೇವತೆಗಳೂ, ಜಲಚರಪ್ರಾಣಿಗಳೂ, ಸಕಲ ಮುನಿಗಳೂ, ಮಹೋರಗರೂ, ಭೂಚರಪ್ರಾಣಿಗಳೂ, ಸಮುದ್ರವಾಸಿಗಳಾದ ಜಂತುವರ್ಗಗಳೂ ಪರಮಸಂತೋಷವನ್ನು ಹೊಂದಿದುವು.

ಇಲ್ಲಿಗೆ ಐವತ್ತೊಂಭತ್ತನೆಯ ಸರ್ಗವು